ಅಸಂಘಟಿತ ವಲಯದಲ್ಲಿ ಮಹಿಳಾ ಕೆಲಸಗಾರರು : ಒಂದು ಅಧ್ಯಯನ

(ವಿಶೇಷವಾಗಿ ಕರ್ನಾಟಕದ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರನ್ನು ಅನುಲಕ್ಷಿಸಿ)

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧಕರು

ಟಿ. ಅಕ್ಕಮ್ಮ

*

ಮಾರ್ಗದರ್ಶಕರು

ಡಾ. ಶಿವಾನಂದ ಎಸ್. ವಿರಕ್ತಮಠ

ಸಹ ಪ್ರಾಧ್ಯಾಪಕರು

*

ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೯-೧೦

page 11 - 12

ಅಸಂಘಟಿತ ವಲಯದಲ್ಲಿ ಮಹಿಳಾ ಕೆಲಸಗಾರರು : ಒಂದು ಅಧ್ಯಯನ

(ವಿಶೇಷವಾಗಿ ಕರ್ನಾಟಕದ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರನ್ನು ಅನುಲಕ್ಷಿಸಿ)

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧಕರು

ಟಿ. ಅಕ್ಕಮ್ಮ

*

ಮಾರ್ಗದರ್ಶಕರು

ಡಾ. ಶಿವಾನಂದ ಎಸ್. ವಿರಕ್ತಮಠ

ಸಹ ಪ್ರಾಧ್ಯಾಪಕರು

*

ಮಹಿಳಾ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

೨೦೦೯-೧೦

ಮಾರ್ಗದರ್ಶಕರ ಪ್ರಮಾಣ ಪತ್ರ

ಟಿ. ಅಕ್ಕಮ್ಮ ಅವರು "ಅಸಂಘಟಿತ ವಲಯದಲ್ಲಿ ಮಹಿಳಾ **ಕೆಲಸಗಾರರು : ಒಂದು ಅಧ್ಯಯನ***(ವಿಶೇಷವಾಗಿ ಕರ್ನಾಟಕದ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರನ್ನು ಅನುಲಕ್ಷಿಸಿ)*"ಎಂಬ ಶೀರ್ಷಿಕೆಯ ಮಹಾ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾ ನಿಕಾಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ: 26/2/10

ಡಾ. ಶಿವಾನಂದ ಎಸ್. ವಿರಕ್ತಮಠ
ಸಹ ಪ್ರಾಧ್ಯಾಪಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಂಶೋಧಕರ ಪ್ರಮಾಣ ಪತ್ರ

"ಅಸಂಘಟಿತ ವಲಯದಲ್ಲಿ ಮಹಿಳಾ ಕೆಲಸಗಾರರು : ಒಂದು ಅಧ್ಯಯನ*(ವಿಶೇಷವಾಗಿ ಕರ್ನಾಟಕದ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರನ್ನು ಅನುಲಕ್ಷಿಸಿ)*"ಎಂಬ ಮಹಾ ಪ್ರಬಂಧವನ್ನು **ಡಾ. ಶಿವಾನಂದ ಎಸ್. ವಿರಕ್ತಮಠ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾ ನಿಕಾಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ: 26/02/10

T. Akkamma

ಟಿ. ಅಕ್ಕಮ್ಮ
ಸಂಶೋಧಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ ಮತ್ತು ವೈಧಾನಿಕತೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ ಮತ್ತು ವೈಧಾನಿಕತೆ

೧.೧ ಪ್ರಸ್ತಾವನೆ

ಮಾನವ ಸಮಾಜ ಹುಟ್ಟಿದಾಗಿನಿಂದ ಸ್ತ್ರೀ ಪುರುಷರಿಬ್ಬರೂ ಕೆಲಸ ಮಾಡುತ್ತಾ ಬಂದಿದ್ದಾರೆ. ಒಂದು ನಾಗರಿಕ ಹಂತದಲ್ಲಿ ಪುರಷರ ಕೆಲಸ ದುಡಿಮೆ ಎನಿಸಿಕೊಳ್ಳಲಾರಂಭಿಸಿದರೆ ಸ್ತ್ರೀಯರ ಕೆಲಸ ಕರ್ತವ್ಯವಾಗಿ ಪ್ರಕೃತಿ ಜನ್ಯವಾಗಿ ಮುಂದುವರೆಯಿತು. ಎಲ್ಲಿಯವರೆಗೆ ಕೆಲಸವು ಜೀವನದ ಉಳುವಿಗಾಗಿ ಹೊಟ್ಟೆಬಟ್ಟೆಗಾಗಿ ನಡೆಯುತ್ತಿತ್ತೊ ಅಲ್ಲಿಯವರೆಗೆ, ಸ್ತ್ರೀ ಪುರಷರ ಕೆಲಸಗಳ ನಡುವೆ ತಾರತಮ್ಯ ಬೇದಭಾವ ಇರಲಿಲ್ಲ. ಅವಶ್ಯಕತೆ ಮತ್ತು ಸಾಮರ್ಥ್ಯಗಳಿಗೆ ತಕ್ಕಂತೆ ಇಬ್ಬರೂ ಬೇರೆ ಬೇರೆ ಕೆಲಸಗಳನ್ನು ಮಾಡುತ್ತಿದ್ದರು. ಯಾವಾಗ ಕೆಲಸವು ಮಾರುಕಟ್ಟೆಗೆ ವಸ್ತುಗಳ ವಿನಿಮಯಕ್ಕೆ ವಿಸ್ತಾರಗೊಂಡಿತೊ ಹಾಗೂ ಕೆಲಸದ ಶ್ರಮವು ಹಣದ ವಿನಿಮಯಕ್ಕೆ ಒಳಪಟ್ಟಿತೋ ಆವಾಗಿನಿಂದ ಕೆಲಸವು ದುಡಿಮೆಯಾಗಿ ಪರಿವರ್ತನೆಗೊಂಡಿತು. ಇಂತಹ ಕೆಲಸಗಳಲ್ಲಿ ಸ್ತ್ರೀ ಪುರುಷರಿಬ್ಬರು ತೊಡಗಿಕೊಂಡಿದ್ದರೂ ಪುರುಷನನ್ನು ಮಾತ್ರ ದುಡಿಮೆಗಾರನಾಗಿ ಗುರುತಿಸಲ್ಪಟ್ಟಿತು. ಅದು ಎಷ್ಟರ ಮಟ್ಟಿಗೆ ಅಂದರೆ ಸಾಮಾಜಿಕ ವ್ಯವಸ್ಥೆ ದುಡಿಮೆ ಅಂದರೆ ಪುರುಷ, ಪುರುಷ ಅಂದ್ರೆನೆ ದುಡಿಮೆ ಎಂಬ ಪರಿಕಲ್ಪನೆಯನ್ನು ವಾಸ್ತವದಲ್ಲಿಯು ರೂಪಿಸಲಾಗಿತು. (ಡಾ. ಎಚ್. ಎಂ. ಹೇಮಲತಾ ಭಾಗ–೧)

ದುಡಿಮೆಯನ್ನು ನಮ್ಮ ಭಾರತೀಯ ಸಾಂಪ್ರದಾಯಿಕ ವ್ಯವಸ್ಥೆಯು 'ಉದ್ಯೋಗಂ ಪುರುಷ ಲಕ್ಷಣಂ' ಎಂದು ಪುರುಷನಿಗೆ ಹೇಳುವುದರ ಜೊತೆಗೆ ಗೃಹಕೃತ್ಯ ಮಾಡುವುದು ಸ್ತ್ರೀಯರ ಲಕ್ಷಣ ಎಂದು ಪುರುಷ ಪ್ರಧಾನ ವ್ಯವಸ್ಥೆಯು ಇಬ್ಬರ ಮನಸ್ಸಿನಲ್ಲಿ ಮೂಡಿಸಿತು. ಇದರಿಂದ ಮಹಿಳೆಯರು ಸಾರ್ವಜನಿಕವಾಗಿ ಹೊರಗೆ ಹೋಗಲಾರದಂತ ವ್ಯವಸ್ಥೆಯನ್ನು ರೂಪಿಸಿ ಆಕೆ ಯಾವಾಗಲೂ ನಾಲ್ಕು ಗೋಡೆಗಳ ಮಧ್ಯದಲ್ಲಿಯೇ ತನ್ನ ಸಮಸ್ತ ಬದುಕನ್ನ ಅಲ್ಲೆ ಕಳೆಯುವ ಹಾಗೆ ಮಾಡಿತ್ತು ಆದರೆ ವಾಸ್ತವಿಕ ಪ್ರಪಂಚದಲ್ಲಿ ಪ್ರತಿನಿತ್ಯ ಪ್ರತಿಕ್ಷಣ ನೂರೆಂಟು ಸಮಸ್ಯೆಗಳು ಉದ್ಭವಿಸತೊಡಗಿದವು. ಇದರಿಂದ

ಬಡತನದ ಅನಿವಾರ್ಯ ಪರಿಸ್ಥಿತಿಯಿಂದ ಮಹಿಳೆ ಸಾರ್ವಜನಿಕವಾಗಿ ಹೊರಗೆ ದುಡಿಯುವ ಅನಿವಾರ್ಯತೆಗೆ ಒಳಗಾದಳು. ಆದರೂ ಕೂಡ ಪುರುಷಶಾಹಿ ವ್ಯವಸ್ಥೆ ಮಹಿಳೆಯನ್ನು ಏಕಕಾಲಕ್ಕೆ ಸಾರ್ವಜನಿಕದಲ್ಲೂ ಕೂಡ ಸೇವಾವಲಯಕ್ಕೆ ಮಾತ್ರ ಸೀಮಿತಗೊಳಿಸಲಾಗಿತ್ತು. ಉದಾಹರಣೆ :- ಗಾರ್ಮೆಂಟ್ಸ್ ಮಹಿಳೆಯರನ್ನು ತೆಗೆದುಕೊಂಡಾಗ; ಅವರ ಕೆಲಸವೆಲ್ಲವೂ ಸಹ ಸೇವಾವಲಯದಲ್ಲಿಯೇ ಕಂಡುಬರುತ್ತದೆ. ಇದರಿಂದ ನಮ್ಮ ಗಮನಕ್ಕೆ ಬರುವ ಅಂಶವೆಂದರೆ ಹೆಣ್ಣಿನ ದುಡಿಮೆಗೆ ಅವಳ ಪ್ರತಿಭೆಗೆ ಅವಳ ಸಾಮರ್ಥ್ಯಕ್ಕೆ ಸಿಕ್ಕ ಮತ್ತು ಸಿಗುತ್ತಿರುವ ಬೆಲೆ ತುಂಬಾ ಕಡಿಮೆ ದೇಶದ ಜನಸಂಖ್ಯೆಯಲ್ಲಿಯ ಅರ್ಧದಷ್ಟಿರುವ ಮಹಿಳೆ ಆರ್ಥಿಕ ಬೆಳವಣಿಗೆಯಲ್ಲಿ ಅರ್ಥಪೂರ್ಣವಾಗಿ ಬಳಕೆಯಾಗುತ್ತಿದ್ದರು ಅವಳ ಶ್ರಮವೆಲ್ಲವು ಅದೃಶ್ಯವಾಗಿರುವುದನ್ನು ಕಾಣಬಹುದು.

ಮಾಹಾಮೇದಾವಿಯಾದ ಆಗಸ್ಟ್ ಬೆಬಲ್ ಹೇಳುವಂತೆ ಮಹಿಳೆ ಬಂದನಕ್ಕೊಳಗಾದ ಪ್ರಪಂಚದ ಮೊದಲ ಮಾನವ ಜೀವಿ. ಪುರುಷ ಗುಲಾಮಗಿರಿ ವ್ಯವಸ್ಥೆಯ ಅಸ್ತಿತ್ವಕ್ಕೆ ಬರುವುದಕ್ಕಿಂತ ಮುಂಚೆಯೇ ಹೆಣ್ಣು ಗುಲಾಮಗಿರಿಗೆ ಬಲಿಯಾಗಿದ್ದಳು ಎಂಬ ಅಂಶ ತಿಳಿದುಬರುತ್ತದೆ. ಪುರುಷನಿಗಿಂತಲೂ ಮೊದಲು ಗುಲಾಮಳಾದ ಮಹಿಳೆ ಇತಿಹಾಸದ ಕಾಲಗತಿಯಲ್ಲಿ ಬದಲಾವಣೆಯಾದರು ಹೆಣ್ಣು ಗುಲಾಮಳಾಗಿ ಉಳಿದಳು. ಹೊರತು ಪುರುಷ ಪ್ರಧಾನ ವ್ಯವಸ್ಥೆಯ ಪ್ರಬಲತೆಯಿಂದ ಮಹಿಳೆಯರ ಸ್ಥಾನಮಾನಗಳಲ್ಲಿ ಇನ್ನೂ ಸೇವಾವಲಯ, ಗುಲಾಮಗಿರಿ ಅಂಶಗಳು ಎದ್ದು ಕಾಣುತ್ತವೆ.

ಸನಾತನ ಕಾಲದಿಂದಲೂ ಮಹಿಳೆಗೆ ದ್ವಿತೀಯದರ್ಜೆಯ ಸ್ಥಾನಮಾನವನ್ನು ನೀಡುತ್ತಾ ಬಂದಿರುವುದರಿಂದ ಮಹಿಳೆಯರಲ್ಲಿರುವ ಆತ್ಮ ವಿಶ್ವಾಸ ಆತ್ಮಸ್ಥೈರ್ಯ ಮತ್ತು ಆಂತರಿಕ ಶಕ್ತಿ ಕುಗ್ಗುತ್ತಾ ಹೋಯಿತು. ತನ್ನಿಂದ ಯಾವುದೇ ಕೆಲಸವಾಗುವುದಿಲ್ಲ ತಾನು ಕನಿಷ್ಠಳು ಎಂದು ಅವಳ ತಲೆಯಲ್ಲಿ ಭದ್ರವಾಗಿ ನೆಲೆಯೂರುವ ಹಾಗೆ ವ್ಯವಸ್ಥೆ ರೂಪಿಸಲ್ಪಟ್ಟಿತು. ಈ ಕಾರಣದಿಂದಾಗಿ ಮಹಿಳೆಯರು ಪುರುಷನ ನಿಯಂತ್ರಣಕ್ಕೊಳಪಟ್ಟಂತಹ ಬದುಕನ್ನು ನಡೆಸುತ್ತಿದ್ದರು. ಹೀಗಾಗಿ ಮಹಿಳೆ ಪ್ರತಿಯೊಂದು ಕಾಲಘಟ್ಟದಲ್ಲಿ ಶೋಷಿತಳಾಗಿದ್ದಾಳೆ. ಪುರುಷ ಪ್ರಧಾನ ವ್ಯವಸ್ಥೆಯ ಸದಾ ಕಾಲವು ಮಹಿಳೆಯನ್ನು ನಿಯಂತ್ರಣದಲ್ಲಿಟ್ಟುಕೊಂಡಿರುತ್ತದೆ.

ಸಾಮಾಜಿಕ ಬದುಕಿನಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಜಾರಿಯಾದ ದಿನದಿಂದ ಹಿಡಿದು ಇಲ್ಲಿಯವರೆಗೂ ರೂಪಿಸಿರುವಂತಹ ನೀತಿ ನಿಯಮಗಳು ಕುಟುಂಬ, ಧರ್ಮ, ವಿವಾಹ ಇನ್ನಿತರ ಸಂಸ್ಥೆಗಳ ಹೆಸರಿನಲ್ಲಿ ಮಹಿಳೆಯರ ಮೇಲೆ ನಿಯಂತ್ರಣವನ್ನು ಹೇರುತ್ತಲೇ ಬಂದಿವೆ. ಪುರುಷರ ಇತಿಹಾಸದ ಮೂಲಕ ಮಹಿಳೆಯರ ಸ್ಥಾನಮಾನವನ್ನು ಗುರುತಿಸುವುದು. ಹಿಂದಿನಿಂದಲೂ ಬಂದಿರುವಂತಹ ಪರಿಪಾಠವಾಗಿದೆ. ಜೊತೆಗೆ ಸಮಾಜದ ಕೌಟುಂಬಿಕ ವ್ಯವಸ್ಥೆಯಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ರೀತಿ-ನೀತಿಗಳನ್ನು ಸೃಷ್ಟಿಸಿದ ವ್ಯವಸ್ಥೆಯು ಇಂದು ಸಂವಿಧಾನದ ಕಾನೂನುಗಳ ಕಟ್ಟಳೆಗಳಲ್ಲಿಯೂ ಕೂಡ ನಿಯಮಿಸಲ್ಪಟ್ಟಿದೆ. ಸಂಪ್ರದಾಯಗಳನ್ನು ಪಾಲಿಸಿಕೊಂಡು ಬರುವಲ್ಲಿ ಸ್ವಲ್ಪ ಬದಲಾವಣೆ ಆದರೂ ಈ ಸಮಾಜ ಅವಳ ಮೇಲೆ ನಿಯಂತ್ರಣವನ್ನು ಹೇರುತ್ತಲೆ ಬಂದಿದೆ.

ಜೂಲಿಯಟ್ ಮಿಶೆಲ್ ಮಹಿಳೆಯರ ಅಧೀನ ಸ್ಥಿತಿಗೆ ಕಾರಣಗಳನ್ನು ಹುಡುಕುತ್ತಾ ಉತ್ಪಾದನೆ ಹಂತದ ನಾಲ್ಕು ಬೆಳವಣಿಗೆಗಳನ್ನು ಗುರುತಿಸುತ್ತಾಳೆ. ಸಂತಾನೋತ್ಪತ್ತಿ, ಉತ್ಪಾದನಾ ವ್ಯವಸ್ಥೆ ಮಕ್ಕಳ ಸಾಮಾಜಿಕರಣ ಮತ್ತು ಲೈಂಗಿಕತೆ ಈ ನಾಲ್ಕು ರಚನೆಗಳು ಪರಸ್ಪರ ಸಂಬಂಧ ಹೊಂದಿರುವಂತಹವು. ಮತ್ತು ಕುಟುಂಬ ರಚನೆಯಲ್ಲಿ ಈ ನಾಲ್ಕು ಹಂತಗಳು ಸೇರಿವೆ. ಆದ್ದರಿಂದಲೇ ಪಿತೃಪ್ರಧಾನತೆಯನ್ನು ಕಿತ್ತೆಸೆಯುವಷ್ಟರಿಂದಲೇ ಬಂಡವಾಳಶಾಹಿಯನ್ನು ನಿರ್ಮೂಲನ ಮಾಡಲು ಸಾಧ್ಯವಿಲ್ಲ.

ಪಿತೃ ಪ್ರಧಾನತೆ ಮತ್ತು ಬಂಡವಾಳ ಶಾಹಿ ವ್ಯವಸ್ಥೆಗಳೆರಡೂ ಮಹಿಳೆಯ ಆರ್ಥಿಕ ಅಧೀನತೆಗೆ ಕಾರಣವಾದ ಅಂಶಗಳು ಎಂಬ ಮೂಲಭೂತ ತತ್ವವನ್ನು ಪ್ರತಿಪಾಧಿಸಿದವಳು–ಹಾಯ್ದಿಹಾರ್ಟಮನ್. ಪಿತೃಪ್ರಧಾನತೆ ಮತ್ತು ಬಂಡವಾಳಶಾಹಿ ಎರಡೂ ವ್ಯವಸ್ಥೆಗಳು ವಿಶಿಷ್ಟವಾಗಿದ್ದು ಇವೆರಡೂ ಶೋಷಣೆಯ ಪೂರಕ ಕ್ರಿಯೆಗಳಾಗಿವೆ. ಏಕೆಂದರೆ ಎರಡು ವ್ಯವಸ್ಥೆಗಳು ಪುರುಷರಿಗೆ ಅವರ ಅಧಿಕಾರವನ್ನು ಚಲಾಯಿಸುವಲ್ಲಿ ಕೂಲಿಯ ತಾರತಮ್ಯತೆ ತೋರುವಲ್ಲಿ, ಕೆಲಸದ ವಿಂಗಡಣೆ ಮಾಡುವಲ್ಲಿ ಮತ್ತು ಹೆಂಗಸರನ್ನು ಅವರ ಮನೆಗೆಲಸಕ್ಕೆ ಕಟ್ಟಿ ಹಾಕುವಲ್ಲಿ ನೆರವು ನೀಡುತ್ತವೆ. ಅರ್ಥಶಾಸ್ತ್ರದ ಸಿದ್ಧಾಂತವನ್ನು ಬೆಳೆಸಿದ ಹಾಯ್ದಿಹಾರ್ಟ್‌ಮನ್ ಲೈಂಗಿಕ ಶ್ರಮವಿಭಜನೆಯು ವಿಶ್ವದಾದ್ಯಂತ ಮಹಿಳೆಯನ್ನು ಅಧೀನಗೊಳಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆಯೆಂದು ನಂಬುತ್ತಾಳೆ. ಇಂದಿನ ಮಹಿಳೆಯರ ಸಾಮಾಜಿಕ ಸ್ಥಿತಿಯ ಮೂಲಬೇರುಗಳು ಲಿಂಗನಿರ್ಧರಿತ ಶ್ರಮವಿಭಜನೆ ನೀತಿಯ ಆಳದಲ್ಲಿದೆ ಎಂಬುದು ಹಾರ್ಟಮನ್‌ಳ ನಂಬಿಕೆ ಎಂಬುದು ಇವರ ಅಭಿಪ್ರಾಯವಾದರೆ, ಇದರ ಕುರಿತು ಭಾರತೀಯ ಸ್ತ್ರೀವಾದಿ ಚಿಂತಕಿ ವಿಜಯದಬ್ಬೆಯವರು ಹೀಗೆ ಹೇಳುತ್ತಾರೆ. "ಪುರುಷ ಕೇಂದ್ರಿತವಾದ ವ್ಯವಸ್ಥೆಯಲ್ಲಿ ಮಹಿಳೆಯ ಹೊರಗಿನ ದುಡಿಮೆಯು ಅವಳಿಗೆ ಸವಾಲಾಗಿಯೇ ಉಳಿಸಿದೆ. ಹೊರಗಿನ ದುಡಿತದ ಒಂದರಲ್ಲಿಯೇ ಸ್ತ್ರೀ ವಿಮೋಚನೆ ಇದೆಯೆಂದಾಗಲಿ ಇದರ ಅರ್ಥವಲ್ಲ. ಆದರೆ ಹೊರಗಿನ ದುಡಿಮೆ, ದುಡಿಮೆಗೆ ತಕ್ಕ ಪ್ರತಿಫಲ ಅವಳ ಹಕ್ಕು ಹಾಗೂ ಸ್ತ್ರೀ ವಿಮೋಚನೆಯ ಅತ್ಯಂತ ಮೂಲಭೂತ ಅಗತ್ಯ. ಆರ್ಥಿಕ ಸ್ವಾವಲಂಬನೆಯೆಂಬದು ಸ್ಪಷ್ಟ ಸಂಗತಿ. (ನಾರಿ: ದಾರಿ ದಿಗಂತ ಪುಟ 6) ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಮನೆಯ ಒಳಗಿನ ದುಡಿಮೆಗೆ ತಕ್ಕ ಮನ್ನಣೆ ಮತ್ತು ಹೊರಗಿನ ದುಡಿಮೆಗೆ ಗೌರವ ದೊರತಾಗ ಮಾತ್ರ ಮಹಿಳೆ ನಿರಾಳವಾಗಿ ಬದುಕನ್ನು ಎದುರಿಸಲು ಸಮರ್ಥಳಾಗುತ್ತಾಳೆ.

It was also because of the attitudes of men, women and of society towards. Women's employ which was approved mainly as a means of supple menting the family income and not as a means of woman's own development and satisfaction."

(shakuntala .c.sidranmshettar and A.E.punit erenderand soeiety in India- Ed-R. Indira and Deepak kumar Bahara-p-234)

ನಮ್ಮ ಬಹುಸಂಸ್ಕೃತಿಯ ಬಹುಜನಾಂಗಿಯ ನೆಲದಲ್ಲಿ ಮಹಿಳೆಯರ ಅಸ್ತಿತ್ವವನ್ನು ಏಕಕಾರವಾಗಿ ನಿರ್ವಹಿಕೊಳ್ಳುವುದು ಕಠಿಣ. ಇಲ್ಲಿ ಮಹಿಳೆಯರು ಜಾತಿ, ಧರ್ಮ, ವರ್ಗ ವಯಸ್ಸು ಹಾಗೂ

ಪ್ರದೇಶಕ್ಕನುಗುಣವಾಗಿ ಬೇರೆ ಬೇರೆ ಸಂದರ್ಭದಲ್ಲಿ ಬದುಕುತ್ತಿರುವುದರಿಂದ ಅವರು ಎದುರಿಸುತ್ತಿರುವ ಸಮಸ್ಯೆಗಳು ಭಿನ್ನವಾಗಿವೆ. ಬಹುಸಂಖ್ಯಾತ ಮಹಿಳಾ ವರ್ಗದ ಚಿತ್ರಣವನ್ನು ಎದುರಿಗಿಟ್ಟುಕೊಂಡು ಇಲ್ಲಿಯ ಆಲೋಚನೆಗಳಿಗೆ ಒಂದು ಸಾಮಾನ್ಯ ಚೌಕಟ್ಟನ್ನು ರೂಪಿಸಿಕೊಳ್ಳಲಾಗಿದೆ. ಮಹಿಳೆಯ ವಲಯಗಳನ್ನು ಮುಖ್ಯವಾಗಿ ಪರಿಗಣಿಸಿಲ್ಲ. ಶ್ರೇಣಿಕೃತವಾದ ಸಾಮಾಜಿಕ ಸಂರಚನೆಯಲ್ಲಿ ಜಾತಿ, ವರ್ಗ, ಮತಗಳ ಆಧಾರದ ಮೇಲೆ ಒಡಕು ಉಂಟಾಗಿರುವಂತೆ ಲಿಂಗಾಧಾರಿತವಾಗಿ ಇನ್ನು ಹೆಚ್ಚು ತಾರತಮ್ಯ ವ್ಯತ್ಯಾಸಗಳನ್ನು ಕಾಣಬಹುದು. ಲಿಂಗವ್ಯವಸ್ಥೆಯ ನಿರ್ಮಾಪಕರೂ ಆಗಿರುವ ಪುರುಷವರ್ಗವು ತನ್ನ ಆಶಯಕ್ಕೆ ತಕ್ಕಂತೆ ಮಹಿಳಾ ವರ್ಗವನ್ನು ನಿರ್ಮಿಸಿಕೊಂಡಿದೆ. ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ನಿಯಂತ್ರಣ ಹೊಂದಿರುವ ಪುರುಷ ವರ್ಗ ತಾನು ಸೂಚಿಸಿದ ಮೌಲ್ಯಗಳನ್ನೇ ಸಾಮಾಜಿಕ–ಸಾಂಸ್ಕೃತಿಕ ಪರಮಮೌಲ್ಯಗಳೆಂದು ಅರ್ಥೈಸಿದೆ. ಹಾಗೂ ಹೆಣ್ಣನ್ನು ಅದರಂತೆಯೇ ಒಪ್ಪಿಸಿಕೊಂಡಿದೆ. ಸ್ತ್ರೀ ಪುರುಷರು ಬದುಕಬೇಕಾದ ರೀತಿ–ನೀತಿಗಳನ್ನು ತಿಳಿಯುವ ಹಾಗೂ ನಿರ್ದೇಶಿಸುವ ಆಲೋಚನೆಗಳೂ ಪುರುಷ ಕೇಂದ್ರಿತವಾಗಿದ್ದು ಅದೇ ಪ್ರಧಾನವಾಹಿನಿಯ ಮೂಲವಾಗಿದೆ. ಆದ್ದರಿಂದ ಹೆಣ್ಣು ಗಂಡನಿಂದ ನಿಯಂತ್ರಿತಳಾದ ವ್ಯಕ್ತಿ ಎನಿಸಿಕೊಳ್ಳುತ್ತಾಳೆ.

ಪ್ರಧಾನ ವಾಹಿನಿ ವ್ಯವಸ್ಥೆಯು ಪುರುಷನಿಗೆ ಯಜಮಾನ್ಯತೆಯನ್ನು ನೀಡುತ್ತ ಸ್ತ್ರೀಯರಿಗೆ ಔದ್ಯೋಗಿಕ ಕ್ಷೇತ್ರದಿಂದ ನಿರಾಕರಿಸುತ್ತದೆ. ಆದರೆ ಮಹಿಳೆ ಹಗಲು ರಾತ್ರಿ ದಿನಕ್ಕೆ ೧೮ ರಿಂದ ೨೦ ಗಂಟೆಗಳವರೆಗೆ ಸತತವಾಗಿ ದುಡಿಯುತ್ತಾ ಬಂದಿದ್ದಾಳೆ. ಲಿಂಗ ಸಂಬಂಧಿ ದೃಷ್ಟಿಕೋನದಿಂದ ಮಹಿಳೆಯರ ದುಡಿಮೆಯನ್ನು ಮೂರು ಬಗೆಯಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಉತ್ಪಾದನೆ ದುಡಿಮೆ, ಮನೆಯೊಳಗಿನ ಹಾಗೂ ಮನೆಯ ಹೊರಗೆ ಬೆವರನ್ನು ಹರಿಸಿ ಮಹಿಳೆಯರು ಉತ್ಪಾದನೆ ದುಡಿಮೆಯಲ್ಲಿ ನಿರತರಾಗಿರುವುದನ್ನು ಗುರುತಿಸಬಹುದಾಗಿದೆ. ಎರಡನೆಯದಾಗಿ ಕೌಟುಂಬಿಕ ದುಡಿಮೆ ಇದನ್ನು ಮನೆಯೊಳಗಿನ ದುಡಿಮೆಯೆಂದು ಕರೆಯಬಹುದು. ಮೂರನೆಯದು ಸಂತಾನೋತ್ಪತ್ತಿಯ ದುಡಿಮೆ. ಇದು ಮಹಿಳೆಯರಿಗೆ ನಿರ್ದಿಷ್ಟವಾದ ದುಡಿಮೆಯಾಗಿದೆ. ಮಗುವೊಂದಕ್ಕೆ ಜನ್ಮನೀಡುವ ರಕ್ತವನ್ನು ಹಂಚಿಕೊಳ್ಳುವ ಕ್ರಿಯೆಯೇ ಸಂತಾನೋತ್ಪತ್ತಿ ದುಡಿಮೆ. ಇದನ್ನು ಸಂಗೋಪನಾ ದುಡಿಮೆಯಂತಲೂ ಕರೆಯಬಹುದು ಹೀಗೆ ಮಹಿಳೆಯರು ಮೂರು ಬಗೆಯ ದುಡಿಮೆಯನ್ನು ನಿರ್ವಹಿಸುತ್ತಿದ್ದರೂ ವ್ಯವಸ್ಥೆ ಕೇವಲ ಪುರುಷರ ದುಡಿಮೆಯನ್ನು ಮಾತ್ರ ದುಡಿಮೆ ಎಂದು ಪರಿಗಣಿಸುತ್ತದೆ. ಹೀಗಿರುವುದರಿಂದ ಮಹಿಳಾ ದುಡಿಮೆ ಉತ್ಪಾದನಾ ವಲಯಕ್ಕೆ ಮಾತ್ರ ಮೀಸಲು ಎನ್ನುವಂತಾಗಿದೆ. ಪುರುಷರ ದುಡಿಮೆ ಅವಳ ದುಡಿಮೆಗಿಂತಲೂ ಹೆಚ್ಚು ಪ್ರಾಧಾನ್ಯತೆ ಪಡೆದುಕೊಳ್ಳುವುದು ಎಂದು ಹೇಳಬಹುದು. ಈ ರೀತಿಯ ಲಿಂಗಸಂಬಂಧಿ ಶ್ರಮ ವಿಭಜನೆ ಮಹಿಳೆಯರಿಗೆ ಆಘಾತಕಾರಿಯಾಗಿ ಪರಿಣಮಿಸಿದೆ. ಇದರಿಂದಾಗಿ ಪ್ರತಿಯೊಂದು ದುಡಿಮೆಯಲ್ಲೂ ಅವಳ ದೈಹಿಕ ಶಕ್ತಿಯ ದುರ್ಬಳಕೆಯಾಗುತ್ತಿದೆ. ಮಹಿಳಾ ಬದುಕನ್ನು ಕಟ್ಟುವ ನಿಟ್ಟಿನಲ್ಲಿ ಅನೇಕ ಸ್ತ್ರೀವಾದಿಗಳ ಮಹತ್ವವಾದ ಪಾತ್ರವಿದೆ. ಅವರ ಒಲವು ಕೇವಲ ಮೇಲ್ವರ್ಗ ಮಹಿಳೆಯರಿಗೆ ಸೀಮಿತವಾಗಿರದೆ ಕೆಳವರ್ಗದ ಮಹಿಳೆಯರ ಕುರಿತಾಗಿಯೂ ಇತ್ತು. ಮಹಿಳೆ ಎಂದಾಕ್ಷಣ ಅವಳು ಸಮಾನ ಶೋಷಿತಳು ಅದು ಮೇಲ್ವರ್ಗದ ಅಥವಾ ಕೆಳವರ್ಗದ ಮಹಿಳೆಯರಾಗಿರಬಹುದು. ಆದರೆ ಸಮಸ್ಯೆಗಳ ಸ್ವರೂಪ ಭಿನ್ನವಾದರೂ ಸಮಸ್ಯೆಗಳನ್ನು ಎದುರಿಸುವವರು

[illegible]

[illegible]

ಮಹಿಳೆಯರೆ ಆಗಿದ್ದಾರೆ. ಕಾರ್ಮಿಕ ಕಾನೂನು ಎಂಟು ಗಂಟೆ ದುಡಿಮೆಯನ್ನು ಒಂದು ದಿನದ ದುಡಿಮೆ ಎಂದು ಹೇಳುತ್ತದೆ. ಹಾಗೆಂದಾಗ ಹದಿನೆಂಟು ಗಂಟೆಗಿಂತ ಹೆಚ್ಚು ದುಡಿಯುವ ಹೆಣ್ಣಿನ ದುಡಿಮೆ ಎರಡು ದಿನದ ದುಡಿಮೆಗಿಂತ ಹೆಚ್ಚಾಗಿ ಒಂದೇ ದಿನಕ್ಕೆ ದುಡಿಯುತ್ತಿದ್ದಾಳೆ, ಆದರೆ ಪ್ರಧಾನಧಾರೆಯ ವ್ಯವಸ್ಥೆಯು ಮೂರು ಬಗೆಯ ದುಡಿಮೆಯನ್ನು ಆಕೆ ದುಡಿದಿದ್ದರೂ ಅವಳ ದುಡಿಮೆಯನ್ನು ಅದೃಶ್ಯಗೊಳಿಸಿ ದುಡಿಮೆಗಾರರಾಳಾಗಿ ಪರಿಗಣನೆಮಾಡುತ್ತಿಲ್ಲ.

ಮಹಿಳೆ ಈ ಜಗತೀಕರಣ, ಆಧುನಿಕರಣ ಪ್ರಪಂಚದಲ್ಲಿ ಸಾರ್ವಜನಿಕ ವಲಯದಲ್ಲಿ ಬಂದು ದುಡಿಯುವ ಅನಿವಾರ್ಯ ಸಂದರ್ಭದಲ್ಲಿದ್ದಾಳೆ. ಪ್ರಾಶ್ಚಾತ್ಯ ಮತ್ತು ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಲ್ಲಿ ಹೆಣ್ಣು ಔದ್ಯೋಗಿಕ ವಲಯಕ್ಕೆ ಕಾಲಿಡುವುದು ತನ್ನ ಅಸ್ತಿತ್ವದ ಕಾರಣಕಾದರೆ, ಭಾರತದಂತಹ ಅಭಿವೃದ್ಧಿ ಶೀಲದೇಶದಲ್ಲಿ ಹೆಣ್ಣು ದುಡಿಮೆಗೆ ತೊಡಗಿಕೊಳ್ಳುವುದು ಬಡತನದ ಕಾರಣಕ್ಕೆ ಒಂದು ಹೊತ್ತಿನ ಊಟಕ್ಕೆ. ಭಾರತೀಯ ಕೆಳಸಮುದಾಯ ಪರದಾಡುತ್ತಿರುವ ಸಂದರ್ಭದಲ್ಲಿ ಕೆಳವರ್ಗದ ಮಹಿಳೆಯರು ಕುಟುಂಬದ ಬಾರ ತಾವೇ ಹೊರಬೇಕಾದ ಅನಿವಾರ್ಯ ಪರಿಸ್ಥಿತಿ ಇರುವುದರಿಂದ ದುಡಿಮೆ ಕ್ಷೇತ್ರಕ್ಕೆ ಕಾಲಿಡುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು.

ಇಂತಹ ಅನೇಕ ಸಮಸ್ಯೆಗಳಲ್ಲಿ ಒಂದಾಗಿ ಬರುವ ಗಾರ್ಮೆಂಟ್ಸ್ ಫ್ಯಾಕ್ಟ್ರಿಗಳಲ್ಲಿ ಕೆಲಸ ಮಾಡುವ ಮಹಿಳೆಯರ ಬದುಕನ್ನೇ ತೆಗೆದುಕೊಂಡಾಗ ದಿನನಿತ್ಯವು ಹಸಿವು ಅವರನ್ನು ತಿಂದುಹಾಕುತ್ತಿರುವುದನ್ನು ಅಧ್ಯಯನಗಳ ಮೂಲಕ ತಿಳಿದುಕೊಳ್ಳಬಹುದಾಗಿದೆ. ಏಕೆಂದರೆ ಗಾರ್ಮೆಂಟ್ಸ್ ಮಹಿಳೆಯರು ದಿನನಿತ್ಯವೂ ಪ್ರತಿಕ್ಷಣವು ಹಸಿವು ಹೇಗೆ ತುಂಬಿಸಿಕೊಳ್ಳಬೇಕೆಂಬುದೇ ಚಿಂತೆ ಮಾಡುತ್ತಿರುತ್ತಾರೆ. ಮಾಲೀಕರು ಕೊಡುವ ಸಂಬಳ ಯಾವುದಕ್ಕೂ ಸಾಲದೆ ಹೊಟ್ಟೆತುಂಬಾ ಊಟಮಾಡಲು ಆಗದೆ, ಮಕ್ಕಳಿಗೂ ಶಾಲೆಗೆ ಕಳಿಸಲು ಆಗದೆ ಅವರ ಭವಿಷ್ಯದ ಬಗ್ಗೆ ಯೋಚನೆ ತಮಗೆ ಏನೇ ಆದರೂ ಕೆಲಸ ಬಿಡದೆ ದುಡಿಯುತ್ತಿರುತ್ತಾರೆ. ಮಹಿಳೆ ಜಗತ್ತಿನ ಜನಸಂಖ್ಯೆಯ ೧/೨ ಭಾಗವಾಗಿದ್ದಾಳೆ. ಜಗತ್ತಿನ ೨/೩ ರಷ್ಟು ದುಡಿಮೆಯನ್ನು ಮಹಿಳೆಯೇ ಮಾಡುತ್ತಾಳೆ. ಜಗತ್ತಿನ ಒಟ್ಟು ವರಮಾನದಲ್ಲಿ ಮಹಿಳೆ ಪಡೆಯುವುದು ಶೇ.೩೦ ರಷ್ಟು ಜಗತ್ತಿನ ಒಟ್ಟು ಆಸ್ತಿಯಲ್ಲಿ ಮಹಿಳೆಯ ಬಡತನ ಶೇ ೧ ರಷ್ಟು ಮಾತ್ರ (UNDP) women and new econamic order ವರದಿ. (ಆರ್ಥಿಕ ವಲಯ – ಎನ್.ಗಾಯಿತ್ರಿ – ಪು–೬೭)

ಮಹಿಳೆಯಾದವಳೂ ಕೆಲಸಕ್ಕೆ ಹೋಗುತ್ತಿದ್ದಾಳೆ ಎಂಬುದು ವಾಸ್ತವಿಕ ಸತ್ಯವಾದರೂ ಕೂಡ, ಅದರ ಜೊತೆಗೆ ಕೆಲಸಕ್ಕೆ ಸೇರುವಾಗ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈಗಾಗಲ್ಲೇ ಇರುವಂತಹ ಸಿದ್ಧಮಾದರಿಗಳೂ ಕಟ್ಟಲ್ಪಟ್ಟಿರುವಂತ ಸಿದ್ಧಾಂತಗಳು ವಾಸ್ತವಿಕತೆಯಲ್ಲಿ ಆ ಸತ್ಯವಾಗಿದೆ ಏನು ಎಂಬುದನ್ನು ವಿಶ್ಲೇಷಣೆ ಮಾಡಿದಾಗ ಗೊತ್ತಾಗುತ್ತದೆ. ಅದರ ಫಲಿತಾಂಶ ಎಂಬುದು. ಇದಕ್ಕೆ ಉದಾಹರಣೆಯಗಿ ಗಾರ್ಮೆಂಟ್ಸ್ ಮಹಿಳೆಯರನ್ನೆ ತೆಗೆದುಕೊಂಡಾಗ ಬೆಳಗಾದರೆ ಸಾಕು ಈಡೀ ದಿನ ಹೊಟ್ಟೆ ಹೇಗೆ ತುಂಬಿಸಿಕೊಳ್ಳಬೇಕೆಂದು ಚಿಂತಿಸುವಾಗ ಈ ಸಬಲೀಕರಣ, ಸ್ವಾತಂತ್ರ್ಯ, ಸ್ವಾವಲಂಬನೆ ಇವು ಯಾವು ಕೂಡ ಬಳಕೆಗೆ ಬರಲ್ಲ. ಎಂಬುದು ಭಾರತೀಯ ಸಂದರ್ಭದಲ್ಲಿ ನಿಜವೆನಿಸುತ್ತದೆ.

ಅರ್ಥಶಾಸ್ತ್ರವನ್ನು ಸೇರಿಕೊಂಡು ಸಮಾಜ ವಿಜ್ಞಾನಗಳೆಲ್ಲವೂ ಮೂಲತಃ ಲಿಂಗನಿರಪೇಕ್ಷೆ ಜ್ಞಾನ ಶಿಸ್ತುಗಳಾಗಿವೆ. ಆದರೆ ವಾಸ್ತವದಲ್ಲಿ ಅವು ಪುರುಷರ ನೆಲೆಯಿಂದ ಜ್ಞಾನವನ್ನು ಪರಿಭಾವಿಸಿಕೊಳ್ಳುವುದು ರೂಡಿಯಲ್ಲಿದೆ. ಈ ಎಲ್ಲಾ ಜ್ಞಾನ ಶಿಸ್ತುಗಳು ಮಹಿಳೆಯರನ್ನು ಜೈವಿಕ ಘಟಕವೆಂದು ಪರಿಭಾವಿಸುತ್ತಿವೆ ವಿನಃ ಅಭೀವೃದ್ಧಿ ಘಟಕವೆಂದು ಪರಿಭಾವಿಸುವುದಿಲ್ಲ. ಸಮಾಜಿಕವಾಗಿ ಅಸ್ತಿತ್ವದಲ್ಲಿರುವ ಲಿಂಗ ತಾರತಮ್ಯ, ಲಿಂಗ ಅಸಮಾನತೆ, ಮಹಿಳೆಯರ ಮೇಲಿನ ಹಿಂಸೆಗಳನ್ನು ಜ್ಞಾನ ಶಿಸ್ತುಗಳು ದೃಡಪಡಿಸುತ್ತಿರುವಂತೆ ಕಾಣುತ್ತದೆ. ಅಭಿವೃದ್ಧಿಗೆ ಸಂಬಂಧಿಸಿದ ಯಾವುದೇ ಸೂಚಿಯನ್ನು ತೆಗೆದುಕೊಂಡರೂ ಮಹಿಳೆಯರ ಸ್ಥಾನಮಾನ ಹಾಗೂ ಸ್ಥಿತಿಗತಿಗಳು ಪುರುಷರ ಸ್ಥಾನಮಾನ ಹಾಗೂ ಸ್ಥಿತಿಗತಿಗಿಂತ ಕೆಳಮಟ್ಟದಲ್ಲಿರುವುದು ಕಂಡುಬರುತ್ತದೆ. (ವೃತ್ತಿನಿರತ ಮಹಿಳೆ – ಎಂ.ಫಿಲ್ –ಪಿ –೧೫)

ಆರ್ಥಿಕತೆಯೆಂಬುದು ಸಮಾಜದ ಒಂದು ಭಾಗವಾಗಿದೆ. ಆರ್ಥಿಕತೆಯಲ್ಲಿ ಸಮಾಜದ ಆರ್ಥಿಕತೆಯ ಗಡಿಯನ್ನು ಮೀರಿ ದುಡಿಮೆಯ ಚಟುವಟಿಕೆಗಳು ನಡೆಯುತ್ತಿರುತ್ತವೆ. ಸಮಾಜ ಮತ್ತು ಆರ್ಥಿಕತೆಗಳ ನಡುವಿನ ಭಿನ್ನತೆಯು ಮಹಿಳೆ ಮತ್ತು ಲಿಂಗ ಸಂಬಂಧಗಳ ದೃಷ್ಟಿಯಿಂದ ಬಹಳ ಮುಖ್ಯವಾಗಿದೆ. ಹೀಗೆ ಆರ್ಥಿಕತೆಯ ಗಡಿಯ ಆಚೆ ನಡೆಯುವ ದುಡಿಮೆಯಲ್ಲಿ ಮುಕ್ಕಾಲು ಮೂರು ಪಾಲು ಮಹಿಳೆಯರು ತೊಡಗಿಕೊಂಡಿರುತ್ತಾರೆ. ಆರ್ಥಿಕತೆಯ ಗಡಿಯ ಆಚೆಯಲ್ಲಿ ನಡೆಯುವ ದುಡಿಮೆ ಚಟುವಟಿಕೆಗಳನ್ನು ಜೈವಿಕವೆಂದು ಪ್ರಾಕೃತಿಕವೆಂದು ಅವುಗಳು ಕೇವಲ ಉಪಯೋಗಿ ಮಹತ್ವ ಹೊಂದಿರುತ್ತವೆಂದು ಹೇಳಲಾಗಿದೆ. ಆರ್ಥಿಕತೆಯ ಚೌಕಟ್ಟಿನಲ್ಲಿ ನಡೆಯುವ ದುಡಿಮೆಯನ್ನು ಆರ್ಥಿಕೊತ್ಪಾದನೆಯೆಂದು, ಆರ್ಥಿಕತೆಯ ಗಡಿಯ ಆಚೆಯಲ್ಲಿ ನಡೆಯುವ ಬಹುಪಾಲು ಚಟುವಟಿಕೆಗಳನ್ನು ಸಂತಾನೋತ್ಪತ್ತಿ ಚಟುವಟಿಕೆಗಳೆಂದು ಪರಿಗಣಿಸಿದ್ದು, ಮಾತ್ರ ಸಂಪತ್ತನ್ನು ಉತ್ಪಾದಿಸಬಲ್ಲ ದುಡಿಮೆಯನ್ನು ಮಾತ್ರ ಆರ್ಥಿಕೋತ್ಪಾದನೆಯೆಂಬ ನಂಬಿಕೆ ಇಲ್ಲಿದೆ. ಆರ್ಥಿಕತೆಯ ಚೌಕಟ್ಟಿನಲ್ಲಿ ನಡೆಯುವ ಚಟುವಟಿಕೆಗಳಿಗೆ ಸಮಾಜ ಮನ್ನಣೆ ನೀಡುತ್ತದೆ. ಸಾಮಾಜಿಕವಾಗಿ ಮನ್ನಣೆಯಿಲ್ಲದ ಕೇವಲ ಉಪಯೋಗಿ ಮಹತ್ವವುಳ್ಳ ಚಟುವಟಿಕೆಗಳನ್ನೆಲ್ಲಾ ಮಹಿಳೆಯರಿಗೆ ಮುಡುಪಾಗಿಡಲಾಗಿದೆ. ಅತ್ಯಂತ ವಿಶಾಲವಾದ ಅರ್ಥದಲ್ಲಿ ಇಂತಹ ಚಟುವಟಿಕೆಗಳನ್ನು ಸಂತಾನೋತ್ಪತ್ತಿ ಚಟುವಟಿಕೆಗಳು ಎನ್ನಲಾಗಿದೆ.

ಹೀಗೆ ಆರ್ಥಿಕತೆ ಎಂಬುದು ಪುರಷ ಪ್ರಪಂಚವಾಗಿ ಪುರಷ ಪ್ರಧಾನವಾಗಿ ರೂಪಗೊಂಡು ಬಿಟ್ಟಿದೆ. ಆರ್ಥಿಕತೆಯ ಚೌಕಟ್ಟಿನಲ್ಲಿ ಆರ್ಥಿಕೊತ್ಪಾದನೆಯಲ್ಲಿ ಮಹಿಳೆಯರೂ ಇರುತ್ತಾರೆ. ಅವರು ಆರ್ಥಿಕೊತ್ಪಾದನೆಯಲ್ಲಿ ತೊಡಗಿದ್ದರೂ ಅವರ ಚಟುವಟಿಕೆಗಳಿಗೆ ಅವರು ಉತ್ಪಾದಿಸುವ ಸರಕು ಸೇವೆಗಳಿಗೆ ಉಪಯೋಗಿ ಮಹತ್ವ ಇರುತ್ತದೆ. ವಿನಃ ವಿನಿಮಯ ಮಹತ್ವ ಇರುವುದಿಲ್ಲ.

ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಬದಲಾವಣೆಗಳೊಂದಿಗೆ ಮಹಿಳೆಯರ ದುಡಿಮೆಯ ಸ್ವರೂಪವು ಬದಲಗುತ್ತಾ ಬಂದಿದೆ. ಆದರೆ 'ದುಡಿಮೆಗಾರ' ಎಂಬುದು ಪುರುಷವಾಚಿ ನುಡಿಯಾಗಿದೆ. ಇದು ಸ್ತ್ರೀವಾದಿ ನುಡಿಯಗುವುದು ಸಾಧ್ಯವೇ ಇಲ್ಲವೆಂದು ಹೇಳಲಾಗುತ್ತಿದೆ. ಪುರುಷಶಾಹಿ ವಿಚಾರ ಪ್ರಣಾಳಿಕೆಯು ಮಹಿಳೆ ದುಡಿಮೆಯನ್ನು ಅತ್ಯಂತ ಸೀಮಿತವಾದ ಎಸಾನ್ಸಿಲಿಸ್ಟ್ ಸ್ಥಿತಿಯಲ್ಲಿ ಪರಿಭಾವಿಸಿಕೊಂಡಿದೆ. ಈ ಬಗೆಯ ಮೊಟಕುವಾದಿ (Redutionist) ನಿರ್ವಚನದಿಂದಾಗಿ ಮಹಿಳೆಯರಿಗೆ ತೀವ್ರ ಅನ್ಯಾಯವಾಗಿದೆ.

ಲಂಡನ್ನಿನಲ್ಲಿ ನೆಲೆಸಿರುವ ಭಾರತ ಮೂಲಕ ಲೇಖಕಿ ಮಾಲಾಸೇನರವರು ಭಾರತೀಯ ಮಹಿಳೆ ಒಬ್ಬ ಉತ್ತಮ ಗೃಹಿಣಿಯಾಗಲು ಸರ್ವರೀತಿಯ ಅರ್ಹತೆಯುಳ್ಳವವಳು. ಅವಳು ತಾಯಿಯಾಗಿ ಸಹೋದರಿಯಾಗಿ, ಮಡದಿಯಾಗಿ ತನ್ನ ಕುಟುಂಬಕ್ಕೆ ಸೇವೆ ಸಲ್ಲಿಸುತ್ತಾಳೆ. ಅವಳೆಂದೂ ಸ್ವಾರ್ಥಿಯಾಗಲಾರಳು ಅವಳು ತನಗಾಗಿ ಜೀವಿಸದೇ ಕುಟುಂಬಕ್ಕಾಗಿ ಜೀವಿಸುತ್ತಾಳೆ. ಆದರೆ ಭಾರತದ ಪುರುಷ ಪ್ರಧಾನ ಸಮಾಜ ಅವಳ ತ್ಯಾಗಕ್ಕೆ ಪ್ರತಿಫಲವಾಗಿ ನೀಡಿದ್ದೇನು? ತಿರಸ್ಕಾರ, ಅತ್ಯಾಚಾರ ವರದಕ್ಷಿಣೆಗಾಗಿ ಜೀವಂತದಹನ ಹೆಣ್ಣು ಭ್ರೂಣವೆಂದು ತಿಳಿದು ಗರ್ಭದಲ್ಲಿದ್ದಾಗಲೇ ಹತ್ಯೆ ಇಂತಹ ಕ್ರೂರ ದೃಷ್ಟಿಗೆ ಕೊನೆ ಇಲ್ಲವೇ? ಎಂಬುದಾಗಿ ಪ್ರಶ್ನಿಸಿದ್ದಾರೆ." (ಮಹಿಳೆ & ದುಡಿಮೆ ಡಾ.ಅಂಜಿನಪ್ಪ ಬಿ.ಎಚ್ ಪು ೫.೬)

ಜ್ಞಾನ ವಿಜ್ಞಾನ ನಿರ್ವಚಿಸಿಕೊಂಡಿರುವ ದುಡಿಮೆಯಲ್ಲಿ ಮನೆವಾರ್ತೆ ಕುಟುಂಬ ಸಂಬಂಧಿ ದುಡಿಮೆ ಸೇರುವುದಿಲ್ಲ. ಸಾಮಾಜಿಕವಾಗಿ ಆರ್ಥಿಕವಾಗಿ ರಾಜಕಿಯವಾಗಿ ಏನೆಲ್ಲ ಬದಲಾವಣೆಗಳು ಸಂಬವಿಸಿದರೂ ಮನೆವಾರ್ತೆಯಿಂದ ಮಹಿಳೆಯರಿಗೆ ಬಿಡುಗಡೆ ದೊರೆಯುತ್ತಿಲ್ಲ. ಈ ಮನೆವಾರ್ತೆಯಿಂದ ಮಹಿಳೆಯರ ದುಡಿಮೆಯನ್ನು ಆ ಚಾರಿತ್ರಿಕ ವೆಂದು ಕರೆಯಬಹುದು. ಮಹಿಳೆಯರ ದುಡಿಮೆಯನ್ನುವುದು ಹುಟ್ಟಿನಿಂದಲೇ ನಿರ್ದಿಷ್ಟವಾಗುವ ದುಡಿಮೆಯಾಗಿದೆ. ಮಹಿಳೆಯಾಗಿ ಹುಟ್ಟಿದ ಕಾರಣಕ್ಕಾಗಿ ಅವಳು ಲಿಂಗ ನಿರ್ದಿಷ್ಟ ಕಾರ್ಯಗಳನ್ನು ಮಾಡಬೇಕಾಗಿದೆ. ಮತ್ತು ಅವಳ ದುಡಿಮೆಯು ಜ್ಞಾನ ವಿಜ್ಞಾನಗಳಲ್ಲಿ ದುಡಿಮೆಯೆಂದು ಪರಿಗಣಿತವಾಗಿಲ್ಲ.

ಮಹಿಳೆಯರು ತಮ್ಮನ್ನು ತಾವು ದಮನಿತರು, ಅಧೀನರು, ತಾವು ದುಡಿಮೆಗಾರರಲ್ಲ, ತಾವು ಗಳಿಕೆದಾರರಲ್ಲ, ತಾವು ಅವಲಂಬಿತರು, ತನ್ನ ಕಾಣಿಕೆ ಕುಟುಂಬಕ್ಕೆ ಅಥವಾ ಆರ್ಥಿಕತೆಗೆ ಏನೇನೂ ಇಲ್ಲ ಎಂಬ ಪೂರ್ವಗ್ರಹ ನಂಬಿಕೆಯಿಂದ ನರಳುತ್ತಿದ್ದರು. ಈ ಅಂಶಗಳಿಗೆ ಮಾರಕವಾಗಿ ಮಹಿಳೆಯರಲ್ಲೇ ಅಂತರ್ಗತಗೊಂಡಿರುವ ಅಸಹಾಯಕ ಭಾವನೆಯನ್ನು ಕುರಿತು ಅಮರ್ತ್ಯಸೇನ್ ಅವರು ಎರಡು ಕಾರಣಗಳನ್ನು ನೀಡುತ್ತಾರೆ.

ನಮ್ಮ ಸಮಾಜದ ಸಂದರ್ಭದಲ್ಲಿ ಮಹಿಳೆಯರಿಗೆ ಸ್ವಹಿತಾಸಕ್ತಿಯೆಂಬುದು ಇಲ್ಲವೆ ಇಲ್ಲ ಎನ್ನುವಷ್ಟರ ಮಟ್ಟಿಗೆ ಪರಹಿತ ಭಾವನೆ ಮನಸ್ಸಿನಲ್ಲಿ ಮಡುಗಟ್ಟಿಕೊಂಡು ಬಿಟ್ಟಿದೆ. ಮಹಿಳೆಯರಿಗೆ ಸ್ವಹಿತಾಸಕ್ತಿ ಬಗ್ಗೆ ಅರಿವು ಪ್ರಜ್ಞೆ ಇಲ್ಲದಿರುವುದರಿಂದ ಅವರ ಶೋಷಣೆ ಸಮಾಜಕ್ಕೆ ಸುಲಭವಾಗಿದೆ.

ಕುಟುಂಬಕ್ಕೆ ಮತ್ತು ಆರ್ಥಿಕತೆಗೆ ತಮ್ಮ ಕಾಣಿಕೆ ಏನೂ ಇಲ್ಲ ಎಂದು ಮಹಿಳೆಯರು ಭಾವಿಸಿಕೊಂಡಿದ್ದಾರೆ. ಇಂತಹ ಭಾವನೆಯಲ್ಲಿ ಮುಳುಗಿರುವ ಮಹಿಳೆಯರನ್ನು ಶೋಷಿಸುವುದು ಸಮಾಜಕ್ಕೆ ಪುರುಷಶಾಹಿಗೆ ಸುಲಭವಾಗಿ ಬಿಡುತ್ತದೆ. ಆದ್ದರಿಂದಲೇ, ಮಹಿಳೆಯರು ಅಧೀನ ಸ್ಥಿತಿಗೆ ಕೀಳು ಸ್ಥಾನಮಾನಕ್ಕೆ, ಅನಾದಾರಣೆಗೆ ಒಳಗಾಗುತ್ತಿದ್ದಾರೆ. ಭಾರತ ಸಮಾಜದ ಪರಿಸ್ಥಿತಿಯಲ್ಲಿ ಮಹಿಳೆಯರು

ಸ್ವಹಿತಾಸಕ್ತಿಗಿಂತ ಬೇರೆಯವರ ಹಿತಾಸಕ್ತಿಗೆ ಬದುಕುವುದು ಸಾಮಾನ್ಯವಾಗಿದೆ. ಹೀಗೆ ಬದುಕುವುದನ್ನು ಸಾಮಾಜಿಕ ವ್ಯವಸ್ಥೆಯು ತಾಯಿಯರ ಲಕ್ಷಣ ಎಂದು ಪರಿಗಣಿಸುತ್ತದೆ. ಈ ನಿಟ್ಟಿನಲ್ಲಿ ಮಹಿಳೆಯರನ್ನು ಸಮಾಜ ಬಂಧಿಸಲ್ಪಟ್ಟಿದೆ.

ಆದರೆ ಕೈಗಾರಿಕಾ ಕ್ರಾಂತಿಯ ಪ್ರತಿಕೂಲ ಪರಿಣಾಮದಿಂದ ಮಹಿಳೆಯರು ಹೊರಗಡೆ ಹೋಗಿ ಕೆಲಸ ಮಾಡುವ ಸಂದರ್ಭವು ಒದಗಿಬಂದಿತು. ಮಹಿಳೆಯರು ಬಡತನದ ಅನಿವಾರ್ಯ ಪರಿಸ್ಥಿತಿಗೆ ಮತ್ತು ಕೌಟುಂಬಿಕ ಜವಾಬ್ದಾರಿಯನ್ನು ಕರ್ತವ್ಯವಾಗಿ ಮೊದಲಿನಿಂದಲೂ ಪಿತೃ ಪ್ರಧಾನ ವ್ಯವಸ್ಥೆಯು ಹೇರಿರುವುದರಿಂದ, ಅವಳು ಹೊರಗಡೆ ಹೋಗಿ ಕೆಲಸ ಮಾಡಲೇಬೇಕಾದ ಸ್ಥಿತಿಗೆ ಒಳಪಟ್ಟಳು ನಂತರವೇ ಇದರಲ್ಲಿ ಸಂಘಟಿತ ವಲಯ ಮತ್ತು ಅಸಂಘಟಿತ ವಲಯವಾಗಿ ವಿಭಜನೆಗೊಂಡವು. ಆದರೆ ಪುರುಷ ಪ್ರಧಾನ ಪ್ಯವಸ್ಥೆಯಲ್ಲಿ ಮಹಿಳೆಯರು ಮೊದಲನೆಯ ವಲಯಕ್ಕಿಂತ ಹೆಚ್ಚಾಗಿ ಎರಡನೇ ವಲಯದಲ್ಲಿ ಕಂಡು ಬರುತ್ತಾರೆ.

ಆಧುನಿಕತೆ ಬದಲಾದಂತೆ ಮಹಿಳೆಯರಿಗೆ ದಿನನಿತ್ಯವು ಸಮಸ್ಯೆಗಳು ಜವಾಬ್ದಾರಿಗಳು ಹೆಚ್ಚಾಗುತ್ತವೆ. ವ್ಯವಹಾರಿಕ ಪ್ರಪಂಚಕ್ಕೆ ಕಾಲಿರಿಸಿದ ಮಹಿಳೆ ಹೊಸ ಹೊಸ ಯೋಚನೆ, ಯೋಜನೆಗಳತ್ತ ಗಮನ ಹರಿಸುತ್ತಿದ್ದಾಳೆ. ಕುಟುಂಬ ವ್ಯವಸ್ಥೆ ಎನ್ನುವುದು ಸಂಕೀರ್ಣವಾಗುತ್ತಿದ್ದರೂ ತಾನು ಹೊರ ಪ್ರಪಂಚಕ್ಕೆ ತೆರೆದುಕೊಳ್ಳಬೇಕು. ನಾಲ್ಕು ಜನರ ನಡುವೆ ಗುರುತಿಸಿಕೊಳ್ಳಬೇಕು. ಅದರೊಂದಿಗೆ ತನ್ನ ಪಟ್ಟ ಸಂಸಾರವನ್ನು ಆರ್ಥಿಕವಾಗಿ ಮೇಲೆತ್ತಲು ಸಹಕಾರ ನೀಡಬೆಕು ಎನ್ನುವುದು ಮುಂದುವರಿದ ಮಹಿಳೆಯರ ಬಹುತೇಕ ಯೋಚನೆಯಾಗಿರುತ್ತದೆ.

ಎಲ್ಲರೂ ದುಡಿಯುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಎಂಬುದು ಅತ್ಯಂತ ಸತ್ಯವಾದ ಮಾತು. ನಮಗೆ ಬದುಕಲು ಆಹಾರ ಎಷ್ಟು ಮುಖ್ಯವೋ ಧರಿಸಲು ಬಟ್ಟೆ ಕೂಡ ಅಷ್ಟೇ ಮುಖ್ಯ. ಹಿಂದೆ ಧರಿಸುವ ಉಡುಪನ್ನು ಸಿದ್ಧಪಟಿಸಲು ಒಂದು ವರ್ಗದ ಜನಕ್ಕೆ ಮಾತ್ರ ಅವಕಾಶವಿತ್ತು. ಆದರೆ ಈಗ ಕಾಲ ಹಿಂದಿನಂತಿಲ್ಲ. ಸಾದಾ ಉಡುಪಿನ ಆಕರ್ಷಕ ರೂಪ ಇರುವ ಸಾವಿರಾರು ಮಂದಿ ಒಂದೇ ಸೂರಿನಡಿ ಈ ಕಾಯಕದಡಿಯಲ್ಲಿ ನಿರತರಾಗಿದ್ದಾರೆ. ಜಾಗತಿಕ ಮಟ್ಟದಲ್ಲಿ ಜನರ ಜೀವನ ಶೈಲಿ ಬದಲಾದಂತೆ ಧರಿಸುವ ಉಡುಪುಗಳಿಗೂ ಬೇಡಿಕೆ ಹೆಚ್ಚಾಗಿದೆ. ಈ ಬೆಡಿಕೆಗೆ ತಕ್ಕಂತೆ ದೊಡ್ಡ ಪ್ರಮಾಣದ ಗಾರ್ಮೆಂಟ್ಸ್ ಉದ್ಯೋಗ ಎಂದಾಕ್ಷಣ ಬಡವರ ಪಾಲಿನ ಆಶಾಕಿರಣವಾಗಿದೆ. ಅದರಲ್ಲಿ ಸಾವಿರಾರು ಲಕ್ಷಾಂತರ ಬಡಮಹಿಳೆಯರ ಕುಟುಂಬಗಳ ಜೀವಾಳವಾಗಿದೆ. ಇಂದಿನ ಉತ್ಪನ್ನಗಳ ಬೇಡಿಕೆ ಹೆಚ್ಚಾಗಿ ಈ ಕ್ಷೇತ್ರದಲ್ಲಿ ಅವಕಾಶಗಳ ಮಹಾಪುರವೇ ಸೃಷ್ಠಿಯಾಗುತ್ತಿದ್ದಂತೆ ಗ್ರಾಮಾಂತರ ಪ್ರದೇಶದಿಂದ ಹಿಡಿದು ಅನೇಕ ಓರಿಸ್ಸಾ, ಅಸ್ಸಾಂ, ತಮಿಳುನಾಡು, ಕೇರಳ, ರಾಜ್ಯಗಳಿಂದಲೂ ಅಪಾರ ಸಂಖ್ಯೆಯಲ್ಲಿ ಕೆಲಸಕ್ಕೆ ಸೇರುತ್ತಿದ್ದಾಳೆ. ಆಶ್ಚರ್ಯದ ವಿಷಯವೆಂದರೆ ಇಲ್ಲಿ ಮಧ್ಯವಯಸ್ಸಿನ ಮಹಿಳೆಯರು ಕಲಿಯುತ್ತಿದ್ದಾರೆ.

೧.೨ ಅಧ್ಯಯನದ ಉದ್ದೇಶ

ಭಾರತದಲ್ಲಿ ಶೇ೧೦% ಕ್ಕಿಂತ ಕಡಿಮೆ ಮಹಿಳೆಯರು ಸಂಘಟಿತ ವಲಯದಲ್ಲಿ ಶೇ ೯೦% ಹೆಚ್ಚು ಮಹಿಳೆಯರು ಅಸಂಘಟಿತ ವಲಯದಲ್ಲೆ ದುಡಿಯುತ್ತಿದ್ದಾರೆ. ಇಲ್ಲಿ ಮಹಿಳೆಯರ ಕೆಲಸದ ಸ್ವರೂಪ ಸ್ಥಿತಿ ಗತಿ ಹಾಗೂ ಸಮಸ್ಯೆಗಳನ್ನು ಮೊದಲು ಬೆಳಕಿಗೆ ತಂದಿದ್ದು ೧೯೭೪ರಲ್ಲಿ ನ್ಯಾಷನಲ್ ಕಮಿಟಿ ಆನ್ ಸ್ಟೇಟಸ್ ಆಫ್ ವುಮೆನ್ ಕಮಿಟಿವು ಮೆನ್ ವರದಿ ಟುವರ್ಡ್ಸ್ ಇಕ್ವಾಲಿಟಿ, ಇದು ಸರ್ಕಾರದ ನೀತಿ ನಿರೂಪಕರ ಹಾಗೂ ಅರ್ಥಶಾಸ್ತ್ರರ ಗಮನವನ್ನು ಸೆಳೆಯಿತು. ನಂತರ ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರ ಕಡೆ ಹೆಚ್ಚಿನ ಗಮನ ಹರಿಯಲು ಪ್ರಾರಂಭವಾಯಿತು. ಭಾರತದಲ್ಲಿ ಮಹಿಳೆಯರ ಸ್ಥಿತಿಗತಿಗಳನ್ನು ತಿಳಿಯಲು ಇದು ಒಂದು ಅವಕಾಶವೆಂದೆ ಹೇಳಬಹುದು. ಮಹಿಳೆಯರ ಸಾಮಾಜಿಕ ಆರ್ಥಿಕ ಕೌಟುಂಬಿಕ ಪ್ರತಿಯೊಂದು ವರ್ಷಯದಲ್ಲಿ ಗಂಡಿನಷ್ಟೇ ಸಮನಾಗಿ ದುಡಿದರೂ ತಾರತಮ್ಯದ ಭಾವನೆ ಹೋಗಲಾಡಿಸಲು ಸಾಧ್ಯವಿಲ್ಲದ ಪರಿಸ್ಥಿತಿಯಿಂದ ಮಹಿಳೆ ನರಳುತ್ತಿದ್ದಾಳೆ. ಹೀಗಾಗಿ ಈ ಅಧ್ಯಯನದಲ್ಲಿ ಮಹಿಳೆಯರು ಕೌಟುಂಬಿಕ ಜೀವನದ ಸಮಸ್ಯೆಗಳೊಂದಿಗೆ ಮಹಿಳೆ ಸ್ಥಾನಮಾನ ತಿಳಿಯಲು ಹಾಗೂ ಅವಳು ಸಾರ್ವಜನಿಕ ವಲಯದಲ್ಲಿ ಎದುರಿಸುತ್ತಿರುವ ತಾರತಮ್ಯ ಬದುಕಿನ ವಿಷಯಗಳನ್ನು ತಿಳಿಯಲು ಫ್ಯಾಕ್ಟ್ರೀ ಕೆಲಸವನ್ನು ಜೀವನಾಧಾರವಾಗಿ ನಂಬಿ ಬದುಕುವವರು ಗಾರ್ಮೆಂಟ್ಸ್ ಮಹಿಳೆಯರು ಇಂದಿನ ಪ್ರಸ್ತುತ ಜಾಗತೀಕರಣದ ಸಂದರ್ಭದಲ್ಲಿ ಅವರು ಎದುರಿಸುವ ಸವಾಲುಗಳಾವವು ಎಂಬುದನ್ನು ತಿಳಿದುಕೊಳ್ಳುವುದು, ಈ ಅಧ್ಯಾಯನದ ಉದ್ದೇಶವಾಗಿದೆ. ಮತ್ತು ಏಂಗಲ್ಸ್‌ರವರು ಸ್ತ್ರೀ ಪುರುಷರ ಭೇದದ ಸ್ವರೂಪಗಳನ್ನು ಮಾನವ ಸಮಾಜದ ಲಿಂಗತಾರತಮ್ಯದ ಸ್ವರೂಪಕ್ಕೆ ಒಳಪಡಿಸಿಕೊಂಡಿದ್ದಾರೆ. ಇವರ ಸಿದ್ದಾಂತದ ಪ್ರಕಾರ ಮಾನವರಲ್ಲಿ ಎಂದು ಶ್ರಮ ವಿಭಜನೆ ಹುಟ್ಟಿಕೊಂಡಿತೊ ಆಸ್ತಿಯ ಪರಿಕಲ್ಪನೆಯು ಜನ್ಮತಾಳಿತು. ಹಾಗೂ ಕುಟುಂಬ ವ್ಯವಸ್ಥೆಯ ಬಲಗೊಳ್ಳುತ್ತ ಬಂದ ಹಾಗೆ, ಆ ಘಟ್ಟಗಳಲ್ಲಿಯೇ ತಾರತಮ್ಯದ ಆರಂಭವನ್ನು ಕಾಣಬಹುದು. ಪ್ರಾಚೀನವಾದ ಈ ವ್ಯವಸ್ಥೆಯು ಇಂದು ಎಲ್ಲಾ ಕಾಲ ದೇಶ ಸ್ಥಳ ಮತ್ತು ಜನಾಂಗಗಳಲ್ಲಿ ವ್ಯಾಪಿಸುವುದಾಗಿದೆ. ಹಾಗಾಗಿ ಈ ತಾರತಮ್ಯವನ್ನು ಕುರಿತು ಅಧ್ಯಯನ ಮಾಡುವುದು ಮಹಿಳಾ ಅಧ್ಯಯನದ ಪ್ರಾಥಮಿಕ ಆಧ್ಯತೆಯಲ್ಲಿ ಒಂದಾಗಿದೆ. ಪುರುಷ ಚಿಂತನೆಯಲ್ಲಿ ಒಳಪಡುವ ಮಹಿಳೆಯು ವಿವಿಧ ವಲಯಗಳಲ್ಲಿ ತಾರತಮ್ಯವನ್ನು ಉದ್ದೇಶಪೂರ್ವಕವಾಗಿ ಸೃಷ್ಟಿಗೊಳಿಸಿರುವುದನ್ನು ಕಾಣುತ್ತೇವೆ.

ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ಮಹಿಳಾ ಕಾರ್ಮಿಕರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳನ್ನು ಅದರ ಸಾಂಸ್ಥಿಕ ಚೌಕಟ್ಟಿನಲ್ಲಿ ನೋಡಲು ಪ್ರಯತ್ನಿಸಲಾಗುವುದು. ಈ ಎಲ್ಲಾ ಅಂಶಗಳನ್ನು ಉದ್ದೇಶಗಳನ್ನಾಗಿ ಪರಿಗಣಿಸಲಾಗಿದೆ.

೧. ಟುವರ್ಡ ಇಕ್ವಾಲಿಟಿ ವರದಿ ಪ್ರಕಾರ ಶೇ. ೯೫%ರಷ್ಟು ಮಹಿಳೆಯರು ಅಸಂಘಟಿತ ವಲಯದಲ್ಲಿ ಕಂಡು ಬರುತ್ತಾರೆ. ಆದರೆ ಇಷ್ಟು ಪ್ರಮಾಣದಲ್ಲಿ ಸಂಘಟಿತ ವಲಯದಲ್ಲಿ ಯಾಕೆ ಕಂಡು

ಬರುವುದಿಲ್ಲ ಎಂಬುದನ್ನು ನೋಡಿದರೆ ಎರಡೂ ವಲಯಗಳಲ್ಲಿಯೂ ಲಿಂಗನಿರಪೇಕ್ಷತೆಯನ್ನು ಅನುಸರಿಸುತ್ತಿಲ್ಲ. ಎಂಬ ಪೂರ್ವಕಲ್ಪನೆಯೊಂದಿಗೆ ಅದರಲ್ಲೂ ಅಸಂಘಟಿತ ವಲಯದಲ್ಲೇ ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರೇ ಏಕೆ ಕಂಡುಬರುತ್ತಾರೆ.? ಸಮಾನತೆ ವರದಿ ಪ್ರಕಾರ ಅಸಂಘಟಿತ ವಲಯದಲ್ಲಿ ಲಿಂಗತಾರತಮ್ಯವಿದೆ. ಎಂಬುದನ್ನು ಅಧ್ಯಯನ ವರದಿಯಿಂದ ಖಚಿತಗೊಂಡಿದೆ. ಅದರ ಭಾಗವಾದ ಗಾರ್ಮೆಂಟ್ಸ ಫ್ಯಾಕ್ಟ್ರರಿಗಳಲ್ಲಿ ಕೂಡ ಲಿಂಗತಾರತಮ್ಯವಿರುವುದನ್ನು ತಿಳಿಯುವುದರೊಂದಿಗೆ ವಿಶ್ಲೇಷಣೆಗೆ ಒಳಪಡಿಸುವುದು.

೨. ಮಹಿಳಾ ಕಾರ್ಮಿಕರ ಈ ಮೂಲಭೂತ ಸಮಸ್ಯೆಗಳು ಅವಶ್ಯಕ ಸೌಲಭ್ಯಗಳನ್ನು ಇನ್ನಿತರದವುಗಳನ್ನು ಮಾಲೀಕರು ಒದಗಿಸದೆ ಇರುವ ಒಳತಂತ್ರಗಾರಿಕೆ ತಿಳಿಯುವುದು.

೩. ಕಾರ್ಖಾನೆಯ ಮಾಲೀಕರ ಮತ್ತು ಕಾರ್ಮಿಕರ ನಡುವಿನ ಸಂಬಂಧ ಎಂತಹುದು ಎಂಬುದನ್ನು ಅರಿಯುವುದು.

೪. ಮಹಿಳೆಯ ದುಡಿಮೆಗೂ ಮತ್ತು ಅವರ ಬದುಕಿನ ಮೇಲಾಗುವ ಪರಿಣಾಮಗಳೂ (ಸಕಾರತ್ಮಕ ಮತ್ತು ನಕಾರಾತ್ಮಕ) ಗುರುತಿಸುವುದು.

೫. ಭಾರತೀಯ ಸಮಾಜದ ಪ್ರಸಕ್ತ ಪರಿಸ್ಥಿತಿಯಲ್ಲಿ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕ ಜೀವನ ಸ್ಥಿತಿ ಅರಿಯುವುದು.

೬. ಆಧುನಿಕ ಯುಗದಲ್ಲಿ ಮಹಿಳೆಯರ ಕೌಟುಂಬಿಕ & ಸಾರ್ವಜನಿಕ ಪಾತ್ರಗಳ ವಿವೇಚನೆಗೆ ಒಳಪಡಿಸುವುದು.

೭. ಖಾಸಗೀಕರಣ ಮತ್ತು ಆಧುನಿಕತೆಯನ್ನು ಮೈಗೂಡಿಸಿಕೊಂಡಿರುವ ಗಾರ್ಮೆಂಟ್ಸ್ ಫ್ಯಾಕ್ಟರಿ ಕಾರ್ಮಿಕರಿಗೆ ನೀಡಿರುವ ಸೌಲಭ್ಯಗಳ ಸ್ವರೂಪ ಹೇಗಿದೆ? ಅವುಗಳ ಪರಿಣಾಮಗಳಾವವು? ಎಂಬುದನ್ನು ಕಾರ್ಮಿಕರಿಂದ ಚರ್ಚಿಸುವುದು.

೮. ಜಾಗತೀಕರಣ ಪರಿಣಾಮದಿಂದಾಗಿ 'ಭಾಷೆ'ಯು ಒಂದು ಪ್ರಮುಖ ಮಾನದಂಡವಾಗಿದ್ದು, ಅದು ಉದ್ಯೋಗ, ವರಮಾನ ಹಾಗೂ ಅಂತಸ್ತನ್ನು ಗಳಿಸಲು ಮತ್ತು ಕಾರ್ಮಿಕರನ್ನು ಶೋಷಣೆ ಮಾಡಲು ಹೇಗೆ ಬಳಕೆಯಾಗುತ್ತಿದೆ ಎಂಬುದನ್ನು ಚರ್ಚಿಸುವುದು.

೯. ಫ್ಯಾಕ್ಟ್ರಿಗೆ ಸಂಬಂಧಿಸಿದ ಕಾಯ್ದೆ ಕಾನೂನುಗಳು ಅವುಗಳ ಬಗ್ಗೆ ಕಾರ್ಮಿಕರಲ್ಲಿರುವ ಅರಿವು, ಮಹತ್ವ, ಅನುಷ್ಠಾನ ಹಾಗೂ ಅವುಗಳ ಅನುಷ್ಠಾನಕ್ಕೆ ಅಡ್ಡಿಯಾಗಿರುವ ಅಂಶಗಳನ್ನು ಪರಿಶೀಲಿಸುವುದು.

೧೦. ಮಹಿಳಾ ಕಾರ್ಮಿಕರ ಕ್ಷೇಮಾಭಿವೃದ್ಧಿಯಲ್ಲಿ ಸಂಘಟನೆಗಳ ಪಾತ್ರಗಳನ್ನು ವಿವೇಚಿಸುವುದು.

1.3 ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಗಾರ್ಮೆಂಟ್ಸ್ ಫ್ಯಾಕ್ಟ್ರಿಗಳಲ್ಲಿ ಕೆಲಸ ಮಾಡುವ ಮಹಿಳೆಯರನ್ನು ಕೇಂದ್ರವಾಗಿರಿಸಿಕೊಂಡಿದೆ. ಅಧ್ಯಯನದ ಸ್ಪಷ್ಟತೆಗಾಗಿ ಅಧ್ಯಯನದ ವ್ಯಾಪ್ತಿಯಲ್ಲಿ ಕರ್ನಾಟಕ ರಾಜ್ಯದ ಬಳ್ಳಾರಿ (ಜಿಲ್ಲೆ) ನಗರವನ್ನು ಜೊತೆಗೆ, ಅತಿ ಹೆಚ್ಚು ಕಾರ್ಖಾನೆಗಳು ಬೆಂಗಳೂರಿನಲ್ಲಿ ಪ್ಯಾಕ್ಟರಿಗಳು ಇರುವುದರಿಂದ ದಿನನಿತ್ಯವೂ ಬೆಳಕು ಹರಿಯುತ್ತಿದ್ದ ಹಾಗೆ ಸಿಲಿಕಾನ್ ಸಿಟಿಯನ್ನು ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಬಟ್ಟೆ ತಯಾರಿಸುವ ಕಾರ್ಖಾನೆಗಳಿಗೆ ಕೆಲಸಕ್ಕೆ ಹೋಗುವುದನ್ನು ಕಾಣಬಹುದು.

ದಿನಗೂಲಿ ಇಲಾಖೆಯವರ ಅಂಕಿ ಅಂಶಗಳ ಪ್ರಕಾರ ಬೆಂಗಳೂರಿನಲ್ಲಿ ೮೫೮ ಬಟ್ಟೆ ಕಾರ್ಖಾನೆಗಳಿವೆ. ಇವುಗಳಲ್ಲಿ ೧,೯೫,೪೩ ಜನ ಒಟ್ಟು ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ಇವರಲ್ಲಿ ೧.೧೩.೮೫೮ ಜನ ಮಹಿಳೆಯರು ಈ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಆದ ಕಾರಣ, ಬಳ್ಳಾರಿ ನಗರದ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವ ಮಹಿಳಾ ಬದುಕಿಗೂ ಬೆಂಗಳೂರು ಗ್ರಾಮಾಂತರ ನಗರೀಕರಣ ಜೀವನದ ಮಹಿಳಾ ಬದುಕಿಗೂ ಇರುವ ವ್ಯತ್ಯಾಸವನ್ನು ಈ ಸಂಶೋಧನಾ ಅಧ್ಯಯನಕ್ಕೆ ಒಳಪಡಿಸಲಾಗುತ್ತದೆ. ಜೊತೆಗೆ ಈ ವಿಷಯಕ್ಕೆ ಸಂಬಂಧಿಸಿದಂತೆ ನಡೆದ ಅಧ್ಯಯನಗಳನ್ನು ಲೇಖನಗಳನ್ನು ಪತ್ರಿಕೆಗಳನ್ನು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

೧.೪ ಅಧ್ಯಯನದ ಮಹತ್ವ

ಮಹಿಳೆಯು ಸಂಘಟಿತ ವಲಯಕ್ಕಿಂತ ಅಸಂಘಟಿತ ವಲಯದಲ್ಲಿ ಹೆಚ್ಚು ಶೋಷಣೆಗೆ ಒಳಗಾಗುತ್ತಾಳೆ. ಅರ್ಥಶಾಸ್ತ್ರವನ್ನು ಸೇರಿಕೊಂಡು ಸಮಾಜ ವಿಜ್ಞಾನಗಳೆಲ್ಲವೂ ಮೂಲತಃ ಲಿಂಗ ನಿರಪೇಕ್ಷ ಜ್ಞಾನಶಾಖೆಗಳಾಗಿವೆ. ಆದರೆ ವಾಸ್ತವದಲ್ಲಿ ಅವು ಪುರುಷಶಾಹಿ ಪುರುಷ ಪ್ರಧಾನತೆಯಿಂದ ಮರೆಯುತ್ತಿದೆ. ಪುರುಷರ ನೆಲೆಯಿಂದ ಜ್ಞಾನವನ್ನು ಪರಿಭಾವಿಸಿಕೊಳ್ಳುವುದು ರೂಢಿಯಲ್ಲಿದೆ. ಈ ಎಲ್ಲಾ ಜ್ಞಾನ ಶಿಸ್ತುಗಳು ಮಹಿಳೆಯರನ್ನು ಜೈವಿಕ ಘಟಕವೆಂದು ಪರಿಭಾವಿಸಿತ್ತಿವೆ, ವಿನಃ ಅಭಿವೃದ್ಧಿ ಘಟಕವೆಂದು ಪರಿಭಾವಿಸುವುದಿಲ್ಲ. ಸಾಮಾಜಿಕವಾಗಿ ಅಸ್ತಿತ್ವದಲ್ಲಿರುವ ಲಿಂಗ ತಾರತಮ್ಯ ಲಿಂಗ ಅಸಮಾನತೆ, ಮಹಿಳೆಯರ ಮೇಲಿನ ಹಿಂಸೆಗಳನ್ನು ಜ್ಞಾನ ಶಿಸ್ತುಗಳು ದೃಢಪಡಿಸುತ್ತಿರುವಂತೆ ಕಾಣುತ್ತದೆ. ಅಭಿವೃದ್ಧಿಗೆ ಸಂಬಂಧಿಸಿದ ಯಾವುದೇ ಸೂಚಿಯನ್ನು ತೆಗೆದುಕೊಂಡರೂ ಮಹಿಳೆಯರ ಸ್ಥಾನಮಾನ ಹಾಗೂ ಸ್ಥಿತಿಗತಿಗಳು ಪುರುಷರ ಸ್ಥಾನಮಾನ ಹಾಗೂ ಸ್ಥಿತಿಗತಿಗಿಂತ ಕೆಳಮಟ್ಟದಲ್ಲಿರುವುದು ಕಂಡುಬರುತ್ತದೆ.

ಅವಳು ಪುರುಷನಷ್ಟೇ ದುಡಿದರೂ ಕೂಡ ಪುರುಷಶಾಹಿ ವ್ಯವಸ್ಥೆ ದುಡಿಮೆಗಾರಳಾಗಿ ಪರಿಗಣನೆ ಮಾಡದೇ ಇರುವ ಹಿನ್ನೆಲೆಯನ್ನು ಹಾಗೂ ದುಡಿಮೆಗಾರರಲ್ಲೇ ಪ್ರಮುಖವಾಗಿ ಮಹಿಳೆ ದುಡಿಮೆಗಾರಳಾದರೂ ಪ್ರಧಾನಧಾರೆಯ ವ್ಯವಸ್ಥೆಯ ಗುರುತಿಸಲು ಯಾವ ಲಿಂಗಭೇದವನ್ನು ಅನುಸರಿಸುವುದನ್ನು ತಿಳಿದುಕೊಳ್ಳುವುದರ ಜೊತೆಗೆ ಮೂರು ಬಗೆಯ ಉತ್ಪಾದನಾ ಚಟುಚಟಿಕೆಗಳಾದ ಮನೆಯೊಳಗಿನ ಸಂತಾನೋತ್ಪತ್ತಿ ಮತ್ತು ಮನೆ ಹೊರಗಿನ ದುಡಿಮೆಯಲ್ಲಿ ಅವಳ ಪಾಲ್ಗೊಳ್ಳುವಿಕೆ

[illegible]

[illegible]

[illegible]

[illegible]

ಇದ್ದರೂ, ಅದನ್ನು ಹೇಗೆ ನಗಣ್ಯ ಮಾಡಲಾಗುತ್ತದೆ? ಯಾಕೆ ನಗಣ್ಯ ಮಾಡಲಾಗುತ್ತದೆ? ಯಾವ ರೀತಿ ಶೋಷಣೆಗಳಿಗೆ ಒಳಪಡಿಸಲಾಗುತ್ತದೆ ಎಂಬುದನ್ನು ತಿಳಿದುಕೊಳ್ಳುವಲ್ಲಿ ಈ ಅಧ್ಯಯನವು ಮಹತ್ವ ಪಡೆದುಕೊಂಡಿದೆ.

ಲಿಂಗ ತಾರತಮ್ಯ ಸೂಕ್ಷ್ಮ ಶೋಷಣೆಯು ನಿರಂತರವಾಗಿ ಹರಿದು ಬಂದಿದೆ. ಅದರ ಬೇರುಗಳು ಸಾಮಾಜಿಕ ವ್ಯವಸ್ಥೆಯಲ್ಲಿದೆ. ಮಹಿಳೆಯರ ಪರವಾಗಿ ಸದೃಢವಾದ ಹೆಜ್ಜೆಯಿಂದ ಕಾರ್ಯೋನ್ಮುಖವಾಗುವ ಅಗತ್ಯ ಪ್ರಸ್ತುತದಲ್ಲಿದೆ. ಈ ದಿಕ್ಕಿನಲ್ಲಿ ಮಹಿಳೆಯರ ಸ್ಥಾನಮಾನಗಳನ್ನು ಗುರುತಿಸುವುದು. ಬಹಳ ಕ್ಲಿಷ್ಟಕರವಾದ ಸಂಗತಿಯಾಗಿದೆ. ಶಿಕ್ಷಣ, ಆದಾಯ, ದುಡಿಮೆ ಕುಟುಂಬದಲ್ಲಿನ ಸ್ಥಾನಮಾನಗಳು ಒಟ್ಟಾರೆಯಾಗಿ ಗಾರ್ಮೆಂಟ್ಸ್ ಫ್ಯಾಕ್ಟ್ರಿಯ ಮಹಿಳೆಯರ ಪಾತ್ರವನ್ನು ಗುರುತಿಸುವುದು ಅಧ್ಯಯನದ ಮಹತ್ವವಾಗಿದೆ. ಮಹಿಳೆಯರಿಗೆ ಔದ್ಯೋಗಿಕ ರಂಗ, ಸಣ್ಣ ಪ್ರಮಾಣದ ಉದ್ಯೋಗಗಳು ಮತ್ತು ಇನ್ನು ಅನೇಕ ಆದಾಯ ತರುವಂತಹ ಕೆಲಸಗಳಲ್ಲಿ ಹೆಚ್ಚಿನ ಉದ್ಯೋಗಾವಕಾಶ ಸಿಗುವಂತೆ ಮಾಡಲು ಹಾಗೂ ಸುಧಾರಿತ ನೀತಿಗಳನ್ನು ಯೋಜಿಸುವುದು ಅಲ್ಲದೆ, ಮಹಿಳೆಯರು ಈವರೆಗೆ ಅನುಭವಿಸಿದ ಅನಾಧರಣೆಯನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಅಭ್ಯಾಸಿಸುವುದು; ಆ ಮೂಲಕ ಮಹಿಳೆಯರಿಗೆ ಹೊರ ಜಗತ್ತಿನಲ್ಲಿ ಸಮಾನತೆ, ಸ್ವಾತಂತ್ರ್ಯ ದೊರಕಿಸಿಕೊಡುವ ನಿಟ್ಟಿನಲ್ಲಿ ಯೋಚಿಸುವುದರಿಂದ ಈ ಅಧ್ಯಯನಕ್ಕೆ ಸಮಕಾಲಿನ ಮಹತ್ವ ಲಭಿಸಲಿದೆ. ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ ದುಡಿಯುವ ಪುರುಷ ವರ್ಗವು ಕುಟುಂಬದಲ್ಲಿ ಮಹಿಳೆಯರನ್ನು ತಮ್ಮ ಅನುಕೂಲಕ್ಕಾಗಿ ಬಳಸಿಕೊಂಡು, ಸಮಾಜದಲ್ಲಿನ ಅವರ ಸ್ಥಾನಮಾನಗಳನ್ನು ವೃದ್ಧಿಸಿಕೊಂಡರೂ ಅದರಿಂದ ಮಹಿಳೆಯರಿಗೇನೂ ಅನುಕೂಲವಾಗುವುದಿಲ್ಲವೆನ್ನುವ ವಾದ ಇಂದಿಗೂ ಮುಂದುವರೆದಿದೆ. ಈ ವಾದಗಳ ಜೊತೆಗೆ ವೆಬ್ಬರ್‌ನ ನಂತರದ ವಾದ ಮಾನವ ಸಂಬಂಧದಲ್ಲಿ ಅಧಿಕಾರದ ದೃಷ್ಟಿಕೋನಗಳನ್ನು ಅಧಿಕಾರ ದೃಷ್ಟಿಕೊನದಿಂದ ನೋಡಿದಾಗ ಈ ಸಮಸ್ಯೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಮಹಿಳಾ ಕಾರ್ಮಿಕರು ಭಾರತೀಯ ಸಮಾಜದ ಪ್ರಮುಖ ಪಾತ್ರದಾರಿಗಳೆಂಬ ಅಂಶದ ಕಡೆಗೆ ಗಮನ ಸೆಳೆಯುವ ದಿಕ್ಕಿನತ್ತ ಪ್ರಸ್ತುತ ಸಂಶೋಧನೆ ಆಸಕ್ತಿವಹಿಸಿರುವುದು ಗಮನಾರ್ಹವಾಗಿದ್ದು, ಮಹಿಳಾ ಕಾರ್ಮಿಕರ ಅಧ್ಯಯನಗಳಿಗೆ ಒಂದು ಹೊಸ ಹೊಳಹು ಎಂಬುದು ಮಹತ್ವದ ಸಂಗತಿಯಾಗಿದೆ.

ಸ್ತ್ರೀವಾದಿ ದೃಷ್ಟಿಕೋನದಿಂದ ಈ ಅಧ್ಯಯನವು ಬಹಳ ಮಹತ್ವ ಪಡೆದಿದೆ. ಕಾರ್ಖಾನೆಯ ದುಡಿಮೆಯಲ್ಲಿ ನಿರತರಾಗಿರುವ ಮಹಿಳೆ ಅಧ್ಯಯನದ ಕೇಂದ್ರ ಬಿಂದು. ಇವರ ಸಮಸ್ಯೆಗಳನ್ನು ಮಹಿಳಾ ದೃಷ್ಟಿಕೋನದಿಂದಲೇ ವಿಮರ್ಶಾತ್ಮಕವಾಗಿ ಅಭ್ಯಸಿಸಬೇಕಾಗಿದೆ. ಮಹಿಳೆಯರ ಅನುಭವಗಳು ಹಾಗೂ ಅವರ ತಿಳುವಳಿಕೆಗಳನ್ನು ಅಧ್ಯಯನದ ಸಂದರ್ಭಗಳಲ್ಲಿ ವಿಶೇಷವಾಗಿ ಪರಿಗಣಿಸಬೇಕಾಗಿದೆ. ಇಂಥ ಪ್ರಯತ್ನದ ಉದ್ದೇಶ ಇರಿಸಿಕೊಂಡಿರುವ ಈ ಅಧ್ಯಯನಕ್ಕೆ ಅತ್ಯಂತ ಮಹತ್ವವಿದೆ.

೧.೫ ಅಧ್ಯಯನದ ವೈಧಾನಿಕತೆ

ಮಹಿಳಾ ಅಧ್ಯಯನದ ಪ್ರಮುಖ ಹಾಗೂ ವಿಭಿನ್ನ ಶೈಲಿಯ ಸಂಶೋಧನಾ ವಿಧಾನವಾಗಿರುವ ಸ್ತ್ರೀವಾದಿ ಸಂಶೋಧನ ವಿಧಾನಕ್ಕೆ ಅತಿ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಏಕೆಂದರೆ

[illegible]

ಸಮಾಜದಲ್ಲಿ ಈಗಾಗಲೇ ಇರುವಂತ ಲಿಂಗತಾರತಮ್ಯವು ಕಾಣುತ್ತಿರುವ ವಾಸ್ತವ ಸ್ಥಿತಿಯಲ್ಲಿ ಲಿಂಗ ಸಂಬಂಧಿ ಸೂಕ್ಷ್ಮವನ್ನು ಆಳವಾಗಿ ತಿಳಿಯುವುದರ ಜೊತೆಗೆ ಚರಿತ್ರೆಯುದ್ದಕ್ಕೂ ಮಹಿಳೆಯರ ಮೇಲೆ ಆಗುತ್ತಿರುವ ಶೋಷಣೆಯ ಎಳೆಗಳನ್ನು ಬಿಚ್ಚುತ್ತಾ ವಾಸ್ತವ ಪರಿಸ್ಥಿತಿಯನ್ನು ಅರಿಯಲು ಮತ್ತು ಜೀವನ ಕ್ರಮವನ್ನು ಇತ್ಯಾತ್ಮಕವಾಗಿ ಬದಲಾವಣೆ ಮಾಡಲು ಇಂತಹ ವಿಧಾನಗಳು ಅತ್ಯವಶ್ಯಕವಾಗುತ್ತವೆ. ಪ್ರಸ್ತುತ ಸಾಮಾಜಿಕ ಸಂದರ್ಭದಲ್ಲಿನ ಮಹಿಳಾ ಬದುಕಿನ ಸ್ಥಿತಿಗತಿಗಳನ್ನು ವಿವರಿಸಿಕೊಳ್ಳಲು ನಡೆಸಿದ ಬಹುತೇಕ ಮಹಿಳಾ ಅಧ್ಯಯನಗಳು ಮಹಿಳಾ ಬದುಕು ಅಧೀನ ನೆಲೆಯದೇ ಆಗಿದೆ ಎಂಬುದನ್ನೇ ಖಚಿತಪಡಿಸುತ್ತಿದೆ. ವ್ಯಕ್ತಿಯಾಗಿ ಪ್ರತಿಯೊಬ್ಬ ಮಹಿಳೆಯ ಅನುಭವವೂ ಇದನ್ನೇ ಪ್ರಮಾಣಿಸುತ್ತಿದೆ. ಹೀಗಿರುವಾಗ ವಸ್ತುನಿಷ್ಠ ದೃಷ್ಟಿಕೋನ ಮಾತ್ರವೇ ಸಂಶೋಧನೆಗೆ ಸಕಾರಾತ್ಮಕ ಹಾದಿಯನ್ನು ಕಲ್ಪಿಸುವುದು ಸಾಧ್ಯ ಎಂಬುದನ್ನು ಒಪ್ಪುವುದು ಕಷ್ಟವಾಗುತ್ತದೆ. ಕಾರ್ಯಕಾರಣ ಸಂಬಂಧಗಳ ತರ್ಕವನ್ನಾಧರಿಸಿದ ವಸ್ತುನಿಷ್ಠತೆಯನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟು ಈ ಸಮಸ್ಯೆಗಳನ್ನು ಗ್ರಹಿಸುವುದು ಅಸಾಧ್ಯ. ಮಹಿಳಾ ಅಧ್ಯಯನಕಾರರು ಇದನ್ನು ವೈಯಕ್ತಿಕತೆಯೇ ನಮ್ಮ ರಾಜಕಾರಣ ಎಂದು ವ್ಯಾಖ್ಯಾನಿಸುತ್ತಾರೆ. ಏಕೆಂದರೆ ಮಹಿಳಾ ಅಧ್ಯಯನ ಎಂಬುದು ಶುದ್ಧ ಬೌದ್ಧಿಕ ಚಟುವಟಿಕೆಯಾಗಿ ಮಾತ್ರ ನಡೆಯುವ ಉದ್ದೇಶದ್ದಲ್ಲ. ಅದು ಬದುಕನ್ನು ಪ್ರಜ್ಞಾಪೂರ್ವಕವಾಗಿ ಗ್ರಹಿಸಿ ಅದನ್ನು ನಿರ್ವಹಿಸುವ ಸೂಕ್ತ ಮಾರ್ಗಗಳನ್ನು ಶೋಧಿಸುವ ಚಿಂತನಾ ವಿಧಾನ.

ವ್ಯಕ್ತಿ ನಿಷ್ಠತೆಯೆಂಬುದು ಪೂರ್ವಗ್ರಹಗಳ ಮಾರ್ಗ ಎನಿಸಬಹುದು. ಹೀಗಾಗಿ, ಇದು ಸಂಶೋಧನೆಗೆ ವಿರುದ್ಧವಾದುದು ಎಂದೂ ತೋರಬಹುದು. ಆದರೆ ಯಾವುದೇ ಪೂರ್ವಗ್ರಹಗಳಿಲ್ಲದ ಮನಸ್ಸಿನಿಂದ ಮಾನವ ಸಮಸ್ಯೆಯೊಂದನ್ನು ಅರಿಯಲೆತ್ನಿಸುವುದು ಆಗದ ವಿಷಯವಾಗುತ್ತದೆ. ಅದರಲ್ಲೂ ಶತಮಾನಗಳುದ್ದಕ್ಕೂ ಮಹಿಳಾ ವಿರೋಧಿಯಾಗಿ ಪ್ರವೃತ್ತವಾಗಿರುವ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳಾ ಬದುಕಿನ ಸಮಸ್ಯೆಗಳನ್ನು ಅರಿಯಲು ನಡೆಸುವ ಪ್ರಯತ್ನದ ಹಿನ್ನೆಲೆಗೆ 'ಸಮಾಜವು ಮಹಿಳಾ ವಿರೋಧಿಯಾಗಿದೆ.' ಎಂಬ ಪೂರ್ವಗ್ರಹವು ಸಹಜವಾಗಿಯೇ ಎದ್ದು ನಿಲ್ಲುತ್ತದೆ. ಹಾಗಾಗಿ, ಈ ಸಂಶೋಧನೆಯ ತಾತ್ವಿಕತೆಯನ್ನು ಕಟ್ಟಬೇಕಾದ ಬಹುಮುಖ್ಯ ಭಾಗವಾದ ವಿಶ್ಲೇಷಣೆಯ ಹಂತದಲ್ಲಿ ಎಷ್ಟೇ ತೀವ್ರ ಬೌದ್ಧಿಕತೆಯಲ್ಲಿ ಗಾಢವಾದ ನಂಬಿಕೆಯಾಗಿ ಕಟ್ಟಿಕೊಂಡ 'ವಸ್ತುನಿಷ್ಠತೆ ಎಂಬುದನ್ನು ಪರಿಕಲ್ಪನೆಯೂ ಕೂಡ 'ವ್ಯಕ್ತಿ ನಿಷ್ಠತೆ'ಯನ್ನು ಒಪ್ಪಬೇಕಾಗುತ್ತದೆ. ಇಲ್ಲಿ ವ್ಯಕ್ತಿನಿಷ್ಠತೆ ಎಂಬುದನ್ನು ವೈಯಕ್ತಿಕ ವಿವರಗಳೆಂದು ತಪ್ಪಾಗಿ ಗ್ರಹಿಸಿದರೆ ಹಾದಿ ತಪ್ಪುವುದು ಸಹಜ. ವೈಯಕ್ತಿಕ ವಿವರಗಳನ್ನೇ ಆಧರಿಸಿದರೂ ವ್ಯಕ್ತಿಗತ ಬದುಕುಗಳ ಖಾಸಗೀತನವನ್ನು ಬಯಲಿಗಿಡುವುದು ಮುಖ್ಯವಲ್ಲ. ಬದಲಿಗೆ ಹಲವು ವೈಯಕ್ತಿಕ ವಿವರಗಳು ಸಾಮಾನ್ಯ ಚಹರೆಗಳನ್ನು ಕ್ರೋಢಿಕರಿಸುತ್ತಾ ಒಟ್ಟು ಸಮುದಾಯದ ಗುಣಲಕ್ಷಣಗಳನ್ನು ಗ್ರಹಿಸುವ ಉದ್ದೇಶ ಇಲ್ಲಿವೆ.

ಈ ಅಧ್ಯಯನ ವಿಧಾನವು ಮಹಿಳಾ ಬದುಕಿನ ವಾಸ್ತವ ಸತ್ಯಗಳು ಹಾಗೂ ಕಲ್ಪಿತ ಭ್ರಮೆಗಳನ್ನು ಅನಾವರಣಗೊಳಿಸುವಲ್ಲಿ ನೆರವಾಗುವುದು ಸಾಧ್ಯ. ಈ ಅಧ್ಯಯನ ವಿಧಾನವು ಮಹಿಳಾ ಬದುಕಿನ ವಾಸ್ತವ ಸತ್ಯಗಳ ಹಾಗೂ ಕಲ್ಪಿತ ಭ್ರಮೆಗಳನ್ನು ಅನಾವರಣಗೊಳಿಸುವಲ್ಲಿ ನೆರವಾಗುವುದು ಸಾಧ್ಯ. ಈ ವಿಧಾನವನ್ನು ಸೂಕ್ತವಾಗಿ ಮಹಿಳಾ ಬದುಕಿನ ವಾಸ್ತವದ ವಿವರಗಳ ಹಿನ್ನೆಲೆಗಳಲ್ಲೇ ಗ್ರಹಿಸುವ

[illegible]

[illegible]

[illegible]

ವಿಧಾನವೇ ಇಲ್ಲಿ ಉಪಯುಕ್ತವಾದುದು. ಸ್ತ್ರೀವಾದಿ ಅಧ್ಯಯನ ವಿಧಾನಗಳು ಅಳವಡಿಸಿಕೊಳ್ಳಬಹುದಾದ ಮಾದರಿಗಳನ್ನು ಕುರಿತಂತೆ, ಅವು ಅನ್ಯ ಜ್ಞಾನವಲಯಗಳೊಂದಿಗೆ ಸಂವಾದಗಳನ್ನು ಬಳಸಬೇಕಾದ ಸ್ವರೂಪಗಳನ್ನು ಕುರಿತಂತೆ ಪ್ರತ್ಯೇಕ ದೀರ್ಘ ಚರ್ಚೆಗಳನ್ನು ಬಳಸಬೇಕಾದ ಅಗತ್ಯವಿದೆ.

ಈ ಅಧ್ಯಯನ ವಿಧಾನವು ಮಹಿಳಾ ಬದುಕಿನ ವಾಸ್ತವ ಸತ್ಯಗಳು ಹಾಗೂ ಕಲ್ಪಿತ ಭ್ರಮೆಗಳನ್ನು ಅನಾವರಣಗೊಳಿಸುವಲ್ಲಿ ನೆರವಾಗುವುದು ಸಾಧ್ಯ. ಈ ವಿಧಾನವನ್ನು ಸೂಕ್ತವಾಗಿ ಮಹಿಳಾ ಬದುಕಿನ ವಾಸ್ತವದ ವಿವರಗಳ ಹಿನ್ನೆಲೆಗಳಲ್ಲೇ ಗ್ರಹಿಸುವ ವಿಧಾನವೇ ಇಲ್ಲಿ ಉಪಯುಕ್ತವಾದುದು. ಸ್ತ್ರೀವಾದಿ ಅಧ್ಯಯನ ವಿಧಾನಗಳು ಅಳವಡಿಸಿಕೊಳ್ಳಬಹುದಾದ ಮಾದರಿಗಳನ್ನು ಕುರಿತಂತೆ, ಅವು ಅನ್ಯ ಜ್ಞಾನವಲಯಗಳೊಂದಿಗೆ ಸಂವಾದಗಳನ್ನು ಬಳಸಬೇಕಾದ ಸ್ವರೂಪಗಳನ್ನು ಕುರಿತಂತೆ ಪ್ರತ್ಯೇಕ ದೀರ್ಘ ಚರ್ಚೆಗಳನ್ನು ಬಳಸಬೇಕಾದ ಅಗತ್ಯವಿದೆ.

ಸ್ತ್ರೀವಾದಿ ಸಂಶೋಧನಾ ವಿಧಾನ ಎಂಬುದು ಮಾರಿಯಾ ಮಿಸ್ ಹೇಳುವಂತೆ ಸ್ತ್ರೀವಾದಿ ಸಂಶೋಧನೆಯೂ ಕೇವಲ ಮಹಿಳೆಯರ ಬಗ್ಗೆ ಸಂಶೋಧನೆ ಅಲ್ಲದೆ ಅವರ ಲಿಂಗಾಧಾರಿತ ಸಮಾಜದ ಬದಲಾವಣೆಯ ಬಗ್ಗೆ ನಡೆಸುವ ಸಂಶೋಧನೆಯಾಗಿದೆ. ಈ ಸಂಶೋಧನೆಯಲ್ಲಿ ಪಾರಂಪರಿಕವಾಗಿ ಲಿಂಗಾಧಾರಿತ ಸಿದ್ಧ ಮಾದರಿಯ ಅಸಮಾನತೆಯ ಪಾತ್ರಗಳನ್ನು ಹೋಗಲಾಡಿಸಲು ಇಂತಹ ವಿಧಾನದ ಅವಶ್ಯಕತೆ ಇದೆ. ಆದ್ದರಿಂದ ಸ್ತ್ರೀವಾದಿ ಸಂಶೋಧನಾ ವಿಧಾನ ಮಹಿಳೆಯ ಸಮಷ್ಠ ಪ್ರಜ್ಞೆಯನ್ನು ಅರಿಯುವಲ್ಲಿ ಶ್ರಮಿಸುತ್ತದೆ. ಅಲ್ಲದೆ ಇಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಗುಣಾತ್ಮಕ ವಿಧಾನಕ್ಕೆ ಕೊಡಲಾಗುತ್ತದೆ. ಜಂಡರ್ ಸ್ಟಡೀಸ್, ಕ್ರಿಯಾತ್ಮಕ ವಿಶ್ಲೇಷಣಾತ್ಮಕ ವಿಧಾನ, ವ್ಯಕ್ತಿ ನಿಷ್ಠ ಅಧ್ಯಯನ ವಿಧಾನ ಇವು ಚರಿತ್ರೆಯ ಪುನರ್ ರಚನೆ ಮಾಡಿ ಅದರೊಳಗಿನ ಮಹಿಳಾ ಕಾನೂನುಗಳು ಸಂಬಂಧಿಸಿರುವ ಅಂಶಗಳನ್ನು ಹೊರ ತೆಗೆಯುವುದು ವಾಸ್ತವಿಕತೆಯಲ್ಲಿ ಅದರ ಉಪಯೋಗಗಳು ಮಹಿಳೆಯರಿಗೆ ಸಿಗದೆ ಇರುವ ಹಿನ್ನೆಲೆಯನ್ನು ತಿಳಿಯುವುದು ವಿಶೇಷತೆಯಾಗಿದೆ.

ಪ್ರಾಥಮಿಕ ಆಕರಗಳು

ಪ್ರಸ್ತುತ ಅಧ್ಯಯನದಲ್ಲಿ ಸಂಗ್ರಹಿಸಿದ ಆಕಾರಗಳ ವಿಶ್ಲೇಷಣೆಗೆ ಸ್ತ್ರೀವಾದಿ ವೈದಾನಿಕತೆಯನ್ನು ಬಳಸಿಕೊಳ್ಳಲಾಗುವುದು. ಮಹಿಳೆಯ ದುಡಿಮೆ ಎನ್ನುವಂತಹದು ಅಷ್ಟು ಬಗೆಯ ನಗಣ್ಯ ಮತ್ತು ಅದೃಶ್ಯಗೊಂಡಿರುವುದನ್ನು, ಶ್ರಮಕ್ಕೆ ತಕ್ಕಂತೆ ಪ್ರತಿಫಲವನ್ನು ಕೊಡದೆ ಇರುವ ಬಂಡವಾಳ ಶಾಹಿಗಳ ಧ್ಯೆಯ–ಧೋರಣೆಗಳನ್ನು ತಿಳಿಯಲು ಪ್ರಸ್ತುತ ಅಧ್ಯಯನಕ್ಕೆ ವ್ಯಕ್ತಿ ನಿಷ್ಠತೆ, ವಸ್ತುನಿಷ್ಠತೆಯನ್ನು ಅನುಸರಿಸುವುದರ ಮೂಲಕ ಸಂದರ್ಶನ ಮಾಡಿ ರಚಿತ, ಅರಚಿರ ಪ್ರಶ್ನಾವಳಿ, ಸಂಖ್ಯಾತ್ಮಕ ಹಾಗೂ ಗುಣಾತ್ಮಕ ವಿಧಾನವನ್ನು ಅನುಸರಿಸಲಾಗಿದೆ. ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುವ ಮಹಿಳಾ ಕಾರ್ಮಿಕರ ಮಾನವೀಯ ಸಂಬಂಧಗಳೂ ಹಾಗೂ ಮಹಿಳೆಯರು ಅನುಭವಿಸುತ್ತಿರುವ ಸಮಸ್ಯೆಗಳ ಮೇಲೆ ಇಲ್ಲಿಯವರೆಗೂ ಯಾವ ಅಧ್ಯಯನವೂ ನಡೆದಿಲ್ಲ. ಕೈಗಾರಿಕ ರಂಗದಲ್ಲಿ ಹಾಗೂ ಗೃಹಕೃತ್ಯಗಳಲ್ಲಿ ದುಡಿಯುವ ಮಹಿಳೆಯರನ್ನು ಆರ್ಥಿಕ ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ಪರಿಗಣಿಸಿಲ್ಲ.

ಅಲ್ಲದೆ ಮಹಿಳೆಯರ ದುಡಿಮೆ ಹಾಗೂ ಆರ್ಥಿಕ ಪ್ರಗತಿಗಳನ್ನು ಲಿಂಗಾಧಾರಿತವಾಗಿ ವಿಂಗಡಿಸಿ ಅಸಮಾನತೆಯ ನೆಲೆಯಲ್ಲಿ ಗುರುತಿಸಲಾಗಿದೆ. ಸಮಾನತೆ ಕಾಣದ ಸಮಾಜದಲ್ಲಿ ಮಹಿಳೆಯರು ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯ ಸಂಬಂಧಗಳನ್ನು ಹೆಚ್ಚಿಸುವ ದಿಕ್ಕಿನಲ್ಲಿ ಆಲೋಚಿಸುವ ಅಗತ್ಯವಿದೆ. ಮಹಿಳೆಯರು ಈವರೆಗೆ ಅನುಭವಿಸಿದ ಅನಾದರಣೆಗಳನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಅಭ್ಯಸಿಸುವುದು. ಆ ಮೂಲಕ ಮಹಿಳೆಯರಿಗೆ ಹೊರ ಜಗತ್ತಿನಲ್ಲಿ ಸಮಾನತೆ ಸ್ವಾತಂತ್ರ್ಯ ದೊರಕಿಸಿ ಕೊಡುವ ನಿಟ್ಟಿನಲ್ಲಿ ಯೋಚಿಸುವುದರಿಂದ ಈ ಅಧ್ಯಯನಕ್ಕೆ ಸಮಕಾಲಿನ ಮಹತ್ವ ಲಭಿಸಲಿದೆ. ಅಲ್ಲದೆ, ಅಲ್ಲಲ್ಲಿ ಮಹಿಳಾ ಅಧ್ಯಯನ ದೃಷ್ಟಿಕೋನ ಸ್ತ್ರೀವಾದ (ಚಳುವಳಿ) ಮತ್ತು ಲಿಂಗ ಸೂಕ್ಷ್ಮತೆಯನ್ನು ಬಳಕೆ ಮಾಡಿಕೊಂಡಿದ್ದೇನೆ. ವಾಸ್ತವಿಕ ನೆಲೆಯಲ್ಲಿ ಅಧ್ಯಯನ ಅವಶ್ಯಕತೆಗಾಗಿ ಪ್ರಕರಣ ಅಧ್ಯಯನ ಮಾಡಲಾಗಿದೆ. ನಿರ್ಲಕ್ಷಕ್ಕೆ ಒಳಗಾದ ಮಹಿಳಾ ಸಮುದಾಯವನ್ನ ಅಧ್ಯಯನಗಳಲ್ಲಿ ಪರಿಮಾಣಾತ್ಮಕ ವಿಶ್ಲೇಷಣೆಗಿಂತ ಗುಣಾತ್ಮಕ ವಿಶ್ಲೇಷಣೆಗೆ ಹೆಚ್ಚಿನ ಒತ್ತಡ ನೀಡಲಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಗುಣಾತ್ಮಕ, ಕೆಸಸ್ಟಡಿಯನ್ನು ವಿಶ್ಲೇಷಣೆಗೆ ಹೆಚ್ಚಿನ ಒತ್ತನ್ನು ನೀಡಲಾಗುತ್ತದೆ.

ಸ್ತ್ರೀವಾದಿ ಸಂಶೋಧನೆಗೂ ಮತ್ತು ಸಾಮಾಜಿಕ ಸಂಶೋಧನೆಗಿರುವ ವ್ಯತ್ಯಾಸ : ಸಾಮಾನ್ಯವಾಗಿ ಸಾಮಾಜಿಕ ವಿಜ್ಞಾನದಲ್ಲಿ ಸಂಶೋಧನೆ ಜ್ಞಾನೋದಯದ ಕ್ರಿಯೆ. ಆದರೆ ಮಹಿಳಾ ಅಧ್ಯಯನವು ಶಕ್ತ ಹಾಗೂ ಸಬಲೀಕರಣಗೊಳಿಸುವ ಜ್ಞಾನಶಾಖೆ. ಸಾಂಪ್ರದಾಯಿಕ ಸಮಾಜ ವಿಜ್ಞಾನದಲ್ಲಿ ಸಂಶೋಧನೆ ಕ್ರಮಗತವಾಗಿ ಪುರುಷ ಮತ್ತು ಮಹಿಳೆಯರನ್ನು ಬಿಂಬಿಸುತ್ತದೆ. ಆದರೆ ಸ್ತ್ರೀವಾದಿ ಸಂಶೋಧನೆಯಲ್ಲಿ ಸಂಶೋಧಕ ಮತ್ತು ಸಂಶೋಧಿಸಲ್ಪಡುವರು ಇಬ್ಬರು ಸ್ತ್ರೀಯರಾಗಿದ್ದಾರೆ. ಸಾಮಾಜಿಕ ಸಂಶೋಧನೆಯಲ್ಲಿ ಪುರುಷರಾಗಿದ್ದ ಅವರು ಸಾಮಾನ್ಯವಾಗಿ ಸಮಸ್ಯೆಯನ್ನು ಗುರ್ತಿಸುತ್ತಾರೆ. ಅದೇ ನಮ್ಮ ಸ್ತ್ರೀವಾದಿ ಸಂಶೋಧನೆಯಲ್ಲಿ ಮಹಿಳೆಯು ಮತ್ತೊಬ್ಬ ಮಹಿಳೆಯನ್ನು ಸಂದರ್ಶಿಸಿ ಅವಳ ಸ್ಥಾನದಲ್ಲಿ ಅವಳನ್ನು ಊಹಿಸಿಕೊಂಡು ಸಂಶೋಧಿಸುತ್ತಾಳೆ. ಅದೇ ಒಂದು ಮಹಿಳೆ ಅವಳ ಸಮಸ್ಯೆಯನ್ನು ಪುರುಷರ ಬಳಿ ಹೇಳಿಕೊಳ್ಳುವುದಿಲ್ಲ. ಅದೇ ಮಹಿಳೆಯರು ಒಬ್ಬರಿಗೊಬ್ಬರು ವಿಷಯವನ್ನು ಹಂಚಿಕೊಳ್ಳಲು ಸಾಧ್ಯವಾಗುತ್ತದೆ.

"ಸೀಸ್ಪಾನಲಿ" ಎಂಬ ಸ್ತ್ರೀವಾದಿ ಹಾಗೂ ಅವರ ಅನುಯಾಯಿಗಳು ಸಂಶೋಧನೆಯಲ್ಲಿ ಸುದ್ದಿ ಸಂಗ್ರಹಣೆ ಪ್ರಮುಖವಾದದ್ದಲ್ಲ. ಆದರೆ ಅದರಲ್ಲಿ ಅಧಿಕಾರಶಾಹಿವಸ್ತುವಿರಬೇಕು ಸ್ತ್ರೀವಾದಿ ಸಂಶೋಧನೆಯಲ್ಲಿ ಸಂಶೋಧಕರು ಬಹಳ ತೀಕ್ಷ್ಣವಾಗಿರುತ್ತಾರೆ. ಅವರು ಬಹಳವಾಗಿ ಲಿಂಗತಾರತಮ್ಯತೆಯನ್ನು ಗುರ್ತಿಸುತ್ತಾರೆ. ಸ್ತ್ರೀಪುರುಷರ ನಡುವಿನ ಸಂಬಂಧವನ್ನು ಲಿಂಗತ್ವದ ಆಧಾರದ ಮೇಲೆ ಬಿಂಬಿಸುತ್ತಾರೆ. ಸಾಮಾಜಿಕ ಸಂಶೋಧಕರು ಲಿಂಗಭೇದದಲ್ಲಿ ಸಂಶೋದಿಸುತ್ತಾರೆ.

ಉದಾ:- ಒಂದು ವರದಕ್ಷಿಣೆ ಸಾವನ್ನು ಇಟ್ಟುಕೊಂಡು ಚರ್ಚೆಮಾಡಿದಾಗ ಗೊತ್ತಾಗುತ್ತದೆ. ಸಾಮಾಜಿಕ ಸಂಶೋಧಕರಿಗೂ ಮತ್ತು ಸ್ತ್ರೀವಾದಿ ಸಂಶೋಧಕರಿಗೂ ಸಂಶೋಧನೆ ಮಡುವ ವ್ಯತ್ಯಾಸ ತಿಳಿಯಬಹುದು.

[illegible]

[illegible]

[illegible]

[illegible]

ಸಾಮಾಜಿಕ ಸಂಶೋಧಕ ವರದಕ್ಷಿಣೆ ಸಾವುಗಳು ಎಷ್ಟು ಮತ್ತು ಏಕಾದವು ಅಂತ ಮಾತ್ರ ಸಂಶೋಧನೆಗೆ ಒಳಪಡಿಸುತ್ತಾರೆ. ಆದರೆ ಸ್ತ್ರೀವಾದಿ ಸಂಶೋಧಕರು ಪರಿಣಾಮಾತ್ಮಕ ಮತ್ತು ಗುಣಾತ್ಮಕ ಸಂಶೋಧನೆ ಎರಡನ್ನು ಇಟ್ಟುಕೊಂಡು ಅಧ್ಯಯನಕ್ಕೆಗೊಳ್ಳುತ್ತಾರೆ. ವರದಕ್ಷಿಣೆ ಸಾವು ಏಕಾಯಿತು, ಆಗಿರುವ ಸಾಮಾಜಿಕ ಹಿನ್ನಲೆ ಏನು? ಗಂಡ, ಅತ್ತೆ, ಮಾವ ಇನ್ನಿತರರು ಸೇರಿ ಸಾಯಿಸಿದರೆ? ಅಥವಾ ಅವಳೇ ಸ್ವತಃ ಆತ್ಮಹತ್ಯೆ ಮಾಡಿಕೊಳ್ಳುವ ಒತ್ತಡ ಏನಾದರೂ ಇತ್ತೇ? ಗಂಡನು ಬೇರೆ ಸಂಬಂಧ ಹೊಂದಿ ಎರಡನೇ ಮದುವೆ ಮಡಿಕೊಳ್ಳಲು ಅವಳಿಗೆ ಒತ್ತಡ ಹೇರುವುದರ ಮೂಲಕ ಸಾವಿಗೆ ಶರಣಾಗತಿಯಾದಳೇ? ಇನ್ನಿತರ ಕಾರಣಗಳನ್ನು ಸೂಕ್ಷ್ಮವಾಗಿ ಹೊರ ತೆಗೆಯುವುದು ಸ್ತ್ರೀವಾದಿ ಸಂಶೋಧಕರಿಂದ ಮಾತ್ರ ಸಾಧ್ಯ ಎನ್ನಬಹುದು. ಜೊತೆಗೆ ವರದಕ್ಷಿಣೆ ಸಾವು ಕೇವಲ ಹಣಕ್ಕಾಗಿ ಅಲ್ಲದೆನೂ, ಅವಳು ಕುರೂಪಿಯಾಗಿದ್ದರೆ, ವಯಸ್ಸಾಗಿದ್ದರೆ, ದಪ್ಪಗಿದ್ದರೆ ಇನ್ನಿತರ ಅನೇಕ ಕಾರಣಗಳನ್ನು ಅನವಶ್ಯಕವಾಗಿ ಮಾನಸಿಕವಾಗಿ, ದೈಹಿಕವಾಗಿ ಹಿಂಸೆ ಮಾಡುವುದರ ಮೂಲಕ ಅವಳೇ ಸ್ವತಃ ಸಾವನ್ನಪ್ಪುತ್ತಾಳೆ. ಹೀಗಾಗಿ ಸಮಾಜಿಕ ಸಂಶೋಧಕರಿಗೂ ಮತ್ತು ಸ್ತ್ರೀವಾದಿ ಸಂಶೋಧಕರಿಗೂ ಇರುವ ವ್ಯತ್ಯಾಸವನ್ನು ಕಂಡುಕೊಳ್ಳಬಹುದಾಗಿದೆ.

ಸ್ತ್ರೀವಾದಿ ಸಂಶೋಧನೆಯ ಸ್ವರೂಪ ನಿರ್ವಚನೆ

ವ್ಯಾಖ್ಯೆಗಳು:– "ಸ್ಯಾಡಂರಲೀ ಬಾರ್ಬ್‌ಕೀ"ರವರ ಪ್ರಕಾರ ರಾಜಕೀಯ ಹಾಗು ಅವರ ಅನುಭವವನ್ನು ಅವರದೇ ಆದ ರೀತಿಯಲ್ಲಿ ಪ್ರತಿಬಿಂಬಿಸುತ್ತದೆ. ಅಲ್ಲದೇ ನಿಜಸಂಗತಿಗಳನ್ನು ಅವರ ತಿಳುವಳಿಕೆಯ ಮೂಲಕ ಈ ವಿಧಾನವನ್ನು ಸಾಮಾಜಿಕ ಜೀವನದಲ್ಲಿ ಹಂತಹಂತವಾಗಿ ತಿಳಿಸುತ್ತಾರೆ.

ಶೆಲ್ಲಿರವರ ಪ್ರಕಾರ:– "ಮಹಿಳೆಯು ಕೇವಲ ಸಂತಾನೋತ್ಪತ್ತಿಗೆ ಮಾತ್ರ ಮೀಸಲಾಗಿರದೇ ಅವಳು ಎಲ್ಲಾ ಕ್ಷೇತ್ರಗಳಲ್ಲಿ ಮುಂದೆ ಬರಬಲ್ಲಳು. ಹಾಗೂ ಸಮಾಜಿಕ ವ್ಯವಸ್ಥೆಯಲ್ಲಿ ಅಸಮಾನತೆ ಇದ್ದರೂ ಮಹಿಳೆಯು ಸಾಮಾನ್ಯವಾಗಿ ಬದುಕುತ್ತಿದ್ದಾಳೆ."

ಮಹಿಳೆಯನ್ನು ಒಂದೇ ದೃಷ್ಟಿಕೋನದಲ್ಲಿ ನೋಡದೇ ಅವಳನ್ನು ಹಲವಾರು ಮುಖದಲ್ಲಿ ಒಂದೇ ಸ್ತ್ರೀಯನ್ನು ಸಂಶೋಧಿಸದೇ ಹಲವಾರು ಸ್ತ್ರೀಯರನ್ನು ದೃಷ್ಠಕೋನದಲ್ಲಿಟ್ಟುಕೊಂಡು ಸಂಶೋಧಿಸಿದಾಗ ಮಹಿಳೆಯರ ಪೂರ್ವಪರತೆ ಅರಿಯಲು ಸಾಧ್ಯವೆಂದು ತಿಳಿಸಿದ್ದಾರೆ. ಅವರ ಪ್ರಕಾರ ಸಂಶೋಧನೆಯಲ್ಲಿ ಫೆಮಿನೈನ್ ಜಾಗೃತಿ, ಫಿಮೇಲ್ ಜಾಗೃತಿ, ಹಾಗೂ ಸ್ತ್ರೀವಾದಿಗಳ ಜಾಗೃತಿ ಈ ಮೂರು ಅಂಶಗಳನಿಟ್ಟು ಅಧ್ಯಯನ ಮಾಡುತ್ತಾರೆ.

ಪುರುಷರ ಕಲ್ಪನೆಗೆ ಕೊಡುವಂತಹುದು, ವಾಸ್ತವಕತೆ ಆರ್ಡಿನ್ ರೀಚ್‌ರವರ ಪ್ರಕಾರ ಅಂದರೆ ಕೆಲವು ಪ್ರಮಾಣವನ್ನಾದರೂ ಸಂರಕ್ಷಿಸಿ ಇದರಿಂದ ಸಾಮಾಜಿಕ ಸಂಶೋಧನೆ ಮಾಡಬಹುದು. ಆದರೆ ಸ್ತ್ರೀವಾದಿ ಸಂಶೋಧಕರು ಸಾಂಪ್ರಾದಾಯಿಕವಾಗಿ ಅನುಕರಣೆಯನ್ನು ಒಪ್ಪುವುದಿಲ್ಲ. ಬದಲಾಗಿ ಅವರದ್ದೇ ಆದಂತಹ ವಿಧಾನಗಳನ್ನು ಅಳವಡಿಸಿಕೊಳ್ಳುತ್ತಾರೆ.

ನೋಲಿನ್ ಎಸರ್:- ಯುನೇಸಮ್ ನಿರ್ದೇಶಕರು ಇವರ ಪ್ರಕಾರ ಮಹಿಳೆಯನ್ನು ಅಧಿಕಾರ ಶಕ್ತಿಗೊಳಿಸಲು ಪ್ರಮುಖ ನಾಲ್ಕು ಅಂಶಗಳನ್ನು ತಿಳಿಸಿದ್ದಾರೆ.

- ಸ್ತ್ರೀಯರ ವ್ಯವಹಾರ ಜ್ಞಾನ ಹಾಗೂ ಅದರ ಬೆಲೆ
- ನಿರ್ಧಾರ ತೆಗೆದುಕೊಳ್ಳುವ ಹಕ್ಕು ಕೊಡಬೇಕು.
- ಮನೆಯಲ್ಲಿ ಹಾಗೂ ಹೊರಗಡೆ ಅವರ ಸ್ವಂತ ಜೀವನದ ಮೇಲೆ ಹಕ್ಕು.
- ಸಾಮಾಜಿಕ ಬದಲಾವಣೆ ತರುವಲ್ಲಿ ಅವಳ ಪಾತ್ರ ಹಾಗೂ ಸಾಮಾಜಿಕ ನ್ಯಾಯ ಒದಗಿಸುವ ಹಕ್ಕು

ಹಾಗಾಗಿ ಮಹಿಳೆಯರಿಗೆ ಯಾವಾಗ ಅವರದೇ ಆದಂತಹ ಹಕ್ಕುಗಳು ಹಾಗೂ ಅಧಿಕಾರ ಶಕ್ತಿಗಳನ್ನು ಯಾವುದೇ ಮಧ್ಯಸ್ಥಿಕೆಯಿಲ್ಲದೆ ಪ್ರಾಯೋಗಿಕವಾಗಿ ತರವಂತಹವರಾಗುತ್ತಾರೋ ಆಗ ಅವರಿಗೆ ಸಬಲೀಕರಣವಾಗಲು ಸಾಧ್ಯವಾಗುತ್ತದೆ. ಹಾಗಾಗಿ ಮೇಲಿನ ಎಲ್ಲಾ ಅಂಶಗಳು ಸ್ತ್ರೀಯರನ್ನು ಅಧಿಕಾರ ಮಾರಕವಾಗಿ ಶಕ್ತಗೊಳಿಸುವ ಚಿನ್ಹೆಗಳಾಗಿವೆ. ಈ ನಿಟ್ಟಿನಲ್ಲಿ ಅವಶ್ಯಕವಾದ ಮಾನಸಿಕ, ಶೈಕ್ಷಣಿಕ ಹಾಗೂ ಇತರೆ ಕೌಶಲ್ಯಗಳನ್ನು ಕೊಟ್ಟು ಹುರಿದುಂಬಿಸಿ ಅಗತ್ಯವಾದಂತಹ ತರಬೇತಿಕೊಟ್ಟು ಮತ್ತು ಅರಿವು ಮೂಡಿಸಿ ಕೊನೆಗೆ ಸ್ವಾವಲಂಬಿಗಳಾಗಿ, ಸ್ವಶಕ್ತರಾಗಿ ಮಾಡುವುದು.

ಭಾರತ ಸರ್ಕಾರದ ಶಿಕ್ಷಣ ಹಾಗೂ ಸಮಾಜ ಕಲ್ಯಾಣ ಇಲಾಖೆಯು ನೇಮಿಸಿದ ಸಮಿತಿಯೊಂದು, ಭಾರತದಲ್ಲಿ ಮಹಿಳೆಯರ ಸ್ಥಿತಿಗತಿ ಕುರಿತಾಗಿ "ಸಮಾನತೆಯೆಡೆಗೆ" ಎಂಬ ವರದಿಯೊಂದನ್ನು ಸಲ್ಲಿಸಿತು. 1974 ಅದರಲ್ಲಿ ಹೀಗೆ ಹೇಳಲಾಗಿದೆ. "ಲಿಂಗಾಧಾರಿತ ಅಸಮಾನತೆಯ ಕುರಿತು ಬೇರುಗಳು ಗಂಡಸರು ಹಾಗೂ ಹೆಂಗಸರ ಮನಸ್ಸುಗಳಲ್ಲಿ ಎಂದಿನಿಂದಲೂ ಆಳವಾಗಿ ಇಳಿದಿವೆ. ತೀರ ಪ್ರಬಲವಾದ ಸಾಮಾಜಿಕ ವ್ಯವಸ್ಥೆಯೇ ಇದಕ್ಕೆ ಕಾರಣ. ಶಿಕ್ಷಣದಿಂದ ಮಹಿಳೆಯರಿಗೆ ಸಮಾನತೆ, ಜಾಗೃತಿ, ಅಭಿಪ್ರಾಯಕ್ಕೆ ಮನ್ನಣೆ ದೊರಕುವುದೇ ಆದರೆ ಅದು ಉದ್ದೇಶಪೂರ್ವಕವಾಗಿ ವ್ಯವಸ್ಥಿತವಾಗಿ ಯೋಜನೆಯೊಂದನ್ನು ರೂಪಿಸಬೇಕು. ಅದು ಸಾಂಪ್ರಾದಾಯಿಕ ಅಸಮಾನತೆಯನ್ನು ಹೋಗಲಾಡಿಸಿ, ಸಮಾನತೆಯ ಹೊಸ ಮೌಲ್ಯವೊಂದನ್ನು ಹುಟ್ಟು ಹಾಕಬೇಕು. ಇವುಗಳೆಲ್ಲವು ಮಹಿಳಾ ಅಧ್ಯಯನದಲ್ಲಿ ಸ್ತ್ರೀ ಸಂಶೋಧನೆಗೆ ಅತ್ಯವಶ್ಯಕವಾಗುತ್ತವೆ.

1.6 ಅಧ್ಯಯನದ ಸಂಬಂಧಿತ ಸಾಹಿತ್ಯ ಸಮೀಕ್ಷೆ

ಮಹಿಳೆಯರಿಗೆ ಸಂಬಂಧಿಸಿದ ಸಂಶೋಧನೆಗಳ ಆಸಕ್ತಿಯ ಮೂಲವನ್ನು ನಾವು 19ನೇ ಶತಮಾನದಷ್ಟು ಹಿಂದೆಯೇ ಸತಿಸಹಗಮನ ಹಾಗೂ ಬಾಲ್ಯವಿವಾಹ ಇತ್ಯಾದಿ ಅಮಾನುಷ್ಯ ಪದ್ದತಿಗಳನ್ನು ತೀವ್ರವಾಗಿ ವಿರೋಧಿಸಿ ಸಾಮಾಜಿಕ ಚಳುವಳಿಗಳ ಪ್ರೇರಣೆಯಲ್ಲಿಯೇ ಗುರುತಿಸಬಹುದಾಗಿದೆ. ಇತ್ತೀಚಿನ

ವರ್ಷಗಳಲ್ಲಿ ಈ ಆಸಕ್ತಿಯ ಕೇಂದ್ರವು ದಿಕ್ಕು ಬದಲಿಸಿದೆ. ಈಗ ಮಹಿಳಾ ಅಧ್ಯಯನದ ಮುಖ್ಯ ವಿಷಯವು ಹಿಂದಿನಂತೆ ಕುಟುಂಬದಲ್ಲಿ ಮಹಿಳೆಯ ಪಾತ್ರ ಮಾತ್ರವಾಗಿ ಉಳಿದಿಲ್ಲ. ಆರ್ಥಿಕ ಕ್ಷೇತ್ರದಲ್ಲಿ ಆಕೆಯ ಸ್ಥಾನಮಾನವು ಈಗ ಹೆಚ್ಚಿನ ಗಮನ ಸೆಳೆಯುತ್ತಿದೆ. ಇದು ಸಮಾಜದಲ್ಲಿ ಮಹಿಳೆಯ ಸ್ಥಾನ ಹಾಗೂ ಪಾತ್ರದ ಬಗ್ಗೆ ಬದಲಾಗುತ್ತಿರುವ ದೃಷ್ಟಿಕೋನವನ್ನು ತೋರಿಸುತ್ತದೆ. ಜನಸಂಖ್ಯೆಯ ಹೆಚ್ಚಳದ ವಿರುದ್ಧ ವ್ಯಕ್ತವಾದ ಅಕ್ರೋಶ ಹಾಗೂ ಪ್ರತಿಭಟನೆಯ ಹಿನ್ನೆಲೆಯಲ್ಲಿ ಮಹಿಳೆಯರ ಶಿಕ್ಷಣದ ಬಗೆಗಿನ ಕಳಕಳಿ ವ್ಯಕ್ತವಾಯಿತು. ಇತ್ತೀಚಿನ ವರ್ಷಗಳಲ್ಲಿ ಬಡತನ, ನಿರುದ್ಯೋಗ, ಆಹಾರದ ಕೊರತೆ, ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆ ಇತ್ಯಾದಿ ಸಮಸ್ಯೆಗಳನ್ನು ಚರ್ಚಿಸುವಾಗೆಲ್ಲ ಮಹಿಳೆಯ ಶೋಷಿತ ಪರಿಸ್ಥಿತಿಯ ಬಗ್ಗೆ ಚರ್ಚಿಸಲಾಗುತ್ತದೆ. ಅಂತಾರಾಷ್ಟ್ರೀಯ ಮಹಿಳಾ ವರ್ಷ (1975)ರಲ್ಲಿ ಹೊರಬಂದ ಭಾರತ ಸರ್ಕಾರದ ಭಾರತೀಯ ಮಹಿಳೆಯರ ಸ್ಥಾನಮಾನದ ಬಗೆಗಿನ ವರದಿಯು ನಮ್ಮಲ್ಲಿ ಮಹಿಳಾ ಅಧ್ಯಯನದ ಬಗ್ಗೆ ಮೂಲ ಸಾಮಗ್ರಿಯನ್ನೊದಗಿಸಿ ಅನೇಕ ಸಂಗತಿಗಳ ಬಗ್ಗೆ ಗಂಬೀರವಾಗಿ ಯೋಚಿಸುವಂತೆ ಮಾಡಿತು. ಸಂಪ್ರದಾಯಗಳು ಸಾಂಸ್ಕೃತಿಕ ಹಾಗೂ ಧಾರ್ಮಿಕ ಪರಂಪರೆಗಳಿಗಿಂತ ಹೆಚ್ಚಾಗಿ ಒಂದು ದೇಶದ ರಾಜಕೀಯ ಹಾಗೂ ಆರ್ಥಿಕ ಸ್ಥಿತಿಗತಿಗಳೇ ಮಹಿಳೆಯರ ಶೋಷಣೆಗೆ ಹೆಚ್ಚಿನ ಕಾರಣಗಳೆಂಬುವುದು ಈ ಅಧ್ಯಯನಗಳಿಂದ ಗೋಚರವಾಗುತ್ತದೆ. ಭಾರತದಲ್ಲಿ ಮಹಿಳಾ ಅಧ್ಯಯನದ ಬಗೆಗೆ ಅನೇಕರು ಸಮೀಕ್ಷೆ ನಡೆಸಿದ್ದು ಅವುಗಳಲ್ಲಿ ಮುಖ್ಯ ವರದಿಗಳೆಂದರೆ ಮುಜುಮ್‌ದಾರ ಮತ್ತು ಶರ್ಮಾಸಿಂಗ್, ಕೃಷ್ಣರಾಜ ಮತ್ತು ದೇಸಾಯಿ ಇವೆಲ್ಲ ವರದಿಗಳಲ್ಲಿ ಮುಖ್ಯವಾಗಿ ಚರ್ಚಿತವಾಗಿರುವ ವಿಷಯ ಕಾರ್ಮಿಕ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರವು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತಿರುವುದು ಮತ್ತು ಅದಕ್ಕೆ ಕಾರಣಗಳು ಜನನ ಪ್ರಮಾಣದಲ್ಲಿ ಹೆಚ್ಚಳ, ಔದ್ಯೋಗಿಕ ಪ್ರಗತಿ, ದೇಶದ ಆಧುನೀಕರಣ, ತಾಂತ್ರಿಕ ಬದಲಾವಣೆಗಳಲ್ಲಿ ಮಹಿಳೆಯರು ಶಿಕ್ಷಣ ಪಡೆಯಲು ಇರುವ ವಿಷಯಗಳೂ ಇವೇ ಮೊದಲಾದ ಕಾರಣಗಳಿಂದಾಗಿ ಮಹಿಳೆಯರಿಗೆ ಕೆಲಸ ಮಾಡಲು ಅತಿ ಕಡಿಮೆ ಅವಕಾಶಗಳು ಸೀಮಿತವಾದ ಇನ್ನು ಹಲವು ಪೂರ್ವಗ್ರಹಗಳಿಂದಾಗಿ ಮಹಿಳೆಯರಿಗೆ ಆರ್ಥಿಕ ಕ್ಷೇತ್ರದಲ್ಲಿ ಅವಕಾಶಗಳೇ ಸಿಗದಂತಾಗಿದೆ ಹಾಗೂ ಬೆಳಕಿಗೆ ಬಂದಿರುವ ಇನ್ನು ಕೆಲವು ಮುಖ್ಯ ಸಂಗತಿಗಳೆಂದರೆ ಮಹಿಳೆಯರ ಉದ್ಯೋಗಗಳು ಅವರ ಗಂಡಂದಿರ ಸ್ಥಾನ, ಘನತೆಗಳಿಗೆ ಸಂಬಂಧಿಸಿರುತ್ತದೆ (ಡಿಸೋಝಾ 1975) ವಿವಾಹಿತ ಮಹಿಳೆಯರು ಉದ್ಯೋಗ ಮಾಡಲು ಅನೇಕ ಅಡೆತಡೆಗಳಿರುತ್ತವೆ. (ಮುಖರ್ಜಿ 1975) ತೀರ ಕಡಿಮೆ ಹಾಗೂ ತೀರ ಹೆಚ್ಚು ಶೈಕ್ಷಣಿಕ ಅರ್ಹತೆ ಹೊಂದಿದ್ದ ಮಹಿಳೆಯರು ಮಾತ್ರ ಉದ್ಯೋಗದಲ್ಲಿರುತ್ತಾರೆ. (ಖಾನ್ 1975) ಹೊಲದಲ್ಲಿ ಕೆಲಸಮಾಡುವ ಹಳ್ಳಿಯ ಮಹಿಳೆಯರ ಕುಟುಂಬದ ಆದಾಯ ಹೆಚ್ಚಿದಂತೆ ತಮ್ಮ ಘನತೆ ಕಾಯ್ದುಕೊಳ್ಳಲೆಂದು ಕೆಲಸ ಮಾಡುವುದನ್ನೇ ನಿಲ್ಲಿಸುತ್ತಾರೆ. (ಅಗರವಾಲ 1983) ಉದ್ಯೋಗಸ್ಥ ಮಹಿಳೆಯರ ಸ್ಥಿತಿಗತಿಯ ಬಗೆಗಿನ ಅಭ್ಯಾಸಗಳೂ ಈಚೆಗೆ ಹೆಚ್ಚುತ್ತಿರುವ ಇನ್ನೊಂದು ಬಗೆಯ ಮಹಿಳಾ ಅಧ್ಯಯನ ತೀರಾ ಬಡತನದ ಪರಿಸ್ಥಿತಿಯಲ್ಲಿ ಕೆಲಸ ಮಾಡುವ ಹೊಲಗೆಲಸದಾಳು, ಇಟ್ಟಿಗೆ ಬಟ್ಟೆಯ ಆಳು, ಮಿನುಗಾರ್ತಿ, ಚಾಪೆ ಹೆಣೆಯುವಾಕೆ ಹಾಗೂ ಕಟ್ಟಡದ ಆಳು ಇವರ ಬಗೆಗಿನ ಗಲಾಟೆಯವರ ಅಧ್ಯಯನ ಅಂತರಾಷ್ಟ್ರೀಯ ಮಾರುಕಟ್ಟೆಗಾಗಿ ಲೇಸು ತಯಾರಿಸುವ ಮಹಿಳೆಯರ ಬಗೆಗಿನ ಮಾಮ್ಸ್‌ರವರ ಅಧ್ಯಯನ, ಉಡುಪು ತಯಾರಿಸುವ ಮಹಿಳೆಯರ ಬಗೆಗಿನ ಕಲ್ಪಗಮ್‌ರವರ ಅಧ್ಯಯನ ಬೀಡಿಕಾರ್ಮಿಕರ ಬಗೆಗಿನ ಭಾಟಿಯವರ ಅಧ್ಯಯನ, ಬೆತ್ತದ

[illegible]

ಚಾಪೆ ಹೆಣೆಯುವ ಮಹಿಳೆಯರ ಕುರಿತಾದ ಮ್ಯಾಥ್ಯೂರವರ ಅಧ್ಯಯನ ಇವು ಕೆಲಸ ಮಾಡುವ ಮಹಿಳೆಯರ ದಯನೀಯ ಸ್ಥಿತಿಯ ಮೇಲೆ ಬೆಳಕು ಚೆಲ್ಲುತ್ತವೆ. ಮುಖ್ಯವಾಗಿ ಈ ಮಹಿಳೆಯರು ಯಾವ ಪರಿಸ್ಥಿತಿಯಲ್ಲಿ ಹಾಗೂ ಎಂತಹ ಪರಿಸ್ಥಿತಿಯಲ್ಲಿಯೂ ಕೆಲಸ ಮಾಡುತ್ತಾರೆ ಎಂಬುದನ್ನು ಈ ಅಧ್ಯಯನಗಳು ವಿವರಿಸುತ್ತವೆ. ಆದರೆ ಮಹಿಳೆಯರೇ ಯಾಕೆ ಇಂತಹ ಅಸಂಘಟಿತ ಕ್ಷೇತ್ರಗಳಲ್ಲಿ ಕೆಲಸಮಾಡಬೇಕಾಗುತ್ತದೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿಲ್ಲ. ಮಾರ್ಯ್ಸ್ ಅವರು ಮಾತ್ರ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಆಡಳಿತ ವರ್ಗವು ಕಡಿಮೆ ಕೂಲಿ ಕೊಟ್ಟು ಹೆಚ್ಚಿನ ಕೆಲಸ ಮಾಡಿಸಿಕೊಳ್ಳಲು ಮಹಿಳೆಯರನ್ನು ಆಯ್ದು ಶೋಷಿಸುತ್ತದೆಂಬುದನ್ನು ತೋರಿಸಿದ್ದಾರೆ.

ಉದ್ಯೋಗದ ಅನ್ವೇಷಣೆಯಲ್ಲಿ ಹಳ್ಳಿಗಳನ್ನು ಬಿಟ್ಟು ನಗರಗಳಲ್ಲಿ ಬಂದು ನೆಲೆಸಿದ ಮಹಿಳೆಯರ ಕೌಟುಂಬಿಕ ಸ್ಥಿತಿಗತಿಗಳೇನು ಎಂಬ ಬಗ್ಗೆ ದೇಸಾಯಿ ಮತ್ತು ಪ್ರೇಮಿ (1980) ಇತ್ಯಾದಿ ತಜ್ಞರು ಕೂಲಂಕುಶವಾಗಿ ಪುರುಷರು ತಮ್ಮ ಹಳ್ಳಿಗಳನ್ನು ಬಿಟ್ಟು ಮನೆಗಳ ಜವಾಬ್ದಾರಿ ಹೊತ್ತು ಮಹಿಳೆಯರ ಕಠಿಣ ಪರಿಸ್ಥಿತಿಯನ್ನು ಇವರು ವರ್ಣಿಸಿದ್ದಾರೆ. ಮಕ್ಕಳನ್ನು ಸಾಕಲು ಈ ಮಹಿಳೆಯರು ಪಡಬೇಕಾದ ಪರಿಶ್ರಮ ಬಂಧುಬಳಗದವರ ಆಸರೆಯಿಲ್ಲದೆ ಅನಿವಾರ್ಯವಾಗಿ ತಾವೂ ನಗರಗಳಿಗೆ ಹೊಗಬೇಕಾದ ಮಹಿಳೆಯರ ಕಷ್ಟನಷ್ಟಗಳು ಈ ಬಗ್ಗೆ ಸಿಂಗ್ ಎಂಬುವರು 1978ರಲ್ಲಿ ತಮ್ಮ ಪುಸ್ತಕದಲ್ಲಿ ಸಂಗ್ರಹಿಸಿದ್ದಾರೆ.

ಆಧುನಿಕ ತಂತ್ರಜ್ಞಾನದ ಅಳವಡಿಕೆಯಿಂದಾಗಿಯೂ ಪುರುಷರಿಗೆ ಲಾಭವಾಗುತ್ತದೆ. ಹಾಗೂ ಮಹಿಳೆಯರಿಗೆ ಕೆಲಸದ ಅವಕಾಶಗಳು ತಪ್ಪುತ್ತವೆ. ಎಂದು ಕೇಳಕರ (1981) ಬ್ರಹ್ಮೆ (1981) ಆಚಾರ್ಯ (1983) ಇತ್ಯಾದಿ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಭತ್ತ ಕುಟ್ಟುವ ಗಿರಣಿಗಳ ಸ್ಥಾಪನೆಯಿಂದಾಗಿ ಬಡ ಹೆಂಗಸರ ಕೆಲಸಕ್ಕೆ ಕಲ್ಲು ಬಿದ್ದದ್ದು ಒಂದು ಚಿಕ್ಕ ಉದಾಹರಣೆ ಮಾತ್ರ. ಆದರೆ ಈ ದಿಸೆಯಲ್ಲಿ ಇದನ್ನೇ ನಿರ್ದಿಷ್ಟವಾಗಿ ಅಭ್ಯಸಿಸಬೇಕಾದ ಕೆಲಸದ ಕ್ಷೇತ್ರಗಳೆಂದರೆ ಮನೆ ಹಾಗೂ ಹೊಲ ಎರಡೂ ಕಡೆ ದುಡಿಯಬೇಕಾದ ಮಹಿಳೆಯ ಮೇಲಿನೊತ್ತಡ ಎಂತಹುದು, ಗಳಿಸಿದ ಹಣದಲ್ಲಿ ಮಹಿಳೆ ಎಷ್ಟು ಉಪಭೋಗಿಸುತ್ತಾಳೆ ಹಾಗೂ ಎಷ್ಟು ಹಣ ಗಂಡಸಿನ ಪಾಲಿಗೆ ಹೋಗುತ್ತದೆ. ಕೆಲವು ಕಠಿಣ ಕೆಲಸಗಳಿಂದ (ಬತ್ತದ ಸಸಿ ನೆಡುವುದು ಇತ್ಯಾದಿ) ಮಹಿಳೆಯ ಆರೋಗ್ಯದ ಮೇಲಾಗುವ ಪರಿಣಾಮವೇನು, ಮನೆತನದ ಒಕ್ಕಲುತನಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ನಿರ್ಣಯತೆಗೆದುಕೊಳ್ಳುವಲ್ಲಿ ಮಹಿಳೆಯ ಅಧಿಕಾರವೆಷ್ಟು ಇವೇ ಮೊದಲಾದ ಮುಖ್ಯ ವಿಷಯಗಳ ಬಗ್ಗೆ ನಿರ್ಧಿಷ್ಟ ಅಧ್ಯಯನ ಇನ್ನೂ ಆಗಬೇಕಾಗಿದೆ. ಇಲ್ಲಿಯೂ ಸಹ ವಿವಿಧ ಸಾಮಾಜಿಕ ಆರ್ಥಿಕ ಮಟ್ಟಗಳಲ್ಲಿ ಮಹಿಳೆಯರ ಮೇಲೆ ಆಗುವ ಪರಿಣಾಮಗಳು ಭಿನ್ನ ವಿಭಿನ್ನವಾಗಿರುತ್ತವೆ ಎಂಬುದನ್ನು ಗಮನಿಸಬೇಕು. ಹೊಲಗಳಲ್ಲಿ ಪುರಷ ಹಾಗೂ ಮಹಿಳೆ ದುಡಿಯುವ ಅವಧಿಗಳಲ್ಲಿರುವ ವ್ಯತ್ಯಾಸ, ಮಾಡುವ ಕೆಲಸಗಳಲ್ಲಿರುವ ವ್ಯತ್ಯಾಸ ಅವರಿಗೆ ಸಿಗುವ ಪ್ರತಿಫಲಗಳಲ್ಲಿನ ವ್ಯತ್ಯಾಸ ಇವನ್ನು ಅಭ್ಯಸಿಸಬೇಕು.

[illegible]

[illegible]

[illegible]

ಅಧ್ಯಾಯ : ಎರಡು

ಅಸಂಘಟಿತ ವಲಯದ ಮಹಿಳಾ ದುಡಿಮೆ ಹಾಗೂ ನಿರ್ವಚನ

೨.೧ ಪ್ರಸ್ತಾವನೆ

೨.೨ ಅಸಂಘಟಿತ ವಲಯದ ಸ್ವರೂಪ

೨.೩ ಅಸಂಘಟಿತ ವಲಯದ ದುಡಿಮೆ ಮತ್ತು ಮಹಿಳೆ

೨.೪ ಮಹಿಳೆಯ ಔದ್ಯೋಗಿಕ ವಲಯ ಅಸಂಘಟಿತ ಯಾಕೆ?

ಅಧ್ಯಾಯ : ಎರಡು

ಅಸಂಘಟಿತ ವಲಯದ ಮಹಿಳಾ ದುಡಿಮೆ ಹಾಗೂ ನಿರ್ವಚನ

2.1 ಪ್ರಸ್ತಾವನೆ

ಸಾಮಾಜಿಕ ಹಾಗೂ ಸಾರ್ವಜನಿಕವಾಗಿ ದುಡಿಮೆಯಲ್ಲಿ ಪ್ರಮುಖವಾಗಿ ಎರಡು ವಲಯಗಳನ್ನು ಕಾಣುತ್ತೇವೆ. ಸಂಘಟಿತ ವಲಯ ಹಾಗೂ ಅಸಂಘಟಿತ ವಲಯ ಎಂದು ಇವುಗಳನ್ನು ಗುರುತಿಸಲಾಗುತ್ತದೆ. ಸಂವಿಧಾನ ಮತ್ತು ಸರ್ಕಾರದ ಕಾಯಿದೆಯ ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸುವ, ಉದ್ಯೋಗ ಭದ್ರತೆ ನೀಡುವ, ಸಂಘಟನೆಗೊಂಡ ಕಾರ್ಮಿಕರಿರುವ ಹಾಗೂ ಉತ್ಪಾದನೆಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ವಲಯವೇ ಸಂಘಟಿತ ವಲಯ. ಇದಕ್ಕೆ ವಿರುದ್ಧವಾದ ಲಕ್ಷಣಗಳನ್ನು ಹೊಂದಿರುವ ವಲಯವನ್ನು ಅಸಂಘಟಿತ ವಲಯವೆಂದು ಕರೆಯುತ್ತಾರೆ. ಈ ವಲಯದಲ್ಲಿ ಉದ್ಯೋಗದ ಭದ್ರತೆ ಒದಗಿಸಿಕೊಡುವುದಿಲ್ಲ ಮತ್ತು ಸೇವಾನಿಯಮಗಳನ್ನು ಪಾಲಿಸುವ ಸಲುವಾಗಿ ಸರ್ಕಾರ ರೂಪಿಸಿರುವ ಶಾಸನಗಳು ಮತ್ತು ಕಾನೂನುಗಳ ಚೌಕಟ್ಟಿನಿಂದ ಹೊರಗಿರುವ ಕಾರ್ಮಿಕ ಸಂಘ-ಸಂಘಟನೆಗಳು ಅಸಂಘಟಿತ ಕ್ಷೇತ್ರಕ್ಕೆ ಒಳಪಡುತ್ತವೆ ಎಂದು ಗುರುತಿಸಲಾಗಿದೆ. "ಯಾವ ದುಡಿಮೆಯಲ್ಲಿ ಒಂದೇ ಉದ್ದೇಶಕ್ಕಾಗಿ ಒಗ್ಗೂಡಿ ತಮ್ಮ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲು ಸಾಧ್ಯವಿಲ್ಲವೂ ಅವೆಲ್ಲವೂ ಅಸಂಘಟಿತ ವಲಯ ಎಂದು ಕಾರ್ಮಿಕ ಆಯೋಗ ವ್ಯಾಖ್ಯಾನಿಸಿದೆ."[೧]

ಭಾರತದಲ್ಲಿ ಶೇ. ಹತ್ತಕ್ಕಿಂತ ಕಡಿಮೆ ಮಹಿಳೆಯರು ಸಂಘಟಿತ ವಲಯದಲ್ಲಿ ಶೇ. ತೊಂಬತ್ತಕ್ಕಿಂತ ಹೆಚ್ಚು ಮಹಿಳೆಯರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಇಲ್ಲಿ ಮಹಿಳೆಯರ ಕೆಲಸದ ಸ್ವರೂಪ, ಸ್ಥಿತಿಗತಿ ಹಾಗೂ ಸಮಸ್ಯೆಗಳನ್ನು ಮೊದಲು ಬೆಳಕಿಗೆ ತಂದಿದ್ದು ೧೯೭೪ರಲ್ಲಿ 'ನ್ಯಾಷನಲ್ ಕಮಿಟಿ ಆನ್ ಸ್ಟೇಟಸ್ ಆಫ್ ಹುಮೆನ್'ನ ವರದಿ. 'ಟುವರ್ಡ್ಸ್ ಈಕ್ವಾಲಿಟಿ ಇದು ಸರ್ಕಾರದ, ನೀತಿನಿರೂಪಕರ ಹಾಗೂ ಅರ್ಥಶಾಸ್ತ್ರಜ್ಞರ ಗಮನವನ್ನು ಸೆಳೆಯಿತು.[೨] ನಂತರ ಅಸಂಘಟಿತ ವಲಯದ

[illegible]

[illegible]

[illegible]

[illegible]

[illegible]

ಮಹಿಳಾ ದುಡಿಮೆಗಾರರ ಕಡೆ ಹೆಚ್ಚಿನ ಗಮನ ಹರಿಯಲು ಪ್ರಾರಂಭವಾಯಿತು. ಇದಲ್ಲದೆ ೧೯೭೪ರಲ್ಲಿ 'ದಿ ನ್ಯಾಷನಲ್ ಕಮಿಟಿ ಆನ್ ಹುಮೆನ್ ಇನ್‌ಸೆಲ್ಫ್ ಎಂಪ್ಲಾಯ್ಮೆಂಟ್ ಎಂಡ್ ಇನ್ ಫಾರ್ಮಲ್ ಸೆಕ್ಟರ್‌ನ ವರದಿ ಶ್ರಮ ಶಕ್ತಿ'ಯು ಈ ವಲಯದ ಮಹಿಳೆಯರ ಬಗ್ಗೆ ಮತ್ತಷ್ಟು ಅಂಕಿಅಂಶಗಳನ್ನು ಬೆಳಕಿಗೆ ತಂದು ಅವುಗಳ ವಿಶ್ಲೇಷಣೆ ನೀಡಿ ಸರ್ಕಾರ ನಿರ್ದಿಷ್ಟ ಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡಿತು, ಅದರ ಫಲವಾಗಿ ೧೯೯೧ರ ಜನಗಣತಿಯಲ್ಲಿ ಮೊದಲ ಬಾರಿಗೆ ಅಸಂಘಟಿತ ವಲಯದ ಮಹಿಳಾದುಡಿಮೆಗಾರರನ್ನು ಸೇರಿಸಲಾಯಿತು. ಇದರಿಂದ ಮಹಿಳೆಯರ ದುಡಿಮೆ ಸಹಭಾಗಿತ್ವವು ಹೆಚ್ಚಾದುದು ಕಂಡುಬರುತ್ತದೆ. ಅಲ್ಲಿಯವರೆಗೆ ಸರ್ಕಾರವಾಗಲಿ, ಜ್ಞಾನಶಾಸ್ತ್ರಗಳಾಗಲಿ, ವಿಷಯ ತಜ್ಞರಾಗಲಿ ಅಸಂಘಟಿತ ವಲಯದ ಮಹಿಳೆಯರನ್ನು ದುಡಿಮೆಗಾರರೆಂದು ಪರಿಗಣಿಸುತ್ತಲೇ ಇರಲಿಲ್ಲ. ಇತ್ತೀಚೆಗೆ ಬಹಳ ನಿಧಾನವಾಗಿಯಾದರೂ ಗಮನ ನೀಡುತ್ತಿರುವುದು ಕಂಡು ಬರುತ್ತದೆ. ಸರ್ಕಾರ ತನ್ನ ರಾಜಕೀಯ ಪ್ರಸ್ತಾವನೆಯಡಿ ಅಸಂಘಟಿತ ವಲಯದ ದುಡಿಮೆಗಾರರಿಗೆ ಜೀವವಿಮೆ, ಆರೋಗ್ಯವಿಮೆ ಹಾಗೂ ಇತರ ಸಾಮಾಜಿಕ ಭದ್ರತೆಯನ್ನು ನೀಡುವುದಾಗಿ ಹೇಳುತ್ತದೆ. ಅವುಗಳು ಜಾರಿಗೊಂಡರೆ ಮಹಿಳೆಯರು ಲಾಭ ಪಡೆಯುತ್ತಾರೆ.

ಮಹಿಳೆಯರು ಅಸಂಘಟಿತ ಕ್ಷೇತ್ರದಲ್ಲಿ ಕೇಂದ್ರೀಕೃತವಾಗಲು ಅನೇಕ ಕಾರಣಗಳಿವೆ. ಸಾಮಾನ್ಯವಾಗಿ ಹೆಣ್ಣು ಮಕ್ಕಳನ್ನು ಅವರು ವಾಸಿಸುವ ಸ್ಥಳದಲ್ಲೆ ಸಿಗುವಂತಹ ಕಡಿಮೆ ಕೂಲಿ, ಕಡಿಮೆ ಕೌಶಲ್ಯದ, ಋತುಮಾನಕ್ಕನುಗುಣವಾದ ನಿರಂತರ ದುಡಿಮೆ ನಿರೀಕ್ಷಿಸದ ಕೆಲಸಗಳಲ್ಲಿ ತೊಡಗುತ್ತಾರೆ.

ದುಡಿಯುವ ಮಹಿಳೆಯರ ವಯೋಮಿತಿಯನ್ನು ತೆಗೆದುಕೊಂಡರೆ ಸಾಮಾನ್ಯವಾಗಿ ೧೫-೪೦ ವರ್ಷದ ಮಹಿಳೆಯರು ದುಡಿಮೆಯಲ್ಲಿ ತೊಡಗಿರುವುದು ಕಂಡುಬರುತ್ತವೆ. ಈ ವಯಸ್ಸು ಅವರ ಸಂತಾನೋತ್ಪತ್ತಿಯ ಅವಧಿಯೂ ಅಗಿರುತ್ತದೆ. ಸಂತಾನೋತ್ಪತ್ತಿ ಹಾಗೂ ಕುಟುಂಬದ ಜವಾಬ್ದಾರಿ ಅವರನ್ನು ಹೊರಗಡೆ ನಿರಂತರ ನಿಯಮಿತ ಕೆಲಸಗಳಲ್ಲಿ ತೊಡಗಲು ಬಿಡುವುದಿಲ್ಲ ತಮ್ಮ ಅನುಕೂಲತೆಗೆ ತಕ್ಕಂತೆ ಫ್ಲೆಕ್ಸಿಬಲ್ ಗುಣವುಳ್ಳ ಕೆಲಸಗಳಲ್ಲಿ ತೊಡಗುತ್ತಾರೆ.

ಅನಕ್ಷರತೆ, ಶಿಕ್ಷಣ, ತರಬೇತಿ ಹಾಗೂ ಕೌಶಲ್ಯದ ಕೊರತೆಯಿಂದ ಮಹಿಳೆಯರು ಸಂಘಟಿತ ಕ್ಷೇತ್ರದಲ್ಲಿರುವ ಸ್ಪರ್ಧಾತ್ಮಕ ಕೆಲಸಗಳನ್ನು ಪಡೆಯುವುದು ಕಷ್ಟವಾಗುತ್ತದೆ. ಅವಕಾಶಗಳು ಕಡಿಮೆಯಾಗುತ್ತವೆ. ಮೇಲಿನ ಅಪೇಕ್ಷೆಗಳನ್ನು ನಿರೀಕ್ಷಿಸದ ಅಸಂಘಟಿತ ಕ್ಷೇತ್ರ ಸುಲಭವಾಗಿ ಮಹಿಳೆಯರನ್ನು ತನ್ನತ್ತ ಸೆಳೆಯುತ್ತದೆ ಅಥವಾ ಮಹಿಳೆಯರು ಸುಲಭವಾಗಿ ಆ ವಲಯವನ್ನು ಪ್ರವೇಶಿಸುತ್ತಾರೆ.

ಸಂಘಟಿತ ಕ್ಷೇತ್ರವನ್ನು ಪ್ರವೇಶಿಸಲಾಗದೆ ಅಂದರೆ ಅಲ್ಲಿಯ ಕಡ್ಡಾಯ ಮತ್ತು ಅಪೇಕ್ಷಣೀಯ ಪೂರೈಕೆಗಳನ್ನು, ಸಾಕ್ಷರತೆ, ಕನಿಷ್ಠ ವಿದ್ಯಾರ್ಹತೆ ಅನುಭವ, ಕಾರ್ಯಕ್ಷಮತೆ ಕೌಶಲ್ಯ ತರಬೇತಿಗಳನ್ನು ಪೂರೈಸಲಾಗದೆ. ಅಸಂಘಟಿತ ವಲಯಕ್ಕೆ ಹೋಗುತ್ತಾರೆ. ಅಲ್ಲದೆ ಅದು ತೆಗೆದುಕೊಳ್ಳುವ ದೀರ್ಘಸಮಯ, ಲಿಖಿತ ಪರೀಕ್ಷೆ, ಸಂದರ್ಶನ ಮತ್ತು ಇತರ ಪ್ರಕ್ರಿಯೆಗಳಿಗೆ ಕಾಯಲು ಸಾಧ್ಯವಾಗದೆ ತಕ್ಷಣ ಸಿಗುವ ಹಂಗಾಮಿ ಅಥವಾ ಗುತ್ತಿಗೆ ಆಧಾರದ ಕೆಲಸಗಳಲ್ಲಿ ತೊಡಗುತ್ತಾರೆ.

ಮಹಿಳೆಯರ ಶ್ರಮದ ಬೇಡಿಕೆ ಮತ್ತು ಪೂರೈಕೆಯನ್ನು ತೆಗೆದುಕೊಂಡರೆ ಪೂರೈಕೆ ಅಧಿಕವಾಗಿರುವುದರಿಂದ ಬೇಡಿಕೆ ಕಡಿಮೆಯಾಗುತ್ತದೆ. ಬೇಡಿಕೆ ಕಡಿಮೆಯಾದಾಗ ಅವರ 'ಚೌಕಾಸಿಶಕ್ತಿ'ಯು ಕಡಿಮೆಯಾಗಿ ಕೌಶಲ್ಯರಹಿತ ಕೆಲಸಗಳಲ್ಲಿ ಕಡಿಮೆ ಕೂಲಿಗೆ ದುಡಿಯಬೇಕಾಗುತ್ತದೆ.

ಸರ್ಕಾರದ ಕೃಷಿ ನೀತಿ. ಭೂ ಕಾಯಿದೆ, ಪರಿಸರನಾಶ, ಆರ್ಥಿಕ ಹಾಗೂ ಅಭಿವೃದ್ಧಿ ಕಾರ್ಯನೀತಿ, ಯೋಜನೆ ಹಾಗೂ ಚಟುವಟಿಕೆಗಳು ಜನರನ್ನು ಭೂರಹಿತರನ್ನಾಗಿ ಮಾಡುತ್ತದೆ. ಸ್ಥಳಾಂತರಗೊಳಿಸುತ್ತದೆ. ನಿರುದ್ಯೋಗಿಗಳನ್ನಾಗಿ ಬಡತನಕ್ಕೆ ತಳ್ಳುತ್ತದೆ. ಇವುಗಳಿಂದ ಹೆಚ್ಚು ಸಂಕಷ್ಟಕ್ಕೊಳಗಾಗುವ ಮಹಿಳೆಯರು ದುಡಿಯುವುದು ಅನಿವಾರ್ಯವಾಗಿ ಯಾವುದೇ ಅಸಂಘಟಿತ ವಲಯದ ಕೆಲಸ ಮಾಡಲು ಮುಂದಾಗುತ್ತಾರೆ.

ಇತ್ತೀಚಿನ ತಂತ್ರಜ್ಞಾನ ಬೆಳವಣಿಗೆ, ಆಧುನೀಕರಣ, ಹೊಸ ಆರ್ಥಿಕ ನೀತಿ, ಜಾಗತೀಕರಣ ಮಹಿಳೆಯರನ್ನು ಅಸಂಘಟಿತ ಕ್ಷೇತ್ರಕ್ಕೆ ತಳ್ಳುತ್ತಿವೆ. ಉದಾಹರಣೆಗೆ, ರಸ್ತೆ ಅಭಿವೃದ್ಧಿಗೆ ಪಟ್ಟಣ/ನಗರಗಳ ವಿಸ್ತರಣೆಗೆ, ಕೈಗಾರಿಕೆ ಸ್ಥಾಪನೆಗೆಂದು ಸರ್ಕಾರ ಭೂಮಿಯನ್ನು ಅದರ ಒಡೆಯರಿಂದ ಆಕ್ರಮಿಸಿಕೊಂಡು ಪರಿಹಾರ ಸಿಗುವುದು ನಿಧಾನವಾದರೆ ಅಥವಾ ಸರಿಯಾದ ಮೊತ್ತ ಸಮಯಕ್ಕೆ ಸಿಗದೇ ಹೋದರೆ ಪುರುಷರೊಂದಿಗೆ ಮಹಿಳೆಯರು ಕೂಲಿ ಕೆಲಸಕ್ಕೆ ಮೊರೆ ಹೋಗಬೇಕಾಗುತ್ತದೆ. ಅಥವಾ ಸಣ್ಣಪುಟ್ಟ ವ್ಯಾಪಾರ ಮಾಡಬೇಕಾಗುತ್ತದೆ.

೨.೨ ಅಸಂಘಟಿತ ವಲಯದ ಸ್ವರೂಪ

ಅಸಂಘಟಿತ ವಲಯದಲ್ಲಿ ಅನೇಕ ಬಗೆಯ ಚಟುವಟಿಕೆಗಳನ್ನು ಗುರುತಿಸಬಹುದಾಗಿದೆ. ಈ ವಲಯದ ಎಲ್ಲ ಬಗೆಯ ಚಟುವಟಿಕೆಗಳಲ್ಲೂ ಮಹಿಳೆಯರು ಕಾಣಿಸಿಕೊಳ್ಳುತ್ತಾರೆ. ಅನೇಕ ಅಧ್ಯಯನಗಳು ಹಾಗೂ ವರದಿಗಳು ಗುರುತಿಸಿರುವ ಕೆಲಸ ಕಾರ್ಯಗಳು ಈ ರೀತಿ ಇವೆ. ಕೃಷಿ, ಪಶು, ಪಾಲನೆ, ಕರಕುಶಲತೆ ಹೈನುಗಾರಿಕೆ, ಕೈಮಗ್ಗ, ಕಟ್ಟಡ ನಿರ್ಮಾಣ, ಬೆಂಕಿಪೊಟ್ಟಣ ತಯಾರಿಕೆ, ಬೆರಣಿ ಕೈಗಾರಿಕೆ, ಬಿದಿರು ಬುಟ್ಟಿ ಮಾಡುವುದು, ಈಚಲ ಬುಟ್ಟಿಮಾಡುವುದು, ಕಸಬರಿಕೆ ಮಾಡುವುದು, ಬಟ್ಟೆ ಹೊಲಿಯುವುದು, ಕೌದಿ ತಯಾರಿಕೆ ಸಿದ್ಧ ಉಡುಪುಗಳ ತಯಾರಿಕೆ, ಮನೆಗಳಲ್ಲಿ ಕಸಮುಸರೆ, ಬಟ್ಟೆ ತೆಗೆಯುವ ಆಳುಗಳಾಗಿ ದುಡಿಮೆ, ಹಂಗಾಮಿ ದಿನಗೂಲಿ ದುಡಿಮೆ, ನೇಕಾರರಿಕೆ, ಚಿಲ್ಲರೆ ವ್ಯಾಪಾರ.......ಇತ್ಯಾದಿ. ಮುಂತಾದವು ಮೇಲೆ ತಿಳಿಸಿದ ಚಟುವಟಿಕೆಗಳು ಪೂರ್ಣವಾದವುಗಳೇನಲ್ಲ. ಇವುಗಳು ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತಿರುತ್ತವೆ.

ಅಸಂಘಟಿತ ಕ್ಷೇತ್ರದ ಕೆಲಸಗಳು ಸ್ಥಳೀಯವಾಗಿರುತ್ತವೆ. ಇಲ್ಲಿ ಸ್ಥಳೀಯ ಮಹಿಳೆಯರೇ ಹೆಚ್ಚಾಗಿ ದುಡಿಯುತ್ತಿರುತ್ತಾರೆ. ಅವರು ಸಾಂಪ್ರದಾಯಿಕ ವಿಚಾರ ಹಾಗೂ ಮನೋಭಾವಗಳಿಂದ ಬಂಧಿಸಲ್ಪಟ್ಟಿರುತ್ತಾರೆ. ಭಾರತದಲ್ಲಿ ಶೇ೯೦ಕ್ಕಿಂತ ಹೆಚ್ಚಿನ ಮಹಿಳೆಯರು ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಇತ್ತೀಚಿನ ಖಾಸಗೀಕರಣ, ಜಾಗತೀಕರಣ ಹಾಗೂ ತಂತ್ರಜ್ಞಾನ ಅಭಿವೃದ್ಧಿಯಿಂದ

ಅವರ ಸಂಖ್ಯೆ ಹೆಚ್ಚಾಗುತ್ತಿದೆ. ಅಲ್ಲದೆ ದುಡಿಯುತ್ತಿರುವ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತಿದೆ. ವಿದೇಶಿ ವಸ್ತುಗಳಿಗೆ ನಮ್ಮ ಮಾರುಕಟ್ಟೆ ತೆರೆದುಕೊಂಡಿರುವುದರಿಂದ ಇಲ್ಲಿಯ ಮಹಿಳಾ ಉತ್ಪಾದಕರು ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಸ್ಪರ್ಧಿಸಲು ಸಾಧ್ಯವಾಗುವುದಿಲ್ಲ. ತಮ್ಮ ವಸ್ತುಗಳ ಮಾರಾಟಕ್ಕೆ ಮಾರುಕಟ್ಟೆಯನ್ನ ಕಳೆದುಕೊಳ್ಳುತ್ತಾರೆ. ಈಗಲೇ ಶೇ೫೦ರಷ್ಟು ಸಣ್ಣ ಹಾಗೂ ಗೃಹ ಕೈಗಾರಿಕೆಗಳು ಮುಚ್ಚಿಹೋಗಿವೆ ಎಂದು ತಿಳಿದುಬಂದಿದೆ. ಇಲ್ಲಿ ಅಧಿಕ ಸಂಖ್ಯೆಯಲ್ಲಿ ದುಡಿಯುತ್ತಿದ್ದ ಮಹಿಳೆಯರು ಉದ್ಯೋಗ ಕಳೆದುಕೊಂಡಿದ್ದಾರೆ. ತಂತ್ರಜ್ಞಾನ ಬೆಳವಣಿಗೆಯು ಅಸಂಘಟಿತ ಕ್ಷೇತ್ರದ ಮಹಿಳೆಯರ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಸ್ಥಳೀಯ ಕಚ್ಚಾಸಾಮಗ್ರಿ ಬಳಸಿ ಮಹಿಳೆಯರು ತಯಾರಿಸುತ್ತಿದ್ದ ಪೊರಕೆ, ಬುಟ್ಟಿ, ಚಾಪೆ, ಕರಕುಶಲ ವಸ್ತುಗಳು, ಪ್ಲಾಸ್ಟಿಕ್ ಮತ್ತು ಇತರ ವಸ್ತುಗಳ ಬಳಕೆ ಹೆಚ್ಚಾದ್ದರಿಂದ ಬೇಡಿಕೆ ಕಳೆದುಕೊಂಡು ಮಹಿಳೆಯರು ಅತಂತ್ರ ಸ್ಥಿತಿಯಲ್ಲಿದ್ದಾರೆ. ಸಂಘಟಿತ ಕ್ಷೇತ್ರದಲ್ಲಿ ಕೆಲಸಗಾರರು ಪಡೆಯುವ ಕಾನೂನಿನ ರಕ್ಷಣೆ ಉದ್ಯೋಗ ಭದ್ರತೆ, ಹಾಗೂ ಇತರ ಸೌಲಭ್ಯಗಳು. ವಿಮೆ, ವೈದ್ಯಕೀಯ ಸೌಲಭ್ಯ, ಪಿಂಚಣಿ, ಅಪಘಾತ ಪರಿಹಾರಗಳನ್ನು ಮಹಿಳೆಯರು ಪಡೆಯುವುದಿಲ್ಲ. ಹೆರಿಗೆ ರಜೆ ಮತ್ತು ಭತ್ಯೆ ನೀಡಬೇಕೆಂದು ಸಂವಿಧಾನದಲ್ಲೇ ಹೇಳಿದ್ದರೂ ಈ ವಲಯದಲ್ಲಿ ಮಹಿಳೆಯರು ಅವುಗಳನ್ನು ಪಡೆಯುತ್ತಿಲ್ಲ.

ಮಹಿಳೆಯರನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು, ತೆಗೆದುಹಾಕುವುದು, ವೇತನ ನಿಗದಿಪಡಿಸುವುದು, ಸೌಲಭ್ಯಗಳನ್ನು ಒದಗಿಸುವುದು ಮುಂತಾದವು ಮಾಲೀಕರ ಇಚ್ಛಾನುಸಾರ ನಡೆಯುತ್ತಿರುತ್ತದೆ. ಕೊನೆಯಲ್ಲಿ ನೇಮಕಗೊಂಡು, ಮೊದಲು ಕೆಲಸದಿಂದ ತೆಗೆದುಹಾಕಲ್ಪಡುವ ಕೆಲಸಗಾರರಲ್ಲಿ ಮಹಿಳೆಯರು ಅಧಿಕ ಸಂಖ್ಯೆಯಲ್ಲಿರುತ್ತಾರೆ. ಅಸಂಘಟಿತ ವಲಯದಲ್ಲಿ ಮಹಿಳೆಯರು ಸಂಘಟಿತ ವಲಯದ ಕೆಲಸ ಕಾರ್ಖಾನೆಗಳಲ್ಲಿ ಬೆಳಗ್ಗೆ ಎಂಟು ಗಂಟೆಯಿಂದ ರಾತ್ರಿ ಹತ್ತು ಗಂಟೆಯವರೆಗೆ ದುಡಿಯುವುದು ಕಂಡುಬರುತ್ತದೆ. ಸಂವಿಧಾನವು ಕೆಲಸದ ಸ್ಥಳದಲ್ಲಿ ಆರೋಗ್ಯಕರ ಹಾಗೂ ಮಾನವೀಯ ವಾತಾವರಣವನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತದೆ. ಆದರೆ ಮಹಿಳೆಯರು ದುಡಿಯುವ ಸ್ಥಳಗಳಲ್ಲಿ ಶಬ್ದ, ಧೂಳು, ಮಾಲಿನ್ಯ, ಕೆಲಸವು ರಸಾಯನಿಕ ವಸ್ತುಗಳ ವಿಷ, ಉಸಿರಾಟದ ತೊಂದರೆ ಇರುವಂತಹ ಪರಿಸ್ಥಿತಿಯಿದ್ದರೂ ಅವುಗಳಿಗೆ ಸೂಕ್ತ ರಕ್ಷಣಾ ವ್ಯವಸ್ಥೆಯಿರುವುದಿಲ್ಲ, ಕಂಪ್ಯೂಟರ್‌ನ ಚಿಪ್ಸ್ ಮತ್ತು ಇತರ ಬಿಡಿ ಭಾಗಗಳನ್ನು ತಯಾರಿಸುವ ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರು ಹೆಚ್ಚಾಗಿ ಕಂಡುಬರುತ್ತಾರೆ. ಅಲ್ಲಿ ಸೀಸದ ಬಳಕೆ ಅಧಿಕವಾಗಿದ್ದು ಅದು ಮಹಿಳೆಯರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದ್ದರೂ ಮಾಲೀಕರು ಅದಕ್ಕೆ ಸೂಕ್ತ ರಕ್ಷಣೆ ವ್ಯವಸ್ಥೆ ಮಾಡಿಕೊಟ್ಟಿಲ್ಲ ಎನ್ನುವುದು ಅಧ್ಯಯನದಿಂದ ತಿಳಿದುಬಂದಿದೆ.

ಅಸಂಘಟಿತ ವಲಯದಲ್ಲಿ ಕಡಿಮೆ ಮಟ್ಟದ ತಂತ್ರಜ್ಞಾನ ಬಳಸಿ ದೈಹಿಕ ಶ್ರಮ ಹೆಚ್ಚಿರುವ, ಕೈಬೆರಳುಗಳನ್ನು ಬಳಸಿ ಮಾಡುವ ಏಕತಾನತೆಯ ಕೆಲಸಗಳು ಹೆಚ್ಚಾಗಿರುತ್ತವೆ. ಇಂತಹ ಗ್ರಾಮದಾಯಕ ದೀರ್ಘಕಾಲದ ಕೆಲಸಗಳ ಜೊತೆಗೆ ಮಹಿಳೆಯರು ತಮ್ಮ ಸಾಂಪ್ರದಾಯಿಕ ಪಾತ್ರದಲ್ಲಿ ಮನೆಕೆಲಸ, ಗಂಡ, ಮಕ್ಕಳ ವೃದ್ಧರು ಹಾಗೂ ರೋಗಿಗಳನ್ನು ನೋಡಿಕೊಳ್ಳುವ ಕೆಲಸಗಳನ್ನು ಮಾಡಬೇಕು. ಭಾರತದಲ್ಲಿ ಬಡ ಕುಟುಂಬದ ಕೆಳವರ್ಗದ, ಹಿಂದುಳಿದ ಜಾತಿ, ಪರಿಶಿಷ್ಟಜಾತಿ ಹಾಗೂ ವರ್ಗದ

ಮಹಿಳೆಯರು ಅಸಂಘಟಿತ ವಲಯದಲ್ಲಿ ಕಂಡುಬರುತ್ತಾರೆ. ನಮ್ಮ ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ರಚನೆ ಹಾಗೂ ವ್ಯವಸ್ಥೆ ಮಹಿಳೆಯರು ಈ ವಲಯದಲ್ಲಿ ಕೇಂದ್ರೀಕೃತವಾಗುವಂತೆ ಮಾಡುವುದು ಕಂಡುಬರುತ್ತದೆ.

ಮಹಿಳೆಯರ ಸ್ಥಾನವನ್ನು ಉತ್ತಮಪಡಿಸುವುದು, ಅವರನ್ನು ಸಮಾನತೆಯತ್ತ ಕೊಂಡೊಯ್ಯುವುದು ಹಾಗೂ ಸಶಕ್ತಗೊಳಿಸುವುದು ಸರ್ಕಾರದ ಅಭಿವೃದ್ಧಿ ಸಂಸ್ಥೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಗುರಿಯಾಗಿದ್ದರೆ ಅವುಗಳ ಗಮನ ಮೊದಲು ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಈ ಮಹಿಳೆಯರ ಮೇಲೆ ಕೇಂದ್ರೀಕೃತವಾಗಬೇಕು. ದುಡಿಮೆಗೆ ಸಂಬಂಧಿಸಿದ ಅದರಲ್ಲೂ ಮಹಿಳೆಯರಿಗೆ ನೇರವಾಗಿ ಸಂಬಂಧಿಸಿದ ಕಾಯಿದೆಗಳ ಕಟ್ಟುನಿಟ್ಟಿನ ಜಾರಿ, ಸರ್ಕಾರದ ಕಡೆಯಿಂದ ಸಾಮಾಜಿಕ ಭದ್ರತೆಯ ಕಾರ್ಯರೂಪ, ಜಾಗತೀಕರಣ ಹಾಗೂ ಖಾಸಗೀಕರಣದ ಸವಾಲುಗಳನ್ನು ಎದುರಿಸಲು ಮಹಿಳೆಯರನ್ನು ಸನ್ನದ್ಧರನ್ನಾಗಿಸುವುದು, ಮಹಿಳೆಯರು ಕಾರ್ಮಿಕರಾಗಿ, ಸ್ವಯಂ ಉದ್ಯೋಗಿಗಳಾಗಿ ಸಂಘಟಿತರಾಗುವುದು, ಅವರ ಇಬ್ಬಗೆಯ ಹೊರೆಯನ್ನು ಕಡಿಮೆ ಮಾಡಲು ಕೌಟುಂಬಿಕ ಸಾಮಾಜಿಕ ರಚನೆಗಳಲ್ಲಿ ಬದಲಾವಣೆ ತರುವುದು ಇತ್ಯಾದಿ ಈ ವಲಯದಲ್ಲಿ ಮಹಿಳೆಯರ ಪರಿಸ್ಥಿತಿಯನ್ನು ಸುಧಾರಿಸಲು ಅನುಸರಿಸಬೇಕಾದ ಕಾರ್ಯತಂತ್ರಗಳು.

ಅಸಂಘಟಿತ ವಲಯಕ್ಕೆ ಒಳಪಡುವ ಹಲವು ಉತ್ಪಾದನಾ ಚಟುವಟಿಕೆಗಳಲ್ಲಿ ಗಾರ್ಮೆಂಟ್ಸ್ ಕಾರ್ಖಾನೆಯೂ ಒಂದು. ಇದರಲ್ಲಿ ಸ್ತ್ರಿ ಪುರುಷರು ಇಬ್ಬರು ಕೆಲಸ ಮಾಡುತ್ತಿದ್ದಾರೆನೋ ನಿಜ ಆದರೆ ಇಡೀ ಸಾಮಾಜಿಕ ವ್ಯವಸ್ಥೆಯಲ್ಲಿ ಲಿಂಗ, ವರ್ಗ, ಜಾತಿಯನ್ನು ಮುಖ್ಯವಾಗಿಸಿಕೊಂಡು ವಿಭಾಗೀಕರಣ ಹೊಂದಿರುವುದರಿಂದ ಹೆಣ್ಣಿನ ಜೈವಿಕತೆಯ ಕಾರಣದಿಂದಲೇ ಈ ಉದ್ಯಮದಲ್ಲಿ ಹಲವು ಶೋಷಣೆಗಳನ್ನು ಅನುಭವಿಸುವುದು ಕಾಣಬಹುದು. ಅದು ವೇತನದಲ್ಲೆ ಇರಬಹುದು, ಕೆಲಸಗಳ ಹಂಚಿಕೆ ಸಮಯದ ಅವಧಿ, ಇನ್ನಿತರ ಸಂಗತಿಗಳಲ್ಲೆ ಇರಬಹುದು ಇಂತಹ ತಾರತಮ್ಯಗಳಿಗೆ ಆಕೆಯ ಪ್ರತಿಕ್ರಿಯೆ ಈ ಸಂದಿಗ್ಧತೆಯಲ್ಲಿ ಅವಳ ಬದುಕಿನ ಸ್ವರೂಪವನ್ನು ತಿಳಿಯುವುದು ಮುಖ್ಯವಾಗುತ್ತದೆ. ಯಾವುದೆ ಸಮಾಜ, ಸಮೂದಾಯಗಳಲ್ಲಿ ಅಲ್ಲಿನ ಅಭಿವೃದ್ಧಿಯ ಮುಖ್ಯ ಸೂಚಕವೆಂದರೆ ಮಹಿಳೆಯರ ಸ್ಥಾನಮಾನ. "ಯತ್ರ ನಾರ್ಯಸ್ತು ಪೂಜ್ಯಂತೆರಮಂತ್ಜೆ ತತ್ರ ದೇವತಾಃ" ಅಂತಾ ಮನು ಹೇಳುವ ಹಾಗೆ ಎಲ್ಲಿ ಹೆಣ್ಣು ಪೂಜಿಸಲ್ಪಡುತ್ತಾಳೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ ಎಂದು ಹೇಳಲಾಗುತ್ತಿತ್ತು. ಆದರೆ ಈ ಜಾಗತೀಕರಣ ಮತ್ತು ಆಧುನಿಕ ಸಮಾಜ ವ್ಯವಸ್ಥೆಯಲ್ಲಿ ಎಲ್ಲಿ ಹೆಣ್ಣನ್ನು ಸಮಾನಳಾಗಿ ಕಾಣುತ್ತಾರೊ ಅವಳ ಭಾವನೆಗಳಿಗೆ ಎಲ್ಲಿ ಮಾನ್ಯತೆ ಸಿಗುತ್ತದೆಯೋ ಆ ಸಮಾಜ ಅಭಿವೃದ್ಧಿ ಹೋಂದುತ್ತದೆ ಎಂದು ಅರಿತುಕೊಳ್ಳಬೇಕಾದ ಪರಿಸ್ಥಿತಿಯಲ್ಲಿ ನಾವೆಲ್ಲರು ಇದ್ದೇವೆ ಎಂದರೆ ತಪ್ಪಾಗಲಾರದು. ಸಮಾಜದ ಅರ್ಧದಷ್ಟು ಜನಸಂಖ್ಯೆಯಿರುವ ಮಹಿಳೆಯರು ಅಮೂಲ್ಯ ಮಾನವ ಸಂಪತ್ತು. ದೇಶದ ಸರ್ವಾಂಗೀಣ ಪ್ರಗತಿಗಾಗಿ, ಗೃಹಿಣಿಯರಾಗಿ ಭಾವಿ ಪ್ರಜ್ಞೆಗಳನ್ನು ಹೊತ್ತು ಬೆಳೆಸುವ ತಾಯಂದಿರಾಗಿ ಮಹಿಳೆಯರು ಸಲ್ಲಿಸುತ್ತಿರುವ ಸೇವೆ ಅತೀ ಅಮೋಘವಾದದು. ಆದ್ದರಿಂದ ಸಮಾಜದಲ್ಲಿ ಹೆಣ್ಣು – ಗಂಡು ಇಬ್ಬರು ಸಮಾನರು ಎಂದು ಪರಿಗಣಿಸಬೇಕಾಗುವುದು ನಮ್ಮೆಲ್ಲರು ಜವಾಬ್ದಾರಿಯಾಗಿದೆ.

2.3 ಅಸಂಘಟಿತ ವಲಯದ ದುಡಿಮೆ ಮತ್ತು ಮಹಿಳೆ

"ಉದ್ಯೋಗಂ ಪುರುಷ ಲಕ್ಷಣಂ" ಎಂಬ ನಾಣ್ಣುಡಿಯನ್ನು ಕೇಳಿದರೆ ನಮ್ಮೆಲ್ಲರ ಅರಿವಿಗೂ ಬರುವುದು ಉದ್ಯೋಗದಲ್ಲಿ ಇರುವವನು ಪುರುಷನೇ ಎಂದು. ಮತ್ತು ಇದು ಲಿಂಗ ಸಂಬಂಧಿ ತಾರತಮ್ಯವನ್ನು ಸೂಚಿಸುತ್ತದೆ ಎಂದನಿಸದೆ ಇರದು. ಹೀಗೆ ಮಹಿಳೆಯನ್ನು ದುಡಿಮೆಗಾರಳೆಂದು ಪರಿಗಣಿಸಲು ಸಿದ್ಧವಿಲ್ಲದ ಸಮಾಜವು ಅವಳನ್ನು ಉದ್ಯೋಗಿಯೆಂದು ಪರಿಗಣಿಸುವುದು ದೂರದ ಮಾತಾಯಿತು. ಉದ್ಯೋಗದ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವುದಿಲ್ಲ. ಉದ್ಯೋಗವೆನ್ನುವುದು ಸಾರ್ವಜನಿಕವಾದುದರಿಂದ ಅಲ್ಲಿ ಮಹಿಳೆಯರು ಹೆಚ್ಚಾಗಿ ಕಂಡುಬರುವುದಿಲ್ಲ. ಕುಟುಂಬವನ್ನು ಸುತ್ತಿಕೊಂಡು ಮಹಿಳೆಯರು ಬದುಕು ಬೆಳೆಯುವುದರಿಂದ ಅವಳು ಮನೆಯಿಂದ ಹೊರಗೆ ಹೋಗಿ ದುಡಿಯುವುದನ್ನು ಮೊದಲನೆಯದಾಗಿ ಸಮಾಜವು ಒಪ್ಪಿಕೊಳ್ಳುವುದಿಲ್ಲ ಮತ್ತು ಎರಡನೆಯದಾಗಿ ಮನೆಯಿಂದ ಹೊರಗೆ ಹೋಗಿ ಮಹಿಳೆಯರು ದುಡಿಯುವದಕ್ಕೆ ಸಮಾಜವು ಪ್ರೋತ್ಸಾಹಿಸುವುದಿಲ್ಲ.

ಹಾಗೇನೇ ಉದ್ಯೋಗ ಕ್ಷೇತ್ರವನ್ನು ಪ್ರವೇಶಿಸಲು ಕೆಲವು ಮೂಲಭೂತವಾದ ಅಗತ್ಯಗಳು ಬೇಕಾಗುತ್ತವೆ. ಸಾಕ್ಷರತೆ, ಶಿಕ್ಷಣ, ತರಬೇತಿ ಮುಂತಾದವು ಉದ್ಯೋಗ ಕ್ಷೇತ್ರ ಪ್ರದೇಶಿಸಲು ಅಗತ್ಯವಾದ ಕೆಲವು ಸಂಗತಿಗಳಾಗಿವೆ. ಮನೆಬಿಟ್ಟು ಹೊರಗೆ ಬರಲು ಮೊದಲು ಸಿದ್ಧರಾಗಿರಬೇಕು. ಉದ್ಯೋಗ ಕ್ಷೇತ್ರವನ್ನು ಸಂಘಟಿತ/ಔಪಚಾರಿಕ ಹಾಗೂ ಅಸಂಘಟಿತ/ಅನೌಪಚಾರಿಕ ವಲಯದಲ್ಲಿ ನೆಲೆಗೊಂಡಿರುತ್ತಾರೆ. ಮಹಿಳಾ ದುಡಿಮೆಗಾರರಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿ ಕೃಷಿಯಲ್ಲಿ ಮತ್ತು ಇತರ ಕೈಮಗ್ಗದ ಕೆಲಸಗಳಲ್ಲಿ ನೆಲೆಗೊಂಡಿರುವುದು ನೋಡಬಹುದು. ಸಮಾಜವಿಜ್ಞಾನಗಳು ಕುಟುಂಬವನ್ನು ಉತ್ಪಾದನಾ ಘಟಕವೆಂದು ಪರಿಗಣಿಸಲು ಸಿದ್ಧವಿಲ್ಲ. ಕುಟುಂಬ ಸಂಬಂಧಿ ಚಟುವಟಿಕೆಗಳಲ್ಲಿ ಮಹಿಳೆಯರು ಅಧಿಕಾಧಿಕವಾಗಿ ತೊಡಗಿಕೊಂಡಿರುವುದರಿಂದ ಉದ್ಯೋಗ ಕ್ಷೇತ್ರಗಳಲ್ಲಿ ಅವರು ಹೆಚ್ಚಾಗಿ ಕಂಡುಬರುವುದಿಲ್ಲ. ಅವರ ದುಡಿಮೆಯು ಕಣ್ಣಿಗೆ ಗೋಚರಿಸುವ ಸ್ವರೂಪದ್ದಲ್ಲ. ಆದರೆ ಇಂದು ಪರಸ್ಥಿತಿ ಬದಲಾಗಿದೆ. ಮಹಿಳೆಯರು ದುಡಿಮೆಯ ಕ್ಷೇತ್ರವನ್ನು ಹೆಚ್ಚಾಗಿ ಪ್ರವೇಶಿಸುತ್ತಿದ್ದಾರೆ. ಉದ್ಯೋಗಗಳಲ್ಲಿ ಅವರು ತೊಡಗುತ್ತಿದ್ದಾರೆ. ತಮ್ಮ ಉದ್ಯೋಗದ ಹಕ್ಕನ್ನು ಗಟ್ಟಿಯಾಗಿ ಅವರು ಒತ್ತಾಯಿಸುತ್ತಿದ್ದಾರೆ. ಉದ್ಯೋಗ–ದುಡಿಮೆಗೆ ಸಂಬಂಧಿಸಿದ ಲಿಂಗ ಸಂಬಂಧಿ ತಾರತಮ್ಯಗಳನ್ನು ಮಹಿಳೆಯರು ಇಂದು ಪ್ರತಿಭಟಿಸುತ್ತಿದ್ದರು ಸಹ ಇಂದಿಗೂ ಮಹಿಳೆಯರು ಹೆಚ್ಚಾಗಿ ಅಸಂಘಟಿತ ವಲಯದಲ್ಲಿಯೇ ಕಾಣಿಸಿಕೊಳ್ಳುತ್ತಾರೆ.

ಗ್ರಾಮೀಣ ಪ್ರದೇಶವಾಗಲಿ ಅಥವಾ ನಗರ ಪ್ರದೇಶವಾಗಲಿ ಮಹಿಳಾ ದುಡಿಮೆಗಾರರು ಅತಿ ಹೆಚ್ಚಿನ ಪ್ರಮಾಣದಲ್ಲಿ ಅನೌಪಚಾರಿಕ–ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವುದು ಕಂಡುಬರುತ್ತದೆ. ಸ್ವಯಂ ಉದ್ಯೋಗಿ ಮಹಿಳಾ ದುಡಿಮೆಗಾರರನ್ನು ಕುರಿತಂತೆ ಅಧ್ಯಯನ ಮಾಡಲು ಕೇಂದ್ರ ಸರ್ಕಾರವು ನೇಮಿಸಿದ್ದ ರಾಷ್ಟ್ರೀಯ ಆಯೋಗವು ಸಿದ್ಧಪಡಿಸಿದ ವರದಿ ಶ್ರಮಶಕ್ತಿಯಲ್ಲಿ ಉಲ್ಲೇಖಿಸಿರುವಂತೆ ಮಹಿಳಾ ದುಡಿಮೆಗಾರರಲ್ಲಿ ಶೇ.94%ರಷ್ಟು ಅಸಂಘಟಿತ ವಲಯದಲ್ಲಿದ್ದಾರೆ, ಮಹಿಳಾ ದುಡಿಮೆಗಾರರು ಇಷ್ಟೊಂದು ಪ್ರಮಾಣದಲ್ಲಿ ಅಸಂಘಟಿತ ವಲಯದಲ್ಲಿ ಮುಗಿಬಿದ್ದಿರುವುದಕ್ಕೆ ಕಾರಣಗಳೇನು? ಅನೇಕ

[illegible]

ಅಧ್ಯಯನಗಳು ಸ್ಪಷ್ಟವಾಗಿ ಗುರುತಿಸುವಂತೆ ಇದಕ್ಕೆ ಮಹಿಳಾ ದುಡಿಮೆಗಾರರ ಅಸಹಾಯಕತೆಯ ಗುಣವು ಪ್ರಮುಖ ಕಾರಣವಾಗಿದೆ. ಮತ್ತು ಇದಕ್ಕೆ ಪ್ರಮುಖವಾಗಿ ಮಹಿಳೆಯರಿಗೆ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯನ್ನು ನೀಡಲು ಸಿದ್ಧವಿಲ್ಲದ ಪುರುಷಶಾಹಿಯು ಕಾರಣವಾಗಿದೆ.

೧೯೭೦ ರ ವರೆಗೆ ಮಹಿಳೆಯರ ಕುಟುಂಬ ಸಂಬಂಧಿ ದುಡಿಮೆ ಜವಾಬುದಾರಿಗಳ ಬಗ್ಗೆಯಾಗಲಿ ಅಥವಾ ಅವರ ಆರ್ಥಿಕ-ಮಾರುಕಟ್ಟೆ ಸಂಬಂಧಿ ದುಡಿಮೆ ಬಗ್ಗೆಯಾಗಲಿ ಜ್ಞಾನಶಿಸ್ತುಗಳು-ಸಮಾಜ ವಿಜ್ಞಾನಗಳು-ಅಭಿವೃದ್ಧಿ ಅಧ್ಯಯನ ಗಮನ ಹರಿಸಿರಲಿಲ್ಲ. ಅದೊಂದು 'ಸಮಸ್ಯೆ' ಯೆಂದು ಪರಿಗಣಿತವಾಗಿರಲಿಲ್ಲ. ಅರ್ಥಶಾಸ್ತ್ರ ಮತ್ತು ಅಭಿವೃದ್ಧಿ ಅಧ್ಯಯನಗಳು ಮಹಿಳಾ ದುಡಿಮೆಗಾರರನ್ನು ಪ್ರತ್ಯೇಕ ಘಟಕಗಾರರು ತಮ್ಮ ಸ್ಥಾನಮಾನಗಳ ಬಗ್ಗೆ ಮತ್ತು ಸ್ಥಿತಿಗತಿಗಳ ಬಗ್ಗೆ ಯೋಚಿಸತೊಡಗಿದ್ದಾರೆ. ಜ್ಞಾನಶಿಸ್ತುಗಳಲ್ಲಿ ಇಂತಹ ಸಂಗತಿಗಳನ್ನು ಕುರಿತಂತೆ ಅಧ್ಯಯನಗಳು ನಡೆಯತೊಡಗಿವೆ. ಭಾರತದಲ್ಲಿ ಮಹಿಳೆಯರ ಸ್ಥಾನಮಾನಗಳ ಬಗ್ಗೆ ಅಧ್ಯಯನ ನಡೆಸಲು ಸರ್ಕಾರವು ನೇಮಿಸಿದ್ದ ಸಮಿತಿಯು ಸಿದ್ಧಪಡಿಸಿದ ವರದಿ 'ಟುವರ್ಡ್ಸ್ ಈಕ್ವಾಲಿಟಿ' (೧೯೭೪)ಯು ಮಹಿಳಾ ದುಡಿಮೆಗಾರರ ಬಗ್ಗೆ ಸರ್ಕಾರ ಮತ್ತು ಸಮಾಜ ಗಮನ ಹರಿಸುವಂತೆ ಮಾಡಿದೆ.

ಮಹಿಳೆಯರು ದುಡಿಯುವುದನ್ನು ಅವರು ದುಡಿಮೆಗಾರರಾಗುವುದನ್ನು ಪುರುಷ ಶಾಹಿಯು ವಿರೋಧಿಸುವುದಿಲ್ಲ. ಅವರು ಉದ್ಯೋಗಿಗಳಾಗುವುದನ್ನು ತಡೆಯುವುದಿಲ್ಲ. ವಾಸ್ತವವಾಗಿ ಒಳಗೊಳಗೆ ಅದು ಮಹಿಳೆಯರು ದುಡಿಮೆಗಾರರಾಗುವುದನ್ನು ಬಯಸುತ್ತದೆ, ಪ್ರೋತ್ಸಾಹಿಸುತ್ತದೆ. ಎಲ್ಲಿಯವರೆಗೆ ಮಹಿಳೆಯರ ದುಡಿಮೆ, ಉದ್ಯೋಗವೃತ್ತಿ ಮುಂತಾದವು ಪುರುಷಶಾಹಿಯ ಒಲವು-ನಿಲವುಗಳಿಗೆ ಅನುಗುಣವಾಗಿ ನಡೆಯುತ್ತಿರುತ್ತವೋ ಅಲ್ಲಿಯವರೆಗೆ ಅವುಗಳಿಗೆ ಯಾವುದೇ ವಿರೋಧವಿರುವುದಿಲ್ಲ. ಆದರೆ ಮಹಿಳೆಯರು ತಮ್ಮ ಒಲವು ನಿಲವುಗಳಿಗೆ ಅನುಗುಣವಾಗಿ ಉದ್ಯೋಗಿಗಳಾಗುವುದನ್ನು ಅವರ ವೃತ್ತಿಪರತೆಯನ್ನು ಪುರಷಶಾಹಿಯು ಸಹಿಸುವುದಿಲ್ಲ. ಕುಟುಂಬ ಚೌಕಟ್ಟಿನಲ್ಲಿ ಹೇಗೆ ಮಹಿಳೆಯರು ಪರಾವಲಂಬಿಗಳಿಗಾಗಿರುತ್ತಾರೋ, ತೀರ್ಮಾನ ತೆಗೆದುಕೊಳ್ಳುವಾಗ ಹೇಗೆ ಅಧಿಕಾರದಿಂದ ವಂಚಿತರಾಗಿರುತ್ತಾರೋ ಅದೇ ರೀತಿ ಅವರು ಪ್ರವೇಶಿಸುವ ಉದ್ಯೋಗ ವೃತ್ತಿಗಳಿಗೆ ಸಂಬಂಧಿಸಿರುವಂತೆಯೂ ಇರಬೇಕು. ಎಂದು ಪುರುಷಶಾಹಿ ಬಯಸುತ್ತದೆ. ಅಸಂಘಟಿತ ವಲಯದಲ್ಲಿನ ಮಹಿಳಾ ದುಡಿಮೆಗಾರರ ಬಹು ಮುಖ್ಯಲಕ್ಷಣ ಹಾಗೂ ಅವರ ಶೋಷಣೆಗೆ ಕಾರಣವಾಗಿರುವ ಸಂಗತಿಯೆಂದರೆ ಅವರಿಗೆ ಇರುವ ಅಭದ್ರತೆ ಮತ್ತು ಅಸಹಾಯಕ ಸ್ವಭಾವ.

ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಮಹಿಳೆಯರಿರಲಿ ಅಥವಾ ಪುರುಷರಿರಲಿ, ಅನೇಕ ಸ್ವರೂಪದ ಹಿಂಸೆ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವರ ಅಸಂಘಟನೆಯೇ ಮೊದಲ ಸಮಸ್ಯೆಯಾಗಿದೆ. ದುಡಿಮೆಗಾರರು ಅಸಂಘಟಿಸುತ್ತಿರುವುದರಿಂದ ಅವರನ್ನು ಉಧ್ಯಮಿಗಳು ತಮಗೆ ಬೇಕಾದಂತೆ ದುಡಿಸಿಕೊಳ್ಳುವುದು ಸಾಧ್ಯವಾಗಿದೆ. ಅಸಂಘಟಿತ ದುಡಿಮೆಗಾರರಲ್ಲಿ ಹೆಚ್ಚಿನ ಪ್ರತಿಕೂಲಗಳನ್ನು ಶೋಷಣೆಯನ್ನು ಎದುರಿಸುತ್ತಿರುವ ವರ್ಗವೆಂದರೆ ಮಹಿಳಾ ದುಡಿಮೆಗಾರರು. ರೋಹಿಣಿ ಹೆನ್ಸ್ ಮನ್ (೧೯೯೯ : ೧೮೦-೧೮೫) ಹೇಳುವಂತೆ ಮಹಿಳೆಯರನ್ನು ಕುರಿತಂತೆ ತಾರತಮ್ಯವಾದಿ

[illegible]

[illegible]

[illegible]

[illegible]

ಧೋರಣೆಯು ಸಮಾಜದಲ್ಲಿ ಆಳವಾಗಿ ಬೇರೂರಿರುವಾಗ ಮತ್ತು ಲಿಂಗ ಸಂಬಂಧಗಳನ್ನು ಜೈವಿಕ ನೀತಿಯ ನೆಲೆಯಲ್ಲಿ ಪರಿಭಾವಿಸಿಕೊಂಡಿರುವಾಗ ಉದ್ಯೋಗಕ್ಕೆ ಸಂಬಂಧಿಸಿದಂತೆ ಲಿಂಗ ಸಮಾನತೆ ಸಾಧಿಸಲು ನಡೆಯುವ ಪ್ರಯತ್ನಗಳು ವಿಫಲವಾಗಿಬಿಡುತ್ತದೆ. ಅಸಂಘಟಿತ ವಲಯದಲ್ಲಿ ಮಹಿಳೆಯರ ವೇತನ ಕನಿಷ್ಠ ತಾರತಮ್ಯವಿರುತ್ತದೆ. ಅವರಿಗೆ ದುಡಿಮೆಯ ಅವಕಾಶಗಳು ಸಮಾನವಾಗಿರುವುದಿಲ್ಲ. ಅವರನ್ನು ರಾತ್ರಿಯ ಪಾಳಿಯಲ್ಲಿ ದುಡಿಯಲು ಒತ್ತಾಯಿಸಲಾಗುತ್ತದೆ. ದುಡಿಮೆ ಕ್ಷೇತ್ರದಲ್ಲಿ ಮಹಿಳಾ ದುಡಿಮೆಗಾರರು ಲೈಂಗಿಕ ಹಿಂಸೆಗೆ ಗುರಿಯಾಗಬೇಕಾಗುತ್ತದೆ. ಕೆಲಸದ ಸ್ಥಳಗಳಲ್ಲಿ ಬಾಲವಾಡಿಗಳಿರುವುದಿಲ್ಲ. ಅವರು ಗೃಹವಾರ್ತೆ ಹಾಗೂ ಮನೆಯ ಹೊರಗಿನ ದುಡಿಮೆಗಳನ್ನು ಸರಿದೂಗಿಸಿಕೊಂಡು ಹೋಗಬೇಕಾಗುತ್ತದೆ. ಅವರು ಸಂಚಾರಕ್ಕೆ ಸಂಬಂಧಿಸಿದಂತೆ ಅನೇಕ ಬಗೆಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಹೆರಿಗೆ ಭತ್ಯೆ–ಹೆರಿಗೆ ರಜೆಗಳು ಸೌಲಭ್ಯಗಳಿರುವುದಿಲ್ಲ. ಸಾಮಾಜಿಕ ಭದ್ರತೆಯ ಸೌಲಭ್ಯಗಳಿರುವುದಿಲ್ಲ.

ಮಹಿಳೆಯರ ಅಧೀನ ಸ್ಥಿತಿಗತಿಗಳನ್ನು ಅವರ ಅಸಹಾಯಕ ಸ್ಥಿತಿಯನ್ನು ದುಡಿಮೆಯ ಅನಿವಾರ್ಯತೆಯನ್ನು ಉದ್ಯಮಿಗಳು ತಮ್ಮ ಅನುಕೂಲಕ್ಕೆ ಬಳಸಿಕೊಂಡು ಮಹಿಳಾ ದುಡಿಮೆಗಾರರ ಶೋಷಣೆಯನ್ನು ನಿರಂತರವಾಗಿ ಮುಂದುವರಿಸುತ್ತಾರೆ. ತಮ್ಮ ದೇಹದ ಮೇಲಾಗಲಿ, ತಮ್ಮ ದುಡಿಮೆ ಮೇಲಾಗಲಿ, ತಮ್ಮ ಬುದ್ಧಿಮತ್ತೆ ಮೇಲಾಗಲಿ ಅಧಿಕಾರವಿಲ್ಲದ ಮಹಿಳಾ ದುಡಿಮೆಗಾರರು ಶೋಷಣೆಗೆ ಸುಲಭವಾಗಿ ಬಲಿಯಾಗುತ್ತಾರೆ. 'ಮಹಿಳಾ ದುಡಿಮೆಗಾರರು' ಎಂಬುದೇನು? ಏಕರೂಪ ಅಖಂಡವಾದ ಗುಂಪೇನೂ ಅಲ್ಲ ಅವರನ್ನು ಅಖಂಡ ವರ್ಗವೆಂದು ಪರಿಭಾವಿಸುವುದು ಸಾಧ್ಯವಿಲ್ಲ. ಜಾತಿ–ವರ್ಗ–ಪ್ರದೇಶ, ಶಿಕ್ಷಣ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಭಿನ್ನತೆಗಳು ಇಲ್ಲಿವೆ. ಅಸಂಘಟಿತ ವಲಯಕ್ಕೆ ಸೇರಿದ ಮಹಿಳಾ ದುಡಿಮೆಗಾರರ ಸಮಸ್ಯೆಗಳು ಸಂಘಟಿತ ವಲಯಕ್ಕೆ ಸೇರಿದ ಮಹಿಳಾ ದುಡಿಮೆಗಾರರ ಸಮಸ್ಯೆಗಳಿಗಿಂತ ಭಿನ್ನವಾಗಿರುತ್ತವೆ ಮತ್ತು ಅವು ಹೆಚ್ಚು ಅವಮಾನವೀಯವಾಗಿ ಮತ್ತು ಯಾತನಾಮಯವಾಗಿರುತ್ತವೆ.

ಅಸಂಘಟಿತ ವಲಯದಲ್ಲಿ ಮಹಿಳಾ ದುಡಿಮೆಗಾರರು ತೀವ್ರ ಸ್ವರೂಪದ ಶೋಷಣೆಗೆ ಗುರಿಯಾಗಲು ಕಾರಣವಾಗಿರುವ ವಿಶಿಷ್ಟ ಸಂಗತಿಯೆಂದರೆ ಅವರ ಮೇಲಿನ ಕುಟುಂಬ ಸಂಬಂಧಿ ದುಡಿಮೆಯ ಒತ್ತಡ ಹಾಗೂ ಅವರ ಅನಿವಾರ್ಯತೆ. ಮನೆಯಿಂದ ಹೊರಗೆ ಉತ್ಪಾದನಾ ಘಟಕಗಳಲ್ಲಿ ದುಡಿಯುವುದು ಬಡ ಕುಟುಂಬಗಳ ಮಹಿಳೆಯರಿಗೆ ಅನಿವಾರ್ಯವಾಗಿದೆ. ಆದರೆ ಈ ಬಗೆಯ ದುಡಿಮೆಯನ್ನು ಪೂರ್ಣ ಪ್ರಮಾಣದಲ್ಲಿ ಅವರಿಗೆ ಕೈಗೊಳ್ಳುವುದು ಸಾಧ್ಯವಿಲ್ಲ. ಏಕೆಂದರೆ ಈ ಬಗೆಯ ದುಡಿಮೆಯ ಜೊತೆಗೆ ಅವರು ಕುಟುಂಬ ಸಂಬಂಧಿ ದುಡಿಮೆಯನ್ನು ನಿರ್ವಹಿಸಬೇಕಾಗುತ್ತದೆ.

ನೀರಾದೇಸಾಯಿ (೧೯೬೬–೯೯) ಸ್ಪಷ್ಟವಾಗಿ ಹೇಳುವಂತೆ "ಉದ್ಯೋಗದಲ್ಲಿರುವ ಶಿಕ್ಷಿತ ಮಹಿಳೆಯರ ಸಾಮಾಜಿಕ" ನೆಲೆಯನ್ನು ಪರಿಗಣಿಸಿದಾಗ ಉದ್ಯೋಗ ಮತ್ತು ಸ್ಥಾನಮಾನ(status)ಗಳ ನಡುವೆ ನೇರ ಸಂಬಂಧವನ್ನು ಗುರುತಿಸುವುದು ಸಾಧ್ಯವಿಲ್ಲ. ಶಿಕ್ಷಣವು ಹೇಗೆ ಪ್ರಗತಿಪರ ಮೌಲ್ಯಗಳನ್ನು ಬೆಳೆಸುವುದಿಲ್ಲವೋ, ಮತದಾನದ ಹಕ್ಕು ನೀತಿ ನಿರೂಪಣೆಯಲ್ಲಿ ಸಹಭಾಗಿತ್ವವನ್ನು ಒದಗಿಸುವುದಿಲ್ಲವೋ

ಅದೇ ರೀತಿ ಉದ್ಯೋಗವೃತ್ತಿಯು ಮಹಿಳೆಯರಿಗೆ ಹೆಚ್ಚಿನ ಅಧಿಕಾರ ನೀಡುತ್ತವೆ ಎಂಬುದು ಹುಸಿಯಾಗಿದೆ. ಹೆಚ್ಚಾಗುತ್ತಿರುವ ವರದಕ್ಷಿಣೆ ಸಂಬಂಧಿ ಸಾವುಗಳು. ಅಧಿಕವಾಗುತ್ತಿರುವ ಅತ್ಯಾಚಾರದ ಪ್ರಸಂಗಗಳು, ಕೌಟುಂಬಿಕ ಹಿಂಸೆ ಮುಂತಾದವು ಉದ್ಯೋಗವು ಬಿಡುಗಡೆಯ ಸಾಧನವಾಗಿಲ್ಲ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತೇವೆ.[೨] ಆಧುನೀಕರಣದ ವಿಚಾರ ಪ್ರಣಾಳಿಕೆ ಮತ್ತು ಮಾರ್ಕ್ಸಿಸ್ಟ್ ವಿಚಾರ ಪ್ರಣಾಳಿಕೆಗಳೆರಡೂ ಉದ್ಯೋಗವು ಮಹಿಳೆಯರ ಬಿಡುಗಡೆಯ ಸಾಧನವೆಂಬುದನ್ನು ಗುರುತಿಸಿವೆ, ಸಾಂಪ್ರದಾಯಿಕ ಸಮಾಜವು ಮಹಿಳೆಯರಿಗೆ ಶಿಕ್ಷಣ ಮತ್ತು ಉದ್ಯೋಗದ ಅವಕಾಶಗಳನ್ನು ಒದಗಿಸುವುದಿಲ್ಲ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಶ್ರಮಶಕ್ತಿಯ ಉಗಮವು ಮಹಿಳೆಯರಿಗೆ ಬಿಡುಗಡೆ ಒದಗಿಸುತ್ತದೆ ಎನ್ನಲಾಗಿದೆ. ಹಣಕಾಸಿನ ಕ್ಷೇತ್ರದಲ್ಲಿ ಸ್ವಾತಂತ್ರ್ಯ ಉತ್ಪಾದನೆಗೆ ಸಂಬಂಧಿಸಿದ ತರಬೇತಿ ಮತ್ತು ಆಧುನಿಕ ಮೌಲ್ಯಗಳು ಸಮಾಜದಲ್ಲಿ ಪುರುಷಶಾಹಿಯ ನಿಯಂತ್ರಣ ಮತ್ತು ಅಧಿಕಾರವನ್ನು ನಿರರ್ಥಕಗೊಳಿಸುತ್ತದೆ ಎಂದು ನಂಬಲಾಗಿದೆ. ಆಧುನಿಕರಣ ವಿಚಾರ ಪ್ರಣಾಳಿಕೆ ಪ್ರಕಾರ ಬಂಡವಾಳಶಾಹಿ ವ್ಯವಸ್ಥೆಯು ಮಹಿಳೆಯರಿಗೆ ಬಿಡುಗಡೆ ಒದಗಿಸುತ್ತದೆ.

೨.೪ ಮಹಿಳೆಯ ಔದ್ಯೋಗಿಕ ವಲಯ ಅಸಂಘಟಿತ ಯಾಕೆ

ಔದ್ಯೋಗಿಕ ವಲಯದ ಕುರಿತ ಸಿದ್ಧಾಂತಗಳು ಮಹಿಳೆಯರನ್ನು ಲಿಂಗ ಸಂಬಂಧಗಳಲ್ಲಿ ಹೇಗೆ ಪರಿಭಾವಿಸಿಕೊಂಡಿವೆ, ಹೇಗೆ ಅಂತರ್ಗತ ಮಾಡಿಕೊಂಡಿವೆ ಎಂಬ ಸಂಗತಿಗಳ ಅಧ್ಯಯನ–ಅನುಸಂಧಾನದ ಒಂದು ಕುತೂಹಲಕಾರಿ ಪ್ರಯತ್ನವಾಗಿವೆ. ಮಹಿಳೆ ಮತ್ತು ಔದ್ಯೋಗಿಕ ವಲಯದ ನಡುವಿನ ಸಂಬಂಧಗಳು ತುಂಬಾ ಸಂಕೀರ್ಣವಾಗಿದೆ. ಈ ಸಂಬಂಧ ಬಹುಮುಖಿಯಾಗಿದೆ–ಬಹು ಆಯಾಮಗಳನ್ನು ಹೊಂದಿದೆ. ಔದ್ಯೋಗಿ ವಲಯದ ಕುರಿತ ಸಿದ್ಧಾಂತಗಳೂ 'ಲಿಂಗ ಸಂವೇದಿಯೂ ಆದ ಸಿದ್ಧಾಂತಗಳು ರೂಪಗೊಳ್ಳುತ್ತಿವೆ. ಪುರುಷಶಾಹಿ ಸ್ವರೂಪದಿಂದ ಕೂಡಿರುವ ಸಮಾಜವನ್ನು ಸುಧಾರಿಸಬೇಕು ಎಂಬ ನೆಲೆಯಿಂದ ಅದನ್ನು ಪರಿವರ್ತಿಸಬೇಕು ಎಂಬ ನೆಲೆಗೆ ದುಡಿಮೆ ಕುರಿತ ಸಿದ್ಧಾಂತಗಳು ಸಾಗಿ ಬಂದಿದೆ. ಲಿಂಗ ಸಂಬಂಧಗಳ ವಿಷಯದಲ್ಲಿ 'ಸಹಕಾರಿ' ಧೋರಣೆಯ ನೆಲೆಯಿಂದ ಸಂಘರ್ಷವಾದಿ ನೆಲೆಗೆ ಇಂದು ಅದರ ಜೊತೆಗೆ ಪುರುಷಶಾಹಿಯನ್ನು ನಾಶಮಾಡಬೇಕೆಂಬ ಸಲಹೆ ಪಲ್ಲಟಹೊಂದಿದೆ.

ಆಡಂ ಸ್ಮಿತ್ (೧೭೭೬)ನ ಕಾಲದಿಂದ ಅಮರ್ತ್ಯಸೇನ್‌ವರೆಗೆ ನಡೆದು ಬಂದ ಕಾಲಾವಧಿಯಲ್ಲಿ ದುಡಿಮೆ ಕುರಿತ ಪರಿಭಾವನೆಯು ಅನೇಕ ಬಗೆಯ ಬದಲಾವಣೆಗಳಿಗೆ ಒಳಗಾಗಿದೆ. ಸುಧಾರಣಾವಾದಿ ನೆಲೆಯಿಂದ ಟೀಕಿಸಲಾಗುತ್ತಿತ್ತು. ಇಂದು ಅವುಗಳನ್ನು ಸಂಘರ್ಷಣಾವಾದಿ ನೆಲೆಯಿಂದ ಟೀಕಿಸುವ ಪರಿ ರೂಪುಗೊಂಡಿವೆ. ಮಹಿಳೆಯರ ಸಶಕ್ತೀಕರಣದ ಬಗ್ಗೆ ಮಾತನಾಡಲಾಗುತ್ತಿದೆ. ವಂದನಾಶಿವ (೧೯೮೮), ನೈತಿಕಬೀರ್ (೧೯೯೪) ಮುಂತಾದವರು ಮಹಿಳೆಯರ ನೆಲೆಯಿಂದ (Feminine stand point) ದುಡಿಮೆಯ ಕುರಿತಂತೆ ಮಹಿಳೆಯರನ್ನು 'ಅಖಂಡ'ವಾಗಿ ಪರಿಭಾವಿಸಿಕೊಳ್ಳುವುದಕ್ಕೆ ಪ್ರತಿಯಾಗಿ

ಅವರನ್ನು ಜಾತಿ, ವರ್ಗ, ಪ್ರದೇಶ ಮುಂತಾದ ಖಂಡಸ್ವರೂಪಿ-ವಿಭಕ್ತಿ ಸ್ವರೂಪಿ ನೆಲೆಯಿಂದ ನೋಡಬೇಕು ಎಂಬುವಲ್ಲಿಗೆ ಚರ್ಚೆ ಇಂದು ಬೆಳೆದು ಬಂದಿದೆ. All women are women 'ಎನ್ನುವಲ್ಲಿಗೆ' A women is not only a women" ಎನ್ನುವಲ್ಲಿಗೆ ಚರ್ಚೆ ಬೆಳೆದು ಬಂದಿದೆ."

ದುಡಿಮೆ ಪ್ರಕ್ರಿಯೆಯಲ್ಲಿ ಮಹಿಳೆಯರು ತೊಡಗಿಸಿಕೊಳ್ಳದಿರುವುದರಿಂದ ಅವರಿಗೆ ತೀವ್ರ ಹಾನಿಯಾಗಿದೆ. ಅದರಿಂದ ಅವರ ಜೀವನಮಟ್ಟ ಕೀಳಾಗಿದೆ ಎಂದು ಒಂದು ಕಾಲಕ್ಕೆ ಹೇಳಲಾಗುತ್ತಿತ್ತು. ಆದರೆ ಇಂದು 'ಹಾನಿ'ಯನ್ನು ಕುರಿತು ಚರ್ಚೆ ತಿರುವು ಮುರುವು ಆಗಿದೆ. ದುಡಿಮೆ ಪ್ರಕ್ರಿಯೆಯಲ್ಲಿ ಮಹಿಳೆಯರು ತೀವ್ರವಾಗಿ ತೊಡಗಿಕೊಳ್ಳದಿರುವುದರಿಂದ ಹಾನಿಯಾಗಿರುವುದು ಔದ್ಯೋಗಿಕ ವಲಯಕ್ಕೆ ವಿನಃ ಮಹಿಳೆಯರಿಗಲ್ಲ ಎಂದು ವಾದಿಸಲಾಗುತ್ತಿದೆ. ಆಸಂಖ್ಯೆಯಲ್ಲಿ ಸರಿಸುಮಾರು ಅರ್ಧದಷ್ಟಿರುವ ಮಹಿಳೆಯರ ದುಡಿಮೆ-ಕರ್ತೃತ್ವ ಶಕ್ತಿ ಅನವಶ್ಯಕವಾಗಿ ಪೋಲಾಗುತ್ತಿದ್ದರೆ ಜಡವಾಗಿ ಬಿದ್ದಿದ್ದರೆ ಅವರ ಹಾನಿಯು ದುಡಿಮೆ ಆರ್ಥಿಕತೆಗೆ ತಟ್ಟುತ್ತದೆ. ಮಹಿಳೆಯರಿಗೆ ಉದ್ಯೋಗಬೇಕು ಎಂಬ ಕಾಲ ಹೋಗಿ ಇಂದು ಔದ್ಯೋಗಿಕ ವಲಯಕ್ಕೆ ಮಹಿಳೆಯರು ಬೇಕು ಎನ್ನುವ ಕಾಲ ಬಂದಿವೆ. ಅಂದರೂ ಮಹಿಳೆ ಔದ್ಯೋಗಿಕ ವಲಯ ಅಸಂಘಟಿತವಾಗಿಯೇ ಉಳಿದಿರಲು ಕೆಲವು ಕಾರಣಗಳನ್ನು ಹೀಗೆ. ಗುರುತಿಸಲಾಗಿದೆ.

ಮಹಿಳೆಯರನ್ನು ದುಡಿಮೆಗಾರರೆಂದು, ಆರ್ಥಿಕತೆಗೆ ಅವರ ದುಡಿಮೆಯಿಂದ ಪ್ರಾಪ್ತವಾಗುವ ಕಾಣಿಕೆ ಅಪಾರವಾದುದು ಹಾಗೂ ನಿರ್ಣಾಯಕವಾದುದು ಎಂದು ಸರ್ಕಾರವಾಗಲಿ, ಸಮಾಜವಾಗಲಿ ಪರಿಗಣಿಸಲು ಸಿದ್ಧವಿಲ್ಲ. ಅವರನ್ನು ಕುಟುಂಬಕ್ಕೆ ಸಂಬಂಧಿಸಿದಂತೆ ಗಂಡನಿಗೆ ಸಂಬಂಧಿಸಿದಂತೆ ಪರಿಭಾವಿಸಿಕೊಳ್ಳುವುದು ವಾಡಿಕೆಯಲ್ಲಿದೆ. ಗಂಡ-ಮಕ್ಕಳು-ಅತ್ತೆ-ಮಾವ ಹೀಗೆ ಕುಟುಂಬದ ಸದಸ್ಯರ ಹಿತಾಸಕ್ತಿಗಳನ್ನು ಪೂರೈಸುವುದೇ ಮಹಿಳೆಯರ ದುಡಿಮೆಯ ಪರಮ ಗುರಿಯಾಗಿಸಲಾಗಿದೆ. ಮಹಿಳಾ ದುಡಿಮೆಯು ಪುರುಷರಿಗೆ ಸರಿಸಮಾನವಾಗಿಯೇ ನಮ್ಮ ಮುಂದೆ ಇದ್ದರು ಅವರ ದುಡಿಮೆ ಪ್ರದಾನವೆಂದು ಪರಿಗಣಿಸುವುದಿಲ್ಲ. ಮಹಿಳೆಯರನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಬೇಕೆಂದು ಬಯಸುವ ಪುರುಷಶಾಹಿ ವರ್ಗವು ಅದನ್ನು ದುಡಿಮೆ ಎಂದು ಪರಿಗಣಿಸಲು ಸಿದ್ದವಿಲ್ಲ. ಹಾಗೆನೇ ಮಹಿಳೆಯರು ಏಕಕಾಲಕ್ಕೆ ಅನೇಕ ಬಗೆಯ ಕೆಲಸಗಳನ್ನು ಮಾಡುವುದರಿಂದ ಅವರ ದುಡಿಮೆಯನ್ನು ಕೆಲವೊಮ್ಮೆ ಒಂದೇ ರೀತಿಯ ದುಡಿಮೆಯಲ್ಲಿ ಸೇರಿಸಲಾಗುವುದಿಲ್ಲ. ನಾಗರೀಕತೆಯ ಆರಂಭದಿಂದಲೂ ಬೇಟೆಗಾರಿಕೆ, ಪಶುಪಾಲನೆ, ವ್ಯವಸಾಯ, ಗುಡಿ ಕೈಗಾರಿಕೆ ಇತ್ಯಾದಿ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆ ತನ್ನನ್ನು ತೊಡಗಿಸಿಕೊಂಡಿದ್ದರು ಪುರುಷ ಪ್ರಧಾನತೆಯು ತನ್ನ ಅನುಕೂಲಕ್ಕನುಗುಣವಾಗಿ ಅವಳನ್ನು ಗುರುತಿಸಿಕೊಂಡಿವೆ. ಪಿತೃಪ್ರಧಾನ ಕುಟುಂಬ ರಚನೆಯ ಊರ್ಜಿತಕ್ಕಾಗಿ ಅವಳನ್ನು ಕುಟುಂಬ ಬದ್ಧಳಾಗಿಸುವ ಮೂಲಕ ಹಲವು ಕ್ಷೇತ್ರಗಳಿಂದ ಹಿಂತಿರುಗುವ ಏರ್ಪಾಟು ಮಾಡಿದರೆ, ಇನ್ನೊಂದೆಡೆ ಕುಟುಂಬದೊಳಗೆ ಅವಳನ್ನು ಲಿಂಗಪೂರ್ವಗ್ರಹದಿಂದ ದುಡಿಮೆಗೆ ಹಚ್ಚಲಾಗಿದೆ. ಪಶುಸಂಗೋಪನೆ, ವ್ಯವಸಾಯ ಗುಡಿ ಕೈಗಾರಿಕೆಗಳಲ್ಲಿ ಅವಳ ಮೇಲಿನ ಹಕ್ಕನ್ನು ನಿರಾಕರಿಸಲಾಗಿದೆ. ಅವುಗಳಲ್ಲಿ ಏರ್ಪಡುವ ಆರ್ಥಿಕ ಚಟುವಟಿಕೆಗಳ ಒಡೆತನದಿಂದ ಅವಳನ್ನು ದೂರವಿರಿಸಲಾಗಿದೆ. ಈ ಕ್ಷೇತ್ರದಲ್ಲಿ ಅವಳು ನಿರಂತರ ದುಡಿಯುತ್ತಿದ್ದರೂ ಅದು ಲಿಂಗತಾರತಮ್ಯದ ಶ್ರಮವಿಭಜನೆಯನ್ನು ಆಧರಿಸುವಂತಾಗಿದೆ.

ಆಧುನಿಕ ಸಂಧರ್ಭದಲ್ಲಿ ಏರ್ಪಟ್ಟ ಕೈಗಾರಿಕೀಕರಣ, ನಗರೀಕರಣ ಹಾಗೂ ಶಿಕ್ಷಣಾಧಾರಿತ ಉದ್ಯೋಗಾವಕಾಶಗಳು ಸಾಂಪ್ರದಾಯಿಕ ಉದ್ಯೋಗಾವಕಾಶಗಳನ್ನು ಮೂಲೆ ಗುಂಪಾಗಿಸಿದವು. ಇದರ ಪರಿಣಾಮವಾಗಿ ಒಟ್ಟಾರೆಯಾಗಿಯೇ ಸಮಾಜದ ಬಹುಪಾಲು ಉದ್ಯೋಗ ಕ್ಷೇತ್ರಗಳು ಅತಂತ್ರಗೊಂಡವು ಹಾಗೂ ಅವುಗಳೆಲ್ಲದರ ಪರಿಣಾಮ ಅಂತಿಮವಾಗಿ ಮಹಿಳೆಯ ಮೇಲೆ ಬಿತ್ತು. ಸಾಂಪ್ರದಾಯಿಕ ಉದ್ಯೋಗ ಸ್ಥಳಗಳ ಲಿಂಗಪೂರ್ವಾಗ್ರಹ ಮತ್ತೂ ಹೆಚ್ಚಿತು. ಕೃಷಿ, ಹೈನುಗಾರಿಕೆ, ಗುಡಿ ಕೈಗಾರಿಕೆಗಳು ಅನಾವಶ್ಯಕವಾದ ಬಿಕ್ಕಟ್ಟುಗಳಿಗೆ ಗುರಿಯಾದುದರಿಂದ ಅಲ್ಲಿನ ಮಹಿಳಾ ಶೋಷಣೆ ದ್ವಿಗುಣಗೊಂಡಿತು. ಇದಲ್ಲದೆ ಆಧುನಿಕ ಸಮಾಜದ ಅಗತ್ಯವಾಗಿ ಹುಟ್ಟಿಕೊಂಡ ಹಲವಾರು ಪೂರಕ ಕ್ಷೇತ್ರಗಳು –ಬಿಡಿ, ಸಿಗರೇಟ ಗಣಿಗಾರಿಕೆ ಇತ್ಯಾದಿಗಳು ಹೆಚ್ಚಿನ ವಹಿವಾಟನ್ನು ನಡೆಸುತ್ತಿದ್ದರೂ ಅವು ಅಸಂಘಟಿತ ಸ್ವರೂಪದಲ್ಲೆ ಉಳಿದವು. ಹೆಚ್ಚಿನ ಶಿಕ್ಷಣ, ತರಬೇತಿ ಹೊಂದಿಲ್ಲದ ಕೂಲಿ ಕಾರ್ಮಿಕರಾಗಿ ದುಡಿಯುವ ಇಲ್ಲಿನ ಮಹಿಳೆಯರು ಗ್ರಾಮಗಳಿಗಿಂತ ಕಡಿಮೆಯಾದ ಕೊಳೆಗೇರಿಗಳ ಪ್ರಜೆಗಳಾಗಬೇಕಾಯಿತು. ಹೆಚ್ಚಿನ ದುಡಿಮೆ ಕಡಿಮೆ ಕೂಲಿ, ಅನಾರೋಗ್ಯಕರ ಕೆಲಸದ ವಾತಾವರಣ, ನಿರ್ಲಕ್ಷಕ್ಕೊಳಗಾದ ಕೌಟುಂಬಿಕ ಬದುಕು ಇವರನ್ನು ದಾರುಣವಾಗಿಸಿತು. ಇಂತಹ ಅಸಹಾಯಕ ಸ್ಥಿತಿಯಲ್ಲಿ ಇವರ ಮೇಲಿನ ಲೈಂಗಿಕ ಹಲ್ಲೆಗಳು ವಿಪರೀತವಾದವು. ಕುಡಿತದಂತಹ ದುಶ್ಚಟಗಳಿಗೆ ಬಲಿಯಾದ ಗಂಡಂದಿರ ಹೊಡೆತ ಇವರ ದಿನ ನಿತ್ಯದ ಆಹಾರವಾಯಿತು.

ಇತ್ತೀಚಿನ ದಿನಗಳಲ್ಲಿ ಜಾಗತೀಕರಣದ ಪ್ರಭಾವವು ಮಧ್ಯಮವರ್ಗಗಳ ಹಿತಾಸಕ್ತಿಯನ್ನು ವ್ಯಾಪಿಸುತ್ತಿದ್ದು ಅದರಲ್ಲಿ ಮೇಲು ಮಧ್ಯಮವರ್ಗ ಹಾಗೂ ಕೆಳಮಧ್ಯಮ ವರ್ಗಗಳ ನಡುವೆ ಸ್ಪಷ್ಟ ಭಿನ್ನತೆಗಳು ಕಾಣುತ್ತೇವೆ. ಇದು ಕೆಳಮಧ್ಯಮವರ್ಗದ ಉದ್ಯೋಗಿಗಳ ಕೆಳವರ್ಗಗಳ ಜೊತೆಗಿನ ಸಂಭಾಷಣೆಯನ್ನು ಸಾಧ್ಯವಾಗಿಸುತ್ತದೆ ಮಹಿಳಾ ಚಳುವಳಿಗಳು ಅಸಂಘಟಿತ ಕ್ಷೇತ್ರದ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುವಂತೆ ಮಾಡುತ್ತಿವೆ. ಜಾಗತೀಕರಣ, ಖಾಸಗೀಕರಣದಿಂದಾಗಿ ಇದುವರೆಗೂ ಸಂಘಟಿತ ಕ್ಷೇತ್ರವೆಂದು ಕರೆಯಲ್ಪಡುತ್ತಿದ್ದ ಹಲವು ಉದ್ಯೋಗ ಕ್ಷೇತ್ರಗಳು ಕೂಡ ಇಂದು ಅಸಂಘಟಿತ ವಲಯದ ಅಭದ್ರತೆಯನ್ನು ಅನುಭವಿಸಬೇಕಾಗಿದೆ.

ಹೀಗಾಗಿ ಅಸಂಘಟಿತ ಕ್ಷೇತ್ರದ ಮಹಿಳೆಯ ಸಮಸ್ಯೆಗಳು ಮಧ್ಯಮ ವರ್ಗಗಳಿಗೆ ಗ್ರಾಹ್ಯವಾಗ ತೊಡಗಿವೆ. ಹೀಗಾಗಿ ಅವು ಕಳೆದ ಹತ್ತು ವರ್ಷಗಳಿಂದ ಅಸಂಘಟಿತ ಕ್ಷೇತ್ರದ ಮಹಿಳೆಯರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಡಲು ತೊಡಗಿವೆ. ಇದೆಲ್ಲದರ ಪರಿಣಾಮವಾಗಿ ತಮ್ಮ ಮೇಲೆ ನಡೆಯುತ್ತಿರುವ ದೌರ್ಜನ್ಯಗಳಲ್ಲಿ ಕೆಲವು ಬಂಡವಾಳಶಾಹಿ ಧೋರಣೆಯಿಂದ ಆದವಾದರೆ ಇನ್ನೂ ಕೆಲವು ಪಿತೃಪ್ರಧಾನತೆಯಿಂದ ಪ್ರೇರಿಕವಾದವು ಎಂಬ ಅಂಶ ಗೋಚರಿಸುತ್ತಿವೆ. ಅವು ವರ್ಗ ಸಂಘಟನೆಯಲ್ಲಿನ ಲಿಂಗತಾರತಮ್ಯ ಧೋರಣೆಯನ್ನು ಪ್ರಶ್ನಿಸುವ ಮೂಲಕ ಅವುಗಳೊಂದಿಗಿನ ತಮ್ಮ ಭಿನ್ನಾಭಿಪ್ರಾಯವನ್ನೂ ಮಂಡಿಸುವ ಸ್ಥಿತಿಗೆ ತಲುಪುತ್ತಿವೆ.

ಮೇಲಿನ ಎಲ್ಲಾ ಹೋರಾಟದ ಫಲವಾಗಿ ಸ್ವತಂತ್ರ್ಯಭಾರತದಲ್ಲಿ ಕಾಲಾನುಕ್ರಮದಲ್ಲಿ ಹಲವಾರು ಕಾಯ್ದೆಗಳು ಜಾರಿಗೆ ಬಂದಿವೆ. ಹಾಗೂ ಇವುಗಳಲ್ಲಿ ಹೆಚ್ಚಿನವು ಸಂವಿಧಾನಾತ್ಮಕ ಸಮಾನ ಹಕ್ಕುಗಳ

ನೆಲೆಯಲ್ಲಿ ನಿರ್ವಹಣೆಗೊಳ್ಳುವುದಾಗಿದ್ದು ಉದ್ಯೋಗದ ಅವಕಾಶಗಳು, ಕೆಲಸದ ವಾತಾವರಣ ಇತ್ಯಾದಿಯಲ್ಲಿ ಲಿಂಗತಾರತಮ್ಯ ಇರಬಾರದು ಎಂಬುದನ್ನು ಆಧರಿಸಿದ್ದಾದರೆ, ಇನ್ನೂ ಕೆಲವು ಮಹಿಳೆಗಿರುವ ಭಿನ್ನತೆಯ ಕಾರಣಕ್ಕಾಗಿ ಅವಳಿಗೆ ಕೊಡಬೇಕಾದ ವಿಶಿಷ್ಟ ಸವಲತ್ತನ್ನು ಆಧರಿಸಿದ್ದಾಗಿದೆ. ಅವುಗಳಲ್ಲಿ ಕನಿಷ್ಟ ಕೂಲಿ ಕಾಯ್ದೆ, ಸಮಾನ ವೇತನ ಕಾಯ್ದೆ ಇತ್ಯಾದಿಗಳು ಲಿಂಗನಿರಪೇಕ್ಷವಾಗಿರಬೇಕು ಎಂದಾದರೆ ಹೆರಿಗೆ ರಜೆಯ ಸವಲತ್ತು, ಗಣಿಗಾರಿಕೆ ಮುಂತಾದ ಸ್ಥಳಗಳಲ್ಲಿ ಮಹಿಳೆಯರ ಉದ್ಯೋಗ ಸ್ಥಾನವನ್ನು ನಿರ್ದಿಷ್ಟ ಪಡೆಸುವ ಕಾಯ್ದೆಗಳು, ಅವಳಿಗೆ ಉದ್ಯೋಗ ಸ್ಥಳದಲ್ಲಿ ತೋರಬೇಕಾದ ವಿಶೇಷ ಸಂಸ್ಥೆಯನ್ನು ಆಧರಿಸಿದ್ದಾಗಿದೆ. ಇದಲ್ಲದೆ ಅಸಂಘಟಿತ ಕ್ಷೇತ್ರದ ಮಹಿಳೆಯರ ಕೆಲಸದ ಸ್ಥಿತಿ ಸುಧಾರಿಸುವ ಸಲುವಾಗಿಯೇ ಕಾರ್ಖಾನೆ ಕಾಯ್ದೆ, ಬೀಡಿ ಮತ್ತು ಸಿಗರೇಟ್ ಕೆಲಸಗಾರರ ಕಾಯ್ದೆ ಪ್ಲಾಂಟೇಷನ್ ಕಾರ್ಮಿಕರ ಕಾಯ್ದೆ ಇತ್ಯಾದಿಗಳಲ್ಲಿ ವಿಶೇಷ ಪ್ರಸ್ತಾಪ ಮಾಡಲಾಗಿದೆ.

ಇಷ್ಟಾದರೂ ಕೂಡ ವೇತನ ತಾರತಮ್ಯ, ಉದ್ಯೋಗಾವಕಾಶಗಳಲ್ಲಿ ತಾರತಮ್ಯ ಉದ್ಯೋಗ ಸ್ಥಳದಲ್ಲಿ ಲೈಂಗಿಕ ಕಿರುಕುಳ, ಅತಿಯಾದ ದುಡಿಮೆ ಅಭದ್ರತೆಗಳು ಮಹಿಳಾ ಉದ್ಯೋಗಿಗಳ ಸಂಧರ್ಭದಲ್ಲಿ ಅನುದಿನದ ಸಮಸ್ಯೆಯಾಗಿಯೇ ಉಳಿದುಕೊಂಡಿವೆ. ಈ ಸಮಸ್ಯೆಯನ್ನು ಬಂಡವಾಶಾಹಿ, ಜಾಗತೀಕರಣ ಮುಂತಾದವು ಪ್ರಭಾವಿಸುತ್ತಿದ್ದರೂ ಅದೆಲ್ಲದರ ಜೊತೆಗೆ ಗಮನಿಸಬೇಕಾದ ಅಂಶ ಮತ್ತೊಂದಿದೆ. ಅದು ಮಹಿಳಾ ಉದ್ಯೋಗವೆಂದರೆ ಏನು? ಎಂಬುದನ್ನು ಪುನರ್ ವ್ಯಾಖ್ಯಾನಿಸಿಕೊಂಡು ಅದರ ವ್ಯಾಪ್ತಿ ವೈವಿಧ್ಯತೆಗಳನ್ನು ಗುರುತಿಸಿಕೊಂಡು ಅವನ್ನೆಲ್ಲ ಒಳಗೊಂಡಂತೆ ಈಗಿರುವ ಕಾನೂನುಗಳನ್ನು ಕ್ರೋಢೀಕರಿಸಿ ಅದರ ಓರೆಕೋರೆಗಳನ್ನು ತಿದ್ದಿ ವ್ಯಾಪಕವಾದ ಕಾನೂನೊಂದನ್ನು ಜಾರಿಗೆ ತರಬೇಕಿದೆ. ಇದಕ್ಕೆ ಪೂರಕವಾಗಿ ಮಹಿಳಾ ಅಧ್ಯಯನಗಳು, ಚಳುವಳಿಗಳು ರೂಪುಗೊಳ್ಳಬೇಕಿದೆ. ನೈಸರ್ಗಿಕವಾಗಿ ಆಕೆ ನಿರ್ಮಿಸುವ ಸಂತಾನೋತ್ಪತ್ತಿಯಿಂದ ಹಿಡಿದು ಶಿಶುಪಾಲನೆ, ಗೃಹವಾರ್ತೆ, ಸಾಂಸ್ಕೃತಿಕ ಜವಾಬ್ದಾರಿಗಳನ್ನು ಒಳಗೊಂಡಂತೆ ಅಧಿಕಾರೇತರ ಸ್ಥಾನದಲ್ಲಿ ನಿಂತು ನಿರ್ವಹಿಸುವ ಎಲ್ಲ ಯೋಗಕ್ಷೇಮಗಳ ನಡುವೆ ಪೂರಕ ಸಂಬಂಧವೊಂದನ್ನು ರೂಪಿಸಬೇಕಾಗಿದೆ.

ಟಿಪ್ಪಣಿಗಳು

೧. ಮಹಿಳಾ ಅಧ್ಯಯನ ಭಾಗ–೩, ಡಾ. ಎಚ್.ಎಂ.ಹೇಮಲತಾ, ಪು.ಸಂ. ೩೯

೨. ಮಹಿಳಾ ಆರ್ಥಿಕತೆ ಮತ್ತು ಅಭಿವೃದ್ಧಿ, ಡಾ. ಟಿ. ಆರ್. ಚಂದ್ರಶೇಖರ್, ಪು.ಸಂ. ೧೧೯

೩. ಮಹಿಳಾ ಆರ್ಥಿಕತೆ ಮತ್ತು ಅಭಿವೃದ್ಧಿ, ಡಾ. ಟಿ. ಆರ್. ಚಂದ್ರಶೇಖರ್, ಪು.ಸಂ. ೧೩೭

ಅಧ್ಯಾಯ : ಮೂರು

ಗಾರ್ಮೆಂಟ್ಸ್ ಉದ್ಯಮದಲ್ಲಿ ಮಹಿಳಾ ಕಾರ್ಮಿಕರು

ಅಧ್ಯಾಯ : ಮೂರು

ಗಾರ್ಮೆಂಟ್ಸ್ ಉದ್ಯಮದಲ್ಲಿ ಮಹಿಳಾ ಕಾರ್ಮಿಕರು

೩.೧ ಗಾರ್ಮೆಂಟ್ಸ್ ಉದ್ಯಮ : ಒಂದು ಪ್ರಸ್ತಾವನೆ:

"ಟೆಕ್ಸ್‌ಟೈಲ್ಸ್ ಮತ್ತು ಗಾರ್ಮೆಂಟ್ಸ್" ಜಗತ್ತಿನಾದ್ಯಂತ ಇರುವ ದೊಡ್ಡ ಕೈಗಾರಿಕೋದ್ಯಮ. ಪ್ರಪಂಚದಾದ್ಯಂತ ಅನೇಕ ಮಿಲಿಯನ್ ಪ್ರಮಾಣದಲ್ಲಿ ಇರುವ ಕಾರ್ಮಿಕರಲ್ಲಿ ಬಹುಪಾಲು ಮಹಿಳೆಯರೇ ಈ ಕೈಗಾರಿಕೋದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ. ರಫ್ತು ಮಾಡುವುದಕ್ಕೋಸ್ಕರನೇ ಪ್ರತಿಯೊಂದು ದೇಶದಲ್ಲಿ ಈ ಬಟ್ಟೆ ತಯಾರಿಕೆ ನಡೆಯುತ್ತಿದೆ.

ಮಹಿಳೆಯರೇ ತಮ್ಮನ್ನು ತೊಡಗಿಸಿಕೊಂಡ ಮೊದಲ ಕೈಗಾರಿಕೋದ್ಯಮ ಇದಾಗಿದೆ. ಹೀಗಾಗಿ ಗಾರ್ಮೆಂಟ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಆರ್ಥಿಕ ಹಕ್ಕನ್ನು ಕೇಳುವುದಕ್ಕೆ ಪ್ರಾರಂಭಿಸಿದ್ದು ಇಲ್ಲಿಯೆ. ೧೯೦೮ ಮಾರ್ಚ್ ೮ ರಂದು ಸೂಜಿ ಹಿಡಿದ ಕಾರ್ಮಿಕರು ನ್ಯೂಯಾರ್ಕ್ ಪಟ್ಟಣದಲ್ಲಿ ಮುಷ್ಕರ ಮಾಡಿದರು. ಹೀಗಾಗಿ ಮಾರ್ಚ್ ೮ ರಂದು ಅಂತಾರಾಷ್ಟ್ರೀಯ ಮಹಿಳಾ ದಿನವಾಗಿ ಆಚರಿಸಲ್ಪಡುತ್ತಿದೆ. ೧೯೧೧ ರಲ್ಲಿ ಮೊದಲ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಾದ ಒಂದು ವಾರದ ನಂತರ ನ್ಯೂಯಾರ್ಕ್‌ನ ಬಟ್ಟೆ ಕಾರ್ಖಾನೆಯೊಂದರಲ್ಲಿ ಬೆಂಕಿ ಅನಾಹುತದಿಂದಾಗಿ ೧೪೦ ಜನ ಯುವ ಮಹಿಳಾ ಕಾರ್ಮಿಕರು ಮರಣವನ್ನಪ್ಪಿದರು. ಈ ದುರಂತವನ್ನು ಇಂದಿಗೂ ನೆನಪಿಸಿಕೊಳ್ಳಲಾಗುತ್ತಿದೆ.

೧೯೧೯ ರಲ್ಲಿ ಮೆಸಾಚ್ಯುಸೀಟ್ಸನ ಬಟ್ಟೆ ಕಾರ್ಖಾನೆಯ ಕಾರ್ಮಿಕರು "ಬ್ರೆಡ್ ಅಂಡ್ ರೋಸಸ್ ಎಂಬ ಬೇಡಿಕೆ ಮುಂದಿಟ್ಟು ಕೆಲಸ ಬಿಟ್ಟು ತೆರಳಿದರು. ಬದುಕುವುದೆಂದರೆ ಸುಮ್ಮನೇ ಜೀವಂತವಾಗಿರುವುದಲ್ಲ ಎಂಬುದನ್ನು ಸ್ಪಷ್ಟಪಡಿಸಿದ. ಈ ಹೋರಾಟದಲ್ಲಿ ಬೇಡಿಕೆಗಳು ಮಹಿಳಾ

[illegible]

[illegible]

[illegible]

[illegible]

[illegible]

[illegible]

ಚಳುವಳಿಗಳು ಮುಖ್ಯ ಅಂಶವಾಗಿದ್ದವು. ಅಲ್ಲಿಂದ ಇಲ್ಲಿಯವರೆಗೆ ಹೋರಾಟ ನಡೆಸುತ್ತಲೇ ಗಾರ್ಮೆಂಟ್ಸ್ ಮತ್ತು ಟೆಕ್ಸ್‌ಟೈಲ್ ಕಾರ್ಮಿಕರು ಕಾರ್ಖಾನೆಗಳಲ್ಲಿ ದುಡಿಯುತ್ತಲೇ ಬಂದಿದ್ದಾರೆ.

ಸಿದ್ಧ ಉಡುಪುಗಳ ಕಾರ್ಖಾನೆ ಮಹಿಳಾ ಉದ್ಯೋಗದ ಅವಕಾಶವನ್ನು ಪ್ರೋತ್ಸಾಹಿಸುತ್ತಿದೆ ಎಂಬ ತಪ್ಪು ತಿಳಿವಳಿಕೆ ಇದೆ. ಆದರೆ ಮಹಿಳೆಯರಲ್ಲಿ ಸಾಮಾಜಿಕ ಕಾರಣದಿಂದ ರೂಪಗೊಂಡ ಅವರ ವಿಧೇಯತೆಯೇ ಈ ಕೈಗಾರಿಕೆಯ ಬೆನ್ನೆಲುಬಾಗಿ ಉಳಿದಿದೆ. ಭಾರತದಲ್ಲಿ ಕೃಷಿಯ ನಂತರದಲ್ಲಿ ಸಿದ್ಧ ಉಡುಪುಗಳ ಕಾರ್ಖಾನೆಯೇ ಅತಿದೊಡ್ಡ ಕೈಗಾರಿಕೆಯಾಗಿ ರೂಪಗೊಂಡಿದೆ. ಪ್ರಾರಂಭದಲ್ಲಿ ಸಾಂಪ್ರದಾಯಕವಾಗಿದ್ದ ಶ್ರಮದ ನೈಪುಣ್ಯವನ್ನ ಆಧರಿಸಿ ಈ ಕೈಗಾರಿಕೆ ಭಾರತದಲ್ಲಿ ನಡೆಯುತ್ತಿತ್ತು. ಸ್ಥಳೀಯ ಗ್ರಾಹಕರಿಗಾಗಿ ಮಾತ್ರ ಸಿದ್ಧ ಉಡುಪುಗಳ ಉತ್ಪಾದನೆಯನ್ನು ಮಾಡಲಾಗಿತ್ತು. ಆದರೆ ಸ್ಥಳೀಯ ಮಾರುಕಟ್ಟೆಗಳ ಬೇಡಿಕೆಯನ್ನು ಪೂರೈಸುವುದಕ್ಕಾಗಿ ಮಾತ್ರ ಉತ್ಪಾದನೆಯ ಟಾರ್ಗೆಟ್ಸ್ ಅನ್ನು ನಿಗದಿಪಡಿಸಲಾಗುತ್ತಿತ್ತು. ಆದರೆ ಜಾಗತೀಕರಣದ ಹಿನ್ನಲೆಯಲ್ಲಿ ಪ್ರಪಂಚದ ಮಾರುಕಟ್ಟೆ ಜೊತೆ ಕೊಂಡಿಗಳನ್ನು ಹೊಂದಿರುವ ಕಾರ್ಖಾನೆಗಳು ೨೦೦೫ ರಲ್ಲಿ ಎಂ.ಎಫ್.ಎ. ಕೋಟಾ ವ್ಯವಸ್ಥೆ ಹೋದ ಮೇಲೆ ಇದರ ಎಲ್ಲಾ ಲಾಭವನ್ನು ಉತ್ಪಾದಕರು ಪಡೆದುಕೊಳ್ಳಲಾರಂಭಿಸಿ ಮಹಿಳಾ ಕಾರ್ಮಿಕರ ಮೇಲೆ ಹೆಚ್ಚಿನ ಕೆಲಸದ ಹೊರೆ ಹಾಕಲಾರಂಭಿಸಿದರು

ಉದಾಹರಣೆಗೆ ರೈವರವರು ಹೇಳುವಂತೆ ಬೆಂಗಳೂರನ್ನು ಸಿಲಿಕಾನ್ ಸಿಟಿ ಎನ್ನುವ ಬದಲು ಗಾರ್ಮೆಂಟ್ ಸಿಟಿಯೆಂದು ಕರೆಯಬಹುದಾಗಿದೆ. ಕರ್ನಾಟಕ ಸರ್ಕಾರ ೬ ಅಪ್ಪಾರಲ್ ಪಾರ್ಕ್‌ಗಳನ್ನು ದಾವಣಗೇರ, ಹಾರೋಹಳ್ಳಿ, ದೊಡ್ಡಬಳ್ಳಾಪುರ, ಬೀದರ್, ಬಳ್ಳಾರಿಯಲ್ಲಿ ಈಗಾಗಲೇ ಪ್ರಕಟ ಮಾಡಿದೆ. ೨೦೦ ರಿಂದ ೫೦೦ ಎಕರೆ ಪ್ರದೇಶಗಳಲ್ಲಿ ನೇಯ್ಗೆ, ನೂಲುವುದು, ಬ್ಲಿಚಿಂಗ್, ಎಂಬ್ರಾಯಡ್, ಟೈಲಾರಿಂಗ್ ಎಲ್ಲಾ ಯುನಿಟ್ಸ್‌ಗಳನ್ನು ಒಂದೇ ಕಡೆ ಮಾಡುವುದು ಇದರ ಉದ್ದೇಶ. ಈ ಯೂನಿಟ್ಸ್‌ಗಳು ಸಹ ಕಾರ್ಖಾನೆಗಳಂತೆ ರಫ್ತಿನ ದಿನಾಂಕ ಹಾಗೂ ಫ್ಯಾಷನ್ ಬೇಡಿಕೆಗಳಿಂದ ನಿಯಂತ್ರಿಸಲ್ಪಡುತ್ತವೆ. ಆದರೆ ಕಾರ್ಮಿಕರ ಸ್ಥಿತಿಗತಿಗಳು, ಅವರ ಕೆಲಸದ ಅಭದ್ರತೆ, ನೈಪುಣ್ಯ ಎಲ್ಲವೂ ಕೂಡಾ ಈ ಸಂದರ್ಭದಲ್ಲಿ ಹೇಗೆ ಅಪಾಯದ ಸವಾಲನ್ನು ಎದುರಿಸಬಲ್ಲವು ಎಂಬ ಚರ್ಚೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುವುದಿಲ್ಲ. ವಿದೇಶಿ ಕರನ್ಸಿ ಲಾಭಾಂಶಗಳ ಮೇಲೆ ಮಾತ್ರ ಕಣ್ಣಿಟ್ಟಿರುವ ಸರ್ಕಾರಗಳು, ಉತ್ಪಾದಕರು ಈ ವ್ಯವಸ್ಥೆಯಡಿ ಮಹಿಳಾ ಕಾರ್ಮಿಕರು ಮೂಲೆ ಗುಂಪಾಗಿರುವುದನ್ನು ಗಮನಿಸುವುದೇ ಇಲ್ಲ.

ಕೋಟಾ ವ್ಯವಸ್ಥೆ ಇದ್ದಾಗ ಉತ್ಪಾದನೆಯ ಒತ್ತಡಗಳು ಅಷ್ಟಾಗಿ ಕಾರ್ಮಿಕರ ಮೇಲೆ ಇರುತ್ತಿರಲಿಲ್ಲ. ಈಗ ಜಾಗತೀಕರಣವು ಮುಕ್ತವಾದ ಸ್ಪರ್ಧೆ ಏರ್ಪಡಿಸಿದೆ. ಉತ್ಪಾದನೆಯ ಒತ್ತಡಗಳು ಹೆಚ್ಚಾದ ಹಾಗೆ ಕಾರ್ಮಿಕರ ಮೇಲೆ ಹೊರೆಗಳು ಅಧಿಕವಾಗುತ್ತಿವೆ. ನಿಗದಿಪಡಿಸಿದ ಟಾರ್ಗೆಟ್ ಮುಗಿಸುವುದಕ್ಕೆ ೧೦–೧೨ ಘಂಟೆಗಳ ಕೆಲಸವನ್ನು ಕಾರ್ಮಿಕರು ಮಾಡಬೇಕಾಗುತ್ತದೆ. ಓ.ಟಿಯನ್ನು ಕೂಡ ಹೆಚ್ಚುವರಿ ವೇತನವಿಲ್ಲದೇ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಟೈಪಿಂಗ್‌ಮಿಷಿನ್, ಕಾಲರ್‌ಟಾಪ್, ಕಟ್ ಪ್ಯಾಕೇಟ್, ಯಂತ್ರಗಳು 'ಹೆಲ್ಪರ್ಸ್'ನ್ನು ಈಗಾಗಲೇ ನಿರುದ್ಯೋಗಿಗಳನ್ನಾಗಿಸಿವೆ. ಮೊದಲು ೨೦ ಬ್ಯಾಚುಗೆ ೧೦ ಜನ 'ಹೆಲ್ಪರ್ಸ್' ಕೆಲಸ ಮಾಡುತ್ತಿದ್ದರು. ಈಗ ಸಣ್ಣ ಪುಟ್ಟ ಕಾರ್ಖಾನೆಗಳು ಹೇಳ ಹೆಸರಿಲ್ಲದಂತೆ ಮುಚ್ಚಿ ಹೋಗುತ್ತಿವೆ. ಕ್ವಾಲಿಟಿ, ಪ್ರೊಡಕ್ಷನ್ ಇವೆರಡರ ಒತ್ತಡಗಳ ಹಿನ್ನೆಲೆಯಲ್ಲಿ ಬಹುಮಂದಿ ಕಾರ್ಮಿಕರು ಕೆಲಸದ ಭದ್ರತೆ ಲಕ್ಷಿಸದೇ ಬೇರೆ ಬೇರೆ ಕಾರ್ಖಾನೆಗಳಿಗೆ ಅಲೆದಾಡುವಂತಾಗುತ್ತಿದೆ.

ಹಳ್ಳಿಯಿಂದ ಪಟ್ಟಣಕ್ಕೆ ಕೆಲಸ ಅರಸಿ ಬರುವ ಬಡ ಹೆಣ್ಣು ಮಕ್ಕಳೇ ಇರುವ ಗಾರ್ಮೆಂಟ್ಸ ನಲ್ಲಿ ಹೆಚ್ಚು ಮಂದಿ ಮಹಿಳೆಯರ ಗಂಡಂದಿರನ್ನು ನಿರುದ್ಯೋಗಿಗಳನ್ನಾಗಿಸುತ್ತವೆ. ಈ ರೀತಿಯ ನಿರುದ್ಯೋಗ ವ್ಯವಸ್ಥೆಯಿಂದ ಕೌಟುಂಬಿಕ ಕಲಹಗಳು ಸಹಜವಾಗಿ ಕಂಡು ಬರುತ್ತವೆ. ಈ ಹಿನ್ನಲೆಯಲ್ಲಿ ಮಹಿಳಾ ಉದ್ಯೋಗಿಗಳು ಕುಟುಂಬದಲ್ಲಿ ಒಳಗೆ ಹಾಗೂ ಕಾರ್ಖಾನೆಯ ಒಳಗೆ ಇವರು ಅನುಭವಿಸುವ ಸ್ಥಿತಿ ತುಂಬಾ ಶೋಚನೀಯವಾಗಿವೆ.

ಸಂಬಳದ ದಿನದಂದು ಮಹಿಳೆಯರ ಗಂಡಂದಿರು ಗಾರ್ಮೆಂಟ್ಸ್ ಕಾರ್ಖಾನೆಯ ಬಳಿ ಸಾಲುಗಟ್ಟಿ ನಿಂತಿರುತ್ತಾರೆ. ಏಕೆಂದರೆ ಅವಳು ದುಡಿದ ಹಣ ಅವರಿಗೆ ಸೇರಬೇಕು. ಇಂಥ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಬದುಕುವ ಈ ಮಹಿಳಾ ಉದ್ಯೋಗಿಗಳ ಕನಿಷ್ಠ ವೇತನದಲ್ಲಿಯೇ ೧೬-೨೦ ವರ್ಷ ದುಡಿದರೂ ಪಿ.ಎಫ್., ಇ.ಎಸ್.ಐ ಕಳೆದು ೩೦೦೧ ರೂ ತೆಗೆದುಕೊಳ್ಳುವ ಮಹಿಳಾ ಕಾರ್ಮಿಕರು ಬೆಂಗಳೂರಂತಹ ನಗರದಲ್ಲಿ ಜೀವನ ಹೇಗೆ ಸಾಗಿಸಬಹುದು ಎಂಬುದನ್ನು ಯೋಚಿಸಲು ಕಷ್ಟವಾಗುತ್ತದೆ. ಜಾಗತೀಕರಣದ ಸ್ಪರ್ಧೆಯಲ್ಲಿ ಗ್ಲೋಬಲ್ ಮಾರ್ಕೆಟ್ ಸ್ಟ್ಯಾಂಡರ್ಡ ಉಳಿಸಿಕೊಳ್ಳಲು ಹೋರಾಡುವ ಬಂಡವಾಳ ಶಾಹಿಗಳು ಕಡಿಮೆ ಶ್ರಮದ ಕೂಲಿಯಲ್ಲಿ ಅಧಿಕ ಟಾರ್ಗೆಟ್ಸ್‌ನ ಗುರಿ ಮುಟ್ಟುವುದಕ್ಕೆ ಮಹಿಳಾ ಕಾರ್ಮಿಕರನ್ನೆ ನೆಚ್ಚಿಕೊಂಡಿದ್ದಾರೆ. ಆದರೆ ಕಾರ್ಮಿಕರ ಬದುಕಿನ ಸ್ಟ್ಯಾಂಡರ್ಡ್ ಟಾರ್ಗೆಟ್ಗೆ ರೀಚ್ ಆಗುವಂತಹ ಮಾನವೀಯ ಕಾಳಜಿಯ ಮುಖವುಳ್ಳ ಬದಲಾವಣೆಯ ಪ್ರಗತಿ ನಮಗಿಂದು ಮುಖ್ಯವಾಗಿದೆ. ಈ ದೆಸೆಯಲ್ಲಿ ಸರ್ಕಾರಗಳು, ಬಂಡವಾಳ ಶಾಹಿಗಳು ಯೋಚಿಸಬೇಕಾಗಿದೆ. ಕಾರ್ಮಿಕ ಹೋರಾಟಗಳು ಇನ್ನೂ ಹೆಚ್ಚು ಹೆಚ್ಚು ಬಲಗೊಂಡು ಚಳುವಳಿಯಾಗಿ ರೂಪಗೊಳ್ಳುವುದು ಅನಿವಾರ್ಯವಾಗುತ್ತಿದೆ.[೧]

ಬೆಂಗಳೂರು ನಗರವೊಂದರಲ್ಲೇ ಸುಮಾರು ಒಂದು ಸಾವಿರಕ್ಕಿಂತ ಹೆಚ್ಚು ಗಾರ್ಮೆಂಟ್ಸ್ ಉತ್ಪಾದನಾ ಘಟಕಗಳಲ್ಲಿ ಮೂರು ಲಕ್ಷಕ್ಕಿಂತ ಹೆಚ್ಚು ಕಾರ್ಮಿಕರು ಉತ್ಪಾದನೆಯಲ್ಲಿ ನಿರತರಾಗಿದ್ದಾರೆ. ರಾಜ್ಯದಲ್ಲಿ ಅತಿ ಹೆಚ್ಚು ಕಾರ್ಮಿಕರಿಗೆ ಉದ್ಯೋಗವಕಾಶ ಕಲ್ಪಿಸಿಕೊಡುವಲ್ಲಿ ಮೂರನೇ ಸ್ಥಾನದಲ್ಲಿರುವ ಈ ಉದ್ಯಮ ಸುಮಾರು ೨೫ ವರ್ಷಗಳಿಂದ ಬೆಳೆದು ಬಂದಿದೆ. ಇಲ್ಲಿಯ ಹೆಚ್ಚಿನ ಕಾರ್ಮಿಕರು ಗ್ರಾಮಾಂತರ ಪ್ರದೇಶಗಳಿಂದ ವಲಸೆ ಬಂದು ಉದ್ಯೋಗದಲ್ಲಿ ತೊಡಗಿದ್ದಾರೆ. ಬೆಂಗಳೂರಿನಲ್ಲಿ ಸುಮಾರು ೨೫ ವರ್ಷದಿಂದೀಚೇಗೆ ಗಾರ್ಮೆಮಟ್ಸ್ ಉದ್ಯಮ ಬೃಹತ್ತಾಗಿ ಬೆಳೆದಿದ್ದು, ಅತ್ಯಂತ ಸಂಘಟಿತ ವಲಯ ಇದಾಗಿದೆ. ಆದರೆ ಇಲ್ಲಿ ದುಡಿಯುತ್ತಿರುವ ಸುಮಾರು ೩ ಲಕ್ಷ ಕಾರ್ಮಿಕರು ಇನ್ನೂ ಅಸಂಘಟಿತರಾಗಿಯೇ ಇದ್ದಾರೆ. ಇಲ್ಲಿ ದಿನನಿತ್ಯ ಕಾರ್ಮಿಕರು ಹಕ್ಕುಗಳ ಶೋಷಣೆ, ದೈಹಿಕ ಹಾಗೂ

ಮಾನಸಿಕ ಹಿಂಸೆ ಅವ್ಯಾಹತವಾಗಿ ಸಾಗಿದೆ. ಆದರೆ ಇಲ್ಲಿಯವರೆಗೆ ಕಾರ್ಮಿಕರ ಕಷ್ಟ–ಸುಖಕ್ಕಾಗಿ ಅಥವಾ ಅವರ ಹೋರಾಡುವ ಯಾವುದೇ ಸಂಘಟನೆ ರಚನೆಯಾದ ಉದಾಹರಣೆಗಳು ಚರ್ಚಿಸುವ ಸ್ವಾಯತ್ತ ಸಂಘಟನೆಯ ರಚನೆ ಅತ್ಯಗತ್ಯವಿದ್ದರೂ ಅದನ್ನು ಸಾಧಿಸಲು ಪರಿಸ್ಥಿತಿಗಳು ಅನುಕೂಲವಾಗಿರಲಿಲ್ಲ. ಮಹಿಳಾ ಕಾರ್ಮಿಕರು ಸಮಯದ ಅಭಾವದಿಂದ ಅತೀವ ಕೆಲಸದ ಒತ್ತಡದಿಂದ ಒಟ್ಟುಗೂಡುವಲ್ಲಿ ವಿಫಲವಾಗಿದ್ದಾರೆ. ಆದರೆ ಕಳೆದ ಮೂರು ವರ್ಷಗಳಿಂದ 'ಸಿವಿಡೆಪ್' ಸಂಸ್ಥೆ ನಡೆಸಿದ ತರಬೇತಿ ಕಾರ್ಯಕ್ರಮಗಳು, ಬಹಿರಂಗ ಸಭೆಗಳು, ಸ್ವ–ಸಹಾಯ ಸಂಘದ ರಚನೆ ಇವುಗಳಿಂದ ಮಹಿಳಾ ಕಾರ್ಮಿಕರಿಗೆ ಸಂಘಟನೆಯ ಕಲ್ಪನೆ ಮೂಡಿದೆ.[೨]

ಬೆಂಗಳೂರು ನಗರ ಇಂದು ಜಗತ್ತಿನಾದ್ಯಾಂತ ಗಾರ್ಮೆಂಟ್ಸ್ ಉತ್ಪಾದನೆಯಲ್ಲಿ ಪ್ರಮುಖವಾಗಿ ಗುರುತಿಸಿಕೊಳ್ಳುತ್ತಿದೆ. ೨೦೦೪ ರ ಮಲ್ಟಿ ಫೈಬರ್ ಅರೇಂಜ್‌ಮೆಂಟ್ ಒಪ್ಪಂದವು ರದ್ದಾದ ಮೇಲೆ ಬೆಂಗಳೂರಿನಲ್ಲಿ ಈ ಉದ್ಯಮ ಬಹುದೊಡ್ಡ ಮಟ್ಟದಲ್ಲಿ ಹರಡುತ್ತಿದೆ. ವರ್ಷಕ್ಕೆ ೩೦೦ ಕೋಟಿಗೂ ಹೆಚ್ಚು ವಹಿವಾಟು ನಡೆಸುವ ಹಲವಾರು ಕಂಪನಿಗಳಿದ್ದು, ಉದ್ಯಮವು ಸರಿ ಸುಮಾರು ೫ ಲಕ್ಷ ಮಂದಿಗೆ ಉದ್ಯೋಗ ಒದಗಿಸಿವೆ. ಅಲ್ಲದೆ ಉದ್ಯಮಕ್ಕೆ ಬರುತ್ತಿರುವ ಲಾಭಾಂಶವು ಸಹ ಗಣನೀಯವಾಗಿ ಹೆಚ್ಚುತ್ತಿದೆ. ಸಿದ್ಧ ಉಡುಪನ್ನು ತಯಾರಿಸುವಲ್ಲಿ ಪ್ರಮುಖ ಸ್ಥಾನ ಗಿಟ್ಟಿಸಿಕೊಂಡ ಬೆಂಗಳೂರು ಜಗತ್ತಿನಾದ್ಯಂತ ಹಲವು ಕಡೆ ತಮ್ಮ ಸರಕನ್ನು ರಫ್ತು ಮಾಡುತ್ತವೆ. ೨೦೦೪ ರ ಡಿಸೆಂಬರ್‌ನಲ್ಲಿ ಮಲ್ಟಿ ಫೈಬರ್ ಅಗ್ರಿಮೆಂಟ್ ರದ್ದಾದ ನಂತರ ಇದ್ದ ಕಟ್ಟುಪಾಡುಗಳು ಕಳಚಿ ಉದ್ಯಮ ಅತಿ ವೇಗವಾಗಿ ಇಂದು ಬೆಳೆಯುತ್ತಿದೆ. ಕೆಲವು ಬೃಹತ್ ಕಂಪನಿಗಳು ವರ್ಷಕ್ಕೆ ಕನಿಷ್ಟ ೧೦೦ ಕೋಟಿಗೂ ಹೆಚ್ಚು ವಹಿವಾಟು ನಡೆಸುತ್ತಿದ್ದು ೧೦ ಸಾವಿರಕ್ಕು ಹೆಚ್ಚು ಕಾರ್ಮಿಕರಿಗೆ ಕೆಲಸ

ನಿಡುತ್ತಿದ್ದು ಹೀಗಾಗಿ ಉದ್ಯಮಕ್ಕೆ ಬರುತ್ತಿರುವ ಲಾಭಾಂಶವು ಎಲ್ಲ ರೀತಿಯಿಂದಲು ಗಣನೀಯವಾಗಿ ಹೆಚ್ಚಾಗುತ್ತಿದೆ. ವಿಧಾನ ಸಭೆಯಲ್ಲಿ ಉಲ್ಲೇಖಿಸಿರುವ ದಾಖಲೆಯ ಪ್ರಕಾರ ಬೆಂಗಳೂರಿನಲ್ಲಿ ಸುಮಾರು ೯೨೦ ಕಾರ್ಖಾನೆಗಳಿದ್ದು ಇಲ್ಲಿ ಸುಮಾರು ೩.೫೫ ಲಕ್ಷದಷ್ಟು ಕಾರ್ಮಿಕರು ದುಡಿಯುತ್ತಿದ್ದರೆ. ಪ್ರಸ್ತುತ ಸಂದರ್ಭದಲ್ಲಿ ಇಲ್ಲಿಯ ಕಾರ್ಮಿಕರ ಸಂಖ್ಯೆ ಸುಮಾರು ೫ ಲಕ್ಷದಷ್ಟಿವೆ.[೩]

ಬೆಂಗಳೂರನಲ್ಲಿ ಸು.೭೦ ರ ದಶಕದಲ್ಲಿ ಗಾರ್ಮೆಂಟ್ಸ್ ಕಾರ್ಖಾನೆಗಳು ಪ್ರಾರಂಭವಾದರೂ ಹೆಚ್ಚಾಗಿ ಕಾರ್ಮಿಕರು, ಅಸಂಘಟಿತರಾಗಿಯೇ ಉಳಿದುಕೊಂಡಿದ್ದಾರೆ. ಆದರೆ ಕೆಲವು ಕಾರ್ಖಾನೆಗಳ ಕಾರ್ಮಿಕರು ಕಾರ್ಮಿಕ ಸಂಘಗಳನ್ನು ರಚಿಸಿಕೊಂಡು ಸಂಘಟಿತರಾದರೂ ಹಲವಾರು ಕಾರಣಗಳಿಂದ ಕಾರ್ಖಾನೆಗಳು ಮುಚ್ಚಿಹೋದವು. ಈ ಕಾರ್ಖಾನೆಗಳು ಆಂತರಿಕ ತೊಂದರೆಗಳಿಂದ ಮುಚ್ಚಿದರೂ ಕಾರ್ಮಿಕ ಸಂಘಗಳೇ ಇದಕ್ಕೆ ಕಾರಣ ಎಂಬ ಹಣೆಪಟ್ಟಿ ಹಚ್ಚಲಾಯಿತು. ಅಲ್ಲದೇ ಇತರ ಆಡಳಿತ ವರ್ಗದವರೂ ಸಹ ಈ ಕಾರ್ಮಿಕರನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳಲು ಹಲವು ರೀತಿಯ ಪ್ರಯೋಗವನ್ನು ನಡೆಸಿದುಂಟು.

ಭಾರತದ ನೆರೆ ರಾಷ್ಟ್ರವಾದ ಬಾಂಗ್ಲದೇಶ ಹಿಂದಿನಿಂದಲೂ ಸೆಣಬು ಹಾಗೂ ಮಸ್ಲಿನ್ ಬಟ್ಟೆ ತಯಾರಿಕೆಗೆ ಹೆಸರಾದ ದೇಶ. ೧೯೭೪ ರ ಎಂ.ಎಫ್.ಎ ನಲ್ಲಿ ಈ ದೇಶಕ್ಕೆ ಕೋಟಾ ಪದ್ದತಿಯಿಂದ

ವಿನಾಯತಿ ಸಿಕ್ಕಿದ್ದರಿಂದ ಗಾರ್ಮೆಂಟ್ಸ್ ಉದ್ಯಮವು ಹೇರಳವಾಗಿ ಬೆಳೆದು ಅತಿ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಿತು.

ಭಾರತದಂತೆ ಬಾಂಗ್ಲದೇಶ ಸಹ ಕನಿಷ್ಠ ವೇತನವನ್ನೊಳಗೊಂಡ ಕಾರ್ಮಿಕ ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವಲ್ಲಿ ವಿಫಲವಾಗಿದೆ ಮಾಲೀಕರು ಕಾರ್ಮಿಕರನ್ನು ಹಲವಾರು ರೀತಿಯಲ್ಲಿ ಶೋಷಣೆ ಮಾಡುತ್ತಾ ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಇಂಥ ಶೋಷಣೆಯನ್ನು ಸಹಿಸಿ ತಾಳ್ಮೆ ಮೀರಿದ ಕಾರ್ಮಿಕರು ಮೇ ೨೩ ರಂದು ಉಗ್ರವಾಗಿ ರಸ್ತೆಗಿಳಿದು ಅನೇಕ ಗಾರ್ಮೆಂಟ್ಸ್ ಕಾರ್ಖಾನೆಗಳನ್ನು ಹಾನಿಗೊಳಪಡಿಸಿ ವಿಶ್ವದ ಗಮನವನ್ನು ತಮ್ಮೆಡೆಗೆ ಸೆಳೆದರು. ಈ ಹೋರಾಟದಲ್ಲಿ ನೂರಾರು ಜನರು ಗಾಯಗೊಂಡಿದ್ದು, ಹಲವಾರು ಕಾರ್ಮಿಕರು ಜೀವ ಕಳೆದುಕೊಂಡರು. ಇದರಿಂದ ಗಾರ್ಮೆಂಟ್ಸ್ ಕಾರ್ಮಿಕರು ಶೋಷಣೆಯ ವಿರುದ್ಧ ಹೋರಾಡಲು ನಮಗೂ ಹಕ್ಕುಗಳಿವೆ ಎಂದು ತೋರಿಸಿಕೊಟ್ಟರು. ಆಡಳಿತಶಾಹಿಗಳಿಗೆ ಈ ಹೋರಾಟ ಪಾಠವಾಗಿ ಪರಿಣಮಿಸಿತು. ಸ್ಥಳೀಯ ಕೆಲವು ಮಂದಿಯನ್ನು ಸಾಕಿಕೊಂಡು ಕಾರ್ಮಿಕರನ್ನು ಹೆದರಿಸಿ ಕೆಲಸ ಮಾಡಿಸಿಕೊಳ್ಳುತ್ತಿದ್ದ ಮಾಲೀಕರಿಗೆ ಸಹನೆ ಮೀರಿದ ಕಾರ್ಮಿಕರು ಏನು ಬೇಕಾದರು ಮಾಡಬಹುದೆಂಬುದನ್ನು ಈ ಮೇಲಿನ ಘಟನೆಯಿಂದ ಅರಿತುಕೊಂಡಂತಾಯಿತು ಹೀಗಾಗಿ ಸರ್ಕಾರವು ಸಹ ಎಚ್ಚೆತ್ತು ಕಾರ್ಮಿಕರಿಗೆ ಸರಿಯಾಗಿ ಸ್ಪಂದಿಸದಿದ್ದರೆ ಇಂತಹ ಘಟನೆಗಳು ಸಹ ಮುಂದೆ ಮರುಕಳಿಸಬಹುದು.

ವಿಶ್ವದಲ್ಲಿ ಚಳುವಳಿಗಳು ಹೋರಾಟಗಳು ಸತ್ತಿಲ್ಲ. ಜನರ ಅಭಿಪ್ರಾಯಗಳಿಗೆ ಆಳುವವರು ಮಾನ್ಯತೆ ಕೊಡಬೇಕು, ಕೊಡದಿದ್ದರೆ ಬಹುದೊಡ್ಡ ಬೆಲೆ ತೆರಬೇಕಾಗುತ್ತದೆ– ಎಂಬುದಕ್ಕೆ ನೇಪಾಳದ ಇತ್ತೀಚಿನ ಬೆಳವಣಿಗೆಯೇ ಉತ್ತಮ ಉದಾಹರಣೆಯಾಗಿದೆ. ಭಾರತ ಸರ್ಕಾರಕ್ಕೆ ಕಾರ್ಯದರ್ಶಿಗಳ ಸಮಿತಿಯೊಂದು ವರದಿಯೊಂದನ್ನು ನೀಡಿದ್ದು, ಆ ವರದಿಯಲ್ಲಿ ಈಗ ಇರುವ ಹಲವಾರು ಕಾರ್ಮಿಕ ಕಾನೂನುಗಳನ್ನು ಸರಳಗೊಳಿಸಬೇಕೆಂದು ಹಲವಾರು ತಿದ್ದುಪಡಿಗಳನ್ನು ಶಿಫಾರಸ್ಸು ಮಾಡಿದೆ ಎಂದು ತಿಳಿದು ಬಂದಿದೆ. (ವಾರಕ್ಕೆ ೪೮ ಗಂಟೆಗಳ ಕೆಲಸದ ಅವಧಿಯನ್ನು ೬೦ ಗಂಟೆಗಳಿಗೂ ಕಾರ್ಮಿಕರಿಗೆ ೧೦೦ ದಿನಗಳವರೆಗೆ ಮಾತ್ರ ಕೆಲಸದ ಖಾತ್ರಿ ಇತ್ಯಾದಿ) ಇದರಿಂದ ಹೆಚ್ಚು ಜನರಿಗೆ ಉದ್ಯೋಗ ಸಿಗುತ್ತದೆ ಎಂದು ಸಮಿತಿಯ ಅಭಿಪ್ರಾಯವಾಗಿದೆ.

ಕಾರ್ಮಿಕ ದೃಷ್ಟಿಯಿಂದ ಅಧ್ಯಯನಗಳನ್ನು ನಡೆಸಿದ ಬಹುರಾಷ್ಟ್ರೀಯ ಕಂಪನಿಗಳು ಒತ್ತಡಕ್ಕೆ ಮಣಿದು ಏಕಮುಖವಾಗಿ ಚಿಂತಿಸಿ ನೀಡಿರುವ ಇಂತಹ ವರದಿಗಳನ್ನು ಸರ್ಕಾರ ಗಮನಿಸಲಿಲ್ಲ.(ಜೂನ್ ೨೦೦೬)

ಅಮೇರಿಕಾ ಮತ್ತು ಯುರೋಪಿನಂತಹ ಮುಂದುವರೆದ ರಾಷ್ಟ್ರಗಳಲ್ಲಿ ನೆಲೆಯೂರಿದ್ದ ಗಾರ್ಮೆಂಟ್ಸ್ ಉದ್ಯಮವು ೭೦ ರ ದಶಕದಲ್ಲಿ ಕಚ್ಚಾವಸ್ತುಗಳು ಹಾಗೂ ಮಾನವ ಸಂಪನ್ಮೂಲಗಳು ಹೇರಳವಾಗಿ ಹಾಗೂ ಕಡಿಮೆ ವೆಚ್ಚದಲ್ಲಿ ದೊರೆಯುತ್ತಿದ್ದ ಕಾರಣ ದಕ್ಷಿಣ ಏಷ್ಯಾದ ಮುಂದುವರೆಯುತ್ತಿರುವ ರಾಷ್ಟ್ರಗಳಿಗೆ ವಲಸೆ ಹೋಗಲಾರಂಭಿಸಿದವು. ಉದ್ಯಮಗಳು ವಲಸೆ ಬರಲಾರಂಭಿಸಿದ ಮೇಲೆ ಈ

[illegible]

[illegible]

[illegible]

[illegible]

[illegible]

[illegible]

ದೇಶದಲ್ಲಿ ಉದ್ಯೋಗವಕಾಶಗಳು ಹೆಚ್ಚಾಗಿ ವಿದೇಶಿ ವಿನಿಮಯದಿಂದ ರಾಷ್ಟ್ರೀಯ ಆದಾಯವು ಹೆಚ್ಚಾಗಲು ಪ್ರಾರಂಭವಾಯಿತು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆಯನ್ನು ಎದುರಿಸಬೇಕಾದಂತಹ ಈ ಉದ್ಯಮದ ಉತ್ಪಾದನೆಯ ಪ್ರಕ್ರಿಯೆಯಲ್ಲಿ ಬೇರೆಲ್ಲೂ ಚೌಕಾಸಿ ಮಾಡಲಾಗದಂತಹ ಮಾಲೀಕರು ಅಂತಿಮವಾಗಿ ಕಾರ್ಮಿಕರನ್ನು ಹಲವಾರು ರೀತಿಯಲ್ಲಿ ಶೋಷಿಸುತ್ತಿದ್ದಾರೆ. ಅದರಲ್ಲಿ ಕನಿಷ್ಠ ವೇತನ ಕೊಡದಿರುವುದೂ ಒಂದು. ಸರ್ಕಾರಗಳು ಕಾರ್ಮಿಕರ ಉತ್ತಮ ಜೀವನಕ್ಕೆ ಬೇಕಾದ ನಿರ್ವಹಣ ವೇತನವನ್ನು ಜಾರಿಗೆ ತರುವುದಿರಲಿ ಅನುಷ್ಠಾನದಲ್ಲಿರುವ ದಕ್ಷಿಣ ಏಷ್ಯ ರಾಷ್ಟ್ರಗಳಲ್ಲಿನ ಕಾರ್ಮೆಂಟ್ಸ್ ಉದ್ಯಮದ ಕಾರ್ಮಿಕರು ಉತ್ತಮ ಜೀವನದಿಂದ ವಂಚಿತರಾಗಿದ್ದಾರೆ.

ಐರೋಪ್ಯ ರಾಷ್ಟ್ರಗಳು ಮತ್ತು ಅಮೇರಿಕಾ ಸಂಯುಕ್ತ ಸಂಸ್ಥಾನಗಳು ಆಮದು ಮಾಡಿಕೊಳ್ಳುತ್ತಿರುವ ಸಿದ್ಧ ಉಡುಪುಗಳಲ್ಲಿ ಹೆಚ್ಚಿನ ಭಾಗ ದಕ್ಷಿಣ ಏಷ್ಯಾ ರಾಷ್ಟ್ರಗಳು ತಯಾರಿಸುತ್ತಿವೆ. ಬೆಲೆಯನ್ನು ನಿಗದಿಪಡಿಸುವಲ್ಲಿ ಹೆಚ್ಚಿನ ಪಾತ್ರವನ್ನು ಈ ರಾಷ್ಟ್ರಗಳಲ್ಲಿನ ಕೊಳ್ಳುವ ಸಂಸ್ಥೆಗಳು ನಿರ್ಣಯಿಸುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಒಂದು ದೇಶದ ಕಾರ್ಮಿಕರು ಸಂಘಟಿತರಾಗುವುದಕ್ಕಿಂತ ದಕ್ಷಿಣ ಏಷ್ಯಾದ ಗಾರ್ಮೆಂಟ್ಸ್ ಕಾರ್ಮಿಕರೆಲ್ಲ ಒಟ್ಟಾಗಿ ಸಂಘಟಿತರಾದಲ್ಲಿ ಜೀವನ ನಿರ್ವಹಣಾ ವೇತನದ ಜೊತೆಗೆ ಇತರ ಸವಲತ್ತುಗಳನ್ನು ಪಡೆದುಕೊಳ್ಳಬಹುದು. ಗ್ರಾಹಕರಿಗೆ ಇದರಿಂದ ಹೆಚ್ಚಿನ ಹೊರೆ ಬೀಳದೆ ತಾನು ಕೊಳ್ಳುವ ಪ್ರತಿ ಉಡುಪಿಗೆ ೧ ಡಾಲರ್ ಹೆಚ್ಚು ಪಾವತಿಸಿದರೆ, ಕಾರ್ಮಿಕರು ತಿಂಗಳಿಗೆ ೫೦೦ ರೂ ನಷ್ಟು ಹೆಚ್ಚು ವೇತನ ಪಡೆದು ಕೊಳ್ಳಬಹುದೆಂದು ವಿಶ್ಲೇಷಣೆಗಾರರ ಅಭಿಪ್ರಾಯವಾಗಿದೆ.

ಜಾಗತೀಕರಣದಿಂದ ಇಂದು ಪ್ರಪಂಚದಾದ್ಯಂತ ಅನೇಕ ಸಾಮಾಜಿಕ, ರಾಜಕೀಯಾ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಹಲವು ರೀತಿಯ ಅಭಿವೃದ್ಧಿಗಳು ಹಾಗೂ ಬದಲಾವಣೆಗಳು ಆಗಿವೆ. ಈ ಜಾಗತೀಕರಣದಿಂದ ಪ್ರಪಂಚವೆಲ್ಲ ಒಂದು ಎಂಬ ಅಭಿಪ್ರಾಯಕ್ಕೆ ಹಲವಾರು ರಾಷ್ಟ್ರಗಳು ಬರುವಂತಾಗಿದೆ. ಜಾಗತೀಕರಣದಿಂದ ಅನೇಕ ರಾಷ್ಟ್ರಗಳ ನಡುವೆ ಹಲವಾರು ರಾಷ್ಟ್ರಗಳು ಬರುವಂತಾಗಿದೆ. ಜಾಗತೀಕರಣದಿಂದ ಅನೇಕ ರಾಷ್ಟ್ರಗಳ ನಡುವೆ ಹಲವಾರು ರೀತಿಯ ವ್ಯವಹಾರಗಳು ಸಾಧ್ಯವಾಗಿದೆ.

ಸಿದ್ಧ ಉಡುಪು ತಯಾರಿಕಾ ಕಾರ್ಖಾನೆಗಳಿಗೆ ಮತ್ತು ಕಾರ್ಮಿಕರಿಗೆ ಸಂಬಂಧಪಟ್ಟಂತೆ ಈ ಜಾಗತೀಕರಣದಿಂದ ಹಲವಾರು ಬದಲಾವಣೆಗಳಾಗಿವೆ. ಈ ಸಿದ್ಧ ಉಡುಪಿನ ಕಾರ್ಖಾನೆಗಳು ೧೯೭೦ ರಿಂದ ಈಚೆಗೆ ಯೂರೋಪ್ ಮತ್ತು ಸಂಯುಕ್ತ ರಾಷ್ಟ್ರಗಳಿಂದ ಏಷ್ಯ ರಾಷ್ಟ್ರಗಳಿಗೆ ವಲಸೆ ಬಂದಿವೆ. ಹಾಗೂ ಇಲ್ಲೇ ಆಸ್ತಿತ್ವವನ್ನು ಉಳಿಸಿಕೊಂಡಿವೆ. ಜಪಾನ್ ರಾಷ್ಟ್ರವು ತನ್ನ ಅಭಿವೃದ್ಧಿಯಲ್ಲಿ (ರಾಷ್ಟ್ರೀಯ) ಈ ಸಿದ್ಧ ಉಡುಪು ತಯಾರಿಕಾ ಘಟಕಗಳಿಂದ ಬಹಳಷ್ಟು ಹೆಚ್ಚಿಸಿಕೊಂಡಿವೆ. (ರಾಷ್ಟ್ರೀಯ ವರಮಾನವನ್ನು) ಜಪಾನ್ ರಾಷ್ಟ್ರಗಳಿಂದ ಪ್ರಭಾವಿತಗೊಂಡು ಹಲವಾರು ಆಫ್ರಿಕನ್ ರಾಷ್ಟ್ರಗಳೂ ಈ ಸಿದ್ಧ ಉಡುಪು ತಯಾರಿಕೆ ಮತ್ತು ರಫ್ತು ಮಾಡುವ ಕೆಲಸಗಳಲ್ಲಿ ತೊಡಗಿಸಿಕೊಂಡು ತಮ್ಮ ರಾಷ್ಟ್ರೀಯ ಆದಾಯದ ಶೇ.೭೭ರಷ್ಟು ಇಂತಹ ಮೂಲಗಳಿಂದ ಆಗುವ ಹಾಗೆ ತೊಡಗಿಸಿಕೊಂಡಿದ್ದಾರೆ. ಎರಡನೇ ಮಹಾಯುದ್ಧದ

ನಂತರ ಜಪಾನ್ ರಾಷ್ಟ್ರವು ಇಂತಹ ಕೆಲಸಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೊಡಗಿಕೊಂಡಿತು. ಇದರಿಂದ ಅದು ಹಾಂಕ್-ಕಾಂಗ್ ಮತ್ತು ಇನ್ನಿತರ ಪ್ರದೇಶಗಳಲ್ಲಿ ಇಂತಹ ಕೇಂದ್ರಗಳನ್ನು ಹೆಚ್ಚಿಸಿಕೊಂಡಿತು. ಭಾರತಕ್ಕೆ ಮತ್ತು ಇಂತಹ ಅಂತಾರಾಷ್ಟ್ರೀಯ ಒಪ್ಪಂದಗಳಿಂದ ಸಿದ್ಧಉಡುಪು ತಯಾರಿಕೆ ಮತ್ತು ಅವುಗಳ ರಫ್ತುಗಳ ವಿಷಯದಲ್ಲಿ ಬಹಳಷ್ಟು ಅನುಕೂಲಗಳಾದವು ಎಂದು ಹೇಳಬಹುದು. ಇಂತಹ ಒಪ್ಪಂದಗಳು ಭಾರತದ ಮಟ್ಟಿಗೆ ಸಿದ್ಧಉಡುಪು ತಾಯಾರಿಕಾ ಘಟಕಗಳಿಗೆ ವರವೆಂದೇ ಭಾವಿಸಬಹುದು.

ಉರುಗ್ವೆ ೨೦೦೪ರ ದುಂಡುಮೇಜಿನ ಸಮ್ಮೇಳನಗಳ ನಂತರ ಎ.ಟಿ.ಸಿ ಸಿದ್ಧ ಉಡುಪು ಮತ್ತು ಬಟ್ಟೆಗಳ ಒಪ್ಪಂದದ ಎ.ಟಿ.ಸಿ ಒಪ್ಪಂದವು ಕೊನೆಗೊಂಡಿತು. ಆದರೆ ಭಾರತಕ್ಕೆ ಇದರಿಂದ ಅನಾನುಕೂಲವಾಯಿತು. ಇದರಿಂದ ಭಾರತದ ಸಿದ್ಧಉಡುಪು ರಫ್ತಿನ ಪ್ರಮಾಣ ಏಪ್ರಿಲ್ – ಆಗಸ್ಟ್ ೨೦೦೮ ರ ಹೊತ್ತಿಗೆ ೨೦%ರಷ್ಟು ಇಳಿಮುಖವಾಯಿತು. ಅಂಕಿ ಅಂಶಗಳ ಪ್ರಕಾರ ಬಟ್ಟೆ ಮತ್ತು ಸಿದ್ಧಉಡುಪು ಕಾರ್ಖಾನೆಗಳ ಉತ್ಪಾದಕತೆ ೨೩.೨% ರಷ್ಟು ಏಪ್ರಿಲ್‌ನಲ್ಲಿ ೩೭.೬%ರಷ್ಟು ಜೂನ್‌ನಲ್ಲಿ ಏರಿತು. ಇದರಿಂದ ಕೈಗಾರಿಕೆಗಳಲ್ಲಿ ಕಾರ್ಮಿಕರ ಅವಶ್ಯಕತೆ ಹೆಚ್ಚಾಯಿತು. ದೊಡ್ಡ ಕಂಪನಿಗಳಾದ ಗೋಕುಲದಾಸ್ ರಂತಹ ರಫ್ತುಗಾರರು ೩೯.೦೦೦ ಕಾರ್ಮಿಕರಿಗೆ ಕೆಲಸ ಕೊಡುವಂತಾಯಿತು. ಇದರ ಜೊತೆಗೆ ಹಲವು ಉದ್ಯಮಿಗಳು ಅನೇಕ ಕಾನೂನುಗಳ ಒಪ್ಪಿಗೆಯೊಂದಿಗೆ ಕಾರ್ಮಿಕರಿಗೆ ಕೆಲಸ ಕೊಡುವಂತಾಯಿತು.

೩.೧.೧ ಉದ್ಯಮಿ ಒಕ್ಕೂಟಗಳ ನಿರಾಸಕ್ತಿದಾಯಕ ಪಾತ್ರ

ಕಾರ್ಮಿಕರಿಗೆ ಸುಲಭದಾಯಕವಲ್ಲದ ನಿಯಮಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಉದ್ಯಮಿ ಒಕ್ಕೂಟಗಳು ಕಾರ್ಮಿಕರಿಗೆ ಸಾಮಾಜಿಕ ರಕ್ಷಣೆ ಮತ್ತು ಕೆಲಸದ ಭದ್ರತೆಯನ್ನು ಒದಗಿಸಲಾರವು. ಇದರಿಂದ ಕಾರ್ಮಿಕರಲ್ಲಿ ಇನ್ನಷ್ಟು ಅಭದ್ರತೆ, ಕನಿಷ್ಠ ಕೂಲಿ ಇತ್ಯಾದಿ ಸಮಸ್ಯೆಗಳು ತಲೆದೊರಿದವು.

ಜಾಗತೀಕರಣದಿಂದ ಕೆಲವೊಂದು ಅನುಕೂಲಗಳು ಉದ್ಯಮಿಗಳಿಗಾದರೆ ಕಾರ್ಮಿಕರಿಗೆ ಹಲವಾರು ಅನಾನುಕೂಲಗಳಾದವು ಎಂದು ಹೇಳಬಹುದು. ಜಾಗತೀಕರಣದಿಂದ ಕೌಶಲ್ಯ ಹೊಂದಿದ ಮತ್ತು ಹೊಂದಿರದ ಕಾರ್ಮಿಕರು ಎಂಬ ವಿಂಗಡನೆಯಿಂದ ಕಾರ್ಮಿಕರಿಗೆ ಹಲವಾರು ತೊಂದರೆಗಳಾದವು. ಕನಿಷ್ಟ ಕೂಲಿಯನ್ನು ಕಾರ್ಮಿಕರಿಗೆ ನೀಡಿ ಅನೇಕ ರಾಷ್ಟ್ರಗಳ ಉದ್ಯಮಿಗಳೂ ಹಲವು ಉತ್ಪಾದನೆಯನ್ನು ಈ ಕಾರ್ಮಿಕರಿಂದ ಮಾಡಿಸಿಕೊಂಡು ಬಹಳಷ್ಟು ಲಾಭವನ್ನು ಹೊಂದಿದವು.

೩.೧.೨ ಎಸ್.ಎ.ಪಿ ಮತ್ತು ತಂತ್ರಜ್ಞಾನದ ಕೊಡುಗೆಗಳು

ಸಿದ್ಧ ಉಡುಪಿನ ಕೈಗಾರಿಕಾ ಸಂಸ್ಥೆಗಳು ನಿರಂತರವಾಗಿ ತಮ್ಮ ಉತ್ಪಾದನಾ ಸಾಮರ್ಥ್ಯ ಮತ್ತು ರಫ್ತಿನ ಪ್ರಮಾಣ ಹಾಗೂ ಉತ್ಪಾದನಾ ಗುಣಮಟ್ಟವನ್ನು ಹೆಚ್ಚಿಸುವತ್ತ ತಮ್ಮ ಗಮನವನ್ನು ಹೆಚ್ಚಾಗಿ ಕೇಂದ್ರಿಕರಿಸಿಕೊಳ್ಳುತ್ತಾ ಸಾಗಿದವು. ಈ ಎಲ್ಲಾ ಸಂಸ್ಥೆಗಳು ತಂತ್ರಜ್ಞಾನವನ್ನು ಬಳಸಿಕೊಂಡು ತಮ್ಮ ಉತ್ಪಾದನೆಯನ್ನು ಹೆಚ್ಚಿಸಿಕೊಂಡವು. ಆದರೆ ಇವುಗಳಿಂದ ಹಾನಿಯಾಗಿದ್ದು ಕಾರ್ಮಿಕರಿಗೆ ಈ

ನವೀನ ತಂತ್ರಜ್ಞಾನದಿಂದ. ಮಹಿಳೆಯರಿಗೆ ಹೊಸ ರೀತಿಯ ಕೆಲಸ ಕಾರ್ಯಗಳು ಲಭಿಸಿದವು ಆದರೆ ಈ ಉದ್ಯಮದಂತಹ ಸಂಸ್ಥೆಗಳೂ ಕಾರ್ಮಿಕರಿಗೆ ಸಾಮರ್ಥ್ಯಕ್ಕೆ ತಕ್ಕಂತೆ ನೇಮಿಸುತ್ತಿದ್ದರು. ಅಲ್ಲದೆ ಕೆಲವೊಂದು ನಿಯಮಗಳ ಅಡಿಯಲ್ಲಿ ಕೆಲಸ ನಿರ್ವಹಿಸುವ ಜವಾಬ್ದಾರಿ ವಹಿಸಿದವು. ಕೆಲವೊಮ್ಮೆ ಕೆಲಸದಿಂದ ಹೊರಹಾಕುವ ಹಲವು ನಿಯಮಗಳನ್ನು ಜಾರಿಗೆ ತಂದವು.

೧. ಹೊಸದಾಗಿ ಕೆಲಸಕ್ಕೆ ಸೇರಿದ ಮಹಿಳೆಯರು ಕೆಲಸ ಕಳೆದುಕೊಂಡವರಲ್ಲ. ಅವರೆಲ್ಲ ಸಣ್ಣ ವಯಸ್ಸಿನ ಜೊತೆಗಾರರಿಲ್ಲದ ತುಂಬಾ ಓದಿಕೊಂಡ ಹುಡುಗಿಯರಾಗಿರುತ್ತಿದ್ದರು.

೨. ಹೊಸದಾಗಿ ಕೆಲಸಕ್ಕೆ ಸೇರಿಕೊಂಡ ಮಹಿಳೆಯರೆಲ್ಲ ಅಸಂಘಟಿತ ವಲಯದಿಂದ ಬಂದವರಾಗಿದ್ದರು.

೩. ಮಹಿಳೆಯರು ಕೆಲವೊಮ್ಮೆ ಅನಾರೋಗ್ಯಕ್ಕೆ ಒಳಗಾದರೂ ಸಹ, ಅವರು ಉಪಯೋಗಿಸುವ ಉಪಕರಣಗಳು ಕೂಡ ಕಾನೂನು ಬಾಹಿರವಾಗಿರುತ್ತಿದ್ದವು. ಈ ರೀತಿಯ ತಂತ್ರಜ್ಞಾನ. ಮಹಿಳಾ ಕಾರ್ಮಿಕರಿಗೆ ಮತ್ತಷ್ಟು ಜಟಿಲ ಸಮಸ್ಯೆಗಳನ್ನು ತಂದೊಡ್ಡಿತು.

೩.೧.೩ ಗಾರ್ಮೆಂಟ್ಸ ನೌಕರರ ರಕ್ಷಣಾತ್ಮಕ ಕಾನೂನುಗಳು

ಕರ್ನಾಟಕದಲ್ಲಿರುವ ಸಿದ್ಧ ಉಡುಪು ತಯಾರಿಕಾ ಕಾರ್ಖಾನೆಗಳೂ ಬಹಳಷ್ಟು ಜನರಿಗೆ ಉದ್ಯೋಗಗಳನ್ನು ಒದಗಿಸಿವೆ. ಅದರಲ್ಲೂ ಮಹಿಳಾ ಕಾರ್ಮಿಕರಿಗೆ ಹೆಚ್ಚು ಉದ್ಯೋಗ ನೀಡಿದೆ. ಒಟ್ಟು ೭೮೮ ಸಿದ್ಧ ಉಡುಪು ಕಾರ್ಖಾನೆಗಳಲ್ಲಿ (ಕರ್ನಾಟಕದಲ್ಲಿ) ೭೪೯ ಘಟಕಗಳು ಬೆಂಗಳೂರಿನಲ್ಲೇ ಇವೆ. ರಾಜ್ಯಾದ್ಯಾಂತ ೧.೫೪೪೭೮ ಕೆಲಸಗಾರರು ಬೆಂಗಳೂರಿನಲ್ಲೇ ಕೆಲಸ ಮಾಡುತ್ತಿದ್ದಾರೆ. ಈ ಎಲ್ಲಾ ಘಟಕಗಳು ಮಹಿಳೆಯರಿಗೆ ಬಹಳಷ್ಟು ಅವಲಂಬಿತವಾಗಿವೆ. ಸುಮಾರು ೧,೧೦,೦೧೯ ಮಹಿಳಾ ಕಾರ್ಮಿಕರು ಇಂತಹ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ೧,೦೩,೦೪೪ ಮಹಿಳೆಯರು ಬೆಂಗಳೂರಿನ ಘಟಕಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇವೆಲ್ಲ ಸರಾಸರಿ ಅಂಕಿ ಅಂಶಗಳಿಗಿಂತ ಹೆಚ್ಚಿನ ಮಹಿಳಾ ಕಾರ್ಮಿಕರು ಈ ಕೆಲಸಗಳಲ್ಲಿ ತೊಡಗಿಕೊಂಡಿರಬಹುದೆಂಬ ಸಾದ್ಯತೆಗಳಿವೆ.

ಸಿದ್ಧ ಉಡುಪು ತಯಾರಿಕಾ ಘಟಕಗಳ ಉದ್ಯಮದಿಂದ ನಮ್ಮ ದೇಶಕ್ಕೆ ೧೬.೬೩%ನಷ್ಟು ವಿದೇಶಿ ಗಳಿಕೆಯಿದೆ. ಇಂತಹ ಘಟಕಗಳಲ್ಲಿ ೩.೫ ಮಿಲಿಯನ್ ಕೆಲಸಗಾರರಿದ್ದಾರೆ. ನಮ್ಮ ದೇಶದಲ್ಲಿ ಇಂತಹ ಒಟ್ಟು ೫ ಘಟಕಗಳು ಇವೆ. ಇದರಲ್ಲಿ ಬೆಂಗಳೂರು ಸಿದ್ಧ ಉಡುಪು ತಯಾರಿಕಾ ಘಟಕ ಕೇಂದ್ರವಾಗಿ ವಿಶೇಷ ಸ್ಥಾನವನ್ನು ಪಡೆದಿದೆ. ಇಲ್ಲಿ ಸಣ್ಣಪುಟ್ಟವೆಲ್ಲ ಕೇಂದ್ರಗಳು ಸೇರಿದರೆ ಸುಮಾರು ೧೨೦೦ ಸಿದ್ಧಉಡುಪು ತಯಾರಿಕಾ ಘಟಕಗಳಿವೆ. ಇಲ್ಲಿ ೫೦೦ ಸಾವಿರಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

ಒಟ್ಟಾರೆ ಈ ಅಧ್ಯಾಯದಲ್ಲಿ ಪ್ರಮುಖವಾಗಿ ಬೆಂಗಳೂರಿನ ಸಿದ್ಧಉಡುಪು ತಯರಿಕಾ ಘಟಕಗಳಲ್ಲಿರುವ ಕಾರ್ಮಿಕರ ಸ್ಥಿತಿಗತಿ ಹಾಗೂ ಅವರಿಗೆ ಇರುವ ಅನಾನುಕೂಲತೆಯ ಬಗೆಗೆ ಇತ್ಯಾದಿ ಅಂಶಗಳ ಕುರಿತು ಸ್ಪಷ್ಟವಾಗಿ ಚಿತ್ರಿಸಲಾಗಿದೆ.

[illegible]

[illegible]

[illegible]

[illegible]

[illegible]

[illegible]

[illegible]

ನಮ್ಮ ದೇಶದ ೧/೬ನೇ ಕುಟುಂಬವು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಈ ಸಿದ್ಧಉಡುಪು ತಯಾರಿಕ ಘಟಕಗಳಿಂದ ಜೀವನ ನಿರ್ವಹಣೆ ಮಾಡುತ್ತಿದೆ. ಇಲ್ಲಿಯ ಸಿದ್ಧ ಕಾಟನ್ ಉಡುಪುಗಳು ಹಾಗೂ ವಿವಿಧ ಕೌಶಲ್ಯದಿಂದ ತಯಾರಿಸಿದ ಬಟ್ಟೆಗಳು ಯು.ಎಸ್.ಆರ್, ಕೆನಡಾ, ಯು.ಎಸ್.ಎ ಜಪಾನ್, ಸೌದಿ ಅರೇಬಿಯ, ಬಾಂಗ್ಲಾದೇಶ ಟರ್ಕಿ ಮುಂತಾದ ದೇಶಗಳಿಗೆ ರಪ್ತಾಗುತ್ತಿವೆ.

ನೇಯ್ದ ಬಟ್ಟೆಯನ್ನು ರಫ್ತು ಮಾಡುವುದರಲ್ಲಿ ನಮ್ಮ ಭಾರತ ದೇಶವು ಪ್ರಥಮ ಸ್ಥಾನದಲ್ಲಿದೆ. ಶೇ.೨೫%ನಷ್ಟು ಕಾಟನ್ ಬಟ್ಟೆಗಳನ್ನು ರಫ್ತು ಮಾಡುತ್ತಿದೆ. ಅಲ್ಲದೆ ಗೋಣಿನಾರು ಉತ್ಪಾದನೆಯಲ್ಲಿ, ಪ್ರಥಮ ಸ್ಥಾನದಲ್ಲಿದೆ. ಹಾಗೂ ರೇಷ್ಮೆ ಉತ್ಪಾದಿಸುವಲ್ಲಿ ಎರಡನೇ ಸ್ಥಾನ ಹೊಂದಿದೆ. ಇಲ್ಲಿ ನಾಲ್ಕು ವಿಧದ ರೇಷ್ಮೆಗಳನ್ನು ಉತ್ಪಾದಿಸಲಾಗುತ್ತದೆ.

ಶ್ರೀ ಎಂ.ಕೆ. ಪಾರಿದ (ನಿರ್ದೇಶಕರು–ಸಿಎಎಐ) ಸಂದರ್ಶನದಲ್ಲಿ ಎಫ್‌ಎಸಿಇ ೨ ಎಪ್‌ಎಸಿಇ ೨೦೦೮ರಲ್ಲಿ ಹೀಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಭಾರತೀಯ ಸಿದ್ಧ ಉಡುಪು ತಯಾರಿಕಾ ಉದ್ಯಮವು (ಉತ್ಪಾದನಾ ಮೌಲ್ಯ) ೪೨.೫೩ (ಆರ್‌ಎಸ್‌ಐ) ಡಾಲರ್ಸ್‌ನಷ್ಟು ಮೌಲ್ಯಕ್ಕಾಗಿರುತ್ತದೆ. ಭಾರತವು ೭೨೦೦ ರಷ್ಟು ಉಡುಪುಗಳನ್ನು ೧೦೦ರಷ್ಟು ವಿನ್ಯಾಸಗಳಲ್ಲಿ ಉತ್ಪಾದಿಸುತ್ತದೆ. ಇದರಲ್ಲಿ ೧೫೦೦ರಷ್ಟು ಉಡುಪುಗಳನ್ನು ರಫ್ತು ಮಾಡಲಾಗುತ್ತದೆ. ಉಳಿದವುಗಳನ್ನು ನಮ್ಮ ದೇಶದಲ್ಲೆ ಉಪಯೋಗಿಸಲಾಗುತ್ತದೆ.

ನಮ್ಮ ದೇಶದಲ್ಲಿ ಸುಮಾರು ೩೦,೦೦೦ ಸಿದ್ಧಉಡುಪು ತಯಾರಿಕಾ ಘಟಕಗಳಿವೆ. ಇವೆಲ್ಲ ಆಮದು ಮಾಡುವುದಕ್ಕೋಸ್ಕರವೇ ಸ್ಥಾಪಿತವಾಗಿದೆ. ಇವುಗಳಲ್ಲಿ ೫೦೦೦ ಘಟಕಗಳು ಉತ್ತಮವಾಗಿ ಸುವ್ಯವಸ್ಥಿತವಾಗಿ ಸ್ಥಾಪಿತವಾಗಿವೆ. ಅಲ್ಲದೆ ೫೦೦೦ ಘಟಕಗಳು ತುಂಬಾ ಶಕ್ತಿಯುತವಾಗಿ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ ಗೋಕುಲದಾಸ್ ಆಮದುಗಾರರು ತುಂಬಾ ದೊಡ್ಡ ಪ್ರಮಾಣದಲ್ಲಿ ಉತ್ಪಾದಕರು ಮತ್ತು ಆಮದುಗಾರರಾಗಿದ್ದಾರೆ. ಈ ಗೋಕುಲ್‌ದಾಸ್ ಗುಂಪಿನವರು ಸುಮಾರು ೪೦,೦೦೦ ಕೆಲಸಗಾರರನ್ನು ಕೆಲಸ ನೀಡಿದ್ದಾರೆ. ಅಲ್ಲದೆ ಸುಮಾರು ೪೦ ಘಟಕಗಳನ್ನು ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಹೊಂದಿದ್ದಾರೆ. ಹೀಗಾಗಿ ಇವರು ಸುಮಾರು ೧೦೦೦ ಕೋಟಿ ರೂಪಾಯಿಗಳಷ್ಟು ಹೂಡಿಕೆ ಮತ್ತು ಲಾಭದಲ್ಲಿರುತ್ತದೆ. Orient Craft and Shashi export ರವರು ಕ್ರಮವಾಗಿ ೨ನೇ ಮತ್ತು ೩ನೇ ಸ್ಥಾನದಲ್ಲಿ ಹೂಡಿಕೆ ಲಾಭದಲ್ಲಿ ಬರುತ್ತಾರೆ.

೩.೧.೪ ವ್ಯಾಪಾರಕ್ಕೆ ಅವಕಾಶಗಳು ಮತ್ತು ಅಡೆತಡೆಗಳು

ಆರು ವರ್ಷಗಳ ನಿರಂತರ ಬೆಲೆ ಏರಿಕೆಯಂತಹ ಸಮಸ್ಯೆಗಳಿಂದ ಪ್ರಪಂಚದಾದ್ಯಂತ ಆರ್ಥಿಕ ಸ್ಥಿತಿ ಕೆಟ್ಟುಹೋಗಿದೆ. ಹೀಗಾಗಿ ಯಾವುದೇ ಉದ್ಯಮಿಗಳು ಹೊಸ ಯಾವುದೇ ವ್ಯಾಪಾರಗಳನ್ನು ಮಾಡಲು ಹೆದರುತ್ತಿದ್ದಾರಲ್ಲದೆ, ಹಿಂಜರಿಯುತ್ತಿದ್ದಾರೆ. ಇಂತಹ ಸಮಸ್ಯೆ ಎಲ್ಲ ರೀತಿಯ ಉದ್ಯಮಿಗಳಂತೆ

[illegible]

[illegible]

[illegible]

[illegible]

[illegible]

[illegible]

ಈ (ಸಿದ್ಧಉಡುಪು ತಯರಿಕ ಉದ್ಯಮಿಗಳಿಗೂ ಆತಂಕ ಉಂಟುಮಾಡಿದೆ. ಆದರೆ ಆಮದಿಗೆ (ಸಿದ್ಧಉಡುಪುಗಳಿಗೆ) ಸುಂಕ ವಿಧಿಸದಿರುವುದು ಉದ್ಯಮಿಗಳಿಗೆ ಒಂದು ಉತ್ತಮ ಅವಕಾಶವಾಗಿದೆ.

ಶ್ರೀ ಹೊನ್ನಪ್ಪ (ಕಾಟನ್ ಉದ್ಯಮದ ಸಹ ಆಡಳಿತಗಾರ ವ್ಯವಸ್ಥಾಪಕ ಕಾರ್ಯನಿರ್ವಾಹಕ)ರವರ ಪ್ರಕಾರ ಈ ಉದ್ಯಮದಲ್ಲಿ ಬಹಳಷ್ಟು ಸದಾವಕಾಶಗಳಿವೆ ಆದರೆ ಬಂಡವಾಳ ಬಹಳಷ್ಟು ಹಾಕಬೇಕಾಗುತ್ತದೆ. ಕೆಲವು ಕೌಶಲ್ಯಗಳನ್ನು ತಿಳಿದುಕೊಂಡು ಈ ಉದ್ಯಮ ನಿರ್ವಹಿಸಿದರೆ ಮಾತ್ರ ಇಲ್ಲಿ ಲಾಭವನ್ನು ಕಾಣಬಹುದು ಎಂಬುದು ಇವರ ಅಭಿಪ್ರಾಯವಾಗಿದೆ. ಶ್ರೀ ದೇವರಾಜ್ (ಸಿ.ಎಂ.ಎ.ಐ)ರವರ ಪ್ರಕಾರ ಉದ್ಯಮಿಗಳು ಈಗ ಉತ್ತಮ ಅವಕಾಶಗಳನ್ನು ಹೊಂದಿದ್ದಾರೆ. ಅವರು ಯಾವ ದೇಶಕ್ಕೆ ಎಷ್ಟು ಬೇಕಾದರೂ ಸಿದ್ಧಉಡುಪುಗಳನ್ನು ರಫ್ತು ಮಾಡಬಹುದು. ಆದರೆ ಬೇರೆಲ್ಲ ರಾಷ್ಟ್ರಗಳೊಂದಿಗೆ ಈ ನಮ್ಮ ದೇಶದ ಉದ್ಯಮಿಗಳು ಪೈಪೋಟಿ ಮಾಡಬಹುದಾಗಿದೆ. ಇದರ ಜೊತೆ ನಮ್ಮ ದೇಶದಲ್ಲೇ ಸಿದ್ಧಉಡುಪುಗಳ ಬೇಡಿಕೆ ಕೂಡ ಹೆಚ್ಚಾಗಿದೆ. ಅದರಲ್ಲೂ ಮಹಿಳೆಯರಿಗೆ ಬೇಡಿಕೆ ಹೆಚ್ಚಾಗಿದೆ. ಪ್ಯಾಂಟ್, ಟಿಶರ್ಟ್ ಇತ್ಯಾದಿಯಾಗಿ ಎಮ್‌ಆರ್. ಜೆ.ಡಿ.ಬರ್ಮನ್ (Deputy Director of the textile Committee ministry of Textile) ಅವರು ಆಮದು ಮಾಡಲಾಗಿರುವ ಸಿದ್ಧ ಉಡುಪುಗಳಿಗೆ ಸುಂಕ ವಿಧಿಸದಿರುವುದನ್ನು ಮತ್ತು ಅವುಗಳ ಪ್ರಯೋಜನಗಳ ಬಗ್ಗೆ ಹೇಳುತ್ತಾರೆ. ವಿಶ್ವ ವ್ಯಾಪಾರ ಸಂಘಟನೆ ಒಪ್ಪಂದಗಳಿಂದ ಇದು ಹೊರತಾಗಿದೆ. ಅದರೆ ಅದರ (ಡಬ್ಲ್ಯೂಟಿಒ) ಹಿಡಿತದಲ್ಲಿದೆ. ಅಂದರೆ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಈ ಆಮದು (ಸಿದ್ಧಉಡುಪು) ಮಾಡುವ ವಿಷಯದಲ್ಲಿ ಮುಕ್ತವಾಗಿ ಕೆಲವು ಕರಾರುಗಳೊಡನೆ ಆಮದು ಮಾಡಬಹುದುದಾಗಿದೆ. ಇವೆಲ್ಲವುಗಳ ಜೊತೆಗೆ ರೂಪುರೇಷಗಳನ್ನು ಮಾಡಬೇಕೆಂದು ಎನ್.ಜಿ.ಒಗಳು ತಾಕೀತನ್ನು ಸರಕಾರಕ್ಕೆ ಹಾಗೂ ಉದ್ಯಮಿಗಳಿಗೆ ಮಾಡುತ್ತಾ ಇವೆ. ಕೆಲವೊಂದು ಹೆಸರಾಂತ ಕಂಪನಿಗಳೂ ತಮ್ಮ ರೂಪಕೇಶಗಳನ್ನು ಅಳವಡಿಸಿಕೊಂಡು ಕೆಲಸಗಳನ್ನು ಮಾಡುತ್ತಿವೆ. ಇದರ ಜೊತೆಗೆ ಆಗಾಗ ಬರುವ ಕೆಲವು ನಿಯಮಗಳನ್ನು ಕೂಡ ಉದ್ಯಮಗಳು ಪಾಲಿಸುತ್ತಿವೆ.

೩.೧.೫ ಮಹಿಳಾ ದುಡಿಮೆ ಮತ್ತು ಗಾರ್ಮೆಂಟ್ಸ್ ವಲಯ

ಇತ್ತೀಚಿಗೆ ಹೆಚ್ಚುತ್ತಿರುವ ಸಮಸ್ಯೆಗಳಿಂದ ಮಹಿಳೆ ದುಡಿಯಲೇ ಬೇಕಾದ ಸಂದರ್ಭ ಒದಗಿ ಬಂದಿದೆ. ಅದು ಎಷ್ಟರ ಮಟ್ಟಿಗೆ ಅಂದ್ರೆ ಅವಳೂ ದುಡಿದರೆ ಜೀವನ ಮುಂದೆ ಸಾಗುವುದು ಇಲ್ಲ ಅಂದ್ರೆ ಬದುಕೇ ಅಸ್ತವ್ಯಸ್ತವಾಗುವ ಸಂದರ್ಭಗಳೂ ಒದಗುವುದು ಖಚಿತ. ಸಾಮಾನ್ಯವಾಗಿ ಹದಿನೈದರಿಂದ ನಲವತ್ತರ ವಯಸ್ಸಿನ ಮಹಿಳೆಯರು ದುಡಿಮೆಯಲ್ಲಿ ತೊಡಗಿರುವುದು ಕಂಡು ಬರುತ್ತದೆ. ಈ ವೇಳೆಯಲ್ಲಿ ಸಂತಾನೋತ್ಪತ್ತಿ ಮತ್ತು ಅನುಕೂಲಕ್ಕೆ ತಕ್ಕಂತೆ ಫ್ಲೆಕ್ಸಿಬಲ್ ಗುಣವುಳ್ಳ ಕೆಲಸಗಳಲ್ಲಿ ತೊಡಗುತ್ತಾರೆ. ಅನಕ್ಷರತೆ, ಶಿಕ್ಷಣ, ತರಬೇತಿ ಹಾಗು ಕೌಶಲ್ಯದ ಕೊರತೆಯಿಂದ ಸಂಘಟಿತ ಕ್ಷೇತ್ರದಲ್ಲಿರುವ ಸ್ಪರ್ಧಾತ್ಮಕ ಕೆಲಸಗಳನ್ನು ಪಡೆಯಲು ಸರಳವಾದ ವಾತಾವರಣವಿರುವುದಿಲ್ಲ. ವಿದ್ಯಾರ್ಹತೆಯ ಅನುಭವದ ಕಾರ್ಯಕ್ಷಮತೆಯ ಕೌಶಲ್ಯ ತರಬೇತಿಗಳನ್ನು ಪೂರೈಸಲಾಗದೆ ಅಲ್ಲೆ ಉಳಿಯುವ ಅನಿವಾರ್ಯತೆ

[illegible]

[illegible]

[illegible]

ಮತ್ತು ದೀರ್ಘ ಸಮಯದ ಲಿಖಿತ ಪರೀಕ್ಷೆ ಸಂದರ್ಶನ ಹಾಗೂ ಇತರೆ ಪ್ರಕ್ರಿಯೆಗಳಿಗೆ ಕಾಯಲು ಸಾಧ್ಯವಾಗದೆ ಸಾಗುವ ಗುತ್ತಿಗೆ ಆಧಾರದ ಕೆಲಸಗಳಲ್ಲಿ ತೊಡಗುತ್ತಾರೆ. ಮಹಿಳೆಯರ ಶ್ರಮದ ಬೇಡಿಕೆ ಮತ್ತು ಪೂರೈಕೆಗಳನ್ನು ತೆಗೆದುಕೊಂಡರೆ ಪೂರೈಕೆ ಅಧಿಕವಾಗಿರುವುದರಿಂದ ಬೇಡಿಕೆ ದುಡಿಮೆಯಾಗುತ್ತದೆ. ಬೇಡಿಕೆ ಕಡಿಮೆಯಾದಾಗ ಅವರ 'ಚೌಕಾಶಿ ಶಕ್ತಿ' ಕಡಿಮೆಯಾಗಿ ಕೌಶಲ್ಯರಹಿತ ಕೆಲಸಗಳಲ್ಲಿ ಕಡಿಮೆ ಹಾಗೂ ಚಟುಚಟಿಕೆಗಳು ಭೂರಹಿತರನ್ನಾಗಿ ಮಾಡುತ್ತದೆ. ಇದರಿಂದ ನಿರುದ್ಯೋಗಿಗಳು ಹೆಚ್ಚಾಗುವುದರಿಂದ ಅತಿಯಾದ ಬಡತನ ಆವರಿಸತೊಡಗುತ್ತದೆ. ಮಕ್ಕಳು ಹಸಿವಿನಿಂದ ಬಳಲುತ್ತಿದ್ದಾಗ ಮಹಿಳೆ ಅನಿವಾರ್ಯವಾಗಿ ದೊರೆತ ಕೆಲಸಗಳನ್ನು ಮಾಡಲು ಮುಂದಾಗುತ್ತಾರೆ. ಇದರಿಂದ ಅತಿ ಹೆಚ್ಚು ಮಹಿಳೆಯರು ಅಸಂಘಟಿತ ವಲಯಕ್ಕೆ ತಳ್ಳಲ್ಪಡುತ್ತಿದ್ದಾರೆ.

ಇತ್ತೀಚಿಗೆ ಮಾರುಕಟ್ಟೆಯಲ್ಲಿ ಕೌಶಲ್ಯಭರಿತ ಬೇಡಿಕೆಗಳೂ ಹೆಚ್ಚುತ್ತಿರುವ ಕಾರಣ ಮಹಿಳೆಯರಿಗೆ ಅಷ್ಟು ಬಗೆಯ ತರಬೇತಿ ಶಿಕ್ಷಣ ಇಲ್ಲದೆ ಇರುವುದರಿಂದ ಅಸಂಘಟಿತ ಕ್ಷೇತ್ರದಲ್ಲಿ ಉಳಿಯುವ ಅನಿವಾರ್ಯತೆ ಪುರುಷಶಾಹಿ ವ್ಯವಸ್ಥೆ ರೂಪಿಸುತ್ತದೆ. ಮಹಿಳೆಯರಿಗೆ ಪರ್ಯಾಯವಾಗಿ ಯಾವ ಕೆಲಸಗಳು ಇಲ್ಲದೆ ಕಾರಣ ಗಾರ್ಮೆಂಟ್ಸ್ ಕಾರ್ಖಾನೆ (ಜೀನ್ಸ್ ಕಾರ್ಖಾನೆ) ಅಥವಾ ಅಸಂಘಟಿತ ವಲಯದಲ್ಲಿ ದುಡಿಯುವ ಸಂದರ್ಭ ಬರುತ್ತದೆ. ಈ ಕಾರಣವಾಗಿ ಮಹಿಳೆಯರು ಬೆಂಗಳೂರು ಮತ್ತು ಬಳ್ಳಾರಿಯ ಕಾರ್ಖಾನೆಗಳಲ್ಲಿ ಕೆಲಸಮಾಡುವ ಅನಿವಾರ್ಯತೆಯನ್ನು ಕಾಣಬಹುದು. ಏಕೆಂದರೆ ಇಲ್ಲಿ ದುಡಿಯುವ ಮಹಿಳೆಯರು ಹೆಚ್ಚಾಗಿ ಬಡತನದಿಂದಿರುವ ಕೆಳಜಾತಿ ಹಿನ್ನಲೆಯಿಂದ ಬಂದವರಾಗಿದ್ದು ಅವರಿಗೆ ಮನೆಯ ಕೌಟುಂಬಿಕ ಜವಾಬ್ದಾರಿಯ ನಿರ್ವಹಣೆ ಹೊಣೆಯನ್ನು ಹೊತ್ತಿರುವುದರಿಂದ ಮಕ್ಕಳ ಲಾಲನೆ ಪಾಲನೆ ಪೋಷಣೆಯ ಜೊತೆಗೆ ಗಂಡ ಅತ್ತೆ ಮಾವಂದಿರ ಒತ್ತಾಯದ ಮೇರೆಗೆ ಅವಳು ಹೋಗಿ ಕೆಲಸ ಮಾಡಬೇಕಾಗುತ್ತದೆ. ಅವಳ ದೈಹಿಕ ಮತ್ತು ಮಾನಸಿಕವಾಗಿ ಎಷ್ಟೇ ಶ್ರಮಪಟ್ಟು ಅಲ್ಲೇ ದುಡಿಯುವ ಅಸಹಾಯಕತೆಯ ತಾರತಮ್ಯಗಳನ್ನು ಕಾರ್ಖಾನೆಯಲ್ಲಿ ಅನುಭವಿಸಿದರೂ ಕೂಡ ಈ ಕಾರ್ಖಾನೆಗಳಲ್ಲಿ ದುಡಿಯುವ ಪ್ರಸಂಗಗಳನ್ನು ಕಾಣಬಹುದು. ಆದ್ದರಿಂದ ಲಿಂಗತಾರತಮ್ಯದ ನೀತಿಗಳನ್ನು ಯಾವ ರೀತಿ ಅನುಭವಿಸುತ್ತಿದ್ದಾಳೆ ಎಂಬುದನ್ನು ಮುಂದಿನ ಭಾಗವಾಗಿ ಚರ್ಚೆಗೆ ಒಳಪಡಿಸಲಾಗಿದೆ.

೩.೧.೬ ಜೀನ್ಸ್ ಕಾರ್ಖಾನೆಯಲ್ಲಿನ ಲಿಂಗತಾರತಮ್ಯದ ನೆಲೆಗಳು

ಜಾಗತೀಕರಣ ಪ್ರಕ್ರಿಯೆಯು ಮಾನವನ ಉತ್ಪಾದನೆಯ ವಸ್ತುಗಳಿಗೆ ಮಾರುಕಟ್ಟೆಯನ್ನು ಸೃಷ್ಟಿಸುತ್ತದೆ. ಈ ಮೂಲಕ ಸಣ್ಣ ಪುಟ್ಟ ವಸ್ತುಗಳಿಗೆ ಉತ್ಪಾದನೆ ಉದ್ಯಮಿ ಸ್ವರೂಪ ನೀಡುತ್ತದೆ. ಈ ಮೂಲಕ ಉತ್ಪಾದನಾ ಚಟುವಟಿಕೆಗಳು ಅಸಂಘಟಿತ ವಲಯದಲ್ಲಿ ನಡೆಯುವಂತೆ ಪ್ರೇರೆಪಿಸುತ್ತಾ ಈ ಪ್ರಕ್ರಿಯೆ ಉಡುಪು ಉತ್ಪಾದನಾ ಚಟುವಟಿಕೆಗಳಿಗೆ ಉದ್ಯಮಿ ಸ್ವರೂಪ ಪಡೆದಿವೆ. ಇಂತಹ ಉದ್ದಿಮೆಗಳು ಅಸಂಘಟಿತ ವಲಯದಲ್ಲಿ ತಮ್ಮ ಉತ್ಪಾದನಾ ಚಟುವಟಿಕೆಗಳನ್ನು ನಡೆಯುವಂತೆ ಮಾಡಿದೆ. ಅದು ಖಾದಿ ಉದ್ಯಮವಿರಬಹುದು, ಜೀನ್ಸ್ ಉದ್ಯಮ ಇರಬಹುದು. ಜಾಗತೀಕರಣ ಪ್ರಕ್ರಿಯೆ ಮಾರುಕಟ್ಟೆ ಸೃಷ್ಠಿಸುವುದರಿಂದ ವಿದೇಶದಲ್ಲಿ ತಯಾರಾಗುತ್ತಿದ್ದ ಜೀನ್ಸ್ ಉಡುಪುಗಳು ಭಾರತದಲ್ಲಿ ತಯಾರಾಗ ತೊಡಗಿದವು. ಇದರ ಭಾಗವಾಗಿ ಬಳ್ಳಾರಿ ಮತ್ತು ಬೆಂಗಳೂರಿನಲ್ಲಿ ಅತಿ ಹೆಚ್ಚು ಕಾರ್ಖಾನೆಗಳು

[illegible]

[illegible]

[illegible]

[illegible]

ಇರುವುದರಿಂದ ಅಧ್ಯಯನ ಭಾಗವಾಗಿ ತೆಗೆದುಕೊಂಡಿದ್ದೇನೆ. ಜೀನ್ಸ್ ಉದ್ದಿಮೆ ಬಂಡವಾಳ ಜೊತೆಗೆ ೧೫ ರಿಂದ ೨೦ ಜನ ಕೆಲಸಗಾರರೊಂದಿಗೆ ಉಡುಪುಗಳ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿದೆ. ಇಪ್ಪತ್ತೈದು ಅಥವಾ ಇಪ್ಪತ್ತೈದಕ್ಕಿಂತ ಹೆಚ್ಚು ಸದಸ್ಯರನ್ನು ಹೊಂದಿರುವ ಉದ್ದಿಮೆಯನ್ನು ಸರ್ಕಾರ ಅಸಂಘಟಿತ ವಲಯ ಎಂದು ಕರೆಯುತ್ತೇವೆ. ಸ್ತ್ರೀವಾದಿಗಳು ಮತ್ತು ಇತರ ಅಧ್ಯಯನಕಾರರ ಪ್ರಕಾರ ಭಾರತದಲ್ಲಿ ಶೇ ೯೦% ರಷ್ಟು ಮಹಿಳೆಯರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಬಳ್ಳಾರಿಯಲ್ಲಿ

ಅತಿ ಹೆಚ್ಚು ಕಾರ್ಖಾನೆಗಳಿರುವುದರಿಂದ, ಅದರಲ್ಲೂ ಉತ್ಪಾದನೆಯು ವರ್ಷದ ಪೂರ್ತಿ ಇರುವುದರಿಂದ ಮಹಿಳೆಯರು ಈ ವಲಯದಲ್ಲಿ ಹೆಚ್ಚಾಗಿ ಕಾಣಿಸತೊಡಗುತ್ತಾರೆ. ಏಕೆಂದರೆ ಇದರ ಉತ್ಪಾದನೆ ವರ್ಷದ ಪೂರ್ತಿ ಇರುವುದರಿಂದ ಕೊಟ್ಟಷ್ಟು ಸಂಬಳವನ್ನು ತೆಗೆದುಕೊಂಡು ಹೇಳಿದ ಕೆಲಸಗಳನ್ನು ಮಾಡುವುದನ್ನು ನೋಡಬಹುದಾಗಿದೆ. ಒಂದು ಅಂದಾಜಿನ ಪ್ರಕಾರ ಬಳ್ಳಾರಿ ನಗರದ ಜೀನ್ಸ್ ಉದ್ದಿಮೆಗಳಲ್ಲಿ ಸುಮಾರು ಮೂವತ್ತೈದು ಸಾವಿರಕ್ಕಿಂತ ಅತಿ ಹೆಚ್ಚು ಮಹಿಳಾ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಪ್ರಸ್ತುತ ಅಧ್ಯಾಯನದಲ್ಲಿ ಆಯ್ದ ಕೆಲವು ಉದ್ದಿಮೆಗಳನ್ನು ಕ್ಷೇತ್ರ ಕಾರ್ಯಕ್ಕೆ ಬಳಸಿಕೊಳ್ಳಲಾಗಿದೆ.

೩.೧.೭ ಬಳ್ಳಾರಿ ಜೀನ್ಸ್ ಉದ್ದಿಮೆ

ಬಳ್ಳಾರಿ ಜೀನ್ಸ್ ಉದ್ದಿಮೆಗಳು ಕಡಿಮೆ ಬಂಡವಾಳದೊಂದಿಗೆ ೧೫ರಿಂದ೩೦ ಜನ ಕೆಲಸಗಾರರನ್ನು ಹೊಂದಿದೆ. ಮಾಲೀಕರು ಈ ಕೆಲಸಗಾರರಿಗೆ ವಿವಿಧ ರೀತಿಯ ಕೆಲಸಗಳನ್ನು ಹಂಚಲಾಗಿದೆ. ಆಡಳಿತದ ಅಧಿಕಾರಿಗಳು ಉದ್ದಿಮೆಯನ್ನು ನಿಭಾಯಿಸಲು ಮತ್ತು ಹಣಕಾಸಿನ ಚಟುವಟಿಕೆಗಳನ್ನು ನಡೆಸುತ್ತಾರೆ. ಇವರ ಕೆಳಗೆ ಸೂಪರ್‌ವೈಸರುಗಳಿದ್ದು ಉಳಿದ ಕೆಲಸವನ್ನು ನಿರ್ವಹಿಸುತ್ತಾರೆ.ಉಡುಪು ತಯಾರಿಸುವಾಗ ಕೆಲಸಗಳೂ ವಿವಿಧ ಭಾಗಗಳಾಗಿ ಹಂಚಲ್ಪಟ್ಟಿವೆ. ಬಟ್ಟೆ ಕತ್ತರಿಸುವುದು, ಹೊಲಿಯುವುದು ಅವರವರ ಕಂಪನಿಯ ಲೇಬಲ್ ಹಚ್ಚುವುದು, ದಾರ ಕಟ್ಟುವುದು, ಇಸ್ತ್ರಿ ಮಾಡುವುದು. ತಯಾರಾದ ಉಡುಪುಗಳಿಗೆ ಬಣ್ಣ ಹಾಕುವುದು, ಸಿದ್ಧಗೊಂಡ ಉಡುಪುಗಳನ್ನು ಪ್ಯಾಕೇಜ್ ಮಾಡುವುದು, ಜನರ ಬೇಡಿಕೆಗೆ ತಕ್ಕಂತೆ ಮಾರುಕಟ್ಟೆ ಸಾಗಿಸುವ ಕಾರ್ಮಿಕರು ಇದ್ದಾರೆ. ಅಲ್ಲದೆ ಇತರೆ ಸಣ್ಣ ಪುಟ್ಟ ವಿನ್ಯಾಸದ ಕೆಲಸಗಳಿಗೆ ಮಹಿಳೆಯರನ್ನು ಮಾಲೀಕರು ನೇಮಕ ಮಾಡಿಕೊಳ್ಳುತ್ತಾರೆ. ಈ ಸಂಗತಿಯನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಅಧ್ಯಯನಕ್ಕೆ ಒಳಪಡಿಸಿದಾಗ ಪುರುಷ ಮಾಡುವ ಕೆಲಸಗಳನ್ನು ಮಹಿಳೆ ಮಾಡಿಬಿಟ್ಟರೆ, ಅವರ ಕೈಯಲ್ಲಿ ದುಡಿಯುವುದು ಅವರ ಸ್ವಾಭಿಮಾನಕ್ಕೆ ಧಕ್ಕೆ ಆಗುತ್ತದೆ. ಅಧಿಕಾರಶಾಹಿ ಮನೋಭಾವದಿಂದ ಇಲ್ಲಿ ಸಹಿತ ಪಿತೃ ಪ್ರಧಾನತೆಯ ಅಧಿಕಾರದ ಮನೋಭಾವಗಳು ಕಾಣಿಸಿಕೊಳ್ಳುತ್ತವೆ. ಇಂತಹ ಕೆಲಸಗಳನ್ನು ಪುರುಷನಷ್ಟೇ ಮಹಿಳೆಗೆ ದೈಹಿಕವಾಗಿ ಮಾನಸಿಕವಾಗಿ ಶಕ್ತಿ ಇದ್ದರೂ ಅವರನ್ನು ಮಾಲೀಕರು ಜೀನ್ಸ್ ಉದ್ದಿಮೆಯ ಪ್ರಮುಖ ಕೆಲಸಗಳಿಗೆ ನೇಮಕ ಮಾಡಿಕೊಳ್ಳುವುದಿಲ್ಲ. ಮಹಿಳೆಯಾಗಿರುವ ಕಾರಣಕ್ಕೆ ಈ ರೀತಿಯ ತಾರತಮ್ಯತೆಯನ್ನು ಅನುಭವಿಸಬೇಕಾಗಿದೆ.

ಈ ಉದ್ಯಮದಲ್ಲಿ ಸ್ತ್ರೀ ಪುರುಷರು ಒಂದೇ ಕೆಲಸವನ್ನು ಅವರ ಉದ್ಯಮ ನಿಗದಿಪಡಿಸಿದ ಅವಧಿಯವರೆಗೆ ನಿಭಾಯಿಸಿದರೂ ಕೂಡ ಸ್ತ್ರೀಯರಿಗೆ ತಿಂಗಳಿಗೆ ೧೦೦೦ ರಿಂದ ೧೮೦೦ ರವರೆಗೆ ಪುರುಷರಿಗೆ ಮಾತ್ರ ೪೦೦೦ ರಿಂದ ೫೦೦೦ರೂ ವೇತನ ನೀಡಲಾಗುತ್ತದೆ. ಮಾಲೀಕರ ಈ ಬಗೆಯ ಧೋರಣೆ ತಾರತಮ್ಯತೆಯನ್ನು ತೋರಿಸುತ್ತದೆ. ಹೀಗಾಗಿ ಜಾಗತೀಕರಣದಿಂದ ಒಂದೆಡೆ ಮೇಲ್ನೋಟಕ್ಕೆ ಮಹಿಳೆಗೆ ಉದ್ಯೋಗ ಅವಕಾಶಗಳು ಲಭ್ಯವಾಗಿರುವುದು ನಿಜ ಆದರೆ ವೇತನ ಪಡೆಯುವಲ್ಲಿ ತುಂಬ ತಾರತಮ್ಯವನ್ನು ಕಾಣಬಹುದಾಗಿದೆ. ಜೊತೆಗೆ ಕೆಲಸದ ಹಂಚಿಕೆಯಲ್ಲಿಯೂ ಸಹ ಈ ರೀತಿಯ ತಾರತಮ್ಯ ಭೇಧ ಗೋಚರಿಸುತ್ತವೆ. ಇಲ್ಲಿ ಮಹಿಳೆಯರಿಗೆ ಇನ್ನೊಂದು ರೀತಿಯ ಕೆಲಸ ಸಹ ಹಂಚಲ್ಪಟ್ಟಿದ್ದಾರೆ. ಅದು ಅವರು ಮನೆಯಲ್ಲಿ ಇಷ್ಟು ಪೀಸು ಅಂತ ತಯಾರಿಸಲು ಲೆಕ್ಕ ಹಾಕಿ ಕೊಡುತ್ತಾರೆ. ಅದನ್ನು ಇಷ್ಟು ಅವಧಿಯಲ್ಲಿ ಇಷ್ಟು ಪೀಸು ಅಂತ ಹೊಲಿದು ಕೊಡಬೇಕು. ಆದರೆ ಅದಕ್ಕಿಂತ ಹೆಚ್ಚು ಪೀಸುಗಳನ್ನು ಕೇಳಿದರೂ ಕೊಡುವುದಿಲ್ಲ. ಒಂದು ವೇಳೆ ಕೊಟ್ಟರು ಅದು ಕಡಿಮೆ ಪ್ರಮಾಣದಲ್ಲಿರುತ್ತದೆ.

ಈ ರೀತಿಯ ವ್ಯವಸ್ಥೆಯಿಂದ ಅವರ ದಿನನಿತ್ಯದ ಬದುಕಿನ ಮೇಲೆ ಹಲವು ರೀತಿಯ ಪರಿಣಾಮ ಬೀರುತ್ತವೆ. ಇದರ ಕುರಿತು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಈ ಉದ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರು ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಕುಟುಂಬದಲ್ಲಿ ಯಾವುದಾದರೂ ತೊಂದರೆಗಳಿದ್ದರೆ ಅವರಿಗೆ ಯಾವುದೇ ರೀತಿಯ ರಜೆಗಳು ಕೊಡುವುದಿಲ್ಲ. ಒಂದು ವೇಳೆ ರಜೆ ನೀಡಿದರೂ ಅಂದು ಸಂಬಳವನ್ನು ನೀಡದೇ ರಜೆ ಕೊಡುತ್ತಾರೆ. ಇಲ್ಲಿ ಕೆಲಸ ಮಾಡುವ ಮಹಿಳೆಯರು ಒಂದು ತಿಂಗಳಲ್ಲಿ ನಾಲ್ಕಕ್ಕಿಂತ ಅಧಿಕ ರಜೆ ಹಾಕಿದರೆ ಅವಳನ್ನು ಕೆಲಸದಿಂದ ಕೈ ಬಿಡುವ ಪ್ರಸಂಗಗಳು ಸಹ ಉಂಟು. ಏಕೆಂದರೆ ಈ ಉದ್ಯಮದ ಮಾಲೀಕರಿಗೆ ಮಹಿಳೆಯರ ಕೆಲಸಗಳೂ ಪ್ರಮುಖವಾಗಿ ಕಾಣಿಸದೇ ಕೇವಲ ಪುರುಷ ಕೆಲಸಗಳೇ ಮುಖ್ಯವಾಗಿ ಅವರಿಗೆ ಗೋಚರಿಸುತ್ತವೆ.

ಒಟ್ಟಾರೆ ಈ ಉದ್ಯಮದಲ್ಲಿ ಮಹಿಳೆಯರು ಮಾಲೀಕರ ಮಾರುಕಟ್ಟೆ ಧೋರಣೆಯಿಂದ ಹಲವು ವಿಧವಾದ ವೇತನ ರಜೆ, ಇತ್ಯಾದಿ ಅಂಶಗಳಲ್ಲಿ ತಾರತಮ್ಯತೆಗೆ ಒಳಗಾಗಿದ್ದಾಳೆ. ಇಂತಹ ಅನ್ಯಾಯಗಳ ವಿರುದ್ಧ ಪ್ರತಿಭಟಿಸಲು ಜೀನ್ಸ್ ಉದ್ಯಮದ ಕಾರ್ಮಿಕರ ಸಂಘಟನೆಗಳು ಇಲ್ಲದಿರುವುದರಿಂದ ಕುಟುಂಬವನ್ನು ಆಕೆಯು ನಿಭಾಯಿಸುವ ಸಾಮಾಜಿಕ ಜವಾಬ್ದಾರಿಗಳ ನಡುವೆ ಅವಳು ಅನಿವಾರ್ಯವಾಗಿ ಉದ್ಯಮದಲ್ಲಿ ಕೆಲಸ ಮಾಡುತ್ತಿದ್ದಾಳೆ.

೩.೧.೮ ಬೆಂಗಳೂರಿನ ಗಾರ್ಮೆಂಟ್ಸ್ ಉದ್ದಿಮೆ

ಬೆಂಗಳೂರು ಗಾರ್ಮೆಂಟ್ಸ್ ಉದ್ದಿಮೆಯು ಹೆಚ್ಚು ಬಂಡವಾಳದೊಂದಿಗೆ ಒಂದು ಉದ್ದಿಮೆಯಲ್ಲಿ ಐದು ಸಾವಿರಕ್ಕಿಂತ ಎಂಟು ಸಾವಿರ ಕೆಲಸಗಾರರನ್ನು ಹೊಂದಿದೆ. ಮಹಿಳೆಯರು ಬಳ್ಳಾರಿ, ಬೆಳಗಾಂ, ಬಿಜಾಪುರ, ಬೀದರ್, ಗುಲ್ಬರ್ಗಾ, ಹಾಸನ ಹುಬ್ಬಳ್ಳಿ, ತುಮಕೂರು, ಹಾಗೂ ಉಡುಪಿ ಅಲ್ಲದೆ ಇನ್ನಿತರ ಪ್ರದೇಶಗಳಿಂದ ಅತಿ ಹೆಚ್ಚು ಮಹಿಳಾ ಕಾರ್ಮಿಕರು ಬೆಂಗಳೂರು ನಗರದ ಗಾರ್ಮೆಂಟ್ಸ್

[illegible]

[illegible]

[illegible]

[illegible]

[illegible]

ಉದ್ದಿಮೆಯಲ್ಲಿ ಕಂಡುಬರುತ್ತಾರೆ. ಏಕೆಂದರೆ ಇಲ್ಲಿ ಯಾವಾಗಲೂ ಕೆಲಸ ದೊರೆಯುವುದರಿಂದ ಈ ವಲಯದಲ್ಲಿ ಹೆಚ್ಚಾಗಿ ಕಾರ್ಮಿಕರು ಕಂಡುಬರುತ್ತಾರೆ. ಜೊತೆಗೆ ಯಾವುದೇ ಶಿಕ್ಷಣವಿಲ್ಲದೇ ಇದ್ದರೂ ಇಲ್ಲಿ ಕೆಲಸ ದೊರೆಯುವುದರಿಂದ ಕಾರ್ಮಿಕರ ಸಂಖ್ಯೆ ಸಹಜವಾಗಿಯೇ ಅಧಿಕ ಪ್ರಮಾಣದಲ್ಲಿದ್ದಾರೆ. ಈ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಶೇ ೮೫ ರಿಂದ ೯೦% ರಷ್ಟು ಕೆಲಸಗಾರರು ಮಹಿಳೆಯರೇ ಕಾಣಿಸಿಕೊಳ್ಳುತ್ತಾರೆ. ಬೆಂಗಳೂರಿನ ಈ ಉದ್ದಿಮೆಗಳು ಮಹಿಳೆಯರಿಗೆ ದೊಡ್ಡ ಪ್ರಮಾಣದಲ್ಲಿ ಕೆಲಸಗಳನ್ನು ದಯಪಾಲಿಸಿವೆ. ಹೀಗಾಗಿ ಬೀಡಿ ಕಟ್ಟುವ ಕೆಲಸ ಬಿಟ್ಟರೆ ನಂತರದಲ್ಲಿ ಅತಿ ಹೆಚ್ಚು ಮಹಿಳೆಯರನ್ನು ಒಳಗೊಂಡ ಒಂದು ಉದ್ದಿಮೆ ಈ ಗಾರ್ಮೆಂಟ್ಸ್ ಉದ್ದಿಮೆಯಾಗಿದೆ.

ಈ ಬಟ್ಟೆ ತಯಾರಿಸುವ ಉದ್ದಿಮೆಯಲ್ಲಿ ದಿನಂಪ್ರತಿ ಹಗಲೆಲ್ಲಾ ದುಡಿದು ಮತ್ತೆ ಮನೆಯಲ್ಲಿ ಗಂಡ, ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ಈ ಉದ್ಯಮದಲ್ಲಿ ಕೆಲಸಮಾಡುವ ಸೆಂಟ್ ಬೈಯರ್ ಹೇಳುತ್ತಾಳೆ.

ದಿನಗೂಲಿ ಇಲಾಖೆಯರ ಅಂಕಿ ಅಂಶಗಳ ಪ್ರಕಾರ ಬೆಂಗಳೂರಿನಲ್ಲಿ ೮೫೮ ಬಟ್ಟೆ ಕಾರ್ಖಾನೆಗಳಿವೆ. ಇವುಗಳಲ್ಲಿ ೧.೯೫,೯೪೩ ಕೆಲಸಗಾರರು ಕೆಲಸ ನಿರ್ವಹಿಸುತ್ತಿದ್ದಾರೆ. ಇದರಲ್ಲಿ ೧,೩೧,೮೯೮ ಮಹಿಳೆಯರು ಈ ಉದ್ಯಮೆಯಲ್ಲಿ ದುಡಿಯುತ್ತಿದ್ದಾರೆ. ಅಂದರೆ ಮಹಿಳೆಯರೆ ಹೆಚ್ಚು ಪ್ರಮಾಣದಲ್ಲಿ ಈ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ದಿನಗೂಲಿ ಅಂಕಿ–ಅಂಶ ಕೇವಲ ಸರ್ಕಾರದಿಂದ ಮಾನ್ಯತೆ ಪಡೆದ ಕಾರ್ಖಾನೆಗಳಿಂದ ಮಾತ್ರ ಪಡೆದದ್ದು. ಆದರೆ ಇನ್ನೂ ನೋಂದಣಿಯಾಗದ ಕಾರ್ಖಾನೆಗಳನ್ನು ಪರಿಗಣಿಸಿದರೆ ಸುಮಾರು ೩ ಲಕ್ಷಕ್ಕಿಂತ ಹೆಚ್ಚು ಕಾರ್ಮಿಕರು ಈ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದಾರೆ. ಅದರೆ ಇಂತಹ ಸರ್ಕಾರದ ಮಾನ್ಯತೆ ಪಡೆಯದೇ ಇರುವ ಕಾರ್ಖಾನೆಗಳಲ್ಲಿ ಕೆಲಸದ ಅನುಭವವಿಲ್ಲದ ಮತ್ತು ಕೌಶಲ್ಯಗಳಿಸದ, ಕಡಿಮೆ ಓದಿದ, ಸಂಪೂರ್ಣ ಅಕ್ಷರ ಜ್ಞಾನವಿಲ್ಲದ ಕಾರ್ಮಿಕರೇ ಬಹಳಷ್ಟು ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಉದ್ಯೋಗಗಳನ್ನು ನೀಡುವಲ್ಲಿ ವ್ಯವಸಾಯದ ನಂತರ ಸ್ಥಾನವನ್ನೂ ಬಟ್ಟೆ ಕೈಗಾರಿಕೆಗಳು ಪಡೆದುಕೊಂಡಿವೆ. ಎಫ್.ಸಿ.ಸಿ.ಐ. ಅಂಕಿ ಅಂಶಗಳ ಪ್ರಕಾರ ಬಟ್ಟೆ ತಯಾರಿಕೆ ಕೈಗಾರಿಕೆಗಳು ೩೫ ಲಕ್ಷಕ್ಕಿಂತ ಹೆಚ್ಚಿನ ಜನರಿಗೆ ದುಡಿಯುವ ಕೆಲಸವನ್ನು ನೀಡಿದೆ. ಇಂದು ನಮ್ಮ ದೇಶದ ರಫ್ತಾಗುವ ಒಟ್ಟು ಭಾಗದ ಶೇ ೧೭ರಷ್ಟು ಭಾಗವನ್ನು ಈ ಬಟ್ಟೆ ಕೈಗಾರಿಕೆಗಳು ಪಡೆದುಕೊಂಡಿವೆ. ೧೯೮೦ರಿಂದ ಈಚೆಗೆ ಯಾವಾಗ ತಂಡಗಳನ್ನಾಗಿ ವಿಭಾಗಿಸಿ ಕೆಲಸಗಾರರನ್ನು ಕೆಲಸಕ್ಕೆ ತೊಡಗಿಸಿಕೊಳ್ಳಲಾಗಿದೆಯೋ ಅಂದಿನಿಂದ ಮಹಿಳೆಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿದೆ. ಇದು ಮಹಿಳೆಯರನ್ನು ಇನ್ನಷ್ಟು ತೊಂದರೆಗೀಡು ಮಾಡಿದೆ ಎಂದು ಉಪಾಧ್ಯಕ್ಷರಾದ ಕೆ. ಆರ್. ಜಯರಾಂ ಅಭಿಪ್ರಾಯಪಡುತ್ತಾರೆ.

೧೯೮೦ರ ನಂತರ ಬಟ್ಟೆ ತಯಾರಿಸುವ ಕೈಗಾರಿಕೆಗಳ ವ್ಯಾಪಾರಾಭಿವೃದ್ಧಿಯಿಂದ ಅವರು ಹೆಚ್ಚು ಹೆಚ್ಚು ಕೆಲಸಗಾರರನ್ನು ನೇಮಕಾತಿ ಮಾಡಿಕೊಳ್ಳತೊಡಗಿದರು. ಇದರಿಂದ ವ್ಯವಸಾಯದಲ್ಲಿ ಸಾಕಷ್ಟು ಹಾನಿ ಮಾಡಿಕೊಂಡು ತೊಂದರೆಯಲ್ಲಿದ್ದ ಕುಟುಂಬದ ಮಹಿಳೆಯರು ಈ ಬಟ್ಟೆ ಕಾರ್ಖಾನೆಗಳಲ್ಲಿ ಕೆಲಸಕ್ಕೆ ಸೇರಿಕೊಂಡರು. ಅವರುಗಳ ಕುಟುಂಬಗಳಿಗೆ ಈ ಮಹಿಳೆಯರ ದುಡಿಮೆಯೇ ಮುಖ್ಯ ಆಧಾರವಾಯಿತು. ಇಂತಹ ಉದ್ದಿಮೆಯಲ್ಲಿ ಮಹಿಳಾ ಕಾರ್ಮಿಕರ ಸಂಖ್ಯೆ ಪ್ರಭಲವಾಗಿ ಬೆಳೆಯಿತು.

ಇಂತಹ ಕೈಗಾರಿಕೆಗಳ ಆಡಳಿತ ಮಂಡಳಿಯವರು ಮಹಿಳೆಯರನ್ನೇ ಹೆಚ್ಚಾಗಿ ಏಕೆ ನೇಮಕ ಮಾಡಿಕೊಳ್ಳುತ್ತಾರೆಂದರೆ, ಅವರಿಗೆ ಮಹಿಳೆಯರ ಕೆಲಸದ ಮತ್ತು ಅವರ ಶ್ರದ್ಧೆ ಬಗ್ಗೆ ನಂಬಿಕೆಯನ್ನು ಹೊಂದಿರುತ್ತಾರೆ. ಅಲ್ಲದೆ ಅವರನ್ನು ತಮ್ಮ ಕೆಲಸಗಳಿಗೆ ಲಾಭದ ದುಡಿಮೆಗೆ ಬಹಳ ಚೆನ್ನಾಗಿ ಬಳಸಿಕೊಳ್ಳಬಹುದೆಂಬ ನಂಬಿಕೆಯಿಂದ ಆಡಳಿತ ಮಂಡಳಿ ಕೂಡಿದೆ. ಯಾವುದೇ ಬೇಡಿಕೆ, ಸಂಬಳದ ಹೆಚ್ಚುವರಿ ಇತ್ಯಾದಿ ಅಂಶಗಳ ಕುರಿತು ಮಹಿಳೆಯರು ಆಡಳಿತ ಮಂಡಳಿಯ ವಿರುದ್ಧ ಧ್ವನಿ ಎತ್ತುವುದಿಲ್ಲ ಎಂಬ ಕಾರಣಕ್ಕೆ ಮಹಿಳಾ ಕಾರ್ಮಿಕರನ್ನು ನೇಮಿಸುವರು. ಇಂತಹ ಉದ್ದಿಮೆಯಲ್ಲಿ ಕೆಲಸ ಮಾಡುವ ಮಹಿಳೆಯರು ಕಡುಬಡತನದಿಂದ ಬಂದಿರುತ್ತಾರೆ. ಇಲ್ಲವೇ ಗಂಡನನ್ನು ಬಿಟ್ಟು ಒಬ್ಬಂಟಿಯಾಗಿ ಬಂದಿರುವರಿದ್ದಾರೆ. ಇಂತಹ ಸಮಯದಲ್ಲಿ ಬೇರೆದಾರಿ ಕಾಣದೆ ಸಂಬಳ ಕಡಿಮೆಯಾದರೂ, ಕೆಲಸದ ಒತ್ತಡ ಅಧಿಕವಿದ್ದರೂ ಸಹಿಸಿಕೊಂಡು ದುಡಿಮೆಯಲ್ಲಿ ತೊಡಗುತ್ತಾರೆ. ಮಾಲೀಕರು ಕಾರ್ಮಿಕರನ್ನು ನೇಮಕಾತಿ ಮಾಡುವ ಸಂದರ್ಭದಲ್ಲಿ ಖಾಲಿ ಬಿಳಿ ಹಾಳೆಯ ಮೇಲೆ ಸಹಿ ಮಾಡಿಸಿಕೊಳ್ಳುವರು. ಅಲ್ಲದೆ ತಮ್ಮ ಹಾಗೂ ಆಡಳಿತ ಮಂಡಳಿಯವರ ನಡುವೆ ಯಾವುದೇ ರೀತಿಯ ಕಾನೂನು ಬದ್ಧ ಒಪ್ಪಂದ ಮಾಡಿಕೊಂಡಿರುವುದಿಲ್ಲ. ಇದರಿಂದ ಆಡಳಿತ ಮಂಡಳಿಯವರಿಗೆ ತಮಗೆ ಬೇಡವಾದಾಗ ಈ ಕೆಲಸಗಾರರನ್ನು ತೆಗೆದು ಹಾಕುವ ಅವಕಾಶವು ಸುಲಭವಾಗುತ್ತದೆ.

ಎಲ್ಲಾ ಕಾರ್ಖಾನೆಗಳಲ್ಲಿ ಎಂಟು ವರ್ಷಕ್ಕಿಂತ ಹೆಚ್ಚಿನ ಸಮಯ ಕೆಲಸ ಮಾಡುತ್ತಾ ಬಂದಂತಹ ಎಲ್ಲಾ ಕೆಲಸಗಾರರನ್ನು ಪುನರ್‌ನೇಮಕ ಮಾಡಿಕೊಳ್ಳುತ್ತಾರೆ. ಇದರಿಂದ ಕಾರ್ಮಿಕರಿಗೆ ಹೆಚ್ಚಿನ ಬಡ್ತಿ ಹಣವನ್ನು ಕೊಡುವುದನ್ನು ತಪ್ಪಿಸಿದಂತಾಗುತ್ತದೆ. ಇದರಿಂದ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯದ ಬಗೆಗೆ ಸ್ಪಷ್ಟವಾಗಿ ತಿಳಿಯಬಹುದಾಗಿದೆ. ಇದಲ್ಲದೆ ಕಾರ್ಮಿಕರಲ್ಲಿ ಒಗ್ಗಟ್ಟು ಇಲ್ಲದ ಹಾಗೆ ಅವರವರಲ್ಲಿ ಹೊಂದಾಣಿಕೆ ಇಲ್ಲದ ಹಾಗೆ ಈ ಕಾರ್ಖಾನೆಯ ಮುಖ್ಯಸ್ಥರು ನೋಡಿಕೊಳ್ಳುತ್ತಾರೆ. ಹಾಗೂ ಕಾರ್ಖಾನೆಯ ಕೆಲಸಗಾರರು ಯಾವುದೇ ಇತರ ಸಂಘ-ಸಂಸ್ಥೆಗಳ ಜೊತೆ ಬೆರೆಯದ ಹಾಗೆ ನೋಡಿಕೊಳ್ಳುತ್ತಾರೆ. ಇದು ತಮ್ಮ ವಿರುದ್ಧ ಎಂದೂ ಯಾವುದೇ ಕಾರಣಕ್ಕೂ ಕಾರ್ಮಿಕರು ಮುಷ್ಕರ ಆಗದಂತೆ ನೋಡಿಕೊಳ್ಳುವ ಕೆಲವು ತಂತ್ರಗಳನ್ನು ಮಾಲೀಕರು ಉಪಯೋಗಿಸುತ್ತಾರೆ.

ಉದಾ:- 'ಸೂಜಿದಾರ' ಎಂಬ ಪತ್ರಿಕೆಯು ವಿಶೇಷವಾಗಿ ಗಾರ್ಮೆಂಟ್ಸ್ ಮಹಿಳೆಯರ ಸಮಸ್ಯೆಗಳ ಕುರಿತು ಹೊರತರುವ ಪತ್ರಿಕೆಯಾಗಿದೆ. ಈ ಸಂಸ್ಥೆಗೆ ಸದಸ್ಯತ್ವ ಪಡೆದ ಸಾಕಷ್ಟು ಮಹಿಳೆಯರನ್ನು

[illegible]

[illegible]

[illegible]

[illegible]

ಅನವಶ್ಯಕ ಕಾರಣ ಹುಡುಕಿ ಫ್ಯಾಕ್ಟರಿಮಾಲೀಕರು ಕೆಲಸದಿಂದ ತೆಗೆದು ಹಾಕುತ್ತಾರೆ. ಏಕೆಂದರೆ ಇವರು ಹೋರಾಟ ಮಾಡಿ ತಮ್ಮ ಹಕ್ಕುಗಳನ್ನು ಸಾಧಿಸಿಕೊಳ್ಳುತ್ತಾರೆ. ಎಂಬ ಮುಂಜಾಗ್ರತೆಯ ಕ್ರಮದಿಂದ ಈ ಮಹಿಳೆಯರನ್ನು ಕೆಲಸದಿಂದ ತೆಗೆದು ಹಾಕುತ್ತಾರೆ.

ಆದರೆ ದಿನಗೂಲಿ ಇಲಾಖೆಯು ಇಂತಹ ದಿನಗೂಲಿ ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸಲು ಸಿದ್ಧವಿದ್ದರೂ ಸಹ ಯಾವುದೇ ಕಾರ್ಮಿಕರು ತಮ್ಮ ಸಂಸ್ಥೆ ಮತ್ತು ಕಾರ್ಖಾನೆಯ ಆಡಳಿತ ಮಂಡಳಿಯ ವಿರುದ್ಧ ದೂರು ಕೊಡಲು ಮುಂದೆ ಬರುವುದಿಲ್ಲ ಎಂದು ದಿನಗೂಲಿ ಇಲಾಖೆಯ ಮುಖ್ಯಸ್ಥರಾದ ವಿ.ವಿ.ಹಿಟ್ಟನಗಿ ಪ್ರತಿಕ್ರಿಯಿಸುತ್ತಾರೆ. ಬಹಳಷ್ಟು ಕೆಲಸಗಾರರಿಗೆ ತಮ್ಮ ದೂರನ್ನು ಸ್ವೀಕರಿಸುವ ಮತ್ತು ಸೂಕ್ತ ಕ್ರಮಕ್ಕಾಗಿ ಆಡಳಿತ ಮಂಡಳಿಗೆ ಸೂಚನೆ ಕೊಡುವ ಒಂದು ಇಲಾಖೆ ಇದೆ ಎಂಬುದು ಕೂಡ ಅವರಿಗೆ ಗೊತ್ತಿಲ್ಲ ಎಂದು 'ಹಿಟ್ಟಣಗಿ' ತಿಳಿಸುತ್ತಾರೆ.

ಈ ಮೇಲಿನ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕಾದರೆ ಕಾರ್ಮಿಕರು ಮೊದಲು ಒಂದಾಗಿ ಪ್ರತಿಭಟಿಸಬೇಕು. ಒಗ್ಗಟ್ಟಿನಿಂದ ತಮ್ಮ ಸಮಸ್ಯೆ, ವೇತನ, ರಜೆ ಮಂಜೂರಾತಿ, ಮುಂತಾದ ವಿಷಯಗಳಲ್ಲಿ ಅಗುತ್ತಿರುವ ಅನ್ಯಾಯದ ವಿರುದ್ಧ ಪ್ರತಿಭಟಿಸಿದರೆ ಮಾತ್ರ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು ಎಂದು ಪತ್ರಿಕಾ ವರದಿಗಾರರು ಅಭಿಪ್ರಾಯ ಪಡುತ್ತಾರೆ.

ಉದ್ದಿಮೆಯಲ್ಲಿ ಪ್ರೊಡಕ್ಷನ್ ಹೆಚ್ಚಿಸುವ ಕಾರಣ ಕೆಲಸ ಮಾಡುವ ಕಾರ್ಮಿಕರಿಗೆ ಊಟದ ವಿರಾಮದ ಅವಧಿಯನ್ನು ಕೇವಲ ಅರ್ಧ ಗಂಟೆಗಿಂತ ಹೆಚ್ಚು ಸಮಯ ಕೊಡುವುದಿಲ್ಲ. ಈ ಅವಧಿಯಲ್ಲಿ ಸ್ವಲ್ಪ ಏರುಪೇರಾದರೂ ಕೆಲಸದಿಂದಲೇ ತೆಗೆದುಹಾಕಬಹುದಾದ ಸಾಧ್ಯತೆಗಳಿವೆ. ಅಷ್ಟೇ ಅಲ್ಲದೆ ಕಾರ್ಮಿಕರು ಮೂತ್ರಕ್ಕೆ ಹೋಗಬೇಕಾದರೂ ಕೂಡ ಅಲ್ಲಿ ಕಾವಲುಗಾರರನ್ನು ನೇಮಕ ಮಾಡಿರುತ್ತಾರೆ. ಏಕೆಂದರೆ ಮಹಿಳೆಯರು ಅಲ್ಲೆ ಹೆಚ್ಚು ಸಮಯ ಕಳೆಯಬಾರದೆಂದು ಆ ರೀತಿ ವ್ಯವಸ್ಥೆ ಮಾಡಿರುತ್ತಾರೆ ಎಂದು ಚಂದ್ರಶೇಖರವರು ಅಭಿಪ್ರಾಯಪಡುತ್ತಾರೆ. ಕಾರ್ಮಿಕರಿಗಾಗಿ ಸಮರ್ಪಕವಾಗಿ ಕುಡಿಯುವ ನೀರಿನ ವ್ಯವಸ್ಥೆ ಕೂಡಾ ಮಾಡಿರುವುದಿಲ್ಲ. ಯಾರಾದರು ಹೈಯರ್ ಆಫಿಸರ್ ಬಂದಾಗ ಸ್ವಚ್ಛವಾದ ನೀರು, ಮಾಸ್ಕ್, ಹ್ಯಾಂಡ್ ಗ್ಲೋಜ್ ಇನ್ನಿತರ ಎಲ್ಲ ಸೌಲತ್ತನ್ನು ಒದಗಿಸುತ್ತಾರೆ. ಅಧಿಕಾರಿಗಳು ಬಂದು ಕಾರ್ಮಿಕರಿಗೆ ವಿಚಾರಿಸಿದರೆ ಎಲ್ಲಾ ರೀತಿಯ ಸೌಲಭ್ಯಗಳು ನಮಗೆ ದೊರೆಯುತ್ತವೆ ಎಂದು ಹೇಳಬೇಕು. ಒಂದು ವೇಳೆ ಅಧಿಕಾರಿಗಳ ಮುಂದೆ ಮಾಲೀಕರ ಬಗ್ಗೆ ಉತ್ತಮ ಅಭಿಪ್ರಾಯ ಹೇಳದಿದ್ದರೆ ತಕ್ಷಣವೆ ಕೆಲಸದಿಂದ ತೆಗೆದುಹಾಕುತ್ತಾರೆ. ಬಡತನದಿಂದ ಬದುಕುತ್ತಿರುವ ಇವರು ಅನಿವಾರ್ಯವಾಗಿ ಮಾಲೀಕರು ಹೇಳಿದ ಹಾಗೆ ಕೇಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುತ್ತದೆ. ಒಂದು ವೇಳೆ ಕೆಲಸದಿಂದ ತೆಗೆದುಹಾಕಿದರೆ ಅದನ್ನು ಪ್ರತಿಭಟಿಸಿ ಪುನಃ ಕೆಲಸ ಗಿಟ್ಟಿಸುವ ಶಕ್ತಿ ಇಲ್ಲದ ಕಾರಣ ಎಷ್ಟೇ ಸಮಸ್ಯೆಗಳು ಎದುರಾದರೂ ಸಹಿಸಿಕೊಂಡು ಯತಾವತ್ತಾಗಿ ಕೆಲಸ ಮಾಡುತ್ತಾರೆ.

೩.೧.೯ ಬೆಂಗಳೂರು ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕೆಲಸದ ಹಂಚಿಕೆ ಸ್ವರೂಪ

ದಿನಬೆಳಗಾದರೆ ಗಾರ್ಮೆಂಟ್ಸ್ ಮಹಿಳೆಯರ ಪರಿಸ್ಥಿತಿಯು ಊಹಿಸಲು ಅಸಾಧ್ಯವಾದದ್ದು. ಏಕೆಂದರೆ ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವ ತನಕ ದೈಹಿಕವಾಗಿ ಮಾನಸಿಕವಾಗಿ ಶಕ್ತಿಯನ್ನು ಕಳೆದುಕೊಂಡು ತನ್ನ ಬದುಕನ್ನು ಸವೆಸುತ್ತಾಳೆ. ಉದ್ದಿಮೆಯು ನಿಗದಿಪಡಿಸಿದ ಅವಧಿಯು ಬರುವಷ್ಟರಲ್ಲಿ ತನ್ನ ಎಲ್ಲಾ (ಗಂಡ ಮತ್ತು ಅಡುಗೆ) ಕೆಲಸಗಳನ್ನು ಮುಗಿಸಿಕೊಂಡು ಕಾರ್ಖಾನೆಗೆ ಹೋಗಬೇಕಾಗುತ್ತದೆ. ಫ್ಯಾಕ್ಟ್ರಿಯ ಸಮಯ ಒಂಬತ್ತು ಗಂಟೆ. ಒಂಬತ್ತು ಗಂಟೆ ಆಗುವಷ್ಟರಲ್ಲಿ ಎಲ್ಲಾ ಕಾರ್ಮಿಕರು ಫ್ಯಾಕ್ಟ್ರಿ ಒಳಗಡೆ ಇರಬೇಕು. ಅದಕ್ಕಿಂತ ಮುಂಚೆ ಫ್ಯಾಕ್ಟ್ರಿಯಲ್ಲಿ ಎರಡು ಸೈರಾನ್ ಕೂಗುತ್ತದೆ. ಅಷ್ಟರಲ್ಲಿ ಎಲ್ಲರೂ ಹಾಜರಾಗಿ ತಮ್ಮ ತಮ್ಮ ಕೆಲಸಕ್ಕೆ ಸಿದ್ಧತೆಗೊಂಡಿರಬೇಕು. ಸ್ವಲ್ಪ ಲೇಟಾಗಿ ಬಂದರೂ ಅವರನ್ನು ಹೊರಗೆ ನಿಲ್ಲಿಸುವುದು. ಪ್ರತಿದಿನ ತಡವಾಗಿ ಬಂದರೆ ಕೆಲಸದಿಂದಲೇ ತೆಗೆದು ಹಾಕಲಾಗುತ್ತದೆ. ಒಂದೊಂದು ಏರಿಯದ ಕಡೆ ಅರ್ಧಗಂಟೆಯಲ್ಲಿ ಐದಾರು ಸಾವಿರ ಕಾಣುವ ಕಾರ್ಮಿಕರು ಕೆಲವೇ ಕ್ಷಣದಲ್ಲಿ ಹಾಜರಾತಿ ಪಡೆದ ಮೇಲೆ ಒಂದು ನರಪಿಳ್ಳೆನೂ ಕಾಣುವುದಿಲ್ಲ. ಒಂದು ರೀತಿಯಲ್ಲಿ ಅಪರಿಚಿತರಿಗೆ ಭಯಾನಕ ವಾತಾವರಣವಾಗಿರುತ್ತದೆ. ಇಲ್ಲಿ ಕಾಣುವಂತ ಕಾರ್ಮಿಕರಲ್ಲಿ ೧೦೦ ಕ್ಕೆ ೯೯ ರಷ್ಟು ಜನ ಮಹಿಳಾ ಕಾರ್ಮಿಕರೇ ಕಂಡುಬರುತ್ತಾರೆ. ಕಾರಣ ಅವರು ಯಾವುದನ್ನು ಪ್ರಶ್ನಿಸುವುದಿಲ್ಲ ಸಂಬಳ ಹೆಚ್ಚು ಮಾಡು ಅಂತ ಕೇಳುವುದಿಲ್ಲ, ಕೆಲಸದಿಂದ ತೆಗೆದುಹಾಕಿದರು ಯಾವುದೇ ಸ್ಟ್ರೈಕ್ ಮಾಡುವುದಿಲ್ಲ. ಓ.ಟಿ. ಮಾಡಲೇಬೇಕು ಅಂದ್ರೆ ಮಾಡುತ್ತಾರೆ. (ಆದರೆ ಅದಕ್ಕಿಂತ ಮುಂಚೆ ಕೆಲಸಕ್ಕೆ ನೇಮಕ ಮಾಡುವಾಗಲೇ ಓವರ್ ಟೈಮ್ ಡ್ಯೂಟಿ ಮಾಡಲೇಬೇಕು ಅಂತ ಕರಾರು ಮಾಡಿಕೊಂಡಿರುತ್ತಾರೆ.) ಮಹಿಳೆಯರು ಒಪ್ಪಿಕೊಂಡು ಪತ್ರಕ್ಕೆ ಸಹಿ ಹಾಕಿದಾಗ ಮಾತ್ರ ಅವರನ್ನು ನೇಮಕ ಮಾಡಿಕೊಳ್ಳುತ್ತಾರೆ. ಹೀಗಾಗಿ ಮಹಿಳೆಯರು ಫ್ಯಾಕ್ಟ್ರಿಯಿಂದ ಎಷ್ಟೇ ಕಷ್ಟ ಬಂದರೂ ಎಲ್ಲದನ್ನೂ ಸಹಿಸಿಕೊಂಡು ಕೆಲಸ ಮಾಡುತ್ತಾರೆ. ಏಕೆಂದರೆ ಬದುಕಿನ ಅನಿವಾರ್ಯತೆಗೆ ಎಂತಹ ಕಷ್ಟಗಳನ್ನು ಸಹ ಎದುರಿಸಿಕೊಂಡು ಉದ್ದಿಮೆಯಲ್ಲಿ ದುಡಿಯುತ್ತಾರೆ. ಅವರಿಗೆ ಕೆಲಸ ಹಂಚುವಲ್ಲಿಯೂ ಕೂಡ ಮಾಲೀಕರು ಒಳತಂತ್ರವನ್ನು ಬಳಸುತ್ತಾರೆ. ಮಾಲೀಕರ ಮೂಲ ಧೋರಣೆ ಲಾಭ ಪಡೆಯುವುದು, ಮಾಲೀಕರು ಮೂಲಭೂತವಾಗಿ ಲಾಭ ಧೋರಣೆ ಹೊಂದಿರುವುದರಿಂದ ಇವತ್ತಿನ ದಿನದಲ್ಲಿ ಲಕ್ಷಾನುಲಕ್ಷಗಟ್ಟಲೆ ಮಹಿಳೆಯರ ಜೀವನ ಅತಂತ್ರ ಸ್ಥಿತಿಗೆ ತಳ್ಳಲ್ಪಟ್ಟಿದೆ. ಅವರು ಯಾವಾಗಲೂ ಅಭದ್ರತೆಯ ಮತ್ತು ಭಯದ ವಾತಾವರಣದಲ್ಲೆ ಬದುಕುವ ವ್ಯವಸ್ಥೆಯನ್ನು ಸೃಷ್ಟಿಸುತ್ತದೆ. ಈ ಮಹಿಳೆಯರಿಗೆ ಯಾವುದೇ ಕೆಲಸದಲ್ಲಿ ಪರಿಣತಿ ಹೊಂದಲಾರದಂತಹ ವ್ಯವಸ್ಥೆಯನ್ನು ಅಲ್ಲಿ ರೂಪಿಸಿರುತ್ತಾರೆ.

ಅವರಿಗೆ ಚಕರ್, ಕಟ್ಟರ್, ಹೆಲ್ಪರ್, ಟೇಲರ್, ಇದರಲ್ಲೆ ಮತ್ತೆ ಕೆಲವು ವಿಭಾಗಗಳನ್ನು ಮಾಡಿರುತ್ತಾರೆ. ತೋಳು ಹಚ್ಚುವುದು, ಕಾಲರ್ ಹಚ್ಚುವುದು, ಬಾಟ್ ಹಚ್ಚುವುದು, ಗುಂಡಿ ಹಚ್ಚುವುದು ದಾರ ಕಟ್ಟುವುದು, ಫಿನಿಶಿಂಗ್ ಮಾಡುವುದು, ಇಸ್ತ್ರಿ ಮಾಡುವುದು ಇನ್ನಿತರ ಸಣ್ಣ ಪುಟ್ಟ ಎಲ್ಲ ಕೆಲಸಗಳಿಗೂ ಹೆಚ್ಚಾನು ಹೆಚ್ಚಾಗಿ ಮಹಿಳೆಯರನ್ನೆ ನೇಮಕ ಮಾಡಿಕೊಳ್ಳುತ್ತಿದ್ದರು. ಮಹಿಳೆಯರಿಗೆ ಹೋಲಿಸಿದರೆ ಪುರುಷ ಕಾರ್ಮಿಕರೆ ಕಡಿಮೆ ಅಂತ ಅನ್ನಬಹುದು. ಏಕೆಂದರೆ ಮಾಲೀಕರು ಪುರುಷ ಕಾರ್ಮಿಕರನ್ನು

[illegible]

[illegible]

ಅಷ್ಟು ಬಗೆಯ ಕೆಲಸಕ್ಕೆ ತೆಗೆದುಕೊಂಡಿರುವುದಿಲ್ಲ. ಕಾರಣ ಅವರಿಗೆ ಕೆಲಸದಲ್ಲಿ ಅಥವಾ ಕೆಲಸದ ಬಗ್ಗೆ ಯಾವುದೇ ಗಂಭೀರತೆ ಇರುವುದಿಲ್ಲ. ಅಲ್ಲದೆ ಸಣ್ಣ ಪುಟ್ಟ ಸಮಸ್ಯೆ ಆದರೂ ಜಗಳ ಮಾಡಿ ದೊಡ್ಡ ಗಲಾಟೆ ಮಾಡಿಬಿಡುತ್ತಾರೆ. ಹೀಗಾಗಿ ಪುರುಷ ಕಾರ್ಮಿಕರು ಫ್ಯಾಕ್ಟ್ರಿಯಲ್ಲಿ ಹೆಚ್ಚು ಕೆಲಸಕ್ಕೆ ತೆಗೆದು ಕೊಳ್ಳುವುದಿಲ್ಲ ಮಹಿಳಾ ಕಾರ್ಮಿಕರನ್ನು ಆಕಾರಣವಾಗಿ ಅತಿ ಹೆಚ್ಚು ಕೆಲಸಕ್ಕೆ ನೇಮಕಮಾಡಿಕೊಳ್ಳುತ್ತಾರೆ. ಇದರಿಂದ ಕಾಯ್ದೆ, ಕಾನೂನುಗಳ ಸರಿಯಾದ ತಿಳುವಳಿಕೆ ಇಲ್ಲದ ಮಹಿಳೆಯರು ಗಾರ್ಮೆಂಟ್ಸ್‌ಗಳಲ್ಲಿ ನಿತ್ಯ ಮಾನಸಿಕವಾಗಿ ದೈಹಿಕವಾಗಿ ಶೋಷಣೆಯನ್ನು ಅನುಭವಿಸುತ್ತಲೇ ಬದುಕುತ್ತಿದ್ದಾರೆ. ಏಕೆಂದರೆ ಬೆಳಿಗ್ಗೆ ಎಂಟುವರೆಯಿಂದ ರಾತ್ರಿ ಏಳು ಗಂಟೆಯವರೆಗೆ ನಿಂತುಕೆಲಸ ಮಾಡುವ ಮಹಿಳೆ ಅನೇಕ ರೀತಿಯಲ್ಲಿ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾಳೆ. ಎಷ್ಟೇ ಕಷ್ಟಪಟ್ಟು ಕೆಲಸ ಮಾಡಿದರೂ ಕೆಲಸದಲ್ಲಿ ಸ್ವಲ್ಪ ಕೂಡ ವ್ಯತ್ಯಾಸವಾದರೂ ಬಾಯಿಗೆ ಬಂದ ಹಾಗೆ ಬೈಯುವ ಮಾಲಿಕರಿರುತ್ತಾರೆ. ಗಾರ್ಮೆಂಟ್ಸ್‌ಗಳಲ್ಲಿ ಮಹಿಳೆಯ ಸ್ವಾಭಿಮಾನಕ್ಕೆ ಧಕ್ಕೆ ಆಗುವ, ಮಾನಸಿಕವಾಗಿ ಹಿಂಸಿಸುವ ಕೆಲವೊಂದು ಘಟನೆಗಳು ಸಹ ನಡೆಯುತ್ತವೆ. ಅದೆಲ್ಲವನ್ನು ಸಹಿಸಿಕೊಂಡು ಮಹಿಳೆ ಮತ್ತಷ್ಟು ಖಿನ್ನತೆಗೆ ಒಳಗಾಗುತ್ತಾಳೆ.

ಜಾಗತೀಕರಣವು ಮಹಿಳೆಯರ ಮೇಲೆ ಅನೇಕ ರೀತಿಯ ಪ್ರಭಾವವನ್ನು ಬೀರಿದೆ. ಜಾಗತೀಕರಣದ ವ್ಯವಸ್ಥೆಯಿಂದ ಇಂದು ದುಡಿಯುವ ಮಹಿಳೆ ಅನೇಕ ರೀತಿಯ ಸಮಕಾಲಿನ ಸ್ಪರ್ಧೆಗೆ ಇಳಿಯುವಂತಾಗಿದೆ.

ಉದಾಹರಣೆಗೆ ಗಾರ್ಮೆಂಟ್ಸ್ ಮಹಿಳೆಯರನ್ನು ತೆಗೆದುಕೊಂಡಾಗ ಮಹಿಳೆಯರು ಮಾಲೀಕರ ದೌರ್ಜನ್ಯವನ್ನು ಅನುಭವಿಸಲಾರದೆ ಮುಷ್ಕರ ಮಾಡಿದರೆ ಕೆಲಸದಿಂದಲೇ ತೆಗೆಯುತ್ತಾರೆ ಅವರು ಯಾವುದೇ ರೀತಿಯಲ್ಲಿ ಗೋಗರೆದರು ಕೆಲಸ ದೊರೆಯಲಾರದು. ಏಕೆಂದರೆ ದಿನನಿತ್ಯ ಸಾವಿರಾನುಗಟ್ಟಲೆ ಕೆಲಸವಿಲ್ಲದೆ ನಿರುದ್ಯೋಗಿಗಳು ಇರುವ ಕಾರಣ ಮಾಲೀಕರು ಯಾರಿಗೂ ಅವಲಂಬನೆಯಾಗಿರುವುದಿಲ್ಲ. ಮಹಿಳೆ ಮನೆಯ ಇಡೀ ಕುಟುಂಬದ ಜವಾಬ್ದಾರಿಯನ್ನು ಹೊತ್ತಿರುವುದರಿಂದ, ಮಕ್ಕಳ ಬದುಕಿನ ಭವಿಷ್ಯ ಎಲ್ಲವನ್ನು ಮನಗಂಡು ಅನಿವಾರ್ಯವಾಗಿ ಫ್ಯಾಕ್ಟ್ರಿ ಕೆಲಸಕ್ಕೆ ಹೋಗುತ್ತಾಳೆ.

ಜಾಗತೀಕರಣ ಮನುಷ್ಯ ಸಮಾಜದ ವಿಕಾಸದೊಂದಿಗೆ ಪ್ರಾರಂಭಗೊಂಡು ಸಾಮಾಜಿಕ, ರಾಜಕೀಯ, ಮತ್ತು ಆರ್ಥಿಕ ಸ್ಥಿತ್ಯಂತರಗಳ ಜೊತೆ ಜೊತೆಗೆ ಪುರುಷ ಸ್ತ್ರೀಯರ ನಡುವಿನ ಸಂಬಂಧಗಳಲ್ಲಿಯೂ ಮತ್ತು ನಡುವಿಕೆಗಳಲ್ಲಿಯೂ ಬದಲಾವಣೆಯು ನಡೆಯುತ್ತಿರುವುದನ್ನು ನೋಡಿದಾಗ ಜಾಗತೀಕರಣದ ಪ್ರಭಾವ ಸ್ತ್ರೀ ಪುರುಷರ ನಡುವಿನ ಶೋಷಣೆಯನ್ನು ಸಮಜದಲ್ಲಿ ಕ್ಷೀಣಿಸುವಂತೆ ನಡೆಯುತ್ತದೆ. ವೈಜ್ಞಾನಿಕ ದೃಷ್ಟಿಕೋನದ ಮುಖಾಂತರ ಗಮನಿಸಿದಾಗ ಪ್ರಗತಿ, ಶೈಕ್ಷಣಿಕ ವಿಕಾಸ, ಸಾಮಾಜಿಕ ಪ್ರಜ್ಞೆ, ರಾಜಕೀಯ ಪ್ರಜ್ಞೆ, ಅರಿವಿನ ಹಕ್ಕು ಇವೆಲ್ಲದರ ನಡುವೆ ಸ್ತ್ರೀ-ಪುರುಷ ವರ್ಗದ ತಾರತಮ್ಯ ಕಡಿಮೆಯಾಗುತ್ತವೆ ಎನ್ನಬಹುದಾದರೂ, ಮಹಿಳೆಯರ ಮೇಲಿನ ಶೋಷಣೆ, ದೌರ್ಜನ್ಯ ದಬ್ಬಾಳಿಕೆಗಳು ಇನ್ನು ಹೆಚ್ಚಾಗುತ್ತಿವೆ. ವಿನಾಃ ಕಡಿಮೆಯಾಗುತ್ತಿಲ್ಲ, ಸಾಮಜಿಕ ವ್ಯವಸ್ಥೆಯಲ್ಲಿನ ಅತ್ಯಂತ ಕ್ಷಿಪ್ರ ಬೆಳವಣಿಗೆಯಲ್ಲಿ ಗುರುತಿಸಲಾದ

[illegible]

[illegible]

[illegible]

[illegible]

ಲಿಂಗತಾರತಮ್ಯದಲ್ಲಿನ ವ್ಯತ್ಯಾಸದ ಮೇಲೆ ಜಾಗತೀಕರಣ ಪ್ರಭಾವ ಬೀರಿರುವುದಕ್ಕೆ ಅನೇಕ ಆಧಾರಗಳಿವೆ. " ಜಾಗತೀಕರಣವು ಮಹಿಳೆಯರ ಮತ್ತು ಪುರುಷರ ನಡುವಣ ಅಸಮಾನತೆ ಹೆಚ್ಚಿಸುತ್ತದೆ" ಇದರಿಂದ ಮಹಿಳೆಯರ ಮೇಲೆ ಅನೇಕ ರೀತಿಯಲ್ಲಿ ದುಷ್ಪರಿಣಾಮ ಉಂಟಾಗಿವೆ.

೧೯೯೧ರಲ್ಲಿ ಮುಕ್ತ ಮಾರುಕಟ್ಟೆ ನೀತಿಯನ್ನು ಅನುಸರಿಸಿದ ಮೇಲೆ ಸಿದ್ಧ ಉಡುಪು ತಯಾರಿಸುವ ಕೈಗಾರಿಕೆಗಳಲ್ಲಿನ ರಫ್ತು ಮಾಡುವ ಸಾಮರ್ಥ್ಯ ಹೆಚ್ಚಳವಾಗಿದೆ. ಇದರಿಂದ ತಿಳಿದುಬರುವಂತೆ ಕಳೆದ ಒಂದೂವರೆ ದಶಕಗಳಿಂದ ಸಿದ್ಧಉಡುಪಿನ ತಯಾರಿಕೆಯಲ್ಲಿ ಗಣನೀಯವಾಗಿ ಏರಿಕೆ ಕಂಡು ಬಂದಿದೆ. ಅಂದರೆ ಸ್ತ್ರೀ ಮತ್ತು ಪುರುಷ ಉದ್ಯೋಗಿಗಳು ಈ ಬೆಳವಣಿಗೆಯಲ್ಲಿ ಸರಿಸಮಾನ ಪಾಲು ಪಡೆದಿದ್ದಾರೆಯೇ? ಈ ಪ್ರಶ್ನೆಗೆ ಸಂಬಂಧಿಸಿದ ಉತ್ತರವು ಇನ್ನೊಂದು ಪ್ರಶ್ನೆಯನ್ನು ಅವಲಂಬಿಸಿರುತ್ತದೆ. ಕೆಲಸ ನಡೆಯುವ ಸ್ಥಳದಲ್ಲಿ ಲಿಂಗಸೂಕ್ಷ್ಮತೆ ಇದೆಯ? ಎನ್ನುವುದೇ ಆ ಪ್ರಶ್ನೆ? ಈ ಪ್ರಶ್ನೆ ಏಕೆ ಮುಖ್ಯವಾಗುತ್ತದೆ ಎಂದರೆ ಉದ್ಯೋಗ ನೀಡುವವರು ಹೆಂಗಸರ ಮೇಲಾಧಿಕಾರಿಯಾಗಿ ನುರಿತ ಅಥವಾ ನುರಿತಿಲ್ಲದ ಗಂಡಸರನ್ನು ಕೈಗಾರಿಕೆಯು ಬೆಳೆಯುವ ಹಾಗೆ ನೇಮಿಸಿಕೊಳ್ಳುತ್ತಾರೆ. ಇದಕ್ಕೆ ಕಾರಣಗಳು ಹೀಗಿವೆ.

೧. ಮಹಿಳಾ ಕೆಲಸಗಾರರು ಗಂಡಸರಿಗಿಂತ ಕಡಿಮೆ ವೇತನಕ್ಕೆ ದೊರೆಯುವರು.

೨. ಮಹಿಳೆಯರು ಗಂಡಸರಿಗೆ ಹೋಲಿಸಿದರೆ ನಯವಿನಯವಾಗಿ ಮತ್ತು ಕಾನೂನು ರೀತಿಯಲ್ಲಿ ನಡೆದುಕೊಳ್ಳುವರು.

೩. ಮಹಿಳಾ ಕೆಲಸಗಾರರು ಗಂಡಸರಿಗಿಂತ ಹೆಚ್ಚು ದುಡಿಯುತ್ತಾರೆ.

೪. ಮಹಿಳಾ ಕೆಲಸಗಾರರು ಗಂಡಸರಿಗಿಂತ ಕಡಿಮೆ ಸಂಪರ್ಕ ಕಡಿಮೆ ಸಂಬಂಧ ಮತ್ತು ಕಡಿಮೆ ಹಠಮಾರಿತನದವರಾಗಿರುತ್ತಾರೆ.

ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿರುವ ಸಿದ್ಧಉಡುಪು ತಯಾರಿಕಾ ಸ್ಥಳಗಳಲ್ಲಿಯ ಲಿಂಗಸೂಕ್ಷ್ಮತೆಯನ್ನು ಅವಲೋಕಿಸುತ್ತದೆ ಈ ಕಾರಣಕ್ಕಾಗಿ ಬೆಂಗಳೂರು, ಬಳ್ಳಾರಿ ಮೊದಲಾದ ಸ್ಥಳಗಳಿಂದ ಸುಮಾರು ೧೫೧ ಸಿದ್ಧ ಉಡುಪು ಘಟಕಗಳಿಂದ ಮಾಹಿತಿಯನ್ನು ಸಂಗ್ರಹಣೆ ಮಾಡಲಾಗಿದೆ.

ಶೇ.೬೩%ರಷ್ಟು ಮಾದರಿಗಳೂ ಮಹಿಳಾ ಕಾರ್ಮಿಕರಿಗೆ ಸಂಬಂಧಿಸಿದವು. ಭಾರತದಲ್ಲಿ ಸಿದ್ಧ ಉಡುಪು ಕೈಗಾರಿಕೆಯು ನಮ್ಮ ದೇಶದ ಒಟ್ಟುರಪ್ತಿನಲ್ಲಿ ೧೬% ರಷ್ಟು ಪಾಲನ್ನು ಹೊಂದಿರುತ್ತಾರೆ. ಇದು ದೇಶದ ಅತ್ಯಂತ ವಿದೇಶಿ ವಿನಿಮಯವನ್ನು ಪಡೆಯುವ ಉದ್ದಿಮೆಯಾಗಿದೆ. ೧೯೮೦ರ ದಶಕದಲ್ಲಿ ಈ ಉದ್ದಿಮೆಯು ಅತ್ಯಂತ ಹೆಚ್ಚು ಬೆಳವಣಿಗೆ ಕಂಡಿತು. ೧೯೬೦-೬೧ರ ಕಾಲಕ್ಕೆ ಉದ್ದಿಮೆಯ ರಫ್ತು ಕೇವಲ ೧೨ ಮಿಲಿಯನ್ ಡಾಲರ್ ಆಗಿತ್ತು. ೧೯೮೦-೮೧ರಲ್ಲಿ ಅದು ಡಾಲರ್ ೧೬೦೦ ಮಿಲಿಯನ್ ಏರಿತ್ತು. ೧೯೯೦-೯೧ರಲ್ಲಿ ಅದು ಡಾಲರ್ ೨೩೦೦ ಮಿಲಿಯನ್ ಏರಿತ್ತು. ೧೯೯೦-೨೦೦೦ದಲ್ಲಿ ಅದು ಡಾಲರ್ ೪೭೬೫ ಮಿಲಿಯನ್ ಏರಿತ್ತು.

೧೯೯೯ರಲ್ಲಿ ಅಂದ್ರೆ ಆರ್ಥಿಕ ಸುಧಾರಣೆಗಳು ಜಾರಿಗೆ ಆದ ಬಳಿಕ ಸಿದ್ಧ ಉಡುಪು ಕೈಗಾರಿಕೆಗಳ ಆರ್ಥಿಕತೆಯ ಮಹತ್ವವು ಸ್ಪಷ್ಟವಾಗಿಯೆ ಹೆಚ್ಚಳವಾಗಿರುತ್ತದೆ. ಭಾರತದಲ್ಲಿ ಕರ್ನಾಟಕ ರಾಜ್ಯವು ಸಿದ್ಧ ಉಡುಪು ಬೆಳವಣಿಗೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ. ಕರ್ನಾಟಕದಲ್ಲಿ ಬೆಂಗಳೂರು ಮಹಾನಗರವು ಅತಿ ಹೆಚ್ಚು ಉತ್ಪಾದಿಸುವ ಸಿದ್ಧ ಉಡುಪು ತಯಾರಿಕಾಕೇಂದ್ರಗಳು ಇವೆ. ೨೦೦೨ರಲ್ಲಿ ಕರ್ನಾಟಕದ ಸರ್ಕಾರ ಕಾರ್ಮಿಕ ಇಲಾಖೆಯ ಅಂಕಿ-ಅಂಶಗಳ ಪ್ರಕಾರ ಜುಲೈ ೨೦೦೬ರಲ್ಲಿ ೮೫೮ ಫ್ಯಾಕ್ಟ್ರಿ ಇದ್ದವು. ಇವುಗಳಲ್ಲಿ ಕೆಲಸ ಮಾಡುವವರು ೧೯೫೯೪೩. ೬೭.೩% ಮಹಿಳಾ ಕೆಲಸಗಾರರು ಕೆಲಸದಲ್ಲಿ ನಿರ್ವಹಿಸುತ್ತಿದ್ದರು. ಹೀಗೆ ಮಹಿಳಾ ಕಾರ್ಮಿಕರು ಕರ್ನಾಟಕ ರಾಜ್ಯದಲ್ಲಿ ಕಂಡು ಬರುತ್ತಾರೆ.

ಬಳ್ಳಾರಿ ನಗರದಲ್ಲಿ ಹೆಚ್ಚಾಗಿ ಮಹಿಳಾ ಕೆಲಸಗಾರರು ಕಂಡುಬರುತ್ತಾರೆ. ಇಲ್ಲಿ ಅತಿ ಹೆಚ್ಚು ಜೀನ್ಸ್ ಪ್ಯಾಂಟುಗಳು ತಯಾರಾಗುತ್ತದೆ. ಭಾರತದಲ್ಲಿ ಬಳ್ಳಾರಿ ನಗರವು ಜೀನ್ಸ್‌ಗಳ ರಾಜಧಾನಿಯಾಗಿ ಪ್ರಸಿದ್ಧಿ ಪಡೆದಿದೆ. ಬಳ್ಳಾರಿಯಲ್ಲಿ ಇಲ್ಲಿಯ ತನಕ ಮಹಿಳಾ ಕಾರ್ಮಿಕರ ಕುರಿತು ಯಾವುದೇ ಅಧ್ಯಯನ ನಡೆದಿಲ್ಲ. ಬಳ್ಳಾರಿ ನಗರದಲ್ಲಿ ಐದು ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ ಎಂದು ಕಾರ್ಮಿಕ ಇಲಾಖೆ ತಿಳಿಸುತ್ತದೆ. ಇದು ಯಾವುದೇ ಅಂಕಿ-ಅಂಶಗಳನ್ನು ಸಂಗ್ರಹಣೆ ಹೊಂದಿರುವುದಿಲ್ಲ. ಕೈಗಾರಿಕಾ ಮೂಲಗಳ ಪ್ರಕಾರ ೧೦ ಸಾವಿರ ಕಾರ್ಮಿಕರು ಕಂಡುಬರುತ್ತಾರೆ. ಅದರಲ್ಲಿ ಹೆಚ್ಚು ಮಹಿಳಾ ಕೆಲಸಗಾರರು ದೊರೆಯುವರು.

ಸರ್ಕಾರದ ಅಂಕಿ- ಅಂಶಗಳ ಪ್ರಕಾರ ಸಣ್ಣ ಘಟಕಗಳಲ್ಲಿ ಹೆಚ್ಚಾಗಿ ಮಹಿಳಾ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇಂತಹ ಸಣ್ಣಪುಟ್ಟ ಘಟಕಗಳಲ್ಲೆ ಹೆಚ್ಚಾಗಿ ಮಹಿಳಾ ಕಾರ್ಮಿಕರು ಹೆಚ್ಚು ಶೋಷಣೆಗೆ ಒಳಗಾಗುತ್ತಿದ್ದಾರೆ. ಇವರು ಸಂಘಟನೆಗಳನ್ನು ಪ್ರಾರಂಭಿಸಿದರೆ ಕೆಲಸದಿಂದ ತೆಗೆದುಹಾಕುವ ಬೆದರಿಕೆಗೆ ಒಳಗಾಗುತ್ತಾರೆ. ಇಂತಹ ಸಂಘಟನೆ ಮಾಡುವ ಕಾರ್ಮಿಕರನ್ನು ಕಪ್ಪುಪಟ್ಟಿಗೆ ಸೇರಿಸಲಾಗಿರುತ್ತದೆ. ಹೀಗಾಗಿ ಅವರಿಗೆ ಎಲ್ಲಿಯೂ ಕೆಲಸ ಸಿಗದಂತಾಗುತ್ತದೆ. ಹೀಗಾಗಿ ಮಹಿಳಾ ಕಾರ್ಮಿಕರು ಸಂಘಟನೆಗಳಿಂದ ದೂರ ಉಳಿಯುತ್ತಾರೆ.

ಬೆಂಗಳೂರಿನಲ್ಲಿರುವ ಪೀಣ್ಯ ಕೈಗಾರಿಕಾ ಪ್ರದೇಶ ಆಗ್ನೇಯ ಏಶಿಯಾದಲ್ಲೇ ಅತ್ಯಂತ ದೊಡ್ಡದು. ಸುಮಾರು ನಲವತ್ತು ಚ.ಕಿ.ಮಿ.ಗಳಷ್ಟು ವಿಸ್ತಾರವಿರುವ ಇದರಲ್ಲಿ ೩೫೦೦ಕ್ಕಿಂತಲೂ ಹೆಚ್ಚು ದೊಡ್ಡ ಹಾಗೂ ಸಣ್ಣ ಕೈಗಾರಿಕಾ ಘಟಕಗಳಿವೆ. ಇದರಲ್ಲಿ ೫೦೦-೬೦೦ ಸಿದ್ದ ಉಡುಪು ತಯಾರಿಸುವ ಗಾರ್ಮೆಂಟ್ಸ ಘಟಕಗಳು ಈ ಗಾರ್ಮೆಂಟ್ಸಲ್ಲಿ ಸುಮಾರು ೨೫ ಸಾವಿರಕ್ಕೂ ಹೆಚ್ಚು ಮಂದಿ ದುಡಿಯುತ್ತಿದ್ದಾರೆ. ಇವರಲ್ಲಿ ಶೇ ೯೦% ರಷ್ಟು ಮಹಿಳೆಯರು. ಇವರು ತಯಾರಿಸುವ ಉಡುಪುಗಳು ದೇಶ ವಿದೇಶಗಳಿಗೆಲ್ಲಾ ಮಾರಾಟವಾಗುತ್ತವೆ. ಬೆಂಗಳೂರಿನಲ್ಲೆ ಅನೇಕ ಸ್ಥಳಗಳಲ್ಲಿ ಇಂಥ ಸಿದ್ಧಉಡುಪು ತಯಾರಿಸುವ ಘಟಕಗಳಿದ್ದರೂ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಇವು ಹೆಚ್ಚು ಸಂಖ್ಯೆಯಲ್ಲಿವೆ. ಆದರೆ ಗಾರ್ಮೆಂಟ ಕಾರ್ಖಾನೆಗಳಲ್ಲಿ ಶೋಷಣೆ ನಡೆಯುವುದಿಲ್ಲವೆಂದಲ್ಲ. ಕೆಲಸಗಾರರಿಗೆ ಕನಿಷ್ಠ ಸೌಲಭ್ಯಗಳನ್ನು ಒದಗಿಸದಿರುವ ಕಾರ್ಖಾನೆಗಳೂ ಇವೆ. ಆದರೂ ಇವು ಸಾವಿರಾರು ಕುಟುಂಬಗಳ ಸಾಧಾರಣ ಮಟ್ಟಿಗೆ ಮಹಿಳೆಯರ ಆರ್ಥಿಕ ಸ್ಥಿತಿ ಸುಧಾರಿಸುವುದಕ್ಕೆ ಸಹಾಯಕವಾಗಿದೆ ಎಂಬುದರಲ್ಲಿ

ಸಂಶಯವಿಲ್ಲ. ಇಲ್ಲಿ ಬರುವಂಥ ಮಹಿಳೆಯರು ಸಾಮನ್ಯವಾಗಿ ಓದುಬರಹ ಬರದೆ ಇರುವ, ಮತ್ತು ಬರುವವರಿಂದ ಹಿಡಿದು ಹೈಸ್ಕೂಲು, ಕಾಲೇಜು ಮೆಟ್ಟಿಲು ಹತ್ತಿದವರು ಕೆಲಸ ಮಾಡುತ್ತಾರೆ. ಮನೆಯಲ್ಲಿ ಎಷ್ಟೆ ಕಷ್ಟಗಳಿದ್ದರೂ ಆತ್ಮವಿಶ್ವಾಸ ಕಳೆದುಕೊಳ್ಳದೆ ಕಷ್ಟಪಟ್ಟು ದುಡಿದು ಮಕ್ಕಳನ್ನು ಸಾಕುತ್ತಾರೆ. ಸಂಜೆ ಮನೆಗೆ ಬರುವಷ್ಟರಲ್ಲಿ ದಿನದ ದುಡಿಮೆಯಿಂದ ಉತ್ಸಾಹ ಕುಂದಿದ್ದರೂ ಆದಷ್ಟು ಬೇಗನೆ ಮನೆ ಸೇರಿಕೊಳ್ಳುವ ಆತುರ ಹೆಚ್ಚಾಗಿರುತ್ತದೆ. ಪದೇ ಪದೇ ಕಿರುಕುಳ ನೀಡುವ ಮೇಸ್ತ್ರಿಯನ್ನೋ, ಸೂಪರ್‌ವೈಸರನ್ನು ಶಪಿಸುತ್ತ ಬೈಯ್ದುಕೊಳ್ಳುತ್ತಾ ಮನೆಯ ಸಂಪೂರ್ಣ ಜವಾಬ್ದಾರಿಯನ್ನು, ಮಕ್ಕಳನ್ನು ನೆನಪಿಸಿಕೊಳ್ಳುತ್ತಾ ಅಷ್ಟೇ ಚುರುಕಿನಿಂದ ಸಾಗುತ್ತಾರೆ.

ಮಹಿಳೆಯರು ಗಾರ್ಮೆಂಟ್ ಫ್ಯಾಕ್ಟರಿಗೆ ಪ್ರವೇಶಿಸಿದ ನಂತರ ಹಲವಾರು ಕೆಲಸಗಳಲ್ಲಿ ಹರಿದು ಹಂಚಿ ಹೋಗುತ್ತಾರೆ. ಮೇಲ್ನೋಟಕ್ಕೆ ಸಾಮಾನ್ಯ ದೃಷ್ಟಿಕೋನದಲ್ಲಿ ಪರಿಗಣಿಸಿದರೆ ಕಾಲರ್, ಬರೀತೋಳು, ಮತ್ತೆ ಕೆಲವರು ಜೇಬುಗಳನ್ನು ಹೊಲಿಯುವುದು, ಗುಂಡಿ ಹಚ್ಚುವುದು, ಇಸ್ತ್ರೀಮಾಡುವುದು ಫಿನಿಶಿಂಗ್ ಮಾಡುವುದು, ದಾರಕಟ್ಟುವುದು, ಕಲರ್ ಹಾಕುವುದು ಇನ್ನಿತರ ಹಲವು ವಿಧಗಳಲ್ಲಿ ಸ್ಪೆಷಲಿಸ್ಟ್‌ಗಳಾಗುತ್ತಾರೆ. ಆದರೆ ಇಲ್ಲಿ ಸಂಪೂರ್ಣವಾಗಿ ಮಾಲೀಕರ ಒಳತಂತ್ರವನ್ನು ಎತ್ತಿ ಪ್ರಶ್ನಿಸಬಹುದು. ಏಕೆಂದರೆ ಒಬ್ಬ ಮಹಿಳೆಗೆ ಒಂದು ಶರ್ಟ್ ಹೊಲಿಯದ ಅವರು ಜೋತು ಬಿದ್ದಿದ್ದಾರೆ. ಬೆಳಿಗ್ಗೆ ಎಂಟುಗಂಟೆಗೆ ಮನೆ ಬಿಟ್ಟರೆ ಕತ್ತು ಬಗ್ಗಿಸಿ ಕೆಲಸ ಮಾಡುತ್ತಲೇ ಇರಬೇಕು. ಸ್ವಲ್ಪ ನಿಧಾನವಾದರೂ ಒಂದು ನಿಮಿಷ ತಡವಾದರೂ ನಿಗದಿತ ಸಮಯದೊಳಗೆ ಹೇಳಿದಷ್ಟು ಪೀಸುಗಳನ್ನು ನೀಡಲು ಸಾಧ್ಯವಾಗದೇ ಇದ್ದಾಗ ಹೆಚ್ಚಿನ ಅವಧಿ ಕೆಲಸ ಮಾಡಿಯಾದರೂ ಕೆಲಸವನ್ನು ಮುಗಿಸಲೇಬೇಕು.

ಬೆಂಗಳೂರು ನಗರದ ಹೊರವಲಯದಲ್ಲಿರುವ ಗಾರ್ಮೆಂಟ್ಸ ಕಾರ್ಖಾನೆಗಳ ಒಟ್ಟು ಸಂಖ್ಯೆ ೮೫೮. ಇವುಗಳಲ್ಲಿರುವ ಒಟ್ಟು ನೌಕರರು ೧.೯೫.೯೪೩ ಪುರುಷರು ೬೪.೦೪೫ ಮತ್ತು ಮಹಿಳೆಯರ ಸಂಖ್ಯೆ ೧,೩೧,೮೯೫. ಈ ಒಟ್ಟು ಗಾರ್ಮೆಂಟ್ಸ ಕಾರ್ಖಾನೆಗಳಲ್ಲಿ ೧೬ ಕಾರ್ಖಾನೆಗಳು ರಾತ್ರಿ ೧೦ ರವರೆಗೆ ಪಾಳೀ ನಡೆಸಲು ಸರಕಾರದಿಂದ ಅನುಮತಿ ಪಡೆದುಕೊಂಡಿವೆ. ಆದರೆ ಇಂತಹ ಕಾರ್ಖಾನೆಗಳಲ್ಲಿ ನಡೆಯಬಹುದಾದ ಲೈಂಗಿಕ ಕಿರುಕುಳ ಅರೋಪದ ಹಿನ್ನೆಲೆಯಲ್ಲಿ ಸರ್ಕಾರದ ವತಿಯಿಂದ ಅಯಾ ಕಾರ್ಖಾನೆಗಳು ದೂರು ಸಲಹೆ ಸಮಿತಿಯನ್ನು ರಚಿಸಿದ್ದರೂ ಕೂಡ ಯಾವ ದೂರು ಕೂಡ ಸರ್ಕಾರಕ್ಕೆ ಮುಟ್ಟಿಲ್ಲ. ವಿಪರ್ಯಾಸದ ಸಂಗತಿ ಅಂದರೆ ವಾಸ್ತವದಲ್ಲಿ ಇಡೀ ವ್ಯವಸ್ಥೆಯ ಮಾಲೀಕರ ಪರವಾಗಿರುವುದರಿಂದ ಫ್ಯಾಕ್ಟ್ರಿಯಲ್ಲಿ ದೈಹಿಕವಾಗಿ ಮಾನಸಿಕವಾಗಿ ಹಿಂಸೆ ನಡೆದರೂ, ಕೊನೆಗೆ ಸತ್ತರೂ ಕೇಳೊರೆ ಇಲ್ಲದ ಪರಿಸ್ಥಿತಿಯಾಗಿದೆ.[೪] ಶೇಕಡಾ ೯೫ರಷ್ಟು ಮಹಿಳೆಯರು ಬದುಕುವ ಅನಿವಾರ್ಯತೆಗಾಗಿ ಕೆಲಸ ಪಡೆದುಕೊಂಡವರ ದೌರ್ಬಲ್ಯವನ್ನೇ ಇಟ್ಟುಕೊಂಡು ಕಾರ್ಖಾನೆಯ ವ್ಯವಸ್ಥಾಪಕರು ಹಾಗೂ ಮೇಲ್ವಿಚಾರಕರು ಅನೇಕ ರೀತಿಯ ಕಿರುಕುಳ ಕೊಡುತ್ತಿದ್ದಾರೆ. ಆದರೂ ವಾಸ್ತವದಲ್ಲಿ ಇವೆಲ್ಲ ಕಿರುಕುಳ ಕೊಡುವುದು, ಸಮಸ್ಯೆ, ನೋವುಗಳನ್ನು ಅನುಭವಿಸುವುದು ಸಾಮಾನ್ಯ ಸಂಗತಿಯಾಗಿ ಬಿಟ್ಟಿದೆ. ಯಾವುದೆ ಸವಲತ್ತುಗಳನ್ನು ಕೊಡುವುದಿಲ್ಲ. ಅತಿಯಾದ ಸಮಯ ಪಾಲನೆ ಮಾಡಿಸುತ್ತಾರೆ. ಹೆಚ್ಚು ಉತ್ಪಾದನೆಯ ಒತ್ತಡ ಇದೆ ಅಂತ ಗೊತ್ತಿದ್ದರು ಬದುಕು ನಡೆಸುವುದು ತುಂಬಾ ಕಷ್ಟದ ಪರಿಸ್ಥಿತಿಯನ್ನು ಎದುರಿಸುತ್ತಿರುವಾಗ

ಯಾವ ಕೆಲಸ ಸಿಗುತ್ತೊ ಆ ಕೆಲಸಕ್ಕೆ ಹೋಗಲೇಬೇಕೆಂಬ ಅನಿವಾರ್ಯತೆಯಿಂದ ಫ್ಯಾಕ್ಟ್ರಿ ಕೆಲಸಕ್ಕೆ ಮಹಿಳಾ ಕಾರ್ಮಿಕರು ಲಗ್ಗೆ ಹಾಕುತ್ತಿದ್ದಾರೆ.

ಮಹಿಳೆಯ ಆರ್ಥಿಕ ಉತ್ಪಾದನಾ ಸಾಮರ್ಥ್ಯ ಮತ್ತು ಆಕೆಗೆ ಗಳಿಕೆಯ ಮೇಲಿರುವ ನಿಯಂತ್ರಣ ಹಾಗೂ ಕುಟುಂಬದ ಆರೋಗ್ಯವನ್ನಷ್ಟೇ ಅಲ್ಲದೆ ಅವಳ ಕುಟುಂಬದ ಆರೋಗ್ಯದ ಮೇಲೂ ಪರಿಣಾಮ ಬೀರುತ್ತವೆಯೆನ್ನಬಹುದು. ಏಕೆಂದರೆ ಪುರುಷರಿಗಿಂತ ಹೆಚ್ಚಾಗಿ ಸ್ತ್ರೀಯರು ತಮ್ಮ ಸಂಪಾದನೆಯನ್ನು ಕುಟುಂಬದ ಅಗತ್ಯಗಳಿಗಾಗಿ ಖರ್ಚು ಮಾಡುವುದನ್ನು ಹಾಗೂ ಸ್ತ್ರೀಯರಿಗೆ ಹೋಲಿಸಿದಲ್ಲಿ ಪುರುಷರು ತಮ್ಮ ವೈಯಕ್ತಿಕ ಅಗತ್ಯಗಳಿಗೆ ಹೆಚ್ಚು ವೆಚ್ಚ ಮಾಡುವುದನ್ನು ಹಲವು ಸಂಶೋಧನೆಗಳೂ ಎತ್ತಿ ತೋರಿಸಿವೆ.

ಗಾರ್ಮೆಂಟ್ಸ್ ಮಹಿಳೆಯರನ್ನು ಪರಿಗಣಿಸಿದಾಗ ತಾವು ದುಡಿದಿರುವ ಸಂಬಳದಲ್ಲಿ ತನ್ನ ಕುಟುಂಬದ, ಗಂಡನ ಮತ್ತು ಮಕ್ಕಳ ಅಗತ್ಯತೆಯನ್ನು ಪೂರೈಸಲು ದಿನ ನಿತ್ಯ ಹೆಣಗಾಡುತ್ತಿರುತ್ತಾಳೆ. ಪ್ರತಿ ಕ್ಷಣನೂ ತನ್ನ ಮಕ್ಕಳ ಹೊಟ್ಟೆ ತುಂಬಿಸುವುದರ ಬಗ್ಗೆ ಆಲೋಚಿಸುತ್ತಿರುತ್ತಾಳೆ ಆದರಾಚೆಗೆ ತನ್ನ ಬಗ್ಗೆಯಾಗಲಿ, ತನ್ನ ಆಹಾರದ ಬಗ್ಗೆಯಾಗಲಿ ಯೋಚಿಸದಿರುವುದು ಅಧ್ಯಯನ ಸಂಧರ್ಭದಲ್ಲಿ ಕಂಡುಬರುತ್ತದೆ. ಸಾಂಪ್ರದಾಯಿಕವಾದ ಸಮಾಜ ಹೆಣ್ಣು ಮಕ್ಕಳಿಗೆ ಬಾಲ್ಯದಿಂದಲೂ ಚೆನ್ನಾಗಿ ಆಹಾರ ನೀಡಿದಲ್ಲಿ ಬಹುಬೇಗನೆ ಬೆಳೆದು ಋತುಮತಿಯಾಗಿ ಅವಳ ಮದುವೆಯ ಹೊಣೆ ಬೇಗನೆ ಹೆಗಲಿಗೇರಬಹುದು ಎಂಬ ಭಾವನೆಯಿಂದಲೋ ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳ ಆಹಾರ ಸೇವನೆ ಅನೇಕ ಕುಟುಂಬಗಳಲ್ಲಿ ನಿರ್ಲಕ್ಷಕ್ಕೆ ಒಳಗಾಗುವುದನ್ನು ಕಾಣಬಹುದು. ಇನ್ನೂ ಋತುಮತಿಯಾದ ತಕ್ಷಣ ಗಂಡನ ಮನೆಗೆ ಕಳೀಸಲ್ಪಡುವ ೧೫-೧೬ ವರ್ಷದ ಬಾಲಕಿಯರು ಇನ್ನೂ ಬೆಳೆಯುವ ಅವಧಿಯಾಗಲಿ ಸಿಗುವುದು ಕಠಿಣವೇ. ಮಹಿಳೆಯ ದೈಹಿಕ ತೂಕವನ್ನೇ ತೆಗೆದುಕೊಂದಾಗ ಗಾರ್ಮೆಂಟ್ಸ್ ಮಹಿಳೆಯರೆಲ್ಲರೂ ಪೌಷ್ಠಿಕ ಆಹಾರವಿಲ್ಲದೆ ಹದಿನಾರರಿಂದ ಇಪ್ಪತ್ತು ವರ್ಷ ವಯಸ್ಸಿನ ಹುಡುಗಿಯರೆಲ್ಲರನ್ನು (ನೋಡಿದಾಗ) ಸಂದರ್ಶಿಸಿದಾಗ ನೋಡೋಕೆ ಎಲ್ಲರೂ ಐವತ್ತು-ಅರವತ್ತು ವರ್ಷದ ವಯಸ್ಸಾದವರ ಹಾಗೆ ಕಾಣುತ್ತಿದ್ದರು. ಇವರು ಪಡೆಯುವ ಸಂಬಳ ಮೂರೊಪ್ಪತ್ತಿನ ಊಟಕ್ಕೂ ಸಾಲದೆ ಇದ್ದಾಗ, ಪೌಷ್ಠಿಕ ಆಹಾರ ತಿನ್ನುವುದು ಎಲ್ಲಿಂದ ಬಂತು, ಅದರಲ್ಲೂ ದಿನೆದಿನೇ ಹೆಚ್ಚುತ್ತಿರುವ ಬೆಲೆಯೇರಿಕೆಯಲ್ಲಿ ಸಸ್ಯಹಾರಗಳನ್ನು ಕೊಂಡುಕೊಳ್ಳುವ ಪರಿಸ್ಥಿತಿ ಇಲ್ಲದಾಗ ಇನ್ನು ಮಾಂಸಾಹಾರವನ್ನು ತಿನ್ನುವುದು ಕನಸಿನ ಮಾತು. ಹೀಗೆ ಏನಾದರು ತಿನ್ನಬೇಕೆಂಬ ಆಸೆ ಇದ್ದರೂ ಕೂಡ ವರ್ಷಕ್ಕೆ ಆರುತಿಂಗಳಿಗೊ, ಮೂರುತಿಂಗಳಿಗೊ ಸಾಲಮಾಡಿ ತಿನ್ನಬೇಕಾದ ಪರಿಸ್ಥಿತಿ ಇದೆ.

ಮಹಿಳೆಯ ದೈಹಿಕ ತೂಕವನ್ನೇ ತೆಗೆದುಕೊಂಡಲ್ಲಿ ಅದು ಅವಳ ಆಹಾರ ಪೋಷಣಾ ಸ್ಥಿತಿಯನ್ನಷ್ಟೇ ಅಲ್ಲದೇ, ಅವಳಿಗೆ ಇರಬಹುದಾದ ಕಾಯಿಲೆ ಹಾಗೂ ಅವಳ ದೈಹಿಕ ತೂಕವನ್ನೇ ನಿರ್ಧರಿಸಬಲ್ಲ ಇನ್ನಿತರ ವ್ಯಕ್ತಿಗತ ವಿಷಯಗಳಿಗೂ ಹಿಡಿದ ಕೈಗನ್ನಡಿಯಂತಿದೆ. ರಾಷ್ಟ್ರೀಯ ಆಹಾರ ಘೋಷಣಾ ನಿರ್ವಹಣಾ ಕಾರ್ಯಶಾಲೆಯ ಮಾಹಿತಿಯ ಪ್ರಕಾರ "ನಮ್ಮ ದೇಶದಾದ್ಯಂತ ಮಹಿಳೆಯರ ದೇಹತೂಕ ಹದಿನಾರು ವರ್ಷಗಳಾದ ನಂತರ ಹೆಚ್ಚಬೇಕಾದ ಗತಿಯಲ್ಲಿ ಹೆಚ್ಚುವುದಿಲ್ಲ. ಅಲ್ಲದೆ ಅವರಿಗೆ ಹದಿನಾರು

ವರ್ಷಗಳ ವಯಸ್ಸಿನಲ್ಲಿದ್ದ ದೈಹಿಕ ತೂಕ ಅವರು ಅರವತ್ತು ವರ್ಷಗಳ ಮುದುಕಿಯರಾಗುವವರೆಗೂ ಮುಂದುವರೆಯುತ್ತದೆ. ಆದರೆ ಪುರುಷರು ತಮ್ಮ ದೈಹಿಕ ತೂಕವನ್ನು ಹೆಚ್ಚಿಸಿಕೊಳ್ಳುತ್ತಾ ಹೋಗಿ ತಮ್ಮ ಗರಿಷ್ಠ ದೇಹತೂಕವನ್ನು ತಮ್ಮ ಇಪ್ಪತ್ತೈದನೆಯ ವಯಸ್ಸಿನಲ್ಲಿ ಪಡೆಯುತ್ತಾರೆ. ಇದರಿಂದ ಗಂಡಸರು ೨೫ನೇ ವಯಸ್ಸಿನವರೆಗೂ ಹೆಣ್ಣು ಮಕ್ಕಳಿಗಿಂತಾ ಒಳ್ಳೆಯ ಪ್ರಮಾಣದ ಆಹಾರವನ್ನು ಸೇವಿಸುತ್ತಾರೆ ಎನ್ನುವುದು ಸ್ಪಷ್ಟವಾಗುತ್ತದೆ.

ಆದರೆ ಅಸಂಘಟಿತ ವಲಯದಲ್ಲೇ ಪುರುಷರು ಪೌಷ್ಠಿಕ ಆಹಾರವನ್ನು ಸೇವಿಸದೆ ಇದ್ದರೂ ಗಾರ್ಮೆಂಟ್ಸ್ ವಲಯವನ್ನು ತೆಗೆದುಕೊಂಡಾಗ ಕ್ಷೇತ್ರಧ್ಯಯನದ ಸಂದರ್ಭದಲ್ಲಿ ಮಹಿಳೆಯರು, ಪುರುಷರು ಹೊಟ್ಟೆ ತುಂಬಾ ಊಟ ಮಾಡಿದಷ್ಟು, ಮಹಿಳಾ ಕಾರ್ಮಿಕರು ಮೂರೊತ್ತಿನ ಊಟ ಮಾಡದೆ ಇರುವ ಸಂದರ್ಭವನ್ನು ಕಾಣಬಹುದಾಗಿದೆ.

೩.೨ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರಿಗೆ ಇರುವ ಕಾನೂನು ಸೌಲಭ್ಯಗಳು

ಸಾಂಪ್ರದಾಯಿಕ ಸಮಾಜ ವ್ಯವಸ್ಥೆಯಲ್ಲಿ ನಡೆದ ಯಾವುದೇ ಚಿಂತನೆಗಳು ಮಹಿಳಾ ವಿರೋಧವಾಗಿಯೇ ನಡೆದಿಲ್ಲವೆಂದರೂ ಸಹ, ವಾಸ್ತವದಲ್ಲಿ ಆ ಚಿಂತನೆಗಳು ಮಹಿಳಾ ಬದುಕಿನ ಕುರಿತು ಅನಾನುಕೂಲಗಳುನ್ನುಂಟು ಮಾಡಿದ್ದೇ ಹೆಚ್ಚು. ಈ ನಿಟ್ಟಿನಲ್ಲಿ ಅಸಂಘಟಿತ ವಲಯದ ಭಾಗವಾಗಿ ಗುರುತಿಸಿಕೊಳ್ಳುವ ಗಾರ್ಮೆಂಟ್ಸ್ ಮಹಿಳೆಯರ ಕುರಿತು ಸಾಕಷ್ಟು ಅಧ್ಯಯನಗಳು ಕನ್ನಡದ ಸಂದರ್ಭದಲ್ಲಿ ನಡೆದಿಲ್ಲವಾದರೂ ನಡೆದಿರುವ ಕೊಂಚ ಪ್ರಮಾಣದ ಅಧ್ಯಯನಗಳು ನೈಜವಾಗಿ ಗಾರ್ಮೆಂಟ್ಸ ಮಹಿಳೆಯ ಸಮಸ್ಯೆಯನ್ನು ಶೋಧಿಸುವಲ್ಲಿ ವಿಫಲವಾಗಿರುವುದು ಸ್ಪಷ್ಟವಾದಂತ ಸಂಗತಿ. ನೈಜ ಸಮಸ್ಯೆಯ ಶೋಧದ ಹೊರತು ನಿರೀಕ್ಷಿತ ಫಲಿತಗಳು ಲಾಭ್ಯವಾಗುವುದಾದರೂ ಎಂತೋ? ಪುರುಷಪರ ಚಿಂತನೆಗಳೇ ಬಲವಾಗಿ ಬೇರೂರಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ತತ್ವದ ಹೋರಾಟ ಸಂಕೀರ್ಣವಾದುದು. ಲಿಂಗ ಶ್ರೇಣಿಕೃತ ಸಾಮಾಜಿಕತೆಯಲ್ಲಿ ಮಹಿಳಾ ಸಮಸ್ಯೆಗಳ ಶೋಧವೇ ಬಹುಮುಖ್ಯವಾದ ಸವಾಲಾಗಿ ನಿಲ್ಲುತ್ತದೆ, ಮಹಿಳೆಯರು ತಮ್ಮ ಸಮಸ್ಯೆಗಳನ್ನು ಮುಕ್ತವಾಗಿ ಹೊರ ಹಾಕುವಂತಹ ವ್ಯವಸ್ಥೆಯಲ್ಲಿ ಇಲ್ಲದಂತಹ ಸಂದಿಗ್ಧತೆಯಿಂದಾಗಿ ಗಾರ್ಮೆಂಟ್ಸ ಮಹಿಳೆಯರು ಹೊರತಾಗಿಲ್ಲ. ಬೆಂಗಳೂರು ನಗರವೊಂದರಲ್ಲೇ ಸುಮಾರು ಒಂದು ಸಾವಿರಕ್ಕಿಂತ ಹೆಚ್ಚು ಗಾರ್ಮೆಂಟ್ಸ ಉತ್ಪಾದನಾ ಘಟಕಗಳಲ್ಲಿ ೩ಲಕ್ಷಕ್ಕಿಂತ ಹೆಚ್ಚು ಕಾರ್ಮಿಕರು ಉದ್ಯೋಗವಕಾಶ ಕಲ್ಪಿಸಿಕೊಡುವಲ್ಲಿ ೩ನೇ ಸ್ಥಾನದಲ್ಲಿರುವ ಈ ಉದ್ಯಮ ಸುಮಾರು ೨೫. ವರ್ಷಗಳಿಂದ ಬೆಳೆದು ಬಂದಿದ್ದು ಹೆಚ್ಚಿನ ಕಾರ್ಮಿಕರು ಗ್ರಾಮಾಂತರ ಪ್ರದೇಶಗಳಿಂದ ವಲಸೆ ಬಂದು ಉದ್ಯೋಗ ನಿರತರಾಗಿದ್ದಾರೆ. ಪ್ರಸ್ತುತದಲ್ಲಿ ಹೆಚ್ಚುತ್ತಿರುವ ಗಾರ್ಮೆಂಟ್ಸಗಳು ಈವರೆಗೂ ವಿಭಿನ್ನ ರೂಪಗಳಲ್ಲಿ ಪರಿವರ್ತಿತವಾಗುತ್ತಿದೆ. ಆದರೆ ತೀರಾ ಇತ್ತೀಚಿನ ದಿನಗಳಲ್ಲಿ ಗಾರ್ಮೆಂಟ್ಸಗಳಲ್ಲಿ ಹೆಚ್ಚಿನ ಪ್ರಮಾಣದ ಮಹಿಳಾ ಕಾರ್ಮಿಕರು ಕಾಣಿಸಿಕೊಳ್ಳುವುದು ಸಂದೇಹಾಸ್ಪದ ಅಂಶವಾಗಿದೆ.

ಸಾಧಾರಣವಾಗಿ ಜೈವಿಕ ಭಿನ್ನತೆಯನ್ನು ಆಧರಿಸಿ ಸಾಮಾಜಿಕವಾಗಿ ಮಹಿಳೆಯರ ನಿರ್ವಚನವು ಅವಳು ನಿರಂತರವಾಗಿ ಎರಡನೇ ದರ್ಜೆಯ ಪ್ರಜೆಯಾಗಿಯೇ ಉಳಿಯುವಂತಿದೆ, ಆಧುನಿಕತೆ ಬೆಳೆದಂತೆಲ್ಲಾ ಮಹಿಳೆಯರ ಸಮಸ್ಯೆಗಳ ಹೊಸಮುಖಗಳು ಅನಾವರಣಗೊಳ್ಳುತ್ತಿವೆ. ಗಾರ್ಮೆಂಟ್ಸ ಮಹಿಳೆಯರ ಸಮಸ್ಯೆಗಳು ಇತ್ತೀಚಿನ ದಿನಗಳಲ್ಲಿ ಹೊಸ ಸ್ವರೂಪಗಳಲ್ಲಿ ಹೊರಬರುತ್ತಿವೆಯೆ? ಎಂದರೆ ಉತ್ತರಿಸಕೊಳ್ಳುವುದು ಸಂಕೀರ್ಣ. ಗಾರ್ಮೆಂಟ್ಸಗಳಲ್ಲಿ ಮಹಿಳೆಯರ ಸಮಸ್ಯೆಗಳು ಅತ್ಯಂತ ಕ್ರೂರ ಪ್ರಮಾಣದಲ್ಲಿವೆಯಾದರೂ, ಅವುಗಳು ಹೊರಬರಲು ದೊರೆತ ಅವಕಾಶಗಳು ತೀರ ಇತ್ತೀಚೆಗೆ, ಹಾಗಾಗಿ ಮಹಿಳೆಯರು ಶಿಕ್ಷಿತರಾದಂತೆ, ಸಬಲೀಕೃತರಾದಂತೆ ಸಮಸ್ಯೆಗಳು ಹೆಚ್ಚು ಹೆಚ್ಚು ಅನಾವರಣಗೊಳ್ಳುತ್ತಿವೆ. ಆದರೂ ಗಾರ್ಮೆಂಟ್ಸ್ ಮಹಿಳಾ ಸಮಸ್ಯೆಗಳು ಹೊರ ಹಾಕುವುದು ತೀರಾ ಸಂಕೀರ್ಣದ ಸಂಗತಿ. ಅವರಿಸಿರುವ ಬಡತನ, ಕೆಲಸದ ಅಭದ್ರತೆ ದುಡಿಮೆಯ ಅಗತ್ಯತೆ ಮತ್ತು ಅನಿವಾರ್ಯತೆಯಿಂದಾಗಿ ಬಹುತೇಕ ಮಹಿಳೆಯರು ತಾವು ಸುರಕ್ಷಿತವಾಗಿ ಕೆಲಸ ಮಾಡುತ್ತಿದ್ದೇವೆಂದೆ ಹೇಳುತ್ತಾರೆ. ಕೆಲವು ಸೂಕ್ಷ್ಮ ಆಯಾಮಗಳಿಂದ ಸಮಸ್ಯೆಗಳನ್ನು ಗ್ರಹಿಸಿದಾಗ ಅವುಗಳ ಪರಿಹಾರಕ್ಕೆ ಈಗಾಗಲೆ ಜಾರಿಯಿರುವ ಕಾನೂನುಗಳು ಸೂಕ್ತವೇ ಎಂಬ ಪ್ರಶ್ನೆಯನ್ನು ನಿವಾರಿಸಿಕೊಳ್ಳಲು ಮೊದಲು ಕಾನೂನುಗಳನ್ನು ಸ್ತ್ರೀವಾದಿ ವಿಶ್ಲೇಷಣೆಗೊಳಪಡಿಸುವ ಅಗತ್ಯತೆಯು ಸಮಂಜಸವೆನಿಸುತ್ತದೆ. ಈ ನಿಟ್ಟಿನ ಹಲವು ಸಂಗತಿಗಳನ್ನು ಆಧರಿಸಿ ಗಾರ್ಮೆಂಟ್ಸ ಮಹಿಳೆಯರಿಗಾಗಿಯೇ ಇದುವರೆಗು ಯಾವುದೇ ಕಾನೂನುಗಳು ರೂಪಿತವಾಗಿಲ್ಲ. ಹಾಗೆಯೇ ಈವರೆಗೆ ಅಸಂಘಟಿತ ವಲಯದ ಮಹಿಳಾ ಕಾರ್ಮಿಕರಿಗೆ ರೂಪಿತವಾದ ವೇತನ ಪಾವತಿ ಕಾಯ್ದೆ ೧೯೩೬ ಕನಿಷ್ಟ ವೇತನ ಕಾಯ್ದೆ ೧೯೪೮, ಹೆರಿಗೆ ಭತ್ಯಕಾಯ್ದೆ ೧೯೬೧, ಬೋನಸ್ಸು ಪಾವತಿ ಕಾಯ್ದೆ ೧೯೬೫, ಸಮಾನವೇತನ ಕಾಯ್ದೆ ಹೀಗೆ ಹಲವಾರು ಕಾಯ್ದೆಗಳನ್ನು ಜಾರಿಗೆ ತಂದಿದೆ, ಅದರಲ್ಲಿ ಆಯ್ದ ಕಾನೂನುಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೩.೨.೧ ಭಾರತೀಯ ಕಾರ್ಖಾನೆ (ಫ್ಯಾಕ್ಟ್ರಿ) ಕಾಯ್ದೆ – ೧೯೪೮

"ಈ ಕಾನೂನು ಬಹು ವ್ಯಾಪಕವಿದ್ದು ಕೆಲಸದ ವೇಳೆ, ಕಾರ್ಮಿಕರ ವಯೋಮಿತಿ, ಕೂಲಿಸಹೀತ ರಜಾ ನೀಡಿಕೆ, ಆರೋಗ್ಯ ರಕ್ಷಣೆ, ಕಲ್ಯಾಣ ಇತ್ಯಾದಿ ಎಲ್ಲ ವಿಷಯಗಳನ್ನು ವಿವರವಾಗಿ ಹೇಳಿದೆ.ಈ ಕಾಯ್ದೆ ಅನೇಕ ಬಾರಿ ತಿದ್ದುಪಡಿಯನ್ನು ಹೊಂದಿದೆ. ಇಪ್ಪತ್ತು ಜನರಿಗೂ ಮೇಲ್ಪಟ್ಟು ಕಾರ್ಮಿಕರಿರುವ ಹಾಗೂ ಶಕ್ತಿಯನ್ನು ಉಪಯೋಗಿಸುತ್ತಿರುವ ಉತ್ಪಾದಕ ಉದ್ದಿಮೆಗಳಲ್ಲಿ ಈ ಕಾಯ್ದೆ ಜಾರಿಗೆ ಬರುವುದು, ಈ ಕಾಯ್ದೆಯ ಮುಖ್ಯಾಂಶಗಳನ್ನು ಈ ಕೆಳಗಿನಂತೆ ತಿಳಸಬಹುದು

- ಮಹಿಳಾ ಕಾರ್ಮಿಕರು ಸಾಯಂಕಾಲ ೬ ರಿಂದ ಬೆಳಿಗ್ಗೆ ೭ಗಂಟೆಯವರೆಗೆ ಕಾರ್ಖಾನೆಯಲ್ಲಿ ಕೆಲಸ ಮಾಡಲು ನಿಷೇದಿಸಲಾಗಿದೆ.

- ಪ್ರತಿಯೊಂದು ಕಾರ್ಖಾನೆಯನ್ನು ಚೊಕ್ಕಟವಾಗಿ ಇಡತಕ್ಕದ್ದು ಒಳಗಿನ ಗೋಡೆಗಳಿಗೆ ಸುಣ್ಣವನ್ನು ೧೪ ತಿಂಗಳಿಗೊಮ್ಮೆ ಬಳಿಯಬೇಕು. ಅದರಂತೆ ಸಾಕಷ್ಟು ಗಾಳಿ ಬೆಳಕಿನ ವ್ಯವಸ್ಥೆ ಇರಬೇಕು. ಕಾರ್ಖಾನೆಯ ಮುಖ್ಯ ಮೇಲ್ವಿಚಾರಕರನ್ನು ಈ ಯಾವುದೇ ಕಲಂನಿಂದ ಉದ್ದಿಮೆಯನ್ನು ಮುಕ್ತಗೊಳಿಸಬಹುದು.

[illegible]

[illegible]

[illegible]

[illegible]

- ಹೆಂಗಸರು ಮತ್ತು ಮಕ್ಕಳು ಯಂತ್ರದ ಯಾವುದೇ ಭಾಗವನ್ನು ಸರಿಪಡಿಸಬಾರದೆಂದು ಹೇಳಲಾಗಿದೆ, ಅದರಂತೆಯೇ ಯಾವುದೇ ಕಾರ್ಮಿಕರು ಅತೀ ಭಾರವಾದ ಹೊರೆಯನ್ನು ಎತ್ತುವುದಾಗಲಿ. ಒಯ್ಯುವುದಾಗಲಿ ಕೂಡದು, ನಿಂತು ಕೆಲಸ ಮಾಡುವ ಕಾರ್ಮಿಕರಿಗೆ ಬಿಡುವಿನ ವೇಳೆಯಲ್ಲಿ ಕುಳಿತುಕೊಳ್ಳಲು ಆಸನದ ವ್ಯವಸ್ಥೆ ಪ್ರತಿಯೊಂದು ಕಾರ್ಖಾನೆಯಲ್ಲಿ ಇರತಕ್ಕದ್ದು.

- ಯಾವ ಕಾರ್ಮಿಕರು ೨೪೦ ದಿನಗಳಿಗೆ ಕಡಿಮೆಯಾಗದಂತೆ ಕೆಲಸ ಮಾಡಿರುವರೊ ಅವರಿಗೆ ಮರುವರ್ಷದಲ್ಲಿ ೨೦ ದಿನ ಕೆಲಸಕ್ಕೆ ಒಂದು ದಿನದಂತೆ ವೇತನದೊಂದಿಗೆ ರಜೆಯನ್ನು ಪಡೆಯುವ ಅವಕಾಶವಿದೆ. ಹೀಗೆ, ಭಾರತೀಯ ಕಾರ್ಖಾನೆ (ಫ್ಯಾಕ್ಟರಿ) ಕಾಯ್ದೆಯು ಕೆಲವು ಹಕ್ಕುಗಳನ್ನು ನೀಡಿದೆ."[೫]

- ಹದಿನಾಲ್ಕರಿಂದ ಹದಿನೇಳರವರೆಗಿನ ಪ್ರಾಯಸ್ಥರು ರಾತ್ರಿ ವೇಳೆಯಲ್ಲಿ ಕೆಲಸ ಮಾಡತಕ್ಕದ್ದಲ್ಲ. ಪ್ರಾಯಸ್ಥೆ ಕಾರ್ಮಿಕರು ವಾರಕ್ಕೆ ೪೮ ಗಂಟೆಗಳು ಮತ್ತು ದಿನವಹಿ ೮ ಗಂಟೆಗಳು ಮಾತ್ರ ಕೆಲಸ ಮಾಡತಕ್ಕದ್ದು. ಮಧ್ಯಂತರ ವಿಶ್ರಾಂತಿಯ ತರುವಾಯ ಯಾರೂ ೫ ಗಂಟೆಗಳಿಗಿಂತ ಹೆಚ್ಚು ಕೆಲಸ ಮಾಡಬಾರದು. ಅಧಿಕ ವೇಳೆಯಲ್ಲಿ ಕೆಲಸ ಮಾಡಿದರೆ ದಿನಗೂಲಿಗೆ ಎರಡರಷ್ಟು ಕೂಲಿ ಕೊಡಬೇಕಾಗುವುದು.

- ಫ್ಯಾಕ್ಟ್ರಿಯಲ್ಲಿ ಕೆಲಸ ಮಾಡಲು ಕಾರ್ಮಿಕರ ವಯಸ್ಸು ಕನಿಷ್ಟ ೧೪ ವರ್ಷ ಇರಬೇಕಲ್ಲದೆಯೇ ಅದನ್ನು ತಜ್ಞ ವೈದ್ಯರೊಬ್ಬರು ಖಚಿತಪಡಿಸಬೇಕು.

- ಉಪಹಾರ ಸೌಕರ್ಯ, ವಿರಾಮ ಮತ್ತು ಊಟ ಮಾಡುವುದಕ್ಕೆ ಸ್ಥಳದ ವ್ಯವಸ್ಥೆ. ಶಿಶುವಿಹಾರ, ವ್ಯಾಪ್ತಿ ವಯಸ್ಕರ ಕೆಲಸದ ವೇಳೆ, ರಜಾದಿನಗಳು ವೇಳಾತೀತ ಕೆಲಸಕ್ಕೆ ಅಧಿಕ ಕೂಲಿ ಪ್ರಾಪ್ತಿ, ವಯಸ್ಕರ ಕೆಲಸದ ಬಗ್ಗೆ ತಿಳುವಳಿಕೆ ಮತ್ತು ಕೆಲಸಗಾರರ ದಾಖಲಾತಿ ಪುಸ್ತಕ.

- ವೇತನ ಸಹಿತ ವಾರ್ಷಿಕ ರಜೆ

- ಅಪಘಾತ ಮತ್ತು ಅಪಾಯಕರ ಘಟನೆಗಳ ಬಗ್ಗೆ ತಿಳುವಳಿಕೆ ಕೊಡುವುದು,

- ಕೆಲಸದ ಸ್ಥಳದಲ್ಲಿ ಕಾರ್ಮಿಕರ ಆರೋಗ್ಯದ ಮೇಲೆ ದುಷ್ಪರಿಣಾಮಗಳಾಗದಂತೆ ಗಾಳಿ ಬೆಳಕಿನ ವ್ಯವಸ್ಥೆ ಕೈಗೊಳ್ಳಬೇಕು. ಕೆಲಸದ ವಾತಾವರಣ ಸ್ವಚ್ಛವಾಗಿ ಧೂಳು ರಹಿತವಾಗಿರಬೇಕು.

- ಕೊಠಡಿಯ ಮಿತಿಗಿಂತಲೂ ಹೆಚ್ಚು ಕಾರ್ಮಿಕರನ್ನು ಒಂದು ಕೊಠಡಿಯಲ್ಲಿ ಕೆಲಸ ಮಾಡಿಸುವುದನ್ನು ನಿಷೇದಿಸಲಾಗಿದೆ.

- ಕೆಲಸದ ಸಂದರ್ಭದಲ್ಲಿ ಸ್ವಾಭಾವಿಕವಾದ ಅಥವಾ ಕೃತಕವಾದ ಬೆಳಕಿನ ವ್ಯವಸ್ಥೆಯನ್ನು ಮಾಡಬೇಕು.

- ಕಾರ್ಮಿಕರಿಗೆ ಸುಲಭವಾಗಿ ದೊರೆಯುವಂತೆ ಶುದ್ದವಾದ ಕುಡಿಯುವ ನೀರನ್ನು ಒದಗಿಸಬೇಕು.

- ಕಾರ್ಮಿಕರಿಗೆ ಸಾಕಷ್ಟು ಶೌಚಾಲಯಗಳನ್ನು ಆಧುನಿಕ ರೀತಿಯಲ್ಲಿ ಕಲ್ಪಸಬೇಕು ಈ ಶೌಚಾಲಯಗಳಲ್ಲಿ ಉತ್ತಮ ಗಾಳಿ ಮತ್ತು ಬೆಳಕಿನ ವ್ಯವಸ್ಥೆ ಇರಬೇಕು.ಮಹಿಳೆ ಹಾಗೂ ಪುರುಷ ಕಾರ್ಮಿಕರಿಗೆ ಪ್ರತ್ಯೇಕ ಶೌಚಾಲಯಗಳು ಇರಬೇಕು.

- ಮೆಟ್ಟಿಲು ಚಾವಣಿಗಳು, ಮತ್ತು ಕಾರ್ಮಿಕರು ಒಟ್ಟಾಗಿ ತಿರುಗಾಡುವ ಸ್ಥಳಗಳನ್ನು ಅತ್ಯುತ್ತಮವಾಗಿ ನಿರ್ಮಿಸಿರಬೇಕು.

- "ಸಾವಿರಕ್ಕಿಂತಲೂ ಹೆಚ್ಚು ಮಂದಿ ಕೆಲಸ ಮಾಡುವ ಕಾರ್ಖಾನೆಯಲ್ಲಿ ಸುರಕ್ಷತೆಯ ಉಸ್ತುವಾರಿಗೆ ಪ್ರತ್ಯೇಕ ಅಧಿಕಾರಿಯನ್ನು ನೇಮಿಸಬೇಕು."

- ಯಾವುದೇ ಕಾರ್ಖಾನೆಯಲ್ಲಿ ೩೦ಕ್ಕಿಂತಲೂ ಹೆಚ್ಚು ಮಹಿಳಾ ಕಾರ್ಮಿಕರಿದ್ದಲ್ಲಿ ಅವರ ೬ ವರ್ಷದೊಳಗಿನ ಮಕ್ಕಳನ್ನು ನೋಡಿಕೊಳ್ಳಲು ಸುಸಜ್ಜಿತ ಬಾಲವಾಡಿಯನ್ನು ಮಾಲೀಕರು ಒದಗಿಸಬೇಕು. ಇಲ್ಲಿ ತರಬೇತಿ ಹೊಂದಿದ ಮೇಲ್ವಿಚಾರಕರನ್ನು ನೇಮಿಸಬೇಕು.[೬]

- ಕಾರ್ಖಾನೆಯಲ್ಲಿ ಪ್ರಥಮ ಚಿಕಿತ್ಸಾ ವ್ಯವಸ್ಥೆ ಇರಬೇಕು. ೫೦೦ಕ್ಕಿಂತ ಹೆಚ್ಚು ಮಂದಿ ಕಾರ್ಮಿಕರು ಕೆಲಸ ಮಾಡುವ ಕಾರ್ಖಾನೆಗಳಲ್ಲಿ ತುರ್ತು ವಾಹನವನ್ನು ಒದಗಿಸಬೇಕು. ವೈದ್ಯರು ಮತ್ತು ನರ್ಸುಗಳ ಸಹಾಯವು ಯಾವುದೇ ಸಮಯದಲ್ಲಿಯೂ ದೊರಕುವಂತೆ ವ್ಯವಸ್ಥೆ ಮಾಡಬೇಕು.

- ೨೫೦ಕ್ಕಿಂತಲೂ ಅಧಿಕ ಕಾರ್ಮಿಕರು ಕೆಲಸ ಮಾಡುತ್ತಿರುವ ಕಾರ್ಖಾನೆಗಳಲ್ಲಿ ಸುಸಜ್ಜಿತವಾದ ಕ್ಯಾಂಟಿನ್‌ನಲ್ಲಿ ಕಾರ್ಮಿಕರಿಗೆ ರಿಯಾಯತಿ ಧರದಲ್ಲಿ ಆಹಾರ ಒದಗಿಸಬೇಕು.

- ೫೦೦ಕ್ಕಿಂತ ಹೆಚ್ಚು ಮಂದಿ ಕಾರ್ಮಿಕರು ಕೆಲಸ ಮಾಡವ ಕಾರ್ಖಾನೆಗಳಲ್ಲಿ ಕಾರ್ಮಿಕರ ಕುಂದು ಕೊರತೆಗಳನ್ನು ಗಮನಿಸಲು ಕಾರ್ಮಿಕ ಕಲ್ಯಾಣ ಅಧಿಕಾರಿಗಳನ್ನು (ವೆಲ್‌ಫೇರ್ ಆಪೀಸರ್) ನೇಮಿಸಬೇಕು.

- ಯಾವುದೇ ಕಾರ್ಮಿಕರಿಗೆ ದಿನಕ್ಕೆ ಹತ್ತೂವರೆ ಗಂಟೆಗಳಿಗಿಂತ ಹೆಚ್ಚು ಕೆಲಸ ಮಾಡಿಸುವಂತಿಲ್ಲ.

- ಪ್ರತಿಯೊಬ್ಬ ಕಾರ್ಮಿಕರು ವಾರದಲ್ಲಿ ಒಂದು ದಿನ ರಜೆ ಹೊಂದಬೇಕು. ರಜೆ ಯಾವ ದಿನ ಇರುತ್ತದೆ ಎಂಬುದನ್ನು ನಾಮಫಲಕದಲ್ಲಿ ನಮೂದಿಸಿರಬೇಕು.

- ಒಂದೇ ಬಾರಿಗೆ ಒಬ್ಬ ಕಾರ್ಮಿಕರಿಗೆ ಬೇರೆ ಬೇರೆ ಕಾರ್ಖಾನೆಗಳಲ್ಲಿ ಕೆಲಸ ನೀಡುವಂತಿಲ್ಲ.

- ಪ್ರತಿಯೊಬ್ಬ ಕಾರ್ಮಿಕರ ಕೆಲಸದ ಅವಧಿ ಮತ್ತು ನಿರ್ಧಿಷ್ಟ ಪಡಿಸದ ಕೆಲಸದ ವಿವರಗಳನ್ನು ಸೂಚನಾ ಫಲಕದಲ್ಲಿ ಹಾಕಬೇಕು.[೭]

ಅಧ್ಯಯನ ಕ್ಷೇತ್ರಕಾರ್ಯದ ಮಾಹಿತಿ ಪ್ರಕಾರ ಬಳ್ಳಾರಿ ಮತ್ತು ಬೆಂಗಳೂರು (ಕಾರ್ಮಿಕರ) ಫ್ಯಾಕ್ಟ್ರಿಯನ್ನು ತೆಗೆದುಕೊಂಡಾಗ ೧೯೪೮ ಕಾಯ್ದೆಯು ಹೇಳುವಂತೆ ಕಾರ್ಮಿಕರಿಗೆ ಯಾವುದೇ ಸವಲತ್ತುಗಳು ವಾಸ್ತವದಲ್ಲಿ ಸಿಗುತ್ತಿಲ್ಲ. ಏಕೆಂದರೆ ಬಂಡವಾಳಶಾಹಿಗಳ ಮೂಲಭೂತ ಧೋರಣೆ ಬಂಡವಾಳ ಹಾಕಿದುದಕ್ಕಿಂತ ಹೆಚ್ಚುಗಳಿಸುವುದೇ ಮುಖ್ಯ ಉದ್ದೇಶ ಆಗಿರುತ್ತದೆ. ವಿನಃ ಕಾರ್ಮಿಕರಿಗೆ ಸಮಸ್ಯೆಗಳು ಆಗುತ್ತವೆ, ಅವರಿಗೆ ಕೆಲವೊಂದು ಸೌಲಭ್ಯಗಳನ್ನು ಒದಗಿಸಕೊಡಬೇಕೆಂಬ ಯಾವ ಮನಸ್ಥಿತಿಯು ಕಂಡುಬಂದಿಲ್ಲ. ಪ್ರಸ್ತುತದಲ್ಲಿ ಕಾಯ್ದೆಗಳು ಪುಸ್ತಕದ ಮಾತಾಗಿ ಕಾರ್ಮಿಕ ಇಲಾಖೆಯಲ್ಲಿ ಸೂಚಕ ಫಲಕಗಳಾಗಿವೆ, ಹೊರತು, ಅವು ಯಾವೂ ಕೂಡ ಜನಸಾಮಾನ್ಯರಿಗೆ ಸಂಪೂರ್ಣವಾಗಿ ಮುಟ್ಟುತ್ತಿಲ್ಲ.

"ಕಲುಷಿತ ನೀರು ಸೇವಿಸಿ ಗಾರ್ಮೆಂಟ್ಸ ಕಾರ್ಮಿಕರು ಅಸ್ವಸ್ಥ"

ದಿನಾಂಕ ೨೫-೦೨-೨೦೦೮.ರಂದು ತುಮಕೂರು ರಸ್ತೆಯ ಎಂಬೀ ಅಪಾರೆಲ್ಸ್ ಕಾರ್ಖಾನೆಯ ಸುಮಾರು೨೫೦ ಮಂದಿ ಕಾರ್ಮಿಕರು ಕಾರ್ಖಾನೆಯಲ್ಲಿ ಸಂಗ್ರಹಿಸಿ ಇಡಲಾಗಿದ್ದ ಕಲುಷಿತ ನೀರು ಸೇವಿಸಿ ಅಸ್ವಸ್ಥರಾಗಿದ್ದಾರೆ.

ಕಾರ್ಖಾನೆಯು ಸುಮಾರು ೩ ವರ್ಷದಿಂದ ಕಾರ್ಯ ನಿರ್ವಹಿಸುತ್ತಿದ್ದು ಸುಮಾರು ೨೭೦೦ ಮಂದಿ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ದಿನಾಂಕ ೨೫-೦೨-೨೦೦೮. ಸೋಮವಾರ ದಂದು, ಸುಮಾರು ೧೧.೩೦ರ ಹೊತ್ತಿಗೆ ಕಾರ್ಮಿಕರಿಗೆ ಹೊಟ್ಟೆ ನೋವು ತಲೆತಿರುಗುವುದು ಹಾಗೂ ವಾಂತಿ, ಬೇದಿ ಪ್ರಾರಂಭವಾಗಿದ್ದು, ತಕ್ಷಣ ಆಡಳಿತ ವರ್ಗದವರು ಎಲ್ಲರನ್ನೂ ರಾಜಾಜಿನಗರದ ಇ. ಎಸ್.ಐ. ಆಸ್ಪತ್ರೆಗೆ ದಾಖಲಿಸಿದ್ದಾರೆ. ಸಂಜೆ ೪.೦೦.ರ ವೇಳೆಗೆ ಹಾಸಿಗೆಗಳ ಅಭಾವದಿಂದ ಉಳಿದ ಅಸ್ವಸ್ಥ ಕಾರ್ಮಿಕರನ್ನು ಇಂದಿರಾನಗರ ಐ.ಎಸ್.ಐ. ಹಾಗೂ ಮಾಗಡಿ ರಸ್ತೆಯ ಸರ್ವೋದಯ ಆಸ್ಪತ್ರೆಗಳಿಗೆ ದಾಖಲು ಮಾಡಲಾಯಿತು, ಸರ್ವೋದಯ ಇರಿಸಿದ್ದು, ಅವರ ಪರಿಸ್ಥಿತಿ ಗಂಭೀರವಾಗಿದೆ.

ಘಟನೆಯ ಎರಡು ದಿನಗಳ ಹಿಂದೆಯೇ ಹಲವು ಕಾರ್ಮಿಕರಿಗೆ ಆರೋಗ್ಯ ಸಮಸ್ಯೆ ಕಂಡು ಬಂದಿದ್ದು, ಎಲ್ಲರೂ ತಮಗೊಬ್ಬರಗೇ ಹೀಗಾಗುತ್ತಿದೆ ಎಂದು ತಿಳಿದು ಸುಮ್ಮನಿದ್ದರು. ಹಲವು ಕಾರ್ಮಿಕರು ಈ ಬಗ್ಗೆ ಸೂಪರ್ ವೈಸರ್‌ಗೆ ದೂರು ನೀಡಿದ್ದರೂ ಯಾವುದೇ ಗಮನಹರಿಸಿಲ್ಲ. ಕಂಪನಿಯು ಯಾವುದೇ ಕಾರ್ಮಿಕ ಕಾನೂನುಗಳನ್ನು ಪಾಲಿಸುತ್ತಿಲ್ಲ. ಕಾರ್ಮಿಕರಿಗೂ ಇದರ ಬಗ್ಗೆ ಯಾವುದೇ ಅರಿವಿಲ್ಲದ ಕಾರಣ ಈ ಘಟನೆ ಜರುಗಿದೆ ಎಂದು ಮೇಲ್ನೋಟಕ್ಕೆ ಸಾಬೀತಾಗಿದೆ. ಕಾರ್ಖಾನೆಯಲ್ಲಿ ಸುಮಾರು ೩೦೦೦ ಕಾರ್ಮಿಕರು ಕೆಲಸ ಮಾಡುತ್ತಿದ್ದರೂ ವೈದ್ಯರ ಸೌಲಭ್ಯವಿಲ್ಲ. ಅಂಬ್ಯುಲೆನ್ಸ್ ಇಲ್ಲ ೨೦೦೪ರಲ್ಲಿ ಉತ್ತರಳ್ಳಿಯ ಗೊಯಾಂಕಾ ಅಪ್ಯಾರೆಲ್ಸ್ ಕಾರ್ಖಾನೆಯಲ್ಲಿ ಇದೆ. ರೀತಿಯ ಘಟನೆ ಸಂಭವಿಸಿ. ೮೦ ಕಾರ್ಮಿಕರು ಅಸ್ವಸ್ಥರಾಗಿ. ಒಬ್ಬ ಯುವತಿ ಮೃತಪಟ್ಟಿದ್ದನ್ನು ಇಲ್ಲಿ ಸ್ಮರಿಸಬಹುದು. ಘಟನೆಗೆ ಆಡಳಿತ ಮಂಡಳಿ ಕಾರ್ಮಿಕರ ಬಗೆಗೆ ತಳೆದಿರುವ ನಿರ್ಲಕ್ಷ್ಯಧೋರಣೆಯೇ

ಕಾರಣ, ಇದಕ್ಕೆ ಅವರೇ ನೇರ ಹೊಣೆಗಾರರು. ಕಾರ್ಮಿಕರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಈ ಮೂಲಕ ಆಗ್ರಹಿಸುತ್ತದೆ."[೮]

ಈ ಘಟನೆಯನ್ನು ಪರಿಗಣಿಸಿದಾಗ ಕಾರ್ಖಾನೆಯ ಮಾಲೀಕತ್ವದ ನಿರ್ಲಕ್ಷತೆ ಮತ್ತು ನಿಷ್ಕಾಳಜಿಯನ್ನು ತೋರಿಸುತ್ತದೆ. ರ್ಮಿಕರನ್ನು ಆಸ್ಪತ್ರೆಗೆ ಸೇರಿಸಿದರೆ ವಿನಃ ಅವರ ಬಗ್ಗೆ ಸಂಪೂರ್ಣ ಕಾಳಜಿ ವಹಿಸಲಿಲ್ಲ. ಒಂದುಕಡೆ ಮಾಲೀಕರು ಕೇವಲ ಲಾಭವನ್ನು ಪಡಿಯುವುದರ ಕಡೆ ಮಾತ್ರದ ಯೋಚಿಸದರೆ ಇಡಿ ಮಾನವ ಕುಲ ನಾಶ ಹೊಂದುವ ಪರಿಸ್ಥಿತಿಯನ್ನು ಯೋಚಿಸುವ ಅಗತ್ಯತೆ ಇದೆ, ಎಂದು ಹೇಳಬಹುದು ಯಾವುದೇ ಗಾಳಿ ಬೆಳಕಿಲ್ಲದೆ ನಾಲ್ಕು ಗೋಡೆ ಮಧ್ಯ (ಗೊಡನ್ನ) (ಬಳ್ಳಾರಿ ಫ್ಯಾಕ್ಟ್ರಿಯನ್ನು ಸಂಶೋದನೆಗೆ ಒಳಪಡಿಸಿದಾಗ) ದುಡಿಯುವ ಕಾರ್ಮಿಕರ ದೈಹಿಕ ಮತ್ತು ಮಾನಸಿಕವಾಗಿ ಕಷ್ಟಗಳನ್ನು ಎದುರಿಸುವುದನ್ನು ಕ್ಷೇತ್ರ ಕಾರ್ಯದ ಮೂಹಿತಿ ಮೂಲಕ ಗೋತ್ತಾಗುತ್ತದೆ.

೧೯೪೮ರ ಕಾಯ್ದೆಯ ಅನ್ವಯದಂತೆ ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆಯನ್ನು ಹೊಂದಿರಬೇಕು ಎಂದು ಹೇಳಿದರೂ, ವಾಸ್ತವದಲ್ಲಿ ಶೌಚಾಲಯದ ವ್ಯವಸ್ಥೆಯೇ ಇಲ್ಲದಿದ್ದರೂ ಸರಿಯಾದ ರೀತಿಯಲ್ಲಿ ಇಲ್ಲದಿರುವುದಕ್ಕೆ ಅನೇಕ ಮಹಿಳೆಯರು ದೈಹಿಕವಾಗಿ ಎಷ್ಟೋ ಕಷ್ಟಗಳನ್ನು ಅನುಭವಿಸಿರುವುದನ್ನು ಕ್ಷೇತ್ರಧ್ಯಯನದ ಮೂಲಕ ಕಂಡು ಕೊಳ್ಳಬಹುದು.

ಉದಾ : ಬಳ್ಳಾರಿ ಕ್ಷೇತ್ರಧ್ಯಯನದ ಸಂದರ್ಭದಲ್ಲಿ ಅನೇಕ ಮಹಿಳೆಯರು ಶೌಚಾಲಯದ ವ್ಯವಸ್ಥೆ ಇಲ್ಲದೆ ಕೆಲವೊಬ್ಬ ಮಹಿಳೆಯರಲ್ಲಿ ಅಪೆಂಡಿಸೈಟಸ್ ಆಗಿರುವ ಮತ್ತೆ ಮತ್ತೆ ಹೊಟ್ಟೆನೊವಿಂದಬಳಲುವ,ಗ್ಯಾಸ್ಟ್ರಿಕ್ಕಾಗಿ ಊಟ ಮಾಡದೆ ಅನೇಕ ಕಾಯಿಲೆಗಳಿಂದ ಬಳಲುವ ಸ್ಥಿತಿಯನ್ನು ಕಾಣಬಹುದಾಗಿದೆ, ಕೆಲವೊಂದು ಘಟನೆಗಳಲ್ಲಿ ಗೀತಾ ಎಂಬ ಮಹಿಳೆಯನ್ನು ತೆಗೆದುಕೊಂಡಾಗ ಅವಳು ಶೌಚಾಲಯದ ವ್ಯವಸ್ಥಿ ನಮಗಿಲ್ಲ. ಇದರಿಂದ ದೈಹಿಕವಾಗಿ ಮಾನಸಿಕವಾಗಿ ತೊಂದರೆಗಳನ್ನು ಅನುಭವಿಸುತ್ತಿದ್ದೇನೆ ಎಂಬ ಅಭಿಪ್ರಾಯ ಸೂಚಿಸಿದಳು. ಏಕೆಂದರೆ ಈ ಫ್ಯಾಕ್ಟ್ರಿಗೆ ಸೇರಿ ಒಂದು ವರ್ಷವಾಯಿತು. ಅವತ್ತಿನಿಂದ ಇವತ್ತಿನ ತನಕ ಹೆಚ್ಚು ಊಟ ಮಾಡಿದ್ದಾಗಲಿ, ನೀರು ಕುಡಿದದ್ದಾಗಲಿ ಇಲ್ಲ ಈ ಕಾರಣದಿಂದ ಹೊಟ್ಟೆ ತುಂಬಾ ನೋವಾಗುತ್ತದೆ. ತಡೆದುಕೊಳ್ಳೋಕೆ ಆಗಲ್ಲ, ಏನ್ ಮಾಡೊದು ಕೊಡುವ ಸಂಬಳನೆ ಕಡಿಮೆ ಅಂತಹದರಲ್ಲಿ ಡಾಕ್ಟರ್ ಹತ್ತಿರ ತೋರಿಸಿಕೊಳ್ಳವ ಶಕ್ತಿ ಕೂಡ ಇಲ್ಲ. ಮಾನ್ನೆ ಇತ್ತೀಚಿಗೆ, ನನಗೆ ತೀರಾ ಹೊಟ್ಟೆನೋವು ತಡೆದುಕೊಳ್ಳಲು ಆಗದೆ ಇದಕ್ಕೆ ಡಾಕ್ಟರ್ ಹತ್ತಿರ ಹೋಗಿದೆ, ಸರಿಯಾದ ಸಮಯಕ್ಕೆ ಊಟ ನೀರು ಕುಡಿಯುವುದು ಚೆನ್ನಾಗಿ ಮಾಡದಿದ್ದರೆ ಅಪೆಂಡಿಸೈಟಸ್ ಆಗುವ ಸಂಭವ ಹೆಚ್ಚಾಗಿರುತ್ತದೆ ಎಂದು ತಿಳಿಸಿದರು. ಆದರೆ ಫ್ಯಾಕ್ಟ್ರಿಯಲ್ಲಿ ಮಾಲೀಕರಿಗೆ ಹೇಳಿದರೆ ಯಾವುದೇ ರೀತಿ ಗಮನಹರಿಸಲಿಲ್ಲ, ತೀರಾ ತೊಂದರೆ ಆದರೆ ಕೆಲಸ ಬಿಟ್ಟು ಹೋಗಿ ಎಂದು ಹೇಳುತ್ತಾರೆ.

ಕೆಲವೊಬ್ಬ ಮಹಿಳೆಯರು ಹೊರಗಡೆ ಶೌಚಾಲಯಕ್ಕೆ ಹೋಗುತ್ತಾರೆ ಆದರೆ ನನಗೆ ಹೋಗಲು ಇಷ್ಟ ಆಗಲ್ಲ ಅಂತ ಹೇಳುತ್ತಾರೆ, ಅಂದ್ರೆ ಈ ಸಾಂಪ್ರಾದಾಯಿಕ ಸಮಾಜ ಮೊದಲಿನಿಂದಲೂ ಹೆಣ್ಣನ್ನು ಜಾತಿಯಿಂದ ಅಲ್ಲದೆನೊ. ಒಟ್ಟಾರೆ ನಿಯಂತ್ರಣದ ಚೌಕಟ್ಟನ್ನು ಹಾಕಿ ಶೀಲ, ಪತಿವೃತ್ಯ, ಮರ್ಯಾದೆ ಇನ್ನಿತರ ಮನಸ್ಥಿತಿಯನ್ನು ರೂಪಿಸಿ, ಸ್ವತ ಅವಳೇ ಅಂದ್ರೆ ಗೀತಾ ಎಂಬ ಮಹಿಳೆ (ಜಾತಿಯಿಂದ ಉನ್ನತ) ಹೋದರೆ ಮರ್ಯಾದೆ ಹೋಗುತ್ತದೆ ಎಂಬ ಮನಸ್ಥಿತಿಯನ್ನು ಹೊಂದಿರುವ ಕಾರಣ, ತನ್ನ ದೇಹಸ್ಥಿತಿ ಎನಾದರೂ ಕೂಡ ಯೋಚಿಸುವುದಿಲ್ಲ ವಂತ ಪರಿಸ್ಥಿತಿಯನ್ನು ಕಾಬಹುದಾಗಿದೆ, ಈ ವ್ಯವಸ್ಥೆ ಅನ್ನುವುದು ಹೆಣ್ಣಿಗೆ ಮರ್ಯಾದೆ ಎನ್ನುವ ಮನಸ್ಥಿತಿಯನ್ನು ಎಷ್ಟರ ಮಟ್ಟಿಗೆ ಮೂಡಿಸಿದೆ ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ

ಇನ್ನೂ ಬೆಂಗಳೂರನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಅಲ್ಲಿ ಕೂಡ ಅದೇ ವ್ಯವಸ್ಥೆಯನ್ನು ನೋಡಬಹುದಾಗಿದೆ, ಏಕೆಂದರೆ ಮಾಲೀಕರ ಮನಸ್ಥಿತಿಯನ್ನು ಎಷ್ಟಿದೆ ಅಂದರೆ ಮಹಿಳೆಯರಿಗೆ ಶೌಚಾಲಯ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಏರ್ಪಡಿಸಿದರೆ ಅವರು ಪದೇ ಪದೇ ಹೋಗುತ್ತಾರೆ. ಹೋಗುವುದರಿಂದ ಪ್ರೊಡಕ್ಷನ್ ಒತ್ತಡ ಕಡಿಮೆಯಾಗುತ್ತೆ ಎಂಬ ಮನಸ್ಥಿತಿ ಹೊಂದಿರುತ್ತಾರೆ . ಮತ್ತು ಶೌಚಾಲಯದ ಎದುರುಗಡೆ ಪುರುಷ ವಾಚಮನ್ ನೇಮಕ ಮಾಡಿರುತ್ತಾರೆ. ಎರಡು ಸಲ ಅಲ್ಲದ ಮೂರು ಸಲ ಶೌಚಾಲಯಕ್ಕೆ ಹೋದರೆ ಬಾಯಿಗೆ ಬಂದಾಗ ಬೈಯ್ದು ಏನ್ ತಿಂತಿರಾ ಹೊಟ್ಟೆಗೆ, ಅಲ್ಲಿ ಹೋಗಿ ಕೂತು ಟೈಮ ಪಾಸ್ ಮಾಡ್ತಿರಾ ಅಂತ ಬೈದು ಕಳಿಸ್ತಾರೆ. ಅವರ ಬೈಗಳುಗಳನ್ನು ಕೆಳೋಕ ಆಗದನೆ ನಾವೇ ಊಟ ನೀರು ಕಡಿಮೆ ಮಾಡಿದ್ದೇವೆ, ಮಾಮೂಲ ಇದ್ದ ಸಂದರ್ಭದಲ್ಲಿಯಂತೂ ಅಷ್ಟು ತೊಂದರೆ ಆಗಲ್ಲ, ಆದರೆ ಗರ್ಭಿಣಿ ಇದ್ದ ಸಂದರ್ಭದಲ್ಲಿ, ಋತುಚಕ್ರದ ಸಂದರ್ಭದಲ್ಲಂತೂ ನನ್ನ ಸ್ಥಿತಿ ಹೇಳಬಾರದು. ನಾವು ಪಡುವ ಕಷ್ಟ ಅಷ್ಟಿಷ್ಟಲ್ಲ. ಯಾರಿಗೂ ಹೇಳಕ್ಕೂ ಆಗಲ್ಲ, ಅನುಭವಿಸಕ್ಕೂ ಆಗಲ್ಲ ಅನ್ನುವ ಪರಿಸ್ಥಿತಿ ನಮಗಿದೆ. ಅಲ್ಲದೇ ಬಳ್ಳಾರಿಯಲ್ಲಂತೂ ಚಿಕ್ಕ ಚಿಕ್ಕ ಫ್ಯಾಕ್ಟ್ರಿ ಯಾವುದೆ ಸ್ವಚ್ಚಂದದ ಗಾಳಿ ಬೇಳಕಿಲ್ಲದೆ ನಾಲ್ಕು ಗೋಡೆ ಮಧ್ಯೆ ಉಸಿರುಕಟ್ಟುವಂತೆ ಧೂಳಿನ ವಾತಾವರಣವನ್ನು ಕಾಣಬಹುದಾಗಿದೆ.

(ಒಂದು ರೀತಿಯ ಗೋಡಾನ್ ಇದ್ದ ಹಾಗೆ) ಜೊತೆಗೆ ಊಟ ವ್ಯವಸ್ಥೆಯನ್ನು ಮಹಿಳೆಯರು ಯಾವ ಜಾಗದಲ್ಲಿ ಕೆಲಸ ಮಾಡುತ್ತಿರುತ್ತಾರೊ ಅದೇ ಜಾಗದಲ್ಲಿ ಊಟ ಮಾಡುತ್ತಾರೆ. ಅವರಿಗೆ ಅವರದೆ ಆದ ಶೌಚಾಲಯ ವ್ಯವಸ್ಥೆಯಾಗಲಿ. ಊಟ ಮಾಡುವ ಜಾಗವಾಗಲಿ, ವಿರಮಿಸಲು ಪ್ರತ್ಯೇಕ ಕೊಠಡಿ ಕೂಡ ಇಲ್ಲ. ಆದರೂ ಪುರುಷ ಪ್ರಧಾನ ಸಮಾಜ ಹೆಣ್ಣನ್ನು ಅನಿವಾರ್ಯ ಪರಿಸ್ಥಿತಿಯನ್ನು ತಂದೊಡ್ಡಿ ಅಸಹಾಯಕಳಾಗಿ ಕೆಲಸ ಮಾಡುವ ವಾತವರಣವನ್ನು ತಂದೊಡ್ಡಿದೆ ಎಂದರೆ ತಪ್ಪಾಗಲಾರದು,

ಬೆಂಗಳೂರಲ್ಲಿ ಕೂಡ ಕಾರ್ಮಿಕರಿಗೆ ಊಟ ಮಾಡಲು ಸ್ವಚ್ಛವಾದ ವಾತಾವರಣ ಕೂಡ ಇಲ್ಲ. ಉದಾ; ಮೈಸೂರು ರಸ್ತೆಯ ಪಂತರಪಾಳ್ಯದಲ್ಲಿರುವ ಗಾರ್ಮೆಂಟ್ಸ್ ಕಾರ್ಖಾನೆಯೊಂದರ ಕಾರ್ಮಿಕರು ಮದ್ಯಾಹ್ನ ಊಟದ ಸಮಯದಲ್ಲಿ ಕಾರ್ಖಾನೆಯಲ್ಲಿ ಊಟ ಮಾಡಲು ಅನುಕೂಲವಾದ ಸ್ಥಳವಿಲ್ಲದೆ ದೂಳು, ಮಣ್ಣಿನ ಮದ್ಯೆ ಅಸುರಕ್ಷಿತ ವಾತಾವರಣದಲ್ಲಿ ಕುಳಿತು ಊಟ ಮಾಡುತ್ತಾರೆ ಇದು ಒಂದು

ಕಾರ್ಖಾನೆಯ ಪರಿಸ್ಥಿತಿಯಲ್ಲ, ಹಲವಾರು ಕಾರ್ಖಾನೆಗಳಲ್ಲಿ ಕಾರ್ಮಿಕರದು ಇದೇ ಸ್ಥಿತಿ ಫ್ಯಾಕ್ಟರಿಗಳ ಕಾಯಿದೆಯು ಪ್ರತಿ ೨೫೦ ಮಂದಿ ಕಾರ್ಮಿಕರಿದ್ದರೆ ಕಾರ್ಖಾನೆಯು ಕಡಿಮೆ ದರದಲ್ಲಿ ಊಟ ನೀಡುವ ಕ್ಯಾಂಟೀನ್ ಅನ್ನು ಒದಗಿಸಬೇಕೆಂದು ವಿವರಿಸುತ್ತದೆ. ಕಾರ್ಖಾನೆಗಳು ಕಡಿಮೆ ದರದಲ್ಲಿ ಊಟ ನೀಡುವುದಿರಲಿ ಊಟಕ್ಕೆ ಸರಿಯಾದ ಸ್ಥಳ ಒದಗಿಸಿದರೆ ಹೆಚ್ಚು ಎಂಬಂತಾಗಿದೆ.[೫]

ಕೆಲವೊಂದು ಕಾರ್ಖಾನೆಗಳಲ್ಲಿ ಊಟ ಮಾಡಲು ಸ್ಥಳ ವ್ಯವಸ್ಥೆ ಮಾಡಿರುತ್ತಾರೆ ಆದರೆ ವಾಸ್ತವದಲ್ಲಿ ಕಾರ್ಖಾನೆಯಲ್ಲಿ ಮಾಡಿರುವ ಊಟದ ವ್ಯವಸ್ಥೆಯಿಂದ ಕಾರ್ಮಿಕರಿಗೆ ಯಾವುದೇ ಉಪಯೋಗವಾಗದ ಹಾಗೆ ಮಾಡಿರುತ್ತಾರೆ. ಅದು ಕಾರ್ಮಿಕರಿಗೆ ಸುಲಭವಾಗಿ ತಲುಪದಷ್ಟು ದೂರದಲ್ಲಿ ಅಥವಾ ಎತ್ತರದ ಮಹಡಿಯ ಮೇಲೆ ಇರುತ್ತದೆ. ವಾಸ್ತವದ ಅರಿವಿಲ್ಲದೆ, ಕೇವಲ ತೋರಿಕೆಗೆ ಸ್ಥಳಾವಕಾಶ ಮಾಡಿದರೆ ಕಾರ್ಮಿಕರು ಅದನ್ನು ಉಪಯೋಗಿಸಲು ಆಗುವುದಿಲ್ಲ. ಅವರಿಗೆ ಸಿಗುವ ಸಮಯನೇ ಅರ್ಧಗಂಟೆ ಇಂತಹದರಲ್ಲಿ ೭-೮ ನಿಮಿಷಗಳು ಅವರು ಕುಳಿತಿದ್ದ ಸ್ಥಳ ಬಿಟ್ಟು ಎದ್ದು ಬ್ಯಾಗ್ ತಂದುಕೊಂಡು ಊಟ ಮಾಡಲು ಸಿದ್ಧಮಾಡಿಕೊಳ್ಳುವುದರಲ್ಲಿ ಕಳೆದು ಹೋಗುತ್ತದೆ. ಇನ್ನೂ ಫಿಕ್ಸ್ ಮಾಡಿರುವ ಟಾರ್ಗೆಟ್ ಮುಗಿಸಿರದಿದ್ದರೆ ಮಾಲಿಕತ್ವದ ಒತ್ತಡವನ್ನು ಹಿಂಸೆ ತಾಳಲಾರದೆ ಒಂದು ಹತ್ತು ನಿಮಿಷದಲ್ಲಿ ತಂದು ಕೆಲಸಕ್ಕೆ ಓಡುವುದರಲ್ಲಿ ಯೋಚನೆ ಮಾಡ್ತಿರುತ್ತಾರೆ. ಅಂತಹದರಲ್ಲಿ ಯಾವ ಸ್ಥಳ, ಎಲ್ಲಿ ಹೇಗೆ ಇರಲಿ ಯಾವುದಕ್ಕೂ ಗಮನಹರಿಸದೆ ಪ್ರೊಡಕ್ಷನ್ ಬಗ್ಗೆ ಮಾತ್ರ ಯೋಚನೆ ಮಾಡ್ತಿರುತ್ತಾರೆ.

೩.೨.೨ ವೇತನ ಪಾವತಿ ಕಾಯಿದೆ – ೧೯೩೬

"ಕೈಗಾರಿಕೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಸಂಬಳವನ್ನು ಕೊಡುವುದಕ್ಕಾಗಿ ನಿಯಂತ್ರಗೊಳಿಸುವ ಕಾನೂನು ೧೯೩೬ ಕಾಯ್ದೆ. ಇದು ಕೆಲಸ ಮಾಡುವವರೆಗೆ ವೇತನವನ್ನು ಸರಿಯಾದ ಸಮಯಕ್ಕೆ ವೇತನ ಕೋಡುತ್ತದೊ ಅಥವಾ ಇಲ್ಲವೊ? ಅಲ್ಲದೆ ವೇತನವನ್ನು ಸರಿಯಾದ ಸಮಯಕ್ಕೆ ಕೆಲಸ ಮಾಡಿದಷ್ಟು ತಕ್ಕಷ್ಟು ಕೂಲಿ ಕೊಡುತ್ತದೊ, ಕೊಡದಿದ್ದರೆ ಕಾರ್ಮಿಕರಿಗೆ ಯಾವ ರೀತಿ ಪ್ರತಿಕ್ರಿಯೆ ಕೋಡುತ್ತಾರೆ.ಇಂಥ ಸಂದರ್ಭದಲ್ಲಿ ಸರ್ಕಾರ ಯಾವ ಕ್ರಮಗಳನ್ನು ಕಾರ್ಮಿಕರಿಗೆ ಒದಗಿಸಲು ಪ್ರಯತ್ನಿಸುತ್ತದೆ ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸುವುದು ಅವಶ್ಯಕವಾಗಿದೆ. ಅದರಲ್ಲೂ ಮಹಿಳಾ ಕಾರ್ಮಿಕರಿಗೆ ವೇತನ ಕೊಡುವಲ್ಲಿ ಯಾವ ಬಗೆಯ ನೀತಿಯನ್ನು ಅಳವಡಿಸಿದೆ ಎಂಬುದನ್ನು ಮುಂದಿನ ವಿಷಯದಲ್ಲಿ ಚರ್ಚೆಗೆ ಒಳಪಡಿಸಿದ್ದೇನೆ.

"ಈ ಕಾಯಿದೆಗೆ ೧೯೮೨ರಲ್ಲಿ ಅನೇಕ ತಿದ್ದುಪಡಿಗಳನ್ನು ಮಾಡಲಾಗಿದೆ, ಅವುಗಳಲ್ಲಿ ಮುಖ್ಯವಾದವು, ಈ ಕಾಯ್ದೆ ಸಾವಿರ ರೂಪಾಯಿಗಳವರೆಗೂ ವೇತನ ಬರುವವರೆಗೆ ಮಾತ್ರ ಅನ್ವಯ ಆಗುತ್ತಿತ್ತು. ಇತ್ತೀಚಿನ ತಿದ್ದುಪಡಿಯಿಂದಾಗಿ ಈಗ ಈ ಕಾಯ್ದೆ ೧೫೯೯ ರೂಪಾಯಿಗಳನ್ನು ಸರಾಸರಿ ಮಾಸಿಕ ವೇತನವನ್ನು ಪಡೆಯುವವರಿಗೂ ಅನ್ವಯ ಆಗುತ್ತದೆ, ಅಥವಾ ೧೬೦೦ರೂ. ಗಳಿಗಿಂತಲೂ ಕಡಿಮೆ ಮಾಸಿಕ ವೇತನ ಪಡೆಯುವವ ಈ ಕಾಯ್ದೆಯ ವ್ಯಾಪ್ತಿಯೊಳಗೆ ಇರುತ್ತಾರೆ. ಈ ಕಾಯ್ದೆ ಅನ್ವಯ ವಿಸ್ತಾರವಾಗಿ ಆಗುವಂತೆ ಮಾಡಲು ಕೈಗಾರಿಕಾ ಸಂಸ್ಥೆಗಳು ಈ ಕಾಯಿದೆಯಲ್ಲಿ ಹೇಳಲಾಗುತ್ತಿದ್ದನ್ನು

[illegible]

[illegible]

[illegible]

[illegible]

[illegible]

ಕೈಗಾರಿಕೆ ಅಥವಾ ಇತರೆ ಸಂಸ್ಥೆ ಎಂದು ತಿದ್ದುಪಡಿ ಮಾಡಲಾಗಿದೆ. ಇದರಿಂದಾಗಿ ಇತರ ಸಂಸ್ಥೆಗಳಿಗೂ ಈ ಕಾಯ್ದೆ ಅನ್ವಯ ಆಗುವಂತೆ ಮಾಡಲು ಯಾವಾಗಬೇಕಾದರು ಕೇಂದ್ರ ೯ ರಾಜ್ಯ ಸರ್ಕಾರಗಳು ತಮ್ಮ ಅಧಿಕೃತ ಗೆಜೆಟ್ಟಿನಲ್ಲಿ ಈ ಬಗ್ಗೆ ಪ್ರಕಟಣೆ ಮಾಡಿ ಅನ್ವಯ ಮಾಡುವ ಅಧಿಕಾರವನ್ನು ಪಡೆದಿದೆ.[೯]

- ಕೆಲಸಗಾರ ಕೆಲಸದಲ್ಲಿ ಇರುವಾಗಲೇ ಮರಣ ಹೊಂದಿದಲ್ಲಿ ಅವನಿಗೆ ಬರಬೇಕಾದ ಬಾಕಿ ವೇತನ ಇತ್ಯಾದಿಗಳನ್ನು ಅವನು ನಿಯುಕ್ತ ಮಾಡಿದ ವ್ಯಕ್ತಿಗೆ ಪಾವತಿ ಮಾಡಲು ಸಾಧ್ಯ ಆಗುವಂತೆ ತಿದ್ದುಪಡಿಯನ್ನು ಮಾಡಲಾಗಿದೆ. ಇದು ಸಾವಿರದ ಐನೂರು ತೊಂಬಂತೊಂಬತ್ತು ರೂಪಾಯಿಗಳ ಗರಿಷ್ಠ ವೇತನ ಪಡೆಯುವವರೆಗಿನ ವರ್ಗದ ನೌಕರರಿಗೆ ಮಾತ್ರ ಈ ಅನ್ವಯ ಆಗುತ್ತದೆ.

- ಓವರ್ ಟೈಮ್ ಸಂಬಳ ರಜೆ ಸಂಬಳ ರಿಟ್ರೆಂಚಮೆಂಟ್ ಪರಿಹಾರ ಇವುಗಳು ಸಂಬಳವೆಂದು ಪರಿಗಣಿಸಲ್ಪಡುತ್ತವೆ. ಆದರೆ ಮನೆ ಬಾಡಿಗೆ ಭತ್ಯ, ವೈದ್ಯಕೀಯ ಭತ್ಯೆ, ಪ್ರಯಾಣ ಭತ್ಯೆ ಮತ್ತು ಉಪದಾನ (ಗ್ರಾಚ್ಯುಟಿ) ಮತ್ತು ಬೋನಸ್ ಇವುಗಳು ಸಂಬಳವೆಂದು ಪರಿಗಣಿಸುವುದಿಲ್ಲ[೧೦]

- ಒಂದು ಸಾವಿರಕ್ಕಿಂತ ಕಡಿಮೆ ಕಾರ್ಮಿಕರಿರುವ ಸಂಸ್ಥೆಯಲ್ಲಿ ಪ್ರತಿ ತಿಂಗಳು ೭ನೇ ತಾರೀಖಿನ ಒಳಗಾಗಿ ಸಂಬಳ ಪಾವತಿ ಮಾಡಬೇಕಾಗುತ್ತದೆ. ಇನ್ನುಳಿದ ಸಂಸ್ಥೆಗಳು ಪ್ರತಿ ತಿಂಗಳು ೧೦ ನೇ ತಾರೀಖಿನ ಒಳಗಾಗಿ ಸಂಬಳ ಪಾವತಿ ಮಾಡಬೇಕಾಗುತ್ತದೆ.

- ಕೆಲಸ ಕಳೆದುಕೊಂಡ ಕಾರ್ಮಿಕರ ಬಾಕಿ ಉಳಿದ ವೇತನವನ್ನು ಮರುದಿನವೇ ಪಾವತಿ ಮಾಡಬೇಕಾಗುತ್ತದೆ.

- ಸಂಬಳವನ್ನು ನಗದು ರೂಪದಲ್ಲಿ ಕಾರ್ಮಿಕರಿಗೆ ಪಾವತಿ ಮಾಡಬೇಕಾಗುತ್ತದೆ. ಕಾರ್ಮಿಕರ ಲಿಖಿತ ಅನುಮತಿ ಪಡೆದಲ್ಲಿ ಅವರ ಸಂಬಳವನ್ನು ಬ್ಯಾಂಕ್ ಚೆಕ್ಕಿನ ಮುಖಾಂತರ ಅಥವಾ ಕಾರ್ಮಿಕರ ಹೆಸರಿನಲ್ಲಿರುವ ಬ್ಯಾಂಕ್ ಖಾತೆಯಲ್ಲಿ ಜಮಾ ಮಾಡಬಹುದಾಗಿರುತ್ತದೆ.

- ಸಂಬಳ ಪಾವತಿ ಮಾಡದಿದ್ದಲ್ಲಿ ಅಥವಾ ಅನಧಿಕೃತವಾಗಿ ಸಂಬಳದಲ್ಲಿ ಕಡಿಮೆ ಮಾಡಿದ ಪಕ್ಷದಲ್ಲಿ ಅಂಥ ಕಾರ್ಮಿಕರು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ಸಮ್ಮುಖದಲ್ಲಿ ದಾವೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

- ಕಾರ್ಮಿಕರ ಸಂಬಳ ಪಾವತಿ ಕುರಿತು ಮಾಲೀಕರು ಸಂಬಳದ ರಿಜಿಸ್ಟರನ್ನು ಇಡಬೇಕಾಗುತ್ತದೆ."

ಮೇಲ್ಕಂಡ ಹಕ್ಕುಗಳ ಉಲ್ಲಂಘನೆಯಾದಲ್ಲಿ ಕಾರ್ಮಿಕರು ಕಾರ್ಮಿಕ ಇಲಾಖೆಗೆ ದೂರನ್ನು ನೀಡಬಹುದಾಗಿದೆ. ಹೀಗೆ ವೇತನ ಪಾವತಿ ಕಾಯ್ದೆಯು ಕೆಲವು ಅಂಶಗಳನ್ನು ಸೂಚಿಸುತ್ತದೆ. ಈ ಕಾಯ್ದೆಯು ಸಹ ಕಾರ್ಮಿಕ ಕಲ್ಯಾಣದ ದೃಷ್ಟಿಯಿಂದ ಒಂದು ಮುಖ್ಯ ಸಾಮಾಜಿಕ ಭದ್ರತೆ ಎನ್ನಬಹುದು. ಕನಿಷ್ಠ ಕೂಲಿಯನ್ನು ನೀಡದ ವಾತಾವರಣದಲ್ಲಿ ದುಡಿಮೆಯ ಫಲವಾದ ಕೂಲಿಯನ್ನು ಸರಿಯಾದ ಸಮಯಕ್ಕೆ ಪಾವತಿಸಬೇಕಾದ ನ್ಯಾಯವಾಗಿದೆ. ಗೈರು ಹಾಜರಾದಾಗ ದಂಡವಸೂಲಿ ಲೆಕ್ಕಪತ್ರ ನೀಡುವಾಗ

[illegible]

[illegible]

[illegible]

[illegible]

[illegible]

[illegible]

[illegible]

[illegible]

ಹಣದಲ್ಲಿ ಆಗುವ ವ್ಯತ್ಯಾಸ ಜೀವ ವಿಮೆ, ಮನೆಸಾಲ. ನ್ಯಾಯಾಲಯದಲ್ಲಿ ವೇತನ ಕಡಿತ ಆದೇಶವಿದ್ದರೆ ಕೂಲಿಯಲ್ಲಿ ಕಡಿಮೆ ಮಾಡಬಹುದು.

ಬಳ್ಳಾರಿ ಕ್ಷೇತ್ರಾಧ್ಯಯನದ ಸಂದರ್ಭದಲ್ಲಿ ಕಾನೂನು ಪ್ರಕಾರ ಅನ್ವಯಗೊಳ್ಳದೆ ಇದ್ದರೂ ಬೆಂಗಳೂರಿಗೆ ಹೋಲಿಸಿದಾಗ ಕಾರ್ಮಿಕರಿಗೆ ಸಾಮಾನ್ಯವಾಗಿ ವೇತನವನ್ನು ಕೊಡುತ್ತಾರೆ. ಆದರೆ ಬೆಂಗಳೂರಿಂದ ದೊಡ್ಡ ನಗರದಲ್ಲಿ ಕಾರ್ಮಿಕರ ಜೀವನವಂತು ಹೇಳತೀರದು ಏಕೆಂದರೆ ಬಂಡವಾಳ ಶಾಹಿಗಳ ಲಾಭಧೋರಣೆ ಕಾರ್ಮಿಕರ ಸ್ಥಿತಿಯನ್ನು ಪ್ರತಿಕ್ಷಣ ಅತಂತ್ರ ಸ್ಥಿತಿಯಲ್ಲಿ ಇರುವಂತೆ ಮಾಡುತ್ತದೆ. ಮಾಲೀಕರು ಏನ್ ಹೇಳುತ್ತಾರೆ ಅದನ್ನು ಕೇಳಲೆಬೇಕು. ಒಂದು ವೇಳೆ ವಿರೋಧಿಸಿದರೆ ತಕ್ಷಣ ಕೆಲಸ ಕಳೆದುಕೊಳ್ಳುವ ಸಂದರ್ಭಗಳೇ ಹೆಚ್ಚು. ಕ್ಷೇತ್ರಧ್ಯಯನದ ಸಂದರ್ಭದಲ್ಲಿ ಕೆಲಸಕಳೆದುಕೊಂಡಿರುವ ಉದಾಹರಣೆಗಳು ಕೂಡ ಸಾಕಷ್ಟಿವೆ. ಇದ್ದಕಿದ್ದಂತೆ ಮಾಲೀಕರು ಕೆಲಸದಿಂದ ತೆಗೆದುಹಾಕುವುದರಿಂದ ನಮ್ಮ ಜೀವನ ಬೀದಿಪಾಲಗಿದೆ. ರತ್ನಮ್ಮ. ಶಾಂತ ಎಂಬ ಇಬ್ಬರನ್ನು ಕೆಲಸದಿಂದ ತೆಗೆದುಹಾಕಿದ್ದಾರೆ ಅವರು ದುಡಿದಿರುವ ಸಂಬಳವಾಯಿತು ಐ.ಎಫ್. ಇನ್ನಿತರ ಯಾವುದೆ (ಕೂಲಿ) ಸಂಬಳವನ್ನು ಕೂಡದೆ ಇವತ್ತು ಬಾ ನಾಳೆ ಬಾ, ಮುಂದಿನ ವಾರ ಬಾ ಅಂತ ಸೆಕ್ಯೂರಟಿ ಗಾರ್ಡ್ ಗೇಟ್ ಕೂಡ ತೆಗೆಯಲಾರದೆ ಹೊರಗೆ ನಿಲ್ಲಿಸಿ ಬೈಯ್ದು ಕಳಿಸ್ತಾರೆ. ಕಾನೂನು ಪ್ರಕಾರ ಯಾವುದೆ ನಿಯಮಗಳು ವಾಸ್ತವದಲ್ಲಿ ರೂಪಿತಗೊಂಡಿಲ್ಲ.

ಕಾರ್ಖಾನೆಯ ಅತೀ ಸಮಯ ಪಾಲನೆಯಿಂದಾಗಿ ಕಾರ್ಮಿಕರು ಹಲವಾರು ರೀತಿಯ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆ. ಅಪಘಾತಕ್ಕಿಡಾಗುತ್ತಿದ್ದಾರೆ. ಕೆಲವರು ಗಂಭೀರವಾಗಿ ಗಾಯಗೊಂಡರೆ ಕೆಲವರು ಪ್ರಾಣವನ್ನೆ ಕಳೆದುಕೊಳ್ಳುತ್ತಿದ್ದಾರೆ. ಕಾರ್ಮಿಕರು ತೆಗೆದುಕೊಳ್ಳುವ ಕಡಿಮೆ ಸಂಬಳಕ್ಕೆ ಯಾರು ಸಹ ಸರ್ಕಾರಿ ಬಸ್ಸುಗಳನ್ನು ಅವಲಂಬಿಸದೆ ನಡದೆ ಹೋಗುತ್ತಾರೆ. ಆದರೆ ಗ್ರಾಮಂತರ ಪ್ರದೇಶಗಳಿಂದ ಕೆಲಸಕ್ಕೆ ಬರುವ ಕಾರ್ಮಿಕರು ಹೆಚ್ಚಾದ ಸಾರಿಗೆ ವೆಚ್ಚವನ್ನು ಭರಿಸಲಾಗದೆ ಖಾಸಗಿ ಬಸ್ಸು ಲಾರಿ ಟೆಂಪೂಗಳನ್ನು ಅವಲಂಬಿಸುವುದರಿಂದ ಅನೇಕ ಅಪಘಾತಗಳು ನಡೆಯುತ್ತವೆ.

ಉದಾ: ಬಾಂಬೆ ರೆಯಾನ್ ಕಾರ್ಖಾನೆಗೆ ಬಸ್ ಅಪಘಾತವೆಂಬುದು ಹೊಸದಲ್ಲ ೨೦೦೬ ರಲ್ಲಿ ಕಾರ್ಖಾನೆಯ ಬಸ್ ಅಪಘಾತಕ್ಕೀಡಾಗಿ ಕಾರ್ಮಿಕರು ಕೈ ಕಾಲು ಮುರಿದುಕೊಂಡಿದ್ದರು. ೨೦೦೭ರ ಏಪ್ರಿಲ್‌ನಲ್ಲಿ ಗಾಯಿತ್ರಿ ಎಂಬ ಕಾರ್ಮಿಕಳು ಕಾರ್ಖಾನೆಯ ಬಸ್ ಡಿಕ್ಕಿ ಹೊಡೆದು ಸ್ಥಳದಲ್ಲೇ ಸಾವಿಗೀಡಾಗಿದ್ದರು. ೨೦೦೮ರಲ್ಲಿಯೂ ಕಾರ್ಖಾನೆಯ ಬಸ್ ಅಪಘಾತದಲ್ಲಿ ೨೦ ಮಂದಿ ಕಾರ್ಮಿಕರು ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.[೧೧]

ದಿನಾಂಕ ೦೪-೦೬-೨೦೦೯ ರಂದು ಚಿಕ್ಕ ಮುದಿವಾಡಿಯಿಂದ ಮೈಸೂರು ರಸ್ತೆಯಲ್ಲಿರುವ ಎಲ್. ಎನ್.ಜೆ. ಕಾರ್ಖಾನೆಗೆ ಕಾರ್ಮಿಕರನ್ನು ಕರೆತರುತ್ತಿದ್ದ ಮಿನಿ ಬಸ್ ವಾಹನವು ಗೋಪಹಳ್ಳಿ ಕೆರೆಯ ಏರಿಯ ಮೇಲೆ ಬರುವಾಗ ಕೆಳಗೆ ಉರುಳಿಬಿದ್ದು ಸುಮಾರು ಹದಿನೆಂಟು ಮಂದಿ ಕಾರ್ಮಿಕರು ಗಾಯಗೊಂಡಿದ್ದಾರೆ. ಮೈಸೂರು ರಸ್ತೆಯ ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ಹತ್ತು ಕಾರ್ಮಿಕರು ಒಳರೋಗಿಳಾಗಿ

[illegible]

[illegible]

[illegible]

[illegible]

[illegible]

ಚಿಕಿತ್ಸೆ ಪಡೆದುಕೊಂಡಿದ್ದಾರೆ. ಈ ಹತ್ತು ಕಾರ್ಮಿಕರಲ್ಲಿ ಮೂರು ಮಂದಿಗೆ ಹೆಚ್ಚಿನ ಗಾಯಗಳಾಗಿದ್ದು ಉಳಿದ ಕಾರ್ಮಿಕರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ.

ಒಂದರ ಮೇಲೊಂದು ಸರಣಿಯಾಗಿ ಅಪಘಾತ ಸಂಭವಿಸಿದರೂ. ಎಚ್ಚೆತ್ತುಕೊಳ್ಳದೆ ನಿರ್ಲಕ್ಷ್ಯ ತೋರಿಸುತ್ತಿರುವ ಬಾಂಬೆ ರೆಯಾನ್ ಫ್ಯಾಶನ್ಸ್ ಆಡಳಿತ ವರ್ಗವು ಕಾರ್ಮಿಕರ ಜೀವದ ಜೊತೆಗೆ ಚೆಲ್ಲಾಟವಾಡುತ್ತಿದೆ. ಇದಲ್ಲದೆ ಕಾರ್ಮಿಕರ ಪ್ರಾಣಕ್ಕೆ ಬೆಲೆನೇ ಇಲ್ಲ. ಫ್ಯಾಕ್ಟ್ರಿಯಲ್ಲಿ ಸತ್ತರು ಕೂಡ ಯಾವುದೆ ಪರಿಹಾರ ಕೊಡದೆ ಅವರ ಕುಟುಂಬಕ್ಕೂ ಯಾವ ಆಧಾರನು ಇಲ್ಲದೆ ಪ್ರತಿಕ್ಷಣ ಅನೇಕ ಸಮಸ್ಯೆಗಳಿಗೆ ಒಳಗಾಗುತ್ತಿರುವುದನ್ನು ಕ್ಷೇತ್ರಧ್ಯಯನದಲ್ಲಿ ಕಾಣಬಹುದಾಗಿದೆ.

ಉದಾ: ಅಮ್ಮು ಎನ್ನುವ ಇಪ್ಪತ್ತೈದು ವರ್ಷದ ಯುವತಿ. ಗೋಕುಲ್‌ದಾಸ್ ಎಕ್ಸಪೋರ್ಟ ಗ್ರೂಪ್ ಕಂಪನಿಯಲ್ಲಿ ಕೆಲಸಮಾಡುತ್ತಿದ್ದಳು. ಪ್ರೊಡಕ್ಸನ್ ಮ್ಯಾನೇಜರ್. ಅಸಿಸ್ಟೆಂಟ್ ಮ್ಯಾನೇಜರ್ ಮತ್ತು ಸೂಪರ್‌ವೈಜರ್‌ರವರು ತುಂಬಾ ಕೆಟ್ಟದಾಗಿ, ಕೀಳುಮಟ್ಟದಲ್ಲಿ ನಡೆಸಿಕೊಳ್ಳುತ್ತಿದ್ದರು. ಕೊನೆಗೆ ಆ ಹಿಂಸೆ ತಾಳಲಾರದೆ ಫ್ಯಾಕ್ಟ್ರಿಯಲ್ಲಿ ಶೌಚಾಲಯದಲ್ಲಿ ನೇಣುಹಾಕಿಕೊಂಡರೂ ಅವರ ಕುಟುಂಬಕ್ಕೆ ಸಂಪೂರ್ಣ ನ್ಯಾಯ ಒದಗಿಸಿ ಆಡಳಿತ ವರ್ಗ ಕೈತೊಳೆದುಕೊಂಡಿದ್ದಾರೆ. ಅವರ ಕಿರುಕುಳವೆ ಆಕೆಯ ಆತ್ಮಹತ್ಯೆಗೆ ಕಾರಣ, ಈ ಎಲ್ಲಾ ಪ್ರಕರಣವನ್ನು ಆಡಳಿತ ಮಂಡಳಿ ಮತ್ತು ಪೋಲೀಸ್ ಇಲಾಖೆ. ಮುಚ್ಚಿಹಾಕಲು ಪ್ರಯತ್ನ ಪಟ್ಟಿತು. ಆಕೆಯ ಸಾವಿಗೆ ಕೆಲಸ ಮಾಡುವ ಸ್ಥಳ ಕಾರಣವಲ್ಲ. ಆಕೆಯ ವೈಯಕ್ತಿಕ ಕಾರಣಗಳು ಏನು ಇದ್ದವೋ ಗೊತ್ತಿಲ್ಲ, ಅಷ್ಟೇ ಅಲ್ಲ ಅಮ್ಮು ತುಂಬ ಕಿರಿಕಿರಿ ಹೆಣ್ಣು ಮಗಳಾಗಿದ್ದಳು ಎಂದು ಸಾರಿತು. ಹಾಗು ಅವಳ ಕುಟುಂಬ ಬಾಯಿ ಮುಚ್ಚಿಕೊಂಡು ಇರಲು ೧.೭೫ ರಿಂದ ೨ ಲಕ್ಷ ಕೊಟ್ಟಿತು. ಒಂದು ದೌರ್ಜನ್ಯದ ಸಾವು ಅವರ ಕುಟುಂಬವನ್ನು ಕೊಂಡುಕೊಳ್ಳುವುದರ ಮುಖಾಂತರ ಅಂತ್ಯಗೊಂಡಿತು. ಆದರೆ ಇದು ಪ್ರಚಾರಗೊಳ್ಳಲು ಹಲವಾರು ಕಾರಣಗಳಿದ್ದವು, ಅಲ್ಲಿ ಕೆಲಸ ಮಾಡುವವರಲ್ಲಿಯೇ ಒಳಗೊಳಗೆ ಗುಸುಗುಸು ಪ್ರಾರಂಭವಾಯಿತು. ಗೋಕುಲ್‌ದಾಸ್ ಎಕ್ಸಪೋರ್ಟ ಕಂಪನಿಯು ಸಣ್ಣದಾಗಿರಲಿಲ್ಲ. ಅಲ್ಲಿ ಒಂದರಲ್ಲಿಯೇ ೩೦ ಸಾವಿರ ಕೆಲಸಗಾರರು ಕೆಲಸಮಾಡುತ್ತಿದ್ದರು. ಅವರ ವಾರ್ಷಿಕ ಒಟ್ಟು ಆದಾಯ ೭೦೦ ಕೋಟಿ ರೂಪಾಯಿಗೂ ಅಧಿಕ ಮತ್ತು ವಿದೇಶಗಳ ಮಟ್ಟದಲ್ಲಿಯೂ ಕೂಡ ಹೆಸರು ಮಾಡಿದಂತಹ ಕಂಪನಿ. ಹಾಗಾಗಿ ಇಂತಹ ಕಂಪನಿ(ಹೆಸರಿರುವ ಕಂಪನಿ)ಯಿಂದಲೇ ಕೆಲಸಗಾರರರಿಗೆ ಕಿರುಕುಳ ದೌರ್ಜನ್ಯ ನಡೆದು ಆತ್ಮಹತ್ಯೆ ಮಾಡಿಕೊಳ್ಳುವ ಮಟ್ಟಕ್ಕೆ ಹೋದರೆ ಸಣ್ಣಸಣ್ಣ ಕಂಪನಿಗಳಲ್ಲಿ ಯಾವ ರೀತಿ ದೌರ್ಜನ್ಯಗಳು ಬೆಳಕಿಗೆ ಬಾರದೆ ನಡೆಯುತ್ತಿರುತ್ತವೆ ಎಂದು ಊಹಿಸಬಹುದು. ಅಷ್ಟೇ ಅಲ್ಲ ಆಡಳಿತ ಮಂಡಳಿ ಕಿರುಕುಳ ಕೊಟ್ಟಂತಹ ಅಧಿಕಾರಿಗಳನ್ನು ಅಮ್ಮುವಿನ ಪ್ರಕರಣದಲ್ಲಿ ಅಮಾನತು ಕೂಡ ಮಾಡಲಿಲ್ಲ ಎಂದರೆ ಒಂದು ಸಾವಿಗೆ ಅವರು ನೀಡಿದ ಬೆಲೆ ಕೇವಲ ೧.೭೫ ರಿಂದ ೨. ಲಕ್ಷ ಹಣ ಅಷ್ಟೇ ಇದರಲ್ಲೆ ಗೊತ್ತಾಗುತ್ತದೆ.

[illegible]

[illegible]

[illegible]

ಮಾಲೀಕರ ಮನಸ್ಥಿತಿ ಅಮ್ಮುವಿಗೆ ಕೇವಲ ೨೫ವರ್ಷ ಆಕೆ ಏನೂ ಇಲ್ಲ ಅಂದ್ರು ಇನ್ನು ೩೦. ವರ್ಷ ಕೆಲಸ ಮಾಡ್ತ ಇದ್ದಳು. ಈಗಿನ ವೇತನವನ್ನಾಧಸಿ ಹಿಡಿದರೂ ಸಹ ಒಂದು ವರ್ಷಕ್ಕೆ ಮೂವತ್ತು ಸಾವಿರ ರೂ.ಗಳು ಇದು ಮೂವತ್ತು ವರ್ಷಕ್ಕೆ ಒಂಭತ್ತು ಲಕ್ಷವಾಗುತ್ತೆ. ಆದರೆ ಅಮ್ಮುವಿನ ಕುಟುಂಬಕ್ಕೆ ಇವರು ಕೊಟ್ಟಿದ್ದು ಕೇವಲ ಸಣ್ಣ ಮೊತ್ತ. ಆ ಕುಟುಂಬ ಅಷ್ಟರಲೇ ತೃಪ್ತಿಪಟ್ಟುಕೊಳ್ಳಬೇಕಾಗಿದೆ, ಈ ಘಟನೆಯಿಂದ ಎಲ್ಲರೂ ಸಂಘಟಿತನಮಾಡಿಕೊಂಡು ಗ್ರಾಸ ವೈಲೇನ್ಸ ಆಫ್ ಹೂಮನ್ ರೈಟ್ಸ್ ಆಂಡ್ ಲೇಬರ್ ರೈಟ್ಸ್ ಎಂಬ ಸಂಘಟನೆಯನ್ನು ಗಾರ್ಮೆಂಟ್ಸ ಉದ್ದಿಮೆಯಲ್ಲಿ ಸ್ಥಾಪಿಸಲು ಆಗಿನ ಮುಖ್ಯಮಂತ್ರಿಯಾದ ಹೆಚ್.ಡಿ. ಕುಮಾರಸ್ವಾಮಿಯವರಿಗೆ ವರದಿ ನೀಡಿತು. ಆದರು ಅಷ್ಟು ನ್ಯಾಯಯುತ ಪರಿಹಾರ ಸಿಗಲಿಲ್ಲ.

ಅಲ್ಲದೆ ರೇಣುಕ ೧೯ವರ್ಷದ ಮುಗ್ಧಯುವತಿ. ತಂದೆ ತಾಯಿಗೆ ಒಬ್ಬಳೆ ಮಗಳು. ಸಂಸಾರದ ಅನಿವಾರ್ಯತೆಗೆ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದಳು. ಕಾರ್ಖಾನೆಯಲ್ಲಿ ಅವಳು ಸಣ್ಣ ತಪ್ಪು? ಮಾಡಿದಳೆಂದು ಸೂಪರವೈಸರ್ ಹಾಗೂ ಪ್ರೊಡಕ್ಷನ್ ಮ್ಯಾನೇಜರ್ ಇಬ್ಬರೂ ಅವಮಾನಿಸಿದಾಗ ರೇಣುಕಾಳಿಗೆ ಬೇರೆ ದಾರಿಯೇ ಕಾಣದೆ ಮನೆಗೆ ಬಂದು ಅಂದೇ ನೇಣಿಗೆ ಶರಣಾದಳು.

ಅಮ್ಮು ಅಥವಾ ರೇಣುಕಾಳ ಪರಿಸ್ಥಿತಿಯನ್ನು ಗಮನಿಸಿದರೆ ಕಾರ್ಖಾನೆಯಲ್ಲಿ ಮಹಿಳಾ ಕಾರ್ಮಿಕರು ಎಷ್ಟು ಕೆಲಸದ ಒತ್ತಡವನ್ನು ಅನುಭವಿಸುತ್ತಿದ್ದಾರೆ ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ಜೀವನ ನಿರ್ವಹಣೆಗೆ ಈ ಉದ್ಯೋಗವನ್ನೆ ಅವಲಂಬಿಸಿ, ಕುಟುಂಬದ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿರುವ ಈ ಮಹಿಳೆಯರು ಸ್ವಾಭಾವಿಕವಾಗಿಯೇ ಮಾನಸಿಕ ಒತ್ತಡದಲ್ಲಿರುತ್ತಾರೆ. ಅದರೆ ಕಾರ್ಖಾನೆಗಳಲ್ಲಿ. ಅವೈಜ್ಞಾನಿಕ ಪದ್ಧತಿಯ ಪ್ರೋಡಕ್ಷನ್ ಟಾರ್ಗೆಟ್, ಪುರುಷ ಸೂಪರ್‌ವೈಸರಗಳ ಕೆಟ್ಟ ಬೈಗುಳ, ಅಪಮಾನ ಎಲ್ಲವೂ ಅವಳಲ್ಲಿ ಮತ್ತಷ್ಟು ಒತ್ತಡ ತುಂಬುತ್ತದೆ,

ಕಾರ್ಖಾನೆಯಲ್ಲಿ ಸರಿಯಾದ ರೀತಿಯಲ್ಲಿ ಕಾರ್ಮಿಕ ಕಾನೂನುಗಳು ಪಾಲಿಸದಿರುವುದು ಇವೆಲ್ಲಕ್ಕೂ ಕಾರಣವಾಗುತ್ತದೆ, ಹೆಚ್ಚಿನ ಹೊತ್ತು ದುಡಿಸಿಕೊಳ್ಳುವುದು. ಎಲ್ಲರ ಮುಂದೆ ಕಾರ್ಮಿಕರಿಗೆ ಅವಮಾನ ಮಾಡುವುದು, ಇವೆಲ್ಲವೂ ಕಾನೂನು ಬಾಹಿರ. ಆಡಳಿತ ವರ್ಗಕ್ಕೆ ಗೊತ್ತಿದ್ದು ಕೂಡ ಕಾರ್ಮಿಕರ ಬಗ್ಗೆ ಅತಿಯಾದ ನಿರ್ಲಕ್ಷೆಯನ್ನು ತೋರುತ್ತಿರುವುದನ್ನು ಕಾಣಬಹುದಾಗಿದೆ. ಕಾರ್ಖಾನೆಗಳು ತಮ್ಮ ಕಾರ್ಮಿಕರನ್ನು ನಡೆಸಿಕೊಳ್ಳುವ ರೀತಿಯನ್ನು ಬದಲು ಮಾಡಿಕೊಳ್ಳಲೇಬೇಕು. ಈ ರೀತಿಯ ಘಟನೆಗಳು ಕಾರ್ಖಾನೆಯಲ್ಲಿ ಅಥವಾ ಹೊರಗೆ ಎಲ್ಲಿ ಸಂಭವಿಸಿದರೂ ಅದನ್ನು ಸರಿಯಾದ ರೀತಿಯಲ್ಲಿ ಹೊರಗೆ ತರಲು ನಮ್ಮ ವ್ಯವಸ್ಥೆಗಳು ಬಿಡುತ್ತಿಲ್ಲ. ಎಷ್ಟೋ ಇಂತಹ ಘಟನೆಗಳು ತೆರೆಯ ಮರೆಯಲ್ಲಿಯೇ ಉಳಿದುಬಿಡುತ್ತವೆ. ತಮ್ಮ ಕಾರ್ಖಾನೆಯ ಕಾರ್ಮಿಕರೊಬ್ಬರು ಆತ್ಮಹತ್ಯೆಯಂತಹ ಕಠಿಣ ನಿರ್ಧಾರ ತೆಗೆದುಕೊಂಡರೆ ಕಾರ್ಖಾನೆಯ ಮಾಲೀಕರು ಕನಿಷ್ಠ ಮಾನವೀಯ ನೆಲೆಯಲ್ಲಿಯಾದರೂ ಅದರ ಹೊಣೆಯ ಪಾಲನ್ನು ಹೊತ್ತುಕೊಂಡು, ಘಟನೆಗೆ ತಮ್ಮ ಕಾರಣ ಕಂಡುಬಂದರೆ ಅದಕ್ಕೆ ತಕ್ಕ ಪರಿಹಾರ ನೀಡಿ ಮುಂದೆ ಆ ರೀತಿ ನಡೆಯದಂತೆ ನೋಡಿಕೊಳ್ಳಬೇಕಾಗಿದೆ.

೩.೨.೩ ರಾಜ್ಯ ಸರ್ಕಾರ ವಿಮೆ ವಿಧಿ (The employee state insurance Act 1948)

ಈ ಕಾನೂನು ಕಾರ್ಮಿಕರಿಗೆ ಮುಖ್ಯವಾಗಿ ಆರೋಗ್ಯ ವಿಷಯದಲ್ಲಿ ಸಹಾಯವಾಗುವಂತೆ ಮಾಡಿತು ಅಂದರೆ ಅವರು ಕಾಯಿಲೆಗಳಯಿಂದ ಬಳಲಿದಾಗ ಅವರನ್ನು ಕೆಲಸದಿಂದ ತೆಗೆಯುವಂತಿಲ್ಲ. ಹಾಗೂ ಮಹಿಳಾ ಕಾರ್ಮಿಕರಿಗೆ ತಾಯ್ತನದ ರಜೆಗಳನ್ನು ಕೊಡುವುದು ಹಾಗು ಕಾರ್ಮಿಕರು ಕೆಲಸಮಾಡುವಾಗ ಏನಾದರೂ ತೊಂದರೆಗಳಾದರೆ ಅವರಿಗೆ ಸಹಾಯ ಒದಗಿಸುವುದು. ಇತ್ಯಾದಿ ಈ ಕಾನೂನಿನಲ್ಲಿವೆ. ಕಾರ್ಮಿಕರು ರೋಗಗಳಿಗೆ ತುತ್ತಾದಾಗ ಅವರಿಗೆ ವೈಧ್ಯಕೀಯ ರಜೆಗಳನ್ನು ನೀಡುವುದು. ಹಾಗೂ ಅವರು ವೈಧ್ಯಕೀಯ ರಜೆ ಸುಮಾರು ಐವತ್ತು ದಿನಗಳಾವರಿಗೆ ೧/೨ ದಿನದ ಸಂಬಳ ನೀಡುವುದು, ಇತ್ಯಾದಿ ಈ ರೀತಿಯಾಗಿ ಈ ಕಾನೂನು ಅವರ ಆರೋಗ್ಯದ ಬಗ್ಗೆ ಹೆಚ್ಚಿನ ಮಹತ್ವ ನೀಡಿತು ಹಾಗೇನೆ ಇ. ಐ. ಎಸ್. ಐ. ಕಾನೂನು ಬದ್ದವಾಗಿ ಇಂತಹ (ದೊಡ್ಡ) ಉಧ್ಯಮಿದಾರರಿಗೆ ರಾಜ್ಯ ಸರ್ಕಾರಗಳ ಜೊತೆಗೂಡಿ ಆಸ್ಪತ್ರೆಗಳನ್ನು ತೆಗೆಯಲು ಅವಕಾಶ ಒದಗಿಸುತ್ತದೆ. ESI ಪ್ರಕಾರ ಗರ್ಭಣಿಯರಿಗೆ ಹೆರಿಗೆಗೆ ಆರು ವಾರ ಮುಂಚೆ ಮತ್ತು ಹೆರಿಗೆಯಾದ ನಂತರ ಆರು ವಾರಗಳವರೆಗೆ ಮಾತೃತ್ವ ರಜೆಯನ್ನು ಕೊಡಬೇಕು ಮತ್ತು ಈ ಸಮಯದಲ್ಲಿ ಅವಳಿಗೆ ದಿನದ ವೇತನದ ಭಾಗವನ್ನು ಉಧ್ಯಮಿಗಳು ಕೊಡಬೇಕು ESI ಕಾನೂನಿನ ಪ್ರಕಾರ ಪ್ರತಿಯೊಂದು ಕಾರ್ಖಾನೆಗಳಲ್ಲಿ ಪಸ್ಟ್ ಏಡ್ ಬಾಕ್ಸ್‌ನಂತಹ ಆರೋಗ್ಯ ಸಂಬಂಧಪಟ್ಟ (ಚಿಕ್ಕ ಪುಟ್ಟ ಗಾಯಗಳಾದರು) ಬಾಕ್ಸಗಳಿರುವುದು ಸಹಜ ಹಾಗೂ ಇರಬೇಕು. ಕಾರ್ಮಿಕರಿಗೆ ಆಗಾಗ ಮೆಡಿಕಲ್ ಕ್ಲಿನಿಕ್‌ಗೆ ಡಾಕ್ಟರ್ ಬಂದು ಹೋಗಬೇಕು ಹಾಗು ಅವರ ಸಮಸ್ಯೆಗಳ ಬಗ್ಗೆ ಪರಿಶೀಲಿಸಿ ಅವರಿಗೆ ಪರಿಹಾರ ಕೋಡಬೇಕು. ಅದರೆ ಇಂತಹ ಯಾವುದೆ ವ್ಯವಸ್ಥೆ ಯಾವುದೆ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಇಲ್ಲದಿರುವುದು ಕಂಡುಬಂದಿದೆ. ಕೆಲವೊಂದು ಆಸ್ಪತ್ರೆಗಳು ಇದ್ದಾಗ್ಯೂ ಅವು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ.

ಒಳ್ಳೆಯ ಡಾಕ್ಟರ ವ್ಯವಸ್ಥೆ ಇಲ್ಲ, ಸರಿಯಾದ ಉಪಕರಣಗಳಿಲ್ಲ ಅಂದಾಗ ಕಾರ್ಮಿಕರು ಸರಿಯಾದ ಉಪಚಾರ ಇಲ್ಲದೆ ಅನೇಕ ಸಮಸ್ಯೆಗಳಿಂದ ಕಾಯಿಲೆಗಳಿಗೆ ಒಳಗಾಗುತ್ತಿದ್ದಾರೆ. ಇದಕ್ಕೆಲ್ಲಾ ಸರಿಯಾದ ರೀತಿಯಲ್ಲಿ ಕಟ್ಟುನಿಟ್ಟಾದ ಕಾನೂನುಗಳು ಇಲ್ಲದಿರುವುದು.

- "ವಿದ್ಯುತ್ತಿನ ಸಹಾಯದಿಂದ ನಡೆಯುವ ಕಾರ್ಖಾನೆಯಲ್ಲಿ. ಹತ್ತು ಮಂದಿ ಕಾರ್ಮಿಕರಿದ್ದು ವಿದ್ಯುತ್ ಸಹಾಯವಿಲ್ಲದೆ ಇಪ್ಪತ್ತು ಜನ ಕಾರ್ಮಿಕರಿಗಿಂತ ಹೆಚ್ಚು ಇರುವ ಎಲ್ಲಾ ಕಾರ್ಖಾನೆಗಳಿಗೂ ಐ.ಎಸ್.ಐ. ಯೋಜನೆ ಅನ್ವಯಿಸುತ್ತದೆ.

- ಕೆಲಸಕ್ಕೆ ಸೇರಿದ ಹತ್ತು ದಿನಗಳ ಒಳಗೆ ಫಾರಂ ನಂ.೧ರಲ್ಲಿ ಕಾರ್ಮಿಕರು ವಿವರಣೆಗಳನ್ನು ಇ.ಎಸ್.ಐ. ಲೋಕಲ್ ಆಫೀಸ್‌ಗೆ ಸಲ್ಲಿಸುವುದು ಮಾಲೀಕರ ಕರ್ತವ್ಯ.

- ಇದು ಏಳು ಸಾವಿರ ಐದುನೂರು ರೂ.ಗಿಂತ ಕಡಿಮೆ ಸಂಬಳ ಪಡೆಯುವ ಎಲ್ಲಾ ಕಾರ್ಮಿಕರಿಗೂ ಅನ್ವಯಿಸುತ್ತದೆ.

[illegible]

- ದಿನಕ್ಕೆ ಐವತ್ತು ರೂ. ಗಿಂತ ಕಡಿಮೆ ವೇತನ ಪಡೆಯುವ ಕಾರ್ಮಿಕರು ವಂತಿಗೆ ಕೊಡಬೇಕಾಗಿಲ್ಲ. ಮಾಲೀಕರ ಪರಿಸ್ಥಿತಿಯಿಂದ ಇತರೆ ಕಾರ್ಮಿಕರು ಪಡೆದುಕೊಳ್ಳುವ ಸೌಲಭ್ಯವನ್ನು ಇವರೂ ಪಡೆಯಬಹುದು.

- ಪ್ರತಿ ತಿಂಗಳೂ ಕಾರ್ಮಿಕರಿಂದ ರೂ ೧.೭೫.% ಹಾಗು, ಮಾಲೀಕರಿಂದ ರೂ.೪.೭೫%.ಅನ್ನು ಸೇರಿಸಿ ಇ.ಎಸ್.ಐ.ಗೆ ವಂತಿಗೆ ನೀಡಬೇಕು.

ಕುಟುಂಬ ಯೋಜನೆ ಶಸ್ತ್ರ ಚಿಕಿತ್ಸೆಗೆ ಒಳಗಾಗುವ ಮಹಿಳಾ ಕಾರ್ಮಿಕರಿಗೆ ಹದಿನಾಲ್ಕು ದಿನಗಳು. ಪುರುಷ ಕಾರ್ಮಿಕರಿಗೆ ಏಳು ದಿನಗಳ ರಜೆಗೆ ಪೂರ್ಣ ವೇತನ ಸಹಿತ ರಜೆ ದೊರೆಯುತ್ತದೆ. ಕೆಲಸ ಮಾಡುವ ಸಂದರ್ಭದಲ್ಲಿ ಅಪಘಾತವಾಗಿ ದುರ್ಮರಣ ಹೊಂದಿದಲ್ಲಿ. ಕಾರ್ಮಿಕರ ಕುಟುಂಬ ವರ್ಗಕ್ಕೆ (ತಾಯಿ,ಹೆಂಡತಿ, ಮಕ್ಕಳಿಗೆ) ನಿಗದಿತ ಪ್ರಮಾಣದಲ್ಲಿ ಪಿಂಚಣಿ ದೊರೆಯುತ್ತದೆ, ಮಹಿಳೆಯರಿಗೆ ಐ.ಎಸ್.ಐ. ಆಸ್ಪತ್ರೆ ಹತ್ತಿರವಿಲ್ಲದ ಸಂದರ್ಭದಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಹೆರಿಗೆಯಾದಲ್ಲಿ ಎಂಭತ್ನಾಲ್ಕು ದಿನಗಳ ರಜೆಯ ಜೊತೆಗೆ ೧,೦೦,೦೦ ರೂಗಳ ವೈಧ್ಯಕೀಯ ಬೋನಸ್ ಸಹ ದೊರೆಯುತ್ತದೆ. ವಿಮಾ ಸೌಲಭ್ಯವನ್ನು ಹೊಂದಿರುವ ಕಾರ್ಮಿಕ ಕುಟುಂಬಕ್ಕೆ ತುರ್ತು ಸಂದರ್ಭದಲ್ಲಿ ಹತ್ತಿರವಿರುವ ಯಾವುದೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಕೊಡಿಸಬಹುದು (ಇಪ್ಪತ್ತನಾಲ್ಕು ಗಂಟೆಯೊಳಗೆ ಚಿಕಿತ್ಸಾಲಯಕ್ಕೆ ವರದಿಮಾಡಬೇಕು) ಈ ಮೊದಲು ಫೆಬ್ರುವರಿ ೨೦೦೫ ರವರೆಗೂ ಗರ್ಭಿಣಿ ಮಹಿಳೆಯರು ಕಾರ್ಖಾನೆಯಲ್ಲಿ ಒಂಬತ್ತು ತಿಂಗಳು ಕೆಲಸ ಮಾಡಿದ್ದರೆ ಹೆರಿಗೆ ರಜೆ ಹಾಗೂ ಭತ್ಯೆ ಪಡೆಯಲು ಅರ್ಹರಾಗಿದ್ದು ಆದರೆ ಇದು೨೦೦೫ ಫೆಬ್ರವರಿಯಿಂದ ಕೆಲವೊಂದು ಬದಲಾವಣೆಗಳನ್ನು ಮಾಡಲಾಗಿದೆ. ಇದರ ಪ್ರಕಾರ ಪ್ರತಿವರ್ಷ ಏಪ್ರಿಲ್ ೧ ರಿಂದ ಸಪ್ಟೆಂಬರ್ ೩೦ರ ರವರೆಗೂ ವಂತಿಗೆ ನೀಡಿರುವ ಸಮಯ ಎಂದು ಗುರ್ತಿಸಲಾಗುತ್ತದೆ. ಈ ಯೋಜನೆಯೂ ಕಾರ್ಖಾನೆಯ ಮುಚ್ಚುವಿಕೆಯಿಂದ ವಜಾ ಮಾಡುವಿಕೆಯಿಂದ ಅಥವಾ ವೃತ್ತಿಯಿಂದಾದ ಗಾಯವನ್ನು ಹೊರತುಪಡಿಸಿ ಉಂಟಾದ ಶಾಶ್ವತ ಅಸಾಮರ್ಥ್ಯತೆಯ (ಶೇ.೫೦ಕ್ಕೆ ಕಡಿಮೆ ಇಲ್ಲದಂತೆ) ಸಂದರ್ಭದಲ್ಲಿ ಕಾರ್ಮಿಕರಿಗೆ ಆರ್ಥಿಕ ಸುರಕ್ಷತೆ ಒದಗಿಸುತ್ತದೆ."

ಮಾಲೀಕರ ಜವಾಬ್ದಾರಿಗಳು

ವಿಮೆಯ ಸದಸ್ಯರಿಗೆ (ಕಾರ್ಮಿಕರಿಗೆ) ಡಿಕ್ಲರೇಶನ್ ಫಾರಂ ಅನ್ನು ವಿತರಿಸುವುದು. ಪ್ರಥಮ ಚಿಕಿತ್ಸೆ ಹಾಗೂ ಆಸ್ಪತ್ರೆಗೆ ಕಳುಹಿಸುವ ವ್ಯವಸ್ಥೆ ಮಾಡುವುದು, ದಾಖಲೆಗಳನ್ನು ನಿರ್ವಹಿಸುವುದು, ಅಪಘಾತ ಸಾವಿನ ವರದಿ ನೀಡುವುದು ಅನಾರೋಗ್ಯ ಕೈಲಾಗದೆ ಕಾರ್ಮಿಕರಿಗೆ ಕೆಲಸಮಾಡದಂತೆ ಖಚಿತ ಪಡಿಸಿಕೊಳ್ಳುವುದು, ಅಧಿಕಾರಿಗಳು ಬಂದಾಗ ಅವರಿಗೆ ಪರಿಶೀಲಿಸಲು ಸಹಕರಿಸುವುದು ಫಲಾನುಭವಿ ಸರಿಯಾದ ನಗದು ಸೌಲಭ್ಯ ಒದಗಿಸುವುದು. (ಅನಾರೋಗ್ಯ ಹೆರಿಗೆ ಅಂಗವಿಕಲರಿಗೆ)

ಐ.ಎಸ್.ಐ, ಕಾನೂನು ಕಾರ್ಮಿಕರಿಗೆ ಅನೇಕ ಬಗೆಯ ಸವಲತ್ತುಗಳನ್ನು ಒದಗಿಸಿಕೊಟ್ಟರೆ ವಾಸ್ತವದಲ್ಲಿ ಕ್ಷೇತ್ರಧ್ಯಯನ ಸಂದರ್ಭದಲ್ಲಿ ಹಲವು ಫ್ಯಾಕ್ಟ್ರಿಗಳ ಹಲವು ಮಹಿಳಾ ಕಾರ್ಮಿಕರನ್ನು

[illegible]

[illegible]

[illegible]

[illegible]

[illegible]

ಸಂದರ್ಶಿಸಿದಾಗ ನೂರಕ್ಕೆ ತೊಂಬತ್ತೊಂಬತ್ತರಷ್ಟು ಕಾರ್ಮಿಕರಿಗೆ ತಲುಪದ ವ್ಯವಸ್ಥೆಯನ್ನು ಮಾಲೀಕರುಮಾಡುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳಬಹುದು ಕೇವಲ ಈ ಕಾನೂನು ಫ್ಯಾಕ್ಟ್ರಿಯಲ್ಲಿ ನೋಟಿಸ್ ಬೋರ್ಡ್‌ರಲ್ಲಿ ನೇತಾಡುವ ಸಂದರ್ಭವನ್ನು ಕಾಣಬಹುದು ಚಿಕ್ಕಮುಟ್ಟ ಗಾಯಗಳು ಆಗುವುದಿರಲಿ ಗರ್ಭಿಣಿ ಇದ್ದಾಗ್ಯೂ ಪ್ರೊಡಕ್ಷನ್ ಒತ್ತಡ ಹೇರಿ ಅನೇಕ ಸಮಸ್ಯೆಗಳಿಗೆ ಗುರಿಮಾಡುತ್ತಿದ್ದಾರೆ, ಇದರಿಂದ ಅನೇಕ ಕಾಯಿಲೆಗಳಿಗೆ ಒಳಪಟರೂ ಕೂಡ ಇ.ಎಸ್.ಐ. ಯಾವ ಸೌಲಭ್ಯ ಕೂಡ ಅವರಿಗೆ ತಲುಪುತ್ತಿಲ್ಲ ಇತ್ತಿಚಿಗೆ ಹೆಚ್ಚುತ್ತಿರುವ ಟಿ.ಬಿ. ಕಾಯಿಲೆಯಿಂದ ಬಳಲುತ್ತಿರುವವರಿಗೆ ಡಾಕ್ಟರ್ ಹತ್ತಿರ ತೋರಿಸಿಕೊಳ್ಳಲು ಮಾಲೀಕರು ಸಮಯವನ್ನೆ ಕೂಡದಿರುವುದು. ವಾಸ್ತವದಲ್ಲಿ ಕಾರ್ಮಿಕರು ಅನೇಕ ಬಗ್ಗೆಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಕಾರ್ಮಿಕರಿಗೆ ESI ಸೌಲಭ್ಯದ ಮಾಹಿತಿ ಗೊತ್ತಿಲ್ಲದಿರುವುದು ಇಂಗ್ಲೀಷ್ ಭಾಷೆ ಬಾರದಿರುವುದು. ಮಾಲೀಕರು ಈ ಆಸ್ಪತ್ರೆಗೆ ಹಣವನ್ನು ಕಟ್ಟದೆ ಇರುವುದು ಕಾರ್ಡಗಳನ್ನು ಕಾರ್ಮಿಕರಿಗೆ ಕೂಡದೆ ಇರುವುದು ಇತ್ಯಾದಿ ಹಲವು ಬಗೆಯ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾಳೆ.

ಉದಾ: ಕ್ಷೇತ್ರಧ್ಯಯನದ ಸಂದರ್ಭದಲ್ಲಿ ಗರ್ಭಿಣಿ ಮಹಿಳೆ ರಸ್ತೆಯಲ್ಲೆ ಡೆಲವರಿ ಆದರೂಕೂಡ ಯಾವ ಕಾನೂನಾಯಿತು, ಯಾವ ಫ್ಯಾಕ್ಟ್ರಿಮಾಲೀಕನಾಯಿತು ಯಾವುದೆ ರೀತಿ ಸಹಾಯ ಅಥವಾ ರಕ್ಷಣೆ ಕೂಡ ಮಾಡಲಿಲ್ಲ. ಮತ್ತು ಪರಿಹಾರ ಕೂಡ ಕೊಡದೆ ಇರುವ ಉದಾರಣೆಗಳು ಸಿಕ್ಕಿವೆ.

ಇನ್ನು ಬಳ್ಳಾರಿಯನ್ನು ತೆಗೆದುಕೊಂಡಾಗ ಇ.ಎಸ್.ಐ. ಕಾನೂನು ಇದೆ ಅನ್ನುವ ವಿಷಯನೇ ಗೊತ್ತಿಲ್ಲದಿರುವ ಸಂದರ್ಭದಲ್ಲಿ ಅದರ ಸವಲತ್ತುಗಳು ಮಹಿಳೆಯರಿಗೆ ಅನ್ವಯಗೊಳ್ಳದೆ ಇರುವ ಪ್ರಸಂಗವನ್ನು ಕಾಣಬಹುದು.

೩.೨.೪ ಕನಿಷ್ಠ ಕೂಲಿ ಕಾಯ್ದೆ ೧೯೪೮

"ಕಾರ್ಖಾನೆಯನ್ನು ನಡೆಸುವ ಮಾಲೀಕರು ತಮಗೆ ನಷ್ಟವಾಗುತ್ತಿರಲೀ, ಲಾಭವಾಗುತ್ತಿರಲೀ ಕಾರ್ಮಿಕರಿಗೆ ಕನಿಷ್ಠ ವೇತನ ಕೊಟ್ಟು ಕೊಡಬೇಕು ಇಲ್ಲವಾದಲ್ಲಿ ಅವರು ಕಾರ್ಖಾನೆಯನ್ನು ನಡೆಸುವ ಅವಶ್ಯಕತೆಯಿಲ್ಲ" ಎಂದು ಸುಪ್ರಿಂಕೊರ್ಟಿನ ನ್ಯಾಯಾಧೀಶರಾದ ಗಜೇಂದ್ರ ಘಡ್ಕರ್‌ರವರು ೧೯೫೮ರಲ್ಲಿ ಅಹಮದಾಬಾದ್‌ನ ಬಿಜಯ್ ಕಾಟನ್ ಮಿಲ್ಸ್‌ನ ಕೇಸನ್‌ಲ್ಲಿ ಮಹತ್ವದ ತೀರ್ಮನ ನೀಡಿದ್ದಾರೆ ೧೯೯೫ರವರೆಗೂ ಸುಪ್ರಿಂಕೋರ್ಟ್ ಇದೇ ತೀರ್ಮಾನ್ನು ಎತ್ತಿ ಹಿಡಿದಿದೆ.

ಪ್ರತಿಯೊಂದು ಉದ್ಯಮದಲ್ಲೂ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿಪಡಿಸಲು ಒಂದು ಮಂಡಳಿ ರಚಿಸಬೇಕೆಂದು ೧೯೨೦ರಲ್ಲಿ ಕೆ.ಜಿ.ಆರ್ ಚೌದರಿಯವರು ಮಂಡಿಸಿದ ಒಂದು ಠರಾವು, ಭಾರತದಲ್ಲಿ ಕನಿಷ್ಠ ವೇತನ ಜಾರಿಗೆ ಬರುವಲ್ಲಿ ಒಂದು ಹೆಜ್ಜೆಯಾಗಿದೆ. ಇದನ್ನು ಪರಿಗಣಿಸಿ ೧೯೪೩ರಲ್ಲಿ ಕಾರ್ಮಿಕರ ವೇತನ ಹಾಗೂ ಇತರ ಅಗತ್ಯಗಳ ಬಗ್ಗೆ ಸಂಶೋಧನೆ ನಡೆಸಲು ಸಮಿತಿಯ ವರದಿ ಆಧಾರದ ಮೇಲೆ ೧೯೪೬ರಲ್ಲಿ ಸ್ಟಾಂಡರ್ಡ್ ಲೇಬರ್‌ಕಮಿಟಿಯು ಅಸಂಘಟಿತ ಕಾರ್ಮಿಕರಿಗೆ ಕೆಲಸದ ಸಮಯ

ಕನಿಷ್ಠ ವೇತನ ಹಾಗೂ ವೇತನ ಸಹಿತ ರಜೆ ನಿಗದಿಪಡಿಸಲು ಒಂದು ಕಾನೂನು ತರಬೇಕೆಂದು ಶಿಪಾರಸ್ಸು ಮಾಡಿತು.

ಇದನ್ನು ಪರಿಗಣಿಸಿ, ೧೯೪೮ರಲ್ಲಿ ಜಾರಿಗೆ ಬಂದ ಕನಿಷ್ಠ ವೇತನ ಕಾಯಿದೆಯ ಪ್ರಕಾರ ಪ್ರತಿಯೊಂದು ರಾಜ್ಯವು ಸಹ ಕೆಲವೊಂದು ಉದ್ಯಮಗಳನ್ನು ಗುರುತಿಸಿ ಅವುಗಳಿಗೆ ಕನಿಷ್ಠ ವೇತನವನ್ನು ನಿಗದಿಪಡಿಸಬೇಕು. ಕರ್ನಾಟಕ ಸರ್ಕಾರವು ಗಾರ್ಮೆಂಟ್ಸ ಉದ್ಯಮವನ್ನು "ಟೈಲರಿಂಗ್ ಇಂಡಸ್ಟ್ರೀ"ಎಂದು ಗುರುತಿಸಿ ೧೯೭೭ರಿಂದ ಕನಿಷ್ಠ ವೇತನವನ್ನು (ಊಟ ಬಟ್ಟೆ) ಪೂರೈಸಿಕೊಳ್ಳಲು ಎಷ್ಟು ಅವಶ್ಯಕತೆಯಿದೆಯೋ ಅದರ ಆಧಾರದ ಮೇಲೆ ಕನಿಷ್ಠ ವೇತನವು ನಿಗದಿಯಾಗುತ್ತದೆ. ಇದನ್ನು ನಿಗದಿ ಪಡಿಸಲು ರಚನೆಯಾಗಿರುವ ಕನಿಷ್ಠ ವೇತನ ಮಂಡಳಿಯಲ್ಲಿ ಕಾರ್ಮಿಕ ಸಂಘಟನೆಗಳ ನಾಯಕರು ಕಾರ್ಮಿಕ ಇಲಾಖೆಯ ಅಧಿಕಾರಿಗಳು ಭಾಗವಹಿಸುತ್ತಿದೆ.

ಕನಿಷ್ಠ ವೇತನವು ಸಾಮಾನ್ಯವಾಗಿ ಮೂಲ ವೇತನದೊಂದಿಗೆ ಜೀವನ ನಿರ್ವಹಣೆ ವೆಚ್ಚವನ್ನು ಒಳಗೊಂಡಿರುತ್ತದೆ. ಇಲ್ಲಿ ಜೀವನ ವೆಚ್ಚ ಹೆಚ್ಚಾದಂತೆ ಕನಿಷ್ಠ ಕೂಲಿಯೂ ಹೆಚ್ಚಬೇಕೆಂಬ ಅಂಶವನ್ನು ಗಮನಿಸಬಹುದು. ಈ ಕಾಯಿದೆಯನ್ನು ಜಾರಿಗೊಳಿಸುವುದು ಕೇಂದ್ರ ರಾಜ್ಯ ಸರ್ಕಾರಗಳ ಹೊಣೆಯಾಗಿದೆ.

ತ್ರಿಪಕ್ಷೀಯ ಸಮಿತಿಯ ಸರ್ಕಾರಕ್ಕೆ ಕನಿಷ್ಠ ವೇತನದ ಸಲಹೆಯನ್ನು ಮಾಡುತ್ತದೆ. ಕಾಯಿದೆಯಂತೆ ಐದು ವರ್ಷಕ್ಕೊಮ್ಮೆ ವೇತನ ಮರುಪರಿಶೀಲಿಸಲಾಗುವುದು. ಒಂದು ಕುಟುಂಬ ಎಂದರೆ ಗಂಡ, ಹೆಂಡತಿ ಒಂದು ಮಗು ಎಂದು ಇವರಿಗೆ ಬದುಕಲು ಎಷ್ಟು ಆದಾಯಬೇಕು ಎಂದು ಸಮಿತಿಯಿಂದ ಕನಿಷ್ಠ ಕೂಲಿಯನ್ನು ನಿಗದಿಪಡಿಸಲಾಗುತ್ತದೆ. ಅವರ ವೇತನ ನಿಗದಿ ಮಾಡಿ ಜೀವನಮಟ್ಟ ವೃದ್ದಿಸುವುದು ಅನಿವಾರ್ಯವಾಗಿದೆ. ಈ ಕಾಯಿದೆಯ ಕೈಗಾರಿಕೆಯಲ್ಲಿ ಉತ್ಸಾಹದಿಂದ ದುಡಿಯಲು ಮನೆಯಲ್ಲಿ ತೃಪ್ತಿಕರ ಜೀವನ ನಡೆಸಲು ಸಹಕಾರಿಯಾಗಿದೆ.

"ಕರ್ನಾಟಕ ಸರ್ಕಾರವು ಉದ್ಯಮಗಳಲ್ಲಿನ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ನಿಗದಿಪಡಿಸಿರುತ್ತದೆ. ಈ ರೀತಿ ನಿಗದಿಪಡಿಸಿದ ಕನಿಷ್ಠ ವೇತನದ ಪ್ರಕಾರ ಮಾಲೀಕರು ಕಾರ್ಮಿಕರಿಗೆ ಸಂಬಳ ನೀಡಬೇಕಾಗುತ್ತದೆ. ಸಂಬಳ ನೀಡಿದ ಬಗ್ಗೆ ಮಾಲೀಕರು ಕಾರ್ಮಿಕರಿಗೆ ವೇತನದ ಚೀಟಿಯನ್ನು ನೀಡಬೇಕಾಗುತ್ತದೆ. ಮಾಲೀಕರು ಕಾರ್ಮಿಕರಿಗೆ ಕೆಲಸದ ದಿನದಂದೇ ಸಂಬಳ ಪಾವತಿ ಮಾಡಬೇಕಾಗುತ್ತದೆ. ಕೆಲಸ ಕಳೆದುಕೊಂಡ ಮರುದಿನವೇ ಕಾರ್ಮಿಕರ ಬಾಕಿ ಉಳಿದ ಸಂಬಳವನ್ನು ಮಾಲೀಕರು ಅವರಿಗೆ ಪಾವತಿಮಾಡಬೇಕಾಗುತ್ತದೆ. ವಾರದಲ್ಲಿ ಒಂದು ದಿನ ಕಾರ್ಮಿಕರಿಗೆ ವಾರದರಜೆ ನೀಡಬೇಕು. ದಿನದಲ್ಲಿ ಸತತವಾಗಿ ಐದು ತಾಸು ದುಡಿದ ನಂತರ ಕಡೇ ಪಕ್ಷ ಅರ್ಧತಾಸಿನ ವಿರಾಮವನ್ನು ಕಾರ್ಮಿಕರಿಗೆ ನೀಡಬೇಕಾಗುತ್ತದೆ. ದಿನದಲ್ಲಿ ಕಾರ್ಮಿಕರ ವಿರಾಮದ ಅವಧಿ ಸೇರಿ ಕೆಲಸದ ಅವಧಿ ಹತ್ತೂವರೆ ತಾಸಿನವರೆಗೆ ಮಾತ್ರ ನಿಗದಿಪಡಿಸಬೇಕಾಗುತ್ತದೆ. ದಿನದಲ್ಲಿ ಒಂಬತ್ತು ತಾಸಿಗಿಂತ ಹೆಚ್ಚಿಗೆ ದುಡಿದ ಅವಧಿಗೆ ದುಪ್ಪಟ್ಟು ದರದಲ್ಲಿ ಓವರ್‌ಟೈಮ್ ಸಂಬಳ ಕಾರ್ಮಿಕರಿಗೆ ನೀಡಬೇಕಾಗುತ್ತದೆ. ಎಲ್ಲ ಕಾರ್ಮಿಕರ ಹೆಸರನ್ನು ಬರೆದು ಅವರಿಗೆ ಸಂಬಳ ಪಾವತಿ ಮಾಡಿದ ಕುರಿತು ಹಾಜರಿ ಮತ್ತು ಸಂಬಳ ಪಾವತಿ

ಪುಸ್ತಕಗಳನ್ನು ಮಾಲೀಕರು ಇಡಬೇಕಾಗುತ್ತದೆ. ಮೇಲ್ಕಂಡ ಯಾವುದೇ ಹಕ್ಕುಗಳ ಉಲ್ಲಂಘನೆಯಾದಲ್ಲಿ ಕಾರ್ಮಿಕರು ಕಾರ್ಮಿಕ ಇಲಾಖೆಗೆ ದೂರನ್ನು ನೀಡಬಹುದು. ಕನಿಷ್ಠ ವೇತನಕ್ಕಿಂತ ಕಡಿಮೆ ಸಂಬಳ ಕೊಡುತ್ತಿದ್ದರೆ ಅಂಥ ಕಾರ್ಮಿಕರು ಜಿಲ್ಲಾ ಕಾರ್ಮಿಕರ ಅಧಿಕಾರಿಯವರ ಹತ್ತಿರದಾವ ಸಲ್ಲಿಸಬಹುದಾಗಿರುತ್ತದೆ"

ಹೀಗೆ ವಿವಿಧ ಉದ್ಯೋಗಿಗಳಿಗೆ ಕನಿಷ್ಠ ಕೂಲಿಯನ್ನು ನಿಗದಿ ಮಾಡಲು ಈ ಕಾಯಿದೆಯಿಂದ ರಾಜ್ಯ ಸರ್ಕಾರಗಳಿಗೆ ಅಧಿಕಾರದತ್ತವಾಗಿದೆ. ಮಾಲೀಕರು ಕನಿಷ್ಠ ಕೂಲಿಗಿಂತ ಕಡಿಮೆ ಕೊಟ್ಟರು ದಂಡಾರ್ಹ ಅಪರಾಧ ಮಾಡಿದಂತೆ ಮಾಲೀಕನಿಗೆ ಸಜಾ ಅಥವಾ ಜುಲ್ಮಾನೆಯನ್ನು ಅಥವಾ ಎರಡನ್ನು ವಿಧಿಸಬಹದು. ಈ ಬಗ್ಗೆ ಅಂದಿನ ಭಾರತದ ಪ್ರಧಾನ ಮಂತ್ರಿಗಳಾದ ಅಟಲ್‌ಬಿಹಾರಿ ವಾಜಪೇಯಿಯವರು ಕನಿಷ್ಠ ವೇತನ ಮತ್ತು ಸಮಾನ ಕೆಲಸಕ್ಕೆ ಸಮಾನ ವೇತನದ ಬಗ್ಗೆ ಕುರಿತು ನೀಡಿದ ಹೇಳಿಕೆಯ ವರದಿಯನ್ನು ಈ ಕೆಳಗಿನಂತೆ ಉಲ್ಲೇಖಿಸಬಹದು. ಸಂಘಟಿತ ಮತ್ತು ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ದಿನಕ್ಕೆ ಮೂವತ್ತೈದು ರೂಪಾಯಿ ಯಿಂದ ನಲವತ್ತು ರೂಪಾಯಿಗಳಿಗೆ ಏರಿಸಬೇಕೆಂದು ಪ್ರಧಾನಿಯವರು ಎಲ್ಲ ರಾಜ್ಯಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಆದೇಶ ನೀಡಿದ್ದಾರೆ. ರಾಜ್ಯ ಮುಖ್ಯಮಂತ್ರಿಗಳಿಗೆ ಬರೆದ ಪತ್ರದಲ್ಲಿ ವಾಜಪೇಯಿಯವರು ಕಳೆದೆರಡು ವರ್ಷಗಳಲ್ಲಿ ಗ್ರಾಹಕ ಬೆಲೆಯ ಸೂಚ್ಯಂಕ ಏರಿ ಜೀವನ ವೆಚ್ಚ ಏರಿರುವುದರಿಂದ ವೇತನಗಳ ಏರಿಕೆ ಅವಶ್ಯವಾಗಿದೆ ಎಂದು ಹೇಳಿದ್ದಾರೆ. ಕನಿಷ್ಠ ವೇತನ ಶಾಸನದ ಉದ್ದೇಶ ಈಡೇರಿಸಲಿಕ್ಕಾಗಿ ನಿಗದಿತ ಕಾಲಗಳಲ್ಲಿ ತಪಾಸಣೆ ನಡೆಸಿ ಶಾಸನ ಅನುಷ್ಠಾನವಾಗುವಂತೆ ನೋಡಿಕೊಳ್ಳಬೇಕೆಂದು ಪ್ರಧಾನಿಯವರು ಒತ್ತಿ ಹೇಳಿದ್ದಾರೆ.

ಪ್ರಸ್ತುತ ಕರ್ನಾಟಕದಲ್ಲಿ "ಟೈಲರಿಂಗ್ ಇಂಡಸ್ಟ್ರೀಸ್"ಗೆ ತುಟ್ಟಭತ್ಯೆ(ಡಿ.ಎ)ಯೂ ಸೇರಿದಂತೆ ರೂ.೮೪.೭೪ಗಳು ಕನಿಷ್ಠ ವೇತನವಾಗಿ ನಿಗದಿಯಾಗಿದೆ. ಗಾರ್ಮೆಂಟ್ಸ್ ಕಾರ್ಖಾನೆಗೆ ಸೇರುವ ಪ್ರತಿಯೊಬ್ಬ ಕಾರ್ಮಿಕರಿಗೂ ಇದಕ್ಕಿಂತ ಕಡಿಮೆ ವೇತನ ಕೊಡುವ ಹಾಗಿಲ್ಲ, ಸುಪ್ರಿಂಕೋರ್ಟಿನ ಆದೇಶವಿದ್ದರೂ ಹೆಚ್ಚಾನು ಹೆಚ್ಚು ಫ್ಯಾಕ್ಟ್ರಿಗಳಲ್ಲಿ ಕನಿಷ್ಠ ಕೂಲಿಗಿಂತ ಕಡಿಮೆ ಕೊಡುತ್ತಿದ್ದಾರೆ. ಈ ಕಾನೂನನ್ನು ಉಲ್ಲಂಘಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ನ್ಯಾಯಾಲಯಗಳಿಗೆ ಅಧಿಕಾರವಿದೆ. ಕೆಲವೊಂದು ಕಾರ್ಖಾನೆಗಳಲ್ಲಿ ಕನಿಷ್ಠ ವೇತನ ನೀಡುತ್ತಿದ್ದು, ಇನ್ನು ಕೆಲವೊಂದು ಕಡೆ ಅದಕ್ಕಿಂತ ಕಡಿಮೆ ವೇತನ ಕೊಡುತ್ತಿದ್ದಾರೆ. ಆದರೆ ಮಾಲೀಕರು ಕಾರ್ಮಿಕರು ಕೊಡುವ ಸಂಬಳನೆ ಹೆಚ್ಚು ದೊಡ್ಡದು ಎಂಬಂತೆ ಮಾಡುತ್ತಿದ್ದಾರೆ. ಕಾರ್ಮಿಕರಿಗೆ ಕೊಡುವಷ್ಟು ಲಾಭಂಶ ಮಾಲೀಕರಿಗೆ ಬರುತ್ತಿಲ್ವ ಎಂಬುದನ್ನು ಕೆಳುವರಿಲ್ಲದ ಹಾಗಾಗಿದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕೂಲಿಯನ್ನು ಹಂಚುವಾಗ ಮಾಲೀಕರು ಎರಡು ಬಗೆಯ ಮಾದರಿಗಳನ್ನು ಅನುಸರಿಸುತ್ತಾರೆ. ಅದರಲ್ಲಿ ಸಾಧಾರಣ ಸಂಬಳ ಕೊಟ್ಟು ತನ್ನಲ್ಲಿ ಕೆಲಸ ಮಾಡುವಂತಹ ಕೆಲಸಗಾರರಿಗೆ ಸಾಮಾಜಿಕ ಭದ್ರತೆ, ಅನುಕೂಲತೆಗಳನ್ನು ಒದಗಿಸುವುದು. ಇಂತಹ ಕಾರ್ಖಾನೆಗಳು ಗುತ್ತಿಗೆಆಧಾರಿತ ಕೆಲಸಗಳನ್ನು ಒದಗಿಸುತ್ತದೆ.

ಇನ್ನೊಂದು ತರಹದ ಕಾರ್ಖಾನೆಗಳಲ್ಲಿ ಬಲವಂತವಾಗಿ ಇಂತಿಷ್ಟು ಕೂಲಿ ಎಂದು ಫಿಕ್ಸ ಮಾಡಿ ಮತ್ತು ಕಡಿಮೆ ಪ್ರಮಾಣದ ಅನುಕೂಲತೆಗಳು ಹಾಗೂ ಭದ್ರತೆಯನ್ನು ಒದಗಿಸುತ್ತವೆ. ನಂತರ ಕಾರ್ಮಿಕರಿಗೆ ಇಂತಿಷ್ಟು ಸಮಯ ಎಂದು ಗೊತ್ತು ಮಾಡಿ, ಆ ಸಮಯಕ್ಕೆ ಎಷ್ಟು ಕೆಲಸ ಒದಗಿಸಿರುತ್ತಾರೋ, ಅಷ್ಟು ಕೆಲಸವಾಗದಿದ್ದರೆ ಅಂತಹ ಕೆಲಸಗಾರರನ್ನು ಕೆಲಸದಿಂದ ತೆಗೆದುಹಾಕುವಂತಹ ವಿಧಾನ ಅನುಸರಿಸುತ್ತಾರೆ.

ಬಳ್ಳಾರಿಯಂಥ ನಗರದಲ್ಲಿ ಉದ್ಯಮಿಗಳು ಕನಿಷ್ಠ ಕೂಲಿಯನ್ನು ನಿಗದಿಪಡಿಸುವುದೇ ಇಲ್ಲ. ಆದರೆ ಫೀಸ್ ವರ್ಕ್‌ನ ಆಧಾರದ ಮೇಲೆ ಕೆಲಸ ನೀಡುತ್ತಾರೆ. ಆ ಆಧಾರದ ಮೇಲೆ ಸಂಬಳ ನೀಡುತ್ತಾರೆ. ಮಾಲೀಕರು ಹೇಳುವ ಪ್ರಕಾರ ಕಾರ್ಮಿಕರಿಗೆ ಎಲ್ಲೂ ಅನ್ಯಾಯವೇ ಆಗುವುದಿಲ್ಲವೆಂದು ಹೇಳುತ್ತಾರೆ. ಕಾರ್ಮಿಕರು ಎಷ್ಟು ಕೆಲಸ ಮಾಡುತ್ತಾರೋ ಅವರಿಗೆ ಅಷ್ಟೆ ಸಂಬಳ ಕೊಡುತ್ತವೆ ಎಂಬ ಮನೋಭಾವ ಹೊಂದಿರುತ್ತಾರೆ. ಆದರೆ ಬೆಂಗಳೂರು ಕಾರ್ಮಿಕರಿಗಿಂತ ಬಳ್ಳಾರಿ ಕಾರ್ಮಿಕರೇ ಅತಿ ಹೆಚ್ಚು ಶೋಷಣೆಯನ್ನು ಅನುಭವಿಸುವುದನ್ನು ಕಾಣಬಹುದು. ಏಕೆಂದರೆ ಬೆಂಗಳೂರು ಕಾರ್ಮಿಕರಿಗೆ ಸ್ವಲ್ಪ ಮಟ್ಟಿಗಾದರೂ ಕಾನೂನಿನ ತಿಳುವಳಿಕೆ ಇದೆ ಎಂಬುದನ್ನು ಸಂಶೋಧನ ಮೂಲಕ ತಿಳಿದುಕೊಳ್ಳ ಬಹುದು. ಆದರೆ ಬಳ್ಳಾರಿ ಕಾರ್ಮಿಕರಿಗೆ ಯಾವ ಕಾನೂನಿನ ತಿಳುವಳಿಕೆನೂ ಇಲ್ಲ. ಅದರೆ ಸೌಲಭ್ಯಗಳ ಮಾಹಿತಿ ಕೂಡ ಮುಟ್ಟಲ್ಲ.

ಕರ್ನಾಟಕ ಸರ್ಕಾರವು ಕನಿಷ್ಠ ವೇತನವನ್ನು ಹಲವು ಮಾದರಿಯಲ್ಲಿ ವಿವಿಧ ಹಂತಗಳಲ್ಲಿ ಕಾರ್ಮಿಕರು ತಾವು ಕೆಲಸ ಮಾಡುವಂತಹ ಕೆಲಸದ ಆಧಾರದ ಮೇಲೆ ಕೂಲಿಯನ್ನು ನಿಗಧಿಪಡಿಸಿದೆ . ಈ ಕನಿಷ್ಠ ವೇತನ ಕಾಲಕಾಲಕ್ಕೆ ಬದಲಾವಣೆಗೊಳ್ಳುತ್ತದೆ. ಈ ರೀತಿಯಲ್ಲಿ ಸರ್ಕಾರ ವಿವಿದ ರೀತಿಯಲ್ಲಿ ಕನಿಷ್ಠ ಕೂಲಿಯನ್ನು ನಿಗದಿಪಡಿಸುವುದರಲ್ಲಿ ಬೆಂಗಳೂರು ಮತ್ತು ಬಳ್ಳಾರಿ ನಗರವನ್ನು ಪರಿಗಣಿಸಿದಾಗ

ಕೆಲಸದ ಬಗೆ	**ಬೆಂಗಳೂರು**	**ಬಳ್ಳಾರಿ**
ಟೈಲರ್	೯೪.೭೬ ಪೈಸೆ	೯೩.೭೬ ಪೈಸೆ
ಕಟಿಂಗ್ ಮಷಿನ್ ಅಪರೇಟರ್	೯೪.೭೬ ಪೈಸೆ	೯೩.೭೬ ಪೈಸೆ
ಇಸ್ತ್ರೀಮಾಡುವವರು (ಉತ್ತರ ಅನುಭವಿ)	೯೩.೨೬ ಪೈಸೆ	೮೯.೨೬ ಪೈಸೆ

ಈ ಕೋಷ್ಟಕದ ಮಾಹಿತಿ ಪ್ರಕಾರ ಮೂರು ಬಗೆಯ ಕೆಲಸವು ಕಾರ್ಮಿಕರ ಕೆಲಸದ ಬಗ್ಗೆ ಉದಾಹರಣೆಯಾಗಿ ತಿಳಿದುಕೊಳ್ಳಬಹುದು. ಜೊತೆಗೆ ನಗರದಿಂದ ನಗರಕ್ಕೆ ಮತ್ತು ಪುರುಷರು ಹಾಗೂ ಮಹಿಳೆಯರ ಮಧ್ಯ ಇರುವಂತೆ ವೇತನ ತಾರತಮ್ಯವನ್ನು ತಿಳಿದುಕೊಳ್ಳಬಹುದು. ಜೋತೆಗೆ ಸರ್ಕಾರ ನಿಗದಿಪಡಿಸಿರುವ ಕನಿಷ್ಠ ಕೂಲಿಯಲ್ಲಿ ಮಹಿಳೆ ಮತ್ತು ಪುರುಷರ ವೇತನದ ಭಾಗ ಅಥವಾ ಅನುಪಾತವನ್ನು ಕಾಣಬಹುದು.

ಕೋಷ್ಟಕ ಐದರ ಅಂಕಿ-ಅಂಶಗಳ ಪ್ರಕಾರ ಕಾರ್ಮಿಕರು ಕನಿಷ್ಠ ಕೂಲಿಯನ್ನು ಪಡಿಯುವಲ್ಲಿ ಬಳ್ಳಾರಿ ಪ್ರಮುಖ ಸ್ಥಾನವನ್ನು ಪುರುಷರು ವೇತನದಲ್ಲಿ ಪಡೆಯುತ್ತಾರೆ ಇದರಲ್ಲಿ ಕಟ್‌ಪೀಸ್ ಆಧಾರದ

[illegible]

[illegible]

[illegible]

[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]

[illegible]

[illegible]

ಮೇಲೆ ಕೆಲಸ ನೀಡಿದಾಗ ಪುರುಷ ಮಹಿಳೆಯರಿಗಿಂತ ಹೆಚ್ಚಿನ ಪ್ರಯೋಜನ ಪಡೆಯುವುದರಲ್ಲಿ ಹವಣಿನುತ್ತಿರುತ್ತಾನೆ. ಸರ್ಕಾರ ನೀಡಿರುವ ಅನುಪಾತದಲ್ಲಿ ಬಹುತೇಕ ಎರಡು ನಗರಗಳಲ್ಲಿ ಪುರುಷರಿಗೆ ಹೆಚ್ಚಿನ ವೇತನ ಪಡೆಯುತ್ತಾರೆ. ಕೂಲಿ ಸಂಪಾದನೆಯಲ್ಲಿ ಬಳ್ಳಾರಿಗಿಂತ ಬೆಂಗಳೂರಿನಲ್ಲಿ ಪ್ರತಿಕೂಲವಾದ ವಾತವರಣ ಮಹಿಳೆಯರಿಗಿದೆ. ಇದರಿಂದ ತಿಳಿದು ಬರುವುದೆನೆಂದರೆ ಮಹಿಳೆಯರಿಗೆ ಕಟ್‌ಪೀಸ್‌ಗಳಿಂದ ಲಾಭವಿಲ್ಲ. ಇದರಲ್ಲಿ ಲಿಂಗತಾರತಮ್ಯದಿಂದ ಮಹಿಳೆಯರಿಗೆ ತೊಡಕುಕಂಡುಬರುವುದು ಗಂಡು ಎನ್ನುವ ಕಾರಣಕ್ಕೆ ಕಡಿಮೆ ದುಡಿದರೂ ಕೂಡ ಹೆಚ್ಚು ಸಂಬಳವನ್ನು ಪಡೆಯುವುದನ್ನು ಕ್ಷೇತ್ರದ್ಯಯನದ ಮೂಲಕ ತಿಳಿದುಕೊಳ್ಳಬಹುದಾಗಿದೆ.

ಸರ್ಕಾರ ನಿಗದಿಗೊಳಿಸಿದ ಅನುಪಾತದಲ್ಲಿ ಕಾರ್ಮಿಕರಿಗೆ ಕೂಲಿ ನೀಡುವಲ್ಲಿ ಕೆಲವು ಉದಾಹರಣೆಗಳು.

ಕೆಲಸದ ಬಗೆ ಸರ್ಕಾರ ನಿಗದಿಸಪಡಿಸಿರುವ ಅನುಪಾತದಲ್ಲಿ ನಿಗದಿಗೊಳಿಸಿರುವ ಒಂದು ದಿನದ ವೇತನ

	ಬೆಂಗಳೂರು		**ಬಳ್ಳಾರಿ**	
	ಗಂಡು	**ಹೆಣ್ಣು**	**ಗಂಡು**	**ಹೆಣ್ಣು**
ಟೈಲರ್	೧೧೫.೧೯	೧೦೨.೮	೧೩೫.೫೮	೬೫.೬೦
ಕಟಿಂಗ್ ಮಾಸ್ಟರ್	ಎನ್.ಎ.	ಎನ್.ಎ.	೧೭೦.೭೮	ಎನ್.ಎ.
ಐರನರ್	೯೬.೫೦	೮೩.೫೭	೧೩೭.೧೬	ಎನ್.ಎ.

ಕೊಷ್ಠಕದಲ್ಲಿ ತಿಳಿಸುವುದೆನಂದರೆ ಲಿಂಗಾಧಾರಿತವಾದ ಮೇಲೆ ಒಂದು ದಿನದ ಸಂಬಳವನ್ನು ಪಡೆಯುತ್ತಿರುವಂತ ಮತ್ತು ಅವರವರ ಕೆಲಸಕ್ಕೆ ಅನುಗುಣವಾಗಿ ತಿಳಿಯಬಹುದು. ಬಹುಶಃ ೬೮% ಪುರುಷರು ಒಂದು ದಿನದ ಅವದಿಯಲ್ಲಿ ವೇತನ ಪಡೆಯುತ್ತಾರೆ. ೨೨% ಮಹಿಳೆಯರು ಪಡೆಯುತ್ತಾರೆ. ಅತಿ ಹೆಚ್ಚಿನ ಮಹಿಳೆಯರು ತಮ್ಮ ದಿನನಿತ್ಯದ ವೇತನ ಸರಾಸರಿ ೫೦–೭೫ ಇದರಿಂದ ನಮಗೆ ತಿಳಿಯುವುದೆನೆಂದರೆ ಮಹಿಳಾ ಕೂಲಿ ಕಾರ್ಮಿಕರು ತಮಗೆ ಕನಿಷ್ಠ ಕೂಲಿ ಪಡೆಯುವಲ್ಲಿ ವಿಫಲರಾಗುತ್ತಿದ್ದಾರೆ.

ಲಿಂಗ ಆಧರಿಸಿ ದಿನದ ಕನಿಷ್ಠ ಕೂಲಿ ನಿಗದಿಪಡಿಸುವಿಕೆ

ಇದರಿಂದ ತಿಳಿಯುವುದೆನೆಂದರೆ ಯಾವುದೇ ರಂಗದಲ್ಲಿ ಮಹಿಳೆಯರು ಪುರುಷರಿಂತ ಕಡಿಮೆ ವೇತನ ಪಡೆಯುತ್ತಿದ್ದಾರೆ. ಮಾಹಿತಿ ಮೂಲಕ ಅವರ ಮನಸ್ಸು ಮತ್ತು ಕೌಶಲ್ಯ ಇದಕ್ಕೆ ಕಾರಣ ಅಂತ ಹೇಳಬಹುದು. ಅದರಲ್ಲೂ ಮುಖ್ಯವಾಗಿ ಮಹಿಳೆ ವಿವಾಹ, ಹೆರಿಗೆ, ತಾಯ್ತನದ ಜವಾಬ್ದಾರಿಯನ್ನು ಅವಳೆ ನಿವರಿಸುವುದರಿಂದ ಕೆಲಸ ಬಿಡಲು ಇಷ್ಟಪಡುವ ವ್ಯವಸ್ಥೆಯನ್ನು ಸೃಷ್ಟಿಸಿರುತ್ತದೆ. ಇದರಿಂದ ಅವಳಿಗೆ ಸಿಗುವ ಕೂಲಿ ಕೂಡ ಕಡಿಮೆ ಇರುತ್ತದೆ.[೧೨]

[illegible]

[illegible]

[illegible]

[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]

[illegible]

[illegible]

[illegible]

ಸರ್ಕಾರವು ೨೦೦೧ರಲ್ಲಿ ಗಾರ್ಮೆಂಟ್ಸ ಉದ್ಯಮಕ್ಕೆ, ದಿನಕ್ಕೆ ರೂ.೯೨ಗಳನ್ನು ಕನಿಷ್ಠ (ಡಿ.ಎ.ಸೇರಿಸಿ) ವೇತನ ನಿಗದಿಮಾಡಿದ್ದು. ಇಲ್ಲಿಯವರೆಗೂ ಅದನ್ನು ಪರಿಷ್ಕರಿಸಿರಲಿಲ್ಲ ಈಗ ಮಾರ್ಚ ೨೦೦೭ರಲ್ಲಿ ಕನಿಷ್ಠ ವೇತನ ಪರಿಷ್ಕ್ರತಗೋಳಿಸಲು ಸೂಚನಾಪತ್ರ ಹೊರಡಿಸಿದೆ. ಕುಶಲವಲ್ಲದ ಕಾರ್ಮಿಕರಿಗೆ ರೂ.೯೮/– ನಿಗದಿಪಡಿಸಿದೆ. ೨೦೦೪ರ ಮಲ್ಟಿ ಫೈಬರ್ ಅಗ್ರಿಮೆಂಟ್ ಒಪ್ಪಂದವಾದ ಮೇಲೆ ಬೆಂಗಳೂರಿನಲ್ಲಿ ಈ ಉದ್ಯಮ ಬಹುದೊಡ್ಡ ಮಟ್ಟದಲ್ಲಿ ಹರಡುತ್ತಿದೆ. ವರ್ಷಕ್ಕೆ ೩೦೦ಕೋಟಿಗೂ ಹೆಚ್ಚು ವಹಿವಾಟು ನಡೆಸುವ ಹಲವಾರು ಕಂಪನಿಗಳಿದ್ದು, ಉದ್ಯಮವು ಸರಿಸುಮಾರು ಐದು ಲಕ್ಷ ಮಂದಿಗೆ ಉದ್ಯೋಗ ಒದಗಿಸುತ್ತಿದೆ. ಉದ್ಯಮಕ್ಕೆ ಬರುತ್ತಿರುವ ಲಾಭಂಶವೂ ಕೂಡ ಗಣನೀಯ ಪ್ರಮಾಣದಲ್ಲಿ ಹೆಚ್ಚುತ್ತಿದೆ.

ಈ ಉದ್ಯಮದಲ್ಲಿ ದುಡಿಯುತ್ತಿರುವವರು, ಹೆಚ್ಚಿನ ಮಂದಿ ಮಹಿಳೆಯರಾಗಿದ್ದು ಉದ್ಯೋಗಕ್ಕಾಗಿ ಗ್ರಾಮೀಣ ಪ್ರದೇಶದಿಂದಲೇ ಬಂದವರಾಗಿರುತ್ತಾರೆ. ಮಹಿಳೆಯರು ಒಂಟಿಯಾಗಿ ಕುಟುಂಬದ ಜವಾಬ್ದಾರಿಯನ್ನು ಹೊತ್ತಿದ್ದು, ತಮ್ಮ ಮೇಲೆ ಅವಲಂಬಿತರಾದ ಸದಸ್ಯರನ್ನು ನೋಡಿಕೊಳ್ಳುತ್ತಿದ್ದಾರೆ. ಈ ಕಾರ್ಮಿಕರೆಲ್ಲರಿಗೂ ಸರ್ಕಾರದಿಂದ ನಿಗದಿಯಾದ ಕನಿಷ್ಠ ವೇತನವನ್ನೇ ಪಡೆಯುತ್ತಿದ್ದಾರೆ ಅಲ್ಲದೆ ಅದಕ್ಕಿಂತ ಕಡಿಮೆ ಸಂಬಳವನ್ನು ಕೂಡ ಪಡೆಯುತ್ತಿದ್ದಾರೆ. ಹೆಚ್ಚು ಕಾರ್ಮಿಕರು ಎಂಟು ಗಂಟೆ ನಂತರವೂ ಕೆಲಸ ಮಾಡಿ ಹೆಚ್ಚುವರಿ ಭತ್ಯೆಯಿಲ್ಲದೇ ದುಡಿಯುತ್ತಿದ್ದಾರೆ.

೧೯೮೬ರಲ್ಲಿ ಸರ್ಕಾರವು ಗಾರ್ಮೆಂಟ್ಸ ಉದ್ಯಮಕ್ಕೆ ಅಂದಿನ ಜೀವನ ನಿರ್ವಹಣಾ ವೆಚ್ಚದ ಆಧಾರದ ಮೇಲೆ ರೂ. ೧೮/–ಗಳನ್ನು ಕನಿಷ್ಠ ವೇತನವನ್ನಾಗಿ ನಿಗದಿ ಮಾಡಿತ್ತು ಆದರೆ ೨೦೦೭ರ ಮಾರ್ಚನಲ್ಲಿ ನಿಗದಿ ಮಾಡಿರುವ ೯೮/– ರೂಗಳು ೨೦ ವರ್ಷಗಳ ಹಿಂದಿನ ವೆಚ್ಚಕ್ಕೆ ಹೋಲಿಸಿದರೂ ರೂ. ೧೬/– ಮಾತ್ರ ಆಗುತ್ತಿದೆ. ಎಂಬುದನ್ನು ನಾವು ಗಮನಿಸಬೇಕಾಗಿದೆ. ಅಂದರೆ ಕಾರ್ಮಿಕರ ವೇತನದಲ್ಲಿ ಯಾವುದೇ ಹೆಚ್ಚಳವಾಗಿಲ್ಲ ಬದಲಿಗೆ ಇನ್ನು ಕಡಿಮೆಯೇ ಆಗುತ್ತಿದೆ ಇದು ಗಾರ್ಮೆಂಟ್ಸ ಕಾರ್ಮಿಕರಿಗಾಗುತ್ತಿರುವ ಬಹುದೊಡ್ಡ ಅನ್ಯಾಯವಾಗಿದೆ. ಒಬ್ಬ ಮನುಷ್ಯ ತನ್ನ ಒಬ್ಬನ ದುಡಿಮೆಯಿಂದ ಕುಟುಂಬದ ಮೂಲಭೂತ ಅವಶ್ಯಕತೆಗಳಾದ ಆಹಾರ ಬಟ್ಟೆ ಹಾಗೂ ವಸತಿಗಳೊಂದಿಗೆ ಮಕ್ಕಳ ವಿದ್ಯಾಭ್ಯಾಸ, ಆರೋಗ್ಯ ಇವುಗಳೆಲ್ಲವನ್ನು ಪೂರೈಸಿಕೊಳ್ಳಬಹುದಾದಷ್ಟು ವೇತನವನ್ನಾಗಿ ನಿಗದಿ ಮಾಡಬೇಕೆಂದು ನ್ಯಾಯಲಯದ ಆದೇಶಗಳು ಒತ್ತಿಹೇಳುತ್ತಿದ್ದರೂ "ಗಾರ್ಮೆಂಟ್ ಆಂಪ್ ಟೆಕ್ಸ್ಟೈಲ್ ವರ್ಕ್‌ರ್ಸ್ ಯೂನಿಯನ್ ಸುಮಾರು ೨೦೦ ಮಂದಿ ಗಾರ್ಮೆಂಟ್ಸ ಮಹಿಳಾ ಕಾರ್ಮಿಕರನ್ನು ಸಂದರ್ಶಿಸಿದ ವರದಿಯ ಪ್ರಕಾರ ಒಬ್ಬ ಗಾಮೆಂಟ್ಸ್‌ನಲ್ಲಿ ದುಡಿಯುತ್ತಿರುವ ಮಹಿಳೆ ತನ್ನ ಕುಟುಂಬಕ್ಕೆ ತಿಂಗಳಿಗೆ ಕನಿಷ್ಠ ಈ ಕೆಳಗಿನಂತೆ ಖರ್ಚುಮಾಡಬೇಕಾಗುತ್ತದೆ.

ಆಹಾರ ರೂ. ೨೦೯೨, ಬಾಡಿಗೆ–೯೬೫ ೨೫, ವಿದ್ಯಾಭ್ಯಾಸ ೨೯೬ ೭೦, ಆರೋಗ್ಯ ೪೨೭–೫೦ ಇತರೇ ೫೮೨ ೨೩–೩೩೧೬ ೦೫ ಒಬ್ಬ ಮಹಿಳೆ ತನ್ನ ಕುಟುಂಬಕ್ಕೆ ತಿಂಗಳಿಗೆ ಸರಾಸರಿ ೪೩೦೦ ಕನಿಷ್ಠ ಖರ್ಚು ಮಾಡುತ್ತಿದ್ದಾಳೆ" ಕುಟುಂಬದಲ್ಲಿ ಯಾರು ಅಸರೆಯಿಲ್ಲದೆ ಮಹಿಳೆ ಪ್ರತಿ ತಿಂಗಳು ಸಾಲದ ಮೊರೆ ಹೋಗುತ್ತಿದ್ದಾರೆ. ಸರ್ಕಾರ ನಿಗದಿ ಪಡಿಸಿರುವ ರೂ. ೯೮ಗಳ ಕನಿಷ್ಠ ವೇತನವು ಕಾರ್ಮಿಕರ ಅರ್ಧದಷ್ಟು ಅವಶ್ಯಕತೆಗಳನ್ನು ಮಾತ್ರ ಪೂರೈಸುತ್ತಿದೆ. ಉದ್ಯಮವೂ ಇಂದು

[illegible]

[illegible]

[illegible]

[illegible]

ಹೆಚ್ಚಿನ ಮಟ್ಟದಲ್ಲಿ ಬೆಳೆವಣಿಗೆ ಹೊಂದುತ್ತಿದ್ದರು ವೇತನ ಹೆಚ್ಚು ಮಾಡಿರಿ ಎಂದು ಪ್ರಸ್ತಾಪ ಮಾಡಿದಾಗಲೆಲ್ಲ ಮಾಲೀಕರು ಅಷ್ಟು ಕೊಡುವ ಶಕ್ತಿ ಇಲ್ಲ. ಅಷ್ಟು ಲಾಭ ಬರುತ್ತಿಲ್ಲವಂದೇ ಪ್ರತಿಕ್ರಿಯಿಸುತ್ತಾರೆ. ಯೂರೋಪಿನಲ್ಲಿ ಒಂದು ಗಾರ್ಮೆಂಟ್ಸನ ಮಾರಾಟ ಬೆಲೆಗೆ ಹೋಲಿಸಿದರೆ ಕಾರ್ಮಿಕರ ಈಗಿನ ವೇತನ ಶೇಕಡಾ ೩ರಷ್ಟು ಮಾತ್ರ ಆಗುತ್ತದೆ. ಆದ್ದರಿಂದ ಕಾರ್ಮಿಕರ ವೇತನವನ್ನು ಈಗಿರುವುದಕ್ಕಿಂತ ಎರಡು ಪಟ್ಟು ಹೆಚ್ಚಿಸಿದರೂ ಉದ್ಯಮಕ್ಕೆ ಯಾವುದೇ ನಷ್ಟವಿಲ್ಲ ಎಂದು ಕಂಡುಬರುತ್ತದೆ. ಇಂದಿನ ಈ ಬೆಲೆ ಏರಿಕೆ ಬಿಸಿಯ ಜೀವನದಲ್ಲಿ ಗಾರ್ಮೆಂಟ್ಸ್ ಕಾರ್ಮಿಕರು ಕೇವಲ ೯೩/-ರೂ ಗಳಿಗೆ ಕನಿಷ್ಠ ವೇತನ ಆಂದೋಲನವನ್ನು ನಡೆಸಿತು. ಆಂದೋಲನದ ಉದ್ಘಾಟನೆಯಲ್ಲಿ ಅಧ್ಯಕ್ಷ ಅಶಿಮರಾಯ್ ಎಂ., ಸಿ. ನರಸಿಂಹನ್, ಮೈಕಲ್ ಪರ್ನಾಂಡೀಸ್ ಮುಂತಾದರು ಸಭೆಯಲ್ಲಿ ಭಾಗವಹಿಸಿ ಕನಿಷ್ಠ ವೇತನಕ್ಕಾಗಿ ನಾಯಗೊಂಡಹಳ್ಳಿ (ಅರಳಿ ಮರ ಸರ್ಕಲ್) ಹೆಗ್ಗನಹಳ್ಳಿ (ಸರ್ಕಾರಿ ಪ್ರಥಮಿಕ ಶಾಲೆಯ ಆವರಣ) ಕಸ್ತೂರ ಬಾ ನಗರದಲ್ಲಿ ಸರಸ್ವತಿ, ಜಯರಾಮ, ರುಕ್ಮಿಣಿ, ರತ್ನಮ್ಮ, ಯಮುನಾ, ಸರೋಜ, ಲಲಿತಾ, ಇನ್ನಿತರರು ಸೇರಿ ಆಂದೋಲನವನ್ನು ನಡೆಸಿದರು.

ವೇತನ ಹೆಚ್ಚಿಸುವಾಗ ಕಾರ್ಮಿಕರ ಪ್ರತಿಕ್ರಿಯೆಗಳು

ಇವರಿಗೆಲ್ಲ ಇಂತಿಷ್ಟು ಪ್ರಮಾಣ ಪ್ರೊಡಕ್ಷನ್ ಕೇಳಿ, ನಮ್ಮ ಜೀವ ಹಿಂಡುತ್ತಾರೆ, ಇನ್ನು ಎರಡೂ ರೂ ಗಿಂತ ಹೆಚ್ಚು ಕೊಟ್ಟು ನಾವು ಬದುಕುವ ಕನಸನ್ನೇ ಮರೆಯಬೇಕಾಗುತ್ತದೆ ಎಂಬ ಅಭಿಪ್ರಾಯ ಹೇಳುತ್ತಾರೆ. ಹೆಗ್ಗನ ಹಳ್ಳಿಯಲ್ಲಿ-ಇದು ಬಹಳ ಒಳ್ಳೇಯದು. ಹೌದು ನಮಗೆ ೨೫೦೦ ಯಾವುದಕ್ಕೂ ಸಾಲ್ತಿದ್ದಿಲ್ಲ. ನಾವೆಲ್ಲ ನಿಮ್ಮ ಜೋತೆ ಇರ್ತೀವಿ ೨೦೦ ರೂಪಾಯಿನಾ? ಅಷ್ಟೇ ಪ್ಯಾಕ್ಟರಿ ಬಾಗಿಲು ಮುಚ್ಕೊಂಡು ಹೋಗ್ತಾರೆ ಮೈಸೂರು ರಸ್ತೆಯಲ್ಲಿರುವ ಮಹಿಳೆಯರು ಯಾವಾಗಿನಿಂದ ಕೊಡಿಸುತ್ತಾರೆ ಎಂಬ ಪ್ರತಿಕ್ರಿಯೆ ನೀಡಿದರು. ಈಗಾಗಲೇ ಮಾಲೀಕರು ಫ್ಯಾಕ್ಟ್ರಿ ಲಾಸ್‌ನಲ್ಲಿ ನಡಿತಾ ಇದೆ, ನಮ್ಗೆ ದಿನಕ್ಕೆ ೨೦೦ ನಿಜಕ್ಕೂ ಕೊಡ್ತಾರಾ? ಎಂಬ ಅಸಹಾಯಕ ಮನಸ್ಥಿತಿಯನ್ನು ತೋರಿಸಿಕೊಟ್ಟರು.[೧೩]

ಸರ್ಕಾರ ನಿಗದಿಪಡಿಸಿದ ಕನಿಷ್ಠ ವೇತನ ನಿಗದಿಪಡಿಸಿದ್ದು ಇದಕ್ಕಿಂತ ಕಡಿಮೆ ವೇತನ ಕೊಡುವುದು ಕಾನೂನಿನ ವಿರುದ್ಧವಾಗಿದೆ. ಉದಾಹರಣೆಗೆ ಮೇ ೨೦೦೮ ರಿಂದ ಹೆಲ್ಪರ್ ಒಬ್ಬರಿಗೆ ತಿಂಗಳಿಗೆ ರೂ. ೨೬೪೪.೨೦ರೂ (೧೦% ೭೦*೨೬ ದಿನಗಳು) ವೇತನ ಸಿಗಲೇಬೇಕು.

ಏಪ್ರಿಲ್ ೨೦೦೯ರ ವರೆಗೆ ಗಾರ್ಮೆಂಟ್ಸ್ ಉದ್ಯಮದ ಕಾರ್ಮಿಕರು ಈ ಕೆಳಗೆಕೊಟ್ಟಿರುವ ಪಟ್ಟಿಯಂತೆ ವೇತನ ಪಡೆಯುಲು ಅರ್ಹರಾಗಿರುತ್ತಾರೆ.[೧೪]

ಕ್ರಸಂ	ಕೆಲಸದ ಶ್ರೇಣಿ	ಮೂಲ ವೇತನ	ತುಟ್ಟಿ ಭತ್ಯೆ	ಒಟ್ಟು ವೇತನ
೦೧	ಅತಿಕುಶಲ(ಟೈಲರ್ ಗ್ರೇಡ್ ೧)	೭೮.೭೦	೩೦.೦೦	೧೦೮.೭೦
೦೨	ಕುಶಲ(Skilled) ಟೈಲರ್ ಗ್ರೇಡ್ ೨	೭೮.೭೦	೩೦.೦೦	೧೦೭.೭೦

೦೩	ಅರೆ ಕುಶಲ(Semi Skilled)	೭೬.೨೦	೩೦.೦೦	೧೦೬.೨೦
	ಟೈಲರ್ ಗ್ರೇಡ್			
	ಮೆಜರ್‌ಮೆಂಟ್ ಟೇಕರ್	೭೬.೨೦	೩೦.೦೦	೧೦೬.೨೦
	ಐರನರ್	೭೬.೨೦	೩೦.೦೦	೧೦೬.೨೦
	ಬಟನ್ ಮೆಷಿನ್ ಆಪರೇಟರ್	೭೬.೨೦	೩೦.೦೦	೧೦೬.೦೦
	ಓವರ್‌ಲಾಕ್ ಮೆಷಿನ್	೭೬.೨೦	೩೦.೦೦	೧೦೬.೦೦
	ಕಾಜಾ ಮೆಷಿನ್ ಆಪರೇಟರ್	೭೬.೨೦	೩೦.೦೦	೧೦೬.೦೦
೦೪	ಕುಶಲವಲ್ಲದ (Unskilled)			
	ವ್ಯಾಕರ್	೭೧.೭೦	೩೦.೦೦	೧೦೧.೭೦
	ಹೆಲ್ಪರ್	೭೧.೭೦	೩೦.೦೦	೧೦೧.೭೦
	ಟ್ರಿಮ್ಮರ್	೭೧.೭೦	೩೦.೦೦	೧೦೧.೭೦
	ಆಫೀಸ್ ಬಾಯ್	೭೧.೭೦	೩೦.೦೦	೧೦೧.೭೦
	ಲೇ ಹಾಕುವವರು	೭೧.೭೦	೩೦.೦೦	೧೦೧.೭೦
	ಇತರೆ ಯಾವುದೇ ತರಬೇತಿ ಇಲ್ಲದ ಕಾರ್ಮಿಕರು[೧೫]	೭೧.೭೦	೩೦.೦೦	೧೦೧.೭೦

ಈ ಉದ್ಯಮದಲ್ಲಿ ದುಡಿಯುತ್ತಿರುವವರು ಹೆಚ್ಚಿನವರು ಮಹಿಳೆಯರಾಗಿದ್ದು, ಉದ್ಯೋಗಕ್ಕಾಗಿ ಗ್ರಾಮೀಣ ಪ್ರದೇಶದಿಂದ ವಲಸೆ ಬಂದವರಾಗಿದ್ದಾರೆ. ಅವರಲ್ಲಿ ದಲಿತರು ಹಾಗೂ ಅಲ್ಪಸಂಖ್ಯಾತರು ಈ ಮಹಿಳೆಯರಲ್ಲಿ ಬಹುಪಾಲು ಮಂದಿ, ಏಕಾಂಗಿಯಾಗಿ ಕುಟುಂಬದ ಜವಾಬ್ದಾರಿಯನ್ನು ಹೊತ್ತಿದ್ದು ತಮ್ಮ ಮೇಲೆ ಅವಲಂಬಿತರಾದ ಇತರ ಸದಸ್ಯರನ್ನು ನೋಡಿಕೊಳ್ಳುತ್ತಿದ್ದಾರೆ ಈ ಕಾರ್ಮಿಕರೆಲ್ಲರಿಗೂ ಸರ್ಕಾರದಿಂದ ನಿಗದಿಯಾದ ಕನಿಷ್ಠ ವೇತನವೇ ದೊರೆಯುತ್ತಿದ್ದು, ಎಷ್ಟೋ ಕಾರ್ಖಾನೆಗಳು ಅದಕ್ಕಿಂತ ಕಡಿಮೆ ವೇತನವನ್ನು ನೀಡಿದೆ ಜೊತೆಗೆ ಯಾವುದೇ ಹೆಚ್ಚುವರಿ ಭತ್ಯೆ ನೀಡದೆ ೮ ಗಂಟೆಗಳಿಗಿಂತ ಹೆಚ್ಚಾಗಿ ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿವೆ. ಅತ್ಯಂತ ವೇಗವಾಗಿ ಮತ್ತು ಲಾಭದಲ್ಲಿ ಬೆಳೆಯುತ್ತಿರುವ ಈ ಉದ್ಯಮದಲ್ಲಿ ಶೋಷಣೆಗೊಳಗಾಗುತ್ತಿರುವ ಕಾರ್ಮಿಕ ಸಮುದಾಯಕ್ಕೆ ನ್ಯಾಯಯುತವಾದ ವೇತನವನ್ನು ನಿಗದಿಮಾಡುವುದು ಸರ್ಕಾರದ ಆದ್ಯತೆಯಾಗಬೇಕು ಎಂದು ಈ ಮೂಲಕ ಒತ್ತಿ ಹೇಳುತ್ತಿದ್ದವೆ. ಉದ್ದಿಮೆ ನಿಗದಿಪಡಿಸಿದ ಕನಿಷ್ಠ ವೇತನವು ಯಾವುದೇ ರೀತಿಯಲ್ಲಿ ಸಾಲುವುದಿಲ್ಲವೆಂದು ಬೇಡಿಕೆ ಮೂಲಕ ಸ್ಪಷ್ಟಪಡಿಸುತ್ತಿದ್ದಾರೆ. ಅಲ್ಲದೆ ಇದು ೨೦೦೪ರ ಡಿಸೆಂಬರ್‌ನಲ್ಲಿ ಮಲ್ಟಿ ಫೈಬರ್ ಅಗ್ರಿಮೆಂಟ್ (Multi fibre Agreement) ನಂತರ ಉಂಟಾಗಿರುವ ಉದ್ಯಮದ ಬೆಳವಣಿಗೆಯನ್ನು ಸಹ ಇದು ಪರಿಗಣಿಸಿಲ್ಲ.

[illegible]

[illegible]

ಬೇಡಿಕೆ ಇಟ್ಟ ವಿಷಯಗಳು

೧. ಗಾರ್ಮೆಂಟ್ಸ ಉದ್ಯಮದಲ್ಲಿ ದುಡಿಯುವ ಹೆಲ್ಪರ್ ವರ್ಗಕ್ಕೆ ದಿನವೊಂದಕ್ಕೆ ರೂ. ೨೦೦ಗಳು ಶಾಸನಬದ್ಧ ಕನಿಷ್ಠ ವೇತನವಾಗಿ ದೊರೆಯಬೇಕು ಇದು ತಿಂಗಳಿಗೆ (೨೬ ದಿನ ಲೆಕ್ಕದಂತೆ)೫೨೦೦ ರೂಗಳಾಗುತ್ತವೆ.

೨. ಎಲ್ಲಾ ಪ್ರದೇಶಗಳಲ್ಲಿ ನಿರ್ವಹಣಾ ವೆಚ್ಚದಲ್ಲಿ ಯಾವುದೇ ವ್ಯತ್ಯಾಸವಿಲ್ಲದರಿಂದ ಈ ಪ್ರದೇಶಗಳನ್ನು ವಯಗಳನ್ನಾಗಿ ವಿಂಗಡಿಸಿ, ಬೇರೆ ಬೇರೆ ರೀತಿಯಲ್ಲಿ ಕನಿಷ್ಠ ವೇತನವನ್ನು ನಿಗದಿಮಾಡುವುದರಲ್ಲಿ ಅರ್ಥವಿಲ್ಲ ಎನಿಸುತ್ತದೆ. ಆದ್ದರಿಂದ ರಾಜ್ಯದ್ಯಾಂತ ಏಕ ರೀತಿಯ ಕನಿಷ್ಠ ವೇತನವನ್ನು ಜಾರಿಗೊಳಿಸಬೇಕು.

೩. ಗಾರ್ಮೆಂಟ್ಸ್ ಕಾರ್ಮಿಕರಿಗೆ ನ್ಯಾಯಯುತ ವೇತನವನ್ನು ಒದಗಿಸುವ ವಿಷಯವನ್ನು ಪರಿಶಿಲಿಸಲು ಕಾರ್ಮಿಕ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕಾರ್ಮಿಕ ಸಂಘಟನೆ ಹಾಗೂ ಉದ್ಯಮ ಪ್ರತಿನಿದಿಗಳನ್ನು ಒಳಗೊಂಡ ಮತ್ತು ಉದ್ಯಮದ ನೇಮಕಾತಿಗಳನ್ನೊಳಗೊಂಡ ಒಂದು ಉಪಸಮಿತಿಯು ರಚನೆಯಾಗಬೇಕು ಈ ಸಮಿತಿಗೆ ವರದಿಸಲ್ಲಿಸಲು ಗಾರ್ಮೆಂಟ್ಸ್ ಆಂಡ್ ಟೆಕ್ಸ್‌ಟೈಲ್ ವರ್ಕ್‌ರ್ಸ್ ಯೂನಿಯನ್‌ಗೆ ಅವಕಾಶ ಮಾಡಿಕೊಡಬೇಕು ಎಂದು ಒತ್ತಡ ಹೇರಿದರು. ಅಷ್ಟು ದಿನಗಳ ನಂತರ ಗಾರ್ಮೆಂಟ್ಸ್ ಉದ್ಯಮ ಪರಿಷ್ಕರಿಸಿ ಎಂಟು ವರ್ಷಗಳ ನಂತರ ದಿನಕ್ಕೆ ೨೪ರೂ. ಗಳಷ್ಟು ಹೆಚ್ಚಿಸಲಾಗಿದೆ. ನಿಗದಿಯಾಗಿರುವ ಕನಿಷ್ಠ ವೇತನ ೧೨೭ರೂ.[೧೬]

ಒಂದು ಕುಟುಂಬದ ಅತ್ಯಂತ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಕನಿಷ್ಠ ರೂ.೨೦೦ ಆದರೂ ಬೇಕು ಎಂದು ಮುನ್ನಡೆ ಎರಡು ವರ್ಷಗಳಿಂದ ಆಂದೋಲನ ನಡಿಸುತ್ತಾ ಬಂದಿದೆ ಆದರೆ ಎಂಟು ವರ್ಷಗಳ ನಂತರ ಗಾರ್ಮೆಂಟ್ಸ್ ಉದ್ಯಮಕ್ಕೆ ಸರ್ಕಾರ ಪರಿಷ್ಕರಿಸಿರುವ ಕನಿಷ್ಠ ವೇತನ ದಿನಕ್ಕೆ ಕೇವಲ ೧೨೭ರೂ. ಅಷ್ಟೇ ಅಂದರ ತಿಂಗಳಿಗೆ ೩೩೦೭ ರೂ ಆಗುತ್ತದೆ. ಈ ಬೆಂಗಳೂರು ಮಹಾನಗರದಲ್ಲಿ ತಿಂಗಳಿಗೆ ಇಷ್ಟು ವೇತನ ಪಡೆದು ಎಲ್ಲರಂತೆ ಜೀವನ ನಡೆಸಲು ಸಾಧ್ಯವಿಲ್ಲ ಇದು ಸರ್ಕಾರದ ಅಂವಿಗೆ ಬರುತ್ತಿಲ್ಲವೇ? ಬೆಂಗಳೂರಿನ ಗಾರ್ಮೆಂಟ್ಸ್ ಉದ್ಯಮದಲ್ಲಿ ಸುಮಾರು ೫ಲಕ್ಷ ಕಾರ್ಮಿಕರು ದುಡಿಯುತ್ತಿದ್ದಾರೆ ಅಂತರಾಷ್ಟ್ರೀಯ ಬ್ರಾಂಡಗಳಿಗೆ ಉಡುಪು ತಯಾರಿಸುವ ಗೋಕಲದಾಸ್ ಎಕ್ಸ್‌ಮೋಟರ್ ಚೆಕ್ಸ್‌ಪೋರ್ಟ್ಸ್ ಇಂಡಸ್ಕ್ರೀಸ್ ಬಾಂಬೆರೆಯಾನ್ ನಂತಹ ದೊಡ್ಡ ಕಂಪನಿಗಳ ವಾರ್ಷಕ ವಹಿವಾಟು ೧೦೦೦೦ ಕೋಟಿಗಳಷ್ಟು ಇವೆ.ಆದರ ಈ ಉದ್ಯಮ ಪ್ರಾರಂಭವಾಗಿ ೩೫ ವರ್ಷಗಳಾದರೂ ಇಂದಿಗೂ ಸಹ ಇಲ್ಲ ದುಡಿಯಾತ್ತಿರುವ ಕಾರ್ಮಿಕರಿಗೆ ಸರ್ಕಾರ ನಗದಿಮಾಡಿರುವ ಕನಿಷ್ಠ ವೇತನ ಮಾತ್ರ ಇಂದಿಗೂ ದಿನಕ್ಕೆ ೧೨೭ರ ಮೇಲೆರಿಲ್ಲ ಸರ್ಕಾರವು ಶಾಸಕಿ ಸೀಮಾ ವಸೂತಿಯವರ ನೇತೃತ್ವದಲ್ಲಿ ರಚಿಸಿದ ಸದನ ಸಮಿತಿಯ ಗಾರ್ಮೆಂಟ್ಸ್ ಕಾರ್ಖಾನೆಗಳಿಗೆ ಖುದ್ದು ಬೇಟಿ ನೀಡಿ ಇಲ್ಲಿನ ಕಾರ್ಮಿಕರ ವೇತನ ರೂ. ೩೦೦೦ ದಿಂದ ೪೦೦೦ ವರೆಗೂ ಹೆಚ್ಚಾಗಬೇಕು ಹಾಗೂ ಸೀಮಾ ವಧಿಯನ್ನು ಪರಿಗಣಿಸಬೇಕೆಂದು ವರದಿ ನೀಡಿದ ಆದರೆ ಇದನ್ನು ಸರ್ಕಾರ ಗಮನಿಸುತ್ತಿಲ್ಲ.

೩.೨.೫ ಪಿ.ಎಫ್.ಪಿಂಚಣಿ ಯೋಜನೆ

ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗಾಗಿ ಲಭ್ಯವಿರುವ ಸಾಮಾಜಿಕ ಸುರಕ್ಷಗಳಲ್ಲಿ ೧೯೫೨ರಲ್ಲಿ ಜಾರಿಗೆ ಬಂದ "ನೌಕರರ ಭವಿಷ್ಯ ನಿಧಿ" ಯೋಜನೆಯು ಒಂದು ಈ ಯೋಜನೆಯಲ್ಲಿ ಕಾರ್ಮಿಕರಿಗೆ ಅನೇಕ ರೀತಿಯ ಸೌಲಭ್ಯಗಳಿವೆ. ಆದರೆ ಎಲ್ಲರಿಗೂ ತಿಳಿದಿರಲೇಬೇಕಾದ ಹಾಗೂ ಎಲ್ಲರೂ ಪಡೆದುಕೊಳ್ಳಬೇಕಾದ ಸೌಲಭ್ಯವೆಂದರೆ ಪಿಂಚಣಿ ಯೋಜನೆ ಸೌಲಭ್ಯ ಕಾರ್ಮಿಕರು ಕಾರ್ಖಾನೆಯಲ್ಲಿ ಕನಿಷ್ಠ ೧೦ವರ್ಷಗಳ ಕಾಲ ಕೆಲಸಮಾಡಿದ್ದರೆ ಈ ಸೌಲಭ್ಯ ದೊರೆಯುತ್ತದೆ ಕಾರ್ಮಿಕರು ಉದ್ಯೋಗದಲ್ಲಿರುವಾಗಲೇ ಅವರು ಯಾವುದೇ ಕೆಲಸ ಮಾಡಲು ಅಶಕ್ತರೆಂದು ವೈದ್ಯರಿಂದ ರುಜುವಾತಾದಾಗ ಅವರಿಗೆ ಅಶಕ್ತರ ಪಿಂಚಣಿ ಸೌಲಭ್ಯ ದೊರೆಯುತ್ತದೆ. ಕಾರ್ಮಿಕರು ಮೃತಪಟ್ಟಲ್ಲಿ ಗಂಡ/ಹೆಂಡತಿಗೆ ಪಿಂಚಣಿ ದೊರೆಯುತ್ತದೆ. ಮೃತ ಕಾರ್ಮಿಕರಿಗೆ ಮದುವೆಯಾಗದಿದ್ದಲ್ಲ ಅಥವಾ ಅವರ ಕುಟುಂಬದ ಸದಸ್ಯರಾರು ಇಲ್ಲದಿದ್ದಾಗ ಅವರ ನಾಮ ನಿರ್ದೇಶತರಿಗೆ ತಿಂಗಳ ಪಿಂಚಣಿ ನೀಡಿಲಾಗುತ್ತದೆ. ಕಾರ್ಮಿಕರು ಐವತ್ತರಿಂದ ಐವತ್ತೆಂಟು ವರ್ಷಗಳಾದ ಬಳಿಕ ತಮ್ಮ ಮಾಸಿಕ ಪಂಚಣಿ ಹಣದ ೧/೩ ಭಾಗದಷ್ಟು ಹಣವನ್ನು ಒಟ್ಟಾಗೇ ಸಹ ಪಡೆದುಕೊಳ್ಳುಬಹುದು ಪಿಂಚಣಿ ಯೋಜನೆಯು ಕಾರ್ಮಿಕರಿಂದ ಅತ್ಯಂತ ಉಪಯುಕ್ತ ಯೋಜನೆಯಾಗಿದೆ ಈ ಯೋಜನೆಯು ಕಾರ್ಮಿಕರಿಂದ ಯಾವುದೇ ವಂತಿಗೆಯನ್ನು ಪಡೆಯದೆ ಮೂಲಕರ ವಂತಿಗೆಯಾದ ಶೇಕಡಾ ೧೨ರಲ್ಲಿ ಶೇಕಡಾ ೮.೩೩ರಷ್ಟನ್ನು ಪಿಂಚಣಿ ನಿಧಿಗೆ ವರ್ಗಾಯಿಸಲ್ಪಟುತ್ತದೆ ಅಂದರೆ ೧ವರ್ಷಕ್ಕೆ ೧ತಿಂಗಳಿಗೆ ಸಂಬಳದಷ್ಟು ಪಿಂಚಣಿ ನಿಧಿಗೆ ವರ್ಗಾಯಿಸಲ್ಪಟುತ್ತದೆ ಉದಾಹರಣೆ ೧೦ವರ್ಷ ಸೇವೆ ಪೂರೈಸಿದ ಕಾರ್ಮಿಕರ ಪಿಂಚಣಿ ಖಾತೆಗೆ ಅವರ ಹತ್ತು ತಿಂಗಳ ವೇತನದಷ್ಟು ಹಣ ಮಾತ್ರ ಜಮೆಯಾಗಿರುತ್ತದೆ ಉಳಿದಿಲ್ಲಾ ಹಣವನ್ನು ಅವರು ಭವಿಷ್ಯ ನಿಧಿಯ ಮೂಲಕ ವಾಪಸ್ಸು ಪಡೆಯುಬಹುದು ಈ ಹತ್ತು ತಿಂಗಳ ವೇತನದಷ್ಟು ಹಣದ ಮೂಲಕ ಆ ಕಾರ್ಮಿಕರು ಮೇಲೆ ತಿಳಿಸಿದ ಎಲ್ಲಾ ರೀತಿಯ ಸೌಲಭ್ಯವನ್ನು ಪಡೆಯಲು ಅರ್ಹರಾಗುತ್ತಾರೆ ಬೇರೆ ಬೇರೆ ಕಾರ್ಖಾನೆಗಳಲ್ಲಿ ಕೆಲಸ ಬದಲಾಯಸುವ ಸಂಧರ್ಭ ಬಂದಾಗ ಕಾರ್ಮಿಕರು ತಮ್ಮ ಸೇವೆಯನ್ನು ಒಗ್ಗೂಡಿಸಿಕೊಳ್ಳಬಹುದು ಹೇಗೆಂದರೆ ಭವಿಷ್ಯ ನಿಧಿಗೆ ಅರ್ಜಿ ಸಲ್ಲಿಸುವಾಗ ಅರ್ಜಿನಮೊನೆ ೧೦ಸಿ ಯಲ್ಲಿ ಒಂದು ಪ್ರಶ್ನೆ ಹೀಗಿರುತ್ತದೆ. "ತಾವು ಯೋಜನಾ ಪತ್ರವನ್ನು ಹೊಂದಲು ಇಚ್ಚಿಸುವಿರಾ? ಈ ಕಾರ್ಮಿಕರು ಹೌದು ಎಂದು ಉತ್ತರಿಸಿದಾದಲ್ಲಿ ಅವರು ತಾವು ಮಾಡಿದ ಸೇವೆಗೆ ಯೋಜನಾ ಪರವತ್ರವನ್ನು ಹೊಂದುತ್ತಾರೆ. ಇದೇ ರೀತಿ ೧೦ವರ್ಷಗಳು ಮಾರಾಟವಗುವವರೆಗೂ ಕಾರ್ಮಿಕರು ತಮ್ಮ ಸೇವೆಯನ್ನು ಒಟ್ಟುಗೂಡಿಸಿಕೊಳ್ಳಬಹುದಾಗಿದೆ. ಈ ಯೋಜನೆಯು ಕಾರ್ಮಿಕರಿಗೆ ನಿವೃತ್ತ ಜೀವನವು ಯಾವುದೇ ಆರ್ಥಿಕ ತೊಂದರೆಗಳಲ್ಲದೆ ಸುಗಮವಾಗಿ ನಡೆಯಲು ಸಾಹಕಾರಿಯಾಗುತ್ತದೆ.[೧೭]

ಆದರೆ ಮಾಲೀಕರು ಕಾರ್ಮಿಕರನ್ನು ಐದು ವರ್ಷಕ್ಕಿಂತ ಹೆಚ್ಚು ಕೆಲಸ ಮಾಡಲು ಅವಕಾಶ ಕೊಡುವುದಿಲ್ಲ. ಕ್ಷೇತ್ರಾಧ್ಯಯನ ಸಂದರ್ಭದಲ್ಲಿ ಕಾರ್ಮಿಕರು ಹೇಳುವ ಪ್ರಕಾರ ಮಾಲೀಕರ

[illegible]

[illegible]

ಒಳತಂತ್ರಗಾರಿಕೆಯನ್ನು ಸೂಕ್ಷ್ಮತೆಯನ್ನು ಗ್ರಹಿಸಬಹುದು. ಏಕೆಂದರೆ ಮಾಲೀಕರಿಗೆ ಕಾನೂನು ತಿಳುವಳಿಕೆ ಇರುವುದರಿಂದ ಕಾರ್ಮಿಕರನ್ನು ಕೆಲಸದಲ್ಲಿ ಸ್ವಲ್ಪ ವ್ಯತ್ಯಾಸ ಆದರೂ ಕೂಡಾ, ಪ್ರೊಡಕ್ಷನ್ ಅನ್ನು ಸರಿಯಾದ ಸಮಯಕ್ಕೆ ಕೊಡದೇ ಇದ್ದಾಗ, ಅನವಶ್ಯಕ ಕಾರಣ ಹುಡುಕಿ, ಒಂದೊಂದು ಸಾರಿ ಯಾವುದೆ ಕಾರಣ ಕೊಡದೆ ಕೆಲಸದಿಂದ ತೆಗೆದು ಹಾಕುತ್ತಾರೆ. ಮಾಲೀಕರು ಕಾರ್ಮಿಕರನ್ನು ಐದು ವರ್ಷಕ್ಕೊಮ್ಮೆ ಕೆಲಸಕ್ಕೆ ಪುನರ್ ನಿರ್ಮಾಣ ಮಾಡುತ್ತಿರುವುದನ್ನು ಅಧ್ಯಯನದ ಮೂಲಕ ತಿಳಿದುಕೊಳ್ಳಬಹುದಾಗಿದೆ. ಕ್ಷೇತ್ರಾಧ್ಯಯನದ ಸಂದರ್ಭದಲ್ಲಿ ಸಿಕ್ಕಿರುವ ಮಾಹಿತಿ ಪ್ರಕಾರ ನೂರಕ್ಕೆ ತೊಂಬತ್ತರಷ್ಟು ಮಹಿಳಾ ಕಾರ್ಮಿಕರು ಒಂದೆ ಫ್ಯಾಕ್ಟ್ರಿಯಲ್ಲಿ ಎಂಟು ವರ್ಷಕ್ಕಿಂತ ಹೆಚ್ಚು ಕೆಲಸ ಮಾಡಿರುವ ಉದಾಹರಣೆಗಳು ಸಿಕ್ಕಿರುತ್ತದೆ. ಇದರಿಂದ ಮಾಲೀಕರ ಒಳಹುನ್ನಾರದ ಸೂಕ್ಷ್ಮಮತಿ ಗೊತ್ತಾಗುತ್ತದೆ.

೩.೨.೬ ಪ್ರತಿಯೊಬ್ಬ ಕಾರ್ಮಿಕರ ಹಕ್ಕು ಬೋನಸ್ ಪಡೆಯುವುದು

೧೯೧೭ ಮೊದಲನೆ ಮಹಾಯುದ್ದದ ಸಂದರ್ಬದಲ್ಲಿ ಕೆಲವು ಟೆಕ್ಸೆಟೈಲ್ಸ ಮಿಲ್‌ನ ಮಾಲೀಕರು ಕಾರ್ಮಿಕರಿಗೆ ಅವರ ವೇತನದ ಶೇಕಡ ೧೦ ಬಾಗದಷ್ಟು ಯುದ್ದದ ಭತ್ಯಯಾಗಿ ಕೊಡುವುದರಿಂದ ಭಾರತದಲ್ಲಿ ಬೋನಸ್ ಎಂಬ ಪದ್ದತಿ ಪರಿಚಯವಾಯಿತು ೧೯೬೦ ರ ಮಾರ್ಚ ಏಪ್ರಿಲ್‌ನಲ್ಲಿ ನವದೆಹಲಿಯಲ್ಲಿ ನೆಡದ ಸ್ಟ್ಯಾಂಡರ್ಡ ಲೇಬರ್ ಕಮಿಟಿಯ ೧೮ ಅದಿವೇಶನದ ಎರಡು ಹಾಗು ಮೂರನೆ ಸಬೆಯಲ್ಲಿ ಬೋನಸ್ ಬಗ್ಗೆ ಪ್ರಸ್ತಾಪಿಸಲಾಯಿತು ಕಾರ್ಖಾನೆಳಲ್ಲಿ ದುಡಿಯುವ ಕಾರ್ಮಿಕರಿಗೆ ಲಾಭಾಂಶದ ಒಂದು ಮೊತ್ತವನ್ನು ಬೋನಸ್ ರೀತಿ ಕೊಡಬೇಕೆಂದು ಆ ಸಮಯದಲ್ಲಿ ರಚನೆಯಾದ ಸಮಿತಿಯನ್ನು ಭಾರತ ಸರ್ಕಾರಕ್ಕೆ ಶಿಫಾರಸ್ಸುನ್ನು ಮಾಡಿತು.ಕೆಲವು ಬದಲಾವಣೆಗಳೊಂದಿಗೆ ಸರ್ಕಾರವು ಈ ಶಿಫಾರಸ್ಸನ್ನು ಒಪ್ಪಿ ೧೯೬೫ ರ ಮೇ ೨೯ ರಂದು ಅಂಗೀಕರಿಸಿ ಜಾರಿಗೆ ತಂದಿದೆ ಈ ಕಾಯಿದೆಯಂತೆ ಪ್ರತಿಯೊಂದು ಕಾರ್ಖಾನೆಯು ತನ್ನ ಎಲ್ಲಾ ಕಾರ್ಮಿಕರಿಗೂ ಶೇ ೮.೩೩ ರಷ್ಟು ಭೋನಸ್ಸನ್ನು ಕಡ್ಡಾಯವಾಗಿ ಕೊಡಲೆಬೇಕು (ಒಂದು ತಿಂಗಳ ವೆತನದಷ್ಟು) ಈ ಕಾಯ್ದೆ ೨೦ ಕ್ಕಿಂತ ಹೇಚ್ಚು ಕಾರ್ಮಿಕರಿರುವ ಕಾರ್ಖಾನೆಗಳಲ್ಲಿ ಕಡ್ಡಾಯವಾಗಿ ಜಾರಿಗೆ ತರಬೇಕು. ಪ್ರತಿ ವರ್ಷ ಏಪ್ರಿಲ್ ತಿಂಗಳ ಮೊದಲ ದಿನದಿಂದ ಮಾರ್ಚ ತಿಂಗಳ ಕಡೆಯವರೆಗು ಕಾರ್ಮಿಕರು ಪಡೆದ ಒಟ್ಟು ವೇತನದ ಆದಾರದ ಮೇಲೆ ಭೋನಸ್ಸನ್ನು ಲೆಕ್ಕ ಹಾಕಲಾಗುತ್ತದೆ ಏಪ್ರಿಲ್ ಒಂದರಿಂದ ೮ತಿಂಗಳ ಅವಧಿಯೊಳಗಾಗಿ ಆಂದರೆ ನವೆಂಬರ್ ಒಳಗಾಗಿ ದೊರು ನೀಡಬೇಕು ಪ್ರೊಬೆಷನರಿ ದಿನಗೊಲಿ ಹಾಗು ಅರೆಕಾಲಿಕ ಕಾರ್ಮಿಕರು ಸಹ ಭೋನಸ್ಸ ಪಡೆಯಲು ಅರ್ಹರಾಗಿರುತ್ತಾರೆ ಕಾಖಾನೆಯು ತಾತ್ಕಾಲಿಕವಾಗಿ ಮುಚ್ಚಿದ ಅವದಿ ಕಾರ್ಮಿಕರು ಅಪಘಾತದಿಂದ ಪಡೆದ ರಜೆಯು ಅವದಿ ಹಾಗು ಹರಿಗೆ ರಜೆಯ ಅವಧಿಗೆ ವೇತನ ಪಡೆಯದಿದ್ದರು ಭೋನಸ್ಸ ಕಾಯಿದೆಯನ್ನು ಉಲ್ಲಂಘಿಸಿದ ಆಡಳಿತ ವರ್ಗಕ್ಕೆ ಸೆಕ್ಷನ್ ೨೮ ರ ಪ್ರಕಾರ ನ್ಯಾಯಲಯವು ಆರು ತಿಂಗಳ ಕಾಲ ಕಾರಾಗ್ರುಹ ಶಿಕ್ಷೆಯನ್ನು ವಿಧಿಸಬಹುದು ಹೊಸ ಉದ್ಯಮಗಳಿಗೆ ಸೆಕ್ಷನ್ ೧೬ ರ ಪ್ರಕಾರ ಬೋನಸ್ ಕಾಯಿದೆಯಿಂದ ವಿನಾಯಿತಿ ಇದೆ.[೧೮]

[illegible]

[illegible]

[illegible]

ಸಂಶೋದನಾ ಕ್ಷೇತ್ರಕಾರ್ಯದ ಮಾಹಿತಿ ಪ್ರಕಾರ ಬಳ್ಳಾರಿಯಲ್ಲಿ, ವಾಸ್ತವದಲ್ಲಿ ಯಾವುದೆ ಕಾನೂನುಗಳು ಜಾರಿಗೊಳ್ಳದೆ ಇದ್ದರು ಮಾಲೀಕರು ಕಾರ್ಮಿಕರಿಗೆ ದೀಪಾವಳಿ ಸಂದರ್ಭದಲ್ಲಿ ಕೆಲವೊಂದು ಕಾರ್ಖಾನೆಗಳು ಮಾತ್ರ ಮೂರು ನೂರರಿಂದ ಐದು ನೂರು ಒಳಗಡೆ ಮಾತ್ರ ಬೋನಸ್ ದುಡ್ಡನ್ನು ಕೊಡುತ್ತಾರೆ. ಕಾರ್ಮಿಕರು ಆ ಬೋನಸ್ ಹಣವನ್ನು ಪಡೆಯಬೇಕಾದರು ಮಾಲೀಕರಿಗೆ ಸಾಕಷ್ಟು ಒತ್ತಡವನ್ನು ಹಾಕಬೇಕಾಗುತ್ತದೆ. ಅದರಲ್ಲು ದೀಪಾವಳಿ ಸಂದರ್ಭದಲ್ಲಿ ಅತಿ ಹೆಚ್ಚು (ವರ್ಷಪೂರ್ತಿ ಮಾಡುವ ಕೆಲಸಕ್ಕಿಂತ) ಕೆಲಸ ಮಾಡಿಸಿಕೊಳ್ಳುತ್ತಾರೆ. ಮಾಲೀಕರು ಉತ್ಪಾದನೆಯನ್ನು ಕೊಡಲೇಬೇಕು ಎಂಬ ಒತ್ತಡವನ್ನು ಹೇರುತ್ತಾರೆ. ಪ್ರತಿದಿನ ಕೆಲಸ ಮಾಡುವುದಕ್ಕಿಂತ ಹೆಚ್ಚು ಕೆಲಸ ಮಾಡಿದರು ಕೊಡುವ ಕೂಲಿ ಮತ್ತು ಬೋನಸ್ ಕಡಿಮೆನೆ.

ಇನ್ನು ಬೆಂಗಳೂರು ಪ್ಯಾಕ್ಟ್ರಿಯ ಮಹಿಳಾ ಕಾರ್ಮಿಕರನ್ನು ಅದ್ಯಯನಕ್ಕೆ ಒಳಪಡಿಸಿದಾಗ ಬಂಡವಾಳಶಾಹಿ ವ್ಯವಸ್ಥೆಯ ಅತಿ ಸೂಕ್ಷ್ಮತೆಯ ಚಾಣಕ್ಷತೆಯಿಂದ ಮಹಿಳಾ ಕಾರ್ಮಿಕರಿಗೆ ಸೌಲಭ್ಯಗಳಿಂದ ವಂಚಿತಗೊಳ್ಳುವ ಹಾಗೆ ಮಾಡುತ್ತದೆ. ಅತಿ ಸುಲಭವಾಗಿ ಸರ್ಕಾರದಿಂದ ಬಂದಿರುವಂತಹ ಕಾನೂನು ಸೌಲಭ್ಯಗಳನ್ನು ಪಡೆಯದೆ ಹಾಗೆ ಮಾಡುತ್ತದೆ. ಎಕೆಂದರೆ ಇವತ್ತಿನ ದಿನದಲ್ಲಿ ಹಣ ಅಧಿಕಾರ ಎಷ್ಟರ ಮಟ್ಟಿಗೆ ವಾಸ್ತವ ರೂಪದಲ್ಲಿ ಕಾರ್ಯದ ಪರಿಣಾಮಗಳು ಹೇಗೆ ಪ್ರಭಾವಗೊಳ್ಳುತ್ತವೆ ಎಂಬುದಕ್ಕೆ ಗಾರ್ಮೆಂಟ್ಸ ಮಹಿಳಾ ಕಾರ್ಮಿಕರ ಸಾಕ್ಷಿಯಾಗಿ ಸಿಗುತ್ತಾರೆ. ಮಾಲೀಕರು ಯಾವುದೇ ಕಾರಣ ಹೇಳಿದರು ವಿರೋದ ಮಾಡದೆ ಸಿಕ್ಕಿರುವ ಕೆಲಸವೆ ದೊಡ್ಡದು ಎಂಬಂತೆ ಯಾವುದೆ ಹೋರಾಟ ಮಾಡದೆ ಕೆಲಸ ನಿರ್ವಹಿಸುತ್ತಾರೆ. ಬೋನಸ್ ಕಾಯ್ದೆ ಕಾನೂನು ಪ್ರಕಾರ ಇದ್ದಾಗ್ಯು ವಾಸ್ತವದಲ್ಲಿ ಮಾಲೀಕರು ಯಾವುದೆ ಲಾಭ ಬಂದಿಲ್ಲ, ಬಂದಾಗ್ಯು ಕೂಡ ಕೆಲವೊಂದು ಪ್ಯಾಕ್ಟ್ರಿಗಳಲ್ಲಿ ಸ್ವಲ್ಪ ಮಟ್ಟಿನ ಹಣವನ್ನು ಬಟ್ಟೆಯನ್ನೂ ಕೊಡುವ ಸಂದರ್ಭವನ್ನು ಪ್ರಸ್ತುತ ಅದ್ಯಯನದಲ್ಲಿ ಕಾಣಬಹುದು.

ಯಾವುದೇ ನಿಯಮಗಳನ್ನು ಪಾಲಿಸದೆ ಇದ್ದಂತಹ ಕೆಲವೊಂದು ಉದ್ದಮಿಗಳು ಸಿಕ್ಕಿಬಿಟ್ಟರೆ ಅವರು ಸರಳವಾಗಿ ಅಲ್ಪಸ್ವಲ್ಪ ದಂಡಕಟ್ಟಿ ಅದರಿಂದ ಪಾರಾಗಿ ಮತ್ತೆ ಅದೇ ರೀತಿ ಮುಂದುವರೆಯುತ್ತಾರೆ ಇದರಿಂದ ಅವರಿಗೆ ಕಾನೂನುನಿಂದ ತಪ್ಪಿಸಿಕೊಳ್ಳುವ (loop hole) ಅವಕಾಶ ಸಿಗುತ್ತದೆ. ತಾವು ದಿವಾಳಿಯಾದವರೆಂದು ಘೋಷಿಸಿಕೊಳ್ಳುವುದರ ಮೂಲಕ ಕೂಡ ಕೆಲವು ಉದ್ಯಮಗಳು ಕಾರ್ಮಿಕರಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಅಲ್ಲಿರುವ ಕೆಲವು ಕಾರ್ಮಿಕರ ಅಭಿಪ್ರಾಯದಂತೆ ಕಾರ್ಮಿಕರಿಗೆ ಸರಿಯಾಗಿ ನೀರು ಕುಡಿಯಲು ಕೂಡ ಈ ಉದ್ಯಮಿಗಳು ಬಿಡುವುದಿಲ್ಲ, ಎಕೆಂದರೆ ಅವರು ಬಹಳ ನೀರು ಕುಡಿದರೆ ಆಗಾಗ ಮೂತ್ರ ವಿಸರ್ಜನೆ ಹೋಗುವುದರಿಂದ ಸಮಯ ವ್ಯರ್ತವಾಗುತ್ತದೆ ಎನ್ನುವಷ್ಟರ ಮಟ್ಟಿಗೆ ಉದ್ಯಮಿಗಳಾಗಲು ಕಾರ್ಮಿಕರಿಂದ ಕೆಲಸ ಮಾಡಿಸಿಕೊಳ್ಳುತ್ತಾರೆ. ಉದ್ಯಮಿಗಳು ಕಾರ್ಖಾನೆಗಳಲ್ಲಿ ಮೂತ್ರಾಲಯಗಳನ್ನು ಕೂಡ ಕಲ್ಪಿಸಿರುವುದಿಲ್ಲ ಈ ರೀತಿ ಹಲವಾರು ಸಮಸ್ಯೆಗಳನ್ನು ಕಾರ್ಮಿಕರು ಅನುಭವಿಸುತ್ತಿದ್ದಾರೆ. ಹಾಗೆ ಹಲವಾರು ಕಾರ್ಮಿಕರು ಉದ್ಯಮಿಗಳ ವಿರುದ್ಧ ಕೋರ್ಟಿಗೆ ಹೋದರು ಕೂಡಾ ಯಾವುದೇ ಪ್ರತಿಫಲ ಸಿಕ್ಕುವುದಿಲ್ಲ. ಉದಾ: philips indias labour court ಈ ಪ್ರಕರಣದಲ್ಲಿ ಹೆಚ್ಚಿನ ಕೆಲಸ ಮಾಡುವ over time ಮಾಡುವ ಕಾರ್ಮಿಕರಿಗೆ ಹೆಚ್ಚಿನ ಕೂಲಿ ಸಂಬಳ ನೀಡಬೇಕೆಂದಿದೆ.

ಆದರೆ ಇಂಥ ಅಳವಡಿಕೆ ಎಲ್ಲಿಯೂ ಇಲ್ಲ. ಇದಕ್ಕೆ ಕಾರಣ ಬಿಗಿಯಾದ ಕಾನೂನುಗಳು ಇಲ್ಲದಿರುವುದು. ಹೀಗಾಗಿ ಸುಪ್ರಿಂಕೋರ್ಟಿನ ಆದೇಶಗಳು ಕೂಡ ಸರಿಯಾಗಿ ಬಳಕೆಯಾಗುತ್ತಿಲ್ಲ.

ಇಂತಹ ಮುಖ್ಯ ಸಮಸ್ಯೆಗಳಿಗೆ ಮುಖ್ಯ ಕಾರಣ ಈ ಕಾರ್ಮಿಕರಲ್ಲಿ ಅಜ್ಞಾನವಿರುವುದು ಮತ್ತು ತಮಗೆ ಯಾವ ರೀತಿಯ ಮೂಲಭೂತ ಹಕ್ಕುಗಳಿವೆ ಎಂಬುದರ ಬಗ್ಗೆ ತಿಳುವಳಿಕೆ ಇಲ್ಲದಿರುವುದು. ಒಂದು ವೇಳೆ ತಿಳುವಳಿಕೆ ಇದ್ದಾಗ್ಯೂ ಕೂಡ ಬಂಡವಾಳಶಾಹಿಗಳು ಸರ್ಕಾರವನ್ನು ಕೊಂಡುಕೊಳ್ಳುವ ಅಧಿಕಾರವನ್ನು ಹೊಂದಿರುವಾಗ ಕಾರ್ಮಿಕರು ಎಷ್ಟೇ ಕಾನೂನುಗಳ ತಿಳುವಳಿಕೆ ಇದ್ದಾಗ್ಯೂ ಕೂಡಾ ಅದರ ಸವಲತ್ತುಗಳನ್ನು ಪಡೆಯದೆ ಹಾಗೆ ವ್ಯವಸ್ಥೆಯನ್ನು ಸೃಷ್ಟಿಸುತ್ತದೆ.

೩.೨.೭ ಹೆರಿಗೆ ಭತ್ಯೆ ಕಾಯ್ದೆ ೧೯೬೧ (The maternilty Benefit Act.1981)

"ಹೆರಿಗೆ ಭತ್ಯಕಾಯ್ದೆಯು ಮಹಿಳಾ ಕಾರ್ಮಿಕರ ಹಿತ ದೃಷ್ಠಿಯಿಂದ ಹಲವಾರು ಕಾನೂನುಗಳು ಜಾರಿಗೆ ಬಂದಿವೆ. ಆದರೂ ವಾಸ್ತವದಲ್ಲಿ ಮಾತ್ರ ಪ್ರತಿಯೊಬ್ಬ ಗಾರ್ಮೆಂಟ್ಸ್ ಮಹಿಳೆಯರಿಗೆ ಮುಟ್ಟದೆ ಇರುವುದನ್ನು ಕ್ಷೇತ್ರಧ್ಯಯನದ ಮೂಲಕ ತಿಳಿದುಕೊಳ್ಳಬಹುದಾಗಿದೆ.

- ಈ ಕಾಯ್ದೆ ಹತ್ತು ಮತ್ತು ಹತ್ತಕ್ಕಿಂತ ಹೆಚ್ಚು ಕಾರ್ಮಿಕರಿರುವ ಕಾರ್ಖಾನೆಗಳಿಗೆ ಅನ್ವಯಸುತ್ತದೆ. ಇದರಲ್ಲಿ ಮಹಿಳಾ ಕಾರ್ಮಿಕರು ಹನ್ನೆರಡು ತಿಂಗಳ ಅವಧಿಯಲ್ಲಿ ಕಡೇ ಪಕ್ಷ ೮೦ ದಿನಗಳಾದರೂ ಕೆಲಸ ಮಾಡಿದಲ್ಲಿ ಮಾತ್ರ. ಅಕೆಗೆ ಹೆರಿಗೆ ಭತ್ಯ ಸೌಲಭ್ಯಸಿಗುತ್ತದೆ. ಎಂಬತ್ತನಾಲ್ಕು ದಿನಗಳವರೆಗೆ ಹೆರಿಗೆ ಭತ್ಯೆಯನ್ನು ರಜೆ ಸಮೇತ ಪಡೆಯುವುದಕ್ಕೆ ಸೌಲಭ್ಯವಿರುತ್ತದೆ. ಮಾಲೀಕರು ಮಹಿಳಾ ಕಾರ್ಮಿಕರಿಗೆ ಹೆರಿಗೆ ಸಲುವಾಗಿ ವೈದ್ಯಕೀಯ ನೆರವನ್ನು ಮುಕ್ತವಾಗಿ ನೀಡದಿದ್ದಲ್ಲಿ ಅಂತಹ ಮಹಿಳಾ ಕಾರ್ಮಿಕರಿಗೆ ೨೫೦ರೂಪಾಯಿ ಮೆಡಿಕಲ್ ಬೋನಸ್‌ನ್ನು ಅಲ್ಲದೆ ಹೆರಿಗೆ ಭತ್ಯೆ ಪಾವತಿ ಮಾಡಬೇಕಾಗುತ್ತದೆ. ಹೆರಿಗೆಯಾಗಿದ್ದಕ್ಕೆ ಅಥವಾ ಗರ್ಭಪಾತವಾದಲ್ಲಿ ಹೆರಿಗೆ ಭತ್ಯೆ ಪಡೆಯಲು ವೈದ್ಯಕೀಯ ಪ್ರಮಾಣ ಪತ್ರವನ್ನು ಮಾಲೀಕರಿಗೆ ನೀಡಬೇಕಾಗುತ್ತದೆ. ಹುಟ್ಟಿದ ಮಗು ಹದಿನೈದು ತಿಂಗಳ ವಯಸ್ಸು ದಾಟುವ ತನಕ ಮಹಿಳಾ ಕಾರ್ಮಿಕಗಳಿಗೆ ಆ ಮಗುವಿಗೆ ಹಾಲು ಉಣಿಸಲು ದಿನದಲ್ಲಿ ೧೫.ನಿಮಿಷಗಳ ಅವದಿಯ ಎರಡು ಬಾರಿ ವಿರಾಮವನ್ನು ನೀಡಬೇಕಾಗುತ್ತದೆ." ಹೆರಿಗೆ ಅಥವಾ ಗರ್ಭಪಾತ ಆದ ದಿನದಿಂದ ಆರು ವಾರಗಳ ಕಾಲದಲ್ಲಿ ಯಾವುದೇ ಹೆಂಗಸನ್ನು ಯಾವುದೆ ಮಾಲೀಕರನು ಫ್ಯಾಕ್ಟ್ರಿಗೆ ನೇಮಕಮಾಡಿಕೊಳ್ಳಬಾರದು. ಇದು ಎಲ್ಲಾ ಆಡಳಿತ ವರ್ಗಕ್ಕೆ ಮೀಸಲಾಗಿರುತ್ತದೆ. ಈ ಎರಡು ಆದೇಶಗಳ ಉದ್ದೇಶವೂ ಹೆರಿಗೆ ಅಥವಾ ಗರ್ಭಪಾತವಾದ ಮಹಿಳೆಯರಿಗೆ ವಿಶ್ರಾಂತಿ ಒದಗಿಸಿ ಅವಳ ದೇಹಸ್ಥಿತಿ ಮಾಮೂಲು ಆರೋಗ್ಯ ಸ್ಥತಿಗೆ ಹಿಂತಿರುಗಲು ಅವಕಾಶ ಒದಗಿಸುವುದೇ ಆಗಿರುತ್ತದೆ. ಅವಳ ಆರೋಗ್ಯ ಸ್ಥಿತಿ ಉತ್ತಮ ಸ್ಥಿತಿಗೆ ಬರಲು ಆರು ವಾರಗಳು ಬೇಕಾಗುತ್ತದೆ. ಎಂಬ ಪೂರ್ವಭಾವನೆ ಇಲ್ಲಿದೆ. ಅದಕ್ಕಾಗಿ ಆ ಕಾಲದಲ್ಲಿ ಆಕೆ ಕೆಲಸ ಮಾಡದಂತೆ ನಿಷೇಧವನ್ನು ಮಾಲೀಕರ ಮೇಲೆ ಹೇರಲಾಗುತ್ತದೆ.

[illegible]

ಒಂದು ವೇಳೆ ಗೊತ್ತಿದ್ದರೂ ಗರ್ಭಪಾತ ಅಥವಾ ಹೆರಿಗೆ ಆದ ಮಹಿಳೆಯನ್ನು ನೇಮಕಮಾಡಿದ್ದರೆ ಅವರಿಗೆ ಕಾನೂನಿನ ಪ್ರಕಾರ ಕ್ರಮತೆಗೆದುಕೊಳ್ಳಬಹುದು. ಮಾಲೀಕರಿಗೆ ಕಾಯ್ದೆಯ ಇಪ್ಪತ್ತೊಂದನೆಯ ವಿಧಿಯ ಮೇರೆಗೆ ಶಿಕ್ಷೆಗೆ ಒಳಗಾಗಬೇಕಾಗುತ್ತದೆ. ಮೂರು ತಿಂಗಳವರೆಗಿನ ಸೆರೆವಾಸ ಅಥವಾ ಐನೂರು ರೂಪಾಯಿಗಳವರೆಗಿನ ಜುಲ್ಮಾನೆ ಮತ್ತು ಎರಡುನೂರು ವಿಧಿಸಿ ದಂಡಿಸಬಹುದು.

"ಯಾವುದೆ ಕಠಿಣಾಂತರ ಕೆಲಸವನ್ನು ಅಥವಾ ಬಹಳಕಾಲ ನಿಂತುಕೊಂಡೇ ಮಾಡವಂಥ ಕೆಲಸವನ್ನು ಅಥವಾ ಗರ್ಭವಸ್ಥಿತಿಗೆ ಯಾವುದೆ ತೆರನಾದ ಅಡ್ಡಿಬರಬಹುದಾದ ಕೆಲಸವನ್ನು ಅಥವಾ ಭ್ರೂಣದ ಸಾಮಾನ್ಯ ಬೆಳವಣಿಗೆಗೆ ಅಡ್ಡಿಬರುವಂಥ ಕೆಲಸವನ್ನು ಅಥವಾ ಗರ್ಭಪಾತ ಉಂಟುಮಾಡಬಹುದಾದ ಕೆಲಸವನ್ನು ಅಥವಾ ಅವಳ ಆರೋಗ್ಯಕ್ಕೆ ವಿರೋಧಿ ಉಂಟುಮಾಡುವಂತ ಕೆಲಸವನ್ನು. ಯಾವ ಗರ್ಭಿಣಿ ಹೆಂಗಸು ಆ ಬಗ್ಗೆ ಕೆಳಿಕೊಂಡಲ್ಲಿ ನೌಕರಿದಾತ ಕೇಳಕೂಡದು. ಗರ್ಭಾವಸ್ಥೆಯಿಂದಾಗಿ. ಅಥವಾ ಹೆರಿಗೆಯಿಂದಾಗಿ ಅಥವಾ ಅಕಾಲಿಕ ಶಿಶು ಜನನದಿಂದ ಅಥವಾ ಗರ್ಭಪಾತ ಆಗಿದ್ದರಿಂದಾಗಿ ಒಬ್ಬ ಹೆಂಗಸಿಗೆ ಯಾವುದೆ ಕಾಯಿಲೆ ಉಂಟಾಗಿದ್ದಲ್ಲಿ. ಆ ಬಗ್ಗೆ ಗೊತ್ತುಪಡಿಸಿದಂತ ಪುರಾವೆಯನ್ನು ಆಕೆ ಹಾಜರುಪತದಲ್ಲಿ ವಿಧಿ ೬ ರ ಮೇರೆಗೆ ಕೋಡುವ ಗೈರು ಹಾಜರಿ ಕಾಲ ಅಲ್ಲದೆ ಅ ಒಂದು ತಿಂಗಳವರೆಗಿನ ಗರಿಷ್ಠ ಮಿತಿಯೋಳಗೆ ವೇತನಸಹಿತ ಅಧಿಕ ರಜೆಯನ್ನು ಪ್ರಸೂತಿ ಅನುಕೂಲವನ್ನು ಧರದಲ್ಲಿ ಪಡೆಯಲು ಆಕೆ ಅರ್ಹಳಾಗುತ್ತಾಳೆ. ಯಾವೊಬ್ಬ ಹೆಂಗಸು ಪ್ರಸೂತಿ ಅನುಕೂಲವನ್ನು ಅಥವಾ ಈ ಕಾಯ್ದೆ ಮೇರೆಗೆ ಪಡೆಯಲು ಅರ್ಹಳಾದ ಯಾವುದೆ ಇತರ ಮೊಬಲಗಳ್ಳನ್ನು ಪಡೆಯಬೇಕಾಗಿದ್ದು ಅದನ್ನು ಮಾಲೀಕರು ಅನುಚಿತವಾಗಿ ತಡೆಹಿಡಿದ್ದಿರೆ ಆಕೆ ಆ ಬಗ್ಗೆ ಪರಿಶೀಲಕನಿಗೆ ದೂರು ಕೊಡಬಹುದು. ಹಾಗೆ ವಿಧಿ ೭ರ ಮೇರೆಗೆ ಪಾವತಿಯನ್ನು ಯಾಚಿಸುವ ಯಾವುದೆ ವ್ಯಕ್ತಿಯೂ ಸಹ ಹಣ ಪಾವತಿಯನ್ನು ಮಹಿಳೆಯು ಅನುಚಿತವಾಗಿ ತಡೆಹಿಡಿದಿದ್ದಲ್ಲಿ ಪರಿಶೀಲುಕನಿಗೆ ದೂರು ಕೊಡಬಹುದು. ಕರ್ನಾಟಕ ಪ್ರಸೂತಿ ಅನುಕೂಲ್ಯದ ನಿಬಂಧನೆ ೧೬ ರ ಮೇರೆಗೆ ಪ್ರತಿಯೋಂದು ಫ್ಯಾಕ್ಟ್ರಿಯ ಮಾಲೀಕರು ಪ್ರತಿ ವರ್ಷ ಜನವರಿ ಮೂವತ್ತೊಂದನೆ ದಿನಾಂಕದೊಳಗೆ ಹಿಂದಿನ ವರ್ಷದ ಮಾಹಿತಿ ವಿವರಣೆಯನ್ನು ಆಕೃತಿ ಕೆ.ಎಲ್ ಮತ್ತು ಎಮ್ ರೂಪದಲ್ಲಿ ಅಧಿಕಾರಿಗೆ ರವಾನೆ ಮಾಡಬೇಕು.

ನಮ್ಮ ಸಮಾಜದಲ್ಲಿ ಮಹಿಳೆಯರಿಗೆ ದೈಹಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಸಂತಾನೋತ್ಪತಿಗೆ ಸಂಬಂಧಿಸಿದಂತೆ ಹಾಗೂ ತಮ್ಮ ಜೀವದ ಉಳಿವಿಗೆ ಸಂಬಂಧಿಸಿದ ವಿಷಯಗಳಲ್ಲಿಯೂ ಸಹ ನಿರ್ಧಾರ ತೆಗೆದುಕೊಳ್ಳಲು ಸ್ತ್ರೀಯರಿಗೆ ಯಾವುದೆ ಅಧಿಕಾರ ಇಲ್ಲ. ಹೀಗೆ ಹಲವಾರು ರೀತಿಯ ನಿರ್ಲಕ್ಷಗಳಿಗೆ ಒಳಗಾದ ಮಹಿಳೆಯರ ಸಾಮಾಜಿಕ ಮತ್ತು ಕೌಟುಂಬಿಕ ಸ್ಥಾನಮಾನಗಳಿಂದ ಒಂದು ರೀತಿಯ ಹೇಳಿಕೊಳ್ಳಲಾಗದ ಹಿಂಸೆಗೆ ಒಳಗಾಗುತ್ತಿರುತ್ತಾಳೆ. ಈ ಪುರುಷ ಪ್ರಧಾನ ಸಮಾಜವಂತೂ ಮಹಿಳೆಯನ್ನು ಸಂತಾನೋತ್ಪತ್ತಿಯ ಯಂತ್ರವೆಂದು ಪರಿಗಣಿಸುತ್ತದೆ. ಗರ್ಭಾವಸ್ಥೆಯ ಸಂದರ್ಭದಲ್ಲಿಯೂ ಸರಿಯಾದ ರೀತಿಯಲ್ಲಿ ಆಹಾರವಿಲ್ಲದೆ ಅನೇಕ ಕಾಯಿಲೆಗಳಿಗೆ ಒಳಗಾಗುತ್ತಿದ್ದಾಳೆ. ಒಂದು ಅಂದಾಜಿನ

[illegible]

[illegible]

[illegible]

[illegible]

[illegible]

ಪ್ರಕಾರ ಭಾರತದಲ್ಲಿ ನಾಲ್ಕರಿಂದ ಐದು ದಶಲಕ್ಷ. ಮಹಿಳೆಯರು ತಾಯ್ತನಕ್ಕೆ ಸಂಬಂಧಿಸಿದ ಅನಾರೋಗ್ಯದಿಂದ ಬಳಲುತ್ತಿದ್ದಾರೆ, ಆದರೆ ಮಹಿಳೆಯರ ಅನಾರೋಗ್ಯದ ಬಗ್ಗೆ ಜನಗಣತಿಯಲ್ಲಿ ಯಾವುದೆ ಅಂಕಿ ಸಂಖ್ಯೆಗಳು ಲಭ್ಯವಿಲ್ಲ. ಮಹಿಳೆಯರು ಯಾವ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ಎನ್ನುವ ಮಾಹಿತಿಗಾಗಿ ಇತ್ತೀಚಿಗೆ ಪ್ರಕರಣಗೊಂಡಿರುವ ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೇಕ್ಷಣೆಯ ವರದಿಗಳನ್ನು, ಕರ್ನಾಟಕ ರಾಜ್ಯದ ಮಾನವ ವಿಕಾಸ ವರದಿಯನ್ನು ಹಾಗೂ ಕೆಲವು ರಾಜ್ಯಗಳಲ್ಲಿ ನಡೆಸಿರುವ ಅಧ್ಯಯನಗಳ ಫಲಿತಾಂಶಗಳನ್ನು ಪರಿಶೀಲಿಸಬೇಕಾಗುತ್ತದೆ.

ಕಾರ್ಕಲ್‌ರವರ ಪ್ರಕಾರ (೧೯೫೫) "ಹೆರಿಗೆಯಲ್ಲಿ ಸಾಯುವ ಸ್ತ್ರೀಯೊಬ್ಬಳಿಗೆ ಪ್ರತಿಯಾಗಿ ೧೬.೫ ಸ್ತ್ರೀಯರು ಬಸಿರು ಹಾಗೂ ಹೆರಿಗೆಯಲ್ಲಿ, ಮತ್ತು ಹೆರಿಗೆಯ ನಂತರದ ಅವದಿಗಳಲ್ಲಿ ಕಾಯಿಲೆಗಳಿಂದ ನರಳುತ್ತಾರೆ. ಎಂಬುದೇ ಅನೇಕ ಅಧ್ಯಯನಗಳಿಂದ ಸಿದ್ಧವಾಗಿರುವ ಸಂಗತಿ." ಹೀಗಾಗಿ ಪ್ರತಿ ೧,೦೦,೦೦೦ ಶಿಶು ಜನನಗಳಿಗೆ ಪ್ರತಿಯಾಗಿ ೮,೭೫೦ ಮಹಿಳೆಯರು ಸಾವು ಮತ್ತು ಅನಾರೋಗ್ಯದ ಅಪಾಯಗಳಿಗೆ ಒಳಗಾಗುತ್ತಾರೆ ಎಂದು ತಿಳಿದುಬಂದಿದೆ. ಮಹಿಳೆಯರ ಪ್ರಜನನ ಅನಾರೋಗ್ಯ ಹಾಗೂ ಹೆರಿಗೆಗೆ ಸಂಬಂಧಿಸಿದ ಸಾವುಗಳಿಗೆ ಅವರಿಗೆ ಸಿಗದ ಆರೋಗ್ಯ ರಕ್ಷಣ ಸೌಲಭ್ಯಗಳು ಹಾಗೂ ಸೇವೆಗಳು ಬಹುಮಟ್ಟಿಗೆ ಕಾರಣವಾಗಿವೆ.[೧೯]

ಎಷ್ಟೆಲ್ಲಾ ಕಾನೂನುಗಳು ಬಂದರು ಕೂಡ ವಾಸ್ತವದಲ್ಲಿ ಅವು ಯಾವು ಕೂಡ ಜಾರಿಗೊಳ್ಳದೆ ಇರುವುದನ್ನು ಇಲ್ಲಿ ಕಾಣಬಹುದಾಗಿದೆ. ಪ್ರತಿ ವರ್ಷ ಹೆರಿಗೆಯಿಂದ ಬಸಿರಿನಿಂದ ಕಾಯಿಲೆಗಳಿಂದ ತಾಯ್ತನ ಎನ್ನುವುದು ಹೆಣ್ಣಿಗೆ ಪ್ರಕೃತಿದತ್ತವಾಗಿ ಕೋಟ್ಟಿರುವ ವಿಶಿಷ್ಠಶಕ್ತೀಯಾಗಿದೆ. ಆದರೆ ಪುರುಷಶಾಹಿ ವ್ಯವಸ್ಥೆ ಖಾಸಗಿ ಆಸ್ತಿ ಎಂಬ ಕಲ್ಪನೆ ಮೂಡಿದಾಗಿನಿಂದ ಇವತ್ತಿನ ತನಕ ಹೆಣ್ಣಿನ ದೇಹದ ಮೇಲೆ ನಿಯಂತ್ರಣವನ್ನು ಸಾಧಿಸುತ್ತಲೇ ಬಂದಿದೆ.

ಯಾವ ಶಕ್ತಿ ಅವಳನ್ನು ಪ್ರಾಭಲ್ಯಗೊಳಿಸಬೇಕಾಗಿತ್ತೊ ಅದಿರಿಂದಲೇ ದುರ್ಬಲ ಸ್ಥಿತಿಗೆ ತಳ್ಳಲ್ಪಡುತ್ತಿದ್ದಾಳೆ. ಹಿಂದಿನಿಂದಲೂ ಸಾಂಪ್ರದಾಯಿಕವಾಗಿ ಹೆಣ್ಣನ್ನು ಬೆಳೆಸುವುದರಲ್ಲಿ ತಂದೆ, ಗಂಡ, ಮಗನ, ಆಶ್ರಯದಲ್ಲಿ ಇರುವಂತ ಚೌಕಟ್ಟನ್ನು ಏರ್ಪಡಿಸಿದೆ. ಅವಳು ಅಬಲೇ ದುರ್ಬಲಳು ಇನ್ನಿತರ ಮನಸ್ಥಿತಿಯನ್ನು ಕಲ್ಪಿಸಿ ಯಾವಾಗಲು ಪುರಷನ ಆಸರೆಯಲ್ಲಿ ಬೆಳೆಯುವಂತೆ ವ್ಯವಸ್ಥೆ ರೂಪಿಸಿದೆ. ಆದರೆ ಇತ್ತೀಚಿನ ದಿನಗಳಲ್ಲಿ ದುಡಿಯುವ ಅನಿವಾರ್ಯ ಪರಿಸ್ಥಿತಿಯಿಂದ ಹೊರಗೆ ಬಂದರು ಕೂಡ ವ್ಯವಸ್ಥೆಯಲ್ಲಿನ್ನು ಬದಲಾವಣೆಯಾಗಿಲ್ಲ. ಸಂಘಟಿತ ವಲಯವಾಗಲಿ ಅಥವಾ ಅಸಂಘಟಿತ ವಲಯ ಯಾವ ಕ್ಷೇತ್ರದಲ್ಲಿಯಾಗಲಿ ಮಹಿಳೆ ಒಟ್ಟಾರೆ ಮದುವೆ ಯಾಗಿ ಮಗುವನ್ನು ಹೆರಲೇಬೆಕೆಂಬ ನಿರ್ಬಂಧ ಆಗಿರುತ್ತದೆ. ಅವಳಿಗೆ ಇಷ್ಟವಿರಲಿ, ಇರದೆ ಇರಲಿ ಒಟ್ಟಿನಲ್ಲಿ ಮಗುವನ್ನು ಹೆರಲೇಬೆಕು ಅವಳಿಗೆ ಯಾವಾಗ ಎಷ್ಟು ಯಾವ ಮಗುವನ್ನು ಹೆರಬೇಕೆಂಬ ಸ್ವತಂತ್ರ್ಯ ಕೂಡ ಇರುವುದಿಲ್ಲ. ಒಂದು ಕಡೆ ಸ್ವಲ್ಪ ಮಟ್ಟಿಗೆ ಅಂದರೆ ಸಂಘಟಿತ ವಲಯಗಳಲ್ಲಿ ದುಡಿಯುವ ಮಹಿಳೆ ಗರ್ಭಿಣಿಯಾಗಿದ್ದಾಗ ಅದು ಮಕ್ಕಳೆ ಆಗದೇ ಇದ್ದ ಸಂಧರ್ಭದಲ್ಲಿ ಸ್ವಲ್ಪ ಮಟ್ಟಿಗೆ ಕಾಳಜಿವಹಿಸುತ್ತಾಳೆ. ಆದರೆ ಅಸಂಘಟಿತ

[illegible]

[illegible]

[illegible]

[illegible]

ವಲಯದ ಅದರಲೂ ಗಾರ್ಮೆಂಟ್ಸ್ ಮಹಿಳೆಯರನ್ನು ತೆಗೆದುಕೊಂಡಾಗ ಕೊಡುವ ಸಂಬಳವೇ ಜೀವನ ಮಾಡಲು ಸಾಕಾಗದೆ ಇದ್ದಾಗ ಗರ್ಭಿಣಿ ಯಾದ ಸಂದರ್ಭದಲ್ಲಿ ಪಡಬಾರದ ಕಷ್ಟಗಳನ್ನೆಲ್ಲ ದೈಹಿಕವಾಗಿ ಮಾನಸಿಕವಾಗಿ ನೊವನ್ನು ಅನುಭವಿಸುವುದನ್ನು ಕಾಣಬಹುದು. ಹೊತ್ತು ಹೊತ್ತಿಗೆ ಸರಿಯಾಗಿ ಊಟವಿಲ್ಲದೆ ಅತಿ ಹೆಚ್ಚು ಕೆಲಸ ಮಾಡಿಸಿಕೊಳ್ಳುತ್ತಾರೆ. ಯಾರಾದರು ಹೇಳಿದರೆ ಅವರ ಕೆಲಸ ನೀವು ಮಾಡುತ್ತೀರಾ ಅಂಥ ಪ್ರಶ್ನಿಸುತ್ತಾರೆ. ಮಾಮೂಲು ಇದ್ದ ಸಂದರ್ಭದಲ್ಲಿ ಎಷ್ಟು ಪೀಸುಗಳನ್ನು ರೆಡಿಮಾಡಬೇಕಾಗುತ್ತೋ ಅಷ್ಟೂ ಕೂಡ ಗರ್ಭಿಣಿ ಇದ್ದಾಗ ಮಾಡಲೇಬೇಕೆಂಬ ಒತ್ತಡ ಹೇರುತ್ತಿರುತ್ತಾರೆ. ಮಾಡದೇ ಇದ್ದರೆ ಕೆಲಸ ಕಳೆದುಕೊಳ್ಳುತ್ತಾರೆ. ಎಷ್ಟೋ ಜನ ಮಹಿಳೆಯರಿಗೆ ಗರ್ಭಪಾತ ಆಗಿರುವ ಉದಾಹರಣೆಗಳು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿವೆ, ಅದಕ್ಕೂ ಯಾವುದೇ ರೀತಿ ಪರಿಹಾರವನ್ನು ಆಡಳಿತವರ್ಗದಿಂದ ಒದಗಿಸಿಲ್ಲ. ಉದಾಹರಣೆ ೨೦೦೮ ರಲ್ಲಿ ಸಿಕ್ಕಿರುವ ಮಾಹಿತಿ ಪ್ರಕಾರ ಹೊಸೂರು ರೋಡ್‌ನಲ್ಲಿ ಬರುವ ಫ್ಯಾಕ್ಟ್ರಿಯಲ್ಲಿ ಕೆಲಸ ಮಾಡುವ ಶೈಲಜಾ ಎಂಬುವವಳು, ಫ್ಯಾಕ್ಟರಿಯಲ್ಲಿ ಅತಿ ಹೆಚ್ಚು ಕೆಲಸ ಮಾಡಿರುವುದರಿಂದ ಮತ್ತು ಡಾಕ್ಟರ್ ಹತ್ತಿರ ತೋರಿಸಿಕೊಳ್ಳಲು ಅವಕಾಶ ಕೊಡದೆ ಇದ್ದಕ್ಕೆ ಇವತ್ತು ಮಗುವನ್ನು ಕಳೆದುಕೋಳ್ಳುವ ಸಂದರ್ಭ ಒದಗಿ ಬಂದಿದೆ. ಇದರಿಂದ ಒಂದು ಕಡೆ ಅತ್ತೆ ಮಾವನ ಹಿಂಸೆ ಇನ್ನೊಂದು ಕಡೆ ಫ್ಯಾಕ್ಟರಿಯಲ್ಲಿ ಮಾಲೀಕರ ಒತ್ತಡ ಹಿಂಸೆ ತಾಳಲಾರದೆ ಪ್ರತಿ ನಿತ್ಯ ನೋವನ್ನು ಅನುಭವಿಸುವ ಸ್ಥಿತಿ ಬಂದಿದೆ. ಮಾಲೀಕರು ನನಗೆ ಡಾಕ್ಟರ್ ಹತ್ತಿರ Checkup ಕಳಿಸಿದ್ದರೆ ಇವತ್ತು ನನ್ನ ಮಗು ಸಾಯುತ್ತಿರಲಿಲ್ಲ. ಇದರಿಂದ ನನ್ನ ಸಂಸಾರದಲ್ಲಿ ಜಗಳ ಹಿಂಸೆ ಕಣ್ಣಿರು ನೋವು ನಿರಾಸೆ ಅತ್ತೆ ಮಾವರ ಬೈಗಳು ದಿನ ನಿತ್ಯ ಅನುಭವಿಸುವ ಸ್ಥಿತಿಗೆ ಬಂದಿದೆ. ಅತ್ತೆ ಮಾವ ನನ್ನ ಗಂಡನಿಗೆ ಇನ್ನೊಂದು ಮದುವೆ ಯಾಗಲು ಬಲವಂತ ಪಡಿಸುತ್ತಿದ್ದಾರೆ. ಏಕೆಂದರೆ ಮತ್ತೆ ಮಕ್ಕಳಾಗುವ chance ಕಡಿಮೆ ಅಂತ ಹೇಳಿದ್ದಾರೆ. ಈ ಸಂದರ್ಭದಲ್ಲಿ ಮಗೂನು ಇಲ್ಲ ಗಂಡನೂ ಇಲ್ಲ ಅನ್ನುವ ಹಾಗಾಗಿದೆ. ಅದರೂ ಫ್ಯಾಕ್ಟರಿ ಮಾಲೀಕರು ಯಾವುದೇ ಪರಿಹಾರ ಕೊಡದೆ ಒಂದು ತಾಸಿಗೆ ಇಷ್ಟೆ ಪೀಸುಗಳನ್ನು ತಯಾರಿಸಬೇಕೆಂಬ ಒತ್ತಡ ಏರುತ್ತಾರೆ. ಏನು ಮಾಡುವುದು ಬಿಡುಗಡೆ ಇಲ್ಲ ಜೀವ ಇರುವ ತನಕ ದುಡಿಲೇಬೇಕಲ್ವ ಈ ಕೆಲಸವು ಇಲ್ಲದಿದ್ದರೆ ಮನೆಯಲ್ಲಿ ಇನ್ನೂ ಅತಿ ಹೆಚ್ಚು ಹಿಂಸೆಗೆ ಒಳಪಡಬೇಕಾಗುತ್ತದೆ. ಎಂದು ಕೆಲಸಕ್ಕೆ ಬರುತ್ತಿದ್ದೆನೆ. ಇದಲ್ಲದೆ ರತ್ನಮ್ಮ ಎಂಬ ಮಹಿಳೆ ೯ ತಿಂಗಳು ಗರ್ಭಿಣಿ ಆದಾಗ್ಯೂ ಕೆಲಸಕ್ಕೆ ಬರುತ್ತಿದ್ದಾಳೆ ಅದರೆ ಫ್ಯಾಕ್ಟರಿಯಲ್ಲಿ ಹೆರಿಗೆ ನೋವಿನಿಂದ ಹೊಟ್ಟೆ ನೋವಿನಿಂದ ಬಳಲಿದರು ಕೂಡ ಮಾಸ್ಟರ್ ರಜೆ ಕೊಡದೆ ಇನ್ನಷ್ಟೂ ಹಿಂಸೆಗೆ ಒಳಪಡಿಸಿದರು. ಕೊನೆಗೆ ಎಲ್ಲ ಕೆಲಸಗಾರರು ಜೊತೆಗೂಡಿ ಮಾಸ್ಟರ್‌ಗೆ ಕೇಳಿಕೊಂಡಾಗ ರಜೆ ಕೊಟ್ಟರು. ಆದರೆ ಆಸ್ಪತ್ರೆ ತಲುಪುವಷ್ಟರಲ್ಲಿ ರಸ್ತೆಯಲ್ಲಿ ಡೆಲವರಿಯಾಯಿತು. ಹೊಕ್ಕಳ ಬಳ್ಳಿಯನ್ನು ತಾನೇ ಕತ್ತರಿಸಿಕೊಂಡು ಯಾರೋ ಅಪರಿಚಿತರ ಸಹಾಯದಿಂದ ಮನೆಗೆ ತಲುಪುವಷ್ಟರಲ್ಲಿ ಗಂಡು ಮಗು ಕೂಡ ತಿರಿಕೊಂಡಿತ್ತು ಇದರಿಂದ ನನ್ನ ಗಂಡ ನನ್ನನ್ನು ಬಿಟ್ಟೇ ಹೋಗಿಬಿಟ್ಟರು. ಇದರಿಂದ ನಮ್ಮ ಸಂಸಾರ ಬೀದಿ ಪಾಲಾಯಿತು. ಯಾವ ಮಾಲೀಕನಾಗಲಿ ಮಾಸ್ಟರ್ ಅಗಲಿ ನನ್ನ ಸಂಸಾರ ಸರಿ ಮಾಡಲಿಲ್ಲ. ಯಾವುದೇ ಪರಿಹಾರ ಕೂಡ ಸಿಗಲಿಲ್ಲ.

ಇವೆರಡು ಘಟನೆಗಳನ್ನೇ ತೆಗೆದುಕೊಂಡಾಗ ಗೊತ್ತಾಗುತ್ತದೆ. ಕಾನೂನು ಕೇವಲ ಕಾನೂನಾಗಿದೆ. ವಿನಃ ವಾಸ್ಥವದಲ್ಲಿ ಯಾವ ಕಾನೂನು ಬಡ ಮಹಿಳೆಯ ಜೀವನ ಸುಧಾರಣೆ ಮಾಡದಾಯಿತು. ಸಂಸಾರ ಉಳಿಸುವುದಾಯಿತು. ಮಾಡುವುದಿಲ್ಲ. ಮಾಲೀಕರ ಪ್ರೊಡಕ್ಷನ್ ಒತ್ತಡ ಮಹಿಳೆಯರಿಗೆ ಮಾನಸಿಕವಾಗಿ ದೈಹಿಕವಾಗಿ ಒತ್ತಡಗಳಿಗೆ ಈಡುಮಾಡಿದೆ. ಒಂಬತ್ತು ತಾಸೂನು ನಿಂತುಕೊಂಡೆ ಕರೆಂಟ್ ಮುಂದೆ ಕೆಲಸಮಾಡಿದಾಗ ಅದು ಹೆಚ್ಚಿನ ಮಟ್ಟದಲ್ಲಿ ಹಿಟಾಗಿ ನಮ್ಮ ದೇಹಕ್ಕೆ ಒಳಪಟ್ಟಿಗೆ ಬರ್ಫ ಧರಿಸುವ ಅವಕಾಶವೇ ಇಲ್ಲದಾಗಿದೆ. ಏಕೆಂದರೆ ಮೊದಲೇ ನಮ್ಮ ದೇಹ ಹಿಟ್ ಇರುವುದರಿಂದ ಪ್ಯಾಕ್ಟರಿಯ ಕೆಲಸ ಇನ್ನೂ ಹೆಚ್ಚಿನ ಮಟ್ಟದಲ್ಲಿ ಇರುವುದರಿಂದ ಮಕ್ಕಳಾಗುವ ಸಂಭವ ಕಡಿಮೆ ಅಂತ ಡಾಕ್ಟರ್ ಹೇಳುತ್ತಾರೆ. ಈ ಕಾರಣವಾಗಿ ಅನೇಕ ಸಾರಿ ನನಗೆ ಗರ್ಭಪಾತಗಳು ಆಗಿವೆ. ಅದರಲ್ಲಿ ಒಂದು ವೇಳೆ ಕೆಲವೊಬ್ಬ ಮಹಿಳೆಯರು ಗರ್ಭನಿಂತರು ಕೂಡ ಟ್ಯಾಬ್ಲೇಟ್ ತೆಗೆದುಕೊಳ್ಳುತ್ತಿದ್ದೇವೆ ಎಂದು ಹೇಳುತ್ತಾರೆ.

"ಒಂದು ಅಂದಾಜಿನ ಪ್ರಕಾರ ನಮ್ಮ ರಾಷ್ಟದಲ್ಲಿ ಪ್ರತಿ ವರ್ಷ ಐದು ದಶಲಕ್ಷ ಗರ್ಭಪಾತಗಳಾಗುತ್ತಿವೆ. ಇವುಗಳಲ್ಲಿ ೦.೬ ದಶಲಕ್ಷ ಗರ್ಭಪಾತಗಳನ್ನುಮಾತ್ರ ನಮ್ಮ ಆರೋಗ್ಯ ಸೌಲಭ್ಯಗಳ ಜಾಲ ನಿರ್ವಹಿಸುತ್ತದೆ. ಇನ್ನೊಂದು ಸ್ಥೂಲವಾದ ಅಂದಾಜಿನಂತೆ ೬. ದಶಲಕ್ಷ ಗರ್ಭಪಾತಗಳನ್ನು ಭಾರತದಲ್ಲಿ ಕಾನೂನು ಬಾಹಿರವಾಗಿ ಮಾಡಿಸಲಾಗುತ್ತಿದೆ, ಈ ಅಂಕಿ ಅಂಶಗಳಿಂದ ಗರ್ಭಪಾತದಿಂದಾಗಿ ಉಂಟಾಗುವ ಆರೋಗ್ಯದ ತೊಡಕುಗಳು ಸೋಂಕುರೋಗಗಳು ಹಾಗೂ ಸಾವುಗಳ ಸಂಖ್ಯೆ ಮತ್ತು ವಿಶಾಲ ವ್ಯಾಪ್ತಿಯನ್ನು ಊಹಿಸಿಕೊಳ್ಳಬಹುದು. ಇಂತಹ ಸಾವುನೋವುಗಳ ಬಗ್ಗೆ ನಿಖರವಾದ ಮಾಹಿತಿ ಲಭ್ಯವಿಲ್ಲದಿದ್ದರು ಕೊನೆಯ ಪಕ್ಷ ಶೇ.೧೯ರಷ್ಟು ತಾಯಿಯರ ಸಾವುಗಳ ಗರ್ಭಪಾತದಲ್ಲಿ ಉಂಟಾಗುವ ತೋಡಕುಗಳಿಂದ ಉಂಟಾಗುತ್ತದೆ, ಎಂದು ಅಂದಾಜು ಮಾಡಲಾಗಿದೆ."

ಈ ವರದಿಯನ್ನು ನೊಡಿದಾಗ ಪ್ರಭುತ್ವಶಾಹಿ ಮತ್ತು ಪುರುಷ ಪ್ರಧಾನ ವ್ಯವಸ್ಥೆಯು ಹೆಣ್ಣನ್ನು ಎಷ್ಟು ಕೈಗೊಂಬೆಯಾಗಿ ನಡೆಸಿಕೊಳ್ಳತ್ತಿದೆ ಎಂಬುದನ್ನು ಚರ್ಚೆಗೆ ಒಳಪಡಿಸಿದ್ದಾರೆ. ಇನ್ನು ಬಳ್ಳಾರಿ ಕ್ಷೇತ್ರಾಧ್ಯಯನದ ಸಂದರ್ಭದಲ್ಲಿ ಅನೇಕ ಜನ ಮಹಿಳೆಯರಿಗೆ ಶೌಚಾಲಯದ ವ್ಯವಸ್ಥೆಯಿಲ್ಲದ ಸಂದರ್ಭದಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುವುದನ್ನು ಕಂಡುಬಂದಿದೆ. ಆದರೆ ಮಾಲೀಕರು ಹೆರಿಗೆ ಭತ್ಯೆಯಾಗಲಿ. ಇತರ ಸೌಲಭ್ಯಗಳಾಗಲಿ ಮಹಿಳೆಯರಿಗೆ ಕೊಟ್ಟಂತಹ ಯಾವ ಉದಾಹರಣೆ ಸಿಕ್ಕಿಲ್ಲ. ಮಹಿಳೆಯರು ಎಂಟು ತಾಸು ಕೂತ್ಕೊಂಡೆ ಕೆಲಸಮಾಡಿದ್ದಕ್ಕೆ ಬೆನ್ನು ನೋವು, ಕಾಲುನೋವು, ಎದೆನೋವು ದೂಳಿನಿಂದ ಅಲರ್ಜಿಯಾಗಿ ಅನೇಕ ಕಾಯಿಲೆಗಳಿಗೆ ಒಳಗಾಗಿದ್ದಾರೆ. ಆದರೆ ಇಲ್ಲಿ ಯಾವ ಕಾನೂನುಗಳು ಕೂಡ ಅನ್ವಯಗೊಳ್ಳುವುದಿಲ್ಲ.

೩.೨.೮ ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ಕಾಯ್ದೆ

ಮಹಿಳಾ ಅಸ್ತಿತ್ವವನ್ನು ತಿರಸ್ಕರಿಸುವ ಈ ಪ್ರಧಾನಧಾರೆಯ ವ್ಯವಸ್ಥೆಯು ಅವಳನ್ನು ಅಧೀನವಾಗಿಟ್ಟಿರುವ ವ್ಯವಸ್ಥೆಯ ಹಲವು ಬಗೆಯ ಪುರಾವೆಗಳನ್ನು ನೋಡಬಹುದಾಗಿದೆ. ಅದರಲ್ಲಿ ಮುಖ್ಯವಾಗಿ

ಕಂಡುಬರುವುದು ಆರ್ಥಿಕ ಅವಲಂಬನೆ. ಅವಳ ಅಸ್ತಿತ್ವ ರೂಪಗೊಳ್ಳುವುದೇ ಆರ್ಥಿಕ ಸಬಲೀಕರಣದಿಂದ ಸಾಧ್ಯ ಅಂತ ಹೇಳಿದರೂ, ಶತಮಾನಗಳಿಂದಲೂ ಕೆಲವೊಂದು ಪರಿಸ್ಥಿತಿಗಳಲ್ಲಿ ಬದಲಾವಣೆಗಳಾಗುತ್ತಿರುವುದು ಒಪ್ಪಿಕೊಳ್ಳಬಹುದಾಗಿದೆ. ಪ್ರತಿನಿತ್ಯ ಪ್ರತಿಕ್ಷಣ ಹಲವು ರೂಪಗಳನ್ನು ತಾಳುತ್ತಿರುವ ಪ್ರಧಾನಧಾರೆಯಲ್ಲಿ ಮಹಿಳೆಯರ ಮೇಲೆ ನಡೆಸುವ ಹಿಂಸೆ ದೌರ್ಜನ್ಯವನ್ನು ಹೊಸ ಬಗೆಯಲ್ಲಿ ಕಾಣಬಹುದು. ಈ ವ್ಯವಸ್ಥೆಯಲ್ಲಿ ಭಿನ್ನ ಬಗೆಯ ಹಿಂಸೆಯನ್ನು ಎದುರಿಸುವಾಗ ಉದ್ಯೋಗ ಅವಳಲ್ಲಿ ಆತ್ಮವಿಶ್ವಾಸ ಮೂಡಿಸುವುದಕ್ಕಿಂತ ಅವಳನ್ನು ಕೀಳು ಮತ್ತು ಕೆಳ ಮಟ್ಟದಲ್ಲಿರುವಂತೆ ಮಾಡಿರುವುದು ಪಿತೃ ಪ್ರಧಾನ ವ್ಯವಸ್ಥೆಯ ಗುರುತಾಗಿದೆ.

ಮಹಿಳೆ ಸಂಘಟಿತ ವಲಯದಲ್ಲಾಗುವ ಅಸಂಘಟಿತ ವಲಯಗಳಲ್ಲಾಗಲಿ ಒಟ್ಟಾರೆ ಸಾರ್ವಜನಿಕ ಸ್ಥಳಗಳಲ್ಲಿ ಲೈಂಗಿಕ ಕಿರುಕುಳಕ್ಕೆ ಒಳಗಾಗುತ್ತಿರುವ ಪ್ರಕರಣಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲೇ ಇರುವುದು ಕಂಡುಬರುತ್ತದೆ. ಇನ್ನು ದಾಖಲೆಯಾಗದೆ ಉಳಿಯುತ್ತಿರುವ ಪ್ರಕರಣಗಳ ಸಂಖ್ಯೆಯ ಲೆಕ್ಕ ತರ್ಕಕ್ಕೆ ನಿಲುಕದಂತಿದೆ. ಒಂದೆಡೆ ಮಹಿಳೆಯರಿಗೆ ಆರ್ಥಿಕ ಸಬಲೀಕರಣಕ್ಕಾಗಿ ಉದ್ಯೋಗ ಸೃಷ್ಠಿಸುತ್ತಿರುವ ಪ್ರಭುತ್ವಶಾಹಿ, ಇನ್ನೊಂದೆಡೆ ಸಿಕ್ಕಿರುವ ಕೆಲಸವನ್ನು ಸಮರ್ಥವಾಗಿ ನಿರ್ವಹಿಸದಂತೆ ತಂತ್ರಗಾರಿಕೆ ರೂಪುಗೊಳ್ಳುತ್ತಿರುವುದು ಅಂದರೆ ಕೆಲಸದ ಅ ಸ್ಥಳಗಳಲ್ಲಿ ಲೈಂಗಿಕ ಕಿರುಕುಳದಂತಹ ದೌರ್ಜನ್ಯ ಹಿಂಸೆಗಳು ಉದ್ಯೋಗ ವಲಯವನ್ನೆ ನಿರಾಕರಿಸುವ ವ್ಯವಸ್ಥೆಯನ್ನೆ ಸೃಷ್ಟಿಸುತ್ತಿವೆ. ಇದನ್ನು ನೊಡಿದಾಗ ಮಹಿಳೆ ಪ್ರವೇಶ ನಿಷೇಧ ದೌರ್ಜನ್ಯವೆಂದೇ ಹೇಳಬಹುದು. ಇದರಾಚೆಗೂ ಪ್ರೇರೇಪಿಸಿದರೆ ಆಕ್ರಮಣಗಳನ್ನು ಎದುರಿಸಿ ಬದುಕಬೇಕಾಗುತ್ತದೆ. ಇದರಿಂದ ಅವಳ ಕೆಲಸದಲ್ಲಿನ ಶ್ರದ್ಧೆ ಆಸಕ್ತಿಯನ್ನು ವಿಕಾರಗೊಳ್ಳುವುದು, ಮಾನಸಿಕ ಒತ್ತಡಗಳು ಅಭದ್ರತೆಯ ಭಾವವನ್ನು ಸೃಷ್ಠಿಸುತ್ತಿರುವ ಮೂಲಕ ಅವಳನ್ನು ಅಧೀನ ಸ್ತರಕ್ಕೆ, ಕುಟುಂಬದ ಚೌಕಟ್ಟಿಗೆ ಸೀಮಿತಗೊಳಿಸಬೇಕೆಂಬ ತಂತ್ರಗಾರಿಕೆಯೇ ಆಗಿದೆ.

ಮಹಿಳೆಯರು ಕುಟುಂಬ, ಕುಟುಂಬದಾಚೆಗಿನ ಸಂದರ್ಭಗಳಲ್ಲೂ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾಳೆ ಎಂಬುದರ ಕುರಿತು ಸಾಕಷ್ಟು ಅಧ್ಯಯನಗಳು ನಡೆಯುತ್ತಿವೆ. ಭಾರತದ ಸಂವಿಧಾನದ ೧೯ (೧) (ಜಿ) ಅನುಚ್ಛೇದದ ಅಡಿಯಲ್ಲಿ ಯಾವುದೇ ವ್ಯಕ್ತಿಯು ಯಾವುದೇ ವೃತಿಯನ್ನು ಮಾಡುವ ಅಥವಾ ಯಾವುದೇ ಉದ್ಯೋಗ ಅಥವಾ ವ್ಯಾಪಾರವನ್ನು ಕೈಗೊಳ್ಳುವ ಸ್ವಾತಂತ್ರ್ಯ ಒಂದು ಮೂಲಭೂತ ಹಕ್ಕು ಎಂದು ಹೇಳುತ್ತದೆ. ಆದರೆ ಸರ್ವರಿಗೂ ಸಮಾನವೆಂದು ಜಾರಿಯಾದ ಸಂವಿಧಾನದಲ್ಲಾಗಲಿ ಇತರೆ ಯಾವುದೇ ಅಂಶಗಳಲ್ಲಾಗಲಿ ಮಹಿಳೆಯರನ್ನು ಒಳಗೊಂಡಿಲ್ಲವೆಂಬುದು ಅಲಿಖಿತ ಶಾಸನದಂತಿದೆ. ಹಾಗೆಯೇ ಕೆಲಸದ ಸ್ಥಳಗಳಲ್ಲಿ ತೊಡಗುವ ಮಹಿಳೆಯರು ಒಳಗಾಗುವ ಲೈಂಗಿಕ ಕಿರುಕುಳವು ಮಹಿಳೆಯರ ಮೂಲಭೂತ ಹಕ್ಕಿನ ಉಲ್ಲಂಘನೆಯಾಗುತ್ತೆಯೆಂದು ಹೇಳಬಹುದು. ಅಲ್ಲದೆ ೧೯೭೯ ರಲ್ಲಿ ಜಾರಿಯಾದ ಒಡಂಬಡಿಕೆಯು ಮಹಿಳೆಯರ ವಿರುದ್ಧ ಕೊಡುವ ತಾರತಮ್ಯ ಮತ್ತು ಮಹಿಳೆಯರ ಘನತೆಗೆ ಕುಂದುಂಟು ಮಾಡುವ ಯಾವುದೇ ಕೃತ್ಯ ಸಮಾನತೆಯ ಹಕ್ಕನ್ನು ಉಲ್ಲಂಘಿಸುತ್ತದೆಯಾದ್ದರಿಂದ ಅದು ಮಾನವ ಹಕ್ಕುಗಳ ಉಲ್ಲಂಘನೆಯೇ ಆಗಿದೆ. ಈ ಬಗೆಯ ಸಂಗತಿಗಳು ಸಂವಿಧಾನದಲ್ಲಿ

[illegible]

[illegible]

[illegible]

ದಾಖಲೆ ಅದರೂ, ಅದು ಕೇವಲ ಪುಸ್ತಕದೊಳಗಿನ ಸಮಾನತೆ ಆಗಿದೆಯೇ ವಿನಃ ವಾಸ್ತವದಲ್ಲಿ ಪೂರಕವಾಗಿಲ್ಲವೆಂಬುದಕ್ಕೆ ಹೆಚ್ಚುತ್ತಿರುವ ಕೆಲಸದ ಸ್ಥಳಗಳಲ್ಲಿನ ಲೈಂಗಿಕ ಕಿರುಕುಳದ ಪ್ರಕರಣಗಳು ಆಧಾರವಾಗಿವೆ.

ಸಾಮಾಜಿಕವಾಗಿ ಅತ್ಯಾಚಾರಕ್ಕೆ ಒಳಗಾದ ಭಾಂವ್ರಿದೇವಿಯ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ೧೯೯೭ರ ಆಗಸ್ಟ ೧೨ ರಂದು ಈ ಪ್ರಕರಣದಲ್ಲಿ ತೀರ್ಪು ನೀಡಿತು. ವಿಶಾಖ ಎಂಬ ಮಹಿಳಾ ಸಂಘಟನೆಯ ಮೂಲಕ ಅರ್ಜಿ ಸಲ್ಲಿಸಿದ್ದ ಕಾರಣ ಇದು ವಿಶಾಖ ರಾಜಸ್ಥಾನ ಸರ್ಕಾರ ಪ್ರಕರಣವೆಂದು ದಾಖಲಾಗಿ ವಿಶಾಖ ತೀರ್ಪಾಗಿ ಹೊರಬಂದಿದೆ.

ಕೆಲಸದ ಸ್ಥಳಗಳಲ್ಲಿನ ಲೈಂಗಿಕ ಕಿರುಕುಳದ ವಿರುದ್ಧ, ಮಹಿಳೆಯರ ರಕ್ಷಣಾ ಕಾಯ್ದೆ ೨೦೦೭ರಲ್ಲಿ ಸೆಕ್ಷನ್ ಒಂದರಲ್ಲಿ ಸೂಚಿಸಲಾಗಿದೆ. ಇದು ಭಾರತದುದ್ದಕ್ಕೂ ಅನ್ವಯಿಸುತ್ತದೆ. ಸೆಕ್ಷನ್ ೨ ರಲ್ಲಿ ಈ ಕಾಯ್ದೆಯ ಒಳಗೊಂಡಿರುವ ಪ್ರಮುಖ ಪದಗಳ ವ್ಯಾಖ್ಯಾನಗಳನ್ನು ಒಳಗೊಂಡಿದೆ. ೨(ಎ) ಪೀಡಿತ ಮಹಿಳೆಯೆಂದರೆ ಯಾವುದೇ ಕೆಲಸದ ಮಹಿಳೆಯು ಯಾರಿಂದಲಾದರೂ ಲೈಂಗಿಕ ಕಿರುಕುಳದ ಕೃತ್ಯಕ್ಕೆ ಒಳಗಾದವರು ಎಂದು ಹೇಳಲಾಗುತ್ತದೆ. (ಬಿ) ನಿಯಮಿತ ಸರ್ಕಾರ ಅಂದರೆ ಯಾವುದೇ ರೀತಿಯಲ್ಲಿ ಸ್ಥಾಪಿಸಲ್ಪಟ್ಟ ಒಡೆತನವನ್ನು ಹೊಂದಿದ ನೆಪವಾಗಿ ಅಥವಾ ಪರೋಕ್ಷವಾಗಿ ಹಣಕಾಸುಗಳು ಒದಗಿಸಲ್ಪಟ್ಟ ಕೆಲಸದ ಸ್ಥಳದೊಂದಿಗೆ ಸಂಬಂಧ ಹೊಂದಿರುವುದನ್ನು ಹೇಳಲಾಗಿದೆ. ೨ (ಸಿ) ಯಲ್ಲಿ ಜಿಲ್ಲಾ ಸಮಿತಿಯಿಂದ ಆಯ್ಕೆಯಾದವರನ್ನು ಅಧ್ಯಕ್ಷರೆಂದು ಗುರುತಿಸಲಾಗಿದೆ. ಹಾಗೂ ೨(ಸಿ) ಸೆಕ್ಷನ್ ನಾಲ್ಕರಡಿಯಲ್ಲಿ ದೂರುಗಳನ್ನು ಪಡೆದು ದಾಖಲಿಸಲು ರೂಪಿಸಲಾಗಿರುವುದನ್ನು ಕಮಿಟಿಯೆಂದು ಹೇಳಲಾಗಿದೆ. ೨(ಇ) ಅನ್ವಯ ಅಧಿಕಾರಿಯಾಗಿ ನೇಮಕವಾಗುವುದನ್ನು ಜಿಲ್ಲಾ ಅಧಿಕಾರಿ ಎಂದು ಕರೆಯಲಾಗಿದೆ. ೨(ಲ) ಪ್ರಕಾರ ಕೆಲಸಗಾರರು ಅಥವಾ ನೌಕರರು ಎಂದರೆ ಯಾವುದೇ ಕೆಲಸದ ಸ್ಥಳದಲ್ಲಿ ನಿರಂತರವಾಗಿ ತಾತ್ಕಲಿಕವಾಗಿ ದಿನಗೂಲಿ ಆಧಾರದ ಮೇಲೆ ನೇರ ಅಥವಾ ಎಜೆಂಟರ ಮೂಲಕ ನೇಮಕವಾದವರು ಕಾಂಟ್ರಾಕ್ಟರ್‌ಗಳು ನೇಮಿಸಿಕೊಂಡವರು, ಪ್ರಮುಖ ಉದ್ಯೋಗಿಯ ಗಮನಕ್ಕೆ ಬಂದು ಅಥವಾ ಬಾರದೆ ಇರುವವರು ತಾತ್ಕಾಲಿಕ ಉದ್ದೇಶಕ್ಕಾಗಿ ನೇಮಕವಾದವರು. ಸಂಭಾವನೆ ಸಹಿತ ಅಥವಾ ರಹಿತ ಕೆಲಸಮಾಡುವವರು ಅಥವಾ ನೌಕರರೆಂದು ಗುರುತಿಸುತ್ತದೆ. ಯಾವುದೇ ಕೆಲಸದ ಸ್ಥಳಗಳಲ್ಲಿ ಮೇಲ್ವಿಚಾರಣೆಗೆ ಮತ್ತು ಕೆಲಸದ ಸ್ಥಳವನ್ನು ನಿಯಂತ್ರಿಸುವವರನ್ನು ಈ ವ್ಯಾಖ್ಯಾನದಡಿಯಲ್ಲಿ ಸೇರಿಸಲಾಗಿದೆ.

ಸೆಕ್ಷನ್ ೨ ಕೆಲಸದ ಸ್ಥಳವೆಂದರೆ

ಯಾವುದೇ ಖಾಸಗಿ ವಲಯ ಸಂಘಟನೆ, ಸಂಸ್ಥೆ, ಸೊಸೈಟಿ, ಘಟಕಗಳು ಶೈಕ್ಷಣಿಕ ವೃತ್ತಿವರು, ಕೈಗಾರಿಕ ಸಂಸ್ಥೆಗಳು ಪರೋಕ್ಷವಾಗಿ ಸರ್ಕಾರದಿಂದ ನಿಗದಿತ ಅಥವಾ ಸ್ಥಳಿಯ ಸ್ವಾಧೀನ ಪಡೆದದ್ದು ಅಥವಾ ಸರ್ಕಾರದಿಂದ ಸ್ಥಾಪಿತ ಕಂಪನಿಗಳು ಅಥವಾ ಸಹಕಾರ ಸಂಘಗಳು, ವಾಸಸ್ಥಳ ಕೆಲಸಗಾರರು ಚೀಟಿ ನೀಡುವ ಯಾವುದೇ ಸ್ಥಳವನ್ನು ಸಹ ಕೆಲಸದ ಸ್ಥಳವೆಂದು ಹೇಳಲಾಗಿದೆ. ಅಸಂಘಟಿತ

[illegible]

[illegible]

[illegible]

[illegible]

ವಲಯವಂದೇ ಕರೆಯಲ್ಪಡುವ ಕೃಷಿ, ಕೈಗಾರಿಕೆ, ಟ್ರೇಡ್ ಯೂನಿಯನ್ ಇನ್ನಿತರ ಸರ್ಕಾರ ಗುರುತಿಸಲ್ಪಟ್ಟ ಅರವತ್ತಕ್ಕಿಂತ ಹೆಚ್ಚು ವಲಯಗಳು ವ್ಯಾಪ್ತಿಗೆ ಒಳಡುತ್ತವೆ.

ಸೆಕ್ಷನ್ : ೩ ಲೈಂಗಿಕ ಕಿರುಕುಳ

೧. ದೈಹಿಕ ಸ್ಪರ್ಷ ಮತ್ತು ಲೈಂಗಿಕವೆನಿಸುವಂತಹ ಆಂಗಿ ಅಭಿನಯದ ಅಥವಾ ಮಾತು

೨. ಆಶ್ಲಿಲಾ ಸಾಹಿತ್ಯ ಅಥವಾ ಚಿತ್ರಗಳನ್ನು ತೋರಿಸುವುದು

೩. ಲೈಂಗಿಕ ವೆನಿಸಬಹುದಾದಂತಹ ಅಬಿಪ್ರಾಯಗಳ ಅಭಿವ್ಯಕ್ತಿ

೪. ಲೈಂಗಿಕವಾಗಿ ತೃಪ್ತಿಗೊಳಿಸುವಂತೆ ಒತ್ತಾಯ ಅಥವಾ ಮನವಿ

೫. ಲೈಂಗಿಕ ಸ್ವರೂಪದ ಇತರೆ ಯಾವುದೇ ಅನುಚಿತವಾದ ಆಂಗಿಕ, ಶಾಬ್ದಿಕ ಅಥವಾ ಶಾಬ್ದಿಕವಲ್ಲದ ನಡಾವಳಿಕೆ ಇತ್ಯಾದಿ ಅಂಶಗಳನ್ನು ಲೈಂಗಿಕ ಕಿರುಕುಳದ ವ್ಯಾಖ್ಯಾನದಡಿಯಲ್ಲಿ ವಿವರಿಸಲಾಗಿದೆ.

ಈ ಕಾಯ್ದೆ ಅಡಿಯಲ್ಲಿ ಆಯಾ ಕೆಲಸದ ಸ್ಥಳಗಳಲ್ಲಿಯೆ ದೂರು ಸಮಿತಿಗಳನ್ನು ನೆಮಿಸಲು ಸೂಚಿಸಿದೆ. ಈ ದೂರ ಸಮಿತಿಗಳನ್ನು ವಿಭಾಗ ಉಪವಿಭಾಗಗಳಲ್ಲಿ ವರ್ಗಿಕರಿಸಿ ಕೆಲಸದ ಸ್ಥಳಗಳಿಗೆ ಹತ್ತಿರದಲ್ಲಿ ಇರಬೇಕು. ಈ ಸಮಿತಿಯ ಅಧ್ಯಕ್ಷರನ್ನಾಗಿ ಕೆಲಸದ ಸ್ಥಳದಲ್ಲಿ ಹಿರಿಯ ಮಹಿಳೆಯರನ್ನು ನೇಮಿಸಬೇಕು. ಇವರು ಲಭ್ಯವಾಗದಿದ್ದ ಪಕ್ಷದಲ್ಲಿ ಸಹೊದರಿ ಸಂಸ್ಥೆಯ ಅಥವಾ ಸರ್ಕಾರೇತರ ಸಂಸ್ಥೆಯಲ್ಲಿ ಇರುವವರನ್ನು ನೇಮಿಸಿಕೊಳ್ಳಬೇಕು. ಹಾಗೆಯೆ ಕನಿಷ್ಟ ಇಬ್ಬರು ಸದಸ್ಯರಾದರು ಸಾಮಾಜಿಕ ಕಾರ್ಯಕರ್ತರಲ್ಲಿ ಮಹಿಳಾ ವಿಷಯಗಳಿಗೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸದಂತವರಾಗಿರಬೇಕು.

ಉದ್ಯೋಗದಲ್ಲಿ ಪ್ರೊಮೋಷನ್ ಒದಗಿಸುವ ನೆಪದಲ್ಲಿ ನ್ಯಾಯವಾಗಿ ಸಿಗಬೇಕಾದ ಬಡ್ತಿಗಳಿಗೆ ಅಡ್ಡಿ ಉಂಟು ಮಾಡುವ ಮೂಲಕ ಕೆಲಸ ಮಾಡುವಾಗ ಸೂಚನೆ ಕೊಡುವ ನೆಪದಲ್ಲಿ ಮೈ-ಕೈ ಸ್ಪರ್ಷಿಸುವುದು ಮಾತುಗಳಲ್ಲಿ ಅಸಭ್ಯ ಸಂಜ್ಞೆಗಳನ್ನು ಮಾಡುವುದು. ಅಶ್ಲೀಲ ಹಾಸ್ಯ ಚಟಾಕೆಗಳನ್ನು ಹೇಳುವುದು ತನ್ನ ಲೈಂಗಿಕ ಆಸೆಗಳನ್ನು ಪೂರೈಸದಿದ್ದರೆ ವರ್ಗಾವಣೆ ಮಾಡುವುದಾಗಿ ಅಥವಾ ಕೆಲಸವಿದಿದ್ದರೆ ವರ್ಗಾವಣೆ ಮಾಡುವುದಾಗಿ ಅಥವಾ ಕೆಲಸದಿಂದ ತೆಗೆದುಹಾಕುವುದಾಗಿ ಹೆದರಿಸುವುದು ಇತ್ಯಾದಿಗಳನ್ನು ಸಹ ಲೈಂಗಿಕ ದೂರುಗಳನ್ನು ದಾಖಲಿಸಬಹುದು. ಇದ್ದಕ್ಕೆ ಸಮಿತಿಯು ಪರಿಹಾರಗಳನ್ನು ಒದಗಿಸಬೇಕು. ಈ ಬಗೆಯಲ್ಲಿ ದಾಖಲಾದ ಪ್ರಕರಣಗಳ ಗೌಪ್ಯವಾಗಿ ಇಡಬೇಕು. ಇಂತಹ ಘಟನೆಗಳು ಬಹುತೇಕ ಮಹಿಳೆಯ ಏಕಾಂತದ ಸಂದರ್ಭದಲ್ಲಿ ನಿರ್ಜನ ಪ್ರದೇಶಗಳಲ್ಲಿ ಘಟಿಸುವುದರಿಂದ ಕಿರುಕುಳದ ಬಗ್ಗೆ ಪ್ರತ್ಯಕ್ಷ ಸಾಕ್ಷಿ ಒದಗಿಸುವುದಕ್ಕೆ ಒತ್ತಾಯಿಸಬಾರದು. ದೂರು ನಿಡಿದವರಿಗೆ ಮಾತನಾಡಲು ಮೊದಲ ಅದ್ಯತೆ ಇರಬೇಕು. ಎಂಬ ಆಶಯಗಳನ್ನು ಸೂಚಿಸುತ್ತದೆ.

[illegible]

ಸೆಕ್ಷನ್ : ೧೭ ರಲ್ಲಿ ಕೆಲಸವನ್ನು ನೀಡುವ ಯಜಮಾನರಿಗು ಕೆಲವು ನಿಯಮಗಳನ್ನು ವಿಧಿಸಿದೆ ಕೆಲಸಗಾರರಿಗೆ ಆ ಕಂಪನಿಯ ಮಾಲೀಕರು ಅಥವಾ ಕೆಲಸವನ್ನು ನೀಡಿದ ಮಾಲೀಕರು ಸುರಕ್ಷಿತ ಕೆಲಸದ ವಾತಾವರಣದಲ್ಲಿ ಲೈಂಗಿಕ ಕಿರುಕುಳವನ್ನು ನಿಷೆದಿಸಲಾಗಿದೆ ಎಂಬುದು ಸ್ಪಷ್ಟಪಡಿಸಬೇಕು. ಈ ಕೃತ್ಯಕ್ಕೆ ಒಳಗಾದ ಮಹಿಳೆಯು ದೂರು ಸಲ್ಲಿಸುವಾಗ ವಿಚಾರಗಳನ್ನು ಕೈಗೋಳ್ಳುವಾಗ ಸ್ವಯಂ ಸ್ನೆಹದವರಾಗಲಿ, ಹೊರಗಿನವರಾಗಲಿ ಮಹಿಳೆಯರಿಗೆ ಹೆದರಿಸುವ, ಕಿರುಕುಳ ನಿಡುವ ತಡೆಯನ್ನುಂಟು ಮಾಡುತ್ತಿದ್ದರೆ ಸಂಸ್ಥೆಯ ಮಾಲೀಕರು ಶಿಕ್ಷೆಯನ್ನು ಒದಗಿಸಬೇಕು. ಕೆಲಸಗಾರನ ದುರ್ವರ್ತನೆಯು ಗಮನಕ್ಕೆ ಬಂದಲ್ಲಿ ಸ್ವಯಂ ಸಂಸ್ಥೆಯ ಮಾಲೀಕರು ದೂರು ಸಮಿತಿಗಾಗಲಿ ಪೊಲೀಸ್ ಇಲಾಖೆಗೆ ಮಾಹಿತಿಯನ್ನು ನೀಡಿ ಕ್ರಮಕೈಗೊಳ್ಳುವಲ್ಲಿ ಸಹಾಯಕರಾಗಬೇಕು. ದೂರು ಸಮಿತಿಯ ಸ್ಥಾಪನೆ (ಕೆಲಸದ ಸ್ಥಳದಲ್ಲಿ) ಅದರ ಕಾರ್ಯ ವೈಖರಿಯು ಕಟ್ಟುನಿಟ್ಟಾಗಿ ಜಾರಿಯಾಗಲು ಜಾಗೃತಿಯನ್ನು ವಹಿಸಬೇಕು ಎಂಬ ನಿಯಮಗಳನ್ನು ರೂಪಿಸಿದೆ. ಅಲ್ಲದೆ ಸಮಿತಿಗಳು ಸಲ್ಲಿಸಿದ ವಾರ್ಷಿಕ ವರದಿಯನ್ನು ಜಿಲ್ಲಾಧಿಕಾರಿಗಳು ಕೂಲಂಕುಷವಾಗಿ ಪರಿಶೀಲಿಸುವ ಅಗತ್ಯತೆಯನ್ನು ಸಹ ಇಲ್ಲಿ ಹೇಳಲಾಗಿದೆ.

ಸಾರ್ವಜನಿಕ ವಲಯಕ್ಕೆ ಮುಖಾಮುಖಿಯಾಗುತ್ತಿರುವ ಮಹಿಳೆಯರು ಕೌಟುಂಬಿಕ ವಲಯದಂತೆ ಕೆಲಸದ ಸ್ಥಳದಲ್ಲಿ ನಿರಂತರವಾಗಿ ಒಡನಾಡುವ ಸಂದರ್ಭಗಳು ಹೆಚ್ಚಿನದಾಗಿವೆ. ಆದರೆ ಸಾರ್ವಜನಿಕ ಸ್ಥಳಕ್ಕೆ ಕಾಲಿರಿಸಿದ ಮಹಿಳೆಯರು ಕೆಲವು ನಿಗದಿತ ಕೆಲಸದ ವಲಯಗಳಿಗೆ ಸೀಮಿತವಾಗುತ್ತಿರುವುದರಿಂದ ಈ ಕಾಯ್ದೆಯು ಕೇವಲ ಕೆಲಸದ ಸ್ಥಳವನ್ನು ಆಧರಿಸಿರುವುದು ಸಮರ್ಪಕವಾಗುವುದಿಲ್ಲವೆನಿಸುತ್ತದೆ. ಏಕೆಂದರೆ ಪ್ರಯಾಣದ ಸಂದರ್ಭದಲ್ಲಿ ಕಿರುಕುಳಗಳು ಆಗುವುದನ್ನು ಕಾಣಬಹುದು.

ಉದಾ:- ಯಾವುದೋ ಕಾರ್ಯ ನಿರ್ವಹಿಸುತ್ತಿರುವ ಮಹಿಳೆಯು ಕುಟುಂಬದೊಳಗಡೆ ಇರುವಾಗ ಅವಳ ಜವಾಬ್ದಾರಿಯು ಕುಟುಂಬದಾಗಿರುತ್ತದೆ. ಆದೇ ರೀತಿಯಾಗಿ ಕಛೇರಿಗೆ ತಲುಪಿದ ನಂತರ ಅವಳ ಸಂಪೂರ್ಣ ಹೊಣೆಗಾರಿಕೆಯು ಈ ಕಛೇರಿಯ ಒಡೆತನವಿರುವವರಿಗೆ ಅನ್ವಯಿಸುತ್ತದೆ.

ಮೂಲಭೂತ ಮಾನವ ಹಕ್ಕಿನ ಉಲ್ಲಂಘನೆಯು ಲೈಂಗಿಕ ಕಿರುಕುಳಕ್ಕೆ ಅನ್ವಯಸುವಂತೆ, ಸಾರ್ವಜನಿಕ ವಲಯದ ನಿರಾಕಣೆಯಿಂದ ಮೊದಲುಗೊಂಡು, ಅಲ್ಲಿನ ಪ್ರಕ್ರಿಯೆಯುದ್ದಕ್ಕೂ ಮಹಿಳಾ ಸಮುದಾಯವನ್ನು ಮತ್ತೆ ಮತ್ತೆ ಕುಟುಂಬಕ್ಕೆ ಸಿಮಿತಗೊಳಿಸುವಲ್ಲಿ ನಡೆಯುತ್ತಿರುವ ಹಲವಾರು ವಿವಿಧ ಸೂಕ್ಷ್ಮ ಆಕ್ರಮಣಗಳಿಂದ ಮೊದಲಾಗಿ ಜೀವ ಕಳೆದುಕೊಳ್ಳುವಂತಹ ಸ್ಥಿತಿಗೆ ಮಹಿಳೆಯರು ತಲುಪುತ್ತಿರುವುದು ಸಹ ಮಾನವ ಹಕ್ಕಿನ ಉಲ್ಲಂಘನೆಯೇ ಅಲ್ಲವೇ?

ಮಾಲೀಕರು ಕೆಲಸದ ಸ್ಥಳದಲ್ಲಿ ಜವಾಬ್ದಾರಿಯನ್ನು ನಿಗದಿಪಡಿಸಿರುವುದು ಸೂಕ್ತವಾದರೂ, ಇದು ಜಾರಿಯಾಗುವುದೆಂಬುದನ್ನು ಗ್ರಹಿಸುವುದು ಕಷ್ಟಕರವಾಗಿದೆ. ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆ ನಿರಾತಂಕ ವಾತಾವರಣ ಒದಗಿಸುವುದು ಮಾಲೀಕರ ಹೊಣೆಗಾರಿಕೆಯೆಂಬುದು ಸರಿಯಾದದ್ದೆ ಆದರೆ ಅಲ್ಲಿ ಲೈಂಗಿಕ ಕಿರುಕುಳದಂತಹ ಪ್ರಕರಣಗಳು ನಡೆಸುವುದಾಗಲಾಗಲಿ ಆ ಬಗೆಯ ವರ್ತನೆಗಳಲ್ಲಿರುವ

[illegible]

[illegible]

[illegible]

[illegible]

[illegible]

ವ್ಯಕ್ತಿಯು ಕಂಡು ಬಂದಲ್ಲಿ ತಕ್ಷಣ ಅವರು ಅದನ್ನು ದೂರು ಸಮಿತಿಯ ಅಥವಾ ಪೋಲಿಸ್ ಇಲಾಖೆಯ ಗಮನಕ್ಕೆ ತರಬೇಕು ಪ್ರತಿವರ್ಷ ವ್ಯಕ್ತಿಗೂ ತನ್ನ ಕಂಪನಿಯ, ಕಛೇರಿಯ ಪ್ರತಿಷ್ಠೆಯ ಪ್ರಶ್ನೆಗಳು ಮುಖ್ಯವಾಗುತವೆ. ಈ ಬಗೆಯ ಘಟನೆಗಳು ತನ್ನ ಕಂಪನಿಯಲ್ಲಾಗಲಿ, ಕೆಲಸದ ಸ್ಥಳದಲ್ಲಾಗಲಿ ಘಟಿಸಿರುವುದು ತಿಳಿದು ಬಂದಲ್ಲಿ ಆ ಕಛೇರಿಯ ಬೆಳವಣಿಗೆಗೆ ಅದು ಅಡ್ಡಿಯನ್ನುಂಟು ಮಾಡುವ ಸಾಧ್ಯತೆಗಳು ಹೆಚ್ಚಾಗಿರುವುದರಿಂದ ಅಂತಹ ಪ್ರಕರಕರಣಗಳನ್ನು ಮುಚ್ಚಿಹಾಕುವ ಯತ್ನಕ್ಕೆ ಮುಂದಾಗುತ್ತಾರೆಯೇ ಹೊರತು ಮಹಿಳಾ ಬದುಕಿನ ಪ್ರಶ್ನೆಯೂ ಮುಖ್ಯವಾಗುವುದಿಲ್ಲ.

ಆತ್ಮಸ್ಥೈರ್ಯವನ್ನು ಹೊಂದಿರುವ ಮಹಿಳೆ ಆಕ್ರಮಣವನ್ನು ದೂರು ಸಮಿತಿಯ ಗಮನಕ್ಕೆ ತರಲು ಮುಂದಾದಾಗ ಅವಳಿಗೆ ಮುಂದಾಗುವ ಪರಿಸ್ಥಿತಿಯ ಪ್ರಮಾಣವು ಇನ್ನಷ್ಟು ತೀವ್ರವಾಗುವ ಸಂಭವಗಳು ಹೆಚ್ಚು. ಅಂತಹ ಸಂದರ್ಭಗಳಲ್ಲಿ ಹೊರಗಿನವರಿಂದ ತೊಂದರೆಗಳಾಗದಂತೆ ನೋಡಿಕೊಳ್ಳುವುದು ದೂರದ ಸಂಗತಿಯಾಗಿ ನಿಲ್ಲುತ್ತದೆ.

ಲೈಂಗಿಕ ಕಿರುಕುಳದ ಸಮಗ್ರ ಸ್ವರೂಪವನ್ನು ಕೆಲಸದ ಸ್ಥಳದಲ್ಲಿ ನಡೆಯುವ ಲೈಂಗಿಕ ಕಿರುಕುಳ ತಡೆ ಕಾಯ್ದೆಯು ಅನಾವರಣಗೊಳಿಸಿದೆ. ಲೈಂಗಿಕ ಕಿರುಕುಳವೆಂಬುದು ಕೇವಲ ಅತ್ಯಾಚಾರವಷ್ಟೇ ಅಲ್ಲ. ಅದು ದೈಹಿಕ ಸ್ಪರ್ಶ, ಲೈಂಗಿಕತೆಯನ್ನಾಧರಿಸಿದ ಹಾಸ್ಯ ಚಟಾಕಿಗಳವರೆಗೂ ವಿಸ್ತೃತವಾಗಿ ಈ ಕಾಯ್ದೆಯ ವ್ಯಾಖ್ಯಾನದಲ್ಲಿ ಕಂಡುಬರುತ್ತವೆ. ಮಹಿಳೆಯ ಒಟ್ಟು ಸಮಸ್ಯೆ ಅವಳ ಲೈಂಗಿಕತೆಯನ್ನು ಕೇಂದ್ರವಾಗಿರಿಸಿಕೊಂಡಿದ್ದಾಗಿದೆ ಎಂಬುದನ್ನು ಈ ಕಾಯ್ದೆಗಳು ಸ್ಪಷ್ಟಪಡಿಸುತ್ತವೆ.

ಮಹಿಳಾ ಹೊರಾಟಗಾರರ ಪ್ರಯತ್ನದ ಫಲವಾಗಿ ಕಾನೂನುಗಳು ಜಾರಿಯಾದ ನಂತರವೂ ಮಹಿಳಾ ಬದುಕಿಗೆ ಸಮರ್ಪಕವಾಗಿ ಉಪಯೋಗವಾಗುತ್ತಿದೆಯೇ ಎಂಬುದು ಸಹ ಅಷ್ಟೇ ಸವಾಲಿನ ಸಂಗತಿಯಾಗಿದೆ. ಪುರುಷ ಪ್ರಧಾನ ಸಮಾಜದ ಒಂದು ಚಿಕ್ಕ ಸಮಸ್ಯೆಯನ್ನು ಬಗೆಹರಿಸುವ, ಆ ಬಗೆಯ ಎಚ್ಚರಿಕೆಯನ್ನು ಸೂಚಿಸುವ ಪ್ರಧಾನಧಾರೆಯ ವ್ಯವಸ್ಥೆಯು ಮಹಿಳಾ ಸಮುದಾಯದ ಅಸ್ತಿತ್ವಕ್ಕೆ ದಕ್ಕೆಯುಂಟು ಮಾಡುವಂತಹ ಸಮಸ್ಯೆಗಳಿಗಾಗಿ ನಿರಂತರ ಹೋರಾಟ ಮಾಡಿ ಫಲಗಳನ್ನು ಪಡೆದಾಗಲು ಅದು ವಾಸ್ತವದಲ್ಲಿ ಸ್ತ್ರೀ ಸಮುದಾಯಕ್ಕೆ ಉಪಯುಕ್ತವಾಗುವ ಬದಲು ಪುರಷ ಪ್ರದಾನ ಸಮಾಜದ ಅಸ್ತ್ರವಾಗಿ ಬಳಕೆಯಗುತ್ತಿರುವುದು, ಪುರುಷ ಚಿಂತನೆಯ ಬೇರುಗಳ ಅಳವನ್ನು ಅಳಿಸಲು ಸಾಧ್ಯವಾಗದಂತಹ ಸಂದರ್ಭವು ಎದುರಾಗುತ್ತವೆ.

ಕಾನೂನಿನ ಸಮರ್ಪಕ ಅರಿವಿಲ್ಲದೆ ನಮ್ಮಲ್ಲಿ ಅನೇಕ ಮಹಿಳೆಯರು ಮಾನವ ಹಕ್ಕು ಮತ್ತು ಸೌಲಭ್ಯಗಳಿಂದ ವಂಚಿತರಾಗುತ್ತಾರೆ. ಅಲ್ಲದೇ ಅನೇಕ ಸಮಸ್ಯೆಗಳ ಸುಳಿಗೆ ಸಿಲುಕುತ್ತಾರೆ. ಆರ್ಥಿಕವಾಗಿ ನಷ್ಟವನ್ನು ಅನುಭವಿಸುತ್ತಾರೆ. ಒಮ್ಮೊಮ್ಮೆ ನಿಷ್ಪ್ರಯೋಜಕರಾಗಿ ಹತಾಶರಾಗಿ ಬದುಕಿಗೆ ಬೆನ್ನು ತಿರುಗಿಸುತ್ತಾರೆ. ಆದ್ದರಿಂದ ಜೀವನಕ್ಕೆ ಅಗತ್ಯವಾದ ಕಾನೂನಿನ ತಿಳುವಳಿಕೆ ಮಹಿಳೆಯರ ದೈನಂದಿನ ಬದುಕಿಗೆ ಆಸರೆಯಾಗುತ್ತದೆ. ಎದುರಾದ ಸಮಸ್ಯೆಯನ್ನು ಧೈರ್ಯದಿಂದ ಪರಿಹರಿಸಿಕೊಂಡು ಇರುವ ಸ್ಥಿತಿಗಿಂತ ಉತ್ತಮ ಬದುಕು ನಡೆಸಲು ಅವಕಾಶವಾಗುತ್ತದೆ.

ಉದಾಹರಣೆ ರೀತಿ

- ವಿಚಾರಣೆಯ ಅನೌಪಚಾರಿಕವಾಗಿರಬೇಕು.
- ದೂರು ನೀಡಿದವರನ್ನು ಗೌರವದಿಂದ ನಡೆಸಿಕೊಳ್ಳಬೇಕು
- ಕಿರುಕುಳದ ಬಗ್ಗೆ ಪ್ರತ್ಯಕ್ಷ ಸಾಕ್ಷಿಯನ್ನೊದಗಿಸುವಂತೆ ಒತ್ತಾಯಿಸಬಾರದು ಏಕೆಂದರೆ ಇಂಥ ಘಟನೆಗಳಲು ನಡೆಯುವುದು ಯಾರೂ ಇಲ್ಲದಿರುವಾಗ. ದೂರು ನೀಡಿದವರಿಗೆ ಮಾತಾನಡಲು ಮೊದಲು ಅವಕಾಶಕೊಡಬೇಕು.
- ಇಲ್ಲಿ ಅರೋಪವನ್ನು ಸಂದೇಹಕ್ಕೆ ಆಸ್ಪದವಿಲ್ಲದಂತೆ ರುಜುವಾತುಪಡಿಸುವ ಅಗತ್ಯವಿಲ್ಲ.
- ಇಡೀ ವಿಚಾರಣೆಯ ಪ್ರಕ್ರಿಯೆ ಮಾನವೀಯತೆಯಿಂದ ಕೂಡಿರಬೇಕು
- ವಿಚಾರಣೆಗೆ ಮುಂಚೆಯೇ ಕಿರುಕುಳ ನೀಡಿದವನನ್ನು ಅಥವಾ ತನನ್ನು ವರ್ಗಾಯಿಸುವಂತೆ ಕೇಳುವ ಹಕ್ಕು ದೂರು ನೀಡಿದ ಮಹಿಳೆಗಿರುತ್ತದೆ.
- ದೂರು ಸಮಿತಿ ನಡೆಸಿದ ವಿಚಾರಣೆ ಅಂತಿಮ ದೂರು ಸಮಿತಿಯ ವರದಿಯ ಆಧಾರದ ಮೇಲೆ ಶಿಸ್ತು ಪ್ರಾಧಿಕಾರ ಸರಿಯಾದ ಕ್ರಮಕೈಗೊಳ್ಳುತ್ತದೆ.
- ಲೈಂಗಿಕ ಕಿರುಕುಳದ ಪ್ರಕರಣಗಳಲ್ಲಿ ದೂರು ಸಮಿತಿಯೇ ವಿಚಾರಣಾ ಪ್ರಾಧಿಕಾರವಾಗಿದ್ದು, ಅದಕ್ಕೆ ಪರಮಾಧಿಕಾರವಿರುತ್ತದೆ.

ಇದರ ಉದ್ದೇಶ ಯಾವುದೇ ಖಾಸಗಿ ಅಥವಾ ಸರ್ಕಾರಿ ಸಂಸ್ಥೆ ಇಲಾಖೆಗಳಲ್ಲಿ ಮಹಿಳಾ ಉದ್ಯೋಗಿಗಳು ಸುರಕ್ಷಿತವಾಗಿ, ಅರೋಗ್ಯಕರವಾದ ವಾತವರಣದಲ್ಲಿ ಕೆಲಸ ಮಾಡಬೇಕೆಂಬುದಾಗಿದೆಯಲ್ಲದೆ, ಅಧಿಕಾರದ ದುರ್ಬಳಕೆ ಮಾಡಿಕೊಂಡು ಹೆಣ್ಣನ್ನು ಲೈಂಗಿಕ ದೃಷ್ಠಿಯಿಂದ ದುರುಪಯೋಗ ಮಾಡಿಕೊಳ್ಳಬಾರದೆಂಬುದಾಗಿದೆ. ಈ ಬಗ್ಗೆ ನೌಕರರಲ್ಲಿ ವಿಶೇಷ ಜಾಗೃತಿ ಮೂಡಿಸಬೇಕಾಗಿದೆ. ಮುಕ್ತ ಮನಸ್ಸಿನಿಂದ ಮನುಷ್ಯರು ಸಂವೇದನಾಶೀಲರಾಗಿ ಮಹಿಳೆಯರೊಂದಿಗೆ ವರ್ತಿಸಬೇಕಾಗಿರುತ್ತದೆ.

ಶೋಷಣೆ ಮನುಷ್ಯನ ಕೀಳು ಅಭಿರುಚಿಗಳಲ್ಲಿ ಒಂದು. ಹುಟ್ಟಿದ ಪ್ರತಿಯೊಬ್ಬ ಮಹಿಳೆಯು ಎಲ್ಲರಂತೆ ಬದುಕಲು ಅರ್ಹಳು ಎಂಬ ಸಾಮಾನ್ಯ ಜ್ಞಾನದ ಕೊರತೆ ಸ್ತ್ರೀ ಶೋಷಣೆಗೆ ಅನ್ವಯಿಸುತ್ತದೆ. ಸಮಾನತೆ ಸ್ವಾತಂತ್ರ್ಯ ಮುಂತಾದ ಹೇಳಿಕೆಗಳು ಬರಹದಲ್ಲಿ ಉಳಿದುಕೊಂಡು ಬರುತ್ತಿವೆ. ಹೆಣ್ಣನ್ನು ಮಾರುವುದು, ಲೈಂಗಿಕವಾಗಿ ಅಪಮಾನಗೊಳಿಸುವುದು, ಗುಲಾಮಳನ್ನಾಗಿ ನಡೆಸಿಕೊಳ್ಳುವುದು,

ಬಲವಂತದಿಂದ ಬಾಲೆಯರನ್ನು ಶೋಷಿಸುವುದು, ವರದಕ್ಷಿಣೆಗಾಗಿ ಪೀಡಿಸುವುದು, ಇಷ್ಟೆಲ್ಲ ಸಾಲದೆಂಬಂತೆ ಹೆಣ್ಣನ್ನು ಸುಡುವುದು, ಕೊಲ್ಲುವುದು ಮನುಷ್ಯನ ಕೀಳು ಪ್ರವೃತ್ತಿಯಾಗುತ್ತದೆ. ಕಾನೂನಿನ ಸಲಹೆ ಸಹಕಾರ ಇತ್ಯಾದಿ ಎಲ್ಲ ಪ್ರತಿಬಂಧಕಗಳಿದ್ದಾಗ್ಯು ಹೆಣ್ಣು ಈ ಮೇಲಿನಂತೆ ಶೋಷಣೆಗೆ ಒಳಗಾಗಿ ನೋಯುತ್ತಿದ್ದಾಳೆ. ಈ ಎಲ್ಲದರ ಪರಿಣಾಮದಿಂದಾಗಿ ಹೆಣ್ಣು ಮಕ್ಕಳ ಪಾಡನ್ನು ಸುಧಾರಿಸಲು ಸೇವಾ ಸಂಸ್ಥೆಗಳು ಹುಟ್ಟಿಕೊಳ್ಳುವುದು ಅನಿವಾರ್ಯವಾಯಿತು. ಪ್ರಜ್ಞಾವಂತರಾದರೆ ಇಂಥ ದುಷ್ಕೃತ್ಯಗಳು ನಡೆಯುವುದು ಸಾಧ್ಯವಾಗದು.[೨೦, ೨೧]

ಟಿಪ್ಪಣಿಗಳು

೧. ನಮ್ಮ ಮಾನಸ ನವೆಂಬರ್ ೨೦೦೮, ಪುಟ-೩,೪,

೨ ಆಗಸ್ಟ್-೨೦೦೫ ನಮ್ಮ ಮಾನಸ

೩ ಸೂಜಿದಾರ, ಸೆಪ್ಟೆಂಬರ್-೨೦೦೮

೪ ಮಹಿಳಾ ಸಂಪದ ೧೫-೪-೨೦೦೬ ದುಡಿಯುವ ಮಹಿಳೆ ಮತ್ತು ಅವಳ ಸಂಕಷ್ಟಗಳು

೫ ಡಾ. ಅಂಜಿನಪ್ಪ ಬಿ.ಎಚ್., ಮಹಿಳೆ ಮತ್ತು ದುಡಿಮೆ, ಪು.ಸಂ. ೨೪೩

೬ ಎಂ.ವಿ.ಆರ್. ರಾವ್, ಕಾರ್ಮಿಕರ ಕಾನೂನು ಪು.ಸಂ.೨

೭ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಸೂಜಿದಾರ ಏಪ್ರಿಲ್-ಜೂನ್, ೨೦೦೬-೦೭

೮ ಮಾರ್ಚ್ ೨೦೦೮ ಸೂಜಿದಾರ

೯ ಡಾ. ಅಂಜಿನಪ್ಪ ಬಿ.ಎಚ್., ಮಹಿಳೆ ಮತ್ತು ದುಡಿಮೆ ಪು.ಸಂ. ೨೪೦-೨೪೧

೧೦ ಕಾರ್ಮಿಕ ಕಾನೂನು ಎಂ.ಬಿ.ಆರ್. ರಾವ್, ಪು.ಸಂ.೨

೧೧ ಸೂಜಿದಾರ ಜೂನ್, ೨೦೦೯

೧೨ ೨೦೦೬ರ ವರದಿ ವಾಯ್ಸ್ ಆಫ್ ವುಮೆನ್

೧೩ ಮಾರ್ಚ್ ೨೦೦೮ ಸೂಜಿದಾರ

೧೪ ಸೂಜಿದಾರ, ಮಾರ್ಚ್, ೨೦೦೮

೧೫ ಸೂಜಿದಾರ ಸೆಪ್ಟಂಬರ್, ೨೦೦೬

೧೬ ಸೆಪ್ಟಂಬರ್, ೨೦೦೮, ಸೂಜಿದಾರ

೧೭ ಸೂಜಿದಾರ, ೨೦೦೫-೦೬, ಆಗಷ್ಟ್ ಪು.ಸಂ. ೬

೧೮ ಸೂಜಿದಾರ ಅಕ್ಟೋಬರ್ ೨೦೦೫

೧೯ ಮಹಿಳೆ ಮತ್ತು ಆರೋಗ್ಯ- ಕೆ. ಸರೋಜ, ಪು.ಸಂ.೯೮

೨೦ ಸೂಜಿದಾರ, ಜೂನ್, ೨೦೦೯, ಪು.ಸಂ. ೫

೨೧ ಸ್ತ್ರೀಯರ ಕಾನೂನುಗಳು ಮತ್ತು ಸಂಘಟನೆಗಳು : ಡಾ. ಹಾಲತಿ ಸೋಮಶೇಖರ್

ಅಧ್ಯಾಯ : ನಾಲ್ಕು

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಸ್ಥಿತಿಗತಿ ಹಾಗೂ ಸಮಸ್ಯೆಗಳು

೪.೦ ಪ್ರಸ್ತಾವನೆ

೪.೧ ಸಾಮಾಜಿಕ ಸ್ಥಿತಿಗತಿಗಳು

- ೪.೧.೧ ಕುಟುಂಬದಲ್ಲಿ ನಿರ್ವಹಿಸುವ ಜವಾಬ್ದಾರಿಗಳು
- ೪.೧.೨ ಗೃಹಿಣಿತ್ವ ಮಾದರಿ
- ೪.೧.೩ ಲೈಂಗಿಕ ಆರೋಪ

೪.೨ ಶೈಕ್ಷಣಿಕ ಸ್ಥಿತಿಗತಿಗಳು

೪.೩ ಆರೋಗ್ಯ ಸ್ಥಿತಿಗತಿಗಳು

- ೪.೩.೧ ಪೌಷ್ಠಿಕ ಆಹಾರ
- ೪.೩.೨ ರಕ್ತಹೀನತೆ
- ೪.೩.೩ ಋತುಚಕ್ರ
- ೪.೩.೪ ಸಂತಾನೋತ್ಪತ್ತಿ (ಗರ್ಭಧರಿಸುವಾಗ ಎದುರಿಸುವ ಸಮಸ್ಯೆಗಳು)
- ೪.೩.೫ ಶೌಚಾಲಯ ವ್ಯವಸ್ಥೆ
- ೪.೩.೬ ವಿಶ್ರಾಂತಿ ಸ್ಥಳ

೪.೪ ಆರ್ಥಿಕ ಸ್ಥಿತಿಗತಿಗಳು

- ೪.೪.೧ ಪ್ರಸ್ತಾವನೆ
- ೪.೪.೨ ಸಮಾನ ಕೆಲಸಕ್ಕೆ ಸಮಾನ ವೇತನ
- ೪.೪.೩ ಹೆಚ್ಚು ಶ್ರಮ, ಕಡಿಮೆ ಕೂಲಿ ಕೊಡುವುದು
- ೪.೪.೪ ಕೆಲಸದ ಅಭದ್ರತೆ ಮತ್ತು ಕೌಶಲ್ಯ ನಿರಾಕರಣೆ

೪.೫ ಸಮಸ್ಯೆಗಳು

- ೪.೫.೧ ಪ್ರೊಡಕ್ಷನ್ ಒತ್ತಡ
- ೪.೫.೨ ಹೆಚ್ಚಿನ ಅವಧಿ ಕೆಲಸ
- ೪.೫.೩ ಮಕ್ಕಳ ಪಾಲನೆ-ಪೋಷಣೆ ನಿರ್ವಹಿಸುವಲ್ಲಿ ಎದುರಿಸುವ ಸಮಸ್ಯೆ
- ೪.೫.೪ ಸಾರಿಗೆ ಸಮಸ್ಯೆ
- ೪.೫.೫ ಇನ್ನಿತರ ಸಮಸ್ಯೆಗಳು

ಅಧ್ಯಾಯ : ನಾಲ್ಕು

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಸ್ಥಿತಿಗತಿ ಹಾಗೂ ಸಮಸ್ಯೆಗಳು

ಪ್ರಸ್ತಾವನೆ

ಪ್ರಸ್ತುತ ಅಧ್ಯಯವು ಮಹಾಪ್ರಬಂಧದ ಮುಖ್ಯ ಅಧ್ಯಾಯಗಳಲ್ಲೊಂದು ನಾಲ್ಕು ಮತ್ತು ಐದನೇ ಅಧ್ಯಾಯಗಳು ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪಡೆದ ತಿಳುವಳಿಕೆಯ ಮಾಹಿತಿ ಮೂಲವಾಗಿದೆ. ಪ್ರಸ್ತುತ ಅಧ್ಯಾಯವು ಮುಂದಿನ ಅಧ್ಯಯನಕ್ಕೆ ಒಂದು ತಾತ್ವಿಕ ಚೌಕಟ್ಟನ್ನು ಒದಗಿಸುತ್ತದೆ. ಐದನೇ ಅಧ್ಯಾಯನದಲ್ಲಿ ಪ್ರಧಾನರಾಶಿಯ ವ್ಯವಸ್ಥೆಯು ಮಹಿಳೆಯನ್ನು ಅಸಂಘಟಿತ ವಲಯದಲ್ಲೆ ಉಳಿಯುವಂತೆ ಅದರಲ್ಲೂ ಗಾರ್ಮೆಂಟ್ಸ ಫ್ಯಾಕ್ಟ್ರಿಯಲ್ಲಿ ಬಿನ್ನ ಬಗೆಯ ಸಮಸ್ಯೆಗಳ ಪ್ರಕರಣಗಳನ್ನು ಆಯ್ಕೆಮಾಡಿಕೊಂಡು ವಿಶ್ಲೇಷಣೆಗೆ ಒಳಪಡಿಸಿದ್ದೇನೆ. ಪ್ರಸ್ತುತ ಗಾರ್ಮೆಂಟ್ಸ ಮಹಿಳೆ ಸಾಮಾಜಿಕ ಆರ್ಥಿಕೊತ್ತರ ಸ್ಥಿತಿಗಳನ್ನು, ಜೊತೆಗೆ ಸಮಸ್ಯೆಗಳ ಸ್ವರೂಪಗಳನ್ನು ಸ್ತ್ರೀವಾದಿ ದೃಷ್ಠಿಕೋನದಿಂದ ಆಧ್ಯಯನಕ್ಕೆ ಒಳಪಡುಸುತ್ತಿದ್ದೇನೆ. ಮೊದಲನೆ ಭಾಗದಲ್ಲಿ ಗಾರ್ಮೆಂಟ್ಸ ಮಹಿಳೆಯು ಫ್ಯಾಕ್ಟ್ರಿಗೆ ಬರುವುದಕ್ಕಿಂತ ಮುಂಚಿನ ಸಾಮಾಜಿಕ ಕೌಟುಂಬಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವುದರ ಮೂಲಕ ಸಂಶೋಧನೆಗೆ ಒಳಪಡಿಸುವುದರ ಜೊತೆಗೆ ಒಂದಾದ ನಂತರವು ಅವಳ ಸಮಸ್ಯೆಗಳ ಸ್ವರೂಪ, ಸ್ಥಾನಮಾನ ಬದಲಾವಣೆ ಆಗಿದೆಯಾ ಇಲವೋ ಎಂಬುದನ್ನು ಅಧ್ಯಯಕ್ಕೊಳಪಡಿಸುವುದು ಮೂಲಭೂತ ಉದ್ದೇಶವಾಗಿದೆ. ಪ್ರಭುತ್ವ ಮತ್ತು ಬಂಡವಾಳ ಶಾಹಿಗಳು ಮಹಿಳೆಯನ್ನು ಬದಕಲು ಬಿಡದೆ ಸಾಯಲು ಬಿಡದೆ ಇರುವ ವರ್ತಮಾನದ ತಂತ್ರಗಾರಿಕೆಯನ್ನು ತುಂಬಾ ಸೂಕ್ಷ್ಮವಾಗಿ ಕ್ಷೇತ್ರಕಾರ್ಯದ ಮಾಹಿತಿ ಮೂಲಕ ತಿಳಿಸಲು ಪ್ರಯತ್ನಿಸಿದ್ದೇನೆ. ಈ ಭಾಗದ ಬರಹವು ಮುಖ್ಯವಾಗಿ ಈ ಆಧ್ಯಯನದ ಭಾಗವಾಗಿ ಲಭಿಸಿದೆ ವಾಸ್ತವವಾಗಿ ಅನುಭವಿಸಿದ ಸಮಸ್ಯಗಳ ಸ್ವರೂಪವನ್ನು ಆಧರಿಸಿ ರೂಪ ಗೊಂಡಿದೆ. ಜೊತೆಗೆ ಬಳ್ಳಾರಿ ಮತ್ತು ಬೆಂಗಳೂರುಗಳಲ್ಲಿ servey ಸಮೀಕ್ಷೆ ಅಂಕಿ ಅಂಶಗಳನ್ನು ಪಡೆಯುದರ ಮೂಲಕ ಚರ್ಚೆಗೆ ಒಳಪಡಿಸುವುದು.

[illegible]

[illegible]

[illegible]

[illegible]

೪.೧ ಸಾಮಾಜಿಕ ಸ್ಥಿತಿಗತಿ

ಸಾಮಾಜಿಕತೆ ಎಂಬುದರಲ್ಲಿಯೇ ಬಹುದೊಡ್ಡ ತೊಡಕಿದೆ ಅಂತಲೇ ಹೇಳಬಹುದು. ಏಕೆಂದರೆ ಪುರುಷರ ಅಸ್ತಿತ್ವದೊಂದಿಗೆ ಮಹಿಳೆಯರ ಅಸ್ತಿತ್ವವನ್ನು ಗುರುತಿಸುವುದು. ಸನಾತನ ಕಾಲದಿಂದಲೂ ಬೆಳೆದು ಬಂದಿರುವುದೇ ಸಾಮಾಜಿಕತೆಯಾಗಿದೆ. ಪುರುಷ ಕೇಂದ್ರವಾಗಿ ಮಹಿಳೆ ಅವನ ಅಧೀನಳಾಗಿರುವ ಸಾಮಾಜಿಕತೆ ವಾಸ್ತವದಲ್ಲಿ ಇದೆ ಅಂತ ಹೇಳಬಹುದು. ವ್ಯವಸ್ಥೆಯಲ್ಲಿ ಸ್ತ್ರೀ ಪುರುಷರಿಬ್ಬರಿಗೂ ಸಮಾನವಾದ ಸ್ಥಾನಮಾನವನ್ನು ಒದಗಿಸದೆ. ಪ್ರತಿಯೊಂದು ವಿಷಯದಲ್ಲಿ ತಾರತಮ್ಯವನ್ನು ಅನುಭವಿಸುವ ಹಾಗೆ ಮಾಡಿದ ಪುರುಷ ಪ್ರಧಾನ ಸಮಾಜ ಮಹಿಳೆಯರ ಬದುಕಿನ ಅಸ್ತಿತ್ವದ ಎಲ್ಲ ನೆಲೆಗಳಲ್ಲಿಯೂ ಸಮಾಜಿಕ ಚೌಕಟ್ಟಿನ ಬಂಧನ ಅವಳನ್ನು ಗಿರಕಿ ಹೊಡೆಯುತ್ತಿರುತ್ತದೆ. ಸ್ತ್ರೀಯರನ್ನು ತುಳಿಯುವ ದಮನ ಮಾಡುವ ಶೋಷಣೆ ಪ್ರವೃತ್ತಿ ಪುರುಷರಲ್ಲಿ ಪರಂಪರಾಗತವಾಗಿ ಬೇರೂರಿರುವ ಹಾಗೆ ಮಾಡಿದೆ. ಪಿತೃ ಪ್ರಧಾನ ವ್ಯವಸ್ಥೆಯ ಮೌಲ್ಯಗಳನ್ನೆ ತುಂಬಿರುವ ಇಂತ ನೆಲೆಗಟ್ಟಿನಲ್ಲಿ ಮಹಿಳೆಯರು ಪುರುಷರೊಂದಿಗೆ ಸಮಾನವಾದ ಸ್ಥಾನಮಾನವನ್ನು ಹೊಂದಲು ಸಾಧ್ಯವಾಗುತ್ತಿಲ್ಲ. ಬದಲಾಗಿ, ಹೆಣ್ಣು ಅದಕ್ಕಿಂತ ಘೋರವಾದ ಧಾರಣ ದುಃಖವನ್ನು ಹೊರಬರಲಾರದಂತ ಸೆರೆವಾಸದ ಕಟ್ಟು ನಿಟ್ಟನ್ನು ಒಪ್ಪಿಕೊಳ್ಳಬೇಕಾಗಿದೆ. ಯಾವಾಗ ಹೆಣ್ಣು ಖಾಸಗೀಕರಣದ ಆಳ್ವಿಕೆಗೆ ಒಳಪಟ್ಟಳೋ ಅಲ್ಲಿಂದಲೇ ಲಿಂಗವ್ಯವಸ್ಥೆ ಮತ್ತು ಶ್ರೇಣಿಕೃತ ಸಮಾಜ ವ್ಯವಸ್ಥೆಯಲ್ಲಿ ಜಾತಿ, ವರ್ಗ, ವಿವಾಹ, ಕುಟುಂಬ, ಧರ್ಮ ಇನ್ನಿತರ ಸಂಸ್ಥೆಗಳಿಂದ ಗಂಡನಿಗಿಂತ ಹೆಣ್ಣಿಗೆ ಸಾಮಾಜಿಕ ನಿಯಾಮವಳಿಯ ಬಿಕಟ್ಟು ಹಾಕುತ್ತ ಸಂಪ್ರದಾಯಬದ್ದ ಬದ್ರ ಬುನಾದಿಯಲ್ಲಿ ಪುರುಷ ಶಾಹ ವ್ಯವಸ್ಥೆಯ ಆಶ್ರಯಕ್ಕನುಗುಣವಾಗಿ ದೈಹಿಕವಾಗಿ, ಮಾನಸಿಕವಾಗಿ, ಭಾವಾನಾತ್ಮಕವಾಗಿ ಪ್ರತಿಕ್ಷಣನೂ ತನ್ನ ನಿಯಂತ್ರಣದಲ್ಲಿರುವ ಹಾಗೆ ಮಾಡುತ್ತಿದೆ. ಒಂದು ವೇಳೆ ಹೆಣ್ಣು ಅದರಾಚೆಗೂ ಮೀರಿ ನಡೆದರೆ ಧರ್ಮ ಸಂಸ್ಕೃತಿಗಳ ಮೂಲಕ ಪಾಪ ಪುಣ್ಯಗಳ ಹಣೆಪಟ್ಟಿ ಕಟ್ಟಿ ದೈವಶಕ್ತಿ ಶಿಕ್ಷೆಕೊಡುತ್ತದೆ ಎಂದು ನಂಬಿಸಲಾಗಿದೆ.

ಪರುಷ ಪ್ರಧಾನ ವ್ಯವಸ್ಥೆಯು ಮಹಿಳಾ ಬದುಕಿನ ಸುತ್ತ ಹೆಣೆದಿರುವ ಸಾಮಾಜಿಕ ವ್ಯವಸ್ಥೆಗೆ ಗ್ರಾಂಸಿಯ ಅಧಿಕಾರ ಸಿದ್ದಾಂತವನ್ನು ವಿಸ್ತರಿಸಬಹುದು ಅಥವಾ ಹೋಲಿಸಬಹುದಾಗಿದೆ. ಈ ರೀತಿಯ ದಮನವು ಅವರ ಗಮನಕ್ಕೆ ಬಾರದಂತಹ ವಿಸ್ಮೃತಿಯನ್ನು ಪುರುಷ ಚಿಂತನೆಗಳು ಮಹಿಳಾ ಬದುಕಿನಲ್ಲಿ ಸೃಷ್ಟಿಸಿವೆ. ಸ್ವತಃ ಮಹಿಳೆಯೇ ಈ ದಮನಕ್ಕೆ ಒಳಗಾಗುವ ಪ್ರಕ್ರಿಯೆಯನ್ನು ಸಹ ಕಾಣಬಹುದಾಗಿದೆ.

ಲಿಂಗ ಅಸಮಾನತೆಯನ್ನು ರೂಢಿಸಿಕೊಂಡಿರುವ ಸಮಾಜದ ಪುರುಷರು ಮಹಿಳೆಯರನ್ನು ನಿರಂತರವಾಗಿ ತಮ್ಮ ಅಧೀನದಲ್ಲಿರುವಂತೆಯೇ ಮಾಡಿದೆ. ಅವಳ ಜೀವಿತದ ಬಗ್ಗೆ ಅವಳಿಗೆ ನಿರಂತರ ಅಸ್ಥಿರತೆ, ಆತಂಕ ಅರಕ್ಷಿತ ನೆಲೆಯನ್ನು ಸೃಷ್ಟಿಸಿ, ಭವಿಷ್ಯದ ದಾರಿ ಕಾಣಿಸದ ಹಾಗೆ, ಅವಳ ಸುತ್ತಣ ಪರಿಸರದ ಅರಿವೇ ಅವಳಿಗೆ ಬರದಂತೆ, ಎಲ್ಲ ಸಂಗತಿಗಳನ್ನು ಮುಚ್ಚಿ ಹಾಕುವ ಕೆಲಸವನ್ನು ಸಮರ್ಥವಾಗಿ ನಿಭಾಯಿಸಿದೆ ಅಂತಲೇ ಹೇಳಬಹುದು. ಸಾಮಾಜಿಕ ಸ್ಥಿತಿಯಿಂದಲೇ ನಿರ್ವಚನಗೊಳ್ಳುವ ಮಹಿಳಾ ಬದುಕು, ಅಲ್ಲಿನ ನಿರ್ದೇಶನಗಳಡಿಯಲ್ಲಿಯೇ ಸಾಗುತ್ತಿದ್ದು, ಮಹಿಳಾ ಸಂಬಂಧಿತ ಯಾವುದೇ ಸಮಸ್ಯೆಗಳು ಕಾಣಿಸಿಕೊಂಡರೂ ಮುಖ್ಯವಾಗಿ ಅದು ಲೈಂಗಿಕತೆ ಗೃಹಿಣಿತ್ವದ ಸಂಗತಿಯನ್ನೇ

[illegible]

ತಳಹದಿಯಾಗಿಸಿಕೊಂಡಿರುತ್ತದೆ. ಅವು ಮಹಿಳೆಯ ಕೌಟುಂಬಿಕ ಅಥವಾ ಸಾರ್ವಜನಿಕ ವಲಯದ ಸಮಸ್ಯೆಗಳಾಗಿರಗಬಹುದು. ಹೀಗೆ ಮಹಿಳೆಯು ನಾಲ್ಕು ಗೋಡೆಗಳ ಮಧ್ಯ ಬಂಧಿತಳಾಗಿದ್ದಾಗ ಅವಳ ಸಮಸ್ಯೆಗಳು ಕೌಟುಂಬಿಕ ನೆಲೆಗೆ ಮಾತ್ರ ಸೀಮಿತಗೊಂಡಿದ್ದವು. ಆದರೆ ಕಾಲಬದಲಾದಂತೆ ಜಾಗತಿಕರಣ ಪ್ರಕ್ರಿಯೆಯಿಂದ ಆರ್ಥಿಕ ಪರಿಸ್ಥಿತಿ ದುಡಿಯುವ ರಂಗಕ್ಕೆ ಪ್ರವೇಶಿಸಿದಳು. ಆದರೂ ಪುರಷಶಾಹಿ ವ್ಯವಸ್ಥೆ ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡರೂ, ಕೆಲಸ ನಿರ್ವಹಿಸುವಲ್ಲಿ ಸ್ವಲ್ಪ ವ್ಯತ್ಯಾಸ ಆದರೂ ಕೂಡ ಹೆಣ್ಣಿನ ಗುರಿಯಾಗಿಸುತ್ತದೆ.

೪.೧.೧ ಕುಟುಂಬದಲ್ಲಿ ನಿರ್ವಹಿಸಲೇಬೇಕಾದ ಜವಾಬ್ದಾರಿಗಳು

ಸಾಮಾಜಿಕ ಸಂಸ್ಥೆಗಳಲ್ಲಿ ಒಂದಾದ ಕುಟುಂಬವು ಸ್ತ್ರೀ ಪುರುಷರನ್ನು ಯಾವ ರೀತಿ ಇರಬೇಕು, ಕೌಟುಂಬಿಕ ಜವಾಬ್ದಾರಿಗಳನ್ನು ಹೇಗೆ ನಿರ್ವಹಿಸಬೇಕು, ಎಂಬುದನ್ನು ಹೇಳಿಕೊಡುತ್ತದೆ. ಪುರುಷ ಕುಟುಂಬದ ರಕ್ಷಣೆಗಾಗಿ ಮಹಿಳೆಯನ್ನು ಬಂಧಿಸಿಟ್ಟ ಕಾರಣದಿಂದಾಗಿ ಆಕೆ ಗೃಹಿಣಿಯೆಂಬ ಶಾಶ್ವತ ಸ್ಥಾನದಲ್ಲಿರುವಂತಾಗಿದೆ. ಹೀಗೆ ಮಹಿಳೆಗೆ ಸಂಬಂಧಿಸಿದಂತೆ ಯಾವುದೇ ಚರ್ಚೆಗಳು ಕುಟುಂಬದಿಂದಲೇ ಪ್ರಾರಂಭವಾಗಬೇಕಾಗುತ್ತದೆ. ಅದೇ ಅವಳ ಬದುಕು. ಆಕೆ ಹೆಣ್ಣಾಗಿ ಪುರುಷನಿಗೆ ಸಹಯಕವಾಗುವಂತೆ ವಿವಿಧ ಪಾತ್ರಗಳನ್ನು ಕರ್ತವ್ಯಗಳಾಗಿ ನಿರ್ವಹಿಸಲೇಬೇಕು. ವ್ಯವಸ್ಥೆ ಅವಳನ್ನು ಮಾನಸಿಕವಾಗಿ ಭಾವಾನತ್ಮಕವಾಗಿ ಕಾಯ, ವಾಚಾ ಮನಸಾ ದುಡಿಯುವ ಹಾಗೆ, ಅವಳಿಂದ ಅನೇಕ ನಿರೀಕ್ಷೆಗಳನ್ನು ಮಾಡುತ್ತದೆ. ಸ್ತ್ರೀಯರೆಂದರೆ ಕೇವಲ ಗಂಡಿನ ಕಾಮ ತೃಪ್ತಿಗಾಗಿ ಇರುವ, ಸಂತಾನವನ್ನು ಹೆತ್ತು ಹೊತ್ತು ಪಾಲಿಸುವವಳು ಎನ್ನುವುದು ಸಾಂಪ್ರದಾಯಿಕ ನಂಬಿಕೆಯಾಗಿದೆ. ಸಿಮಾನ್ ದ ಭೋವಾ "ಸ್ರೀಯಂದರೆ ಗರ್ಭಕೋಶ ಎಂಬ ಸಾಮಾಜಿಕ ತಿಳಿವಿನ ಬಗ್ಗೆ ಚರ್ಚೆಯಾಗಬೇಕು" ಎನ್ನುತ್ತಾರೆ. ಹೀಗಾಗಿ ಸ್ವಾತಂತ್ರ, ಅಸ್ತಿತ್ವವನ್ನು ಬದುಕನ್ನು ವಹಿಸಿಕೊಳ್ಳುವುದು ಕಷ್ಟವಾಗುತ್ತದೆ. ಲಿಂಗ ವ್ಯವಸ್ಥೆಯು ಶೋಷಕ ಶೋಷತೆಯರು ಕುಟುಂಬದಿಂದಲೇ ಹುಟ್ಟಿಬರುವಂತೆ ರೂಪಿತವಾಗಿದೆ. ಗಂಡಸಿನ ಸುಖಾನುಭವಕ್ಕಾಗಿ ತನ್ನನ್ನು ಸಿದ್ದಗೊಳಿಸಿಕೊಳ್ಳುವ ಹೆಣ್ಣು ಕುಟುಂಬದ ರಹಸ್ಯವನ್ನು ಕಾಪಾಡುತ್ತಾಳೆ. ಅವಳಿಗೆ ಮಾತ್ರ ಮಾನ ಮರ್ಯಾದೆ ಎಂಬ ಕಲ್ಪನೆ ಮೂಡಿಸುವುದರ ಮೂಲಕ ಅವಳನ್ನು ನಿಯಂತ್ರಿಸುತ್ತದೆ.

ಹೈದಿ ಹಾರ್ಟಮನ್ ಎಂಬ ಸ್ತ್ರೀವಾದಿ ಮಹಿಳೆಯರ ಲೈಂಗಿಕತೆ, ಸಂತಾನೋತ್ಪತ್ತಿಯ ಸಾಮರ್ಥ್ಯ, ಆರ್ಥಿಕ, ಸಂಪನ್ಮೂಲಗಳ ಮೇಲೆ ಕಟ್ಟುನಿಟ್ಟಾದ ನಿಯಂತ್ರಣ ಹೊಂದುವ ಮೂಲಕ ಮಹಿಳೆಯರನ್ನು ನಿಯಂತ್ರಿಸಲಾಗುತ್ತದೆ. ಇದು ಏಕಪತಿ ವಿವಾಹಪದ್ದತಿ, ಮಕ್ಕಳ ಶೋಷಣೆ, ಮನೆಗೆಲಸದ ಜವಾಬ್ದಾರಿ, ಪುರುಷರು ರಾಜಕೀಯ ಮತ್ತಿತರ ಸಂಸ್ಥೆಗಳಲ್ಲಿ ಅಧಿಕಾರ ಹೊಂದಿ ಮಹಿಳೆಯರು ತಮ್ಮನ್ನು ಆರ್ಥಿಕವಾಗಿ ಅವಲಂಬಿಸುವಂತೆ ಮಾಡುವುದು ಮುಂತಾದವುಗಳಲ್ಲಿ ವ್ಯಕ್ತವಾಗುತ್ತದೆ.[೧] ಕುಟುಂಬದಾಚೆಗೆ ಹೊರಪ್ರಪಂಚಕ್ಕೆ ಕಾಲಿಡುತ್ತಿದ್ದ ಮಹಿಳೆ ಅಧುನಿಕ ಪರಿಸರದ ಹಲವು ಹನ್ನೊಂದು ಅಡೆತಡೆಗಳು ಆಕೆಯನ್ನು ಕಾಡುತ್ತಿರುತ್ತವೆ. ಅವಿಭಕ್ತ ಕುಟುಂಬದಿಂದ ಇಂದಿನ ವಿಭಕ್ತ ಕುಟುಂಬದವರೆಗೂ ಮಹಿಳೆ ಒಂದಿಲ್ಲೊಂದು ಬಗೆಯ

ಶೋಷಣೆ, ದೌರ್ಜನ್ಯಕ್ಕೆ ಬಲಿಪಶುವಾಗುತ್ತ ನರಳುವುದನ್ನು ನೋಡಬಹುದು. ಕುಟುಂಬದ ಜವಾಬ್ದಾರಿ, ಉದ್ಯೋಗ ಹೊಣೆಗಾರಿಕೆಯಿಂದ ದ್ವಿಮುಖ ಪಾತ್ರಗಳನ್ನು ವಹಿಸುವ ಇಂದಿನ ಮಹಿಳೆಗೆ ವಿಚಿತ್ರ ಪರಿಸ್ಥಿತಿಗಳು ಎದುರಾಗುತ್ತವೆ.

ಉದಾ:- ಗಾರ್ಮೆಂಟ್ಸ ಮಹಿಳೆಯರನ್ನು ತೆಗೆದುಕೊಂಡಾಗ, ಅವಳು ಕುಟುಂಬ ಮತ್ತು ಕೆಲಸ ಎರಡು ಕಡೆ ನಿರ್ವಹಿಸುವಷ್ಟರಲ್ಲಿ ಜೀವನ ಪೂರ್ತಿ ಅನೇಕ ಕಷ್ಟದ ಸ್ಥಿತಿಯನ್ನು ಎದುರಿಸುವುದನ್ನೇ ಕಾಣಬಹುದಾಗಿದೆ. ಏಕೆಂದರೆ ಇಲ್ಲಿ ಕೂಡ ಕುಟುಂಬ ವ್ಯವಸ್ಥೆಯು, ಗಂಡ ಮಕ್ಕಳ ಈಡೀ ಮನೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಾಳೆ. ಆದರೆ ಗಂಡನಾದವನು ಹೆಚ್ಚಾನುಹೆಚ್ಚು ಹೆಂಡ್ತಿ ಮಕ್ಕಳ ಜವಾಬ್ದಾರಿಯನ್ನು ನಿರ್ವಹಿಸದೆ ಇರುವುದನ್ನು ಅನೇಕ ಕೇಸುಗಳಲ್ಲಿ ಕಾಣಬಹುದಾಗಿದೆ. ಮಹಿಳೆಯರು ಎಷ್ಟೆ ಕಷ್ಟ ಅನುಭವಿಸಿದರೂ ಕೂಡ ಸಹಜವಾಗಿ ಒಪ್ಪುವ ಮನೆ ಸ್ಥಿತಿಯನ್ನು ಕಾಣಬಹುದಾಗಿದೆ. ಗಂಡ ಕುಡುಕನಾಗಿರಲಿ ಅಥವಾ ಮೋಸಗಾರನಾಗಿರಲಿ ಮಕ್ಕಳ ಸಂಬಂಧವಾಗಿ ಸಹಿಸಿಕೊಂಡು ಜೀವನ ಮಾಡುತ್ತಾಳೆ.ಅಧ್ಯಯನದ ಸಂದರ್ಭದಲ್ಲಿ ಅನೇಕ ಮಹಿಳೆಯರು ಗಂಡ ಬಿಟ್ಟವರೆ ಸಿಕ್ಕಿರುತ್ತಾರೆ. ಎಷ್ಟೇ ಮಹಿಳೆಯರು ಬೌತಿಕವಾಗಿ ಗಂಡನನ್ನು ವಿರೋಧಿಸಿದರೂ ಮಾನಸಿಕವಾಗಿ, ಭಾವನಾತ್ಮಕವಾಗಿ ಒಪ್ಪಿಕೊಳ್ಳುವ ಮನಸ್ಥಿತಿಯನ್ನು ವ್ಯಕ್ತಪಡಿಸುವುದನ್ನು ಕಾಣಬಹುದಾಗಿದೆ. ಆದರೂ ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಎಷ್ಟೆ ಕಷ್ಟ ಆದರೂ ಸಹಿಸಿಕೊಂಡು ದುಡಿಯುತ್ತೆವೆ. ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಈ ವ್ಯವಸ್ಥೆ ಮೊದಲಿನಿಂದಲೂ ಸಾಮಾಜಿಕರಣ ಪ್ರಕ್ರಿಯೆಯು ಮಾಡಿ ಹೆಣ್ಣು ಮಕ್ಕಳಿಗೆ ಗಂಡನಾದವನು ಏನೆ ಮಾಡಿರಲಿ ಹೇಗೆ ಇರಲಿ ಕುಡುಕನಾಗಿರಲಿ, ಮೋಸಗರನಾಗಿರಲಿ, ದುಡಿಯಲಿ, ದುಡಿಯದಿರಲಿ ಒಟ್ಟಿನಲ್ಲಿ ಗಂಡನ ಜೊತೆ ಜೀವನ ಮಾಡಬೇಕು. ಅದು ಯಾವುದನ್ನು ಪ್ರಶ್ನಿಸದೆ, ಇವತ್ತಿನ ದಿನಗಳಲ್ಲಿ ಸ್ವಲ್ಪ ಮಟ್ಟಿಗೆ ಬದಲಾವಣೆಯಾಗುತ್ತಿರುವುದನ್ನು ಕಾಣಬಹುದಾದರೂ ಗಾರ್ಮೆಂಟ್ಸ್ ಮಹಿಳೆಯ ಸಂದರ್ಭದಲ್ಲಿ ಅಷ್ಟು ಬಗೆಯ ಉದಾಹರಣೆಗಳು ಕಂಡುಬರುವುದಿಲ್ಲ. ಏಕೆಂದರೆ ಪ್ರಸ್ತುತ ಅಧ್ಯಯನ ಸಂದರ್ಭದಲ್ಲಿ ಕೆಲವೊಂದು ಪ್ರಕರಣಗಳನ್ನು ನೋಡಿದಾಗ, ಗಂಡನಾದವನು ತನಗೆ ಬೇಕೆನಿಸಿದಾಗ, ತನ್ನ ಅವಶ್ಯಕತೆಯ ಪೂರೈಕೆಗಾಗಿ ಹೆಂಡ್ತಿಯನ್ನು ಬಳಸಿಕೊಳ್ಳುವುದನ್ನು ಕಂಡುಕೊಳ್ಳಬಹುದಾಗಿದೆ. ಹೆಂಡ್ತಿ ಮಕ್ಕಳ ಜವಾಬ್ದಾರಿಯನ್ನು ಹೊತ್ತುಕೊಳ್ಳದ ತನಗೆ ಲೈಂಗಿಕ ಸುಖ ಬೇಕೆಂದಾಗ ನಾಚಿಕೆ ಇಲ್ಲದೆ ಅತ್ತೆಗೆ, ಅಳಿಯನಿಗೆ ನಿಮ್ಮ ಮಗಳು ನನ್ನ ಜೊತೆ ಮಲ್ಕಣಕ್ಕೆ ವಲ್ಲು ಅಂತ ಹೇಳುತ್ತಿರುವುದು ಕಂಡುಬರುತ್ತದೆ. ಆದರೆ ಗಂಡನಾದವನು ಹೆಂಡ್ತಿ ಮಕ್ಕಳ ಜವಾಬ್ದಾರಿ ಹೊತ್ತುಕೊಳ್ಳದೆ ತನ್ನ ಸುಖವನ್ನು ಮಾತ್ರ ಯೋಚಿಸುವುದನ್ನು ವಿಶ್ಲೇಷಣೆಗೆ ಒಳಪಡಿಸಬಹುದು.

ವಿವಾಹದ ಸಂದರ್ಭವನ್ನು ಪರಿಗಣಿಸಿದಾಗಲು ಗಾರ್ಮೆಂಟ್ಸ ಮಹಿಳೆಯರು ಅನೇಕ ರೀತಿಯ ತಾರತಮ್ಯಕ್ಕೆ ಒಳಗಾಗುವುದರ ಜೊತೆಗೆ ಶೋಷಣೆಗೆ ಒಳಗಾಗುತ್ತಿರುವುದನ್ನು ಸಹ ಕಾಣಬಹುದಾಗಿದೆ. ಏಕೆಂದರೆ ಬಳ್ಳಾರಿ ನಗರದ ಗಾರ್ಮೆಂಟ್ಸ ಮಹಿಳೆಯರನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಫ್ಯಾಕ್ಟ್ರಿಗೆ ಬರುವಂತ ಹೆಚ್ಚಾನು ಹೆಚ್ಚು ಹುಡುಗಿಯರು ಮುಸ್ಲಿಂರಾಗಿದ್ದರು. ಆ ಹುಡುಗಿಯರಿಗೆ ಕೆಲಸದ ಆಯ್ಕೆಯಲ್ಲಾಗಲಿ, ವಿವಾಹದ ಆಯ್ಕೆಯಲ್ಲಾಗಲಿ ಯಾವುದೆ ರೀತಿ ಸ್ವಾತಂತ್ರ್ಯವಿರದೆ ಇರುವುದನ್ನು

ಕಾಣಬಹುದು. ಏಕೆಂದರೆ ಮುಸ್ಲಿಂ ಜನಾಂಗ ಕೇವಲ ವಂಶಬೆಳೆಸುವ ಉದ್ದೇಶದಿಂದ ಹೆಚ್ಚು ಹೆಚ್ಚು ಮಕ್ಕಳನ್ನು ಹೆರುತ್ತಾರೆ. ಇದರಿಂದ ಮಹಿಳೆಯರಿಗೆ ಯಾವ ರೀತಿ ದೈಹಿಕ ಮತ್ತು ಮಾನಸಿಕವಾಗಿ ಕಷ್ಟ ಆಗುತ್ತದೆ ಎಂಬುದನ್ನು ಯಾವುದು ಯೋಚಿಸುವುದಿಲ್ಲ. ಅನುಭಂದ ಒಂದರಿಂದ ಗೊತ್ತಾಗುತ್ತಿದೆ. ಫ್ಯಾಕ್ಟ್ರಿಗೆ ಬರುವಂತ ಹುಡುಗಿಯರೆಲ್ಲರೂ ಹದಿ ಮೂರು ವಯಸ್ಸಿನಿಂದ ಇಪ್ಪತ್ತು ವಯಸ್ಸಿನವರು ಮದುವೆ ಆಗಿ ಗಂಡನಬಿಟ್ಟು ಬಂದಿರುವರಾಗಿರುತ್ತಾರೆ. ಇದರಿಂದ ಬಡತನದ ಅನಿವಾರ್ಯ ಪರಿಸ್ಥಿತಿಗೆ ಫ್ಯಾಕ್ಟ್ರಿ ಕೆಲಸಕ್ಕೆ ಬಂದಿರುತ್ತೇವೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಅಲ್ಲದೆ ಬೆಂಗಳೂರು ಗಾರ್ಮೆಂಟ್ಸ ಮಹಿಳೆಯರನ್ನು ಕ್ಷೇತ್ರಧ್ಯಾಯನಕ್ಕೆ ಒಳಪಡಿಸಿದಾಗ, ರೇಖಾಳ ಪ್ರಕರಣವನ್ನು ಪರಿಗಣಿಸಿದಾಗ ಗೊತ್ತಾಗುತ್ತದೆ. ಅತಿ ಚಿಕ್ಕ ವಯಸ್ಸಿನಲ್ಲೆ ಏನೆಲ್ಲಾ ಅನಾಹುತಗಳು ಆಗಿರುವುದನ್ನು ನೋಡಬಹುದಾಗಿದೆ. ಆದರೆ ಈ ಸಮಾಜ ವ್ಯವಸ್ಥೆ ಮೊದಲಿನಿಂದಲೂ ತಂದೆ ತಾಯಿಗಳು ಮಗಳು ವಯಸ್ಸಿಗೆ ಬಂದಳು ಅಂದ್ರೆ ಸಾಕು ಅವಳಿಗೆ ಮದುವೆ ಮಾಡಿ ಮುಗಿಸಲೇಬೇಕು ಎಂಬ ಮನಃ ಸ್ಥಿತಿಯನ್ನು ಸೃಷ್ಟಿಸುತ್ತದೆ. ಆದರೆ ಮುಂದೆ ಅನಾಹುತ ಆದ ನಂತರವೇ ತಿಳಿದುಕೊಳ್ಳುತ್ತಾರೆ ಇದರಿಂದ ಮಹಿಳೆಯರಿಗೆ ಆಗಿರುವಂತ ಕಷ್ಟ ದುಃಖಗಳಿಗೆ ಕಡಿಮೆ ಮಾಡಲು ಸಾಧ್ಯವಾಗುತ್ತಾ ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸಬಹುದು.

೪.೧.೨ ಗೃಹಿಣಿತ್ವ ಮಾದರಿ

ಗೃಹಿಣಿತ್ವ ಮಾದರಿ ಹೆಚ್ಚು ಮಧ್ಯಮ ವರ್ಗದ ಮಹಿಳೆಯರಿಗೆ ಒಳಗೊಳ್ಳುವ ವ್ಯವಸ್ಥೆಯನ್ನು ಪುರುಷ ಪ್ರಧಾನ ವ್ಯವಸ್ಥೆ ಕಲ್ಪಿಸಿಕೊಟ್ಟಿದೆ ಅಂತನೇ ಹೇಳಬಹುದು. ಆದರೆ ಮೇಲ್ಜಾತಿ ಮಹಿಳೆಯರಲ್ಲಿ ಕಂಡು ಬಂದರೂ ಕೂಡ ಪ್ರಸ್ತುತ ಸಂಶೋಧನೆಯ ಸಂದರ್ಭದಲ್ಲಿ ಆ ಮಹಿಳೆಯರನ್ನು (ಶ್ರೀಮಂತ ವರ್ಗದಲ್ಲಿ) ಅಧ್ಯಯನಕ್ಕೆ ಒಳಪಡಿಸುತ್ತಿಲ್ಲ. ಏಕೆಂದರೆ ಗಾರ್ಮೆಂಟ್ಸ ಫ್ಯಾಕ್ಟ್ರಿಗೆ ಬರುವಂತರೆಲ್ಲರೂ ಹೆಚ್ಚಾನು ಹೆಚ್ಚು ಮಧ್ಯಮ ವರ್ಗ, ಕೆಳವರ್ಗ ಮತ್ತು ಬಡತನಗಿಂತ ಕಡಿಮೆ ಮಟ್ಟದವರು ಕೆಲಸಕ್ಕೆ ಬರುತ್ತಿದ್ದ, ಮಧ್ಯಮ ವರ್ಗದ ಮಹಿಳೆಗೆ ಅನ್ನದ ಪ್ರಶ್ನೆ ಮುಖ್ಯವಲ್ಲ ತನ್ನ ಸಂಸಾರದ ಸುಖ ಸೌಕರ್ಯಗಳನ್ನು ಹೆಚ್ಚಿಸಿಕೊಳ್ಳಲು ದುಡಿಯುತ್ತಾಳೆ. ಈ ವರ್ಗದ ಮಹಿಳೆಯರಲ್ಲಿ ಸಮಸ್ಯೆಗಳೇ ಹೆಚ್ಚು. ಇವಳು ಶೋಷಣೆ ಜೊತೆ ರಾಜಿ ಮಾಡಿಕೊಂಡು ಬದುಕುತ್ತಾಳೆ. ಮನೆ, ಜೊತೆಗೆ ಫ್ಯಾಕ್ಟ್ರಿ ಎರಡು ಕಡೆ ನಿಭಾಯಿಸಲು ಹೆಣಗಾಡಬೇಕಾಗುತ್ತದೆ. ಇವರಲ್ಲಿ ತಮ್ಮ ಮಾನ ಮರ್ಯಾದೆ, ಶೀಲವನ್ನು ಉಳಿಸಿಕೊಳ್ಳುವ ಹಂಬಲ ತೀವ್ರವಾಗಿರುವುದರಿಂದ ಬದುಕು ನಿರಂತರ ಹೋರಾಟ ಮಾಡುತ್ತಿರುತ್ತದೆ. ಪೂರ್ಣ ವೈಜ್ಞಾನಿಕ ಮನೋಭಾವವೂ ಇಲ್ಲದ ಸನಾತನಿಗಳು, ಆಗಿರದ ಮಾನಸಿಕ ಸ್ಥಿತಿ ಇವರದು ಈ ವರ್ಗದ ಸ್ತ್ರೀ ಪುರುಷರೇ 'ಗೋಸುಂಬೆತನ' ವನ್ನು ಪ್ರದರ್ಶಿಸುತ್ತಾರೆ. ಈ ಕೆಳವರ್ಗದಲ್ಲಿ ಮಹಿಳೆಯರು ಕೆಲವೊಂದು ಸಂದರ್ಭದಲ್ಲಿ ಲೈಂಗಿಕ ಕಿರುಕುಳ ಹಿಂಸೆಯನ್ನು ಸಹಿಸಿಯು ದುಡಿಯುವುದು ಅನಿವಾರ್ಯವಾಗಿಸಿದೆ. ಈ ವರ್ಗದಲ್ಲಿ ಹೆಚ್ಚು ಪ್ರತಿಭಟಿಸಿ ಮತ್ತು ಸಂಘಟಿಸಿ ಎರಡು ಶಕ್ತಿಯ ಕೊರತೆ ಎಲ್ಲಾ ವರ್ಗದ ಮಹಿಳೆಯರಲ್ಲಿ ಸಾಮಾನ್ಯ.

ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ಲೈಂಗಿಕತೆಯು ಒಂದಾಗಿದ್ದರೂ, ಅದು ಪುರುಷನಿಗೆ ಮಾತ್ರ ಸ್ವಚ್ಛಂದವಾಗಿ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಸಾಮಾಜಿಕ ಸಂದರ್ಭ ಅವನಿಗಿದೆ. ಆದರೆ ಮಹಿಳೆ ಮಾನ್ಯತೆ ಪಡೆಯಬೇಕಾದರೆ ಸಮಾಜದ ಜೀವಿಯಾಗಬೇಕಾದರೆ ವಿವಾಹ ಮುಖ್ಯ ಎಂದು ಈ ಪುರುಷ ಪ್ರಧಾನ ಸಮಾಜ ಹೇಳುತ್ತದೆ. ಶೀಲದ ಪರಿಕಲ್ಪನೆಯ ಹಿನ್ನಲೆಯಲ್ಲಿ ಗಾರ್ಮೆಂಟ್ಸ ಮಹಿಳೆಯ ಒಂದು ಸೂಕ್ಷ್ಮ ನೆಲೆ ಇಲ್ಲಿದೆ. ಧರ್ಮದ ನೆಲೆಗಟ್ಟಿನಲ್ಲಿ ನೋಡಿದರೆ ಮನುಕುಲದ ಸೃಷ್ಟಿ ಹಾಗೂ ಲಾಲನೆ ಪಾಲನೆ ಪೋಷಣೆಗಳನ್ನು ಹೊತ್ತು ಸ್ತ್ರೀಗೆ ಯಾವ ಧರ್ಮವು ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಿಲ್ಲ. ಅವಳಿಗೆ ನೀಡಿರುವ ಜವಾಬ್ದಾರಿಗಳು ಹಲವು. ಹೇರಿರುವ ನಿರ್ಬಂಧಗಳು ನೂರಾರು ಸ್ತ್ರೀಯರಿಗೆ ನಿಡಿದ್ದಂಥ ಹಕ್ಕುಗಳನ್ನು ಕೂಡ ಅವಳು ಸಂಸಾರ ಎಂಬ ಸಾಂಸ್ಕೃತಿಕ ಚೌಕಟ್ಟಿಗೆ ಮಾತ್ರ. ನಿರ್ಬಂಧವಂತೂ ಇಂದಿಗೂ ಆಚರಣೆಯಲ್ಲಿದ್ದು ಬಹುಪಾಲು ಸ್ತ್ರೀಯರು ಈ ಸಂಸ್ಕೃತಿಯ ಹೆಣ್ಣು, ಪರಪುರುಷನ ಜೊತೆ ಮಾತನಾಡಬಾರದು. ಪರಪುರುಷರನ್ನು ನೆನೆಪು ಮಾಡಿಕೊಳ್ಳುವುದು ಕೂಡ ಶೀಲಗೆಟ್ಟವಳು ಎನ್ನುವ ಪರಿಕಲ್ಪನೆ ಇದೆ. ಇಂತಹ ಪರಿಕಲ್ಪನೆಗಳು ನಮ್ಮ ಸಂಸ್ಕೃತಿಯಲ್ಲಿ ಇರುವಾಗ ಗಾರ್ಮೆಂಟ್ಸ ಮಹಿಳೆಯರು ದಿನದಲ್ಲಿ ಹತ್ತು ತಾಸಿಗಿಂತ ಹೆಚ್ಚು ಪರಪುರಷರ ಜೊತೆಯಲ್ಲಿ ಕೆಲಸ ಮಾತಡಬೇಕಾಗುತ್ತದೆ. ಆದರೆ ದಿನನಿತ್ಯ ಗಂಡನಾದವನೆ ಪ್ರತಿಕ್ಷಣ ಮಾನಸಿಕವಾಗಿ ಮಾಸ್ಟರ್ ಎಲ್ಲಿ ಮುಟ್ಟಿದ ಎಲ್ಲಿ ತಟ್ಟಿದನಾ ಅಂತಹ ನೂರೆಂಟು ಪ್ರಶ್ನೆಗಳನ್ನು ಫ್ಯಾಕ್ಟ್ರಿಯಿಂದ ಬಂದ ತಕ್ಷಣ ಹಿಂಸೆಮಾಡಲು ಶುರುಮಾಡುತ್ತಾನೆ. ಈ ಮಹಿಳೆಯರು ದಿನನಿತ್ಯ ಹೆಚ್ಚಿನ ಸಮಯ ನಿಂತುಕೊಂಡೆ ಕೆಲಸ ಮಾಡುವುದರಿಂದ ಕೆಲಸ ಮುಗಿಸಿ ರಾತ್ರಿ ಒಂದೊಂದು ಸಾರಿ ಎಂಟರಿಂದ ಒಂಬತ್ತು ಗಂಟೆ ಆಗುತ್ತದೆ. ಮತ್ತು ಮನೆಗೆ ಬಂದ ನಂತರ ಮನೆಕೆಲಸ ಮತ್ತು ಅಡಿಗೆ ಮಾಡಿಟ್ಟು ಮಲಗುವಷ್ಟರಲ್ಲಿ ೧೧-೧೨ ಗಂಟೆ ಆಗುತ್ತದೆ ಮತ್ತೆ ಬೆಳಿಗ್ಗೆ ೪-೫ಂಕ್ಕೆ ಎದ್ದು ಮನೆಗೆಲಸ ಮಾಡಿ ಕೆಲಸಕ್ಕೆ ಹೋಗುವ ಆತಂಕದಲ್ಲಿ ಇರುತ್ತೇವೆ. ಈ ರೀತಿ ಆತಂಕ ಇರುವಾಗ ಗಂಡನಿಗೆ ಲೈಂಗಿಕತೆಯಲ್ಲಿ ತೃಪ್ತಿ ನೀಡದ ಕಾರಣ ದಿನ ನಿತ್ಯ ನಮ್ಮಿಬ್ಬರ ವೈಮನಸ್ಸು ಜಗಳ, ಹಿಂಸೆ ಆಗ್ತಾನೆ ಇರುತ್ತದೆ. ಏಕೆ ಮಾಸ್ಟರ್ ಜೊತೆ ಮಾತ್ರ ಮುಟ್ಟಸ್ಕೂತಿ ಮಲ್ಕೈತಿ ಸಂಬಂದ ಬೆಳಿಸಿ ಅಂತ ಬಾಯಿ ಸಿಕ್ಕ ಹಾಗೆ ಬೈಯ್ಯುತ್ತಾರೆ. ದಿನನಿತ್ಯ ಈ ಹಿಂಸೆ ಪಡುವುದು ಸಹಜವಾಗಿ ಬಿಟ್ಟಿದೆ. ಕೆಲಸನೂ ಬಿಡುವುದಕ್ಕೆ ಆಗದೆ ಮನೆಯಲ್ಲಿ ದಿನ ನಿತ್ಯ ಗಂಡಿನ ಕಿರುಕುಳನು ತಾಳಕ್ಕಾಗದೆ ಅನುಭವಿಸುವ ನೋವು ಅಷ್ಟಿಷ್ಟಲ್ಲ.

ಇನ್ನು ಮದುವೆಯಾಗದೆ ಇರುವ ಮಹಿಳೆಯರು ಕೂಡ ಶೀಲದ ಬಗ್ಗೆ ಸ್ವಂತ ತಂದೆಯಾದವನು, ಅಣ್ಣಾನಾದವನು ಕೂಡ ಅನುಮಾನಿಸಿರುವ ಸಾಕಷ್ಟು ಉದಾಹರಣೆಗಳು ಸಿಕ್ಕಿವೆ. ಅಣ್ಣ ತಾನು ದುಡಿದು ಹಾಕದಿದ್ದರೂ, ನನ್ನ ಬಗ್ಗೆ ನನ್ನ ದುಡಿಮೆ ಬಗ್ಗೆ ಅನುಮಾನಿಸಿ ಜಗಳ ಮಾಡುತ್ತಾನೆ. ಗಾರ್ಮೆಂಟ್ಸ ಕೆಲಸಕ್ಕೆ ಹೋಗುವವರೆಗೆ ಸಮಾಜದಲ್ಲಿ ಯಾವುದೆ ಗೌರವವಾಗಲಿ ಸ್ಥಾನಮಾನವಾಗಲಿ ಯಾವುದೂ ಕೊಡುವುದಿಲ್ಲ. ಅಂತವರಿಗೆಲ್ಲ ಜನ ಕರೆಯುತ್ತಾರೆ. ಬೆಂಗಳೂರು ನಗರಗಳಲ್ಲಿ ಗಾರ್ಮೆಂಟ್ಸ ಫ್ಯಾಕ್ಟ್ರಿಯಲ್ಲಿ ಕೆಲಸಮಾಡುವ ಮಹಿಳೆಯರನ್ನು ಶ್ರೀಮಂತ ಶಾಹಿ ವ್ಯವಸ್ಥೆ ತೀರ ಅನುಮಾನ ದೃಷ್ಟಿಯಿಂದ ನಡತೆ ಸರಿಯಿಲ್ಲ ಅಂತ ಭಾವಿಸುತ್ತಿದ್ದರೆ. ನಮ್ಮನ್ನು ಯಾರು ಮದುವೆ ಮಾಡಿಕೊಳ್ಳುತ್ತಾರೆ ಎಂಬ ಹಲವಾರು ಪ್ರಶ್ನೆಗಳ ಆತಂಕದಲ್ಲಿ ಒದ್ದಾಡುತ್ತಿರುವುದನ್ನು ಕಾಣಬಹುದಾಗಿದೆ.

[illegible]

[illegible]

ಜನರಲ್ ಸೆಕ್ರೆಟರಿ (ಗಾರ್ಮೆಂಟ್ಸ ಕಾರ್ಮಿಕರ ಸಂಘ) ಮುತ್ತಪ್ಪ ಎಮ್ ರವರ ಪ್ರಕಾರ:

೧ ಮಹಿಳಾ ಕಾರ್ಮಿಕರು ೫೦% ರಷ್ಟು ಕೌಟುಂಬಿಕ ದೌರ್ಜನ್ಯಕ್ಕೆ ಒಳಪಡುವುದು.

೨.ಶೇ.ಇಪ್ಪತ್ತೈದರಷ್ಟು ಮಹಿಳೆಯರು ಒಂಟಿತನ, ವಿಧವೆಯರಾಗಿ ಗಂಡಬಿಟ್ಟವರಿಂದ ಕೆಲಸಮಾಡುತ್ತಿದ್ದಾರೆ.

೩. ಶೇ. ಹತ್ತರಷ್ಟು ಮಹಿಳೆಯರು ತಮ್ಮ ಗಂಡನಿಗೆ ಎರಡನೇ ಹೆಂಡತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

೪. ಶೇ. ಇಪ್ಪತ್ತರಷ್ಟು ಮಹಿಳೆಯರು ಮಾರಕ ರೋಗಗಳಿಂದ ಬಳಲುವಿಕೆಯಲ್ಲಿ ತಿಂಗಳಿಗೆ ಇಂತಿಷ್ಟು ಬಾರಿ ಲೈಂಗಿಕ ಪ್ರಕ್ರಿಯಯಲ್ಲಿ ಒಳಗಾಗುತ್ತವೆ ಎಂದು ಒಪ್ಪಂದ ಮಾಡಿಕೊಂಡಿರುತ್ತಾರೆ. (ಅಂತರ್ಜಾಲ ಮಾಹಿತಿ ಪ್ರಕಾರ)

ಅಂದ್ರೆ ಮಹಿಳೆಯರು ಒಟ್ಟಾರೆ ಪುರುಷ ಪ್ರಧಾನ ವ್ಯವಸ್ಥೆ ಇಂತಿಷ್ಟು ಶೇಕಡಾ ಇಂತಿಂಷ್ಟು ಶೋಷಣೆ ವ್ಯವಸ್ಥೆಯಲ್ಲಿ ಒಳಗಾಗುವ ಹಾಗೆ ರೂಪಿಸಿರುವುದನ್ನು ಕಾಣಬಹುದಾಗಿದೆ. ಅವರಿಗೆ ಇಷ್ಟವಿರಲಿ ಇರದೆ ಇರಲಿ ಅಸಹಾಯಕರಾಗಿ ಅನಿವಾರ್ಯವಾಗಿ ಯಾವುದೊ ನಿರ್ಬಂದಕ್ಕೆ ಕಟ್ಟುಬಿದ್ದು ಕೆಲಸ ನಿರ್ವಹಿಸುವುದನ್ನು ಕಾಣಬಹುದು.

೪.೧.೩ ಲೈಂಗಿಕ ಆರೋಪ

ಗಾರ್ಮೆಂಟ್ಸ ಮಹಿಳೆ ಪಾರ್ವತಿಯನ್ನು ಸಂದರ್ಶಿಸಿದಾಗ ಈ ಗಾರ್ಮೆಂಟ್ಸ ಕೆಲಸಕ್ಕೆ ಬಂದಿದ್ದಕ್ಕೆ ನನ್ನ ಜೀವನ ಬೀದಿಪಾಲಾಗಿದೆ. ಏಕೆಂದರೆ ನನ್ನ ಅತ್ತೆ ಮಾವ ಗಂಡ ಎಲ್ಲರೂ ನಡತೆ ಬಗ್ಗೆ ಅನುಮಾನಿಸಿ ಮನೆಗೆ ಸೇರಿಸಿಕೊಳ್ಳದೆ ಹೊರಹಾಕಿದ್ದಾರೆ. ಆರ್ಥಿಕವಾಗಿ ಕೌಟುಂಬಿಕ ಜವಾಬ್ದಾರಿಯನ್ನು ನಿರ್ವಹಿಸಲು ಸಾಕಾಗದೆ ಇದ್ದಕ್ಕೆ ದುಡಿಯಲಿಕ್ಕೆ ಬಲವಂತವಾಗಿ ಕಳಸಿಕೊಟ್ಟರು. ಆದರೂ ನ್ಯಾಯಯುತವಾಗಿ ಪ್ರಾಮಾಣಿಕವಾಗಿ ಇದ್ದಿನಿ ಅಂತ ಹೇಳಿದರು ಕೂಡ, ನನ್ನ ಬಗ್ಗೆ ಅನುಮಾನಿಸುತ್ತಿದ್ದರು ಕೊನೆಗೆ ಒಂದು ದಿನ ಮಾಸ್ಟರ್ ಜೊತೆ ಮಾತಾಡುವುದನ್ನು ನೋಡಿದರು ಅವರು ಮೈಕೈ ಮುಟ್ಟಿ ಮಾತಾಡುವುದನ್ನು, ಅಶ್ಲೀಲವಾಗಿ ಬೈಯ್ಯುವುದನ್ನು ಕಂಡದ್ದಕ್ಕೆ, ಗಂಡ, ನಿನ್ನ ಜೊತೆಗೆ ಅವನದೇನು ಸಂಬಂಧ ಅಂತ ಹೇಳಿ ಸಿಕ್ಕ ಪಟ್ಟೆ ಹೊಡೆದು ಹೊರ ಹಾಕಿದರು. ಪುರುಷ ಸಂಸ್ಕೃತಿಯ ದ್ಯೋತಕವಾದ ಸಾಮಾಜಿಕ ನಿಯಮ ವ್ಯವಸ್ಥೆ ಸ್ತ್ರೀಯನ್ನು ಬೊಟ್ಟುಮಾಡಿ ತೋರಿಸುತ್ತದೆಯೇ ವಿನಾಃ ಪುರುಷನನ್ನು ಹೊಣೆಗಾರ ಎಂದು ದೊಷಿಸುವ ಸಂಭವ ಬಹು ಕಡಿಮೆ ಹೆಜ್ಜೆ ಹೆಜ್ಜೆಗೂ ಹೆಣ್ಣನ್ನುನಿಂದಿಸುವ ಶೋಷಿಸುವ ವ್ಯವಸ್ಥೆಯಲ್ಲಿ ಮಹಿಳೆ ಮಾತ್ರ ತಪ್ಪಿತಸ್ಥಳು ಎನ್ನುವಂತಹ ಪರಿಸ್ಥಿತಿ ಏರ್ಪಡಿಸುತ್ತದೆ. ಹೀಗೆ ಮೌಲ್ಯ ವ್ಯವಸ್ಥೆಯಲ್ಲಿ ಬರುವ ಪುರಷ ಶಾಹಿಯು ಲೈಂಗಿಕತೆಯ ಬಗ್ಗೆ ಅದರಲ್ಲೂ ಮಹಿಳಾ ಲೈಂಗಿಕತೆಯ ಬಗ್ಗೆ ಕಟ್ಟಿ ಕೊಟ್ಟ ಮೌಲ್ಯಗಳೂ ಶೀಲವು ಪ್ರಮುಖ ಪಾತ್ರವಹಿಸುತ್ತವೆ. ನಿಸರ್ಗದ ವಿನ್ಯಾಸದಲ್ಲಿ ಜೀವನದ ಪುನರತ್ಪಾದನೆ ಆಗಬೇಕು. ಎನ್ನುವ ಕಾರಣದಿಂದಲೇ ಗಂಡು ಹೆಣ್ಣಿನ

ಮಧ್ಯೆ ಲೈಂಗಿಕ ಆಕರ್ಷಣೆ ರೂಪಿತವಾಗಿದೆ. ಶೀಲ ಪಾತಿವ್ರತ್ಯೆ, ಬಹುಹಿಂದಿನಿಂದಲೂ ಪಾಲಿಸಿಕೊಂಡು ಬಂದಿದ್ದಾಗಿದೆ.

4.2 ಶೈಕ್ಷಣಿಕ ಸ್ಥಿತಿಗತಿ

ಶಿಕ್ಷಣ ಎನ್ನುವುದು ವ್ಯಕ್ತಿ ಜೊತೆಗೆ ಇಡೀ ದೇಶದ ಪ್ರಗತಿಗೆ ಕಾರಣವಾಗಿರುವಂಥ ಅತ್ಯಂತ ಪ್ರಮುಖ ಹಾಗೂ ಪ್ರಬಲ ಸಾಧನ ಎಂದರೂ ತಪ್ಪಾಗಲಾರದು. ಆದರೆ ಭಾರತೀಯ ಸಮಾಜದಲ್ಲಿ ಶತ ಶತಮಾನಗಳಿಂದಲೂ ಮಹಿಳೆಯರಿಗೆ ಲಭ್ಯವಿರುವ ಶಿಕ್ಷಣಾವಕಾಶಗಳು ಪುರುಷನಿಗೆ ಹೋಲಿಸಿದಾಗ ಕಡಿಮೆ. ಹಿಂದಿಗಿಂತ ಇಂದಿನ ದಿನಗಳಲ್ಲಿ ಮಹಿಳೆಯರ ಶಿಕ್ಷಣ ಮಟ್ಟ ಸಂಖ್ಯಾತ್ಮಕ ದೃಷ್ಟಿಯಲ್ಲಿ ಹೆಚ್ಚಳವಾದದ್ದು ನಿಜವಾದರೂ, ಈ ಹೆಚ್ಚಿರುವ ಅವಕಾಶಗಳ ಹಂಚಿಕೆಯಲ್ಲಿ ಸಮಾನತೆ ಕಂಡು ಬರುತ್ತಿಲ್ಲ. ಇಂದಿಗೂ ಭಾರತದ ಒಟ್ಟು ಮಹಿಳಾ ಜನಸಂಖ್ಯೆಯಲ್ಲಿ ಶೇಕಡಾ 39.47ರಷ್ಟು ಮಾತ್ರ ಸಾಕ್ಷರರಾಗಿದ್ದು ಇನ್ನುಳಿದ ಮಹಿಳೆಯರ ಪಾಲಿಗೆ ಶಿಕ್ಷಣವನ್ನು ಪಡೆಯುವ ಅವಕಾಶ ದೊರೆಯದಿರುವುದು, ಆಹಾರದಷ್ಟೇ, ಮೂಲಭೂತ ಅವಶ್ಯಕತೆಯಾದ ಶಿಕ್ಷಣವನ್ನು ಪಡೆಯುವುದರಲ್ಲಿ ಎಷ್ಟರ ಮಟ್ಟಿನ ಲಿಂಗತಾರತಮ್ಯ ಅಡಕವಾಗಿದೆ ಎಂಬುದು ತಿಳಿದುಬರುತ್ತದೆ.

ಶತಮಾನಗಳಿಂದ ಹೆಣ್ಣಿನ ಬದುಕನ್ನು ವಿವಾಹ ಮತ್ತು ತಾಯ್ತನಗಳೆಂಬ ಎರಡು ಸಂಕೋಲೆಗಳಲ್ಲ ಬಂದಿಸಿ ಆಕೆಗೆ ಶಿಕ್ಷಣವನ್ನು ಪಡೆಯುವ ಹಕ್ಕನ್ನು ನಿರಾಕರಿಸುತ್ತಾ ಬಂದಿರುವ ಸಾಮಾಜಿಕ ಮೌಲ್ಯಗಳು ಆಕೆಯನ್ನು ಅಜ್ಞಾನದ ಕೂಪದಲ್ಲಿ ಕೆಡವಲು ಬಹು ಆಸಕ್ತಿಯನ್ನು ತೋರಿವೆ. ಹೆಣ್ಣಿಗೆ ಶಿಕ್ಷಣ ವರ್ಜ್ಯ ಎಂಬ ಮಿಥ್ಯೆಯನ್ನು ಸೃಷ್ಟಿಸಿ, ಆ ಮಿಥ್ಯಗೆ ಧಾರ್ಮಿಕ ಬೆಂಬಲವೂ ಇದೆಯೆಂಬ ಪ್ರಚಾರವನ್ನು ನೀಡಿ, ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣನ್ನು ಬಹುಕಾಲ ಜ್ಞಾನಾರ್ಜನೆಯ ಪ್ರಕ್ರಿಯೆಯಿಂದಲೇ ದೂರವಿಟ್ಟಿದ್ದರು. ಹೆಣ್ಣಾದವಳು ಬಾಲ್ಯದಲ್ಲಿ ತಂದೆಯ ಪೋಷಣೆಯಲ್ಲೂ ವಯಸ್ಕಳಾದಾಗ ಪತಿಯ ಆಸರೆಯಲ್ಲೂ, ವೃದ್ಧಾಪ್ಯದಲ್ಲಿ ಮಗನ ಪೋಷಣೆಯಲ್ಲೂ ಇರಬೇಕೆಂದು ಪ್ರತಿಪಾದಿಸಿ "ನ ಸ್ತ್ರೀ ಸ್ವಾತಂತ್ರ್ಯ ಅರ್ಹತಿ" "ಎಂದು ಮನುವಿನ ಸ್ತ್ರೀ ಸ್ವಾತಂತ್ರ್ಯ ವಿರೋಧಿ ಮೌಲ್ಯಗಳು ಇಂದಿಗೂ ಸಂಪೂರ್ಣವಾಗಿ ನಶಿಸಿಹೋಗಿಲ್ಲವೆಂಬುದು ಸಮಕಾಲೀನ ಸಮಾಜದ ವಿಪರ್ಯಾಸಗಳಲ್ಲಿ ಒಂದು. ಹೆಣ್ಣು ಶಿಶುವಿನ ಜನನವನ್ನೇ ಒಂದು ಶಾಪವೆಂದು ತಿಳಿದಿದ್ದ ಪೋಷಕರು, ಅವಳಿಗೆ ಜ್ಞಾನವನ್ನು ಒದಗಿಸಲು ಯಾವ ಆಸಕ್ತಿಯನ್ನು ತೋರಿರಲಿಲ್ಲ. ಸಣ್ಣ ವಯಸ್ಸಿನಲ್ಲೇ ಹೆಣ್ಣು ಮಕ್ಕಳನ್ನು ವಿವಾಹವೆಂಬ ನೊಗಕ್ಕೆ ಕಟ್ಟಿ, ಅವರನ್ನು ಸಾಂಸರಿಕ ಬಂಧನಗಳಲ್ಲಿ ಕಟ್ಟಿಹಾಕುತ್ತಿದ್ದರು. ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನೀಡಿದರೂ, ಅದು ಅವರು ಮನೆಯಲ್ಲಿ ನೆರವೇರಿಸುವಂಥ ಕೆಲಸಗಳಿಗೆ ಸಂಬಂಧಿಸಿದ್ದಾಗಿದೆ ಹೊರತು ಅವರಿಗೆ ಪ್ರಾಪಂಚಿಕ ಜ್ಞಾನವನ್ನು ನೀಡುವುದಾಗಲಿ, ಅವರ ಬದುಕಿನ ಮೇಲೆ ನಿಯಂತ್ರಣವನ್ನು ಸಾಧಿಸುವುದಕ್ಕಾಗಲಿ ಅವರಿಗೆ ಆ ಶಿಕ್ಷಣ ನೆರವಾಗುತ್ತಿರಲಿಲ್ಲ. ಹೆಣ್ಣಿನ ಪ್ರಪಂಚ ಮನೆಗೆ ಮೀಸಲು, ಅವಳ ಜೀವನದ ಪ್ರಮುಖ ಗುರಿಗಳೆಂದರೆ ಹೆಂಡತಿಯಾಗಿ ತಾಯಿಯಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸುವುದು ಎಂಬ ನಂಬಿಕೆ ಇಂದಿಗೂ ಜೀವಂತವಾಗಿರುವಾಗ ಶತಮಾನಗಳ ಹಿಂದೆ ಇನ್ನಷ್ಟು ಪ್ರಬಲವಾಗಿತ್ತು ಎಂಬುದನ್ನು ಊಹಿಸಬಹುದು.

[illegible]

[illegible]

[illegible]

[illegible]

[illegible]

ಕುಟುಂಬವೇ ಲಿಂಗಾಧಾರಿತ ಶೈಕ್ಷಣಿಕ ಅಸಮಾನತೆಯನ್ನು ಸೃಷ್ಟಿಸುವ ಮೊದಲನೆಯ ಮೂಲ ಎಂದರೂ ತಪ್ಪಾಗಲಾರದು. ಕುಟುಂಬ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿ ಇರಲಿ ಅಥವಾ ಇರದೇ ಇರಲಿ ಪೋಷಕರು ಹೆಣ್ಣು ಮಕ್ಕಳ ಶಿಕ್ಷಣಕ್ಕಿಂತ ಅವರ ವಿವಾಹಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವಂಥ ಪರಿಸ್ಥಿತಿ ಇರುವಾಗ, ಬಡ ಕುಟುಂಬಗಳ ಪರಿಸ್ಥಿತಿಯ ಬಗ್ಗೆ ಪ್ರತ್ಯೇಕವಾಗಿ ಹೇಳಬೇಕಿಲ್ಲ. ಗಂಡು ಮಗು ಭವಿಷ್ಯದ ಎಲ್ಲಾ ಸಮಸ್ಯೆಗಳಿಗೂ ಪರಿಹಾರವನ್ನು ನೀಡಬಲ್ಲಂಥವನು ಎಂಬ ಭ್ರಮೆಗೆ ಬಲಿಯಾಗಿ, ತಮಗಿರುವ ನಿಯಮಿತ ಸಂಪನ್ಮೂಲಗಳನ್ನು ಗಂಡು ಮಕ್ಕಳ ಶಿಕ್ಷಣದ ಮೇಲೆ ವ್ಯಯ ಮಾಡುವ ಕುಟುಂಬಗಳು ಅನೇಕ ಇವೆ. ಕುಟುಂಬದ ಆರ್ಥಿಕ ಸಂಪನ್ಮೂಲಗಳು ಸೀಮಿತವಾಗಿದ್ದಾಗ, ಆ ಸಂಪನ್ಮೂಲಗಳನ್ನು ಮಗನ ಭವಿಷ್ಯಕ್ಕಾಗಿ ವ್ಯಯಿಸುವ ಪೋಷಕರು ಅನೇಕರಿದ್ದಾರೆ. ಮಗಳು ವಿವಾಹನಂತರ ಪರರ ಮನೆಗೆ ಹೋಗುವವಳು, ಅವಳು ಕೆಲಸಕ್ಕೆ ಸೇರಿದರೂ ಆಕೆಯ ಗಳಿಕೆಯ ಮೇಲಿನ ಅಧಿಕಾರ ಆಕೆಯ ಪತಿ ಅಥವಾ ಆಕೆಯ ಮನೆಯವರಿಗೆ ಸೇರಿರುತ್ತದೆ. ತಮಗೆ ಈ ಶಿಕ್ಷಣದಿಂದ ಯಾವುದೇ ಬಗೆಯ ಪ್ರಯೋಜನವಿಲ್ಲ ಎನ್ನುವ ವಾದ ಇವರದ್ದು. ಪುರುಷ ಪ್ರಧಾನ ಮೌಲ್ಯಗಳಿಂದ ಆವೃತ್ತವಾಗಿರುವ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ವಿವಾಹವೇ ಹೆಣ್ಣಿನ ಜೀವನದ ಪರಮಗುರಿ. ಆಕೆಯ ಬದುಕನ್ನು ಕುರಿತ ನಿರ್ಧಾರಗಳನ್ನು ತೆಗೆದುಕೊಳ್ಳುವ ಪರಮಾಧಿಕಾರ ಆಕೆಯ ಪತಿಗೆ ಹೊರತು ಇತರರಿಗಲ್ಲ ಎನ್ನುವ ನಂಬಿಕೆಯೇ ಹೆಚ್ಚಾಗಿ ಚಾಲ್ತಿಯಲ್ಲಿರುವದರಿಂದ ಸ್ತ್ರೀ ಶಿಕ್ಷಣಕ್ಕೆ ದೊರೆಯಬೇಕಾದಂಥ ಆದ್ಯತೆ ದೊರೆಯುತ್ತಿಲ್ಲ, ಮಗಳಿಗೆ ಮದುವೆ ಮಾಡಿ ತಮ್ಮ ಜವಾಬ್ದಾರಿಯನ್ನು ಕಳೆದುಕೊಂಡರೆ ಸಾಕೆನ್ನುವ ಪೋಷಕರಿಗೆ, ಅನೇಕ ಬಾರಿ ತಾವು ಮಾಡಿದ ತಪ್ಪಿನ ಅರಿವಾಗುವುದು ತಮ್ಮ ಮಗಳ ಪಾಲಿಗೆ ಆ ವಿವಾಹ ಎನ್ನುವುದು ಅಹಿತಕವಾದ ಅನುಭವವಾಗಿ ಪರಿಣಾಮಿಸಿದಾಗ ಮಾತ್ರ ಗೊತ್ತಾಗುತ್ತದೆ.

ಆಹಾರ ನೀರು ವಸತಿ ಮುಂತಾದವು ಹೇಗೆ ಮೂಲಭೂತ ಅವಶ್ಯಕತೆಗಳೋ ಹಾಗೆಯೇ ಶಿಕ್ಷಣವೂ ಒಂದು ಜೀವನಾಧಾರ ಎನ್ನುವುದರಲ್ಲಿ ಯಾವುದೇ ಬಗೆಯ ಸಂದೇಹ ಇಲ್ಲವಾದರೂ ವಾಸ್ತವ್ಯದಲ್ಲಿ ಹಾಗಾಗುತ್ತಿಲ್ಲ. ಹೆಣ್ಣು ಮಕ್ಕಳ ಬಗ್ಗೆ ನಕರಾತ್ಮಕ ಭಾವನೆಗಳು ತುಂಬಿ ತುಳುಕಾಡುತ್ತಿರುವ ಈ ವ್ಯವಸ್ಥೆಯಲ್ಲಿ ಹೆಣ್ಣು ಓದಿ ಏನು ಮಾಡಬೇಕಾಗಿದೆ. ಅವಳು ಎಂದಾದರೂ ಗೃಹಿಕೃತ್ಯದ ಜವಾಬ್ದಾರಿಗಳನ್ನು ತಾನೇ ನಿರ್ವಹಿಸಬೇಕಾದದ್ದು ಎನ್ನುವವರು ಇಂದಿಗೂ ಬಹುಮಂದಿ ಇದ್ದಾರೆ. ಓದಿ ಆಡಿ ನಲಿದು ಬೆಳೆಯಬೇಕಾದ ಹೆಣ್ಣು ಮಗು ತನಗಿಂತ ವಯಸ್ಸಿನಲ್ಲಿ ಚಿಕ್ಕ ಮಗುವೊಂದನ್ನು ಕಂಕುಳಲ್ಲಿ ಎತ್ತಿಕೊಂಡು, ತಲೆಯ ಮೇಲೆ ಅಥವಾ ಮತ್ತೊಂದು ಕಂಕುಳಲ್ಲಿ ನೀರಿನ ಕೊಡವೊಂದನ್ನಿಟ್ಟುಕೊಂಡು ಓಡಾಡುವ ದೃಶ್ಯ ಅನೇಕ ಗ್ರಾಮಗಳಲ್ಲಿ ಸರ್ವೆ ಸಾಮಾನ್ಯವಾಗಿ ಕಾಣಬಹುದು. ಇಂತಹ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ಬಹುಸುಲಭವಾಗಿ ಮನೆಗೆಲಸದ ಹೊರೆ ಅವಳ ಮೇಲೆ ಬೀಳುವುದನ್ನು ಪ್ರತ್ಯೇಕವಾಗಿ ಹೇಳಲೇಬೇಕಾಗಿಲ್ಲ. ಹೆಣ್ಣು ಮಗು "ಸಿದ್ಧ ಪಡಿಸಿದ ದುಡಿಮೆಗಾರ್ತಿ" ಯಾಗಿರುವುದರಿಂದ ಪಾತ್ರೆ ತೊಳೆಯುವ; ಬಟ್ಟೆ ಒಗೆಯುವ, ಮನೆಯನ್ನು ಸ್ವಚ್ಛಮಾಡುವ, ನೀರು ಹೊರುವ, ಆಹಾರ ತಯಾರಿಸುವ ಜವಾಬ್ದಾರಿಗಳನ್ನು ಆಕೆಯ ಮೇಲೆ ಹೇರಿ ಆಕೆಯನ್ನು ಶಾಲೆಗೆ ಸೇರಲು ಅವಕಾಶವನ್ನು ನೀಡದೆಯೇ ಇರುವವರು ಅನೇಕ ಕುಟುಂಬಗಳಲ್ಲಿ ಕಾಣಬಹುದಾಗಿದೆ.

[illegible]

[illegible]

ಹೆಣ್ಣು ಮಕ್ಕಳು ಶಾಲೆಯನ್ನು ಮಧ್ಯದಲ್ಲೇ ಬಿಟ್ಟು ಬಿಡುವುದು ಅಥವಾ ದಾಖಲಾತಿಯನ್ನು ಪಡೆಯದೆಯೇ ಇರುವುದು[3] ಹೆಣ್ಣು ಮಕ್ಕಳು ದೈಹಿಕವಾಗಿ–ಮಾನಸಿಕವಾಗಿ ವಿವಾಹ ಎನ್ನುವ ವ್ಯವಸ್ಥೆಯನ್ನು ಪ್ರವೇಶಿಸಲು ತಯಾರಾಗಿಲ್ಲದಿರುವಾಗಲೇ ಆಕೆಯನ್ನು ಶಿಕ್ಷಣದಿಂದ ದೂರಮಾಡಿ ವಿವಾಹವೆಂಬ ಬಂಧನದೊಳಗೆ ಸಿಲುಕಿ ಹಾಕುವುದು. ಆಕೆಯ ಭವಿಷ್ಯವನ್ನು ಕುಂಠಿತಗೊಳಿಸದಂತಾಗುತ್ತದೆ. ಶಾಲೆಗೆ ಹೋಗಬೇಕಾದ ವಯಸ್ಸಿನಲ್ಲಿ ಕೂಲಿ ಕೆಲಸದಲ್ಲಿ ಕಾರ್ಯ ನಿರತರಾಗಿರುವುದರಿಂದ ಭಾರತದಲ್ಲಿ ಲಕ್ಷಾಂತರ ಹೆಣ್ಣು ಮಕ್ಕಳು ಮೂಲಭೂತ ಶಿಕ್ಷಣದಿಂದ ವಂಚಿತರಾಗಿ ದುಡಿಯುತ್ತಿದ್ದಾರೆ. ಚಿಕ್ಕ ವಯಸ್ಸನ್ನು ಕುಟುಂಬದ ಸಮಸ್ಯೆಗಳಗೆ ಸಹಾಯ ಮಾಡಲು ಹೋಗಿ ತಮ್ಮ ಜೀವನವನ್ನು ವ್ಯರ್ಥಗೊಳಿಸಿಕೊಳ್ಳುತ್ತಾರೆ. ಇದರ ಜೊತೆಗೆ ಅವರಿಗೆ ಯಾವುದೇ ರೀತಿಯ ತರಬೇತಿ ಕುಶಲತೆಗೆ ಅವಕಾಶವಿಲ್ಲದೇ ಅವರು ನರಳುತ್ತಿದ್ದಾರೆ. ಈ ಎಲ್ಲ ಅಂಶಗಳ ಜೊತೆಗೆ ಅವರು ವಯಸ್ಕರಾಗುವ ಮೊದಲೇ ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಮುಂದೆ ವಿವಾಹದ ನಂತರ ಹಲವಾರು ಅನಾರೋಗ್ಯದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಹೀಗೆ ಚಿಕ್ಕವಯಸ್ಸಿನಲ್ಲಿ ತಮ್ಮ ಸಾಮಾರ್ಥ್ಯಕ್ಕೆ ಮೀರಿದ ಕೆಲಸಗಳು ಜವಾಬ್ದಾರಿಗಳನ್ನು ನಿಭಾಯಿಸುವುದರಿಂದ ಜೀವನಪೂರ್ತಿ ಹಲವಾರು ಸಮಸ್ಯೆಗಳಿಂದ ನರಳಬೇಕಾಗುವ ಸಂಭವವೇ ಹೆಚ್ಚಾಗಿರುತ್ತದೆ.

'ಸ್ತ್ರೀ ಶಿಕ್ಷಣ' ಮಹಿಳೆಯರಿಗೆ ವ್ಯವಸ್ಥೆಯು ವರದಾನವಾಗಿ ನೀಡಿವೆ ಅಂತ ಹೇಳುವುದರಲ್ಲಿ ಅವಳ ಮೂಲಭೂತ ಹಕ್ಕನ್ನೆ ನಿರಾಕರಿಸುತ್ತದೆ. ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಶಿಕ್ಷಣವು ಪುರುಷ ಸಂಸ್ಕೃತಿಯು ನೀಡುವ ದಾನವಾಗಿ ಪರಿಗಣಿಸಲಾಗುತ್ತದೆ. ಅದು ಔಪಚಾರಿಕ ಶಿಕ್ಷಣವಾಗಿರಬಹುದು ಅನೌಪಚಾರಿಕ ಶಿಕ್ಷಣವಾದರೂ ಆಗಿರಬಹುದು. ಈ ದಾನವು ಯಾವಾಗಲೂ ಏಕಪಕ್ಷಿಯವಾಗಿರುತ್ತದೆ. ಅಂದರೆ ಕೊಡುವವರ ಇಚ್ಛೆಯನ್ನು ಆಧರಿಸಿರುತ್ತದೆಯೇ ವಿನಃ ಪಡೆದುಕೊಳ್ಳುವವರ ಅಗತ್ಯತೆಯನ್ನು ಅರಿತಿರುವುದಿಲ್ಲ. ಇಲ್ಲಿಯೂ ಸಹ ಕೊಡುವವರು ಪ್ರಧಾನರು (ಯಜಮಾನರು)

ಪಡೆಯುವವರು (ಅಧಿನರು) ಎಂಬ ಯಜಮಾನ್ಯತೆ ಮತ್ತು ಅಧೀನ ನೆಲೆಯಲ್ಲಿ ಪ್ರತಿಷ್ಟಾಪಿಸುತ್ತದೆ. ಮೊದಲಿನಿಂದಲೂ ಸಾಮಾಜೀಕರಣ ಪ್ರಕ್ರಿಯೆಯು ಮಹಿಳಾ ಅಧೀನತೆಯನ್ನು ಪುನರ್‌ಸ್ಥಾಪಿಸುವುದು ಅಧೀನ ನೆಲೆಯಲ್ಲಿ ಮುಂದುವರಿಯಬೇಕೆಂಬ ಪುರುಷ ರಾಜಕಾರಣವು ಸ್ಫೋಟವಾಗಿರುವುದನ್ನು ಕಾಣಾಬಹುದಾಗಿದೆ. ಈ ಹಿನ್ನಲೆಯಲ್ಲಿ ಒಟ್ಟು ಸಮಾಜ ವ್ಯವಸ್ಥೆಯಲ್ಲಿ ಆಳವಾಗಿ ಬೇರೂರಿರುವ ಪುರುಷ ಸಂಸ್ಕೃತಿಯ ಬೇರುಗಳೇ ಮಹಿಳಾ ಶಿಕ್ಷಣದ ಹಿಂದೆಯೂ ಸಹ ಪುರುಷ ಪ್ರಧಾನತೆಯ ಧೋರಣೆಯು ಬಲವಾಗಿದೆ. ಆ ಕಾರಣದಿಂದಾಗಿ ಮಹಿಳೆಯರ ಶಿಕ್ಷಣವು ಔಪಚಾರಿಕವಾಗಿ ಪ್ರಮಾಣದಲ್ಲಿ ಹೆಚ್ಚಾದರೂ ಅವಳ ಸಬಲೀಕರಣವಾಗಬೇಕೆಂಬುದು ಕೂಡ ನಿರೀಕ್ಷೆಯು ಸಹ ನಿರಾಸಿಯಾಗಿಯೇ ಉಳಿದುಕೊಳ್ಳುವುದರ ಜೊತೆಗೆ ಅವಳ ಸಮಸ್ಯೆಗಳನ್ನು ನಿವಾರಿಸುವ ಬದಲು ಹೊಸ ಅಯಾಮಗಳಲ್ಲಿ ಸಮಸ್ಯೆಯು ಸೃಷ್ಠಿಯಾಗುತ್ತಲೇ ಇವೆ. ಒಟ್ಟಾರೆ ಮಹಿಳಾ ಶಿಕ್ಷಣವು ಕುಟುಂಬದ ಏಳಿಗೆಗಾಗಿ ಅಭಿವೃದ್ದಿಗಾಗಿ ಇರಬೇಕೆ ವಿನಃ ಅವಳ ಸಬಲಿಕರಣಕ್ಕಾಗಿ ಅಲ್ಲ ಎಂಬುದನ್ನು ಗಾರ್ಮೆಂಟ್ಸ ಮಹಿಳೆಯರನ್ನು ತೆಗೆದುಕೊಂಡಾಗ ತಿಳಿಯುತ್ತದೆ. ಏಕೆಂದರೆ ಇಲ್ಲಿಗೆ ಬರುವಂಥ ಗಾರ್ಮೆಂಟ್ಸ ಮಹಿಳೆಯರು ಸಾಮಾನ್ಯವಾಗಿ ಓದದೆ ಇಲ್ಲದವರು, ಸ್ವಲ್ಪಮಟ್ಟಿಗೆ ಓದಿದವರು, ಪದವಿ ಮಟ್ಟದ ಶಿಕ್ಷಣವನ್ನು ಪಡೆದುಕೊಂಡವರು

[illegible]

ಬರುತ್ತಾರೆ. ಪ್ರಸ್ತುತ ಸಂಶೋಧನೆಯಲ್ಲಿ ಅನುಬಂಧ ಒಂದು, ಅನುಬಂದ ಎರಡರ ಮಾಹಿತಿ ಪ್ರಕಾರ ನಾಲ್ಕನೆ ತರಗತಿಯಿಂದ ಪದವಿ ಮಟ್ಟದ ತನಕ ಶಿಕ್ಷಣವನ್ನು ಪಡೆದುಕೊಂಡವರು ಬರುತ್ತಿದ್ದಾರೆ. ಬಡತನದ ಅನಿವಾರ್ಯ ಪರಿಸ್ಥಿತಿಗೆ ಹೆಚ್ಚಿಗೆ ಓದಲು ಆಗಲಿಲ್ಲ. ನಾವು ಓದಿದರೆ ನಮ್ಮ ಮನೆ ಪರಿಸ್ಥತಿ ನಡೆಯುವುದಿಲ್ಲ. ನಾವೇ ನಾಲ್ಕು ಜನ ಅಕ್ಕ-ತಂಗಿಯರು ಹೀಗಿರುವಾಗ ಎಲ್ಲರೂ ಓದಲೂ ಹೋದರೆ ಮನೆಯನ್ನು ನಡೆಸುವುದು ಕಷ್ಟವಾಗುತ್ತದೆ. ತಂದೆ ಇದ್ದರೂ ಒಂದೆ ಇಲ್ಲದೆ ಇದ್ದರೂ ಒಂದೆ, ಎನ್ನುವ ಅವರ ಆತಂಕವಾಗಿದೆ ಅವರು ಮನೆಯ ಯಾವ ಜವಾಬ್ದಾರಿಯನ್ನು ತೆಗೆದುಕೊಳ್ಳದೆ ದಿನದ ಇಪ್ಪತ್ನಾಲ್ಕು ಗಂಟೆನೂ ಕುಡಿತದಿಂದಲೇ ತಮ್ಮ ಜೀವನ ಕಳಿತಾರೆ. ಇದರಿಂದ ತಮ್ಮನಾದರೂ ಓದಿದರೆ ಕೊನೆಯ ಸಮಯದಲ್ಲಿಯಾದರೂ ನಮ್ಮ ತಾಯಿಗೆ ಆಸರೆಯಾಗುತ್ತಾನೆ. ನಾವೇನು ಬೇರೆಯವರ ಮನೆಗೆ ಹೋಗುವವರು, ಎಷ್ಟೇ ಓದಿದರೂ ಅಡುಗೆ ಮನೆಯಲ್ಲಿ ಮುಸುರೆ ತಿಕ್ಕೊದಂತ ತಪ್ಪಿದ್ದಲ್ಲ. ಇನ್ನು ಕೆಲವರು, ನಾನೇ ಮನೆಯಲ್ಲಿ ಹಿರಿಯವಳು ನಾನೇ ಓದುತ್ತಾ ಕುಳಿತರೆ ಹೇಗೆ ತಂದೆ ಬೇರೆ ಇಲ್ಲ ತಾಯಿಯೊಬ್ಬಳಿಗೆ ಖರ್ಚನ್ನು ನಿಭಾಯಿಸಲು ಕಷ್ಟವಾಗುತ್ತದೆ. ಇನ್ನು ಕೆಲವರು ಓದಲು ಇಚ್ಛೆಪಟ್ಟರೂ ಕೂಡ ಮನೆಯಲ್ಲಿ ಯಾವುದೆ ಸಹಕಾರವಿಲ್ಲದೆ, ಓದಿ ಏನ್ ಮಾಡೋದ್ ಮಹಾ, ದುಡಿದರೆ ಮನೆ ಖರ್ಚಿಗಾದರೂ ಸಹಾಯವಾಗುತ್ತೆ ಎಂದು ಮನೆಯವರ ಒತ್ತಡದಿಂದ ಈ ಕೆಲಸಕ್ಕೆ ಬಂದೆ.

ಇನ್ನು ಬೆಂಗಳೂರಿನಲ್ಲಿ, ಬಳ್ಳಾರಿ ಮಹಿಳೆಯರ ಶಿಕ್ಷಣ ಮಟ್ಟಕ್ಕೆ ಹೋಲಿಸಿದಾಗ ಹೆಚ್ಚಿನ ಮಟ್ಟದಲ್ಲಿ ಔಪಚಾರಿಕವಾಗಿ ಶಿಕ್ಷಣವನ್ನು ಕಲಿತವರೆ ಆಗಿರುತ್ತಾರೆ. ಅನುಬಂದ ಎರಡರಲ್ಲಿ ಇರುವ ಪ್ರಕಾರ ಹೆಚ್ಚಾನು ಹೆಚ್ಚು ಮಹಿಳೆಯರು ಎಸ್. ಎಸ್. ಎಲ್. ಸಿ.ಯಿಂದ ಪದವಿ ಪೂರ್ವ ಮಟ್ಟದ ತನಕ ಕಲಿತಿರುವವರೆ ಹೆಚ್ಚಾಗಿರುತ್ತಾರೆ. ಆದರೆ ಇಂತಹ ಗಾರ್ಮೆಂಟ್ಸ ಫ್ಯಾಕ್ಟ್ರಿಗಳೆಲ್ಲಡೆ ಔಪಚಾರಿಕ ಶಿಕ್ಷಣದ ಬಗ್ಗೆ ಯಾವುದೇ ಸ್ಥಾನ ಕೊಡುವುದಿಲ್ಲ ಆದರೆ ಅವರು ಒಟ್ಟಾರೆ ಹೊಲಿಯಲು ಚೆನ್ನಾಗಿ ಬಂದರೆ ಸಾಕು. ಅದರಲ್ಲಿನ ಕೌಶಲ್ಯದ ಪರಿಣಿತಿಯನ್ನು ಕೇಳುತ್ತಾರೆ. ಹೊಲಿಯುವುದಕ್ಕೆ ಬರಲಿಲ್ಲ ಅಂದ್ರೆ ಸಾಕು ಕೆಲಸಕ್ಕೆ ಕರೆದುಕೊಳ್ಳುವುದಿಲ್ಲ ಅವರು ಎಷ್ಟೇ ಓದಿದರೂ ಅಷ್ಟೇ. ಓದದೆ ಅನಕ್ಷರಸ್ಥರು ಚೆನ್ನಾಗಿ ಹೊಲಿಯೋಕೆ ಬಂದ್ರೆ ಸಾಕು ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ.

4.3 ಆರೋಗ್ಯ ಸ್ಥಿತಿಗತಿಗಳು

ಸಾರ್ವಜನಿಕ ವಲಯದ ಮುಖ್ಯ ಭಾಗಗಳಲ್ಲಿ ಆರೋಗ್ಯ ವಲಯವು ಒಂದಾಗಿದೆ. ಆರೋಗ್ಯವೇ ಬದುಕಿನ ಎಲ್ಲ ಬಗೆಯ ಪ್ರಗತಿಗೂ ತಳಹದಿ. ಪ್ರಧಾನಧಾರೆಯ ಚಿಂತನೆಗಳಿಂದಲೇ ಪ್ರಭಾವಿತವಾದ ಆರೋಗ್ಯ ವಲಯವು ಲಿಂಗ ಶ್ರೇಣೀಕೃತ ವ್ಯವಸ್ಥೆಯಲ್ಲಿ ಪ್ರಧಾನಲಿಂಗೀಯ ಪರವಾದ ಚಿಂತನೆಗಳನ್ನು ರೂಡಿಸಿಕೊಂಡಿರುತ್ತದೆಂಬುದು ಹೊಸ ಸಂಗತಿಯೇನಲ್ಲ. ಲೈಂಗಿಕತವಾದಿ ಚಿಂತನಾ ವಿಧಾನವನ್ನು ಅಳವಡಿಸಿಕೊಂಡಿರುವ ಸಮಾಜದಲ್ಲಿನ ಯಾವುದೇ ಆಲೋಚನೆಗಳು ವಿಚಾರಗಳು, ಅಧೀನಲಿಂಗೀಯ ವ್ಯಾಖ್ಯಾನಗಳಲ್ಲಿಯೂ ಪರೋಕ್ಷವಾಗಿ ಪುರುಷಕೇಂದ್ರಿತ ನೆಲೆಯಲ್ಲೇ ವಿವೇಚಿಸಲಾಗಿದೆ.

ಸ್ತ್ರೀವಾದಿ ಚಿಂತನಾಕ್ರಮವೊಂದು ಬೆಳೆದುಬಂದ ನಂತರ ಒಟ್ಟು ಸಮಾಜ ವ್ಯವಸ್ಥೆಯನ್ನು ಪುನರ್ ಪರಿಶೀಲನೆಗೊಳಪಡಿಸಿದಾಗ ಮಹಿಳೆಯ ಅದೃಶ್ಯತೆಯ ಎಲ್ಲ ವಲಯಗಳನ್ನು ಕಾಣಬಹುದು.

ವಿವಿಧ ಸ್ತ್ರೀವಾದಿಗಳು ಸಹಜೀವಿಯಾಗಿ ಪುರುಷಪ್ರಧಾನ ವ್ಯವಸ್ಥೆಯು ಪರಿಗಣಿಸದಿರುವುದನ್ನು ಸ್ಪಷ್ಟಪಡಿಸಿದರು. ಈ ನಿಟ್ಟಿನ ಮಹಿಳಾ ಆರೋಗ್ಯದ ವಿಶೇಷವಾದ ಚಿಂತನೆಗಳು ಆರಂಭವಾದವು. ಇಡೀ ಮಹಿಳಾ ಸಮುದಾಯವೇ ಪುರುಷ ಸಮುದಾಯದತ್ತ ವಿಶೇಷವಾಗಿ ಗಮನಹರಿಸುವಂತೆ ಸಮಾಜ ವ್ಯವಸ್ಥೆಯು ಸೃಷ್ಟಿಸಲಾಗಿದೆ. ಆರೋಗ್ಯ ರಕ್ಷಣೆಯ ಸಂದರ್ಭ ಬಂದಾಗ ಮಹಿಳೆಯನ್ನು ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೆ ಒಳಪಡಿಸಲಾಗಿದೆ. ವಿಪರ್ಯಾಸವೆಂದರೆ ಮಹಿಳೆಯರ ಆರೋಗ್ಯಕ್ಕೆ ಬೇಕಾದ ಅಗತ್ಯತೆಗಳನ್ನು ಸೂಕ್ಷ್ಮತೆಯಿಂದ ಕ್ರೂರತೆಯ ಹಂತಗಳವರೆಗೂ ತಿರಸ್ಕೃತಳಾಗುವ ಹಾಗೆ ವ್ಯವಸ್ಥೆ ರೂಪಿಸಿದೆ. ಮಹಿಳೆಯು ಕುಟುಂಬದ ಎಲ್ಲ ಜವಾಬ್ದಾರಿಯನ್ನು ಹೊತ್ತುಕೊಂಡು ಪುರುಷನ ಹಿತವನ್ನು ಬಯಸುವ ಪ್ರತಿಯೊಂದು ಸಂದರ್ಭಗಳಲ್ಲಿ ತನ್ನ ಬಗ್ಗೆಯಾಗಲಿ ಅಥವಾ ತನ್ನ ಆರೋಗ್ಯದ ಬಗ್ಗೆಯಾಗಲಿ ಯೋಚಿಸದೆ ಇರುವ ಸಂಗತಿಗಳನ್ನು ಕಾಣಬಹುದಾಗಿದೆ. ಹೆಣ್ಣಾಗಿ ಹುಟ್ಟಿದ ಕಾರಣಕ್ಕಾಗಿ ಸ್ವತಃ ತಾಯಿಯು ಪುರುಷ ಪ್ರಧಾನ ವ್ಯವಸ್ಥೆ ಮಹಿಳೆಗೆ ಕೆಲವೊಂದು ಸಂದರ್ಭದಲ್ಲಿ ಸ್ವಲ್ಪ ಗಂಡು ಮಗನಿಗೆ ಆಹಾರವನ್ನು ಬಡಿಸಿ ನಂತರ ಏನು ಉಳಿದಿರುವುದನ್ನು ಬಡಿಸುತ್ತಾಳೆ. ಕೊನೆಗೆ ಇಲ್ಲದೆ ನೀರು ಕುಡಿದು ಮಲಗುವ ಸಂದರ್ಭವನ್ನು ಕಾಣಬಹುದಾಗಿದೆ. ಪುರುಷ ಪ್ರಧಾನ ವ್ಯವಸ್ಥೆ ಮಹಿಳೆಯ ಸಂದರ್ಭದಲ್ಲಿ ಪೌಷ್ಟಿಕ ಆಹಾರವನ್ನೆ ಒದಗಿಸುವುದಿಲ್ಲ. ಅದು ಒದಿಸಿದರು, ಕೆಲವೊಂದು ಸಂದರ್ಭದಲ್ಲಿ ಋತುಮತಿ, ಗರ್ಭಿಣಿ, ಸಂತಾನೋತ್ಪತ್ತಿ ಸಮಯದಲ್ಲಿ ಮಾತ್ರ ನೀಡುತಾರೆ ಏಕೆಂದರೆ ಅದು ಮುಂದೆ ಗಂಡನ, ಮಕ್ಕಳ ಮನೆಯವರ ಯೋಗಕ್ಷೇಮ ಕಾಳಜಿಯನ್ನು ನೋಡಿಕೊಳ್ಳುವುದಕ್ಕೋಸ್ಕರ ನೀಡುತ್ತಾರೆ. ಆದರೆ ಗಾರ್ಮೆಂಟ್ಸ್ ಮಹಿಳೆ ಸಂದರ್ಭದಲ್ಲಿ ಯಾವ ಸಮಯದಲ್ಲಿ ಪೌಷ್ಟಿಕ ಆಹಾರ ಇರಲಿ, ಮೂರೊಪ್ಪತ್ತಿನ ಊಟ ಕೂಡ ಸಿಕ್ಕೊದೆ ಇರುವ ಸಂದರ್ಭವನ್ನು ಕಾಣಬಹುದು.

ಸಾಧಾರಣವಾಗಿ ಮಹಿಳೆಗೆ ಪೌಷ್ಟಿಕರ ಆಹಾರ ಒದಗಿಸುವುದು ಮೂರು ಸಂದರ್ಭಗಳಲ್ಲಿ ಋತುಮತಿ, ಗರ್ಭಿಣಿ ಹೆರಿಗೆ ಸಂದರ್ಭಗಳಲ್ಲಿ ಮಾತ್ರ ಒದಗಿಸಲಾಗುತ್ತದೆ ಆದರೆ ಉಳಿದ ಸಂದರ್ಭಗಳಲ್ಲಿ ಗಂಡ ಮಕ್ಕಳಿಗೆ ಯಾವಾಗಲೂ ಪೌಷ್ಟಿಕ ಆಹಾರ ನೀಡುತ್ತಾಳೆ. ಆರೋಗ್ಯಕ್ಕಾಗಿ ಎಂಬ ಉದ್ದೇಶವನ್ನು ನೋಡಬಹುದಾಗಿದೆ.

ಆಹಾರ ಪಡೆಯುವುದರಲ್ಲಿಯೂ ನಿರ್ಲಕ್ಷಗೊಳಗಾಗುತ್ತಿರುವ ಮಹಿಳೆಯು ಆರೋಗ್ಯದ ಕುರಿತಾಗಿ ಮಹಿಳೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಸುಸ್ಥಿತಿಯಲ್ಲಿದ್ದರೆ ಅವಳನ್ನು ಆರೋಗ್ಯವಂತ ಮಹಿಳೆ ಎಂದು ಇದಕ್ಕೆ ವಿರುದ್ಧವಾದ ಸ್ಥಿತಿಯನ್ನು ಅನಾರೋಗ್ಯ ಸ್ಥಿತಿಯೆಂದು ಕರೆಯಬಹುದು. ಮಹಿಳೆಯ ಆರೋಗ್ಯ–ಅನಾರೋಗ್ಯ ಸ್ಥಿತಿಯು ಕುಟುಂಬ ಮತ್ತು ಸಮಾಜದ ಅನುಕೂಲಕ್ಕೆ ಮಾರ್ಗವಾಗುವಂತೆ ವ್ಯವಸ್ಥೆಗನುಗುಣವಾಗಿ ರೂಪಿಸಲ್ಪಟ್ಟಿರುತ್ತದೆ. ಜೊತೆಗೆ ಮಹಿಳಾ ಆರೋಗ್ಯದ ನಿರ್ವಚನದಲ್ಲಿ ಮಹಿಳಾ ಲೈಂಗಿಕತೆಯನ್ನು ತೆಗೆದುಕೊಳ್ಳುವುದು ಕೂಡ ಅವಶ್ಯಕವಾಗುತ್ತದೆ. ಪಿತೃಸಂಸ್ಕೃತಿಯ ಮೌಲ್ಯಗಳನ್ನು ಸ್ಥಳೀಕರಿಸಲಾಗಿದೆಯಾದ್ದರಿಂದ ಮಹಿಳೆಯರ ಆರೋಗ್ಯವು ನಿರ್ಲಕ್ಷಕ್ಕೆ ಒಳಗಾಗುವ ಸಂದರ್ಭಗಳನ್ನು

[illegible]

[illegible]

[illegible]

[illegible]

ಹೆಚ್ಚು ಕಾಣಬಹುದು. ಮಹಿಳೆಯ ಆರೋಗ್ಯ ದುಸ್ಥಿತಿಯಲ್ಲಿರುವುದಕ್ಕೆ ಕಾರಣ ವೈಯಕ್ತಿಕತೆಗಿಂತ ಬಹುಪಾಲು ಸಾಮಾಜಿಕತೆಯೇ ಕಾರಣವಾಗಿದೆ. ಸಮಾಜವ್ಯವಸ್ಥೆಯಲ್ಲಿ ಹೆಣ್ಣನ್ನು ಸಹಜೀವಿಯಾಗಿ ಪರಿಗಣಿಸದೆ ಅವಳ ಆರೋಗ್ಯದಲ್ಲಿ ಸಂಪೂರ್ಣವಾಗಿ ನಿಷ್ಕಾಳಜಿ ತೋರಿಸಿದೆ ಸಮಾಜದ ಒಂದು ಹೊರೆಯೆಂದು ಭಾವಿಸಲಾಗುತ್ತದೆ. ಹೆಣ್ಣು ಜೀವವು ಮನುಕುಲದ ಮುಂದುವರಿಕೆಗೆ ಇರುವವಳೆಂಬುದನ್ನು ಈ ವ್ಯವಸ್ಥೆಯು ಕಡೆಗಣಿಸಿದೆ. ಆದರೆ ಮಹಿಳೆಯು ದೈಹಿಕ, ಮಾನಸಿಕ, ಬೌದ್ಧಿಕ, ಸಂತಾನಾರೋಗ್ಯ ಎಂಬ ನಾಲ್ಕುಬಗೆಯ ಆರೋಗ್ಯವನ್ನು ಕಾಪಾಡಿಕೊಳ್ಳಬೇಕಾಗಿದೆ. ಆದರೆ ಕುಟುಂಬದ ಬಡತನದ ಪರಿಣಾಮಗಳು ಯಾವುದೇ ಕಾರಣಕ್ಕೂ ಪುರುಷ ಮೇಲಾಗುವುದಿಲ್ಲ. ಹಾಗೂ ಮಹಿಳೆಯರು ಪೌಷ್ಠಿಕ ಆಹಾರದ ಕೊರತೆಯಿಂದ ಬಳಲುತ್ತಾರೆ. ಇನ್ನೊಂದು ಕಡೆ ಶ್ರೀಮಂತ ಅಥವಾ ಇನ್ನಿತರ ವ್ಯವಸ್ಥೆಯು ಸೌಂದರ್ಯ ಸ್ಪರ್ಧೆಯನ್ನು ಏರ್ಪಡಿಸಿ ಡೈಯೆಟ್ ಮಾಡುವ ಮೂಲಕ ಅವಳ ದೇಹ ಇಷ್ಟೆ ಇರಬೇಕೆಂಬ ಒತ್ತಡವನ್ನು ಪುರುಷಶಾಹಿ ವ್ಯವಸ್ಥೆ ಹೇರಿರುತ್ತದೆ. ಮಹಿಳೆಯನ್ನು ತನ್ನ ಉಪಯೋಗಿ ವಸ್ತುವಾಗಿ ನಿರ್ಮಿಸಿ ಪ್ರತಿಯೊಂದು ಅಂಗಾಂಶಗಳು ತನಗೆ ಆಕರ್ಷಣೀಯವಾಗಿ ಕಾಣುವ ಹಾಗೆ ಮಾಡುತ್ತದೆ.

ಉದಾ :– ಒಬ್ಬ ಗಾರ್ಮೆಂಟ್ಸ್ ಮಹಿಳೆ ಮತ್ತು ವಿಶ್ವಸುಂದರಿಯನ್ನು ಅಧ್ಯಯನಕ್ಕೆ ಒಳಪಡಿಸಿದಾಗ. ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕೆಲಸವಾಡುವ ಮಹಿಳೆಯರು ಮಾಲೀಕರುಕೊಡುವ ಸಂಬಳದಲ್ಲಿ ಮೂರೊಪ್ಪತ್ತಿನ ಊಟಕ್ಕೂ ಸಾಲದೆ ಎಷ್ಟು ಜನ ಮಹಿಳೆಯರು ರಕ್ತಹೀನತೆಯಿಂದ ಬಳಲುವ ಸಂದರ್ಭವನ್ನು ಕಾಣಬಹುದಾಗಿದೆ. ಇನ್ನೊಂದು ಕಡೆ ವಿಶ್ವಸುಂದರಿ ಐಶ್ವರ್ಯ ರೈ, ಸುಶ್ಮಿತ ಸೇನ್ ಇನ್ನಿತರ ಹಲವಾರು ಮಹಿಳೆಯರು ಜಾಹಿರಾತನ್ನು ಕೊಡುವ ಸಂದರ್ಭದಲ್ಲಿ ಎಷ್ಟು ತೆಳ್ಳಗಿರಬೇಕು, ಹೀಗೆ ಇರಬೇಕೆಂಬ ಮನಸ್ಥಿತಿಯನ್ನು ಸೃಷ್ಟಿಸುತ್ತದೆ. ಜಾಗತೀಕರಣದ ಸಂದರ್ಭದಲ್ಲಿ ಮಾರುಕಟ್ಟೆಯಲ್ಲಿ ಹೇಗೆ ಬೇಡಿಕೆ ಇರುತ್ತದೋ ಆ ಮೂಲಕ ಅವಳ ದೇಹ ರೂಪಿಸಲ್ಪಡುತ್ತದೆ. ಈ ಕಾರಣವಾಗಿ ನಿಯಂತ್ರಣದ ಪರಿಣಾಮಕಾರಿ ತಂತ್ರಗಾರಿಕೆಯೇ ದೌರ್ಜನ್ಯವೆಂದು ಹೇಳಬಹುದು. ಪ್ರಭಾವಿತ ಮತ್ತು ನಿಯಂತ್ರಿತ ಸಮಾಜ ವ್ಯವಸ್ಥೆಗಳೆರಡೂ ಸೇರಿ ಮಹಿಳೆಯ ಆರೋಗ್ಯದ ಮೇಲೆ ದುಷ್ಪರಿಣಾಮವನ್ನು ಬೀರುತ್ತವೆ. ಅವಳ ಅನುಕೂಲ–ಪ್ರತಿಕೂಲ ಪರಿಸ್ಥಿತಿಗಳೆರಡರಲ್ಲೂ ಸಹ ಅವಳು ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳಲಾಗದಂತಹ ಪ್ರಸಂಗಗಳು, ಚಿಂತನೆಗಳು ಸಮಾಜ ವ್ಯವಸ್ಥೆಯಲ್ಲಿವೆ. ಮಹಿಳಾ ಬದುಕು ಸಾಮಾಜಿಕತೆಯ ನೆಲೆಯಿಂದಲೇ ನಿರ್ವಹಣೆಯಾಗುತ್ತದೆ.

ಮನೋಸ್ವಾಸ್ಥ್ಯ ಸಾಮಾಜಿಕ ವಾತಾವರಣದ ಪ್ರತಿಬಿಂಬವೆಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಮಹಿಳೆಯರ ವಿರುದ್ಧ ನಡೆಯುವ ಎಲ್ಲ ಬಗೆಯ ದೌರ್ಜನ್ಯಗಳು ಮಹಿಳೆಯ ಮಾನಸಿಕ ಬದುಕನ್ನು ನಿರ್ಬಂಧಿಸುವುದರಿಂದ ಅವಳ ಭಾವಲೋಕದ ಸಂಗತಿಗಳನ್ನು ಅವಳು ಸ್ಪಷ್ಟವಾಗಿ ವ್ಯಕ್ತಪಡಿಸುವುದಕ್ಕೂ ನಿರ್ಭಂಧಗಳಿರುವುದನ್ನು "ಮೌನ ಸಂಸ್ಕೃತಿ"ಯಲ್ಲಿ ಕಾಣಬಹುದಾಗಿದೆ.

ಸಾರ್ವಜನಿಕ ವಲಯಗಳಲ್ಲಿ ನಿರಂತರವಾಗಿ ನಡೆಯುತ್ತಿರುವ ಹಿಂಸೆ ಮತ್ತು ದೌರ್ಜನ್ಯಗಳಿಗೆ ಮಹಿಳೆಯ ಮನೋಲೋಕವು ತತ್ತರಿಸಿ ಹೋಗಿದೆ. ಅದರಲ್ಲೂ ಆಧುನಿಕ ಮಹಿಳೆಯು ಪ್ರತಿಕೂಲಕರವಾದ ಸಮಾಜ ವ್ಯವಸ್ಥೆಯಲ್ಲಿನ ಕೌಟುಂಬಿಕ ಮತ್ತು ಸಾರ್ವಜನಿಕ ವಲಯಗಳಲ್ಲಿ ನಿರಂತರವಾಗಿ

[illegible]

[illegible]

[illegible]

[illegible]

ದುಡಿಯುವುದರೊಂದಿಗೆ ಅಲ್ಲಿನ ಹಿಂಸೆ-ದೌರ್ಜನ್ಯಗಳು ಹೆಣ್ಣಾಗಿರುವ ಕಾರಣಕ್ಕಾಗಿಯೇ ಅನುಭವಿಸುವ ಒತ್ತಡಗಳಿಂದ ಮಾನಸಿಕ ಅಸ್ವಾಸ್ಥ್ಯಕ್ಕೆ ಒಳಗಾಗುತ್ತಿರುವುದು ಕಂಡು ಬರುತ್ತದೆ. ಉದಾ :- ಸಾಕಷ್ಟು ಗಾರ್ಮೆಂಟ್ಸ್ ಗರ್ಭಿಣಿ ಮಹಿಳೆಯರು ಈ ಬಗೆಯ ಒತ್ತಡಗಳಿಂದ ಗರ್ಭಪಾತಗಳಾಗುತ್ತಿರುವುದನ್ನು ಕಾಣಬಹುದಾಗಿದೆ. ಈ ನಿಟ್ಟಿನಲ್ಲಿ ದೇಹ ಮನಸ್ಸು ಬುದ್ದಿಗಳು ಪರಸ್ಪರ ಮಾರಕವಾಗಿವೆ. ಮಹಿಳೆ ಆರೋಗ್ಯದ ಸಂದರ್ಭದಲ್ಲಿ ವಿಶೇಷವಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕಾಗಿರುವುದು ಸಂತಾನಾರೋಗ್ಯ; ಸಾರ್ವಜನಿಕ ವಲಯದ ಬಹುಪಾಲು ದೌರ್ಜನ್ಯಗಳು ಮಹಿಳೆಯರ ಸಂತಾನಾರೋಗ್ಯದ ಮೇಲಾಗುತ್ತವೆ. ಮಹಿಳೆಯರ ಆರೋಗ್ಯದಲ್ಲಿ ಸಂತಾನಾರೋಗ್ಯವು ಬಹುಮುಖ್ಯವಾದದು. ಒಂದು ಸಂತಾನವನ್ನು ಇಡೀ ವಂಶಕ್ಕೆ ದೇಶದ ಅಭಿವೃದ್ಧಿಗೆ ಮನುಕುಲಕ್ಕೆ ನೀಡುವಲ್ಲಿ ಮಹಿಳೆಯು ತನ್ನ ಪ್ರಾಣವನ್ನೇ ಪಣವಾಗಿಡುತ್ತಾಳೆ. ಗಂಡು ಇದರಲ್ಲಿ ಭಾಗಿಯಾದರೂ ಕೂಡ ಹೆಣ್ಣಿನ ಭಾಗವಹಿಸುವಿಕೆಯು ಸುದೀರ್ಘ ಅವಧಿಯವರೆಗೂ ಇರುತ್ತದೆ. ಸಂತಾನೋತ್ಪತ್ತಿಯು ಮಹಿಳಾ ಬದುಕಿನ ಕೇಂದ್ರಬಿಂದುವಾದ ಅಂಶವಾಗಿದೆ ಎಂದು ನಂಬಿಸಲಾಗಿದೆ. ಈ ಬಗೆಯ ಸಂತಾನ ಕ್ರಿಯೆಯ ಕುರಿತು ಸಾಮಾಜಿಕವಾಗಿ ಕಟ್ಟಲ್ಪಟ್ಟ ವ್ಯಾಖ್ಯಾನಗಳು ಮಹಿಳೆಯರ ಮೇಲೆ ಹಲವು ನಿರ್ಬಂಧಗಳನ್ನು ಅಡೆತಡೆಗಳನ್ನುಂಟು ಮಾಡಿದೆ. ಸರಳವಾಗಿ ನಡೆಯಬೇಕಾದ ಪ್ರಕ್ರಿಯೆಯು ಸಾಮಾಜಿಕ ವ್ಯವಸ್ಥೆಯ ಹಿಡಿತಕ್ಕೆ ಸಿಲುಕಿ ಮಹಿಳಾ ಬದುಕನ್ನು ಅಧೀನತೆಯತ್ತ ತಿರುಗಿಸಿದೆ. ಒಟ್ಟಾರೆಯಾಗಿ ಮಹಿಳೆಯರ ಯಾವುದೇ ಸನ್ನಿವೇಶವು ಸಹ ಮೂಲಭೂತವಾಗಿ ಸಾಮಾಜಿಕತೆಯ ತಳಹದಿಯನ್ನಾಧರಿಸಿಕೊಂಡಿದೆ.

"ಸಂತಾನಾರೋಗ್ಯವನ್ನು ವಿಶ್ವಸಂಸ್ಥೆಯು ಹೀಗೆ ವ್ಯಾಖ್ಯಾನಿಸುತ್ತದೆ. ಸಂತಾನಾರೋಗ್ಯವೆಂಬುದು ಇತ್ತೀಚಿನ ದಶಕಗಳಲ್ಲಿ ಬಂದ ಹೊಸ ಪರಿಕಲ್ಪನೆ. ಜನರ ಹೊಣೆಯತ, ತೃಪ್ತಿಕರವಾದ ಹಾಗೂ ಅಪಾಯ ರಹಿತವಾದ ಲೈಂಗಿಕ ಜೀವನವನ್ನು ನಡೆಸಲು ಸಾಧ್ಯವಾಗಿದೆ ಆರೋಗ್ಯಯುತ ಸಂತಾನವನ್ನು ಪಡೆಯಲು ಸಮರ್ಥರಾಗಿದ್ದು, ಬೇಕಿದ್ದಲ್ಲಿ ಯಾವಾಗ ಎಷ್ಟು ಮಕ್ಕಳು ಬೇಕು ಎನ್ನುವುದನ್ನು ನಿರ್ಧರಿಸುವ ಸ್ವಾಂತಂತ್ರ್ಯವನ್ನು ಹೊಂದಿರುವುದೇ ಸಂತಾನಾರೋಗ್ಯ. (Binnaial report, 1992-93 WHO) ಇಡೀ ಭಾರತ ದೇಶವೇ ರೈತರ ಬೆನ್ನೆಲುಬಾಗಿದೆ ಎಂದು ಹೇಳಿದರೂ ಮಹಿಳೆ ಇಡೀ ಕುಟುಂಬಕ್ಕೆ, ಸಾಮಾಜಕ್ಕೆ ದೇಶಕ್ಕೆ ಪ್ರತಿಯೊಬ್ಬ ಪುರುಷನ ಯಶಸ್ವಿ ಹಿಂದುಗಡೆ ಬೆನ್ನೆಲುಬಾಗಿ ನಿಂತಿದ್ದಾಳೆ. ಆದರೂ ಪುರುಷ ಪ್ರಧಾನ ಸಮಾಜ ಮಹಿಳೆಯರ ಆರೋಗ್ಯಕ್ಕೆ ಅಷ್ಟಾಗಿ ಗಮನಕೊಡುವುದಿಲ್ಲ. ಆರೋಗ್ಯದ ಬಗೆಗಿನ ಪ್ರಜ್ಞೆಯ ಕೊರತೆಯೇ ಅನಾರೋಗ್ಯಕ್ಕೆ ಕಾರಣವಾಗುತ್ತದೆ.

ಮಹಿಳೆಯ ಆರೋಗ್ಯ ಇಡೀ ಸಮುದಾಯದ ಆರೋಗ್ಯದ ಅಡಿಗಲ್ಲು ಅಷ್ಟೇ ಅಲ್ಲದೆ ಸ್ತ್ರೀಯರ ಆರೋಗ್ಯ ಆಯಾ ಸಮಾಜದ ಒಟ್ಟು ಆರೋಗ್ಯಕ್ಕೆ ಹಿಡಿದ ಕೈಗನ್ನಡಿಯನ್ನಬಹುದು. ಈ ಹೇಳಿಕೆ ಉತ್ಪ್ರೇಕ್ಷೆಯಂತೆ ಮೇಲ್ನೋಟಕ್ಕೆ ಕಂಡು ಬಂದರೂ ಅದರಲ್ಲಿ ಕಿಂಚಿತ್ತು ಉತ್ಪ್ರೇಕ್ಷೆಯಿಲ್ಲ ಎನ್ನುವುದನ್ನು ವಿಶ್ವ ಆರೋಗ್ಯ ಸಂಸ್ಥೆಯಲ್ಲಿ ಒಳಗೊಂಡಂತೆ ವಿಶ್ವಸಂಸ್ಥೆಯ ಹಲವಾರು ಅಂಗಸಂಸ್ಥೆಗಳ ವರದಿಗಳೂ ಜನಗಣತಿಯ ವರದಿಗಳಲ್ಲೂ ಹಾಗೂ ಪ್ರಪಂಚದ ಅನೇಕ ದೇಶಗಳಲ್ಲಿ ನಡೆದಿರುವ ಹಾಗೂ ನಡೆಯುತ್ತಿರುವ ಸಂಶೋಧನಾ ವರದಿಗಳು ಸ್ಪಷ್ಟಪಡಿಸಿವೆ. ಸ್ತ್ರೀಯರು ಇಡೀ ಮನುಕುಲದ ಅರ್ಧಭಾಗವಾಗಿದ್ದು

ಮುಂದಿನ ಮನುಕುಲದ ಸಂತತಿ ಆರೋಗ್ಯವಾಗಿ ಹುಟ್ಟುವುದು ಮತ್ತು ಹೀಗೆ ಬದುಕಿ ಉಳಿದ ಶಿಶುಗಳ ಆರೋಗ್ಯ ಬಹುಮಟ್ಟಿಗೆ ಸ್ತ್ರೀಯರ ಸಂಪೂರ್ಣ ಆರೋಗ್ಯ ಪರಿಸ್ಥಿತಿಯ ಮೇಲೆ ಅವಲಂಬಿತವಾಗಿದೆ.

ಮಹಿಳೆ ಅನಾದಿಕಾಲದಿಂದಲೂ ಎಲ್ಲಾ ಸಮಾಜಗಳಲ್ಲೂ ಬರಿಯ ಸಂತಾನೋತ್ಪತ್ತಿಯ ಕಾರ್ಯವನ್ನಷ್ಟೇ ಅಲ್ಲದೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಆಯಾ ಸಮಾಜದ ಸಂಪತ್ತಿನ ಉದಯಕ್ಕಾಗಿಯೂ ಪುರುಷರಿಗೆ ಹೆಗೆಲೆಣೆಯಾಗಿ ಕೆಲವೊಮ್ಮೆ ಪುರಷರಿಗಿಂತ ಹೆಚ್ಚಿನ ಕೊಡುಗೆ ನೀಡುತ್ತಾ ಬಂದಿದ್ದಾಳೆ. ಇನ್ನು ಮನೆಯ ಕುಟುಂಬದ ಕೆಲಸಗಳು, ಮಕ್ಕಳ ಲಾಲನೆ ಪಾಲನೆ, ವಯಸ್ಸಾದ ಕುಟುಂಬದ ಸದಸ್ಯರು ಮತ್ತು ಅನಾರೋಗ್ಯ ಪೀಡಿತರ ಸೇವೆಯೂ ಮಹಿಳೆಯ ಮಡಿಲಿಗೆ ಬಿದ್ದಿವೆ. ಬಡವರ್ಗಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರು ಇವೆಲ್ಲ ಜವಬ್ದಾರಿಗಳ ಜೊತೆಗೆ ಕುಟುಂಬಕ್ಕೆ ಮತ್ತು ಜಾನುವಾರುಗಳಿಗೆ ಬೇಕಾಗುವ ಉರುವಲು, ಮೇವು ಇತ್ಯಾದಿಗಳನ್ನು ಕಾಡು ಮೇಡುಗಳಲ್ಲಿ ಅಲೆದು ಸಂಗ್ರಹಿಸುವ ಕಠಿಣ ಕೆಲಸಗಳನ್ನು ಮಾಡಬೇಕಾಗಿದೆ.

ನಗರದ ಬಡಮಹಿಳೆಯರು, ಕೆಳ ವರ್ಗ ಹಾಗೂ ಮಧ್ಯಮ ವರ್ಗದ ಮಹಿಳೆಯರು ಬಹುಮುಖಿಯಾದ ಶ್ರಮದ ಕೆಲಸಗಳನ್ನು ಮಾಡುತ್ತಿದ್ದಾರೆ. ಪಿತೃಪ್ರಧಾನವಾದ ನಮ್ಮ ಸಮಾಜದಲ್ಲಿ ಸ್ತ್ರೀಯರ ಸ್ಥಿತಿಗತಿಗಳು ಶೋಚನೀಯವಾಗಿದ್ದು, ತಮ್ಮ ಆಹಾರ, ಆರೋಗ್ಯ, ವಿದ್ಯೆ ಉದ್ಯೋಗ ಹಾಗೂ ಸಂತಾನೋತ್ಪತ್ತಿ ಇತ್ಯಾದಿಗಳಲ್ಲಿ ಯಾವುದೇ ಆಯ್ಕೆಯಿಲ್ಲದೆ ಸಮಾನ ಅವಕಾಶಗಳಿಂದ ವಂಚಿತರಾದ ಸ್ತ್ರೀಯರ ಪ್ರಚಲಿತ ಬದುಕಿಗೆ ನಮ್ಮ ದೇಶದಲ್ಲಿ ಹಲವಾರು ದಶಕಗಳಿಂದ ಒಂದೆ ಸಮನೆ ಕೆಳಗಿಳಿಯುತ್ತಿರುವ ಸ್ತ್ರೀಯರ ಸಂಖ್ಯೆಯೇ ಸಾಕ್ಷಿ. ಜೊತೆಗೆ ಮಹಿಳೆಯರ ಆರೋಗ್ಯ ಎಷ್ಟು ನಿರ್ಲಕ್ಷಿಸಲ್ಪಟ್ಟಿದೆಯೆಂದರೆ", ರಾಷ್ಟ್ರೀಯ ಕುಟುಂಬ ಆರೋಗ್ಯ ಸಂರಕ್ಷಣೆಯ ಪ್ರಕಾರ ೧೯೯೦ರ ದಶಕದ ಮೊದಲ ಅರ್ಧದ ಅವಧಿಯಲ್ಲಿ ಸುಮಾರು ೧,೧೧,೦೦೦ ಮಹಿಳೆಯರು ಪ್ರತಿ ವರ್ಷ ಬಸಿರು ಮತ್ತು ಹೆರಿಗೆಗೆ ಸಂಬಂಧಿಸಿದ ಕಾರಣಗಳಿಂದ ಮರಣವನ್ನಪ್ಪುತ್ತಿದ್ದುದು ಪ್ರಮುಖ ವರದಿಯಾಗಿದೆ. ಇತ್ತೀಚಿಗೆ ಇನ್ನಿತರ ವರದಿಗಳ ಪ್ರಕಾರ ಈ ರೀತಿ ಪ್ರತಿ ವರ್ಷ ಸಾಯುವ ಮಹಿಳೆಯರ ಸಂಖ್ಯೆ ೧.೨೫೦೦೦ಕ್ಕೆ ಏರಿದೆ. ವಿಶ್ವಬ್ಯಾಂಕಿನ ಇನ್ನೊಂದು ವರದಿಯಂತೆ ನಮ್ಮ ದೇಶದ ಬಸುರಿಯರಲ್ಲಿ ಸುಮಾರು ೮೮% ಮಂದಿ ರಕ್ತಹೀನತೆಯಿಂದ ಬಳಲುತ್ತಿದ್ದು ಇದು ನಮ್ಮ ದೇಶದ ಮಹಿಳೆಯರ ಆರೋಗ್ಯ ಹಾಗೂ ಆಹಾರ ಪೋಷಣಾ ಸ್ಥಿತಿಗಳಿಗೆ ಹಿಡಿದ ಕೈಗನ್ನಡಿಯಾಗಿದೆ. ಬಸುರಿನ ಅವಧಿಯಲ್ಲಿ ಹಾಗೂ ಹೆರಿಗೆಯಲ್ಲಿ ಸಾಯುವ ಮಹಿಳೆಯರಲ್ಲಿ ಶೇಕಡಾ ೨೦ಕ್ಕಿಂತ ಹೆಚ್ಚು ಮಂದಿ ರಕ್ತಹೀನತೆಯಿಂದ ಸಾಯುತ್ತಾರೆ. ಎಂಬುದನ್ನು ಇಲ್ಲಿ ಗಮನಿಸಬೇಕು. ಅಷ್ಟೇ ಅಲ್ಲದೆ ಬಸಿರು ಮತ್ತು ಹೆರಿಗೆಯ ನಂತರದ ಅವಧಿಯಲ್ಲಿ ರಕ್ತಸ್ರಾವದಿಂದ ೨೩%ರಷ್ಟು ಮಹಿಳೆಯರು ಸಾವಿಗೆ ತುತ್ತಾಗುತ್ತಾರೆ ಎನ್ನುವುದು ಹಾಗು ಪ್ರಮುಖವಾಗಿ ತಿಳಿದು ಬಂದಿದೆ ನಮ್ಮ ಮಹಿಳೆಯರ ಆರೋಗ್ಯ ಎಷ್ಟರ ಮಟ್ಟಿಗೆ ನಿರ್ಲಕ್ಷಿಸಲ್ಪಟ್ಟಿದೆ ಎಂಬುದನ್ನು ಎತ್ತಿ ತೋರಿಸುತ್ತದೆ.

ಅಂತರಾಷ್ಟ್ರೀಯ ಜನಸಂಖ್ಯಾ ಅಧ್ಯಯನ ಸಂಸ್ಥೆಯ (೧೯೯೫) ವರದಿಯ ಪ್ರಕಾರ ನಮ್ಮ ದೇಶದಲ್ಲಿ ಒಂದು ಲಕ್ಷ ಮಹಿಳೆಯರು ಪ್ರತಿ ವರ್ಷ ಬಸಿರು ಹಾಗೂ ಹೆರಿಗೆಗೆ ಸಂಬಂಧಿಸಿದ ಕಾರಣಗಳಿಂದಾಗಿಯೇ ಸಾಯುತ್ತಿದ್ದಾರೆ. ಹೆರಿಗೆಯಲ್ಲಿ ಅತಿ ಹೆಚ್ಚಾಗಿ ಸಾಯುವ ಸ್ತ್ರೀ ಸಂಖ್ಯೆ ಇರುವ ದೇಶಗಳ ಪೈಕಿ ನಮ್ಮ ದೇಶವೂ ಒಂದೂ ಎನ್ನಬಹುದು. ಭಾರತದಂತಹ ವಿಶ್ವದ ದೊಡ್ಡ ಪ್ರಜಾಶಕ್ತಿಗೆ ಅವಮಾನಕರವಾದ ಸಂಗತಿಯನ್ನಬಹುದು. ಈ ಸಂಖ್ಯೆ ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಇನ್ನು ಹೆಚ್ಚು ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಲಿಂಗ ತಾರತಮ್ಯವಿರುವ ಪುರುಷ ಪಕ್ಷಪಾತಿಯಾದ ನಮ್ಮ ಸಮಾಜದಲ್ಲಿ ಬಹಳಷ್ಟು ಹೆಣ್ಣು ಮಕ್ಕಳು ಕಡಿಮೆ ಪ್ರಮಾಣದ ಕಡಿಮೆ ಗುಣಮಟ್ಟದ ಆಹಾರವನ್ನು ಉಣ್ಣುವುದರಿಂದ ಹಾಗೂ ಅವರ ಅನೇಕ ದೈಹಿಕ ಮಾನಸಿಕ ತೊಂದರೆಗಳು ಮತ್ತು ಕಾಯಿಲೆಗಳು ಕುಟುಂಬದಲ್ಲಿ ನಿರ್ಲಕ್ಷಿಸಲ್ಪಡುವುದರಿಂದ ಹೆಣ್ಣು ಮಕ್ಕಳ ಬೆಳವಣಿಗೆ ಕುಂಠಿತವಾಗುತ್ತದೆ. ಅವಳ ಸ್ಥಿತಿಯೂ ಅವಳ ಪರಿಪೂರ್ಣ ವಿಕಾಸಕ್ಕೆ ಆಸ್ಪದವೀಯುವುದಿಲ್ಲ.ಹೀಗೆ ಬೆಳೆದ ಹೆಣ್ಣು ಮಗು ಇನ್ನುಹರೆಯಕ್ಕೆ ಕಾಲಿಡುತ್ತಿದ್ದಂತೆ ಮದುವೆ, ಬಸಿರು, ಬಾಣಂತಿತನಗಳ ದಾಳಿಗೆ ಒಳಗಾಗಿ ಅವಳಿಗೆ ಹುಟ್ಟುವ ಮಕ್ಕಳು ಅನಾರೋಗ್ಯಕ್ಕೂ ಅಪಪೋಷಣೆಗೂ ತುತ್ತಾಗುವ ಅಪಾಯಗಳನ್ನು ಹೊತ್ತುಕೊಂಡೆ ಹುಟ್ಟುತ್ತವೆ. ಹೀಗೆ ಸ್ತ್ರೀಯರ ಅನಾರೋಗ್ಯದ ವಿಷವರ್ತುಲ ಒಂದು ತಲೆಮಾರಿನಿಂದ ಇನ್ನೊಂದಕ್ಕೆ ಮುಂದುವರಿಯುತ್ತಲೇ ಹೋಗುತ್ತದೆ.[೪]

ಮಹಿಳೆಯರ ಅನಾರೋಗ್ಯವು ಅಪಪೋಷಣೆ ಹೆರಿಗೆಯಲ್ಲಿ ಬಾಣಂತಿತನದ ಅವಧಿಯಲ್ಲಿ ಅವರ ಅಕಾಲಿಕ ಮರಣವನ್ನಪ್ಪುತ್ತಾರೆ. ನವಜಾತಶಿಶುಗಳ ಮರಣ, ಶಿಶುಗಳ ಅನಾರೋಗ್ಯ ಮತ್ತು ಬಾಲ್ಯವಸ್ಥೆಯಲ್ಲಿಯೇ ಮರಣವನ್ನಪ್ಪುವ ಮಕ್ಕಳ ಸಂಖ್ಯೆ ಇವೆಲ್ಲಾ ಅಪಾಯಗಳನ್ನು ನಮ್ಮ ಸಮಾಜದಲ್ಲಿ ಸುಲಭವಾಗಿ ತಡೆಗಟ್ಟಬಹುದಾಗಿದೆ. ಆದರೂ ಸಹ ನಮ್ಮ ಸಮಾಜದಲ್ಲಿ ಹಾಗೂ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿರುವ ಲಿಂಗ ಅಸಮಾನತೆಯಿಂದಾಗಿ ಮತ್ತು ಜೀವ ವಿರೋಧಿಯಾದ ದಮನಕಾರಿ ಮೌಲ್ಯಗಳಿಂದಾಗಿ ಮಹಿಳೆಯರಿಗೆ ತಮ್ಮ ಆರೋಗ್ಯಕ್ಕೆ, ಸಂತಾನೋತ್ಪತ್ತಿಗೆ, ತಮ್ಮ ಸ್ವಂತ ದೇಹಕ್ಕೆ ಸಂಬಂಧಿಸಿದ ಅನೇಕ ವಿಷಯಗಳಲ್ಲಿ ನಿರ್ಧಾರ ತೆಗೆದುಕೊಳ್ಳುವ ಸರಿಯಾದ ಹಕ್ಕು ಹಾಗೂ ಆಯ್ಕೆಗಳಿಲ್ಲ. ಜೊತೆ ಜೊತೆಗೆ ಸ್ತ್ರೀಯರ ಮೂಲಭೂತ ಅಗತ್ಯಗಳನ್ನು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನಿರ್ಲಕ್ಷಿಸಲಾಗಿದೆ. "೧೯೯೯ರ ಮಾನವ ವಿಕಾಸ ವರದಿಯ ಪ್ರಕಾರ ಪಟ್ಟಿ ಮಾಡಿರುವ ೧೭೪ ದೇಶಗಳಲ್ಲಿ ಲಿಂಗ ಸಂಬಂಧಿ ವಿಕಾಸದ ಸೂಚ್ಯಂಕದಲ್ಲಿ ಭಾರತ ೧೧೪ ನೇ ಸ್ಥಾನದಲ್ಲಿದೆ. ಇದು ಲಿಂಗ ಸಮಾನತೆಯನ್ನು ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯಬೇಕಾದ ದೊಡ್ಡ ಪ್ರಜಾಪ್ರಭುತ್ವವಾದ ನಮ್ಮ ದೇಶಕ್ಕೆ ಅವಮಾನಕಾರಿ ಎನ್ನಬಹುದು.

ನಮ್ಮ ದೇಶದಲ್ಲಿ ಸಾಮಾಜಿಕ ಆರ್ಥಿಕ ಸಾಂಸ್ಕೃತಿಕ ರಾಜಕೀಯ ಹಾಗೂ ಸಮುದಾಯದ ಆರೋಗ್ಯಕ್ಕೂ ಹೇಗೆ ಮಾರಕವಾಗಿದೆ ಎಂಬ ಸಾಮಾಜಿಕ ಸತ್ಯವನ್ನು ಸ್ಪಷ್ಟೀಕರಿಸುವುದು ಹಾಸಗೂ ಸಾಮಾಜಿಕ ವಸ್ತು ಸ್ಥಿತಿಗಳನ್ನು ಮಹಿಳೆಯರ ಅನುಭವಾತ್ಮಕ ನೆಲೆಯಿಂದ ಪರಿಶೀಲಿಸುವುದು ಮುಖ್ಯವಾಗಿದೆ.

ಕಾರ್ಕಲ್‌ರವರ ಪ್ರಕಾರ (೧೯೯೫) ಹೆರಿಗೆಯಲ್ಲಿ ಸಾಯುವ ಸ್ತ್ರೀಯೊಬ್ಬಳಿಗೆ ಪ್ರತಿಯಾಗಿ ೧೬.೫ ಸ್ತ್ರೀಯರು ಬಸಿರು ಹಾಗೂ ಹೆರಿಗೆಯಲ್ಲಿ ಮತ್ತು ಹೆರಿಗೆಯ ನಂತರದ ಅವಧಿಗಳಲ್ಲಿ ಕಾಯಿಲೆಗಳಿಂದ ನರಳುತ್ತಾರೆ ಎಂಬುದು ಅನೇಕ ಅಧ್ಯಯನಗಳಿಂದ ಸಿದ್ಧವಾಗಿರುವ ಸಂಗತಿ. ಅದರಲ್ಲಿಯೂ ಗ್ರಾಮೀಣ ಮಹಿಳೆಯರ ಆರೋಗ್ಯ ಪರಿಸ್ಥಿತಿ ಇನ್ನೂ ಧಾರುಣವಾದದ್ದು. ಕರ್ನಾಟಕ ಸರ್ಕಾರದ ಮಾನವ ವಿಕಾಸ ವರದಿಯ ಪ್ರಕಾರ (೧೯೯೯) ನಮ್ಮ ಹಳ್ಳಿಯ ಪ್ರತಿ ೫ ಮಹಿಳೆಯರಲ್ಲಿ ಒಬ್ಬಾಕೆ ಒಂದು ಮಗುವನ್ನಾದರು ಕಳೆದುಕೊಂಡಿರುತ್ತಾಳೆ. ನಮ್ಮ ರಾಜ್ಯದಲ್ಲಿ ಹಳ್ಳಿಗಳಲ್ಲಾಗುವ ಹೆರಿಗೆಗಳಲ್ಲಿ ೬೬% ರಷ್ಟು ಹೆರಿಗೆಗಳನ್ನು ಅನಾರೋಗ್ಯಕರ ಪರಿಸರದಲ್ಲಿ ತರಬೇತಿಯಿಲ್ಲದ ಸೂಲಗಿತ್ತಿಯರು ಮಾಡಿಸುತ್ತಾರೆ.

ನಮ್ಮ ಸಮಾಜದಲ್ಲಿ ತಮ್ಮ ದೈಹಿಕ ಆರೋಗ್ಯಕ್ಕೆ ಸಂಬಧಿಸಿದಂತೆ ಸಂತಾನೋತ್ಪತ್ತಿಗೆ ಸಂಬಂಧಿಸಿದಂತೆ. ಹಾಗೂ ತಮ್ಮ ಜೀವನ ಉಳಿವಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಹ ನಿರ್ಧಾರ ತೆಗೆದುಕೊಳ್ಳುವಲ್ಲಿ ಸ್ತ್ರೀಯರಿಗೆ ಸೀಮಿತ ಅಧಿಕಾರ ಮಾತ್ರ ಇದೆ. ಹೀಗೆ ಹಲವಾರು ದಿನಗಳಲ್ಲಿ ಅಪಮೌಲ್ಯಕ್ಕೆ ಒಳಗಾದ ಸ್ತ್ರೀಯರ ಸಾಮಾಜಿಕ ಮತ್ತು ಕೌಟುಂಬಿಕ ಸ್ಥಾನಮಾನಗಳಿಂದಾಗಿ ಮಹಿಳೆ ಒಂದು ರೀತಿಯ ಹೇಳಿಕೊಳ್ಳಲಾಗದ ನಿರಂತರ ಹಿಂಸೆಗೆ ಒಳಗಾಗಿರುತ್ತಾಳೆ. ತಾನು ಹೊತ್ತಿರುವ ಭ್ರೂಣದ ಲಿಂಗಪರೀಕ್ಷೆಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾದ ಕುಟುಂಬದ ಒತ್ತಾಯಕ್ಕೆ ಮಹಿಳೆ ಒಳಗಾಗುವುದು ಸ್ತ್ರೀ ಶಿಶುಹತ್ಯೆ, ಬಲವಂತ ಗರ್ಭಪಾತ ಮೇಲಿಂದ ಮೇಲೆ ಬಸಿರಾಗುವುದು, ಕೌಟುಂಬಿಕ ಹಿಂಸೆ ಇತ್ಯಾದಿಗಳು ನಿರಂತರ ಹಿಂಸೆಯ ಪ್ರತ್ಯಕ್ಷ ರೂಪಗಳೆನ್ನಬಹುದು.

೪.೩.೧ ಪೌಷ್ಟಿಕ ಆಹಾರ

ಪೌಷ್ಟಿಕ ಆಹಾರ ಅನ್ನುವುದರಲ್ಲೆ ಉತ್ತಮ, ಒಳ್ಳೆಯ ಆಹಾರ ಅಂತ ಹೇಳಬಹುದು. ಆದರೆ ಈ ಪುರುಷಶಾಹಿ ವ್ಯವಸ್ಥೆ ಮಹಿಳಾ ಸಮುದಾಯಕ್ಕೆ ಪೌಷ್ಟಿಕ ಆಹಾರವನ್ನು ಒದಗಿಸದೆ ಹಾಗೆ ವ್ಯವಸ್ಥೆ ರುಪಿಸುತ್ತದೆ ಇಂತಹದರಲ್ಲಿ ಗಾರ್ಮೆಂಟ್ಸ ಮಹಿಳೆಯರನ್ನು ಪರಿಗಣಿಸಿದಾಗ ಇದಕ್ಕೆ ಅರ್ಥಸಿಗೊಲ್ಲ ಅಂತ ಅನ್ನಿಸ್ತೆ. ಏಕೆಂದರೆ ಮೂರೊಪ್ಪತ್ತಿನ ಊಟಕ್ಕು ಸಿಗದೆ ಇರುವಂತಹ ಪರಿಸ್ಥಿತಿಯಲ್ಲಿ ಪೌಷ್ಟಿಕ ಆಹಾರದ ಪ್ರಶ್ನೆ ಎಲ್ಲಿ ಬರಬೇಕು? ಜೊತೆಗೆ ಕುಟುಂಬದೊಳಗೆ ಮೊದಲಿನಿಂದಲೂ ಮಹಿಳೆಯರಿಗೆ ಮತ್ತು ಪುರುಷರಿಗೆ ಹಂಚುವಲ್ಲಿ ಲಿಂಗಭೇದವನ್ನು ಅನುಸರಿಸುವುದನ್ನು ಕಾಣಬಹುದು. ಹೆಣ್ಣು ಹುಟ್ಟಿದಾಗಿನಿಂದಲೂ ಸಾಮಾಜಿಕರಣ ಪ್ರಕ್ರಿಯೆ ಸ್ವತಃ ತಾಯಿಂಯು ತನ್ನ ಮಗಳಿಗೆ ಊಟ ಬಡಿಸುವಾಗ ಮಗ ಮೊದಲು ಬೇಗ ಊಟ ಮಾಡಲಿ ನಂತರ ನೀನು ಊಟ ಮಾಡು ಎಂಬ ಉದ್ದೇಶವನ್ನು ವ್ಯಕ್ತಪಡಿಸುತ್ತಾಳೆ.

ಸಾಮಾಜಿಕ ನಂಬಿಕೆಗಳು

ಪಿತೃಪ್ರಧಾನ ಸಂಸ್ಕೃತಿ ಹೆಂಡತಿಯಾದವಳು ಗಂಡನಿಗಿಂತ ಮುಂಚೆ ಆಹಾರವನ್ನು ಸೇವಿಸಿದರೆ ಆಯಸ್ಸು ಕಡಿಮೆಯಾಗುತ್ತದೆ.

[illegible]

[illegible]

[illegible]

[illegible]

[illegible]

[illegible]

ಪುರುಷರು ಮಹಿಳೆಯರಿಗಿಂತ ದೈಹಿಕವಾಗಿ ಹೆಚ್ಚು ಕಷ್ಟ ಸಾಧ್ಯವಾದ ದುಡಿಮೆಮಾಡುತ್ತಾರೆ. ಆದ್ದರಿಂದ ಅವರಿಗೆ ಮಹಿಳೆಯರಿಗಿಂತ ಹೆಚ್ಚು ಆಹಾರ ಅವಶ್ಯಕತೆ ಇದೆ.

ಮನೆಯಲ್ಲಿ ಆಹಾರ ಇಲ್ಲವೆಂದು ತಾಯಿಯೊಬ್ಬಳು ಮಕ್ಕಳಿಗೆ ಹೇಳಲು ಸಾಧ್ಯವಿಲ್ಲ. ಹಸಿವಿನಿಂದ ಮಕ್ಕಳು ಗೋಳಾಡುವಾಗ ತಾಯಿಯು ಸಹಜವಾಗಿ ಗಂಡು ಮಕ್ಕಳಿಗೆ ಆಹಾರ ನೀಡುತ್ತಾಳೆ. ಹೆಣ್ಣು ಮಕ್ಕಳಿಗೆ ಆಹಾರವಿಲ್ಲದಿದ್ದರೂ ನಡೆಯುತ್ತದೆ.

ಆಹಾರ ಸಾಕಷ್ಟು ಪ್ರಮಾಣದಲ್ಲಿಲ್ಲದಿದ್ದರೆ ತಾಯಿ ತನ್ನ ಕೂಳನ್ನು ತ್ಯಾಗ ಮಾಡುತ್ತಾಳೆ. ಅಥವಾ ಉಳಿದುದನ್ನು ಸೇವಿಸುತ್ತಾಳೆ. ಗಂಡನಿಗೆ ಊಟ ಒದಗಿಸದಿದ್ದರೆ ಅವನು ಹೆಂಡತಿಯನ್ನು ಬಡಿಯುತ್ತಾನೆ.[೫]

ಬಡಕುಟುಂಬಗಳಲ್ಲಿ ಸ್ತ್ರೀಪುರುಷರ ಆಹಾರ ಸಂಬಂಧವಾಗಿ ಘರ್ಷಣೆ, ಹಿಂಸೆ ಸಾಮಾನ್ಯ. ಹೊಟ್ಟೆ ತುಂಬ ಊಟ ಇಲ್ಲದಿದ್ದಾಗ ಗಂಡ ಹೆಂಡತಿಗೆ ಬಡಿದರೆ ಅದನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಉಪ್ಪು ಕಡಿಮೆ, ಅನ್ನದಲ್ಲಿ ಕಲ್ಲು ಮುಂತಾದ ಸಂಗತಿಗಳಿಗೆಲ್ಲ ಹೆಂಡತಿಯನ್ನು ಗಂಡ ಬಡಿಯುವುದನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಇಲ್ಲಿ ಪುರುಷಶಾಹಿ ಕೆಲಸ ಮಾಡುವುದು ಸ್ಪಷ್ಟ ಇದರಲ್ಲಿ ಎರಡು ರೀತಿಯನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಪರಿಗಣಿಸಿದಾಗ ಪುರುಷಶಾಹಿ ವ್ಯವಸ್ಥೆಯು ತನ್ನ ಅಧಿಕಾರದ ನಿಯಂತ್ರಣದಲ್ಲಿ ಹೆಂಡತಿಯನ್ನು ಹೊಡೆಯುವುದು ಸಹಜವಾದ ಮನಸ್ಥಿತಿಯನ್ನು ತಿಳಿಸುವುದು ಜೊತೆಗೆ ಹೆಂಡತಿಯನ್ನು ಗಂಡ ಹೊಡೆಯುವುದು ಗಂಡಸಿನ ಅಧಿಕಾರವನ್ನು, ಗಂಡನಾದವನು ಹೆಂಡತಿಗೆ ಹೊಡೆಯುವುದರಲ್ಲಿ ತಪ್ಪೇನಿಲ್ಲ ಎಂಬ ವ್ಯವಸ್ಥೆ ಕಲ್ಪಿಸುತ್ತದೆ. ಇನ್ನೊಂದೆಡೆ ಕುಟುಂಬದಲ್ಲಿ ಪುರುಷ ದುಡಿಯಲಿ, ದುಡಿಯದಿರಲಿ ಹೆಂಡ್ತಿ ಮಾತ್ರ ದುಡಿದು ತಂದಿರುವುದನ್ನು ಗಂಡ ಮಕ್ಕಳಿಗೆ ಮಾಡಿಹಾಕಬೇಕು. ತಾನು ಉಪವಾಸವಿದ್ದಾಗ್ಯೂ ಕೂಡ ಪುರುಷಶಾಹಿ ವ್ಯವಸ್ಥೆ ಹೆಣ್ಣಿನ ಆರೋಗ್ಯದ ಕುರಿತು ಯಾವುದೆ ಕಾಳಜಿ ವಹಿಸದೆ ಭಾವನಾತ್ಮಕವಾಗಿ ಅವಳ ಮನಸ್ಸನ್ನು ನಿಯಂತ್ರಣದಲ್ಲಿಡುತ್ತದೆ. ಸ್ತ್ರೀಯರ ಆಹಾರ ಮತ್ತು ಆರೋಗ್ಯ ಇವೆರಡೂ ಕುಟುಂಬದ ಆದಾಯ ಮತ್ತು ಅದಕ್ಕಿಂತ ಮಿಗಿಲಾಗಿ ಆಯ ಕುಟುಂಬಗಳಲ್ಲಿ ಸಿಗುವ ಸ್ಥಾನಮಾನಗಳ ಮೇಲೆ ಆಧಾರಿತವಾಗಿದೆ. "ಯಾವ್ಯಾವ ಕುಟುಂಬಗಳಲ್ಲಿ ಆರೋಗ್ಯ ಹಾಗೂ ಅಹಾರದ ಅಗತ್ಯಗಳಿಗಾಗಿ ಕುಟುಂಬದ ಆದಾಯವನ್ನು ಮತ್ತಿತರ ಕುಟುಂಬಗಳಲ್ಲಿ ಸ್ತ್ರೀಯರ ಆರೋಗ್ಯ ಮತ್ತು ಆಹಾರ ಪೋಷಣ ಸ್ಥಿತಿ ಉತ್ತಮವಾಗಿರುವುದನ್ನು ಹಲವು ಸಂಶೋಧನೆಗಳು ಸಿದ್ಧಪಡಿಸಿ ತೋರಿಸಿವೆ."[೬] ಹೆಣ್ಣು ಮಕ್ಕಳ ಆರೋಗ್ಯದ ಸ್ಥಿತಿಗತಿಗಳು ಅವರ ಸಂತಾನೋತ್ಪತ್ತಿಯ ಸಾಮಾರ್ಥ್ಯ, ಮನೆಗೆಲಸ ಮಾಡಲು ಬೇಕಾದ ಶಕ್ತಿ. ಹಾಗೂ ಮುಖ್ಯವಾಗಿ ಬಡವರ್ಗಗಳ ಮಹಿಳೆಯರ ಆರ್ಥಿಕ ಸಾಮರ್ಥ್ಯ ಆರ್ಥಿಕ ಸಾಮರ್ಥ್ಯವೆಂದರೆ, ಅದು ಮಹಿಳೆಯರು ಮನೆಯಲ್ಲಿಯೇ ಮಾಡುವ ಸ್ವಉದ್ಯೋಗದಿಂದ ಉತ್ಪಾದನೆಯಾಗುವ ಸಂಪಾದನೆಯಾಗಬಹುದು ಅಥವಾ ಹೊರಗೆ ದುಡಿದು ತರುವ ದಿನಗೂಲಿ/ತಿಂಗಳ ಸಂಬಳವಾಗಿರಬಹುದು. ಹೀಗೆ ಸ್ತ್ರೀಯರು ಆಹಾರ ಪೋಷಣಾ ಸ್ಥಿತಿ ಮತ್ತು ಆರೋಗ್ಯ ಇವೆರಡೂ ಅವಳು ಸಮಾಜದಲ್ಲಿ ಹೇಗೆ ತಾಯಿಯಾಗಿ, ಹೆಂಡತಿಯಾಗಿ ಮನೆತನ ನೋಡಿಕೊಳ್ಳುವವಳಾಗಿ ಹಾಗೂ ದುಡಿದು ತರುವ ವ್ಯಕ್ತಿಯಾಗಿ ತನ್ನ ಪಾತ್ರವನ್ನು ನಿರ್ವಹಿಸಬಲ್ಲಳು ಎಂಬುದನ್ನು ಬಹುಮಟ್ಟಿಗೆ ನಿರ್ಧರಿಸುತ್ತದೆ.

೪.೩.೨ ರಕ್ತಹೀನತೆ

ನ್ಯೂನಪೋಷಣೆಯ ಇನ್ನೊಂದು ಕರಾಳ ರೂಪವೇ ರಕ್ತಹೀನತೆ. ಸರಿಯಾದ ಸಮಯಕ್ಕೆ, ಉತ್ತಮ ಆಹಾರವನ್ನು ತೆಗೆದುಕೊಳ್ಳದೆ ಇದ್ದಾಗ ರಕ್ತಹೀನತೆಯಿಂದ ಬಳಲುವ ಸಂದರ್ಭಗಳನ್ನು ಕಾಣಬಹುದಾಗಿದೆ. ಅದರಲ್ಲೂ ಪುರುಷರಿಗಿಂತ ಹೆಣ್ಣು ಮಕ್ಕಳೆ ಹೆಚ್ಚು ಅನುಭವಿಸುವುದನ್ನು ನೋಡಬಹುದಾಗಿದೆ. ಏಕೆಂದರೆ ಮೊದಲಿನಿಂದಲೂ ಸಾಮಾಜಿಕರಣ ವ್ಯವಸ್ಥೆ ಬಾಲ್ಯದಿಂದಲೆ ಬೆಳೆಸುವುದರಲ್ಲಿ ಗಂಡು ಮಗ ಮೊದಲು ಊಟ ಮಾಡಬೇಕು ನಂತರ ಹೆಣ್ಣು ಮಕ್ಕಳು ಊಟ ಮಾಡಬೇಕು ಎಂಬ ತಳಹದಿಯನ್ನು ಹಾಕಿಬಿಟ್ಟಿರುತ್ತದೆ. ಇವತ್ತಿನ ದಿನದಲ್ಲಿ (ವಾಸ್ತವ) ಎಷ್ಟೇ ಬದಲಾವಣೆಗಳಾಗಿದ್ದಾಗ್ಯೂ ಅರಿವಿದ್ದಾಗ್ಯೂ ಕೂಡ ಮಹಿಳೆಯರ ಸಾಮಾಜಿಕ ಮನಸ್ಥಿತಿಯನ್ನು ನೂರಕ್ಕೆ ತೊಂಬತ್ತೊಂಬತ್ತು ಬದಲಾವಣೆ ಮಾಡಲು ಸಾಧ್ಯವಾಗುತ್ತಿಲ್ಲ.ಇನ್ನು ಗಾರ್ಮೆಂಟ್ಸ್ ಫ್ಯಾಕ್ಟ್ರಿಗಳಲ್ಲಿ ಕೆಲಸ ಮಾಡುವ ಮಹಿಳೆಯರನ್ನು ತೆಗೆದುಕೊಂಡಾಗ ಸಾಕಷ್ಟು ಮಹಿಳೆಯರು ರಕ್ತಹೀನತೆಯಿಂದ ಬಳಲುವ ಸಂದರ್ಭವನ್ನು ಸಂಶೋಧನೆ ಮೂಲಕ ತಿಳಿದುಕೊಳ್ಳಬಹುದಾಗಿದೆ. ಏಕೆಂದರೆ ಇಲ್ಲಿ ಬರುವಂತವರೆಲ್ಲರೂ ಸಾಮಾನ್ಯವಾಗಿ ಕೌಟುಂಬಿಕ ಜವಾಬ್ದಾರಿಯನ್ನು ನಿರ್ವಹಿಸುವ ಕಾರಣಕ್ಕಾಗಿಯೆ. ಹೀಗಿದ್ದಾಗ ಸಹಜವಾಗಿ ಅವರು ಮೊದಲು ಗಂಡು ಮಕ್ಕಳು ಊಟಮಾಡಬೇಕು, ಚೆನ್ನಾಗಿರಬೇಕು, ಅವರ ಹೊಟ್ಟೆ ತುಂಬಿದ ಮೇಲೆ ನಾವು ಊಟಮಾಡುತ್ತೇವೆ. ಎಂಬ ಅಭಿಪ್ರಾಯವನ್ನು ಹೇಳುತ್ತಾರೆ. ಆದರೆ ಇದರಿಂದ ತಮ್ಮ ಆರೋಗ್ಯದ ಬಗ್ಗೆಯಾಗಲಿ, ಊಟದ ಬಗ್ಗೆಯಾಗಲಿ ಯಾವುದರ ಬಗ್ಗೆನೂ ಯೋಚಿಸುತ್ತಿಲ್ಲ. ಬೆಂಗಳೂರಂತ ನಗರೀಕರಣ ಪ್ರದೇಶದಲ್ಲಿ ದಿನೇ ದಿನಕ್ಕೂ ಹೆಚ್ಚುತ್ತಿರುವ ಬೆಲೆಯೇರಿಕೆಯಲ್ಲಿ ಪೌಷ್ಠಿಕ ಆಹಾರವನ್ನು ಖರೀದಿಸುವುದಾಗಲಿ, ಅಥವಾ ಪಡೆಯುವುದಾಗಲಿ ಆಗುವುದಿಲ್ಲ. ಏಕೆಂದರೆ ಮಾಲೀಕರುಕೊಡುವ ಸಂಬಳ ಮಾತ್ರ ಕಡಿಮೆನೇ. ಅವರು ಕೊಡುವ ಸಂಬಳ ನಮ್ಮ ಮಕ್ಕಳಿಗೆ ಮೂರೊಪ್ಪತ್ತಿಗೆ ಹೊಟ್ಟೆ ತುಂಬಾ ಊಟ ಹಾಕದೆ ಇರುವಂತ ಸಂದಂರ್ಭದಲ್ಲಿ ನಮ್ಮ ಹಸಿವಿನ ಬಗ್ಗೆ ಯೋಚಿಸುವುದಿಲ್ಲ. ನಾವು ದುಡಿಯುವುದೇ ಮಕ್ಕಳಿಗೋಸ್ಕರ. ನಮ್ಮ ಜೀವ ಇರೋತನಕ ದುಡಿದು ಮಕ್ಕಳನ್ನು ಸಾಕ್ತೀವಿ. ಅಂದ್ರೆ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಗಂಡು ಹೆಣ್ಣು ಮಕ್ಕಳ ಮನಸ್ಸಲ್ಲಿ ಘಾಡವಾಗಿ ಮಾಡಿಸಿರುವುದನ್ನು ಕಾಣಬಹುದು. ತಾವು ಯಾವುದೇ ಕಾಯಿಲೆಯಿಂದ ಬಳಲುತ್ತಿದ್ದರೂ ಸಹ, ಕೊನೆಗೆ ತಮ್ಮ ಸಾವಿನ ಕುರಿತಾಗಿಯೂ ಯೋಚನೆ ಮಾಡದಿರುವ ಸಂದರ್ಬವನ್ನು ಗಾರ್ಮೆಂಟ್ಸ್ ಮಹಿಳೆಯರಲ್ಲಿ ಕಾಣಬಹುದಾಗಿದೆ. ಈ ಫ್ಯಾಕ್ಟ್ರಿಯಲ್ಲಿ ಕೆಲಸಮಾಡುವಂತ ಮಹಿಳೆಯರು ៨೦%ರಷ್ಟು ಅನಿಮಿಯಾ ಕಾಯಿಲೆಯಿಂದ ಬಳಲುತ್ತಿರುವುದನ್ನು ಸಂಶೋಧನಾ ಅಧ್ಯಯನದ ಮೂಲಕ ತಿಳಿದುಕೊಳ್ಳಬಹುದಾಗಿದೆ. ಹೆಚ್ಚಾನು ಹೆಚ್ಚು ಮಹಿಳೆಯರು ವಯಸ್ಸಿನಲ್ಲಿ ಚಿಕ್ಕವರಿದ್ದಾಗ್ಯೂ ಕೂಡ ಸರಿಯಾದ ಸಮಯಕ್ಕೆ ಉತ್ತಮ ಆಹಾರ ಸೇವಿಸದೇ ಇರುವ ಕಾರಣ ಅರವತ್ತು ವರ್ಷದ ಮುದುಕಿಯರು ಹಾಗೆ ಕಾಣುವ ಸ್ಥಿತಿಯನ್ನು ನೋಡಬಹುದಾಗಿದೆ. ಇನ್ನು ಮದುವೆ ಆಗಿರುವ ಹಾಗೂ ವಯಸ್ಸಾದವರ ದೇಹಸ್ಥಿತಿಯನ್ನು ನೋಡಿದಾಗ ಊಹಿಸಲು ಆಗದಷ್ಟು ಮಟ್ಟಕ್ಕೆ ಮುಟ್ಟುತ್ತದೆ ಎನ್ನಬಹುದು. ಮಹಿಳೆಯು ಮೇಲಿಂದ ಮೇಲೆ ಅಲ್ಪಾವಧಿಯ ಅಂತರದಲ್ಲಿ ಮಕ್ಕಳನ್ನು ಹೆರುವ ಅದರಲ್ಲಿಯೂ ಹದಿಹರೆಯದ ಹುಡುಗಿಯರಿಗೆ ರಕ್ತಹೀನತೆ ಕಟ್ಟಿಟ್ಟ ಬುತ್ತಿ. ಏಕೆಂದರೆ ಪ್ರತಿ ಬಸುರಿನಲ್ಲಿ ಮತ್ತು ಹೆರಿಗೆಯಲ್ಲಿ ದೇಹದಲ್ಲಿ ಸಂಗ್ರಹವಾಗಿರುವ

ಕಬ್ಬಿಣ ಅಂಶ ಇಲ್ಲದಂಗಾಗುತ್ತದೆ. ಹೀಗೆ ವೆಚ್ಚವಾಗುವ ಕಬ್ಬಿಣದ ಪ್ರಮಾಣವನ್ನು ಆಹಾರದ ಮೂಲಕವೇ ಕೊಡಬೇಕಾಗುತ್ತದೆ. ನಮ್ಮ ದೇಶದಲ್ಲಿ ಕಬ್ಬಿಣದ ಕೊರತೆಯಿಂದ ಉಂಟಾಗುವ ರಕ್ತಹೀನತೆ ಎರಡನೇ ಸ್ಥಾನವನ್ನು ಪಡೆದಿದೆ. ಆದ್ದರಿಂದಲೇ ನಮ್ಮ ದೇಶದಲ್ಲಿ ನಡೆಸಲಾಗುತ್ತಿರುವ ರಕ್ತಹೀನತಾ ಪ್ರತಿಬಂಧಕ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಬಸುರಿಯರಿಗೆ ಕಬ್ಬಿಣ ಹಾಗೂ ಪೋಲಿಕ್ ಆಮ್ಲದ ಮಾತ್ರೆಗಳನ್ನು ಕೊಡಲಾಗುತ್ತಿದೆ."[೭]

ಆದರೆ ಆರೋಗ್ಯ ಕಾರ್ಯಕ್ರಮದ ಪ್ರಕಾರ ಇಡೀ ಮಹಿಳಾ ಸಮುದಾಯಕ್ಕೆ ಯಾವ ಬಗೆಯ ಎಷ್ಟು ಮಹಿಳಾ ಆರೋಗ್ಯಕ್ಕೆ ತಲುಪಿದೆ ಎಂಬುದನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಚರ್ಚಿಸುವುದು ಅವಶ್ಯಕವಾಗಿದೆ. ಅದರಲ್ಲೂ ಗಾರ್ಮೆಂಟ್ಸ್ ಮಹಿಳೆಯರು ಇದರ ಉಪಯೋಗವನ್ನು ಎಷ್ಟು ಪಡೆದಿದ್ದಾರೆ ಎಂಬುದು ಸಂಶೋಧನ ಅಧ್ಯಯನದ ಮುಖ್ಯ ಪ್ರಶ್ನೆಯಾಗಿ ಉಳಿಯುತ್ತದೆ. ಅದರಲ್ಲೂ ಯಾವ ವರ್ಗದ ಯಾವ ಜಾತಿಯ ಮಹಿಳೆಯರು ಹೋಗಬೇಕೆಂಬುದನ್ನು ಮೊದಲೇ ಸಮಾಜ & ಕುಟುಂಬ ವ್ಯವಸ್ಥೆಯೇ ರೂಪಿಸಲ್ಪಟ್ಟಿರುತ್ತದೆ. ಅದರಾಚೆಗೂ ಬಡ ಮಹಿಳೆಯರು ಆಸ್ಪತ್ರೆಗೆ ಹೋಗಬೇಕಂತ ಮಾಡಿದರೂ ಸಹಿತ ಮನೆಗೂ ಆಸ್ಪತ್ರೆಗೂ ಅಜಗಜಾಂತರ ವ್ಯತ್ಯಾಸ. ಒಂದು ವೇಳೆ ಹೋದರೆ ಇಡೀ ದಿನದ ಉತ್ಪಾದನೆಯ ದುಡ್ಡನ್ನು ಕಳೆದುಕೊಳ್ಳಬೇಕು.

೪.೩.೩ ಋತುಚಕ್ರದ ಸಮಸ್ಯೆ

ಸಾಮಾನ್ಯವಾಗಿ ಹದಿಹರೆಯ ಯೌವನಾವಸ್ಥೆಯಿಂದ ಶುರುವಾದ ಈ ಸಮಸ್ಯೆ ವಯಸ್ಸಾಗಿ ಮುಪ್ಪಾಗುವ ಋತುಚಕ್ರ ನಿಲ್ಲುವ ಕೊನೆ ಹಂತದವರೆಗೂ ಕಾಡುತ್ತಿರುತ್ತದೆ. ಇದು ಮುಟ್ಟಾಗುವ ಮುನ್ನ ಮಹಿಳೆಯರಲ್ಲಿ ಏನೋ ಆಲಸ್ಯ, ಖಿನ್ನತೆ, ಮೈಬಾರ ಹೊಟ್ಟೆಯಲ್ಲಿ ಕಸಿವಿಸಿ ಸಣ್ಣ ತಲೆನೋವು, ಅವ್ಯಕ್ತ ಕಳವಳ ಅಕಾರಣ ಸಿಡುಕು ವಿಪರಿತ ಕೆಳಹೊಟ್ಟೆ ಸಿಡಿತ(Cramps)ತೊಡೆಗಳಲ್ಲಿ ಸೆಳೆತ ವಾಕರಿಕೆ (ಕೆಲವೊಮ್ಮೆ ವಾಂತಿಯೂ ಸಹ) ಹಸಿವು ನಿದ್ರೆಗಳ ಕೊರತೆಗಳು ವಾಕರಿಗೆ, ಕಾಡುತ್ತಿರುತ್ತವೆ. ಮೈಯಲ್ಲಿ ಸ್ವಲ್ಪ ಹೆಚ್ಚು ನೀರು ಸೇರುವುದರಿಂದ ತನ್ನ ಶರೀರವೇ ತನಗೆ ಭಾರ ಎಂದು ಆಕೆಗೆ ಅನ್ನಿಸುತ್ತದೆ. ಕನಿಷ್ಠ ಒಂದು ಗಂಟೆಯಾದರೂ ಅವಳು ಆ ನೋವಿನಲ್ಲಿ ತೊಳಲುತ್ತ ವಾಂತಿ ವಾಕರಿಕೆಗಳನ್ನು ಅನುಭವಿಸುತ್ತಾಳೆ. ಅದು ಕ್ರಮೇಣ ಶಮನವಾದರೂ ಕೆಳಹೊಟ್ಟೆಯಲ್ಲಿ ಒಂದು ತರಹದ ಸಹಿಸಿ ಕೊಳ್ಳಲಾದಂತಹ ನೋವು ಸೊಂಟನೋವು ತೊಡೆಗಳಲ್ಲಿ ಸೆಳೆತ ದಿನವೆಲ್ಲಾ ಅವಳನ್ನು ಕಾಡುತ್ತಲೇ ಇರುತ್ತವೆ. ಒಮ್ಮೊಮ್ಮೆ ಸ್ವಲ್ಪ ಮುಂಚಿತವಾಗಿಯೋ ಪ್ರಾರಂಭವಾಗಿ, ಮುಟ್ಟಾದ ಇನ್ನೆರಡು ದಿನಗಳೂ ಸೆಳೆತದ ಮುಟ್ಟುನೋವು (spasmodic pysmenorrhoea) ಅವಳನ್ನು ಆವರಿಸಬಹುದು. ಇನ್ನು ಮುಂತಾದವು ಋತುಚಕ್ರದ ಲಕ್ಷಣಗಳೆಂತಲೇ ಕರೆಯಬಹುದು. ಸಾಮಾನ್ಯವಾಗಿ ಪ್ರತಿಯೊಬ್ಬ ಮಹಿಳೆಯು ಮುಟ್ಟಾಗುವ ಮುಂಚೆ ಹಾಗೂ ಮುಟ್ಟಾದಾಗ ಉಂಟಾಗುವ ತೀವ್ರತಲೆನೋವು ಬಿಳಿಸೆರಗು, ಹೆಚ್ಚಿನ ರಕ್ತಸ್ರಾವ, ಋತು ಚಕ್ರ ಸರಿಯಾಗಿಲ್ಲದಿರುವುದು ಇತ್ಯಾದಿ ಸಮಸ್ಯೆಗಳನ್ನು ಮೌನವಾಗಿಯೆ ಸಹಿಸುತ್ತಾಳೆ. ಈ ತೊಂದರೆಗಳನ್ನು ನಿರ್ಲಕ್ಷಿಸಿ ಚಿಕಿತ್ಸೆಗೆ ಒಳಪಡಿಸದೇ ಇದ್ದಲ್ಲಿ ಮುಂದೆ ಗರ್ಭಿಣಿ ಇದ್ದಾಗ ಕೀಲ್ಗಳು ಉರಿಯು ಇತ್ಯಾದಿ ಸಮಸ್ಯೆಗಳಿಗೆ ಎಡೆಮಾಡಿಕೊಡುತ್ತದೆ ಎಂಬ ತಿಳುವಳಿಕೆ ಇದ್ದಾಗ್ಯೂ ಕೂಡ

ನಿರ್ಲಕ್ಷಿಸುತ್ತಾರೆ. ಎಷ್ಟೋ ಮಹಿಳೆಯರಿಗೆ ಆ ಒಂದು ತಿಳುವಳಿಕೆನೂ ಇಲ್ಲ ಎಂಬುದಕ್ಕೆ ಗಾರ್ಮೆಂಟ್ಸ್ ಮಹಿಳೆಯರು ಅನುಭವಿಸುವ ಮುಟ್ಟಿನ ಸಮಸ್ಯೆ ಅಷ್ಟಿಷ್ಟಲ್ಲ. ಏಕೆಂದರೆ ಆ ಸಂದರ್ಭದಲ್ಲಿ ಮಹಿಳೆಯರಿಗೆ ಆಗುವ ಮಾನಸಿಕವಾಗಿ ದೈಹಿಕವಾಗಿ ಅನುಭವಿಸುವ ಸಮಸ್ಯೆಗಳನ್ನು ಕೇಳುವವರೆ ಇಲ್ಲದಂತಾಗಿದೆ. ಏಕೆಂದರೆ ಮಾಲಿಕರೆ ಮೂಲಭೂತವಾಗಿ ಲಾಭ ದೋರಣೆಯನ್ನು ಹೊಂದಿರುವ ಕಾರಣ ಶೌಚಾಲಯ ವ್ಯವಸ್ಥೆ ಕೂಡ ಫ್ಯಾಕ್ಟ್ರಿಯಲ್ಲಿ ಕಟ್ಟಿಸಿಲ್ಲ. ಇಂತಹ ಸಂದರ್ಭದಲ್ಲಿ ಹೇಗೆ ಆ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಸಾಧ್ಯ. ಈ ವೇಳೆಯಲ್ಲೆ ಅತಿ ಹೆಚ್ಚು ದೈಹಿಕವಾಗಿ ಸ್ವಚ್ಛವಾಗಿರಬೇಕು, ಪದೇ ಪದೇ ಬಟ್ಟೆಗಳನ್ನು ಬದಲಾಯಿಸಬೇಕು. ಇಲ್ಲದಿದ್ದರೆ ಅನೇಕ ಕಾಯಿಲೆಗಳಿಗೆ ಬಲಿಯಾಗಬೇಕಾಗುತ್ತದೆ. ಇಡೀ ಮಹಿಳಾ ಸಮುದಾಯಕ್ಕೆ ಈ ಸಮಸ್ಯೆ ಕಟ್ಟಿಟ್ಟ ಬುತ್ತಿಯಾದರೂ ಕೂಡ ಕೆಲವೊಂದು ವರ್ಗದ ಮಹಿಳಾ ಸಮುದಾಯಕ್ಕೆ ಕೆಲವೊಂದು ಸೌಲತ್ತುಗಳಾದರೂ ಕೂಡ ಸಿಗುತ್ತವೆ. ಆದರೆ ಶೋಷಣೆಯಲ್ಲಿ ಅತಿ ಹೆಚ್ಚು ಶೋಷಿತ ವರ್ಗಕ್ಕೆ ಸೇರುವ ಗಾರ್ಮೆಂಟ್ಸ್ ಮಹಿಳೆಯರ ಪರಿಸ್ಥಿತಿಯಂತೂ ಹೇಳತೀರದು. ಫ್ಯಾಕ್ಟ್ರಿಯಲ್ಲಿ ಶೌಚಾಲಯದ ವ್ಯವಸ್ಥೆ ಇಲ್ಲದಾಗ ಅವರು ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಕನಸಿನ ಮಾತಾಗುತ್ತದೆ. ಅವರು ಒಂದು ವೇಳೆ ಆರೋಗ್ಯದ ಕಡೆ ಗಮನಹರಿಸಿದಾಗ ಇಡೀ ಕುಟುಂಬವೇ ಉಪವಾಸ ಬೀಳಬೇಕಾಗುತ್ತದೆ. ಏಕೆಂದರೆ ಗಾರ್ಮೆಂಟ್ಸ್ ಮಹಿಳೆಯರು ಹೆಚ್ಚಾನುಹೆಚ್ಚು ಕೌಟುಂಬಿಕ ಜವಾಬ್ದಾರಿಯನ್ನು ಹೊತ್ತುಕೊಂಡವರೇ ಆಗಿರುತ್ತಾರೆ. ಅನೇಕ ಮಹಿಳೆಯರನ್ನು ಸಂದರ್ಶಿಸಿದಾಗ ಫ್ಯಾಕ್ಟ್ರಿ ಮಾಲೀಕರ ಉತ್ಪಾದನೆ ಹೆಚ್ಚಿಸುವ ಉದ್ದೇಶದಲ್ಲಿ ಹೊಟ್ಟೆನೋವಿನ ಸಮಸ್ಯೆ ಇರಲಿ, ಗರ್ಭಿಣಿ ಇದ್ದ ಸಂದರ್ಭದಲ್ಲಿಯೂ ಮಾಲೀಕರುಪರಿಗಣಿಸಿದಾಗ ಮಾಲೀಕರ ಇಂತಹ ಸನ್ನಿವೇಶವನ್ನು ಅತಿರೇಕದ ಪರಮಾವಧಿಯನ್ನು ತಿಳಿಯಬಹುದು ಅಮಾನವೀಯವಾಗಿ ವರ್ತಿಸುವುದನ್ನು ಕಾಣಬಹುದಾಗಿದೆ.

೪.೩.೪ ಸಂತಾನೋತ್ಪತ್ತಿ

ಮನೋಸ್ವಾಸ್ಥ್ಯ ಸಾಮಾಜಿಕ ವಾತಾವರಣದ ಪ್ರತಿಬಿಂಬವೆಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಮಹಿಳೆಯರ ವಿರುದ್ಧ ನಡೆಯುವ ಎಲ್ಲ ಬಗೆಯ ದೌರ್ಜನ್ಯಗಳು ಮಹಿಳೆಯ ಮಾನಸಿಕ ಬದುಕನ್ನು ನಿರ್ಬಂದಿಸುವುದರಿಂದ ಅವಳ ಭಾವಲೋಕದ ಸಂಗತಿಗಳನ್ನು ಅವಳು ಸ್ಪಷ್ಟವಾಗಿ ವ್ಯಕ್ತಪಡಿಸುವುದಕ್ಕೂ ನಿರ್ಭಂಧಗಳಿರುವುದನ್ನು "ಮೌನ ಸಂಸ್ಕೃತಿ"ಯಲ್ಲಿ ಕಾಣಬಹುದಾಗಿದೆ.

ಸಾರ್ವಜನಿಕ ವಲಯಗಳಲ್ಲಿ ನಿರಂತರವಾಗಿ ನಡೆಯುತ್ತಿರುವ ಹಿಂಸೆ ಮತ್ತು ದೌರ್ಜನ್ಯಗಳಿಗೆ ಮಹಿಳೆಯ ಮನೋಲೋಕವು ತತ್ತರಿಸಿ ಹೋಗಿದೆ. ಅದರಲ್ಲೂ ಆಧುನಿಕ ಮಹಿಳೆಯು ಪ್ರತಿಕೂಲಕರವಾದ ಸಮಾಜ ವ್ಯವಸ್ಥೆಯಲ್ಲಿನ ಕೌಟುಂಬಿಕ ಮತ್ತು ಸಾರ್ವಜನಿಕ ವಲಯಗಳಲ್ಲಿ ನಿರಂತರವಾಗಿ ದುಡಿಯುವುದರೊಂದಿಗೆ ಅಲ್ಲಿನ ಹಿಂಸೆ–ದೌರ್ಜನ್ಯಗಳು ಹೆಣ್ಣಾಗಿರುವ ಕಾರಣಕ್ಕಾಗಿಯೇ ಅನುಭವಿಸುವ ಒತ್ತಡಗಳಿಂದ ಮಾನಸಿಕ ಅಸ್ವಾಸ್ಥ್ಯಕ್ಕೆ ಒಳಗಾಗುತ್ತಿರುವುದು. ಕಂಡು ಬರುತ್ತದೆ. ಉದಾ :– ಸಾಕಷ್ಟು ಗಾರ್ಮೆಂಟ್ಸ್ ಗರ್ಭಿಣಿ ಮಹಿಳೆಯರು ಈ ಬಗೆಯ ಒತ್ತಡಗಳಿಂದ ಗರ್ಭಪಾತಗಳಾಗುತ್ತಿರುವುದನ್ನು ಕಾಣಬಹುದಾಗಿದೆ. ಈ ನಿಟ್ಟಿನಲ್ಲಿ ದೇಹ ಮನಸ್ಸು ಬುದ್ಧಿಗಳು ಪರಸ್ಪರ ಮಾರಕವಾಗಿವೆ. ಮಹಿಳೆ ಆರೋಗ್ಯದ ಸಂದರ್ಭದಲ್ಲಿ ವಿಶೇಷವಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕಾಗಿರುವುದು ಸಂತಾನಾರೋಗ್ಯ;

[illegible]

[illegible]

[illegible]

[illegible]

ಸಾರ್ವಜನಿಕ ವಲಯದ ಬಹುಪಾಲು ದೌರ್ಜನ್ಯಗಳು ಮಹಿಳೆಯರ ಸಂತಾನಾರೋಗ್ಯದ ಮೇಲಾಗುತ್ತವೆ. ಮಹಿಳೆಯರ ಆರೋಗ್ಯದಲ್ಲಿ ಸಂತಾನಾರೋಗ್ಯವು ಬಹುಮುಖ್ಯವಾದದು. ಒಂದು ಸಂತಾನವನ್ನು ಇಡೀ ವಂಶಕ್ಕೆ ದೇಶದ ಅಭಿವೃದ್ಧಿಗೆ ಮನುಕುಲಕ್ಕೆ ನೀಡುವಲ್ಲಿ ಮಹಿಳೆಯು ತನ್ನ ಪ್ರಾಣವನ್ನೇ ಪಣವಾಗಿಡುತ್ತಾಳೆ. ಗಂಡು ಇದರಲ್ಲಿ ಭಾಗಿಯಾದರೂ ಕೂಡ ಹೆಣ್ಣಿನ ಭಾಗವಹಿಸುವಿಕೆಯು ಸುದೀರ್ಘ ಅವಧಿಯವರೆಗೂ ಇರುತ್ತದೆ. ಸಂತಾನೋತ್ಪತ್ತಿಯು ಮಹಿಳಾ ಬದುಕಿನ ಕೇಂದ್ರಬಿಂದುವಾದ ಅಂಶವಾಗಿದೆ ಎಂದು ನಂಬಿಸಲಾಗಿದೆ. ಈ ಬಗೆಯ ಸಂತಾನ ಕ್ರಿಯೆಯ ಕುರಿತು ಸಾಮಾಜಿಕವಾಗಿ ಕಟ್ಟಲ್ಪಟ್ಟ ವ್ಯಾಖ್ಯಾನಗಳು ಮಹಿಳೆಯರ ಮೇಲೆ ಹಲವು ನಿರ್ಬಂಧಗಳನ್ನು ಅಡೆತಡೆಗಳನ್ನುಂಟು ಮಾಡಿದೆ. ಸರಳವಾಗಿ ನಡೆಯಬೇಕಾದ ಪ್ರಕ್ರಿಯೆಯು ಸಾಮಾಜಿಕ ವ್ಯವಸ್ಥೆಯ ಹಿಡಿತಕ್ಕೆ ಸಿಲುಕಿ ಮಹಿಳಾ ಬದುಕನ್ನು ಅಧೀನತೆಯತ್ತ ತಿರುಗಿಸಿದೆ. ಒಟ್ಟಾರೆಯಾಗಿ ಮಹಿಳೆಯರ ಯಾವುದೇ ಸನ್ನಿವೇಶವು ಸಹ ಮೂಲಭೂತವಾಗಿ ಸಾಮಾಜಿಕತೆಯ ತಳಹದಿಯನ್ನಾಧರಿಸಿಕೊಂಡಿದೆ.

"ಸಂತಾನಾರೋಗ್ಯವನ್ನು ವಿಶ್ವಸಂಸ್ಥೆಯು ಹೀಗೆ ವ್ಯಾಖ್ಯಾನಿಸುತ್ತದೆ. ಸಂತಾನಾರೋಗ್ಯವೆಂಬುದು ಇತ್ತೀಚಿನ ದಶಕಗಳಲ್ಲಿ ಬಂದ ಹೊಸ ಪರಿಕಲ್ಪನೆ. ಜನರ ಹೊಣೆಯತ್ತ ತೃಪ್ತಿಕರವಾದ ಹಾಗೂ ಅಪಾಯ ರಹಿತವಾದ ಲೈಂಗಿಕ ಜೀವನವನ್ನು ನಡೆಸಲು ಸಾಧ್ಯವಾಗಿ, ಆರೋಗ್ಯಯುತ ಸಂತಾನವನ್ನು ಪಡೆಯಲು ಸಮರ್ಥರಾಗಿದ್ದು, ಬೇಕಿದ್ದಲ್ಲಿ ಯಾವಾಗ ಎಷ್ಟು ಮಕ್ಕಳು ಬೇಕು ಎನ್ನುವುದನ್ನು ನಿರ್ಧರಿಸುವ ಸ್ವಾತಂತ್ರ್ಯವನ್ನು ಹೊಂದಿರುವುದೇ ಸಂತಾನಾರೋಗ್ಯ"[೮] ಇಡೀ ಭಾರತ ದೇಶವೇ ರೈತರ ಬೆನ್ನೆಲುಬಾಗಿದೆ ಎಂದು ಹೇಳಿದರೂ ಮಹಿಳೆ ಇಡೀ ಕುಟುಂಬಕ್ಕೆ, ಸಾಮಾಜಕ್ಕೆ ದೇಶಕ್ಕೆ ಪ್ರತಿಯೊಬ್ಬ ಪುರುಷನ ಯಶಸ್ವಿ ಹಿಂದುಗಡೆ ಬೆನ್ನೆಲುಬಾಗಿ ನಿಂತಿದ್ದಾಳೆ. ಆದರೂ ಪುರುಷ ಪ್ರಧಾನ ಸಮಾಜ ಮಹಿಳೆಯರ ಆರೋಗ್ಯಕ್ಕೆ ಅಷ್ಟಾಗಿ ಗಮನಕೊಡುವುದಿಲ್ಲ. ಆರೋಗ್ಯದ ಬಗೆಗಿನ ಪ್ರಜ್ಞೆಯ ಕೊರತೆಯೇ ಅನಾರೋಗ್ಯಕ್ಕೆ ಕಾರಣವಾಗುತ್ತದೆ.

ಮಹಿಳೆಯ ಆರೋಗ್ಯ ಇಡೀ ಸಮುದಾಯದ ಆರೋಗ್ಯದ ಅಡಿಗಲ್ಲು. ಅಷ್ಟೇ ಅಲ್ಲದೆ ಸ್ತ್ರೀಯರ ಆರೋಗ್ಯ ಆಯಾ ಸಮಾಜದ ಒಟ್ಟು ಆರೋಗ್ಯಕ್ಕೆ ಹಿಡಿದ ಕೈಗನ್ನಡಿಯನ್ನಬಹುದು. ಈ ಹೇಳಿಕೆ ಉತ್ಪ್ರೇಕ್ಷೆಯಂತೆ ಮೇಲ್ನೋಟಕ್ಕೆ ಕಂಡು ಬಂದರೂ ಅದರಲ್ಲಿ ಕಿಂಚಿತ್ತು ಉತ್ಪ್ರೇಕ್ಷೆಯಿಲ್ಲ. ಎನ್ನುವುದನ್ನು ವಿಶ್ವ ಆರೋಗ್ಯ ಸಂಸ್ಥೆಯನ್ನು ಒಳಗೊಂಡಂತೆ ವಿಶ್ವಸಂಸ್ಥೆಯ ಹಲವಾರು ಅಂಗಸಂಸ್ಥೆಗಳು ವರದಿಗಳೂ ಜನಗಣತಿಯ ವರದಿಗಳು ಹಾಗೂ ಪ್ರಪಂಚದ ಅನೇಕ ದೇಶಗಳಲ್ಲಿ ನೆಡೆದಿರುವ ಹಾಗೂ ನೆಡೆಯುತ್ತಿರುವ ಸಂಶೋಧನಾ ವರದಿಗಳು ಸ್ಪಷ್ಟಪಡಿಸಿವೆ. ಸ್ತ್ರೀಯರು ಇಡೀ ಮನುಕುಲದ ಅರ್ಧಭಾಗವಾಗಿದ್ದು ಮುಂದಿನ ಮನುಕುಲದ ಸಂತತಿ ಆರೋಗ್ಯವಾಗಿ ಹುಟ್ಟುವುದು ಮತ್ತು ಹೀಗೆ ಬದುಕಿ ಉಳಿದ ಶಿಶುಗಳ ಆರೋಗ್ಯ ಬಹುಮಟ್ಟಿಗೆ ಸ್ತ್ರೀಯರ ಸಂಪೂರ್ಣ ಆರೋಗ್ಯ ಪರಿಸ್ಥಿತಿಯ ಮೇಲೆ ಅವಲಂಬಿತವಾಗಿದೆ.

ಮಹಿಳೆ ಅನಾದಿಕಾಲದಿಂದಲೂ ಎಲ್ಲಾ ಸಮಾಜಗಳಲ್ಲೂ ಬರಿಯ ಸಂತಾನೋತ್ಪತ್ತಿಯ ಕಾರ್ಯವನ್ನಷ್ಟೇ ಅಲ್ಲದೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಆಯಾ ಸಮಾಜದ ಸಂಪತ್ತಿನ ಉದಯಕ್ಕಾಗಿಯೂ ಪುರುಷರಿಗೆ ಹೆಗಲೆಣೆಯಾಗಿ ಕೆಲವೊಮ್ಮೆ ಪುರಷರಿಗಿಂತ ಹೆಚ್ಚಿನ ಕೊಡುಗೆ ನೀಡುತ್ತಾ ಬಂದಿದ್ದಾಳೆ. ಇನ್ನು ಮನೆಯ ಕುಟುಂಬದ ಕೆಲಸಗಳು, ಮಕ್ಕಳ ಲಾಲನೆ ಪಾಲನೆ, ವಯಸ್ಸಾದ ಕುಟುಂಬದ ಸದಸ್ಯರು ಮತ್ತು ಅನಾರೋಗ್ಯ ಪೀಡಿತರ ಸೇವೆಯೂ ಮಹಿಳೆಯ ಮಡಿಲಿಗೆ ಬಿದ್ದಿವೆ. ಬಡವರ್ಗಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರು ಇವೆಲ್ಲ ಹೊರೆಗಳ ಜೊತೆಗೆ ಕುಟುಂಬಕ್ಕೆ ಮತ್ತು ಜಾನುವಾರುಗಳಿಗೆ ಬೇಕಾಗುವ ಉರುವಲು ಮೇವು ಇತ್ಯಾದಿಗಳನ್ನು ಕಾಡು ಮೇಡುಗಳಲ್ಲಿ ಅಲೆದು ಸಂಗ್ರಹಿಸುವ ಕಠಿಣ ಕೆಲಸಗಳನ್ನು ಮಾಡಬೇಕಾಗಿದೆ.

ನಗರದ ಬಡಮಹಿಳೆಯರು, ಕೆಳ ವರ್ಗ ಹಾಗೂ ಮಧ್ಯಮ ವರ್ಗದ ಮಹಿಳೆಯರು ಬಹುಮುಖಿಯಾದ ಶ್ರಮದ ಕೆಲಸಗಳನ್ನು ಮಾಡುತ್ತಿದ್ದಾರೆ. ಪಿತೃಪ್ರಧಾನವಾದ ನಮ್ಮ ಸಮಾಜದಲ್ಲಿ ಸ್ತ್ರೀಯರ ಸ್ಥಿತಿಗತಿಗಳು ಶೋಚನೀಯವಾಗಿದ್ದು, ತಮ್ಮ ಆಹಾರ, ಆರೋಗ್ಯ, ವಿದ್ಯೆ ಉದ್ಯೋಗ ಹಾಗೂ ಸಂತಾನೋತ್ಪತ್ತಿ ಇತ್ಯಾದಿಗಳಲ್ಲಿ ಯಾವುದೇ ಆಯ್ಕೆಯಿಲ್ಲದೆ ಸಮಾನ ಅವಕಾಶಗಳಿಲ್ಲದ ವಂಚಿತರಾದ ಸ್ತ್ರೀಯರ ಪ್ರಚಲಿತ ಬದುಕಿಗೆ ನಮ್ಮ ದೇಶದಲ್ಲಿ ಹಲವಾರು ದಶಕಗಳಿಂದ ಒಂದೆ ಸಮನೆ ಕೆಳಗಿಳಿಯುತ್ತಿರುವ ಸ್ತ್ರೀಯರ ಸಂಖ್ಯೆಯೇ ಸಾಕ್ಷಿ. ಜೊತೆಗೆ ಮಹಿಳೆಯರ ಆರೋಗ್ಯ ಎಷ್ಟು ನಿರ್ಲಕ್ಷಿಸಲ್ಪಟ್ಟಿದೆಯೆಂದರೆ", ರಾಷ್ಟ್ರೀಯ ಕುಟುಂಬ ಆರೋಗ್ಯ ಸಂರಕ್ಷಣೆಯ ಪ್ರಕಾರ ೧೯೯೦ರ ದಶಕದ ಮೊದಲ ಅರ್ಧದ ಅವಧಿಯಲ್ಲಿ ಸುಮಾರು ೧.೧೧೦೦೦ ಮಹಿಳೆಯರು ಪ್ರತಿ ವರ್ಷ ಬಸಿರು ಮತ್ತು ಹೆರಿಗೆಗೆ ಸಂಬಂಧಿಸಿದ ಕಾರಣಗಳಿಂದ ಮರಣವನ್ನಪ್ಪುತ್ತಿದ್ದುದು ವರದಿಯಾಗಿದೆ. ಇತ್ತೀಚೆಗೆ ಇನ್ನಿತರ ವರದಿಗಳ ಪ್ರಕಾರ ಈ ರೀತಿ ಪ್ರತಿ ವರ್ಷ ಸಾಯುವ ಮಹಿಳೆಯರ ಸಂಖ್ಯೆ ೧.೨೫.೦೦೦ಕ್ಕೆ ಏರಿದೆ. ವಿಶ್ವಬ್ಯಾಂಕಿನ ಇನ್ನೊಂದು ವರದಿಯಂತೆ ನಮ್ಮ ದೇಶದ ಬಸುರಿಯರಲ್ಲಿ ಸುಮಾರು ೮೮% ಮಂದಿ ರಕ್ತಹೀನತೆಯಿಂದ ಬಳಲುತ್ತಿದ್ದು ಇದು ನಮ್ಮ ದೇಶದ ಮಹಿಳೆಯರ ಆರೋಗ್ಯ ಹಾಗೂ ಆಹಾರ ಪೋಷಣಾ ಸ್ಥಿತಿಗಳಿಗೆ ಹಿಡಿದ ಕೈಗನ್ನಡಿಯಾಗಿದೆ. ಬಸುರಿನ ಅವಧಿಯಲ್ಲಿ ಹಾಗೂ ಹೆರಿಗೆಯಲ್ಲಿ ಸಾಯುವ ಮಹಿಳೆಯರಲ್ಲಿ ಶೇಕಡಾ ೨೦ಕ್ಕಿಂತ ಹೆಚ್ಚು ಮಂದಿ ರಕ್ತಹೀನತೆಯಿಂದ ಸಾಯುತ್ತಾರೆ ಎಂಬುದನ್ನು ಇಲ್ಲಿ ಗಮನಿಸಬೇಕು. ಅಷ್ಟೇ ಅಲ್ಲದೆ ಬಸಿರು ಮತ್ತು ಹೆರಿಗೆಯ ನಂತರದ ಅವಧಿಯಲ್ಲಿ ರಕ್ತಸ್ರಾವದಿಂದ ೨೫%ರಷ್ಟು ಮಹಿಳೆಯರು ಸಾವಿಗೆ ತುತ್ತಾಗುತ್ತಾರೆ ಎನ್ನುವುದು ನಮ್ಮ ಮಹಿಳೆಯರ ಆರೋಗ್ಯ ಎಷ್ಟರ ಮಟ್ಟಿಗೆ ನಿರ್ಲಕ್ಷಿಸಲ್ಪಟ್ಟಿದೆ ಎಂಬುದನ್ನು ಎತ್ತಿ ತೋರಿಸುತ್ತದೆ.

ಅಂತರಾಷ್ಟ್ರೀಯ ಜನಸಂಖ್ಯಾ ಅಧ್ಯಯನ ಸಂಸ್ಥೆಯ (೧೯೯೫) ವರದಿಯ ಪ್ರಕಾರ ನಮ್ಮ ದೇಶದಲ್ಲಿ ಒಂದು ಲಕ್ಷ ಮಹಿಳೆಯರು ಪ್ರತಿ ವರ್ಷ ಬಸಿರು ಹಾಗೂ ಹೆರಿಗೆಗೆ ಸಂಬಂಧಿಸಿದ ಕಾರಣಗಳಿಂದಾಗಿಯೇ ಸಾಯುತ್ತಿದ್ದಾರೆ. ಹೆರಿಗೆಯಲ್ಲಿ ಅತಿ ಹೆಚ್ಚಾಗಿ ಸಾಯುವ ಸ್ತ್ರೀ ಸಂಖ್ಯೆ ಇರುವ ದೇಶಗಳ ಪೈಕಿ ನಮ್ಮ ದೇಶವೂ ಒಂದೂ ಎನ್ನಬಹುದು. ಭಾರತದಂತಹ ವಿಶ್ವದ ದೊಡ್ಡ ಪ್ರಜಾಶಕ್ತಿಗೆ

[illegible]

[illegible]

[illegible]

ಅವಮಾನಕಾರಿಯಾದ ಸಂಗತಿಯನ್ನಬಹುದು. ಈ ಸಂಖ್ಯೆ ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಇನ್ನು ಹೆಚ್ಚು ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಲಿಂಗ ತಾರತಮ್ಯವಿರುವ ಪುರುಷ ಪಕ್ಷಪಾತಿಯಾದ ನಮ್ಮ ಸಮಾಜದಲ್ಲಿ ಬಹಳಷ್ಟು ಹೆಣ್ಣು ಮಕ್ಕಳು ಕಡಿಮೆ ಪ್ರಮಾಣದ ಕಡಿಮೆ ಗುಣಮಟ್ಟದ ಆಹಾರವನ್ನು ಉಣ್ಣುವುದರಿಂದ ಹಾಗೂ ಅವರ ಅನೇಕ ದೈಹಿಕ ಮಾನಸಿಕ ತೊಂದರೆಗಳು ಮತ್ತು ಕಾಯಿಲೆಗಳು ಕುಟುಂಬದಲ್ಲಿ ನಿರ್ಲಕ್ಷಿಸಲ್ಪಡುವುದರಿಂದ ಹೆಣ್ಣು ಮಕ್ಕಳ ಬೆಳವಣಿಗೆ ಕುಂಠಿತವಾಗುತ್ತದೆ. ಅವಳ ನ್ಯೂನಪೋಷಣಾ ಸ್ಥಿತಿಯೂ ಅವಳ ಪರಿಪೂರ್ಣ ವಿಕಾಸಕ್ಕೆ ಆಸ್ಪದವೀಯುವುದಿಲ್ಲ.ಹೀಗೆ ಬೆಳೆದ ಹೆಣ್ಣು ಮಗು ಇನ್ನು ಹರೆಯಕ್ಕೆ ಕಾಲಿಡುತ್ತಿದ್ದಂತೆ ಮದುವೆ, ಬಸಿರು, ಬಾಣಂತಿತನಗಳ ದಾಳಿಗೆ ಒಳಗಾಗಿ ಅವಳಿಗೆ ಹುಟ್ಟುವ ಮಕ್ಕಳು ಅನಾರೋಗ್ಯಕ್ಕೂ ಅಪಪೋಷಣೆಗೂ ತುತ್ತಾಗುವ ಅಪಾಯಗಳನ್ನು ಹೊತ್ತುಕೊಂಡೆ ಹುಟ್ಟುತ್ತವೆ. ಹೀಗೆ ಸ್ತ್ರೀಯರ ಅನಾರೋಗ್ಯದ ವಿಷವರ್ತುಲ ಒಂದು ತಲೆಮಾರಿನಿಂದ ಇನ್ನೊಂದಕ್ಕೆ ಮುಂದುವರಿಯುತ್ತಲೇ ಹೋಗುತ್ತದೆ.

ಮಹಿಳೆಯರ ಅನಾರೋಗ್ಯವು ಅಪಪೋಷಣೆ ಹೆರಿಗೆಯಲ್ಲಿ ಬಾಣಂತಿತನದ ಅವಧಿಯಲ್ಲಿ ಅವರ ಅಕಾಲಿಕ ಮರಣವನ್ನಪ್ಪುತ್ತಾರೆ. ನವಜಾತಶಿಶುಗಳ ಮರಣ, ಶಿಶುಗಳ ಅನಾರೋಗ್ಯ ಮತ್ತು ಬಾಲ್ಯವಸ್ಥೆಯಲ್ಲಿಯೇ ಮರಣವನ್ನಪ್ಪುವ ಮಕ್ಕಳ ಸಂಖ್ಯೆ ಇವೆಲ್ಲಾ ಅಪಾಯಗಳನ್ನು ನಮ್ಮ ಸಮಾಜದಲ್ಲಿ ಸುಲಭವಾಗಿ ತಡೆಗಟ್ಟಬಹುದಾಗಿದೆ. ಆದರೂಸಹ ನಮ್ಮ ಸಮಾಜದಲ್ಲಿ ಹಾಗೂ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿರುವ ಲಿಂಗ ಅಸಮಾನತೆಯಿಂದಾಗಿ ಮತ್ತು ಜೀವ ವಿರೋಧಿಯಾದ ದಮನಕಾರಿ ಮೌಲ್ಯಗಳಿಂದಾಗಿ ಮಹಿಳೆಯರಿಗೆ ತಮ್ಮ ಆರೋಗ್ಯಕ್ಕೆ, ಸಂತಾನೋತ್ಪತ್ತಿಗೆ, ತಮ್ಮ ಸ್ವಂತ ದೇಹಕ್ಕೆ ಸಂಬಂಧಿಸಿದ ಅನೇಕ ವಿಷಯಗಳಲ್ಲಿ ನಿರ್ಧಾರ ತೆಗೆದುಕೊಳ್ಳುವ ಸರಿಯಾದ ಸಂಪೂರ್ಣ ಹಕ್ಕು ಹಾಗೂ ಆಯ್ಕೆಗಳಿಲ್ಲ. ಜೊತೆ ಜೊತೆಗೆ ಸ್ತ್ರೀಯರ ಮೂಲಭೂತ ಅಗತ್ಯಗಳನ್ನು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನಿರ್ಲಕ್ಷಿಸಲಾಗಿದೆ. "೧೯೯೯ರ ಮಾನವ ವಿಕಾಸ ವರದಿಯ ಪ್ರಕಾರ ಪಟ್ಟಿ ಮಾಡಿರುವ ೧೭೪ಳ ದೇಶಗಳಲ್ಲಿ ಲಿಂಗ ಸಂಬಂಧಿ ವಿಕಾಸದ ಸೂಚ್ಯಂಕದಲ್ಲಿ ಭಾರತ ೧೧೦ಳ ನೇ ಸ್ಥಾನದಲ್ಲಿದೆ. ಇದು ಲಿಂಗ ಸಮಾನತೆಯನ್ನು ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯಬೇಕಾದ ದೊಡ್ಡ ಪ್ರಜಾಪ್ರಭುತ್ವವಾದ ನಮ್ಮ ದೇಶಕ್ಕೆ ಅವಮಾನಕಾರಿ ಎನ್ನುಬಹುದು.

ನಮ್ಮ ದೇಶದಲ್ಲಿ ಸಾಮಾಜಿಕ ಆರ್ಥಿಕ ಸಾಂಸ್ಕೃತಿಕ ರಾಜಕೀಯ ಹಾಗೂ ಸಮುದಾಯದ ಆರೋಗ್ಯಕ್ಕೂ ಹೇಗೆ ಮಾರಕವಾಗಿದೆ ಎಂಬ ಸಾಮಾಜಿಕ ಸತ್ಯವನ್ನು ಸ್ಪಷ್ಟೀಕರಿಸುವುದು ಹಾಗೂ ಸಾಮಾಜಿಕ ವಸ್ತು ಸ್ಥಿತಿಗಳನ್ನು ಮಹಿಳೆಯರ ಅನುಭವಾತ್ಮಕ ನೆಲೆಯಿಂದ ಪರಿಶೀಲಿಸುವುದು ಮುಖ್ಯವಾಗಿದೆ.

ಕಾರ್ಕಲ್‌ರವರ ಪ್ರಕಾರ (೧೯೯೫) ಹೆರಿಗೆಯಲ್ಲಿ ಸಾಯುವ ಸ್ತ್ರೀಯೊಬ್ಬಳಿಗೆ ಪ್ರತಿಯಾಗಿ ೧೬-೫ ಸ್ತ್ರೀಯರು ಬಸಿರು ಹಾಗೂ ಹೆರಿಗೆಯಲ್ಲಿ ಮತ್ತು ಹೆರಿಗೆಯ ನಂತರದ ಅವಧಿಗಳಲ್ಲಿ ಕಾಯಿಲೆಗಳಿಂದ ನರಳುತ್ತಾರೆ ಎಂಬುದು ಅನೇಕ ಅಧ್ಯಯನಗಳಿಂದ ಸಿದ್ಧವಾಗಿರುವ ಸಂಗತಿ. ಅದರಲ್ಲಿಯೂ ಗ್ರಾಮೀಣ ಮಹಿಳೆಯರ ಆರೋಗ್ಯ ಪರಿಸ್ಥಿತಿ ಇನ್ನೂ ಧಾರುಣವಾದದ್ದು. ಕರ್ನಾಟಕ ಸರ್ಕಾರದ ಮಾನವ

ವಿಕಾಸ ವರದಿಯ ಪ್ರಕಾರ (೧೯೯೯) ನಮ್ಮ ಹಳ್ಳಿಯ ಪ್ರತಿ ೫ ಮಹಿಳೆಯರಲ್ಲಿ ಒಬ್ಬಾಕೆ ಒಂದು ಮಗುವನ್ನಾದರು ಕಳೆದುಕೊಂಡಿರುತ್ತಾಳೆ. ನಮ್ಮ ರಾಜ್ಯದಲ್ಲಿ ಹಳ್ಳಿಗಳಲ್ಲಾಗುವ ಹೆರಿಗೆಗಳಲ್ಲಿ ಶೇ ೬೬% ರಷ್ಟುಹೆರಿಗೆಗಳನ್ನು ಅನಾರೋಗ್ಯಕರ ಪರಿಸರದಲ್ಲಿ ತರಬೇತಿಯಿಲ್ಲದ ಸೂಲಗಿತ್ತಿಯರು ಮಾಡಿಸುತ್ತಾರೆ.

ನಮ್ಮ ಸಮಾಜದಲ್ಲಿ ತಮ್ಮ ದೈಹಿಕ ಆರೋಗ್ಯಕ್ಕೆ ಸಂಬಧಿಸಿದಂತೆ, ಸಂತಾನೋತ್ಪತ್ತಿಗೆ ಸಂಬಂಧಿಸಿದಂತೆ ಹಾಗೂ ತಮ್ಮ ಜೀವನ ಉಳಿವಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಹ ನಿರ್ಧಾರ ತೆಗೆದುಕೊಳ್ಳುವಲ್ಲಿ ಸ್ತ್ರೀಯರಿಗೆ ಸೀಮಿತ ಅಧಿಕಾರ ಮಾತ್ರ ಇದೆ. ಹೀಗೆ ಹಲವಾರು ದಿನಗಳಲ್ಲಿ ಅಪಮೌಲ್ಯಕ್ಕೆ ಒಳಗಾದ ಸ್ತ್ರೀಯರ ಸಾಮಾಜಿಕ ಮತ್ತು ಕೌಟುಂಬಿಕ ಸ್ಥಾನಮಾನಗಳಿಂದಾಗಿ ಮಹಿಳೆ ಒಂದು ರೀತಿಯ ಹೇಳಿಕೊಳ್ಳಲಾಗದ ನಿರಂತರ ಹಿಂಸೆಗೆ ಒಳಗಾಗಿರುತ್ತಾಳೆ. ತಾನು ಹೊತ್ತಿರುವ ಭ್ರೂಣದ ಲಿಂಗಪರೀಕ್ಷೆಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾದ ಕುಟುಂಬದ ಒತ್ತಾಯಕ್ಕೆ ಮಹಿಳೆ ಒಳಗಾಗುವುದು ಸ್ತ್ರೀ ಶಿಶುಹತ್ಯೆ, ಬಲವಂತ ಗರ್ಭಪಾತ, ಮೇಲಿಂದ ಮೇಲೆ ಬಸಿರಾಗುವುದು, ಕೌಟುಂಬಿಕ ಹಿಂಸೆ ಇತ್ಯಾದಿಗಳು ನಿರಂತರ ಹಿಂಸೆಯ ಪ್ರತ್ಯಕ್ಷ ರೂಪಗಳೆನ್ನಬಹುದು.

೪.೩.೫ ಶೌಚಾಲಯ ಸಮಸ್ಯೆ

ಮನುಷ್ಯನಿಗೆ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾದ ಆಹಾರ, ನೀರು, ವಸತಿ ಎಷ್ಟು ಅವಶ್ಯಕವೋ ಅದರಾಚೆಗೂ ಶೌಚಾಲಯ ವ್ಯವಸ್ಥೆ, ಮಹಿಳೆಯರ ವಿಷಯದಲ್ಲಿ ಮೂಲಭೂತ ಅವಶ್ಯಕವಾಗಿದೆ. ಏಕೆಂದರೆ ಮೊದಲಿನಿಂದಲೂ ಸಾಂಪ್ರಾದಾಯಿಕ ವ್ಯವಸ್ಥೆ ಹೆಣ್ಣಿಗೆ ಶೀಲ, ಪಾತಿವೃತ್ಯ, ಇನ್ನಿತರ ನಂಬಿಕೆಗಳನ್ನು ಮನಸ್ಸಿನಲ್ಲಿ ಆಳವಾಗಿ ಬೇರೂರಿಸುವುದನ್ನು ಗಾರ್ಮೆಂಟ್ಸ್ ಮಹಿಳೆಯನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಕೆಲವೊಂದು ಸಂಗತಿಗಳು ತಿಳಿದುಬರುತ್ತವೆ. ಏಕೆಂದರೆ ಕ್ಷೇತ್ರಧ್ಯಾಯನದ ಸಂದರ್ಭದಲ್ಲಿ ಗೀತಾ ಎಂಬ ಗಾರ್ಮೆಟ್ಸ್ ಮಹಿಳೆಯು ಶೌಚಾಲಯ ವ್ಯವಸ್ಥೆ ಇಲ್ಲದ್ದಕ್ಕೆ (ಫ್ಯಾಕ್ಟ್ರಿಯಲ್ಲಿ) ಹೆಚ್ಚು ಊಟ ನೀರು ಕುಡಿಯುವುದನ್ನು ಬಿಟ್ಟುಬಿಟ್ಟದ್ದಾಳೆ. ಅವಳ ಜಾತಿಯ ಹಿನ್ನಲೆಯನ್ನು ಕಾರಣಕೊಡುತ್ತಾಳೆ. ಮೊದಲಿನಿಂದಲೂ ಹೊರಗಡೆ ಹೋಗುವ ಅಭ್ಯಾಸ ಇಲ್ಲ ಎನ್ನುತ್ತಾಳೆ. ಆದರೂ ಸಹಿತ ಅವಳಿಗೆ ಶೌಚಾಲಯಕ್ಕೆ ಹೋಗದೆ ಇದ್ದರೆ ದೇಹ ಅನೇಕ ಕಾಯಿಲೆಗೆ ಒಳಗಾಗುತ್ತದೆ ಎಂಬ ತಿಳುವಳಿಕೆ ಇದ್ದಾಗ್ಯೂ ಕೂಡ ಸಾಂಪ್ರಾದಾಯಿಕ ಸ್ಥಳದಲ್ಲಿ ಎಲ್ಲೆಂದರಲ್ಲಿ ಹೋಗದೆ ಇರುವ ಮನಸ್ಥಿತಿಯನ್ನು ಸಂಪ್ರಾದಾಯಿಕ ವ್ಯವಸ್ಥೆಯು ಸೂಕ್ಷ್ಮವಾಗಿ ಕಟ್ಟಿಕೊಟ್ಟಿದೆ ಎನ್ನಬಹುದು. ಈ ಮಹಿಳೆ ಹೊಟ್ಟೆನೋವು ತಾಳಲಾರದೆ ಕೊನೆಸ್ಥಿತಿಗೆ ಡಾಕ್ಟರ್ ಬಳಿ ಹೋದಾಗ ಅಪೆಂಡಿಕ್ಸ್, ಕಿಡ್ನಿ ಫೆಲ್ಯೂರ್ ಆಗುವ ಸಂದರ್ಭಗಳು ಕಾಣಿಸಿಕೊಳ್ಳುತ್ತದೆ ಎಂಬ ಅಭಿಪ್ರಾಯ ಮಂಡಿಸಿದ್ದಾಗ್ಯೂ ತನ್ನ ಆರೋಗ್ಯದ ಕಡೆ ಗಮನ ಹರಿಸದೆ ಇರುವ ಸಂಗತಿಯನ್ನು ತಿಳಿದಾಗ ಸಾಮಾಜಿಕರಣ ವ್ಯವಸ್ಥೆಯ ಘಾಡವಾದ ಪರಿಣಾಮಗಳನ್ನು ತಿಳಿದುಕೊಳ್ಳಬಹುದಾಗಿದೆ. ಹೀಗೆ ಸಾಕಷ್ಟು ಮಹಿಳೆಯರು ಸಮಸ್ಯೆಗಳನ್ನು ಎದುರಿಸುವುದನ್ನು ಕಾಣಬಹುದಾಗಿದೆ. ಅದರಲ್ಲಿ ಗೀತಾ ಒಬ್ಬಳು ಉದಾಹರಣೆಯಾಗಿದ್ದಾಳೆ. ೧೯೪೮ ರ ಕಾಯ್ದೆ ಪ್ರಕಾರ

ಪ್ರತಿಯೊಂದು ಫ್ಯಾಕ್ಟ್ರಿಯಲ್ಲಿ ಶೌಚಾಲಯ ವ್ಯವಸ್ಥೆ ಇರಬೇಕೆಂಬ ಕಾನೂನು ಇದೆ. ಅಂತ ಸಾಮಾನ್ಯ ತಿಳುವಳಿಕೆ ಕೂಡ ಬಳ್ಳಾರಿ ಗಾರ್ಮೆಂಟ್ಸ್ ಮಹಿಳೆಯರಲ್ಲಿ ಇಲ್ಲದಿರುವುದನ್ನು ಅಧ್ಯಯನದ ಸಂದರ್ಭದಲ್ಲಿ ತಿಳಿಯಬಹುದಾಗಿದೆ.

ಇನ್ನು ಬೆಂಗಳೂರು ಕಡೆ ಗಮನಹರಿಸಿದಾಗ ಅಲ್ಲಿ ಗಾರ್ಮೆಂಟ್ಸ್ ಮಹಿಳೆಯರಿಗೆ ಕಾಯ್ದೆ ಪ್ರಕಾರ ಶೌಚಾಲಯ ವ್ಯವಸ್ಥೆ ಎಲ್ಲ ಫ್ಯಾಕ್ಟ್ರಿಗಳಲ್ಲಿ ಇರಬೇಕೆಂಬ ಕಾನೂನು ಗೊತ್ತಿದ್ದರೂ ಕೂಡ ಮಾಲೀಕರ ವಿರುದ್ಧ ಯವುದೇ ರೀತಿ ಹೋರಾಟ ಮಾಡದೆ ಅಸಹಾಯಕ ಸ್ಥಿತಿಯಲ್ಲಿ ಜೀವನ ವಾಡುವುದನ್ನು ನೋಡಬಹುದಾಗಿದೆ. ಏಕೆಂದರೆ ಬಂಡವಾಳ ಶಾಹಿ ವ್ಯವಸ್ಥಯ ಮೂಲಭೂತ ಧೊರಣೆ ಲಾಭಗಳಿಸುವ ಕಾರಣದಿಂದ ಫ್ಯಾಕ್ಟ್ರಿಯಲ್ಲಿ ಶೌಚಾಲಯ ವ್ಯವಸ್ಥೆ ಇದ್ದರೆ ಪ್ರೊಡಕ್ಷನ್ ಕಡಿಮೆಯಾಗುತ್ತದೆ. ಎಂಬ ಮನಸ್ಥಿತಿಯನ್ನು ಹೊಂದಿರುವುದರಿಂದ ಸಾವಿರಾರು ಫ್ಯಾಕ್ಟ್ರಿಗಳಿದ್ದಾಗ್ಯೂ ಕೂಡ ಲಕ್ಷಾನುಗಟ್ಟಲೆ ಮಹಿಳೆಯರು ಕೆಲಸಮಾಡುತ್ತಿದ್ದರು, ಶೌಚಾಲಯವನ್ನು ಕಟ್ಟಿಸಿಲ್ಲ. ಉದ್ದಿಮೆದಾರರಿಗೆ ಈ ಸಮಸ್ಯೆ ಬಗೆಹರಿಸುವುದು ಸುಲಭಸಾಧ್ಯವಾದರೂ ಕೂಡ ಬಗೆಹರಿಸುವ ಮನಸ್ಥಿತಿಯನ್ನು ಹೊಂದಿಲ್ಲ. ಏಕೆಂದರೆ ಮಹಿಳೆಯರ ಮೂಲಭೂತ ಅವಶ್ಯಕತೆಯನ್ನು ಪೂರೈಸುವುದರಿಂದ ಅವರು ಪದೇ ಪದೇ ಶೌಚಾಲಯಕ್ಕೆ ಹೋಗುತ್ತಾರೆ. ಇದರಿಂದ ಸಾಕಷ್ಟು ಸಮಯ ಹಾಳಾಗುತ್ತದೆ. ಜೊತೆಗೆ ಮಾಲೀಕರುನಿರೀಕ್ಷಿಸಿದ್ದಷ್ಟು ಪ್ರೊಡಕ್ಷನ್ ಕೊಡಕ್ಕಾಗದಿರುವ ಸಂದರ್ಭದಲ್ಲಿ ಎದುರಿಸಬಹುದು. ಇದರಿಂದ ಹಾಕಿದಷ್ಟು ಬಂಡವಾಳ ಪಡೆಯಲಿಕ್ಕೆ ಸಾಧ್ಯವಾಗುವುದಿಲ್ಲ. ೧೯೪೮ರ ಕಾಯ್ದೆಯ ಪ್ರಕಾರ ಫ್ಯಾಕ್ಟ್ರಿಯಲ್ಲಿ ಪ್ರತಿ ೨೦ ಮಹಿಳೆಯರಿಗೆ ಒಂದರಂತೆ ಶೌಚಾಲಯ ವ್ಯವಸ್ಥೆ ಇರಬೇಕೆಂಬ ನಿಯಮವಿದೆ. ಆದರೆ ಬೆಂಗಳೂರಿನಲ್ಲಿ ಎಷ್ಟೋ ಫ್ಯಾಕ್ಟ್ರಿಗಳಲ್ಲಿ ನೂರು ಹೆಂಗಸರಿಗೆ ಒಂದೂ ಶೌಚಾಲಯವೂ ಇಲ್ಲದಿರುವ ಉದಾಹರಣೆಗಳಿವೆ "ಸರ್ಕಾರೇತರ ಸಂಸ್ಥೆಯೊಂದರ ಕಾರ್ಯಕರ್ತೆ ನೀಲಾರವರು ಮಹಿಳೆಯರು ಶೌಚಾಲಯಕ್ಕೆಂದು ಬಿಟ್ಟರೆ ಟೈಂಪಾಸ್ ಮಾಡುತ್ತಾರೆಂಬ ಕಾರಣಕ್ಕೆ ಮಾಲೀಕರುಹೆಚ್ಚಿನ ಶೌಚಾಲಯ ಕಟ್ಟಿಸುವುದಿಲ್ಲ, ಇದರ ಜೊತೆಗೆ ನಿರಂತರ ಕೆಲಸದ ಒತ್ತಡದಿಂದಲೂ ಮಹಿಳೆಯರು ಬಳಲುವುದಿದೆ ಎನ್ನುತ್ತಾರೆ. ಸಂವಾದ ಸರ್ಕಾರೇತರ ಸಂಸ್ಥೆಯ ಕಾರ್ಣ್. ಸಂಶೋಧನೆಯ ಸಂದರ್ಭದಲ್ಲಿ ಮಾಲಿಕ ಶೌಚಾಲಯವನ್ನು ಮಹಿಳೆಯರಿಗೆ ಒದಗಿಸುವುದರಲ್ಲಿ ಕೆಲವೊಂದು ಸ್ವರೂಪಗಳನ್ನು ಕಾಣಬಹುದಾಗಿದೆ. ಕೆಲವೊಂದು ಫ್ಯಾಕ್ಟ್ರಿಯಲ್ಲಿ ಶೌಚಾಲಯನೆ ಇಲ್ಲ, ಕೆಲವೊಂದು ಕಡೆ ಇದ್ದಾಗ್ಯೂ ಅದು ಸ್ವಚ್ಛವಾಗಿರದೆ, ನೀರಿನ ವ್ಯವಸ್ಥೆಇಲ್ಲದೆ ಗಾಳಿ ಬೆಳಕು ಇಲ್ಲದೆ ರೋಗಗಳು ರುಜಿನುಗಳು ಹರಡುವಂತೆ, ಅದು ಕೆಲಸ ಮಡುವ ಸ್ಥಳಕ್ಕಿಂತ ಸಂಪೂರ್ಣ ದೂರಮಾಡಿ, ಫ್ಯಾಕ್ಟ್ರಿಯ ಮೂಲೆಯಲ್ಲಿ ಕಟ್ಟಿಸಿರುತ್ತಾರೆ. ಕೆಲವೊಂದು ಕಡೆ ಪೂರಾ ಮೇಲೆ ಕಟ್ಟಿಸಿರುತ್ತಾರೆ. ಅದು ತುಂಬಾ ಭಯನಕ ವಾತವರಣವನ್ನು ಕಲ್ಪಿಸಿರುತ್ತಾರೆ. ಹೀಗಿದ್ದಾಗ ಒಬ್ಬಳೆ ಶೌಚಾಲಯಕ್ಕೆ ಹೋಗುವ ಧೈರ್ಯವನ್ನು ಮಾಡದ ಹಾಗೆ ವ್ಯವಸ್ಥೆ ಕಲ್ಪಿಸಿರುತ್ತಾರೆ. ಇನ್ನು ಕೆಲವೊಂದು ಫ್ಯಾಕ್ಟ್ರಿಯಲ್ಲಿ ಶೌಚಾಲಯಕ್ಕೆ ಗಂಡಸರನ್ನು ನೇಮಕ ಮಾಡಿರುತ್ತಾರೆ. ಇದರಿಂದ ಹೆಚ್ಚಾನು ಹೆಚ್ಚು ಮಹಿಳೆಯರು ಶೌಚಾಲಯಕ್ಕೆ ಹೋಗಲು ಹಿಂಜರಿಯುವುದು ಒಂದು ಕಡೆಆದರೆ ವಾಚಮ್ಯಾನ್‌ಗಳೇ ಪದೇ ಪದೇ ಶೌಚಾಲಯಕ್ಕೆ ಮಹಿಳೆಯರು ಬಂದರೆ ಬಾಯಿಗೆ ಬಂದ ಹಾಗೆ ಬೈಯುತ್ತಾರೆ. ಹೊಟ್ಟೆಗೆ ಏನು ತಿಂದು ಬರ್ತಿರಾ ಕೆಲಸ ಮಾಡುವುದನ್ನು ಬಿಟ್ಟು ಪದೇ ಪದೇ ಇಲ್ಲಿಗೆ

[illegible]

ಬರ್ತ್ತಿರಾ ಎಂದು ದಬ್ಬಿಕಳಿಸುತ್ತಾರೆ. ಸಾಮಾನ್ಯ ಸಂದರ್ಭದಲ್ಲಿಯಂತೂ ಹೋಗುವುದಂತೂ ಬೇಡ ಆದರೆ (ಮುಟ್ಟಾದ) ಋತುಚಕ್ರದ ವೇಳೆಯಲ್ಲಿ ಗರ್ಬಿಣಿ ಇದ್ದಾಗ ಶೌಚಾಲಯಕ್ಕೆ ಹೋಗಲೇಬೇಕು. ಇಂತಹ ಸಂದರ್ಭದಲ್ಲಿ ಗಾರ್ಮೆಂಟ್ಸ್ ಮಹಿಳೆಯರು ದೈಹಿಕವಾಗಿ ಮಾನಸಿಕವಾಗಿ ಅದೆಷ್ಟು ಸಂಕೀರ್ಣದ ಕಷ್ಟ ಸ್ಥಿತಿಯನ್ನು ಎದುರಿಸಬಹುದು ಎಂಬುದನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಈ ಸಂದರ್ಭದಲ್ಲಿ, ಅದರಲ್ಲೂ ಗರ್ಭಿಣಿ ಇದ್ದ ಸಂದರ್ಭದಲ್ಲಿ ಪ್ರತಿಯೊಬ್ಬ ಮಹಿಳೆ ದೇಹಸ್ಥಿತಿಯಲ್ಲಿ ಹಾರ್ಮೊನ್ಸ್‌ಗಳು ವ್ಯತ್ಯಾಸ ಆಗುವುದರಿಂದ ಸಾಕಷ್ಟು ಸಮಸ್ಯೆಗಳನ್ನು ಎದುರಿಸಬಹುದು. ಈ ವೇಳೆಯಲ್ಲಿ ಒಳ್ಳೆಯ ಆಹಾರ, ನೀರು, ಚೆನ್ನಾಗಿ ಕುಡಿಯಬೇಕು. ನೀರು ಹೆಚ್ಚು ಹೆಚ್ಚು ಕುಡಿಯುವುದರಿಂದ ಅವರ ಆರೋಗ್ಯ ಮಟ್ಟ ಉತ್ತಮವಾಗಿರುತ್ತೆ. ಆದರೆ ಮಾಲೀಕರು ನೀರಿನ ವ್ಯವಸ್ಥೆ ಮಾಡುವುದರಿಂದಲೇ ಪ್ರೊಡಕ್ಷನ್ ಕಡಿಮೆ ಆಗುತ್ತದೆ ಎಂದು ಫ್ಯಾಕ್ಟ್ರಿಯಲ್ಲಿ ನೀರಿನ ವ್ಯವಸ್ಥೆ ಕಲ್ಪಿಸಿರುವುದಿಲ್ಲ.

೪.೩.೬ ವಿಶ್ರಾಂತಿ ಸ್ಥಳ

ಭಾರತೀಯ ಸಮಾಜದಲ್ಲಿ ಮಧ್ಯಮ ವರ್ಗ, ಕೆಳವರ್ಗ ಅದರಲ್ಲೂ ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರಿಗೆ ವಿರಾಮ, ರಜೆ ಎನ್ನುವ ಪದಗಳಿಗೆ ಅರ್ಥವೇ ಗೊತ್ತಿಲ್ಲ ಅಂತ ಅನ್ಸುತ್ತೆ ಏಕೆಂದರೆ ಮಹಿಳೆಯರು ದಿನನಿತ್ಯ ಬೆಳಿಗ್ಗೆ ೪ ಗಂಟೆಯಿಂದ ರಾತ್ರಿ ಸುಮಾರು ೧೧-೧೨ ಗಂಟೆಯವರೆಗೂ ಸತತವಾಗಿ ದುಡಿಯಲೇಬೇಕು. ಮನೆಗೆಲಸವು ಹೆಣ್ಣು ಹುಟ್ಟಿನಿಂದ ಕೊನೆತನಕ ಅಂಟಿಕೊಂಡಿರುವ ನಂಟಾಗಿ ಬಂದಿರುವಂತಹ ಬಳುವಳಿಯಾಗಿ ವ್ಯವಸ್ಥೆ ಕಲ್ಪಿಸಿದೆ. ಅವಳು ಸಹಜವಾಗಿ ಮನೆಯಲ್ಲಿನ ಪ್ರತಿಯೊಂದರ ಜವಾಬ್ದಾರಿಯನ್ನು ಹೊತ್ತುಕೊಂಡು ಕೆಲಸಕ್ಕೆ ನಿರ್ವಹಿಸಿದರು ಕೂಡ ಸಾಮಾನ್ಯವಾಗಿ ಏನ್ ಮಾಡ್ತೀರಾ ಅಂತ ಕೇಳಿದಾಗ ಬರುವ ಉತ್ತರವೇ House wife ಅಂತ ಹೇಳುತ್ತಾರೆ ಅದನ್ನು ಸ್ತ್ರೀವಾದಿ ಚಿಂತಕರು ಮನೆಗೆಲಸದ ಕೆಲಸವನ್ನು ಉತ್ಪಾದನೆಯ ರೂಪದಲ್ಲಿ ಪರಿಗಣನೆ ಮಾಡಬೇಕೆಂಬುದು ಅವರ ಉದ್ದೇಶ. ಸಂಘಟಿತ ವಿರಲಿ ಅಸಂಘಟಿತವಿರಲಿ ಹೆಣ್ಣು ಅಂದ್ರೆ ಮನೆಗೆಲಸಮಾಡಲೇಬೇಕು. ಉದ್ಯೋಗದಲ್ಲಿರಲಿ, ಉನ್ನತ ಶಿಕ್ಷಣ ಪಡೆದಿರಲಿ ಹುಟ್ಟಿನಿಂದಲೇ ಸಾಮಾಜಿಕರಣ ಪ್ರಕ್ರಿಯೆ ಬೆಳೆಸುವ ಪ್ರತಿಯೊಂದು ಹಂತದಲ್ಲಿ ಹೆಣ್ಣು ಹೀಗಿರಬೇಕು, ಇನ್ನೊಬ್ಬರ ಪಾಲನೆ ಪೋಷಣೆ ಮಾಡಬೇಕು, ಸೇವೆಮಾಡಬೇಕೆಂಬ ಮನಸ್ಥಿತಿಯನ್ನು ಸೃಷ್ಟಿಸಿರುತ್ತದೆ. ಹೀಗಿರುವ ಅವಳು ಸಾಯುವತನಕನೂ ಬೆವರು, ರಕ್ತ, ಕಣ್ಣೀರು ಹನಿಗಳ ದುಡಿಮೆಯಲ್ಲೆ ಕೊನೆಯುಸಿರೆಳೆಯುತ್ತಾಳೆ. ಅವಳಿಗೆ ಜೀವನ ಪೂರ್ತಿ ಬಿಡುವಾಗಲಿ, ವಿಶ್ರಾಂತಿಯಾಗಲಿ ಸಿಗುವುದೇ ಇಲ್ಲ. ಸಂಶೋಧನಾ ಅಧ್ಯಯನ ಪ್ರಕಾರ ಸಂಪೂರ್ಣ ವಿಶ್ರಾಂತಿ ಸಿಗುವುದೇ ಹೆಣ್ಣಿಗೆ ಸತ್ತ ಮೇಲೆ ಅಂತ ಕಾಣುತ್ತೆ. ಉದಾ:-ಗಾರ್ಮೆಂಟ್ಸ್ ಮಹಿಳೆಯನ್ನು ತೆಗೆದುಕೊಂಡಾಗ ಪ್ರತಿನಿತ್ಯ ದುಡಿಯುವ ದುಡಿಮೆಯನ್ನು ಪರಿಗಣಿಸಿದಾಗ ಗೊತ್ತಾಗುತ್ತದೆ. (ಒಂದು ರೀತಿ ಗಾಣದತ್ತಿನಂತೆ ದುಡಿಯುತ್ತಿರುತ್ತಾಳೆ.)

ಈ ದುಡಿಮೆ ಮತ್ತು ಬಿಡುವುಗಳಲ್ಲಿ ಮಹಿಳೆ ದುಡಿಯುವ ದುಡಿಮೆ ಮತ್ತು ಅವಳಿಗೆ ಲಭ್ಯವಾಗಬಹುದಂತಹ ಬಿಡುವು ಇದೆಯಲ್ಲ ಇವೆರಡೂ ಸಹ ಪುರುಷನಿಗೆ ಅಧೀನವಾಗಿ ಬಿಡುವು ಪರಿಯನ್ನು ಈ ಹಿನ್ನಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕು. ದುಡಿಮೆಯ ಹೊಸಬಗೆಯ ವ್ಯಾಖ್ಯಾನ

[illegible]

[illegible]

[illegible]

[illegible]

ಸುಸೂತ್ರವಾಗಿ ಜಾರಿಗೊಳ್ಳಬೇಕಾದ್ರೆ ಈ ಸಮಾಜ ವ್ಯವಸ್ಥೆ ತನಗೆ ಬೇಕಾದ ಕೆಲವು ತಂತ್ರಗಳನ್ನು ಸಹ ಅದು ರೂಪಿಸುತ್ತೆ. ಹೆಣ್ಣಿನ ದುಡಿಮೆ ಹಾಗೂ ಬಿಡುವು ಅವಳ ಪಾಲಿಗೆ ದಕ್ಕದೇ ಹೋಗುವುದೇಕೆ ಅಂತಾ ಅರ್ಥ ಆಗಬೇಕಾದ್ರೆ ಪುರುಷ ಚಿಂತನೆಯು ಹುನ್ನಾರಗಳನ್ನು ಅರ್ಥಮಾಡಿಕೊಳ್ಳಬೇಕು. ಅವಳು ದುಡಿತಾಳೆ. ಅವಳದೂ ಅಂತ ಬಿಡುವೂಇದೆ. ಆದ್ರೆ ಅವಳ ದುಡಿಮೆಯ ಪ್ರತಿಫಲ ಮತ್ತು ಬಿಡುವಿನ ಪ್ರತಿಫಲ ಎರಡೂ ಅವಳಿಗೆ ಸಿಗೊಲ್ಲ. ಇದು ಯಾಕ ಸಿಕ್ಕೋದಿಲ್ಲ ಅನ್ನೊದನ್ನು ಅರ್ಥಮಾಡಿಕೋಳ್ಳಬೇಕಾಗಿದೆ. ಪುರುಷ ಚಿಂತನೆಯು ದುಡಿಮೆ ಮತ್ತು ಬಿಡುವುಗಳನ್ನು ಸಮಯಕ್ಕೆ ತಕ್ಕ ಹಾಗೆ, ಸಂದರ್ಭಕ್ಕೆ ತಕ್ಕ ಹಾಗೆ ಬೇರೇನೆ ರೀತಿಯಲ್ಲಿ ವ್ಯಾಖ್ಯಾನ ಮಾಡ್ತಾರೆ ಮತ್ತು ಈ ವ್ಯಾಖ್ಯಾನ ಸಮಾಜದೊಳಗಡೆ ಜಾರಿಗೊಳ್ಳುವಹಾಗೆ ಬೇರೆ ಬೇರೆಯ ರೀತಿಯ ತಂತ್ರಗಳನ್ನು ಬಳಸುತ್ತಿದೆ ಅನ್ನೋದನ್ನೇ ಕೂಡ ಇಲ್ಲಿ ಗಮನಿಸಬೇಕಾಗುತ್ತದೆ. ಒಂದು ದುಡಿಮೆ ಅನ್ನೋದನ್ನೇ ಸ್ತ್ರೀ ವಿರೋದಿ ನೆಲೆಯಲ್ಲಿ ವ್ಯಾಖ್ಯಾನಿಸಿ ಒಪ್ಪಿಸುವ ಕೆಲಸವನ್ನು ಪುರುಷ ಚಿಂತನೆ ಮಾಡುತ್ತ ಇದ್ರಲ್ಲಿ ಅತ್ಯಂತ ಪ್ರಬಲವಾದಂತಹ ತರ್ಕವನ್ನು ಬಳಸಲಾಗುತ್ತೆ. ಮಹಿಳೆಯ ದುಡಿಮೆ ಅನ್ನೋದು ದುಡಿಮೆಯೇ ಅಲ್ಲ ಅನ್ನುವ ಅತ್ಯಂತ ಬುದ್ದಿಶಾಲಿಯಾದಂತಹ ವ್ಯವಸ್ಥೆ ಸ್ವತಃ ಮಹಿಳೆ ಕೂಡ ಈ ತರ್ಕವನ್ನು ಒಪ್ಪಿಕೊಂಡುಬಿಟ್ಟು ಏನಿಲ್ಲ ಸುಮ್ಮನೆ ಇದ್ದೀವಿ ಅಂತ ಅವಳೆ ಒಪ್ಪಿಕೊಳ್ಳುವುದೇ ಯಾಕೆ? ಇಪ್ಪತ್ನಾಲ್ಕು ಗಂಟೆ ದುಡಿಯುವ ಹೆಣ್ಣು ತನ್ನ ದುಡಿಮೆಯನ್ನು ಹೀಗೆ ಅಪವ್ಯಾಖ್ಯಾನ ಮಾಡಿದ್ದನ್ನು ಅವಳೂ ಯಾಕೆ ಒಪ್ಪಿಕೊಳ್ಳುತ್ತಾಳೆ ಅನ್ನೋದೆ ಈ ತರ್ಕದ ಗಟ್ಟಿತನವನ್ನು ಹೇಳುತ್ತದೆ.[೧೦]

ಬಿಡುವು ಅಥವಾ ವಿರಾಮ ಅವಶ್ಯಕವೇ ಎಂಬ ಪ್ರಶ್ನೆಗೆ ಬಹಳ ಹಿಂದೆಯೇ ಪ್ರಾಚೀನ ಗ್ರೀಕರು ಉತ್ತರಿಸಿದ್ದಾರೆ. ಅರಿಸ್ಟಾಟಲಿನ ಪ್ರಕಾರ ಉತ್ತಮ ಜೀವನಕ್ಕೆ ಕೆಲಸ ಮತ್ತು ವಿರಾಮ ಎರಡೂ ಅಗತ್ಯ. ಒಂದು ಸಂಸ್ಕೃತಿಯ ಉತ್ಕೃಷ್ಟತೆಗೆ ಮತ್ತು ರಾಜಕೀಯ ಕರ್ತವ್ಯಗಳ ಪಾಲನೆಗೆ ವ್ಯಕ್ತಿಗೆ ವಿರಾಮವಿರಬೇಕು. ದುಡಿಮೆ ವ್ಯಕ್ತಿ ಹಾಗೂ ರಾಷ್ಟ್ರದ ಉಳಿವಿಗೆ ಬೇಕೇಬೇಕು. ಆದರೆ ಜೀವನದ ಸೊಗಸಿಗೆ ವಿರಾಮಬೇಕು ಎಂದು ಅವನು ವಾದಿಸಿದ. ದುಡಿಮೆ ವಿರಾಮಗಳೆರಡೂ ಸಮತೋಲನ ಸ್ಥಿತಿಯಲ್ಲಿರುವುದು ಸುವರ್ಣ ಮಾಧ್ಯಮ. ಹಿಂದಿನಿಂದಲೂ ಮೇಲ್ವರ್ಗ ವಿರಾಮವನ್ನು ಅನುಭವಿಸುತ್ತಲೇ ಇದೆ ಆದರೆ ಮಧ್ಯಮ ಮತ್ತು ಕೆಳವರ್ಗಗಳಲ್ಲಿ ವಿರಾಮದ ಕಲ್ಪನೆ ಮತ್ತು ಅವಕಾಶ ಮೂಡಿದ್ದು ಕೈಗಾರಿಕಾ ಕ್ರಾಂತಿ ಉಚ್ಛ್ರಾಯ ಸ್ಥಿತಿಯಲ್ಲಿ, ಶ್ರಮಿಕ ವರ್ಗದ ಸಂಘಟನೆಯ ಫಲವಾಗಿ ವಾರದ ಆರು ದಿನ, , ಹನ್ನೆರಡು ಗಂಟೆಗಳ ದುಡಿಮೆ ನಿಧಾನವಾಗಿ ವಾರದ ಐದೂವರೆ ದಿನಗಳಿಗಿಳಿಯಿತು. ಶ್ರಮಿಕವರ್ಗದ ಮಹಿಳೆಯರಿಗೆ ಕುಟುಂಬದ ಅಗತ್ಯಗಳನ್ನು ಪೂರೈಸಲು ಹಗಲಿರುಳು ದುಡಿಯುವುದಲ್ಲದೆ ಗಂಡಸರ ದುಂದುತನ ಮತ್ತು ಬೇಜಾವಾಬ್ದಾರಿ ವರ್ತನೆಯನ್ನು ತಡೆಯುವುದರಲ್ಲಿ ವಿರಾಮದ ಅವಕಾಶ ತಪ್ಪಿಹೋಗುತ್ತಿತ್ತು. ಇತ್ತೀಚಿನ ಅಧ್ಯಯನಗಳು ಕೂಡ ಸಮಯದ ಒತ್ತಡವನ್ನು ಅನುಭವಿಸುವಲ್ಲಿ ಹಾಗೂ ವಿರಾಮ ಚಟುವಟಿಕೆಗಳನ್ನು ರೂಪಿಸಿಕೊಳ್ಳುವುದರಲ್ಲಿ ಸಾಮಾಜಿಕ ಆರ್ಥಿಕ ಸನ್ನಿವೇಶಗಳ ಪ್ರಭಾವವನ್ನು ಗುರುತಿಸುತ್ತವೆ. ತನ್ನ ದುಡಿಮೆ ತನ್ನ ಸಮಯ ಎಲ್ಲವನ್ನು ಸಂಪೂರ್ಣವಾಗಿ ಬಿಟ್ಟುಕೊಡಬೇಕಾದಂತಹ ಒಂದು ಅನಿವಾರ್ಯ ಸಾಮಾಜಿಕ ಸ್ಥಿತಿಯಲ್ಲಿ ಅವಳ ಬದುಕು ಹೇಗಾಗುತ್ತದೆ ಅಂತ ಅನ್ನೋದನ್ನು ನಾವು ಚರ್ಚೆ ಮಾಡುವುದು ಅವಶ್ಯಕವಾಗಿದೆ.

[illegible]

ಬಿಡುವು ಮತ್ತು ವಿರಾಮ ಎಂದರೆ ಕೇವಲ ವಿಶ್ರಾಂತಿ ಅಥವಾ ಪುರುಸೊತ್ತು ಎಂಬ ಅರ್ಥವಲ್ಲ. ವಿರಾಮ ಎಂದರೆ ಒಬ್ಬ ವ್ಯಕ್ತಿಗೆ ಸಮಯವನ್ನು ತನ್ನಿಚ್ಛೆಯಂತೆ ರೂಪಿಸಿಕೊಳ್ಳಲು ಇರುವ ಸಮಯ ವ್ಯಕ್ತಿಗೆ ಲಭ್ಯವಿರುವ ಮತ್ತು ಯಾವ ನಿರ್ಬಂಧನೆಗಳಿಗೆ ಒಳಪಡದೆ ಇರುವಂತಹ ಸಮಯ, ಸಮಯವನ್ನು ಬೇಕಾದ ರೀತಿಯಲ್ಲಿ ವ್ಯಯಿಸುವ ಆಯ್ಕೆ ಸ್ವಾತಂತ್ರ್ಯ ವ್ಯಕ್ತಿಗಿರುತ್ತದೆ. ಆದರೆ ಗಾರ್ಮೆಂಟ್ಸ್ ಮಹಿಳೆ ಈ ಯಾವುದೆ ಆಯ್ಕೆ ಸ್ವಾತಂತ್ರ್ಯ ವಿಶ್ರಾಂತಿಯಪ್ರಶ್ನೆ ಎಲ್ಲಿ ಬರಬೇಕು.

ಹಿಂದಿನಂತೆ ನಾಲ್ಕು ಗೋಡೆಗಳ ಮಧ್ಯ ದುಡಿದು ಉತ್ತಮ ಗೃಹಿಣಿಯ ಪಟ್ಟವೇರಿ ತಕ್ಕ ಮಟ್ಟಿಗೆ ವಿಶ್ರಾಂತಿ ಪಡೆಯುತ್ತಿದ್ದ ಮಹಿಳೆಗೆ ಇಂದು ವಿಶ್ರಾಂತಿ ಎಂಬುದೇ ಮರೀಚಿಕೆಯಾಗಿದೆ. ದುಡಿಯುವ ಯಂತ್ರವಾಗಿ ಪರಿಸ್ಥಿತಿಯ ಕೈಗೊಂಬೆಯಾಗಿ ಮಹಿಳೆಯರು ಬದಲಾವಣೆಗಳಿಗೆ ಪರಿಪೂರ್ಣವಾಗಿ ಹೊಂದುಕೊಳ್ಳಲಾಗದೆ ತಡವರಿಸುತ್ತಿದ್ದಾರೆ.

ಗಾರ್ಮೆಂಟ್ಸ್ ಮಹಿಳೆಯರು ತಮ್ಮ ಕೌಟುಂಬಿಕ ಆದಾಯ ಹೆಚ್ಚಿಸಿಕೊಳ್ಳುವ ಸಲುವಾಗಿ ಮನೆಯ ಜವಬ್ದಾರಿಯೊಂದಿಗೆ ಉದ್ಯೋಗ ಮಾಡುತ್ತಿರುವ ಸದಾ ಕೆಲಸದ ಜಂಜಾಟದಲ್ಲಿ ಒದ್ದಾಡುತ್ತಿರುವ ಇವರಿಗೆ ಬಿಡುವು ವಿಶ್ರಾಂತಿ ಎಲ್ಲಿ ಸಿಗಬೇಕು. ಗಾರ್ಮೆಂಟ್ಸ್ ಮಹಿಳೆಯರಿಗೆ ವಿಶ್ರಾಂತಿ ಮರೀಚಿಕೆಯಾಗಿದೆ ಎಂದು ಹೇಳಬಹುದು. ಫ್ಯಾಕ್ಟ್ರಿಯಲ್ಲಿ ಊಟಕ್ಕೆ ಒಂದು ತಾಸು ಕೊಡುವುದಿರಲಿ, ಅರ್ಧಗಂಟೆನೂ ಕೊಡುವುದಿಲ್ಲ. ಹತ್ತು ನಿಮಿಷದಲ್ಲಿ ಎಲ್ಲೆಂದರಲ್ಲಿ ಕೂತು ತಿಂದು ಪ್ರೊಡಕ್ಷನ್ ಕೊಡುವಕಡೆನೆ ಗಮನಹರಿಸಬೇಕು. ಅದಲ್ಲದೆ ಫ್ಯಾಕ್ಟ್ರಿಮಾಲೀಕರುವಿಶ್ರಾಂತಿ ವ್ಯವಸ್ಥೆ ಮಾಡುವುದಿರಲಿ ಶೌಚಾಲಯದಲ್ಲಿ ಹೆಣ್ಣು ಮಕ್ಕಳೆ ಅನವಶ್ಯಕ ಸಮಯ ಕಳೆಯುತ್ತಾರೆ ಎಂದು ಯೋಚನೆಮಾಡುವಾಗ ಮಹಿಳೆಯರ ದೈಹಿಕ ಶ್ರಮಕ್ಕೆ ವಿಶ್ರಾಂತಿ ವ್ಯವಸ್ಥೆ ಅಥವಾ ಸಮಯ ಕೊಡುವುದು ದೂರದ ಮಾತೆ ಸರಿ. ಮಹಿಳೆಯರು ಋತುಚಕ್ರ ಗರ್ಭಪಾತ, ಗರ್ಭಿಣಿ ಇದ್ದ ಸಂದರ್ಭದಲ್ಲಿ ಅಮಾನವೀಯವಾಗಿ ನಿಕೃಷ್ಟತೆ ಕಾರ್ಮಿಕರನ್ನು ಕಾಡುತ್ತಿರುವುದು ಕ್ಷೇತ್ರ ಕಾರ್ಯ ಅಧ್ಯಯನ ಸಂದರ್ಭದಲ್ಲಿ ಕಂಡುಬಂದಿದೆ.

ಸಾರ್ವಜನಿಕವಾಗಿ ದುಡಿಯುವ ಮಹಿಳೆ ಸಾಮಾಜಿಕ ಹಾಗೂ ಲಿಂಗತ್ವ ನಿರೀಕ್ಷೆಗಳಿಗೆ ಅನುಗುಣವಾಗಿ ಎರಡು ಕಡೆ ದುಡಿಯುತ್ತಿರುತ್ತಾಳೆ. ಮಹಿಳೆ ಪುರುಷನ ಬೇಜಾವಾಬ್ದಾರಿತನವನ್ನು ವಿರೋದಿಸುತ್ತ ಸಂಪಾದಿಸಲು ಹೊರಟಾಗ ದೈಹಿಕ ಮಾನಸಿಕ ಹೊರೆ ಹೆಚ್ಚುವುದಲ್ಲದೆ ಅವಳ ವೈಯಕ್ತಿಕ ಸಮಯವೂ ಸಂಕುಚಿತವಾಗುತ್ತದೆ. ಕೌಟುಂಬಿಕ ನಿರ್ವಹಣೆಯ ಹೊಣೆ ಹೆಣ್ಣಿನದು ಎಂಬ ಸಾಮಾಜಿಕ ನಿಯಮವನ್ನು ಮನಸ್ಸಲ್ಲಿ ಬೇರೂರಿಸುವುದರಿಂದ ಎರಡು ಕಡೆ ನಿರ್ವಹಣೆ ಮಾಡಲು ಹೆಣಗಾಡುತ್ತಿರುತ್ತಾಳೆ. ಇದರಿಂದ ಒಂದುಕಡೆ ಮಹಿಳೆ ಮಾಲೀಕರು ನಿಗದಿಪಡಿಸಿದ ಕೆಲಸದ ವೇಳೆ ವಿಶ್ರಾಂತಿ ಇಲ್ಲದೆ ದುಡಿಯುವುದು, ಕಡಿಮೆ ಕೂಲಿ, ದೈಹಿಕ ಶ್ರಮ ಸವಲತ್ತುಗಳು ಇಲ್ಲದಿರುವುದು, ಲೈಂಗಿಕ ಕಿರುಕುಳ ಮುಂತಾದವನ್ನು ಈ ರಂಗದಲ್ಲಿ ಅವಳು ಎದುರಿಸಬೇಕಾಗುತ್ತಿದೆ. ನಗರಗಳಲ್ಲಿ ಹಿಂದೆ ಪುರುಷರ ಕ್ಷೇತ್ರ ಎನಿಸಿಕೊಂಡಿದ್ದ ವಲಯಗಳಲ್ಲೂ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಆದರೆ ಕೆಲಸದ ಪರಿಸರ ವೇಳೆ, ಕೆಲಸದ ಸ್ಥಳವನ್ನು ತಲುಪಲು ಇರುವ ಸಂಚಾರ ವ್ಯವಸ್ಥೆ ಇವುಗಳ ಗುಣಮಟ್ಟ ಉತ್ತಮವಾಗಿಲ್ಲ. ಇಂತಹ ಸಂದರ್ಭದಲ್ಲಿ ಗಾರ್ಮೆಂಟ್ಸ್ ಮಹಿಳೆ ದಿನನಿತ್ಯ ಅನೇಕ ಬಗೆಯ ಸಮಸ್ಯೆಗಳನ್ನು

ಎದುರಿಸುವಲ್ಲಿ ವಿಶ್ರಾಂತಿ ಪ್ರಶ್ನೆ ಎಲ್ಲಿ ಬರುತ್ತೆ ಎಂಬ ಪ್ರತಿಕ್ರಿಯೆ ಕೊಡುತ್ತಾರೆ. ಇವತ್ತಿನ ದಿನದಲ್ಲಿ ಮಹಿಳೆಗೆ ವಿರಾಮ ಅಥವಾ ವಿಶ್ರಾಂತಿ ಸಿಕ್ಕಿದೆ ಎಂದು ಸಂಶೋಧನೆಗೆ ಒಳಪಡಿಸಿದಾಗ ಸಂಪೂರ್ಣ ಅಧ್ಯಯನದಲ್ಲಿ ಎಲ್ಲಿ ಕೂಡ ಗಾರ್ಮೆಂಟ್ಸ್ ಮಹಿಳೆಗೆ ವಿಶ್ರಾಂತಿ ಸಿಗದೆ ಇರುವುದು, ಕಾಣದೆ ಇರುವ ಕನಸಿನ ಮಾತಾಗಿದೆ. ಮಹಿಳೆಯರಿಗೆ ಪುರಷರಿಗೆ ಸಿಗುವ ಯಾವುದೇ ವಿರಾಮ ಸಿಕ್ಕುವುದಿಲ್ಲ. ಯಾವುದೇ ವಲಯದಲ್ಲೂ ಅವಳಿಗೆ ಬಿಡುವು ಸಿಗುವುದೇ ಕಡಿಮೆ. ಮಹಿಳೆಯರು ಬಿಡುವನ್ನು ತಮ್ಮ ಲಿಂಗತ್ವ ಪಾತ್ರಗಳ ಸುತ್ತ ಕಟ್ಟಿಕೊಂಡಿರುತ್ತಾರೆ. ಮಹಿಳೆಯರು ದೈಹಿಕವಾಗಿ ವಿಶ್ರಾಂತಿ ಪಡೆಯುವುದಕ್ಕೆ ಆಗಲ್ಲ. ಇಂತಹದರಲ್ಲಿ ಮಾನಸಿಕ ನೆಮ್ಮದಿಯನ್ನು ಪಡೆಯುವುದಕ್ಕೆ ಹೇಗೆ ಸಾಧ್ಯವಾಗುತ್ತದೆ. ಏಕೆಂದರೆ ಬಡತನದ ಅನಿವಾರ್ಯ ಪರಿಸ್ಥಿತಿಯನ್ನು ಒಪ್ಪಿಕೊಂಡು ದಿನದ ೨೪ ಗಂಟೆನೂ ಅನ್ನಕ್ಕಾಗಿ, ಹೊಟ್ಟೆ ತುಂಬಿಸಿಕೊಳ್ಳಲು ಯೋಚಿಸುತ್ತಿರಬೇಕು, ಕೆಲವೊಬ್ಬ ಮಹಿಳೆಯರಿಗರ ವಿಶ್ರಾಂತಿ ಸಿಕ್ಕಿದರು ಅದನ್ನು ಪಡೆದುಕೊಳ್ಳುವ ಮನಸ್ಥಿತಿ ಮಾತ್ರ ಹೊಂದಿರುವುದಿಲ್ಲ. ಒಂದು ವೇಳೆ ನಿಶ್ಚಿಂತೆಯಿಂದ ವಿಶ್ರಾಂತಿ ಹೊಂದಬೇಕಾದರೂ ಅಪರಾಧಿ ಮನೋಭಾವ ಕಾಣುವ ಹಾಗೆ ವ್ಯವಸ್ಥೆ ಮನಸ್ಥಿತಿಯನ್ನು ಸೃಷ್ಟಿಸುತ್ತದೆ.

ವಿರಾಮದ ಮೇಲೆ ಲಿಗಂತ್ವದ ಪ್ರಭಾವವನ್ನು ಗುರುತಿಸಿದ ಓಶ್ಲೇ "ಮಹಿಳೆಯರ ವಿರಾಮದ ಆಸಕ್ತಿಗಳು ಮನೆ ಮತ್ತು ಗೃಹಕೃತ್ಯದ ಸುತ್ತಲೇ ರೂಪಗೊಂಡಿರುತ್ತವೆ. ಇದಕ್ಕೆ ವಿವಾಹ, ತಾಯ್ತನಗಳ ಮೂಲಕ ಹೆಣ್ಣು ಗಂಡಿನ ಸಂಬಂಧಗಳು ಸಮಾಜದಲ್ಲಿ ನೆಲೆಗೊಂಡಿರುವ ರೀತಿಯೇ ಕಾರಣ. ಲಿಂಗಾಧಾರಿತ ನಿರೀಕ್ಷೆಗಳು ಮಹಿಳೆಯ ಜೀವನವನ್ನು ಹೆಚ್ಚು ಪ್ರಭಾವಿತಗೊಳಿಸುತ್ತವೆ. ಗೃಹಕೃತ್ಯ ಮತ್ತು ಮಕ್ಕಳ ಲಾಲನೆ ಪಾಲನೆ ಗೃಹಿಣಿಗೆ ಸಿಗುವ ವೈಯಕ್ತಿಕ ಸಮಯವನ್ನು ಮೊಟಕುಗೊಳಿಸುತ್ತವೆ." ಕೌಟುಂಬಿಕ ನಿರ್ವಹಣೆಯನ್ನು ನಿರ್ವಹಿಸಲು ಕೆಲಸಕ್ಕೆ ಹೋದರೂ ಕೂಡ ಮನೆ ಮಕ್ಕಳನ್ನು ಬಿಟ್ಟು ವಿಶ್ರಾಂತಿ ಪಡೆಯುವುದಕ್ಕೆ ಇಷ್ಟಪಟ್ಟರೆ, ಅವಳು ಯಾವ ತಾಯಿ, ತಾಯಿಯಾದವಳು ಇಂತಹದೆ ಕೆಲಸ, ಕರ್ತವ್ಯಗಳನ್ನು ನಿರ್ವಹಿಸಬೇಕೆಂಬ ಬಲವಾದ ಸಾಮಾಜಿಕ ನಂಬಿಕೆಗಳು ಮಹಿಳೆಯನ್ನು ತಡೆಯುತ್ತವೆ. ಕುಟುಂಬದ ಅಗತ್ಯ ಮತ್ತು ಒತ್ತಡಗಳಿಗೆ ತಮ್ಮ ಸಮಯವನ್ನು ಹೊಂದಿಸಿಕೊಳ್ಳುವುದು ಚಿಕ್ಕಂದಿನಿಂದಲೂ ರೂಢಿಮಾಡಿಸಿರುತ್ತಾರೆ. ಇದಕ್ಕೆ ಗಾರ್ಮೆಂಟ್ಸ್ ಮಹಿಳೆಯರೂ ಕೂಡ ಹೊರತಾಗಿಲ್ಲ. ಏಕೆಂದರೆ ಈ ಮಹಿಳೆಯರು ಫ್ಯಾಕ್ಟ್ರಿ ಬರುವುದಕ್ಕೆ ಮುಂಚೆ ಮತ್ತು ಬಂದ ನಂತರ ಮಾಲೀಕರ ಪ್ರೊಡಕ್ಷನ್ ಒತ್ತಡದಿಂದ ಕತ್ತು ಕೂಡ ತಿರುಗಿಸಲಾರದಷ್ಟು ನಿರ್ಬಂಧವನ್ನ ಹೇರಿರುತ್ತಾರೆ. ಮಾಲೀಕರುಕಾರ್ಮಿಕರಿಂದ ಪ್ರೊಡಕ್ಷನ್ ಮಾತ್ರ ನಿರೀಕ್ಷಿಸುತ್ತಾರೆ ವಿನಃ ಅವರ ದೈಹಿಕ ಶ್ರಮಕ್ಕೆ ಸ್ವಲ್ಪ ಬಿಡುವು ಅಥವಾ ವಿಶ್ರಾಂತಿ ಬೇಕೆಂಬುದನ್ನು ಯೋಚಿಸುವುದಿಲ್ಲ. ಅವರು ಊಟಕ್ಕೆ ಕೂಡ ಅರ್ಧಗಂಟೆ ಸಮಯವನ್ನು ಕೊಡದೆ ಪ್ರೊಡಕ್ಷನ್ ಒತ್ತಡ ಹೇರಿರುತ್ತಾರೆ. ಒಬ್ಬ ಮನುಷ್ಯ ಎಲ್ಲಿ ತನಕ ದುಡಿಯಲು ಸಾಧ್ಯ. ಮಿಷನೆ ಒಂದೊಂದು ಸಾರಿ ಕೆಟ್ಟು ಹೋಗುವ ಸಂದರ್ಭವಿದ್ದಾಗ ಈ ಗಾರ್ಮೆಂಟ್ಸ್ ಮಹಿಳೆಯ ಮಾನಸಿಕ ಮತ್ತು ದೈಹಿಕವಾಗಿ ದುಡಿದು ದುಡಿದು ಅವಳ ಬದುಕು ಯಾವ ಮಟ್ಟಕ್ಕೆ ಮುಟ್ಟಿರುತ್ತದೆ ಎಂಬುದನ್ನು ಆಲೋಚಿಸಿದಾಗ ತಿಳಿಯುತ್ತದೆ. ಅವಳ ಮನೆಯಲ್ಲಿ ಮತ್ತು ಹೊರಗಡೆ ದಿನದ ಎಷ್ಟು ಗಂಟೆದುಡಿದರೂ ಅವಳಿಗೆ ಸ್ವಲ್ಪನೂ ವಿಶ್ರಾಂತಿ ಇಲ್ಲ. ಆದ್ದರಿಂದ ಮಹಿಳೆಗೆ ಇಂದಿನ ಸಮಾಜದಲ್ಲಿ ದಕ್ಕುವುದು ಒಂದಷ್ಟು 'ಪುರುಸೊತ್ತು' ವಿಶ್ರಾಂತಿ–ಬಿಡುವಿಲ್ಲ ಎಂಬ ವಾಸ್ತವಾಂಶ ಬಯಲಿಗೆ ಬಂದಿದೆ.

ಮಹಿಳೆಯ ಸಮಯವಾಗಲಿ, ದುಡಿಮೆಯಾಗಲಿ, ಬಿಡುವಾಗಲಿ ಅವಳ ನಿಯಂತ್ರಣದಲ್ಲಿಲ್ಲ ಎಂಬ ಕಟುಸತ್ಯದ ವಾಸ್ತವಂಶಕಂಡುಕೊಳ್ಳಬಹುದು. ಈ ಹಿನ್ನೆಲೆಯಲ್ಲಿ ವಿರಾಮದ ನಿಜವಾದ ಅರ್ಥವನ್ನು ಮಹಿಳೆಯರಿಗೆ ಮನದಟ್ಟು ಮಾಡಿಕೊಡಬೇಕಾಗಿದೆ. ದೈಹಿಕ ಮಾನಸಿಕ ಆರೋಗ್ಯಗಳೆರಡಕ್ಕೂ ಅತ್ಯಗತ್ಯವಾದ ವಿರಾಮವನ್ನು ಯಾವ ತಪ್ಪಿತಸ್ಥ ಭಾವನೆಯೂ ಇಲ್ಲದೆ ಅನುಭವಿಸುವ ಹಕ್ಕು ಮಹಿಳೆರದಾಗಬೇಕು. ತನ್ನದೇ ಆದ ಜವಾಬ್ದಾರಿಗಳನ್ನು ಒಳಗೊಂಡಂತೆ ಅಧಿಕಾರೇತರ ಸ್ಥಾನದಲ್ಲಿ ನಿಂತು ನಿರ್ವಹಿಸುವ ಎಲ್ಲ ಯೋಗಕ್ಷೇಮಗಳ ನಡುವೆ ಪೂರಕ ಸಂಬಂಧವನ್ನು ರೂಪಿಸಬೇಕಾಗಿದೆ.

೪.೪ ಆರ್ಥಿಕ ಸ್ಥಿತಿಗತಿ

೪.೪.೧ ಪ್ರಸ್ತಾವನೆ

ಯಾವುದೇ ಸಮಾಜದ ಅಭಿವೃದ್ದಿಯ ಮುಖ್ಯ ಸೂಚಕವೆಂದರೆ ಮಹಿಳೆಯರ ಸ್ಥಾನಮಾನ ದೇಶದ ಅರ್ಧದಷ್ಟು ಜನಸಂಖ್ಯೆ ಇರುವ ಮಹಿಳೆಯರು ಅಮೂಲ್ಯ ಮಾನವ ಸಂಪನ್ಮೂಲವಾಗಿದ್ದಾರೆ. ದೇಶದ ಸರ್ವಾಂಗೀಣ ಪ್ರಗತಿಗಾಗಿ ಗೃಹಣಿಯರಾಗಿ, ಭಾವಿ ಪ್ರಜೆಗಳನ್ನು ಹೆತ್ತು ಬೇಳೆಸುವ ತಾಯಂದಿರಾಗಿ ಮಹಿಳೆಯರು ಸಲ್ಲಿಸುತ್ತಿರುವ ಸೇವೆಯೇ ಅತಿ ದೊಡ್ಡದು ಹಾಗೂ ಅಮೋಘವಾದದ್ದು ಆದುದರಿಂದಲೇ ಅವರನ್ನು ಹಾಗೂ ಅವರ ಶಕ್ತಿಯನ್ನು ಗುರುತಿಸಿ ಅಭಿವೃದ್ದಿ ಪಥದಲ್ಲಿ ಮುನ್ನಡೆಯುವ ಅವಶ್ಯಕತೆ ಇದೆ. ಇದರಲ್ಲಿ ಅವರ ಪ್ರಗತಿ ಮಾತ್ರವಲ್ಲದೆ ದೇಶದ ಪ್ರಗತಿಯೂ ಅಡಕವಾಗಿದೆ. ಸಾಮಾಜಿಕ ಆರ್ಥಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಯಶಸ್ಸು ಗಳಿಸಿರುವ ಮಹಿಳೆಯರನ್ನು ಇಂದೂ ಸಹ ಅನೇಕ ಅವಕಾಶಗಳಿಂದ ವಂಚಿತಗೊಳಿಸುವ ವ್ಯವಸ್ಥಿತ ಪ್ರಯತ್ನ ನಡೆಯುತ್ತಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು ೬೦ ವರ್ಷಗಳು ಕಳೆದು ಹೋಗಿದ್ದರೂ ಮಹಿಳೆಯರನ್ನು ನೋಡುತ್ತಿರುವ ನಮ್ಮ ಸಮಾಜ ಕಲ್ಪಿಸಿಕೊಳ್ಳುತ್ತಿರುವ ರೀತಿ ಮಾತ್ರ ಸಾವಿರಾರು ವರ್ಷಗಳಷ್ಟು ಹಿಂದಿನದ್ದೇ ಎಂಬುದು ಪ್ರಸ್ತುತವಾಗಿ ಬದುಕಿನಲ್ಲಿ ಕಾಣುತ್ತವೆ. ಏಕೆಂದರೆ ಮಹಿಳೆ ಉತ್ಪಾದನಾ ಘಟಕದಲ್ಲಿ ಕೆಲಸ ಮಾಡುತ್ತ ಆರ್ಥಿಕ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಾ ಮಗಳಾಗಿ, ಹೆಂಡತಿಯಾಗಿ, ಸೊಸಿಯಾಗಿ, ತಾಯಿಯಾಗಿ, ಅತ್ತೆಯಾಗಿ, ಸಮಾಜಿಕ ಕಾರ್ಯಗಳಲ್ಲಿ ತನ್ನ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದರು ಸಾಂಪ್ರದಾಯಿಕ ವ್ಯವಸ್ಥೆ ಮಾತ್ರ ಮೊದಲಿಗಿಂತಲೂ ಅತೀ ಸೂಕ್ಷ್ಮವಾಗಿ ಅವಳ ದುಡಿಮೆ ಹಾಗೂ ಅದರ ಪ್ರತಿಫಲದ ಮೇಲೆ ನಿಯಂತ್ರಣ ಸಾಧಿಸುತ್ತಲೇ ಬಂದಿದೆ .ಹೆಣ್ಣು ಹುಟ್ಟುವ ಮೊದಲೇ ಕೊಲ್ಲುವ ಸಮಾಜದಲ್ಲಿ ಹೆಣ್ಣಿನ ಅಭಿವೃದ್ದಿ ಮತ್ತು ಸಬಲೀಕರಣದ ಮಾತುಗಳು ಕೇವಲ ಕ್ಲೀಷೆಯ ಸಂಗತಿಗಳಾಗಿವೆ. ಹೀಗಾಗಿ ಸಮಾಜದ ಮುಖ್ಯವಾಹಿನಿಯಲ್ಲಿ ಹೆಣ್ಣಿಗೆ ಜೀವಿಸುವ ಮೂಲಭೂತ ಹಕ್ಕಿನ ಕುರಿತು ಇಂದು ಚಿಂತಿಸುವ ಅಗತ್ಯತೆ ಇದೆ. ಇಂತ ಮಹಿಳೆಯರ ಶೋಷಣೆಗೊಳ ಪಡುವುದು ನಿತ್ಯದ ಬದುಕಿನ ಒಂದು ಭಾಗವಾಗಿರುತ್ತದೆ. ಈ ಶೋಷಣೆ ಅವಳಿಗೆ ನಿತ್ಯ ಕೊರಳಿಗೆ ಸುತ್ತಿಕೊಂಡೆ ಇರುವ ಶಾಶ್ವತ ಉರುಳು ಬದುಕು ಆಯಾ ತಪ್ಪಿದರೆ ಸುತ್ತಿಕೊಂಡಿರುವ ಉರುಳು ಮತ್ತು ಅವಳ ಕಾಲಡಿಯ ಪ್ರಪಾತಗಳೆರಡೂ ಅವಳ ಉಸಿರನ್ನು ನುಂಗಿ ಹಾಕಲು ಹಸಿವಿನಿಂದ ಕಾದಿರುತ್ತದೆ.

[illegible]

[illegible]

[illegible]

ಈ ಬೆಳಿಗ್ಗೆ ನಾಲ್ಕು ಗಂಟೆಯಿಂದ ಪ್ರಾರಂಭವಾಗುವ ಅವಳ ದುಡಿಮೆ ಆತಂಕ ಸಂದಿಗ್ದತೆ ಅನಿಶ್ಚಿತತೆ, ಮತ್ತು ಮುತ್ತಿ ಕಾಡುವ ಅಸಹಾಯಕತೆಗಳು ರಾತ್ರಿ ಮಲಗುವವರೆಗೂ ಸಾಗುತ್ತದೆ. ಬೆಳಗಿನಿಂದಲೇ ಶುರುವಾಗುವ ಮನೆಗೆಲಸ ಮತ್ತು ಹೊತ್ತು ಹುಟ್ಟುವ ನಂತರ ಪ್ರಾರಂಭವಾಗುವ ಕೂಲಿಕೆಲಸ ಹೊತ್ತು ಮುಳುಗಿದ ನಂತರ ಮಹಿಳೆ "ಇದು ನನ್ನ ಸ್ವಾತಂತ್ರ್ಯ" ಎಂದು ಯಾವುದನ್ನು ಸಂಭ್ರಮದಿಂದ ಆಚರಿಸುತ್ತಾಳೆ. ಎಂಬುದನ್ನು ಇನ್ನು ಕಂಡುಕೊಳ್ಳಬೇಕಿದೆ. ಮಹಿಳೆಯರು ಮೇಲ್ನೋಟಕ್ಕೆ ಸ್ವತಂತ್ರ್ಯಗಳು ದಿನನಿತ್ಯ ದುಡಿಯುವುದಕ್ಕೆ ದಿನನಿತ್ಯ ತನ್ನ ದೈಹಿಕ ತೊಂದರೆಗಳೊಂದಿಗೆ ಅವುಡುಗಚ್ಚಿ ಕಷ್ಟ ಸಹಿಸಿಕೊಳ್ಳಲು ಒಡತನ ಅಸಹಾಯಕತೆ ಕಷ್ಟ ಹಿಂಸೆಗಳನ್ನು ನಿತ್ಯ ನುಂಗಿ ಅನಿಶ್ಚಿತ ಭವಿಷ್ಯದ ಕನಸುಗಳಲ್ಲಿ ತನ್ನ ಜೀವನ ಕಳೆಯುತ್ತಿದ್ದಾಳೆ.

ಅಮರ್ತ್ಯಸೇನ್‌ರ್ ಹೇಳುವಂತೆ ತ್ರಿರೂಪಿ ದುಡಿಮೆಯಲ್ಲಿ ತೊಡಗಿ ಗಾರ್ಮೆಂಟ್ಸ ಮಹಿಳೆಯು ಉದಾಹರಣೆಯಾಗಿದ್ದಾಳೆ, ದಿನನಿತ್ಯ ಮೂರು ರಕ್ತ, ಕಡಿಮೆ ಸಂಬಳಕ್ಕೆ ಹೊರಗಿನ ಬೆಳಕಿಲ್ಲದ ಕಣ್ಣೀರು, ತ್ರಿರೂಪಿ ದುಡಿಮೆಯಲ್ಲಿ ಗಾರ್ಮೆಂಟ್ಸ ಮಹಿಳೆ ತೊಡಗಿದ್ದಾಳೆ ಪ್ರಾಯಶಃ ಇಂಡಿಯಾದ ಶ್ರಮಿಕ ವರ್ಗದ ಮಹಿಳೆಯರಂತೆ ಗಾರ್ಮೆಂಟ್ಸ ಮಹಿಳೆಯರು ಗಂಡಸರಿಗೆ ಸರಿಸಮಾನವಾಗಿ ದುಡಿಯುತ್ತಿದ್ದಾರೆ. ಆದರೆ ತಾವು ದುಡಿದ ಹಣದ ಮೇಲೆ ಅವರಿಗೆ ಯಾವುದೇ ಆಧಿಕಾರವಿಲ್ಲ. ಕುಟುಂಬದ ಒಟ್ಟಾರೆಯ ನಿರ್ವಹಣೆ ಮತ್ತು ಆರ್ಥಿಕತೆಯು ಮಹಿಳೆಯ ಕೈಯಲ್ಲಿದ್ದರು ಸಹ ಕುಟುಂಬದ ಮುಖ್ಯ ನಿರ್ಣಯಗಳನ್ನು ಮಹಿಳೆ ತೆಗೆದುಕೊಳ್ಳಲಾರಳು. ಇದನ್ನು ಅಮರ್ತ್ಸನೇನ್ ಒಡೆತನ ಮತ್ತು ನಿಯಂತ್ರಣ ಎಂದು ಕರೆಯುತ್ತಾರೆ.[೧೧] ಮಹಿಳೆಗೆ ತನ್ನ ದುಡಿಮಯ ಮೇಲೆ ಒಡೆತನವಾಗಲಿ ದುಡಿತದ ಮೇಲೆ ನಿಯಂತ್ರಣವಾಗಲಿ ಸಾಧ್ಯವಿಲ್ಲ ಗಾರ್ಮೆಂಟ್ಸ ಮಹಿಳೆಯ ಸ್ಥಿತಿ ಇದಕ್ಕಿಂತ ಹೊರತಾಗಿಲ್ಲ ನಿತ್ಯ ಸರಿಸುಮಾರು ಹದಿನೆಂಟು ಗಂಟೆಗಳ ಕಾಲ ದುಡಿಯುವ ಈ ವರ್ಗದ ಮಹಿಳೆ ಪುರುಷನಿಗಿಂತ ಹೆಚ್ಚು ಶ್ರಮವನ್ನು ವ್ಯಯಿಸುತ್ತಾಳೆ ಜೊತೆಗೆ ಮನೆಗೆಲಸದಲ್ಲಿ ನೆರವಾಗದ ಗಂಡನನ್ನು ನೆಚ್ಚಿಕೊಳ್ಳದೆ ಕೆಲಸದಲ್ಲಿ ತೊಡಗಿಕೊಳ್ಳುತ್ತಾಳೆ. ಮನೆಯಲ್ಲಿ ಪುರುಷರು ನಿರ್ವಹಿಸಬಹುದಾದ ದೈಹಿಕ ಶ್ರಮದ ಕೆಲಸಗಳನ್ನು ಮಹಿಳೆ ನಿರ್ವಹಿಸುತ್ತಾಳೆ. ಮಕ್ಕಳಾ ಪೋಷಣೆ ಅಡುಗೆ ಕೆಲಸ ಕುಟುಂಬವನ್ನು ಆರ್ಥಿಕ ಸಂಕಷ್ಟದಿಂದ ಪಾರುಮಾಡಲು ಎಷ್ಟೇ ವರ್ಷ ದೂರವಾದರೂ ನಡೆದುಕೊಂಡು ಹೋಗಿ ಕೆಲಸ ಮಾಡುತ್ತಾಳೆ. ಈ ಎಲ್ಲ ದೈನಂದಿನ ಕೆಲಸಗಳು ಅವಳಿಗೆ ಉಸಿರಾಟದಷ್ಟೇ ಸಹಜ ಪ್ರಕ್ರಿಯೆಗಳೆಂಬಂತೆ ನಿರ್ವಹಿಸಲ್ಪಡುತ್ತವೆ. ಕುಟುಂಬದ ಆರ್ಥಿಕ ಕೇಂದ್ರವಾಗಿ ದುಡಿದು ತಂದಿರುವ ಎಲ್ಲ ಹಣವನ್ನು ಕುಟುಂಬಕ್ಕೆ ವಿನಿಯೋಗಿಸುತ್ತಾಳೆ ಆದರೂ ಅವಳಿಗೆ ಯಾವುದೇ ಅಧಿಕಾರ ಇಲ್ಲ.

ಎಪ್ಪತ್ತರ ದಶಕದ ನಂತರ ಬೃಹದಾಗಿ ಬೆಳೆದು ಬಂದ ಪ್ರವಾದಿ ಚಿಂತನೆಯು ರಾಷ್ಟ್ರಿಯ ಆದಾಯದಲ್ಲಿ ಮಹಿಳೆಯರ ದುಡಿಮೆಯು ಪರಿಗಣಿಸದಿರುವುದು, ಮಹಿಳೆಯು ಆರ್ಥಿಕ ವಲಯದಿಂದ ದೂರವಿರಿಸುವ ತಂತ್ರಗಾರಿಕೆಯೇ ಆಗಿದೆ. ಉತ್ಪಾದನಾ ಕ್ರಿಯೆಯಲ್ಲಿ ಶ್ರಮದ ಕಾಣಿಕೆಯನ್ನು ದುಡಿಮೆ ಎನ್ನಲಾಗುತ್ತದೆ. ಭೂಮಿ ಶ್ರಮ ಬಂಡವಾಳ ಮತ್ತು ಸಂಘಟನೆ ಈ ನಾಲ್ಕು ಉತ್ಪಾದನಾಂಗಗಳ ಒಟ್ಟು ಪ್ರತಿಫಲವೇ ದುಡಿಮೆ ಎಂದು ನಿರ್ವಚಿಸಲಾದ ಈ ಅರ್ಥವ್ಯಾಪ್ತಿಯ ಹೊರಗಿನ ಶ್ರಮವನ್ನು

ದುಡಿಮೆ ಎಂದು ಪರಿಗಣಿಸುವುದಿಲ್ಲ. ಹೀಗೆ ದುಡಿಮೆ ಎನ್ನುವಂತಹದ್ದು ಉತ್ಪಾದನೆಯನ್ನು ಅವಲಂಬಿಸಿ ಬಂದ ಉತ್ಪಾನ್ನವನ್ನು ಮಾರುಕಟ್ಟೆಗೆ ರವಾನಿಸಿ ಅವರಿಂದ ಬರುವ ಆದಾಯವನ್ನು ಉತ್ಪಾದನಾಂಗಗಳಿಗೆ ವಿತರಿಸಲಾಗುವುದು. ಹಾಗಾಗಿ ಮಹಿಳೆಯ ಯಾವುದೇ ದುಡಿಮೆಯು ಈ ವ್ಯಾಖ್ಯಾನದೊಳಗೆ ಬರುವುದಿಲ್ಲ ದುಡಿಮೆ ಮತ್ತು ಹೆಣ್ಣಿನ ದುಡಿಮೆಗಳಲ್ಲಿನ ವ್ಯಾಖ್ಯಾನವು ಭಿನ್ನವಾಗಿದೆ. ಕೌಶಲ್ಯ ಭರಿತ ಅಥವಾ ಕೌಶಲ್ಯರಹಿತವೆಂದು ಕೆಲಸಗಳನ್ನು ನಿರ್ಧರಿಸಿ ಮಹಿಳೆಯು ನಿರ್ವಹಿಸುವ ಎಲ್ಲ ಬಗೆಯ ದುಡಿಮೆಯು ಅರೆಕೌಶಲ್ಯ ಮತ್ತು ಕೌಶಲ್ಯ ರಹಿತವೆಂದು ವಿಂಗಡಿಸಲಾಗುತ್ತದೆ. ಹಾಗಾಗಿ ಮಹಿಳೆಯ ಆರ್ಥಿಕ ಚಟುವಟಿಕೆಗಳಲ್ಲಿನ ಸಹಭಾಗಿತ್ವವು ಅವಳ ಆರ್ಥಿಕ ದುಡಿಮೆಯು ಪ್ರಧಾನವಾದದ್ದಲ್ಲ ಅದು ಅನುಷಂಗಿಕ ಪ್ರಾಸಂಗಿಕವಾದದ್ದೆಂದು ಬಿಂಬಿಸಲಾಗಿದೆ. ದುಡಿಮೆಯು ಪುರುಷರಿಗೆ ಸಾರ್ವಜನಿಕವಾಗಿಯೇ ವರಮಾನ ರಹಿತವೆಂದ ಪರಿಗಣಿಸಲಾಗಿದೆ ಒಟ್ಟಿನಲ್ಲಿ ಎಲ್ಲ ಬಗೆಯ ಆರ್ಥಿಕ ನಿರ್ವಚನಗಳು ಪರಿಕಲ್ಪನೆಗಳು ಪುರುಷನನ್ನೇ ಪರಾಮಾರ್ಶನ ಬಿಂದುವಾಗಿಸಿದೆ.

ಆರ್ಥಿಕ ವಲಯವೇ ಅಧಿಕಾರ ಹೊಂದಿರುವ ಕ್ಷೇತ್ರವಾಗಿದೆ. ಸಾಂಪ್ರದಾಯಿಕ ಸಮಾಜ ಈ ವಲಯದ ಪ್ರವೇಶವನ್ನೆ ನಿರಾಕರಿಸುತ್ತದೆ ಕೆಲವೊಂದು ಅನಿವಾರ್ಯ ಸಂಧರ್ಭದಲ್ಲಿ ಆರ್ಥಿಕ ವಲಯಕ್ಕೆ ಮಹಿಳೆ ಕಾಲಿಟ್ಟರೂ ಅವಳ ಪ್ರವೇಶ ಪ್ರಕ್ರಿಯೆಯು ಮೊದಲುಗೊಂಡು ಅವಳ ಮೇಲೆ ದೌರ್ಜನ್ಯ-ಹಿಂಸೆಗಳು ನಡೆಯುತ್ತಲೇ ಇವೆ. ಗೋಚರ-ಅಗೋಚರವಾಗಿ ನಡೆಯುವ ದೌರ್ಜನ್ಯ-ಹಿಂಸೆಗಳು ಕೆಲವು ಕ್ಷೇತ್ರಗಳಲ್ಲಿ ಬಹುತೇಕವಾಗಿ ಆಗೋಚರವಾಗಿ ನಯಗಾರಿಕೆಯಲ್ಲಿಯೇ ಸಾಗುತ್ತವೆ. ಸಾಧಾರಣವಾಗಿ ಯಜಮಾನಿಕೆಯ ಸ್ಥಾಪನೆಯಾಗವುದೇ ಆರ್ಥಿಕ ಸಬಲೀಕರಣದಿಂದಾಗಿ ಸಂಪನ್ಮೂಲದ ಗಳಿಕೆ ಆ ಮೂಲಕ ಅವುಗಳ ಮೇಲಿನ ನಿಯಂತ್ರಣವು ಯಜಮಾನ್ಯತೆಯನ್ನು ನಿಯಂತ್ರಿಸಿ ಮುಂದುವರೆಸುವಲ್ಲಿ ಶಕ್ತವಾಗುತ್ತದೆ. ಈ ಬಗೆಯಲ್ಲಿ ಸ್ಥಾಪನೆವಾಗುವ ಅಧಿಕಾರಕ್ಕೆ ಮೂಲಭೂತವಾಗಿರುವ ಆರ್ಥಿಕತೆಯಿಂದಾಗಿ ಮಹಿಳೆಯು ಅಂಚಿಗೆಸರಿಸಲ್ಪಟ್ಟಿರುವುದು. ಪುರಷಶಾಹಿ ಧೋರಣೆಯಿಂದ ಹಿಂದೆ ಅತ್ಯಂತ ತುಳಿತಕ್ಕೆ ಒಳಗಾದ ಮಹಿಳೆ ಇಂದು ಅನಿವಾರ್ಯವಾಗಿ ಹೊರಜಗತ್ತಿಗೆ ಪಾದರ್ಪಣೆ ಮಾಡುತ್ತಿದ್ದಾಳೆ. ಪ್ರಸ್ತುತಗಳಲ್ಲಿ ಗಂಡಿನೊಂದಿಗೆ ಭಾಗಿಯಾಗುತ್ತಿದ್ದಾಳೆ. ಪುರುಷಶಾಹಿ ವ್ಯವಸ್ಥೆಯು ಪುರುಷರಿಗೆ ಅತಿಯಾದ ಪ್ರಾಧಾನ್ಯತೆಯನ್ನು ನೀಡಿ ಅವರ ಪಾತ್ರವನ್ನು ಶ್ರೇಷ್ಠವೆಂದು ಪರಿಗಣಿಸಿದೆ. ಇದೇ ವ್ಯವಸ್ಥೆಯು ಸ್ತ್ರೀಯರ ಪಾತ್ರವನ್ನು ಅವರು ಮಾಡುವ ಕಾರ್ಯಗಳನ್ನು ಅತೀ ಗೌಣವಾಗಿ ಕಂಡು ಸ್ತ್ರೀ ಯರ ಮೇಲೆ ನಾನಾ ಬಗೆಯ ನಿರ್ಬಂಧನೆಗಳನ್ನು ಹೇರಿ ಲಿಂಗ ಅಸಮಾನತೆಯನ್ನು ಸೃಷ್ಠಿಸಿಬಿಟ್ಟಿದೆ ಸ್ತ್ರೀ-ಪುರುಷರ ನಡುವಿನ ವ್ಯತ್ಯಾಸವನ್ನು ಸಮರ್ಥಿಸುವ ಜೈವಿಕ ನೀತಿಯನ್ನು ಒಪ್ಪಿಕೊಳ್ಳುವ ಸಮಾಜವಿಜ್ಞಾನಗಳು ಲಿಂಗ ಅಸಮಾನತೆಗೆ ಕಾರಣವಾಗಿದೆ.[೧೨]

"ಮಹಿಳೆಯ ಸಮಸ್ಯೆಗಳನ್ನು ಅರ್ಥಶಾಸ್ತ್ರದ ನಿಟ್ಟಿನಿಂದ ವಿಶ್ಲೇಷಿಸುವುದರಲ್ಲಿ ಹಾಯ್ಡಿಹಾರ್ಟಮನ್ ಪ್ರಮುಖರು ಪಿತೃಪ್ರಧಾನತೆಯು ಸ್ತ್ರೀ ಪುರುಷರನ್ನು ಬೇರ್ಪಡಿಸುವ ಬಗೆಯನ್ನು ಆರ್ಥಿಕವಾಗಿ ಹುಟ್ಟುಹಾಕಿದ ಬಂಡವಾಳಶಾಹಿ ವ್ಯವಸ್ಥೆಯನ್ನು ವಿವರಿಸುತ್ತಾಳೆ. ಮಾರ್ಕ್ಸವಾದ ಮತ್ತು ಸ್ತ್ರೀವಾದವು ಹೊಂದಿರುವ ಅವಶ್ಯಕವಾದ ಆದರೆ ಬಿಕ್ಕಟ್ಟಿನ ಸಂಬಂಧವನ್ನು ಕುರಿತು "ಅಸಂತೋಷದ ಮದುವೆ

[illegible]

[illegible]

[illegible]

ಎಂದು ಹಾರ್ಟಮನ್ ಕರೆಯುತ್ತಾಳೆ. ಅರ್ಥಶಾಸ್ತ್ರದ ಧೃತ್ಯ ವ್ಯವಸ್ಥೆಯ ಸಿದ್ದಾಂತವನ್ನು ಬೆಳೆಸಿದ್ದು ಹಾರ್ಟಮನ್ ಈ ಸಿದ್ದಾಂತದ ಪ್ರಕಾರ ಪಿತೃಪ್ರಧಾನತೆ ಮತ್ತು ಬಂಡವಾಳಶಾಹಿ ಎರಡು ವ್ಯವಸ್ಥೆಗಳು ವಿಶಿಷ್ಠವಾಗಿದ್ದು ಇವೆರಡೂ ಒಂದರೊಡನೊಂದು ಶೋಷಣೆಯ ಪರಸ್ಪರ ಕ್ರಿಯೆಗಳಾಗಿವೆ. ಏಕೆಂದರೆ ಎರಡೂ ವ್ಯವಸ್ಥೆಗಳೂ ಪುರುಷರಿಗೆ ಅವರ ಅಧಿಕಾರವನ್ನು ಚಲಾಯಿಸಲು ಕೂಲಿಯ ತಾರತಮ್ಯತೆ ಕೆಲಸದ ವಿಂಗಡಣೆ ಮತ್ತು ಹೆಂಗಸರನ್ನು ಅವರ ಮನೆಗೆಲಸಕ್ಕೆ ಕಟ್ಟಿಹಾಕುವಲ್ಲಿ ನೆರವು ನೀಡುತ್ತದೆ.[೧೩]

೪.೪.೨ ಸಮಾನ ಕೆಲಸಕ್ಕೆ ಸಮಾನ ವೇತನ

ಸಮಾನ ಕೆಲಸಕ್ಕೆ ಸಮಾನ ವೇತನ ಎನ್ನುವುದು ಕೇವಲ ಪುರುಷಶಾಹಿಗೆ ಮಾತ್ರ ಸಂಬಂಧಪಟ್ಟಂತ ಕಾಯ್ದೆಯಾಗಿದೆ. ಏಕೆಂದರೆ ವಾಸ್ತವದಲ್ಲಿ ಇಡಿ ಸಂಘಟಿತ ವಲಯದ ಮಹಿಳೆಯ ಸಮುದಾಯವೇ ಅದರಲ್ಲೂ ಗಾರ್ಮೆಂಟ್ಸ್ ಮಹಿಳೆಯರಿಗೆ ಸಿಗುವ ಸಂಬಳ ಮಾತ್ರ ಪುರುಷರಿಗೆ ಹೋಲಿಸುದಾಗ ತೀರ ಕಡಿಮೆ ಅಂತನೇ ಹೇಳಬಹುದು. ಸಂಶೋಧನೆಯಿಂದ ಸಿಕ್ಕಿರುವ ಮಾಹಿತಿ ಪ್ರಕಾರ ಜೈವಿಕತೆಯನ್ನು ಆಧಾರವಾಗಿಟ್ಟುಕೊಂಡು ಮಹಿಳೆ ಎನ್ನುವ ಕಾರಣಕ್ಕೆ ಕಡಿಮೆ ಸಂಭಾವನೆ ಕೊಡುವುದು ಕಂಡುಬರುತ್ತದೆ.

"ಭಾರತ ಸರ್ಕಾರವು ೧೯೭೫ರ ಸಪ್ಟಂಬರ್ ೨೬ರಂದು ಸಮಾನ ದುಡಿಮೆಗೆ ಸಮಾನ ವೇತನ ಎಂಬ ಆರ್ಡಿನೆನ್ಸ್‌ನ್ನು ತಂದಿತು. ಅದರ ಪ್ರಕಾರ ಸಮಾನ ಕೆಲಸ ಮತ್ತು ಸಮಾನ ಸ್ವರೂಪದ ಕೆಲಸ ಮಾಡುವ ಹೆಣ್ಣು ಗಂಡುಗಳಿಬ್ಬರೂ ಸಮಾನ ವೇತನ ನೀಡಬೇಕೆಂದು ಹೇಳಲಾಗಿತ್ತು ಮಹಿಳೆಯರಿಗೆ ಈ ಆರ್ಡಿನೆನ್ಸ್‌ನಿಂದ ಪ್ರಯೋಜನವಾಗಬೇಕೆಂದರೆ ಅದನ್ನು ಸೂಕ್ತ ರೀತಿಯಲ್ಲಿ ಜಾರಿಗೊಳಿಸಬೇಕು ಚಾಣಾಕ್ಷ ಮಾಲೀಕರು ಇದು ಜಾರಿಯಾಗದಂತೆ ನೋಡಿಕೊಳ್ಳಲು ಈ ಆರ್ಡಿನೆನ್ಸ್‌ನಲ್ಲಿರುವ ಕುಂದುಕೊರತೆಗಳನ್ನೆ ಜಾಣ್ಮೆಯಿಂದ ಬಳಸಿಕೊಳ್ಳುತ್ತಾರೆ. ಪರಿಣಾಮವಾಗಿ ಮಹಿಳೆಯರು ಕೆಲಸ ಕಳೆದುಕೊಳ್ಳಬೇಕಾಗುತ್ತದೆ. ಮಹಿಳೆಯರನ್ನು ಕೆಲಸದಿಂದ ತೆಗೆದು ಹಾಕುವುದನ್ನು ಈ ಕಾಯ್ದೆ ನಿಷೇಧಿಸುವುದಿಲ್ಲವಾದ್ದರಿಂದ ಮಹಿಳೆಯರ ಉದ್ಯೋಗದ ಭದ್ರತೆಯನ್ನು ಕಾಪಾಡಲು ಅಸಮರ್ಪಕವಾಗಿದೆ. ಉದ್ಯೋಗ ಕಳೆದುಕೊಳ್ಳಬಹುದೆಂಬ ಭಯದಿಂದ ಮಹಿಳೆಯರೂ ಕೂಡ ಈ ಬೇಡಿಕೆಗಳನ್ನು ಒತ್ತಾಯಿಸುವುದಕ್ಕೆ ಮುಂದೆ ಬರುವುದಿಲ್ಲ. ಸಮಾನ ದುಡಿಮೆಗೆ ಸಮಾನ ವೇತನ ಒತ್ತಾಯಿಸಿದುದೇ ಕಾರಣವಾಗಿ ಕಲ್ಲಿದ್ದಲಿನ ಗಣಿಗಳಲ್ಲಿ ಮಹಿಳೆಯರನ್ನು ಕೆಲಸದಿಂದ ತೆಗೆಯಲಾಯಿತು ಎಂದು "ಕಲ್ಲಿದ್ದಲು ಗಣಿ ಕಾರ್ಖಾನೆಯಲ್ಲಿ ದುಡಿಯುವ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಬಂದ ೧೯೬೯ವರದಿಯಲ್ಲಿ ಉಲ್ಲೇಖಿಸಲಾಗಿದೆ.[೧೪]

ಭಾರತ ಪ್ರಪಂಚದಲ್ಲೇ ಅತಿ ಹೆಚ್ಚು ಅಸಂಘಟಿತ ವಲಯದಲ್ಲಿ ದುಡಿಯುವ ಮಹಿಳಾ ಕಾರ್ಮಿಕರಿರುವ ರಾಷ್ಟ್ರವಾಗಿದ್ದು, ಭಾರತ ಸರ್ಕಾರದ ಸಮೀಕ್ಷೆ ಪ್ರಕಾರ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ.೨೨.೭೩ರಷ್ಟು ಮಹಿಳೆಯರು ಹೊರಗೆ ದುಡಿಯುತ್ತಾರೆ ಅವರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಅಸಂಘಟಿತರಾಗಿ ದುಡಿಯುವ ಮಹಿಳೆಯರ ಸಂಖ್ಯೆ ಶೇ ೮೭ರಷ್ಟು ನಗರದ ಪ್ರದೇಶದಲ್ಲಿ ಶೇ ೮೦ರಷ್ಟು ಎಂದು ಅಂದಾಜು ಮಾಡಲಾಗಿದೆ.

[illegible]

[illegible]

[illegible]

[illegible]

[illegible]

[illegible]

[illegible]

"ಹಂಪಿ ಕನ್ನಡ ವಿಶ್ವವಿದ್ಯಾಲಯ ಇತ್ತೀಚೆಗೆ ನಡೆಸಿದ ಸಂಶೋಧನೆಯ ಪ್ರಕಾರ ಬಳ್ಳಾರಿ ಜಿಲ್ಲೆಯ ಗಣಿ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಮಹಿಳೆಯರಿಗೆ ಸಮಾನ ವೇತನ ದೊರೆಯುತ್ತಿಲ್ಲ. ಮಹಿಳಾ ಅಧ್ಯಯನ ವಿಭಾಗದ ಡಾ.ಎಂ.ಭಾಗ್ಯಲಕ್ಷ್ಮಿಯವರ ಪ್ರಕಾರ ಅನಕ್ಷರತೆ ಮತ್ತು ಮಧ್ಯ ವಯಸ್ಸಿನಿಂದಾಗಿ ಸಮಾನ ವೇತನದ ಬಗ್ಗೆ ದನಿ ಎತ್ತಲು ಅವರು ಶಕ್ತರಲ್ಲ ಅಸಂಘಟಿತ ಎಂದು ವರ್ಗೀಕರಿಸಿರುವದರಿಂದ ಮಹಿಳೆಯರಲ್ಲಿ ಕೀಳರಿಮೆ ಹೆಚ್ಚಾಗಿದೆ ಜತೆಗೆ ಪುರುಷರ ದಬ್ಬಾಳಿಕೆ ಲೈಂಗಿಕ ದೌರ್ಜನ್ಯ ಬಡತನ ಕುಟುಂಬದ ಜವಾಬ್ದಾರಿ ಮೊದಲಾದ ಕಾರಣಗಳಿಂದ ಈ ವಲಯದ ಮಹಿಳೆಯರು ತಮಗೆ ಸಿಗಬೇಕಾದ ಸೌಲಭ್ಯಗಳ ಬಗ್ಗೆ ಗಮನಹರಿಸುತ್ತಿಲ್ಲ. ಕಾನೂನು ತಜ್ಞ ಗೋಪಾಲಚಾರ್ ಅವರ ಪ್ರಕಾರ ಅಸಂಘಟಿತ ಮಹಿಳಾ ಕಾರ್ಮಿಕರಿಗಾಗಿಯೇ ಪ್ರತ್ಯೇಕ ಅಧಿನಿಯಮ ಜಾರಿಗೆ ತರುವುದು ಅಗತ್ಯ. ಅದೇ ರೀತಿ ಅವರಿಗೆ ಸಿಗಬೇಕಾದ ವೇತನ ಸೌಲಭ್ಯಗಳ ಬಗ್ಗೆಯು ಅರಿವು ಮೂಡಿಸಬೇಕು. ಯುವ ಕೆಲಸಕ್ಕೆ ಎಷ್ಟು ವೇತನ ನಿಗದಿಯಾಗಿದೆ ಎಂಬ ಸೂಚನಾ ಫಲಕವನ್ನು ಕೆಲಸ ಮಾಡುವ ಸ್ಥಳದಲ್ಲಿಡಬೇಕು ಸಂಘಟಿತ ನೌಕರರಿಗೆ ಇರುವ ಕೆಲವು ಮೂಲಭೂತ ಸೌಲಭ್ಯಗಳನ್ನು ಅಸಂಘಟಿತ ವಲಯದ ಮಹಿಳಾ ಕಾರ್ಮಿಕರಿಗೂ ಒದಗಿಸಬೇಕು.[೧೫]

ಕಾನೂನಿನ ಪ್ರಕಾರ ದುಡಿಯುವ ಪ್ರತಿ ಮಹಿಳೆಗೂ ಸರ್ಕಾರ ಪುರುಷನಷ್ಟೆ ವೇತನ ನಿಗದಿ ಪಡಿಸಿದೆ ಆದ್ದರಿಂದ ಮಹಿಳೆಯರಿಗೆ ಕನಿಷ್ಠ ಪ್ರಮಾಣಕ್ಕಿಂತಲೂ ಕಡಿಮೆ ಮಜೂರಿ ನೀಡುವುದು ಅಪರಾಧ. ಇಂಥವರಿಗೆ ಆರು ತಿಂಗಳ ಕಾರಗೃಹ ಶಿಕ್ಷೆ ನೀಡಬಹುದು ಗಂಟೆ ದಿನ ಮತ್ತು ತಿಂಗಳುಗಳ ಲೆಕ್ಕದಲ್ಲಿ ಒಮ್ಮೆ ನಿಗದಿಪಡಿಸಿದ ಮಜೂರಿಯನ್ನು ಆಗಾಗ್ಗೆ ಪರಿಷ್ಕರಿಸಲಾಗುತ್ತದೆ. ಕಾರ್ಮಿಕ ಮಹಿಳೆ ಒಂಬತ್ತು ಗಂಟೆಗಳಿಗಿಂತ ಹೆಚ್ಚು ಅವಧಿ ಕೆಲಸ ಮಾಡುವಂತಿಲ್ಲ, ಇಡಿ ದಿನ ದುಡಿಸಿಕೊಳ್ಳದಿದ್ದರೂ ಆ ದಿನದ ಪೂರ್ಣ ವೇತನ ನೀಡಬೇಕು ವಾರದಲ್ಲಿ ಒಂದು ದಿನ ಮಜೂರಿ ಸಹಿತ ರಜೆ ನೀಡಬೇಕು. ಪುರುಷ ಮತ್ತು ಮಹಿಳೆ ಮಾಡುವ ಕೆಲಸ ಒಂದೇ ರೀತಿಯ ನೈಪುಣ್ಯತೆ ಮತ್ತು ಶ್ರಮ ಒಳಗೊಂಡಿದ್ದರೆ ಇಬ್ಬರಿಗೂ ಸಮಾನ ವೇತನ ನೀಡಬೇಕು.

ಪ್ರಸ್ತುತ ಸಂಶೋಧನೆಯ ಕ್ಷೇತ್ರಧ್ಯಯನ ಸಂಧರ್ಭದಲ್ಲಿ ಗಾರ್ಮೆಂಟ್ಸ್ ಮಹಿಳೆಯನ್ನು ತೆಗೆದುಕೊಂಡಾಗ ಕೆಲಸದ ಸ್ವರೂಪದಲ್ಲಿ ವ್ಯತ್ಯಾಸವನ್ನು ಕಾಣಬಹುದು. ಏಕೆಂದರೆ ಮೊದಲೇ ಮಾಲೀಕರು ಹೆಣ್ಣು ಮತ್ತು ಗಂಡು ಎಂದು ವಿಭಾಗೀಕರಣಮಾಡಿ ಕೆಲವೊಂದು ಇಂತಹದೆ ಕೆಲಸವನ್ನು ಪುರುಷರು ಮಾಡಬೇಕು. ಇಂತಹದೆ ಕೆಲಸವನ್ನು ಮಹಿಳೆಯರು ಮಾಡಬೇಕು ಎಂಬ ಪೂರ್ವಗ್ರಹ ಪೀಡಿತರಾಗಿ ಕೆಲಸಗಳನ್ನು ಹಂಚಿಕೆ ಮಾಡುತ್ತಾರೆ. ಇದರಿಂದ ಮಹಿಳೆಯ ಕೆಲಸವನ್ನು ಅಧೀನವಾಗಿಯೂ ಪುರುಷನ ಕೆಲಸವನ್ನು ಪ್ರಧಾನವಾಗಿಯೂ ನೋಡಲಾಗುವುದರಿಂದ ಅವರಿಗೆ ಕೊಡುವ ಸಂಭಾವನೆಯು ಸಹ ಕಡಿಮೆಯಾಗಿರುತ್ತದೆ. ಸಂವಿಧಾನ ೧೯೭೬ರ ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ಕಾನೂನು ಬಂದರೂ ಕೇವಲ ಪುಸ್ತಕದ ಮಾತಾಗಿದೆ ವಿನಃ ವಾಸ್ತವದಲ್ಲಿ ಜಾರಿಗೊಂಡಿಲ್ಲ ಈ ಕಾಯ್ದೆ ಅಲ್ಲದೆನೂ ಸಾಕಷ್ಟು ಕಾನೂನುಗಳು ಮಹಿಳಾ ಪರವಾಗಿ ಬಂದರೂ ಅವುಗಳು ಎಷ್ಟರ ಮಟ್ಟಿಗೆ ವಾಸ್ತವದಲ್ಲಿ ಅವಕಾಶಗಳು ಪಡೆಯುವ ವ್ಯವಸ್ಥೆ ರೂಪಿಸಲ್ಪಟ್ಟಿದೆ ಎಂಬುದನ್ನು ವಿಶ್ಲೇಷಣೆಗೆ ಒಳಡಿಸಬೇಕಾಗುತ್ತದೆ.

[illegible]

[illegible]

[illegible]

ಅಲ್ಲಿ ತನಕ ಪುರುಷ ಪ್ರಧಾನ ವ್ಯವಸ್ಥೆಯು ಅಧಿಕಾರದ ಸಂಕಷ್ಟದ ಸ್ಥಿತಿಯನ್ನೆ ಒಳಗೊಂಡಿರುತ್ತದೆ. ಏಕೆಂದರೆ ಬಂಡವಾಳ ಶಾಹಿ ವ್ಯವಸ್ಥೆಯು ಮತ್ತು ಪಿತೃ ಪ್ರಧಾನ ವ್ಯವಸ್ಥೆಯೆರಡು ಮಹಿಳೆಯ ಮನಸ್ಸಿನ ಮತ್ತು ದೇಹದ ಮೇಲೆ ನಿಯಂತ್ರಣ ಮತ್ತು ನಿರ್ಬಂಧನೆ ಹೊಂದಿರುತ್ತದೆ ಸ್ವಂತಃ ಅವಳೇ ತನ್ನ ಮೇಲೆ ತಾನೆ ಅಧಿಕಾರ ಚಲಾವಣೆ ಹೊಂದದ ಹಾಗೆ ವ್ಯವಸ್ಥೆ ಕಲ್ಪಿಸಿರುತ್ತದೆ. ಇಂತಹದರಲ್ಲಿ ಅವಳ ದುಡಿತದ ಫಲಿತದ ಅಧಿಕಾರ ಹೊಂದುವುದು ದೂರದ ಮಾತೇ ಸರಿ. ಮಹಿಳೆಯ ಆರ್ಥಿಕ ಪರಿಸ್ಥಿತಿಯು ಸ್ವಲ್ಪಮಟ್ಟಿನ ಸುಧಾರಣೆಗಾಗಿ ಪ್ರತಿದಿನ ಯಾವುದೇ ವಿಶ್ರಾಂತಿ ಇಲ್ಲದೆ ದುಡಿಯುತ್ತಿರುತ್ತಾಳೆ. ಗಂಡನ ಒತ್ತಾಯಕ್ಕಾಗಿ, ತಂದೆ ತೀರಿಕೊಂಡಿದ್ದರಿಂದ ಅಣ್ಣ ಇದ್ದರೂ ಇಲ್ಲದಂತೆ ಯಾರೋ ಮಾಡಿದ ತಪ್ಪಿಗೆ ಅನಿವಾರ್ಯವಾಗಿ ದುಡಿಯುವಂತೆ ಒತ್ತಡ ಬಂದಿದೆ. ಹೀಗಿದ್ದಾಗ ಹದಿಹರೆಯದ ಹುಡಗಿಯರ ಕನಸುಗಳೆಲ್ಲವು ಉಸುಕಿನ ಗೋಪುರವಾಗುತ್ತವೆ. ಚಿಕ್ಕವಯಸ್ಸಿನಲ್ಲೆ ಸಂಸಾರದ ಹೊಣೆಯನ್ನ ಹೊತ್ತುಕೊಂಡು ಮನೆಯಲ್ಲಿ ಮತ್ತು ಎರಡು ಬಗೆಯ ಹೊರೆಗಳು ಹಾಕಿಕೊಂಡು ಅನೇಕ ಬಗೆಯ ಶೋಷಣೆಗಳನ್ನು ಅನುಭವಿಸುತ್ತಾರೆ. ಆದರೂ ಅವಳ ಉತ್ಪಾದನೆ ಮತ್ತು ದುಡಿತಕ್ಕೆ ಯಾವುದೇ ಬೆಲೆ ಕೊಡುವುದಿಲ್ಲ.

ಅವಳು ದೈಹಿಕವಾಗಿ ಪುರುಷನಷ್ಟೇ ಶ್ರಮವಹಿಸಿ ದುಡಿದರೂ ಅದಕ್ಕೆ ತಕ್ಕಷ್ಟು ಮಾಲೀಕರು ಸಂಭಾವನೆ ಕೊಡುವುದಿಲ್ಲ. ಮಹಿಳೆಯರಿಗೆ ಕೊಡುವ ಕೆಲಸದಲ್ಲಿ ಅನೇಕ ಬಗೆಯ ತಾರತಮ್ಯಗಳು ಕಾಣಿಸಿಕೊಳ್ಳುತ್ತವೆ. ಮಹಿಳೆಯರಿಗೆ ಲೇಬಲ್ ಹೆಚ್ಚುವುದು ದಾರ ಕತ್ತರಿಸುವುದು ಪ್ಯಾಕ್ ಮಾಡುವುದು ಫಿನಿಶಿಂಗ್ ಮಾಡುವುದು ಬಾಲ್ಪಕ್ ಹೊಡೆಯುವುದು ಇನ್ನಿತರ ಕೆಲಸಗಳನ್ನು ಮಾಡಿಸುತ್ತಾರೆ. ಆದರೆ ಪುರುಷರಿಗೆ ಮಾತ್ರ ಕಟ್ಟಿಂಗ್ ಮಾಡುವುದು ಹೊಲಿಯುವುದು (ಟೈಲರಿಂಗ್) ಇನ್ನಿತರ ಪ್ರಧಾನ ಕೆಲಸವನ್ನು ಮಾಲೀಕರು ಪುರುಷರಿಗೆ ಕೊಟ್ಟು ಅವರ ಕೆಲಸವೆಲ್ಲವೂ ಮುಖ್ಯವಾದದ್ದಂದು ಅವರಿಗೆ ಕೊಡುವ ಸಂಬಳವೆಲ್ಲವೂ ಹೆಚ್ಚಿಗೆ ಇರುತ್ತದೆ. ಆದರೆ ಮಹಿಳೆಯರು ಅಂತಹ ಕೆಲಸಗಳನ್ನು ಮಾಡುವುದಕ್ಕೆ ಬರುವುದಿಲ್ಲ ಎಂಬ ಅಭಿಪ್ರಾಯವನ್ನು ಹೇಳುತ್ತಾರೆ. ಅಂದರೆ ಮಹಿಳೆಯರಿಗೆ ಹೊಲಿಯುವುದಕ್ಕೆ ಕತ್ತರಿಸುವುದಕ್ಕೆ ಬರುವುದು. ಎರಡನೆ ವಿಷಯ ಅಂದರೆ ಮಾಲೀಕರು ಹೆಣ್ಣು ಎನ್ನುವ ಕಾರಣಕ್ಕಾಗಿಯೋ ಅವಳಿಗೆ ಮಾಡುವುದಕ್ಕೆ ಬರುವುದಿಲ್ಲ ಎಂಬ ನಿರ್ಣಯವನ್ನು ಮಂಡಿಸುತ್ತಾರೆ. ಹೀಗಿದ್ದಾಗ ಅವರಿಗೆ ಕೊಡುವ ಸಂಬಳ ಕೂಡ ಕಡಿಮೆ ಆಗಿರುತ್ತದೆ ಮತ್ತು ಫೀಸ್‌ಗಳ ಆಧಾರದ ಮೇಲೆ ಅವರ ಸಂಭಾವನೆ ನಿಗದಿಪಡಿಸುತ್ತಾರೆ. ಹಿಗಿದ್ದಾಗ ಶೋಷಣೆ ಪ್ರಶ್ನೆ ಎಲ್ಲಿ ಬರುತ್ತೆ ಅವರಿಗೆ ಕೆಲಸ ಮಾಡಿದಷ್ಟು ಸಂಭಾವನೆ ಕೊಡುತ್ತೇವೆ ಆದರೆ ಪ್ರಧಾನಧಾರೆ ವ್ಯವಸ್ಥೆ ಮತ್ತು ಬಂಡವಾಳ ಶಾಹಿ ವ್ಯವಸ್ಥೆಯು ಬಂದೆ ಸಮಯ ಎರಡು ಕಡೆ ಯಿಂದ ಲಿಂಗಾದಾರಿತವಾಗಿ ತಾರತಮ್ಯಕೆ ಒಳಗಾಗಿರುವುದನ್ನು ಕಾಣಬಹುದು ಏಕೆಂದರೆ ಕುಡುಂಬದಲ್ಲಿ ಎಲ್ಲ ಕೆಲಸಗಳನ್ನು ಮುಗಿಸಿಕೊಂಡು ಬಂದು ಪ್ಯಾಕ್ಟ್ರಿಯಲ್ಲಿ ಪುರುಷರು ಬಂಧು ಮಾಡುವುದಿಲ್ಲ ಕೆಲಸ ಮಾಡುವುದಕ್ಕೆ ಆಗದೆ ಸಿಕ್ಕಿರುವ ಕೆಲಸವನ್ನು ಒಪ್ಪಿಕೊಂಡು ಕೊಟ್ಟಷ್ಟು ಕೂಲಿಯನ್ನು ತೆಗೆದುಕೊಂಡು ಅನಿವಾರ್ಯವಾಗಿ ಕೆಲಸ ಮಾಡುವ ಪ್ರಸಂಗವನ್ನು ತಂದುಕೊಡುತ್ತಾರೆ. ಪ್ರಧಾನಧಾರೆಯ ವ್ಯವಸ್ಥೆ ಮಹಿಳೆಯನ್ನು ಕುಟುಂಬದಲ್ಲಿ ಮತ್ತು ಪ್ಯಾಕ್ಸ್‌ಯಲ್ಲಿ ಎರಡು ಕಡೆ ಕೂಡ ಸೇವಾವಲಯಕ್ಕೆ ಸಿಮಿತಗೊಳ್ಳುವ ವ್ಯವಸ್ಥೆಯನ್ನು ಮೂಡಿಸುತ್ತದೆ. ಮತ್ತೆ ಮತ್ತೆ ಮಹಿಳೆಯನ್ನು ಅನಿವಾರ್ಯವಾಗಿ ಸೇವಾಲಯಕ್ಕೆ ಸೀಮಿತಗೊಳಿಸುತ್ತವೆ. ಸಹಜವಾಗಿಯೇ ಅವರು

ಆ ವ್ಯವಸ್ಥೆಯನ್ನು ಒಪ್ಪುವ ಮನಃಸ್ಥಿತಿಯನ್ನು ಸೃಷ್ಟಿಸುತ್ತವೆ. ಕೆಲವೊಬ್ಬ ಮಹಿಳೆಯರಿಗೆ ಹೊಲಿಯುವುದಕ್ಕೆ ಬಂದರೂ ಕೂಡ ಆ ಕೆಲಸವನ್ನು ಅವರಿಗೆ ಕೊಡದೆ ಇರುವುದನ್ನು ಕಾಣಬಹುದಾಗಿದೆ.

೪.೪.೩ ಹೆಚ್ಚು ಶ್ರಮ, ಕಡಿಮೆ ಕೂಲಿ ಕೂಡುವುದು

ಅಸಂಘಟಿತ ವಲಯದಲ್ಲೆ ಅತಿ ಹೆಚ್ಚು ಶೋಷಣೆಗೊಳಗಾಗುವ ಮಹಿಳೆಯ ಗಾರ್ಮೆಂಟ್ಸ್ ವಲಯದಲ್ಲೆ ಅಂತನೇ ಕರೆಯಬಹುದು. ಏಕೆಂದರೆ ಗಾರ್ಮೆಂಟ್ಸ ವಲಯದ ಆಡಳಿತಶಾಹಿ ವರ್ಗವು ಮಹಿಳೆಯರನ್ನು ದೈಹಿಕವಾಗಿ, ಮಾನಸಿಕವಾಗಿ ದಿನನಿತ್ಯ ಶೋಷಣೆಗೊಳಪಡಿಸುವುದನ್ನು ಕಾಣಬಹುದಾಗಿದೆ. ಏಕೆಂದರೆ ಪ್ರೊಡಕ್ಷನ್ ಒತ್ತಡವನ್ನು ಮಹಿಳೆಯರ ಮೇಲೆ ಹೇರುವುದರ ಮೂಲಕ ಒಂದು ಕ್ಷಣನೂ ಬಿಡುವಿಲ್ಲದೆ ಹೆಚ್ಚು ಶ್ರಮ ಹಾಕಿಸಿ ದುಡಿಸಿಕೊಳ್ಳುತ್ತಾರೆ. ಕಾನೂನುನಿನ ಅವದಿ ಮೀರಿ ದುಡಿಸಿಕೊಂಡರು ಕೂಡುವ ಸಂಬಳ ಮಾತ್ರ ಕಡಿಮೆನೆ ಆಗಿರುತ್ತದೆ. ಆಡಳಿತಶಾಹಿ ವರ್ಗ ಎಷ್ಟೆ ಲಾಭ ಬಂದರೂ ಕೂಡ ಕಾರ್ಮಿಕರಿಗೆ ಯಾವ ಸೌಲಭ್ಯವನ್ನು ಕೊಡುವುದಾಗಲಿ, ಹೆಚ್ಚು, ವೇತನ ನೀಡುವುದಾಗಲಿ, ಅವದಿ ಮೀರಿ ದುಡಿಸಿಕೊಂಡರು ಕೊಡುವ ಸಂಬಳದಲ್ಲಿ ಕಡಿಮೆ ಮಾಡುತ್ತಾರೆ ಅಸಂಘಟಿತ ವಲಯದಲ್ಲಿ ಕೆಲಸ ಮಾಡುವ ಮಹಿಳೆಯರು ದಿನನಿತ್ಯ ತಮ್ಮ ಹಸುವನ್ನು ಚಿಲುವನ್ನು ತುಂಬಿಸಿಕೊಳ್ಳುವುದರಲ್ಲೇ ದಾರಿ ಹುಡುಕುವುದನ್ನು ಯೋಚಿಸುತ್ತಿರುತ್ತಾರೆ ವಿನಹ ಯಾವುದನ್ನು ಯೋಚಿಸುವ ಜ್ಞಾನ ಅರಿವು ಕೂಡ ಇರುವುದಿಲ್ಲ. ಅವರ ಸ್ಥಿತಿ ಬಡತನಕ್ಕಿಂತಲೂ ಕೆಳಮಟ್ಟದ್ದಾಗಿದ್ದು, ಮಾಲೀಕರುಎಷ್ಟೆ ಒತ್ತಡ ಹಾಕಿದರು, ಎಷ್ಟೆ ಕಿರುಕುಳ ಕೊಟ್ಟರು, ಎಷ್ಟೇ ಸಂಬಳ ನೀಡಿದರು ಅಸಹಾಯಕರಾಗಿ ದುಡಿಯುತ್ತಿದ್ದಾರೆ. ಅವರು ಪ್ಯಾಕ್ಟ್ರಿಗೆ ಬರುವಷ್ಟರಲ್ಲಿ ಸ್ವಲ್ಪ ಲೇಟಾಗಿ ಬಂದರೂ ಒಂದು ಗಂಟೆ, ಎರಡು ಗಂಟೆ ಅಂತ ಹೇಳಿ ಕಟ್ ಮಾಡುತ್ತಾರೆ. ಒಂದು ದಿನದಲ್ಲಿ ಹಾಕಿದರೂ ಸಂಬಳ ಕಟ್ ಮಾಡುತ್ತಾರೆ. ಇದರಿಂದ ಅನೇಕ ಸಮಸ್ಯೆಗಳನ್ನು ಅನುಭವಿಸಬೇಕಾಗುತ್ತದೆ. ಏಕೆಂದರೆ ಕೊಡುವುದೆ ಕಡಿಮೆ ಸಂಬಳ ಇಂತಹದರಲ್ಲಿ ಅದರಲ್ಲೆ ಸಂಬಳವನ್ನು ಕಟ್ ಮಾಡಿದರೆ, ಇಡಿ ತಿಂಗಳ ಪೂರ್ತಿ ಹಣವನ್ನು ಹೊಂದಿಸುವುದು, ತುಂಬಾ ಕಷ್ಟವಾಗುತ್ತದೆ. ಮಾಲೀಕರು ನಿರಿಕ್ಷಿಸಿದಷ್ಟು ಪ್ರೊಡಕ್ಷನ್ ಕೊಟ್ಟಾಗೂ ಕೂಡ ಸಂಬಳ ಕಡಿಮೆ. ಅವಧಿ ಮೀರಿ ದುಡಿಸಿಕೊಂಡರು ಸಂಬಳ ಮಾತ್ರ ಹೆಚ್ಚಿಗೆ ಕೊಡುವುದಿಲ್ಲ. ಮಾನ್ಯೆಜರಗಳು ಕೊಟ್ಟಷ್ಟೇ ಸಂಬಳ ತೆಗೆದುಕೊಳ್ಳಬೇಕು ವಿನಾಹ ಹೆಚ್ಚು ಸಂಬಳ ಕೇಳಿದರೆ ತಕ್ಷಣ ಗೇಟ್‌ಪಾಸ್ ಕೂಡಿಸುತ್ತಾರೆ ಆದರೆ ದಿನನಿತ್ಯ ವಿಪರಿತ ಬೆಲೆ ಏರುತ್ತಿರುವುದರಿಂದ ತರಕಾರಿ, ಅಕ್ಕಿ, ಎಣ್ಣೆ, ಬೇಳೆಕಾಳು ಹಾಲು ಗ್ಯಾಸ್, ಸಿಲಿಂಡರ್, ಸೀಮೆಎಣ್ಣೆ ಇನ್ನಿತರ ಎಲ್ಲದರ ಬೆಲೆಗಳು ಗಗನಕ್ಕೆ ಏರುತ್ತಿವೆ. ಪ್ರತಿದಿನ ಅಡುಗೆಗೆ ಉಪಯೋಗಿಸುವ ಕೊತ್ತಂಬರಿ ಸೊಪ್ಪು ಮೊದಲು ೫೦ ಪೈಸೆ, ಈಗ ಮೂರರಿಂದ ನಾಲ್ಕು ರೂಪಾಯಿ ಸಿಗುತ್ತಿಲ್ಲ ಎಲ್ಲದರ ಬೆಲೆಯೂ ಶೇ.೧೦೦ರಷ್ಟು ಏರಿಹೋಗಿದೆ.

ಇದರ ಮಧ್ಯ, ಮನೆ ಬಾಡಿಗೆ, ಮಕ್ಕಳ ಫೀಸ್, ಪುಸ್ತಕ, ಕರೆಂಟ್ ಬಿಲ್, ನೀರು, ಬಸ್ ಚಾರ್ಜ್, ಒಂದೇ ಎರಡೇ? ಕಾರ್ಮಿಕರು ಹಣವಿಲ್ಲದೆ ಒಂದು ದಿನವೂ ಮನೆಯಿಂದ ಹೊರಗೆ ಕಾಲಿಡಲು ಸಾಧ್ಯವಿಲ್ಲ. ಕಾರ್ಮಿಕರು ತೀರಾ ಸಾಧರಣ ಜೀವನ ನಡೆಸಲು ಬೇಕಾಗುವ ಎರಡು ಹೊತ್ತಿನ ಊಟವನ್ನು ಸರಿಯಾಗಿ ಹೊಂದಿಸಿಕೊಳ್ಳವುದು ಕಷ್ಟವಾಗುತ್ತದೆ. ಇನ್ನು ಉತ್ತಮ ದರ್ಜೆಯ

[illegible]

ಜೀವನ ಕನಸೇ ಸರಿ. ಇದಕ್ಕೆ ಯಾರು ಹೋಣೆಯಾಗುತ್ತಾರೆ, ಬಡವರು ಯಾರಲ್ಲಿ ದೂರಬೇಕು? ವಲಸೆ ಬಂದವರು ಪುನಃ ಹಳ್ಳಿಗೆ ಹೋಗಬೇಕೆಂದರೆ ಅಲ್ಲಿಗೆ ಹೋಗಿ ಏನ್ ಕೆಲಸಮಾಡೊಕೆ ಇಲ್ಲದೆ ಎರಡರ ನಡುವೆ ಸಂಕಷ್ಟ ಪರಿಸ್ಥಿಯಲ್ಲಿ ಸೆಣಸಾಡುತ್ತಿರುತ್ತಾರೆ. ಯಾವ ಸರ್ಕಾರ ಬಂದ್ರು ಕೂಡ ಬಡಜನರ ಪರಿಸ್ಥಿತಿ ಯಾವ ಮಟ್ಟಕ್ಕೆ ಮುಟ್ಟಿದೆ ಎಂಬುದನ್ನು ಗಮನಿಸುತ್ತಲೇ ಇಲ್ಲ. ಒಂದು ಕಡೆ ಶ್ರೀಮಂತರು ಬಂಡವಾಳಶಾಹಿಗಳು ಶ್ರೀಮಂತರಾಗುತ್ತಲೇ ಇರುತ್ತಾರೆ. ಇನ್ನೊಂದು ಕಡೆ ಬಡವರು ಬಡವರಾಗುತ್ತಲೇ ಇರುತ್ತಾರೆ. ಹೀಗಿದ್ದಾಗ ಹಸಿವಾದವರಿಗೆ ಗೊತ್ತು ಹಸುವಿನ ಬೆಲೆ ಕಷ್ಟ ಏನು ಅಂತ. ಕಷ್ಟ ನೋವು ಯಾರು ಕೇಳೋರೆ ಇಲ್ಲದಂಗಾಗ್ಯೆತಿ ಇಂತಹ ಅನೇಕ ಕಷ್ಟದ ಸಂದರ್ಭದಲ್ಲಿ ಮಹಿಳೆ ಜವಬ್ದಾರಿಯಿಂದ ತಾನು ಉಪವಾಸ ಇದ್ದು ಮಕ್ಕಳಿಗೆ ಗಂಡನಿಗೆ ಮನೆಯಲ್ಲಿ ಎಲ್ಲರಿಗೂ ಇರುವುದನ್ನು ಬಡಿಸಿ ಉಳಿದಿದ್ದನ್ನು ತಾನು ಉಣ್ಣುತ್ತಾಳೆ. ಫ್ಯಾಕ್ಟ್ರಿಯಲ್ಲಿ ಎಷ್ಟೇ ಕಷ್ಟ ಬಂದ್ರೂ ಕೂಡ ಮಾನಸಿಕವಾಗಿ ದೈಹಿಕವಾಗಿ ಎಷ್ಟೇ ನೋವನ್ನು ಅನುಭವಿಸಿದರೂ ಕೂಡ ಕೆಲಸ ಮಾತ್ರ ಬಿಡದೆ ಬೆಳಿಗ್ಗೆಯಿಂದ ರಾತ್ರಿತನಕನೂ ಗಾಣದೆತ್ತಿನಂತೆ ದುಡಿಯುತ್ತಲೇ ಇರುತ್ತಾಳೆ. ಕರ್ನಾಟಕದಲ್ಲಿ ೨೦೦೭-೦೮ನೇ ವರ್ಷದಲ್ಲಿ ಕಾರ್ಮಿಕರಿಗೆ ಕಾನೂನುಬದ್ದ ಕೂಲಿಯನ್ನು ಹೆಚ್ಚಿಸಲಾಗಿದೆ. ಅದು ಉತ್ತಮ ಕೌಶಲ್ಯವುಳ್ಳ ಕೆಲಸಗಾರರಿಗೆ ೨.೫೩ ಡಾಲರ್ ಮತ್ತು ಸಾಮಾನ್ಯ ಕೆಲಸಗಾರರಿಗೆ ೨.೩೫ ಡಾಲರ್ ಮತ್ತು ಕೆಲವೊಂದು ವಲಯಗಳಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ೨.೫ರಿಂದ ೨.೩ ಡಾಲರ್ ವಿಶೇಷ ಕೌಶಲ್ಯವುಳ್ಳವರಿಗೆ ೨.೪ ರಿಂದ ೨.೨೭ ಡಾಲರ್-ವಿಶೇಷ ಕೌಶಲ್ಯ ಇಲ್ಲದವರಿಗೆ ನೀಡುತ್ತಾರೆ. (ವಲಯ-೧ ಬೆಂಗಳೂರು, ವಲಯ-೨ ಬಳ್ಳಾರಿ) ಮಮತಾ ಎಂಬ ಗಾರ್ಮೆಂಟ್ಸ ಮಹಿಳೆಯನ್ನು ಸಂದರ್ಶಿಸಿದಾಗ ಅವರಿಗೆ ಒಂದು ತಿಂಗಳಿಗೆ ೩೩೦೦ ರೂ ವೇತನ ನೀಡುತ್ತಾರೆ. ಅದರಿಂದ ಅವರು ಕುಟುಂಬದ ಈ ತಿಂಗಳಿನ ಖರ್ಚು ಮನೆಬಾಡಿಗೆ ವೈದ್ಯಕೀಯ ಖರ್ಚು ಇನ್ನಿತರ ಸಾಮಾಜಿಕ ಚಟುವಟಿಕೆಯ ಖರ್ಚನ್ನು ನಿಭಾಯಿಸಬೇಕಾಗುತ್ತದೆ. ಇಂತಹದರಲ್ಲಿ ಹಬ್ಬದ ಆಚರಣೆಗಾಗಿ ಒಳ್ಳೆಯ ಊಟ, (ಸಿಹಿ, ತಿಂಡಿ-ತಿನಿಸು) ಮಾಡುವುದಾಗಲಿ, ಹೊಸಬಟ್ಟೆಗಳನ್ನು ತೆಗೆದುಕೊಳ್ಳುವುದಾಗಲಿ ಯಾವುದು ಸಾಧ್ಯವಿಲ್ಲ.

ಉದಾ: ತಾಯಿ ಮತ್ತು ಮಗಳು (ಮಮತಾ) ಒಂದೇ ಫ್ಯಾಕ್ಟ್ರಿಯಲ್ಲಿ ಕೆಲಸ ಮಾಡುವಲ್ಲಿ ಸಂದರ್ಶಿಸಿದಾಗ, ಇರೊದೆ ಒಬ್ಬ ಮೊಮ್ಮಗ ಹಬ್ಬ ಸಂದರ್ಭದಲ್ಲಿ ಒಂದು ವರ್ಷಕ್ಕೊಮ್ಮೆ ಸಾಲಮಾಡಿಯಾದರೂ ಹಬ್ಬದ ದಿನದಲ್ಲಿ ಹೊಸಬಟ್ಟೆಗಳನ್ನು (ನಾನ್ ವೆಜ್) ಮಾಂಸಾಹಾರವನ್ನು ಮಾಡುತ್ತೇವೆ ಎಂದು ಕೆಲವೊಬ್ಬ ಮಹಿಳೆಯರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಮಹಿಳೆ ಯಾರು ಒಂದು ಕಡೆಯ ಮನೆಯ ಒತ್ತಡದ ಚಿಂತೆಗೆ ಒಳಗಾದರೆ ಇನ್ನೊಂದು ಕಡೆ ಕೆಲಸದ ಒತ್ತಡ, ಬೈಯ್ಗುಳ ಮಾಡಲೇಬೇಕಾದ ಅನಿವಾರ್ಯತೆ, ಕರ್ನಾಟಕ ಸರ್ಕಾರ ಆರುವರ್ಷಗಳಿಂದಲೂ ಕನಿಷ್ಠ ಕೂಲಿ ಕಾಯ್ದೆಯನ್ನು ನವೀಕರಣ ಮಾಡಿಲ್ಲ. ಮೊದಲಿನ ಸ್ಥಿತಿಮಟ್ಟ ಹೊರತಾಗಿಲ್ಲ. ಆದರೆ ವಸ್ತುಗಳ ಬೆಲೆ, ದಿನಸಿಯ ಬೆಲೆ ಎಲ್ಲ ರೀತಿಯಿಂದಲೂ ಬೆಲೆಗಳೂ ಜಾಸ್ತಿಯಾಗಿವೆ.

[illegible]

[illegible]

[illegible]

ಇದರಿಂದ ಜೀವನ ಮಾಡುವುದು ತುಂಬಾ ತೊಂದರೆಯಾಗಿ ಅನೇಕ ಸಮಸ್ಯೆಗಳಿಂದ ಒತ್ತಡ, ಕಿರಿಕಿರಿಯಿಂದ ಖಿನ್ನತೆಗೆ ಒಳಗಾಗಿ ಹಲವಾರು ರೋಗಗಳಿಗೆ ರಕ್ತಹೀನತೆ, ನಿಶ್ಯಕ್ತಿ, ಟಿ.ಬಿ. ಇನ್ನಿತರ ಕಾಯಿಲೆಗಳಿಗೆ ಒಳಗಾಗುತ್ತಿದ್ದಾರೆ.

ಬೇಬಿಜಾನ್ ಎಂಬ ಮಹಿಳೆಯನ್ನು ಸಂದರ್ಶಿಸಿದಾಗ ಮಹಿಳೆಯರು, ಪುರುಷರು ಮಾಡಿದಷ್ಟು ಸಮಾನವಾಗಿ ಕೆಲಸ ಮಾಡಿದರೂ ಸಹ, ವೇತನವು ಇಬ್ಬರಲ್ಲಿ ತುಂಬಾ ವ್ಯತ್ಯಾಸವಾಗುತ್ತದೆ. ಪುರುಷ ಮಹಿಳೆ ಹತ್ತು ವರ್ಷಗಳಿಂದಲೂ ಇಲ್ಲಿ ಕೆಲಸ ಮಾಡಿದರೂ ಸಹ ಅವರ ವೇತನ-೪೦೦೦, ನಮ್ಮ ವೇತನ ೩೫೦೦ ಇದೆ ಎಂದು ಹೇಳುತ್ತಾಳೆ."

ಲಿಂಗದ ಆಧಾರದ ಮೇಲೆ ಒಂದೇ ರೀತಿಯ ಕೆಲಸಗಳಿಗೆ ಅಥವಾ ಕೆಲಸದ ಸ್ವರೂಪದ ಭಿನ್ನತೆಯನ್ನು ತೋರಿಸಿ ಒಬ್ಬರಿಗೆ ಹೆಚ್ಚು ಇನ್ನೊಬ್ಬರಿಗೆ ಕಡಿಮೆ ವೇತನ ನೀಡುವುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಇಂತಹ ಲಿಂಗಾಧಾರಿತವೇತನ ವೇತನತಾರತಮ್ಯ ಸ್ತ್ರೀಯರ ದುಡಿಮೆಯನ್ನು ಅಪಮೌಲ್ಯಗೊಳಿಸುತ್ತದೆ. ಅವರ ಸ್ಥಾನವನ್ನು ಕೆಳಮಟ್ಟದಲ್ಲಿರಿಸುತ್ತದೆ. ಸಮಾಜದಲ್ಲಿರುವ ಪಕ್ಷಪಾತ ಧೋರಣೆ ಅಂದರೆ ಮಹಿಳೆಯರು ಮಾಡುವ ಕೆಲಸ ಅನುತ್ಪಾದಕ ಅಥವಾ ಕಡಿಮೆ ಅನುತ್ಪಾದಕವಾಗಿದೆ. ಕೌಶಲ್ಯರಹಿತವಾಗಿದೆ, ಕಡಿಮೆ ಶ್ರಮದಾಯಕವಾಗಿದೆ ಎನ್ನುವ ಭಾವನೆಯು ವೇತನ ತಾರತಮ್ಯವನ್ನು ಬೆಳೆಸುತ್ತದೆ. ಮೊದಲಿನಿಂದಲೂ ವ್ಯವಸ್ಥೆಯಲ್ಲಿ ದುಡಿಮೆಯು ಪುರುಷವಾಚಿಯಾಗಿದೆ. ಈ ಪರಿಕಲ್ಪನೆಯನ್ನು ವ್ಯಾಖ್ಯಾನಿಸುವುದು ಪುರುಷರೇ ಆಗಿದ್ದು ಅವರು ಅದನ್ನು ತಮ್ಮದೇ ದೃಷ್ಟಿಕೋನದಿಂದ ಅರ್ಥೈಸುತ್ತಾರೆ. ಒಂದುಕಡೆ ದುಡಿಮೆಯ ವ್ಯಾಪ್ತಿಯನ್ನು ನಿಮಿತಗೊಳಿಸಿ ಮಹಿಳೆಯರನ್ನು ಅದರಿಂದ ಹೊರಗಿಡಲು ಪ್ರಯತ್ನಿಸುತ್ತಾರೆ. ಇನ್ನೊಂದು ಕಡೆ ವೇತನ ನಿಗದಿಪಡಿಸಲು ಆಧಾರವಾಗಿರುವ ಕೆಲಸದ ಸ್ವರೂಪ, ಉತ್ಪಾದಕತೆ ಅವಧಿ ಹಾಗೂ ಮಾನಸಿಕ ಶ್ರಮ ಮತ್ತು ದೈಹಿಕ ಶ್ರಮ ಹಾಗೂ ಕೌಶಲ್ಯಗಳನ್ನು ನಿರ್ಧರಿಸುವವರು ಅವರೇ ಆಗಿದ್ದು, ಅವುಗಳನ್ನು ಮುಂದಿಟ್ಟುಕೊಂಡು ಸ್ತ್ರೀಪುರುಷರ ನಡುವೆ ವೇತನ ತಾರತಮ್ಯವನ್ನು ತೋರುತ್ತಾರೆ.

ಉದಾ: ಬಳ್ಳಾರಿಯಲ್ಲಿ ಕ್ಷೇತ್ರಾಧ್ಯಯನದ ಸಂದರ್ಭದಲ್ಲಿ ಮಹಿಳಾ ಕಾರ್ಮಿಕರನ್ನು ಸಂದರ್ಶಿಸಿದಾಗ ಪುರುಷ ಮತ್ತು ಮಹಿಳಾ ಕಾರ್ಮಿಕರ ಸಂಬಳವನ್ನು ತುಲನೆ ಮಾಡಿದಾಗ, ಸಂಬಳ ಕೊಡುವಲ್ಲಿ ಅಜಗಜಾಂತರ ವ್ಯತ್ಯಾಸವನ್ನು ಕಾಣಬಹುದು. ಮಾಲೀಕರು ಮಹಿಳೆಯರಿಗೆ ವೇತನ ತಾರತಮ್ಯ ಮಾಡುವುದನ್ನು ಕಾಣಬಹುದಾಗಿದೆ. ಮಹಿಳೆಯರು ತಿಂಗಳಿಗೆ ರೂಪಾಯಿ ೧೦೦೦ ದಿಂದ ೧೫೦೦ರ ಒಳಗೆ ವೇತನ ಪಡೆಯುತ್ತಾರೆ. ಮಾಲೀಕರು ಮುಂಚಿತವಾಗಿ ಮಹಿಳೆಯರಿಗೆ ಕರಾರು ಮಾಡಿ ಕೆಲಸಕ್ಕೆ ಸೇರಿಸಿಕೊಳ್ಳುತ್ತಾರೆ. ಪುರುಷರಿಗೆ ತಿಂಗಳಿಗೆ ಮೂರು ಸಾವಿರದಿಂದ ನಾಲ್ಕು ಸಾವಿರ ರೂ. ತನಕ ಸಂಬಳ ಪಡೆಯುತ್ತಾರೆ. ವ್ಯವಸ್ಥೆಯು ಮಹಿಳೆ ಎನ್ನುವ ಕಾರಣಕ್ಕೆ ಜೈವಿಕತೆಯನ್ನು ಆಧರಿಸಿ, ಲಿಂಗಧಾರಿತ ಶ್ರಮ ವಿಭಜನೆಯನ್ನು ಆಧರಿಸಿ ಕಡಿಮೆ ಕೂಲಿ ಕೊಡುತ್ತಾರೆ.

೪.೪.೪ ಕೆಲಸದ ಅಭದ್ರತೆ ಮತ್ತು ಕೌಶಲ್ಯ ನಿರಾಕರಣೆ

ಸಮಸ್ಯೆ ಗಾರ್ಮೆಂಟ್ಸ್ ಮಹಿಳೆಯರಿಗಲ್ಲದೆ ಒಟ್ಟಾರೆ ಅಸಂಘಟಿತ ವಲಯದ ಪುರುಷರಿಗಿಂತ ಮಹಿಳೆಯರಿಗೆ ಕಾಡುವ ಸಮಸ್ಯೆ ಹೆಚ್ಚು ಎಂದೇ ಹೇಳಬಹುದು ಏಕೆಂದರೆ ಪುರುಷಶಾಹಿ ವ್ಯವಸ್ಥೆ ಮಹಿಳೆಯ ಜೈವಿಕತೆಯ ಕಾರಣವನ್ನು ಇಟ್ಟುಕೊಂಡು ಕೆಲವೊಂದು ಸಂಧರ್ಭದಲ್ಲಿ ಕೆಲಸಕ್ಕೆ ತೆಗೆದುಕೊಳ್ಳಲು ಮಹಿಳೆಯನ್ನು ಮೊದಲಿನಿಂದ ವ್ಯವಸ್ಥೆಯು ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಿದೆ ಅನ್ನಬಹುದು. ಈ ಕಾರಣವಾಗಿಯೇ ಪುರುಷಶಾಹಿ ವ್ಯವಸ್ಥೆ ಮತ್ತು ಬಂಡವಾಳಶಾಹಿ ವ್ಯವಸ್ಥೆ ಹೆಣ್ಣಿನ ಮೇಲೆ ನಿರ್ಮಾಣ ಅಧಿಕಾರವನ್ನು ವಹಿಸಿಕೊಂಡು, ಒಂದು ಕಡೆ ಅವಳಿಗೆ ಯಾವಗ ಕೆಲಸಕ್ಕೆ ಹೋಗಬೇಕು ಹೋಗಬಾರದೆಂದು ನಿರ್ಬಂಧ ಹಾಕಿದರೆ ಬಂಡವಾಳಶಾಹಿ ವ್ಯವಸ್ಥೆಯು, ಯಾವಾಗ ಬೇಕಾದರೂ ಕೆಲಸಕ್ಕೆ ತೆಗೆದುಕೊಳ್ಳುವುದು, ಬೇಡವಾದಾಗ ಯಾವ ಕಾರಣವನ್ನು ಕೊಡದೆ ಕೆಲಸದಿಂದ ತೆಗೆದುಹಾಕುವ ಅಧಿಕಾರ ಪಡೆದುಕೊಂಡಿರುತ್ತದೆ. ಮಹಿಳೆಯರ ಅಸಹಾಯಕತೆ, ಬಡತನದ ಅನಿವಾರ್ಯತೆ ಮತ್ತು ಅವಶ್ಯಕತೆಯನ್ನು ಬಳಸಿಕೊಂಡು ಅಮಾನವೀಯವಾಗಿ ವರ್ತಿಸುವುದನ್ನು ಕಾಣಬಹುದಾಗಿದೆ.

ಬಂಡಾವಳಶಾಹಿಯ ಫ್ಯಾಕ್ಟ್ರಿಯಲ್ಲಿ ಕೆಲಸ ಇರುವಾಗ ತುಂಬಾ ಸುಲಭವಾಗಿ ಫ್ಯಾಕ್ಟ್ರರಿಯ ಒಳಗಡೆ ಕರೆದುಕೊಳ್ಳುವಾಗ ಮಹಿಳೆಯರಿಗೆ ಯಾವುದೇ ಅಪಾಯಿಂಟ್‌ಮೆಂಟ್ ಆರ್ಡರ್ ಕೊಡುವುದಿಲ್ಲ. ಮಾಲೀಕನೇ ವಾಪಸ್ಸು ಕಳಿಸಿಬಿಡುತ್ತಾರೆ. ಕೆಲಸವಿಲ್ಲವೆಂದು ಮನೆಗೆ ಕಳಿಸಿಬಿಡುವ ಮಹಿಳಾ ಕಾರ್ಮಿಕರಿಗೆ ದುಡಿದ ಹಣವನ್ನು ಸಹ ನ್ಯಾಯವಾಗಿ ನೀಡಿರುವುದಿಲ್ಲ. ಫ್ಯಾಕ್ಟ್ರಿಗೂ ಮನೆಗೂ ಎಷ್ಟೇ ದೂರವಿದ್ದರೂ ಆ ವಾರ ಬಾ, ಈ ವಾರ ಬಾ, ಮಾಲೀಕರು ಊರಲ್ಲಿ ಇಲ್ಲ ಅಂತ ಅನೇಕ ಕಾರಣಗಳನ್ನು ಕೊಡುತ್ತಾರೆ. ದುಡಿದಿರುವ ಹಣವನ್ನು ಕೊಡಲೇಬೇಕೆಂಬ ಒತ್ತಡ ಹೇರಿದರೆ. ಗಲಾಟೆ ಮಾಡಿದರೆ ವಾಚ್‌ಮೆನ್ ಗೇಟಿನಿಂದ ಹೊರಗಡೆ ದಬ್ಬಿ ಗೇಟ್ ಹಾಕುತ್ತಾರೆ. ಮಹಿಳೆಯರ ಅಸಹಾಯಕತೆಯನ್ನು ಬಹು ಸುಲಭದಲ್ಲಿ ಅಗ್ಗವಾಗಿ ಬಳಸಿಕೊಳ್ಳುವುದನ್ನು ಕಾಣಬಹುದಾಗಿದೆ. ಪ್ರಸ್ತುತ ಸಂಶೋಧನಾ ಕ್ಷೇತ್ರಧ್ಯಯನದ ಸಂಧರ್ಭದಲ್ಲಿ ಹಲವು ಮಹಿಳೆಯರನ್ನು ಸಂದರ್ಶಿಸಿದಾಗ ಅಲ್ಲಿ ಕಂಡುಬಂದದ್ದು, ಮಹಿಳೆಯರು ಹಲವಾರು ಸಮಸ್ಯೆಗಳನ್ನು ಎದುರಿಸುವಲ್ಲಿ ಕೆಲಸದ ಅಭದ್ರತೆಯೂ ಒಂದು. ಈ ಸಮಸ್ಯೆಯಿಂದ ಇದ್ದಕ್ಕಿದ್ದಂತೆ ಕೆಲಸ ಕಳೆದುಕೊಂಡಾಗ ಮನೆಯ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಾಗದೆ ಒಂದು ಕ್ಷಣ ತಮ್ಮ ಜೀವವಾದರೂ ಯಾಕಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಶಾಂತ ಮತ್ತು ಜಯ ಚಾಮರಾಜಪೇಟೆಯಿಂದ ಬೆಂಗಳೂರಿಗೆ ಬರುವಷ್ಟರಲ್ಲಿ ಒಂದು ಗಂಟೆ ಪ್ರಯಾಣ. ಅಲ್ಲಿಂದ ಒಂದು ಫ್ಯಾಕ್ಟ್ರರಿಯ ವ್ಯಾನಿನಲ್ಲಿ ಹೋಗಬೇಕು. ಅದು ಇಪ್ಪತ್ತು ನಿಮಿಷದ ಹಾದಿ. ಬೆಳಗ್ಗೆ ಮನೆ ಬಿಡುವುದು ೭ ಗಂಟೆ ಫ್ಯಾಕ್ಟ್ರರಿಯ ಒಳಗಡೆ ಹೋಗುವುದು. ೯ ಗಂಟೆಗೆ ಮತ್ತೆ ಸಂಜೆ ೭ಗಂಟೆಯ ಟ್ರೈನಿಗೆ ಮನೆಗೆ. ವಾಪಸ್ಸು ಮನೆ ಸೇರುವುದು ರಾತ್ರಿ ೮ ಗಂಟೆಗೆ. ಇವರೀರ್ವರೂ ಕೆಲಸಮಾಡವುದು ಗಾರ್ಮೆಂಟ್ಸ್‌ನಲ್ಲಿ ಸಂಬಳ ೧೫೦೦ರೂಗಳು ಯಾವಾಗ ಕೆಲಸಕ್ಕೆ ಹೋಗುವುದಿಲ್ಲವೋ

[illegible]

[illegible]

[illegible]

[illegible]

ಆಗ ಸಂಬಳವಿಲ್ಲ. ಪೇಮೆಂಟ್ ತಿಂಗಳ ಮೊದಲ ವಾರ ಸಿಗಬೇಕು. ಆದರೆ ಸಂಬಳವನ್ನು ಸರಿಯಾದ ಸಮಯಕ್ಕೆ ಕೊಡುವುದಿಲ್ಲ. ಕೇಳೋದೆ ಕಷ್ಟ. ಏಕೆಂದರೆ ಏನಾದ್ರು ಕೇಳಿದ್ರೆ, ಮಾತಾಡಿದ್ರೆ ಕೆಲಸ ಕಳೆದುಕೊಳ್ಳುವುದು ಗ್ಯಾರಂಟಿ.

ಜಾಗತೀಕರಣ, ಉದಾರೀಕರಣ ಹೆಚ್ಚಾದ ಹಾಗೆ ಬೆಂಗಳೂರು, ಬಳ್ಳಾರಿ ಇನ್ನಿತರ ಹಲವು ಪ್ರದೇಶಗಳಲ್ಲಿ ಗಾರ್ಮೆಂಟ್ಸ್ ಫ್ಯಾಕ್ಟರಿಗಳು ಪ್ರಾರಂಭವಾಗುತ್ತಿವೆ. ಆದರೆ ಬೆಂಗಳೂರು ಸುತ್ತಮುತ್ತ ಪ್ರದೇಶದಲ್ಲಿ ಹೆಚ್ಚುತ್ತಿರುವ ವ್ಯಕ್ತಿಯನ್ನು ಪರಿಗಣಿಸಿದಾಗ, ಎಸ್.ಎಸ್.ಎಲ್.ಸಿ ಅಥವಾ ಪಿ,ಯು.ಸಿ ಮಾಡಿ ಇದ್ದಕ್ಕಿದ್ದ ಹಾಗೆ ಹೇಗಪ್ಪ ಮನೆಯಲ್ಲಿ ಇರುವುದು ಎನ್ನುವ ಹಲವಾರು ಮಹಿಳೆಯರಿಗೆ ಇಂತಹ ವ್ಯಕ್ತಿಗಳಲ್ಲಿ ದುಡಿಯುವುದು ಸರ್ವೇಸಾಮಾನ್ಯವಾಗಿದೆ. ಬಡತನದ ಬವಣೆಗೆ ಸಿಕ್ಕಿ ಹಲವಾರು ಮಹಿಳೆಯರು ಗಂಡ ಅತ್ತೆ ಸಂಸಾರದ ಬವಣೆಯಲ್ಲಿ ನೋವು ತಿಂದ ಅನೇಕಾನೇಕ ಹೆಂಗಸರು ಇಂತಹ ಫ್ಯಾಕ್ಟ್ರಿಯಲ್ಲಿ ತಮ್ಮ ಅದೃಷ್ಟವೆಂಬಂತೆ ಕೆಲಸಕ್ಕೆ ಸೇರಿಕೊಂಡು ದಿನವಿಡಿ ದುಡಿದರೂ ಹದಿನೈದು ನೂರರಿಂದ ಎರಡು ಸಾವಿರದವರೆಗೆ ಮಾತ್ರ.

ಫ್ಯಾಕ್ಟ್ರಿಯ ಮಾಲೀಕರು ತಮ್ಮ ಕೆಲಸದ ಅವಶ್ಯಕತೆ ಬಿದ್ದಾಗ ಗೇಟ್ ಹೊರಗಡೆ ನಿಂತರೆ ಸಾಕು ಬಹುಬೇಗ, ಸುಲಭವಾಗಿ ಕೆಲಸಕ್ಕೆ ಸೇರಿಸಿಕೊಂಡು ಬಿಡುತ್ತಾರೆ. ಶಾರದ ಎಂಬುವರು ನಾಲ್ಕೈದು ವರ್ಷಗಳಿಂದ ಫ್ಯಾಕ್ಟ್ರಿಯಲ್ಲಿ ಕೆಲಸ ಮಾಡಿಕೊಂಡಿದ್ದವರು. ಏಳನೆ ವರ್ಷದಲ್ಲಿ ಅವರಿಗೆ ಕೆಲಸವಿಲ್ಲ. ಹಾಗೆಂದು ಆಕೆಯನ್ನು ಮನೆಗೆ ವಾಪಸ್ಸು ಕಳಿಸಲಾಗಲಿಲ್ಲ. ಏಕೆ ಕೆಲಸದಿಂದ ತೆಗೆದು ಹಾಕಿದರು ಎಂಬುದು ಕಾರಣವೇ ಗೊತ್ತಾಗದಿರುವಷ್ಟು ಅಮಾಯಕರು. ಹೀಗಿರುವಾಗ ಇತ್ತೀಚೆಗೆ ಸೇರಿರುವ ಮಹಿಳಾ ಕಾರ್ಮಿಕರ ಸಮಸ್ಯೆಗಳ ಸ್ಥಿತಿ ಚಿಂತಿಸುವ ಅವಶ್ಯಕತೆ ಇದೆ ಎಂದೇ ಹೇಳಬಹುದು. ಮಾಲೀಕರು ಕಾರ್ಮಿಕರ ಸರ್ವೀಯನ್ನು ಬ್ರೇಕು ಮಾಡುವುದಕ್ಕೋಸ್ಕರ ಮತ್ತೆ ಸೀಜನ್ ಇದ್ದ ಸಂದರ್ಭದಲ್ಲಿ ಕೆಲಸಕ್ಕೆ ಮತ್ತೆ ಸೇರಿಸಿಕೊಳ್ಳುತ್ತಾರೆ. ಶಾರದಮ್ಮಳ ಅಷ್ಟು ವರ್ಷ ಸರ್ವೀಸ್ ಕೂಡ ಪರಿಗಣಿಸಲಾಗದೆ ಕೆಲಸದಲ್ಲಿ ಇರುವಾಗ ಸಂಬಳವನ್ನು ಪಿ.ಎಫ್., ಐ.ಎಸ್.ಐ ಇನ್ನಿತರ ಸೌಲಭ್ಯಗಳನ್ನು ಕೂಡ ಕೊಡದೇ ಇರುವ ವ್ಯವಸ್ಥೆಯನ್ನು ಸೃಷ್ಟಿಸುತ್ತದೆ. ಶಾರದಮ್ಮ ಮತ್ತು ಮಗಳು ಗಾರ್ಮೆಂಟ್ಸ್‌ಗೆ ಹೋಗುತ್ತಾ ಇದ್ದವಳಿಗೂ ಇದೇ ಪರಿಸ್ಥಿತಿ. ಇಬ್ಬರಿಗೂ ಕೆಲಸವಿಲ್ಲ. ಹೀಗಿದ್ದಾಗ ಮುಂದಿನ ದಿನಮಾನಗಳನ್ನು ಅವರು ನೂಕುವುದು ಹೇಗೆ? ಅಭದ್ರತೆ ಎಲ್ಲಾ ಫ್ಯಾಕ್ಟರಿಗಳಲ್ಲಿ ಎದ್ದು ಕಾಣುವ ಮುಖ್ಯ ಅಂಶ. ಶಾರದಮ್ಮನ ಹಾಗೆ ಸುಮಾರು ವರ್ಷ ಕೆಲಸ ಮಾಡಿ ಬರಿಗೈಯಲ್ಲಿ ಹಿಂತಿರುಗಿರುವರು ಈ ಕುರಿತು ಕಾರ್ಮಿಕರು ಉಸಿರೆತ್ತುವ ಹಾಗೆಯೇ ಇಲ್ಲ.

ರತ್ನಮ್ಮ ಎಂಬ ಗಾರ್ಮೆಂಟ್ಸ್ ಮಹಿಳೆಯನ್ನು ಪ್ರಶ್ನಿಸಿದಾಗ, ಗಂಡನ ಫ್ಯಾಕ್ಟ್ರರಿಯಲ್ಲಿ ಕೆಲಸಮಾಡುತ್ತಾನೆ. ನಾನು ಕೂಡ ಪೀಣ್ಯದಲ್ಲಿ ಒಂದು ಗಾರ್ಮೆಂಟ್ಸ್‌ಗೆ ಹೋಗುತ್ತೇನೆ. ಬೆಳಿಗ್ಗೆ ಎಂಟು ಗಂಟೆಗೆ ಮನೆಬಿಟ್ಟು ಸುಮಾರು ಇಪ್ಪತ್ತು ನಿಮಿಷ ನಡೆದರೆ ಒಂದು ಫ್ಯಾಕ್ಟ್ರಿ ವ್ಯಾನ್ ಬರುತ್ತದೆ.

ಕಾರ್ಮಿಕರು ನಡೆದುಕೊಂಡು ಬಂದರೂ ವ್ಯಾನ್ ಒಳಗಡೆ ಗೇಟಿಗೆ ಕಳಿಸಿ ಅಲ್ಲಿ ಒಂದು ಸ್ಥಳದಲ್ಲಿ ಮಹಿಳಾ ಕಾರ್ಮಿಕರು ಹತ್ತಲು ಅನುಕೂಲ ಮಾಡಿಕೊಡಬಹುದಲ್ಲ ಎಂಬುದು ರತ್ನಮ್ಮಳ ಅಭಿಪ್ರಾಯ ಆದರೆ ಕೇಳಲು ಎಲ್ಲರಿಗೂ ಭಯ ಒಬ್ಬರು ಅಥವಾ ಇಬ್ಬರು ಕೇಳೂಕೆ ಅಗೋಲ್ಲ ಎಲ್ಲರೂ ಸೇರಿ ಹೋದರೆ ಸಂಘಟಿತರಾಗುತ್ತಾರೆ. ಯೂನಿಯನ್ ಮಾಡ್ತಾರೆ ಎನ್ನುವ ಭಯ ಹಾಗಂತ ಸುಮ್ಮನೆ ಇರೋಕೆ ಆಗೋಲ್ಲ ಕೇಳಿದ್ರೆ ಕೆಲಸ ಕಳೆದುಕೊಳ್ಳುವ ಭಯ.

ಇಂತಹ ಭಯ ಆತಂಕಗಳಲ್ಲಿಯೇ ಗಾರ್ಮೆಂಟ್ಸ್ ಮಹಿಳಾ ಸಮುದಾಯವೇ ಬದುಕುತ್ತಿರುವುದನ್ನು ಕಾಣಬಹುದು. ಆಡಳಿತ ಮಂಡಳಿಯನ್ನು ನಿರೀಕ್ಷೆ ಮಾಡುತ್ತಿರುತ್ತದೆ. ಯಾವುದೇ ರೀತಿಯ ತೊಂದರೆಗಳನ್ನು ಬಾಯಿಬಿಟ್ಟು ಹೇಳಬಾರದು. ಹಾಗೆ ಏನಾದರೂ ಬಾಯಿಬಿಟ್ಟು ಹೇಳಿದಲ್ಲಿ ಮನೆಗೆ ವಾಪಸ್ಸು ಹೋಗುವುದು ಗ್ಯಾರಂಟಿ. ಹೀಗೆ ಅಸಂಘಟಿತರಾಗಿರುವುದು ಇಂತಹ ಫ್ಯಾಕ್ಟ್ರಿಗಳ ಮುಖ್ಯ ಅಂಶವಾಗಿರುತ್ತದೆ. ಯಾವುದೇ ಲೇಬರ್ ಯೂನಿಯನ್‌ಗಳ ಜೊತೆ ಸಂಪರ್ಕವಿರದ ಇಂತಹ ಫ್ಯಾಕ್ಟ್ರರಿಗಳಲ್ಲಿ ಯಜಮಾನರ ಲಾಭಕ್ಕೆ ಮಾತ್ರ ಪೂರಕವಾಗಿರುವ ಈ ಮಹಿಳೆಯರು ಆಗಿಂದಾಗ್ಗೆ ಕೆಲಸ ಕಳೆದುಕೊಳ್ಳುತ್ತಾರೆ. ಹತ್ತು-ಹಲವಾರು ಫ್ಯಾಕ್ಟ್ರಿಗಳ ಸುತ್ತಾ ಒಡಾಡುತ್ತಿರುತ್ತಾರೆ. ಹೊಸೂರು ರೋಡ್ ಬೆಂಗಳೂರಿನಲ್ಲಿ ಕೆಲಸ ಮಾಡುವ ಬಾನು ಎಂಬುವವರು ಹೇಳುವಂತೆ ನಾನು ಒಂದು ದಿನ ರಜೆ ಬೇಕು ಅಂತ ಕೇಳಿ ತಗೆದುಕೊಂಡರೂ ಆ ದಿನದ ನನ್ನ ಸಂಬಳವನ್ನು ಏಕೆ ಕಟ್ ಮಾಡಿದಿರಿ ಎಂದು ಸೂಪರ್‌ವೈಸರಾಗಲಿ, ಮಾಸ್ಟರ್‌ಗಳಾಗಲಿ ಯಾರನ್ನೂ ಕೇಳುವ ಹಾಗಿಲ್ಲ. ನಮಗೆ ಯಾವುದೇ ಕೆಲಸದ ಭದ್ರತೆ ಇಲ್ಲ (job security) ಮಾಸ್ಟರ ಹೇಳಿದ ಹಾಗೆ ಅವರ ಅಧೀನದಲ್ಲಿ ಕೆಲಸಮಾಡುಬೇಕು. ಅಷ್ಟೇ ಅಲ್ಲ ಒಂದು ಸಣ್ಣ ತಪ್ಪಾದರೂ ಸಹ ಮತ್ತು ಅವರು ಹೇಳಿದಷ್ಟು ಪ್ರೊಡಕ್ಷನ್ ಟಾರ್ಗೆಟನ್ನು (ಉತ್ಪಾದನೆಯನ್ನು) ಕೊಡದಿದ್ದರೆ ನಮ್ಮನ್ನು ಕೆಲಸದಿಂದ ಬಿಟ್ಟುಹೋಗಿ ಎಂದು ಹೇಳುತ್ತಾರೆ. ಇದರಲ್ಲಿ ಯಾವ ಮುಲಾಜು ಇಲ್ಲ. ಆದರೆ ಕೆಲಸ ಕಳೆದುಕೊಂಡರೆ ಮಹಿಳೆಯರಿಗೆ ನಷ್ಟವಾಗುತ್ತದೆ ವಿನಃ ಮಾಲೀಕರಿಗಲ್ಲ ಏಕೆಂದರೆ ದಿನನಿತ್ಯ ಅಗ್ಗವಾಗಿ ಸಾಗುತ್ತಿರುವ ಮಹಿಳಾ ಕಾರ್ಮಿಕರು ಮಾಲೀಕರಿಗೆ ಸಿಗುತ್ತಿರುವ ಕಾರಣ ಮಹಿಳೆಯರಿಗೆ ಸಿಕ್ಕಿರುವ ಕೆಲಸವನ್ನು, ಸಿಕ್ಕಷ್ಟ ಸಂಬಳವನ್ನು ತೆಗೆದುಕೊಂಡು ಫ್ಯಾಕ್ಟ್ರಿಯಿಂದ ಎಷ್ಟೇ ಸಮಸ್ಯೆ ಒತ್ತಡಗಳು ಬಂದರೂ ಕೂಡ ಅಸಹಾಯಕರಾಗಿ ಒಪ್ಪಿಕೊಂಡು ಕೆಲಸಮಾಡುತ್ತಿರುವುದನ್ನು ಕ್ಷೇತ್ರಧ್ಯಯನದ ಸಂಧರ್ಭದಲ್ಲಿ ತಿಳಿದುಕೊಳ್ಳಬಹುದಾಗಿದೆ.

ಫ್ಯಾಕ್ಟ್ರಿಯಲ್ಲಿ ಕೆಲಸಮಾಡುವ ಸುಮಾರು ಏಳೆಂಟು ಮಹಿಳಾ ಕಾರ್ಮಿಕರನ್ನು ಇದ್ದಕ್ಕಿದ್ದಂತೆ ಮಾಲೀಕರು ಕೆಲಸದಿಂದ ತೆಗೆದುಹಾಕಿದರು. ಏಕೆಂದರೆ ಅವರೆಲ್ಲರೂ ಸೂಜಿದಾರ ಪತ್ರಿಕೆಯ ಸದಸ್ಯರಾಗಿದ್ದರು. ಇದರಿಂದ ಅವರೆಲ್ಲರೂ ಮಾಲೀಕರ ವಿರುದ್ಧ ಚಳುವಳಿ (strike) ಮಾಡಿ ಸೂಜಿದಾರ ಪತ್ರಿಕೆಯವರ ಸಹಕಾರದಿಂದ ಮತ್ತೆ ಕೆಲಸಕ್ಕೆ ಸೇರಿಸಿಕೊಂಡರು. ಆದರೂ ವ್ಯವಸ್ಥೆಯಲ್ಲಿ ಮಾತ್ರ ಯಾವ ಬದಲಾವಣೆಯೂ ಅಗಿಲ್ಲ. ಮಾಲೀಕರುಪ್ರೊಡಕ್ಷನ್ ಟಾರ್ಗೇಟನ್ನು ಕೊಡದಿದ್ದರೆ ಎಲ್ಲರ ಮುಂದೆನೂ ವಯಸ್ಸಿಗೂ ಬೆಲೆಕೊಡದೆ ಬಾಯಿಗೆ ಸಿಕ್ಕ ಹಾಗೆ ಬೈಯುತ್ತಾರೆ. ಹೆಚ್ಚಿನ ಕೆಲಸ ಕೊಟ್ಟು ಅವಧಿ ಮೀರಿ ದುಡಿಸಿಕೊಳ್ಳುತ್ತಾರೆ.

[illegible]

[illegible]

[illegible]

[illegible]

ಅಲ್ಲದೆ ಬಂಡವಾಳಶಾಹಿಗಳು ಕಾರ್ಮಿಕರ ಶ್ರಮವನ್ನು ಕೇವಲ ಲಾಭದ ಉದ್ದೇಶವಾಗಿ ಎರಡು ರೀತಿಯಾದ ಒಳತಂತ್ರವನ್ನು ಬಳಸುತ್ತಾರೆ. ಬಳ್ಳಾರಿಯಲ್ಲಿ ಮಹಿಳೆಯರಿಗೆ ಕೆಲವೊಂದಷ್ಟೇ ಪೀಸುಗಳನ್ನು ಮನೆಗೆ ಕೊಟ್ಟು ಹೊಲಿಯಲು ಹೇಳುತ್ತಾರೆ. ಇನ್ನೊಂದು ಕಡೆ ಫ್ಯಾಕ್ಟ್ರಿಯಲ್ಲಿ ಮಹಿಳೆಯರು ಇಂತಹದ್ದೆ ಕೆಲಸ ಮಾಡುತ್ತಾರೆ. ಪುರುಷರು ಹೊಲಿಯುವುದು, ಕತ್ತರಿಸುವುದು. ಮಹಿಳೆಯರು ರನ್ನಿಂಗ್ ಮಾಡುವುದು, ಫ್ಯಾಕ್ ಮಾಡುವುದು, ಬಾಲ್ಟಕ್ ಹೊಡಿಯುವುದು, ಬಟನ್ ಹಚ್ಚವುದು ಇನ್ನಿತರ ಕೆಲಸಗಳನ್ನು ಮಹಿಳೆಯರೇ ಮಾಡುತ್ತಾರೆ ಎಂಬ ಅಭಿಪ್ರಾಯವನ್ನು ಮಂಡಿಸುತ್ತಾರೆ. ಮಧ್ಯಮ ಮತ್ತು ಕೆಳವರ್ಗದ ಬಡ ಕುಟುಂಬಗಳಲ್ಲಿ ಮಹಿಳೆಯರು ದುಡಿಯುವುದು ಅನಿವಾರ್ಯವಾಗಿದೆ. ಆದರೆ ಅವರಿಗೆ ಪೂರ್ಣ ಪ್ರಮಾಣದ ದುಡಿಮೆಗಾರರಾಗಲು ಅವಕಾಶವಿಲ್ಲ. ಈ ಬಗೆಯ ನಿರ್ಬಂಧಗಳನ್ನು ಮೀರಲು ಮಹಿಳೆಯರು ಅನೇಕ ಬಗೆಯ ದಾರಿಗಳನ್ನು ಹುಡುಕುತ್ತಿರುತ್ತಾರೆ. ಆದರೆ ಉದ್ದಿಮೆದಾರರು ಮಹಿಳೆಯರು ಎಂತಹ ನಿರ್ಬಂಧನದ ಸ್ಥಿತಿಯಲ್ಲಿ ದುಡಿಮೆ ಮಾಡುತ್ತಿದ್ದಾರೆ ಎಂಬುದನ್ನು ಮೂಲಕ ತಿಳಿದುಕೊಂಡಿರುತ್ತಾರೆ. ಮಹಿಳೆಯರ ಅಸಹಾಯಕತೆಯನ್ನು ಉದ್ದಿಮೆಗಾರರು, ಮಧ್ಯವರ್ತಿಗಳು, ಗುತ್ತಿಗೆದಾರರು ದುರುಪಯೋಗಪಡಿಸಿಕೊಂಡು ಶೋಷಿಸುತ್ತಿದ್ದಾರೆ. ಉದ್ಯಮಿದಾರರು ಅಲ್ಪಸ್ವಲ್ಪ ಹಣವನ್ನು ಮುಂಗಡವಾಗಿ ನೀಡಿ ಬಡ ಮಹಿಳಾ ದುಡಿಮೆಗಾರರ ದುಡಿಮೆಯನ್ನು ಬಹಳ ಕಡಿಮೆ ಕೂಲಿಗೆ ಪಡೆದುಕೊಳ್ಳವ ಸಾಧ್ಯತೆ ಇದೆ. ಇದನ್ನು ಒಂದು ಬಗೆಯ ಜೀತಪದ್ಧತಿಯೆಂತಲೇ ಕರೆಯಬಹುದು. ಬೆಂಗಳೂರಿನಲ್ಲಿ ಮಾಲೀಕರು ಮಹಿಳೆಯರಿಗೆ ಒಂದು ರೀತಿಯ ಕೆಲಸವನ್ನು ಹಂಚುವುದಿಲ್ಲ; ಫ್ಯಾಕೆಟ್ ಹಚ್ಚುವುದು, ಟ್ರಿಮಿಂಗ್, ಬಟನ್ ಹಚ್ಚುವುದು, ಬಣ್ಣ ಹಾಕುವುದು ಇನ್ನಿತರ ಕೆಲಸಗಳನ್ನು ಹಂಚುವುದು ಯಾರಿಗೂ ಸಂಪೂರ್ಣವಾಗಿ ಒಂದು ಪ್ಯಾಂಟ್, ಶರ್ಟ್ ಹೊಲಿಯುವುದಕ್ಕೆ ಬರದೆ ಇರುವ ವ್ಯವಸ್ಥಿತ ಸ್ಥಿತಿಯನ್ನು ಸೃಷ್ಟಿಸುತ್ತದೆ. ಬಂಡವಾಳಶಾಹಿ ವ್ಯವಸ್ಥೆ ಪುರುಷಶಾಹಿಯು ರೂಪಿಸಿರುವ ಸಿದ್ಧಾಂತಿಕ ಸೆರೆಮನೆಯನ್ನು ಮುರಿದು ದುಡಿಮೆಯನ್ನು ವೃತ್ತಿಯನ್ನಾಗಿ ಮಹಿಳೆಯರು ಕೈಗೊಂಡರೆ ಅವರು ದುಡಿಮೆ ಸ್ಥಳದಲ್ಲಿ ಅನೇಕ ಬಗೆಯ ಅನ್ಯಾಯಗಳನ್ನು ಎದುರಿಸಬೇಕಾಗುತ್ತದೆ. ಸಂಚಾರಿ ಸಂಬಂಧಿ ಸಮಸ್ಯೆಗಳಿರುತ್ತವೆ. ಅವರು ನೆಲೆಸಿರುವ ಸ್ಥಳದಲ್ಲೇ ಮಹಿಳೆಯರಿಗೆ ದುಡಿಮೆ ಅವಕಾಶಗಳು ದೊರೆಯಬೇಕು. ಏಕೆಂದರೆ ಅವರ ಬದುಕನ್ನು ಕುಟುಂಬದ ಜೊತೆ ಬೆಸೆದುಕೊಂಡುಬಿಟ್ಟಿರುತ್ತಾರೆ. ಇದರಿಂದಾಗಿ ಅವರು ನೆಲೆಸಿರುವ ಸ್ಥಳದಲ್ಲಿ ದೊರೆತ ದುಡಿಮೆಯನ್ನು ಒಪ್ಪಿಕೊಳ್ಳಬೇಕು. ಇಲ್ಲಿ ಅವರಿಗೆ ಆಯ್ಕೆಗೆ ಅವಕಾಶಗಳಿಲ್ಲ, ಸಹಜವಾಗಿ ಅವರ ಸಂಪಾದನೆ ಕಡಿಮೆ ಇರುತ್ತದೆ.

೪.೫ ಸಮಸ್ಯೆಗಳು

೪.೫.೧ ಪ್ರೊಡಕ್ಷನ್ ಒತ್ತಡ

ಇವತ್ತಿನ ದಿನದಲ್ಲಿ ಅತಿ ಹೆಚ್ಚು ಮಹಿಳೆಯರಿಗೆ ಕಾಡುತ್ತಿರುವ ಪೆಡಂಭೂತ ಎಷ್ಟರ ಮಟ್ಟಿಗೆ ಇದೆ ಅಂದರೆ ಮಹಿಳೆ ಒಂದು ಕ್ಷಣನೂ ಆಕಡೆ ಈಕಡೆ ತಿರುಗಿಯೂ ಕೂಡ ನೋಡುವಂತಿಲ್ಲ.

ಊಟಮಾಡುವುದಕ್ಕೆ ಬಿಡುವುದಿಲ್ಲ. ಕಾನೂನು ಪ್ರಕಾರ ಕೆಲವೊಂದು ವಿಶೇಷ ಸೌಲಭ್ಯಗಳನ್ನು ಒದಗಿಸಿದರೂ ಕೂಡಾ ವಾಸ್ತವದಲ್ಲಿ ಅವು ಯಾವು ಉಪಯೋವಾಗದೆ ಹಾಗೆ ಉಳಿದಿವೆ. ಕಾರ್ಮಿಕರನ್ನು ಸ್ವಲ್ಪ ಟೈಮ್ ವೇಸ್ಟ್ ಮಾಡದ ಹಾಗೆ ನೋಡಿಕೊಳ್ಳುತ್ತಿರುತ್ತದೆ. ಅದಕ್ಕಾಗಿ ಶೌಚಾಲಯ ವ್ಯವಸ್ಥೆಯಾಗಲಿ, ಕುಡಿಯಲಿಕ್ಕೆ ನೀರಿನ ವ್ಯವಸ್ಥೆ ಕೂಡ ಮಾಡಿರುವುದಿಲ್ಲ. ಯಾವ ಕಾರ್ಖಾನೆಯಿರಲೀ, ಯಾವ ಕೆಲಸವಿರಲಿ ದಿನಕ್ಕೆ ಇಷ್ಟು ಪ್ರೊಡಕ್ಷನ್ ಕೊಡಬೇಕು ಎಂಬ ಲೆಕ್ಕಚಾರ ಯಾರೋ ಒಬ್ಬರು (ಯಾವ ಫ್ಯಾಕ್ಟ್ರಿ ಮಾಲೀಕರು ಮೊದಲಿನಿಂದಲೂ) ನಿಗದಿಪಡಿಸಿದ ಈ ಟಾರ್ಗೆಟ್‌ನ ಭಾರವನ್ನು ಎಲ್ಲರೂ ಹೊರಬೇಕು. ಯಾವ ಕಡೆನೂ ಕತ್ತು ತಿರುಗಿಸದೆ ಸರಿಯಾಗಿ ಉಸಿರಾಡಲು ಸಮಯವಿರದೆ, ಅರ್ಧಗಂಟೆಯ ಊಟದ ಸಮಯದಲ್ಲಿ ಐದು ನಿಮಿಷದಲ್ಲೇ ಬೇಗ ಬೇಗ ತಿಂದು ಕೆಲಸ ಮಾಡುತ್ತಾರೆ. ಆದರೂ ಮುಗಿಯದ ಪ್ರೊಡಕ್ಷನ್ ಟಾರ್ಗೆಟ್ ಯಾವ ಸೀಮೆಯದ್ದು.? ಯಾರು ಇಷ್ಟೇ ಉತ್ಪಾದನೆ ಮಾಡಬೇಕೆಂದು ನಿಗದಿಪಡಿಸಿದರು. ಉದಾಹರಣೆಗೆ ಒಂದು ಗಂಟೆಗೆ ೧೬೦ ಪೀಸ್ ರಡಿಯಾಗಬೇಕು ಎಂದು ಹೇಳಿದರೆ, ಅಷ್ಟು ಆಗುವ ತನಕ ಬಿಡುವುದೇ ಇಲ್ಲ. ಇದರಿಂದ ಪ್ರತಿಕ್ಷಣ ಒಂದೇ ಸಮನೆ ದುಡಿಯುತ್ತಾರೆ. ಹಾಗೆ ದುಡಿದರೂ ಎಂಟು ಗಂಟೆಯಲ್ಲಿ ಮುಗಿಯದೆ ಮತ್ತು ಒಂದು ಗಂಟೆ ಹೆಚ್ಚು ಕೆಲಸ ಮಾಡಿದರೂ ಮುಗಿಯುವುದಿಲ್ಲ. ಆದರೆ ಮಾಸ್ಟರುಗಳು ಅವರು ಹೇಳಿದಷ್ಟು ಉತ್ಪಾದನೆ ಮಾಡಿಕೊಡಲಿಲ್ಲ ಅಂದ್ರೆ ಮನೆಗೆ ಬಿಡುವುದೇ ಇಲ್ಲ. ಇಂತಹ ಸಂದರ್ಭದಲ್ಲಿ ಮಕ್ಕಳ ಬಗ್ಗೆ ಯೋಚಿಸಿದಾಗ ಮನಸ್ಸಿಗೆ ಆತಂಕ–ತಲ್ಲಣಗಳು ಶುರುವಾಗುತ್ತವೆ. ಏಕೆಂದರೆ ಬೆಳಿಗ್ಗೆನೆ ಮನೆ ಬಿಡಬೇಕಾಗುತ್ತದೆ. ಗಂಡನು ಯಾವ ಜವಾಬ್ದಾರಿನೂ ತೆಗೆದುಕೊಳ್ಳದೆ ಮಕ್ಕಳನ್ನು ನೋಡಿಕೊಳ್ಳದೆ ಎರಡೂ ಕಡೆನೂ ನಾವೇ ಯೋಚಿಸಬೇಕಾಗುತ್ತದೆ. ಯಾವಾಗ ಮಾಸ್ಟರಗಳೂ ಬಿಡುತ್ತಾರೋ ಯಾವಾಗ ಮನೆ ಸೇರ್ತಿವೋ ಎಂದು ಆತುರದಲ್ಲಿ ಕಾಯ್ತಾನೆ ಇರ್ತಾರೆ, ಬಿಡದೆ ಇದ್ದಾಗ ಮಾಲೀಕರನ್ನು, ಮಾಸ್ಟರ್‌ಗಳನ್ನು ಎದುರುಹಾಕಿಕೊಳ್ಳದೆ, ವಿರೋಧಿಸಲು ಆಗದೆ ಅಸಹಾಯಕರಾಗಿ ಮನಸ್ಸಲ್ಲೆ ಬೈಯ್ದುಕೊಳ್ಳುತ್ತಾ ಕೆಲಸ ಮಾಡುತ್ತಿರುತ್ತಾರೆ. ಏಕೆಂದರೆ ಏನಾದರೂ ಮಾತಾನಾಡಿದರೆ ತಕ್ಷಣ ಕೆಲಸ ತೆಗೆದುಹಾಕುತ್ತೇನೆ ಎಂದು ಹೆದರಿಸುತ್ತಾರೆ. ನಾವು ಹೇಳಿದಷ್ಟು ಪ್ರೊಡಕ್ಷನ್ ಕೊಡದೆ ಇದ್ದರೆ ಕೆಲಸಕ್ಕೆ ಬರಬೇಡ್ರಿ ಅಂತ ಹೇಳುತ್ತಾರೆ. ಇದರಿಂದ ಮಕ್ಕಳಿಗೆ ಮೂರೊಪ್ಪತ್ತಿನ ಗಂಜಿಯನ್ನು ಹಾಕೊಕ್ಕೆ ಆಗುವುದಿಲ್ಲ. ಹೀಗಾಗಿ ಗಾರ್ಮೆಂಟ್ಸ್ ಮಹಿಳೆಯರು ಶೇ.೬೦ರಷ್ಟು ಮೌನವಾಗಿ, ಒಂದೂ ಬಗೆಯ ಮೂಕರಾಗಿ ಕೆಲಸ ಮಾಡುತ್ತಾರೆ ಅಸಹಾಯಕರಾಗಿ, ಮಹಿಳೆಯರು ದಿನನಿತ್ಯ ಹೀಗೆ ದುಡಿಯುವುದರಿಂದ ಮಾನಸಿಕ ದೈಹಿಕ ಸ್ಥಿತಿ ಎಷ್ಟು ಹಾಳಾಗುತ್ತದೆ ಎಂದೂ ಊಹಿಸಿಕೊಳ್ಳಲು ಆಗುವುದಿಲ್ಲ. ಹೀಗೆ ದುಡಿಯಲು ಯಂತ್ರವೂ ಅಲ್ಲ. ಒಂದೊಂದು ಸಾರಿ ಅದು ಕೂಡ ಕೆಟ್ಟು ಹೋಗುತ್ತದೆ. ಸಂಜೆಯೆನ್ನುವಷ್ಟರಲ್ಲಿ ಮಹಿಳೆಯರಲ್ಲಿ ಇದ್ದ ಅಲ್ಪ ಸ್ವಲ್ಪ ಶಕ್ತಿ ಕೂಡ ಸೋರಿ ಹೋಗಿರುತ್ತದೆ. ಇಷ್ಟು ಕೆಲಸ ಮಾಡಲು ಒಬ್ಬ ಮಹಿಳೆ ತನ್ನ ಶಕ್ತಿಯನ್ನು ವ್ಯಯಿಸಬೇಕೊ? ಅಷ್ಟು ಶಕ್ತಿ ಅವಳಲ್ಲಿ ಕೂಡಿಕೊಳ್ಳಬೇಕೆಂದರೆ ಎಷ್ಟು ಆಹಾರ ತಿನ್ನಬೇಕು? ಆದರೆ ಪುರುಷ ಪ್ರಧಾನ ಸಮಾಜದಲ್ಲಿ ಅದರಲ್ಲೂ ಗಾರ್ಮೆಂಟ್ಸ್ ಮಹಿಳೆಯರಿಗೆ ಮೂರೊಪ್ಪತ್ತಿನ ಊಟ, ಅಲ್ಲದೇ ಸಮಯಕ್ಕೆ ತಕ್ಕಂತೆ ಮಾಡುವುದಕ್ಕೂ ಆಗಲ್ಲ. ಏಕೆಂದರೆ ವ್ಯವಸ್ಥೆ ಮಹಿಳೆಗೆ, ಗಂಡ, ಮಕ್ಕಳು ಊಟ ಮಾಡಿದ ನಂತರ ಉಳಿದದ್ದನ್ನು ಊಟಮಾಡಬೇಕೆಂಬ ನಿಯಮ ಎಲ್ಲಿ ಯಾವ ಪುಸ್ತಕದಲ್ಲಿ ಇಲ್ಲದಿದ್ದರೂ ವಾಸ್ತವದಲ್ಲಿ ಹಾಗೆ ಇರಬೇಕೆಂಬ ಮನಸ್ಥಿತಿ ಸೃಷ್ಟಿಸುತ್ತದೆ. ಇದರಿಂದ

ಏರ್ಪಡಿಸಿದ ಆರೋಗ್ಯ ಶಿಬಿರದಲ್ಲಿ ಭಾಗವಹಿಸಿದ ಶೇ.೫೦ರಷ್ಟು ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದುದು ಕಂಡುಬಂದಿದೆ. ಜೊತೆಗೆ ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರು ತಲೆ ತಿರುಗಿ ಬೀಳುವ ಉದಾಹರಣೆಗಳು ಹೆಚ್ಚಾಗುತ್ತಿವೆ. ತೀವ್ರ ಒತ್ತಡ, ಅಪೌಷ್ಠಿಕತೆ, ನಿಶ್ಯಕ್ತಿ, ಹತಾಶೆಗಳು ಇದಕ್ಕೆ ಕಾರಣವಿರಬಹುದು. ಇದಕ್ಕೆ ಯಾವಾಗ ಪರಿಹಾರ ಸಿಗುತ್ತೆ ಅನ್ನೋದೇ ದೊಡ್ಡ ಪ್ರಶ್ನೆಯಾಗಿದೆ. ಕೇವಲ ಅನ್ನಕ್ಕಾಗಿ ದುಡಿಯುವಂತಹ ವರ್ಗದ ಮಹಿಳೆಯರಾಗಿರುವ ಕಾರಣ ಇವರ ಪರವಾಗಿ ಹೋರಾಡುವ ಮನಸ್ಥಿತಿಯನ್ನು ಹುಡುಕಾಡುವ ಅವಶ್ಯಕತೆ ಬಂದಿದೆ. ಮಾಲೀಕರು ಯಾವುದೇ ಹೊಸ ಮಾಡೇಲ್ ಬಂದಾಗಲೂ, ಮೊದಲ ದಿನ ಅರವತ್ತು, ಎರಡನೇ ದಿನ ಎಪ್ಪತ್ತು, ಮೂರನೆ ದಿನ ಎಂಬತ್ತು ಹೀಗೆ ಪ್ರತಿನಿತ್ಯವೂ ಪ್ರೊಡಕ್ಷನ್ ದಾಹ ನಿಲ್ಲುವುದಿಲ್ಲ. ಒಬ್ಬ ಸಾಮಾನ್ಯ ಮನುಷ್ಯ ಮಾಡುವ ಕೆಲಸಕ್ಕಿಂತ ಹೆಚ್ಚು ಪ್ರಮಾಣದ ಪ್ರೊಡಕ್ಷನ್ ಫಿಕ್ಸ್ ಮಾಡಿ ಕಾರ್ಮಿಕರನ್ನು ಹಿಂಡಿ ಹಿಪ್ಪಿ ಮಾಡುತ್ತಿದ್ದಾರೆ. ಒಂದು ರೀತಿ ಕಬ್ಬಿನರಸವನ್ನು ಹೀರಿದ ಹಾಗೆ ಬಿಸಾಡುತ್ತಾರೆ. ಕಾರ್ಮಿಕರು ಅವತ್ತಿನ ಹಸಿವನ್ನು ತುಂಬಬೇಕಾದರೆ ಈ ಕೆಲಸ ಅವಶ್ಯಕ. ಇವರ ವಿರುದ್ಧ ಮಾತನಾಡುವಂತಿಲ್ಲ, ಮಾತನಾಡಿದರೆ ನಾಳೆ ಕೆಲಸವಿಲ್ಲ.

೪.೫.೨ ಹೆಚ್ಚಿನ ಅವದಿ (ಓ.ಟಿ)

ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ದುಡಿಯುವ ಮಹಿಳೆಯರ ಬಹುದೊಡ್ಡ ಸಮಸ್ಯೆ ಎಂದರೆ ಅವರ ಕೆಲಸದ ಸಮಯದ ಅನಿಶ್ಚಿತತೆ, ನಿಗದಿತ ವೇಳೆಗೆ ಕೆಲಸಕ್ಕೆ ಹಾಜರಾಗುವ ಅವರಿಗೆ ಸಂಜೆ ಕೆಲಸ ಮುಗಿಸಿ ಹೊರಬರಲು ಒಂದು ನಿರ್ದಿಷ್ಟ ಸಮಯವಿಲ್ಲ. ಅದಕ್ಕೆ ಮುಖ್ಯ ಕಾರಣ ಓ.ಟಿ ಹಾಗೂ ಓ.ಸಿಯಂತಹ ಕೆಲಸ ಕಾರ್ಯಗಳು. (ಯಾವುದೇ ಭತ್ಯೆಯಿಲ್ಲದೇ ದುಡಿಯುವ ಹೆಚ್ಚುವರಿ ಅವಧಿಗೆ ಓ.ಸಿ ಕಾರ್ಮಿಕರು ಹೆಚ್ಚುವರಿ ಕೆಲಸ ಮಾಡಲು ಒಪ್ಪಿಗೆ ಇರಲಿ ಬಿಡಲಿ ಕಡ್ಡಾಯವಾಗಿ ಕೆಲಸ ಮಾಡಲೇ ಬೇಕಾದ ಪರಿಸ್ಥಿತಿ.) ಅಂತರಾಷ್ಟ್ರೀಯ ಮಟ್ಟದಲ್ಲಿ ವ್ಯವಸ್ಥಿತವಾಗಿ ಕೆಲಸ ನಿರ್ವಹಿಸುತ್ತಿರುವ ಪ್ರಪಂಚದಲ್ಲಿ ಅತಿ ಹೆಚ್ಚು ರಫ್ತು ಮಾಡುವ ಸಿದ್ಧ ಉಡುಪುಗಳಲ್ಲಿ ಗಾರ್ಮೆಂಟ್ಸ್ ಉದ್ಯಮ ಒಂದು. ಆದರೆ ಈ ಉದ್ಯಮದಲ್ಲಿ ಆಡಳಿತ ವರ್ಗದ ಸರಿಯಾದ ಮೇಲ್ವಿಚಾರಣೆ ಹಾಗೂ ಯೋಜನೆ (ಪ್ಲಾನಿಂಗ್)ಯ ಕೊರತೆಯಿಂದ ಕಾರ್ಮಿಕರು ಪ್ರತಿನಿತ್ಯ ಒಂದಲ್ಲ ಒಂದು ಕಾರಣಕ್ಕಾಗಿ ಹೆಚ್ಚುವರಿ ಕೆಲಸ ಮಾಡಬೇಕಾಗಿದೆ.

ಸೆಕ್ಷನ್ ೬೪ರ ಪ್ರಕಾರ ಮಾಲೀಕರು ತ್ರೈಮಾಸಿಕ ಅವಧಿಯಲ್ಲಿ ೫೦ ಗಂಟೆಗಳಿಂದ ಹೆಚ್ಚು ಓ.ಟಿ. ಮಾಡಿಸುವ ಹಾಗಿಲ್ಲ. ಹಾಗೂ ಮಾಡಿದ ಹೆಚ್ಚುವರಿ ಕೆಲಸಕ್ಕೆ ವೇತನದ ಎರಡು ಪಟ್ಟು ನೀಡಬೇಕು. ಆದರೆ ವಾಸ್ತವದಲ್ಲಿ ತಿಂಗಳಿಗೆ ೬೦-೮೦ ಗಂಟೆಗಳಿಗಿಂತ ಹೆಚ್ಚು ಕಾಲ ಹೆಚ್ಚುವರಿ ಕೆಲಸಮಾಡುತ್ತಿದ್ದಾರೆ. ಕೆಲವು ಆಡಳಿತ ವರ್ಗದವರು ಈ ಕೆಲಸಕ್ಕೆ ವೇತನದ ಒಂದು ಪಟ್ಟು ಮತ್ತು ಒಂದೂವರೆ ಪಟ್ಟಿನಷ್ಟು ಮಾತ್ರ ನೀಡಿ ಕಾನೂನನ್ನು ಗಾಳಿಗೆ ತೂರುತ್ತಿದ್ದಾರೆ. ಆಡಳಿತ ವರ್ಗದ ಕೇವಲ ಲಾಭದ ಆಸೆಯಿಂದ ಕಾರ್ಮಿಕರನ್ನು ಶೋಷಣೆಗೊಳಪಡಿಸುತ್ತಿರುವ ಟಾರ್ಗೆಟ್ ಒತ್ತಡ ಕಾರ್ಮಿಕರಿಗೆ ಎಂಟು ಗಂಟೆಯ ಒಳಗಾಗಿ ಮುಗಿಸಲಾಗದಂತಹ ಪ್ರೊಡಕ್ಷನ್ ಟಾರ್ಗೆಟ್‌ನ್ನು

[illegible]

[illegible]

[illegible]

ನಿಗದಿಪಡಿಸುವುದರಿಂದ ಕಾರ್ಮಿಕರು ಸಂಜೆ ಎಷ್ಟೇ ಗಂಟೆಯಾದರೂ ಕೆಲಸ ಮಾಡಿ ಪೂರೈಸಬೇಕು. ಇದಕ್ಕೆ ಯವುದೇ ಭತ್ಯೆಯನ್ನು ಮೀರಿದ ಪ್ರೊಡಕ್ಷನ್ ಟಾರ್ಗೆಟ್ ನಿಗದಿ ಪಡಿಸಿ. ಕಾರ್ಮಿಕರಿಂದ ಹೆಚ್ಚು ಕೆಲಸ ತೆಗೆದುಕೊಳ್ಳುವುದೇ ಈ ಪದ್ಧತಿಯ ಹಿಂದೆ ಅಡಗಿರುವ ಸತ್ಯ.

ಈ ರೀತಿ ಕಾರ್ಮಿಕರಿಂದ ಹೆಚ್ಚು ಕೆಲಸ ತೆಗೆದುಕೊಳ್ಳುವುದಕ್ಕೆ ಆಡಳಿತ ವರ್ಗ ಹಲವಾರು ಕಾರ್ಯತಂತ್ರಗಳನ್ನು ಅನುಸರಿಸುತ್ತಿದೆ. "ಪೀಣ್ಯ ಪ್ರದೇಶದ ಒಂದು ಕಾರ್ಖಾನೆಯಲ್ಲಿ ಮಹಿಳಾ ಕಾರ್ಮಿಕರಿಗೆ ಬೆಳಿಗ್ಗೆ ೭ಗಂಟೆಯಿಂದ ಮಧ್ಯಾಹ್ನ ೩ಗಂಟೆಯುವರೆಗೂ ಒಂದು ಶಿಫ್ಟ್ ಕಾರ್ಯನಿರ್ವಹಿಸುತ್ತಿದೆ. ಈ ಶಿಫ್ಟ್‌ಗಳಲ್ಲಿ ದುಡಿಯುವ ಕಾರ್ಮಿಕರನ್ನು ಹೆಚ್ಚುವರಿ ಕೆಲಸದ ನೆಪ ಹೇಳಿ ಸಂಜೆ ಏಳರವರೆಗೂ ದುಡಿಸಿಕೊಳ್ಳಲಾಗುತ್ತದೆ. ಇದಕ್ಕೆ ಅವರಿಗೆ ದೊರೆಯುವುದು ಗಂಟೆಗೆ ಅವರ ವೇತನದ ಒಂದುಪಟ್ಟು ಮಾತ್ರ ನೀಡುತ್ತಾರೆ. ಮಹಿಳಾ ಕಾರ್ಮಿಕರು ಪ್ರತಿ ದಿನ ಎಂಟರಿಂದ ಹತ್ತು ಗಂಟೆ ಬಿಡುವಿಲ್ಲದೆ ಕೆಲಸ ಮಾಡುವುದರಿಂದ ತಮ್ಮ ಕೌಟುಂಬಿಕ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಯೋಚಿಸಿಕೊಳ್ಳಲು ಆಗದೇ ಒತ್ತಡಕ್ಕೆ ಸಿಲುಕುತ್ತಿದ್ದಾರೆ. ಇದು ಅವರ ಆರೋಗ್ಯದ ಮೇಲೆ ಗಾಢ ದುಷ್ಪರಿಣಾಮಗಳನ್ನು ಉಂಟುಮಾಡುತ್ತಿರುವುದಲ್ಲದೇ, ಸಂಜೆ ಲೇಟಾಗಿ ಮನೆಗೆ ಹೋಗುವುದರಿಂದ ಕುಟುಂಬದ ಇತರ ಸದಸ್ಯರಿಂದ ಅವಮಾನಗಳನ್ನು ಎದುರಿಸುತ್ತಿದ್ದಾರೆ. ಮನೆಗೆ ದಿನಾಲು ಲೇಟಾಗಿ ಬರುವುದರಿಂದ ಕೌಟುಂಬಿಕ ವಿರಸಕ್ಕೆ ಒಳಗಾಗಿ ಗಂಡನ ಜೊತೆ ಜಗಳವಾಡಿ ಅನುಮಾನದಿಂದ ದಂಪತಿಗಳು ದಾಂಪತ್ಯದಿಂದ ದೂರವಾಗುತ್ತಿದ್ದಾರೆ.

ಅವೈಜ್ಞಾನಿಕ ರೀತಿಯಲ್ಲಿ ೮ ಗಂಟೆಯ ಅವಧಿಯೊಳಗೆ ಮಾಡಲಾಗದಂತಹ ಪ್ರೊಡಕ್ಷನ್ ನಿಗದಿ ಮಡುವುದು ಮತ್ತು ಮಾಡಿದ ಹೆಚ್ಚುವರಿ ಕೆಲಸಕ್ಕೆ ಕಾನೂನು ಪ್ರಕಾರವಾಗಿ ನೀಡಬೇಕಾಗಿರುವ ವೇತನವನ್ನು ನೀಡದಿರುವುದು. ಒತ್ತಾಯದಿಂದ ಕೆಲಸಮಾಡಿಸುವುದು. ಅದಕ್ಕೆ ಪ್ರತಿಫಲ (ಬೆಲೆ) ನೀಡದೆ ಹೆಚ್ಚಿನ ಅವಧಿ ಕೆಲಸಮಾಡಿಸುವುದು ಕಾರ್ಖಾನೆಗಳಲ್ಲಿ ಸರ್ವೇಸಾಮಾನ್ಯವಾದದ್ದು. ಇದರಿಂದ ತಪ್ಪಿಸಿಕೊಂಡ ಕಾರ್ಮಿಕರು ಸಿಗುವುದೇ ಕಷ್ಟ. ತಮ್ಮ ಕೆಲಸದ ಅನುಭವದಲ್ಲಿ ಪ್ರತಿಯೊಬ್ಬ ಕಾರ್ಮಿಕರು ಒತ್ತಾಯಕ್ಕೆ ಮತ್ತು ಹೆಚ್ಚಿನ ಅವಧಿ ಕೆಲಸಕ್ಕೆ ಪ್ರತಿಫಲವಿಲ್ಲದೆ ಬಲಿಪಶುಗಳಾಗಿರುವುದು ಕಂಡುಬರುತ್ತದೆ. ಒಂದು ವೇಳೆ ಹೆಚ್ಚಿನ ಅವಧಿಯನ್ನು ಕೆಲಸ ಮಾಡಲು ಒಪ್ಪದೆ ಇದ್ದಾಗ ಮನಸ್ಸಿಗೆ ಬಂದಂತೆ ಡಿಸ್‌ಮಿಸ್ ಮಾಡುವುದು, ರಾಜಿನಾಮೆ ಕೊಡುವಂತೆ ಒತ್ತಾಯಿಸುವುದು. ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ತಾವು ಯಾವುದೇ ರೀತಿಯ ತಮ್ಮ ಕೆಲಸವನ್ನು ಉಳಿಸಿಕೊಳ್ಳಲು ಅವಕಾಶವನ್ನು ಹೊಂದಿರುವುದಿಲ್ಲ.

ಇಲ್ಲಿ ಕೆಲಸದಿಂದ ಡಿಸ್‌ಮಿಸ್ ಮಾಡುವುದು ಸರ್ವೇಸಾಮಾನ್ಯ, ತಿಂಗಳಿಗೆ ಶೇ.೧೦ರಷ್ಟು ಕಾರ್ಮಿಕರು ತಮ್ಮ ಕೆಲಸದಿಂದ ವಜಾಗೊಳ್ಳುತ್ತಾರೆ ಮತ್ತು ಕರ್ಮಿಕರಿಗೆ ರಜೆಯನ್ನು ನೀಡದೆ ಅವರಿಗೆ ರಜೆ ಅವಶ್ಯಕತೆ ಇದ್ದಾಗ ರಜೆಯನ್ನು ಕೇಳಲು ಹೋದರೆ ನಿರಾಕರಿಸುವುದಲ್ಲದೆ ಬಾಯಿಗೆ ಸಿಕ್ಕ ಹಾಗೆ

ಬೈಯ್ಯುವುದು ಕೆಲಸಕ್ಕೆ ಗೈರು ಹಾಜರಿ ಆಗುವುದರಿಂದ ಮುಲಾಜಿಲ್ಲದೆ ಅಂತಹ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕುತ್ತಾರೆ. ಕೆಲಸಗಾರರು ತಮ್ಮ ಕೆಲಸಕ್ಕೆ ಯಾವುದೇ ರಕ್ಷಣೆಯಿಲ್ಲದೆ ಯಾವಾಗ ಬೇಕಾದರೂ ತಮ್ಮ ಕೆಲಸವನ್ನು ಕಳೆದುಕೊಂಡು ಅತಂತ್ರ ಸ್ಥಿತಿಯಲ್ಲಿ ಒದ್ದಾಡುತ್ತಾರೆ.

೪.೫.೩ ಲೈಂಗಿಕ ಕಿರುಕುಳ

ಪ್ರಾಚೀನ ಕಾಲದಿಂದಲೂ ಸಂಪ್ರದಾಯಿಕ ಸಮಾಜ ಮಹಿಳೆಗೆ ಒಂದು ನೆಲೆಯಲ್ಲಿ ಗೌರವಯುತ ಸ್ಥಾನವನ್ನು ಕೊಟ್ಟಿದೆ. ಭಾರತೀಯ ನಾರಿಯರ ಸ್ಥಾನಮಾನಕ್ಕೂ ಜಗತ್ತಿನ ಇತರೆ ದೇಶಗಳ ಸ್ತ್ರೀಯರ ಸ್ಥಾನಮಾನಕ್ಕೂ ಇರುವ ವ್ಯತ್ಯಾಸ ಗಣನೀಯವಾಗಿದೆ. ಜಗತ್ತಿನಲ್ಲಿ ಸ್ತ್ರೀತ್ವವನ್ನು ದೈವೀಕರಣಕ್ಕೆ ಏರಿಸಿದ ಕೀರ್ತಿ ಮಾತ್ರ ಭಾರತ ದೇಶಕ್ಕೆ ಇದೆ. 'ಮಾತೃದೇವೋಭವ' "ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾ". ಅಂತ ಮನು ಹೇಳುವ ಹಾಗೆ ಎಲ್ಲಿ ಹೆಣ್ಣು ಪೂಜಿಸಲ್ಪಡುತ್ತಾಳೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ ಎಂಬ ವಾಕ್ಯಗಳೇ ಇದಕ್ಕೆ ಸಾಕ್ಷಿಯಾಗಿವೆ. ಹಿಂದಿನಿಂದಲೂ ಮಹಿಳೆ ತನ್ನ ಗ್ರಹಸ್ಥ ಜೀವನದ ಜೊತೆಗೆ ಉಳಿದ ಎಲ್ಲಾ ರಂಗಗಳಲ್ಲಿಯೂ ಅವಿರತವಾಗಿ ದುಡಿಯುತ್ತ ತನ್ನದೇ ಆದ ಸ್ಥಾನವನ್ನು ಉಳಿಸಿಕೊಂಡಿದ್ದಾಳೆ. ಇದು ರಾಜಕೀಯವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಸಾಂಸಾರಿಕವಾಗಿ, ವೈಜ್ಞಾನಿಕವಾಗಿ, ಬೌದ್ಧಿಕವಾಗಿ, ನೈತಿಕವಾಗಿ ಯಾವುದರಲ್ಲಿ ತಾನು ಕಡಿಮೆ ಇಲ್ಲಾ, ತಾನು ಅಬಲೆಯಲ್ಲ ಸಬಲೆ ಅನ್ನುವುದನ್ನು ಜಗತ್ತಿಗೆ ತೋರಿಸಿಕೊಟ್ಟಿದ್ದಾಳೆ ಎಂಬುದು ಹುಬ್ಬೇರಿಸುವ ಸಂಗತಿಯಾದರೆ, ಪ್ರಸ್ತುತ ದಿನಗಳಲ್ಲಿ ಮಹಿಳೆ ಎಲ್ಲಾ ಕಡೆಗಳಲ್ಲಿ ಲೈಂಗಿಕ ಕಿರುಕುಳ ಅನುಭವಿಸುತ್ತಿದ್ದಾಳೆ ಎಂದರೆ ತುಂಬಾ ವಿಷಾದನೀಯವಾಗಿದೆ.

ಬಡವ ಬಲ್ಲಿದವರ ಮೇಲೆ, ಇಲ್ಲದವರ ಮೇಲೆ, ದುರ್ಬಲರ ಮೇಲೆ ಉಳ್ಳವರು ಮತ್ತು ಸಬಲರ ದೌರ್ಜನ್ಯ ದಬ್ಬಾಳಿಕೆಗಳು ನಿರಂತರವಾಗಿ ನಡೆದುಕೊಂಡುಬರುತ್ತಿವೆ. ಇತ್ತೀಚಿನ ದಿನಗಳಲ್ಲಿ ಇಂತಹ ಸಂಗತಿಗಳು ಲೆಕ್ಕವಿಲ್ಲದಷ್ಟು ಇವೆ. ವರ್ಣಭೇದ ನೀತಿಯಾಗಲಿ, ಲಿಂಗಭೇದ ನೀತಿಯಾಗಲಿ ಅಸಹಾಯಕರನ್ನು ಮತ್ತು ಅಮಾಯಕರನ್ನು ಶೋಷಿಸಿತೇ ಹೊರತು ಚರಿತ್ರೆಯಲ್ಲಿ ಸಹನೀಯ ಭಾಗವಾಗಲಿಲ್ಲ. ವಿಷಾದದ ಸಂಗತಿಯೆಂದರೆ ಅದು ಮುಗಿದುಹೋಗುವ ಅಧ್ಯಾಯವಾಗದೆ, ಇವತ್ತಿಗೂ ಮರುಕಳಿಸುತ್ತಿರುವುದು ಚರಿತ್ರೆ ಮತ್ತು ವರ್ತಮಾನದ ಕೆಲವು ಸಂಗತಿಗಳಿಂದ ಉಳಿಯುವಂತಾಗಿದೆ. ಲೈಂಗಿಕ ಕಿರುಕುಳ ಎನ್ನುವಂತಹದು ಆಧುನಿಕ ಯುಗದ ಹೊಸ ಶಬ್ದವೇನಲ್ಲ, ಕಾಲ ಬದಲಾದಂತೆ ಶೋಷಣೆ ಸ್ವರೂಪ ಮಾತ್ರ ಭಿನ್ನವಾಗಿರುತ್ತದೆ. ಇದನ್ನು ಇಂಗ್ಲೀಷ್‌ನಲ್ಲಿ ಸೆಕ್ಸುವಲ್ ಹೆರಾಸ್ಮೆಂಟ್ ಎನ್ನುತ್ತಾರೆ. ಇದು ಕೆಲಸಮಾಡುವ ಉದ್ಯಮ, ಕಛೇರಿ, ಇನ್ನಿತರ ಕಡೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ತ್ರೀಯರ ಮೇಲೆ ಆಗುವ ದೈಹಿಕ ಅಥವಾ ಮಾನಸಿಕವಾಗಿ ಹಿಂಸೆಗೆ ಒಳಗಾಗುವುದನ್ನು 'ಲೈಂಗಿಕ ಕಿರುಕುಳ' ಎಂದು ಕರೆಯಬಹುದು.[೧೬]

ಭಾರತವು ಪ್ರಪಂಚದಲ್ಲಿಯೇ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದ ಎರಡನೆಯ ರಾಷ್ಟ್ರವಾಗಿದೆ. ೧೦೨ ಕೋಟಿ ಜನಸಂಖ್ಯೆಯಲ್ಲಿ ಸುಮಾರು ೪೯ ಕೋಟಿಗಿಂತ ಹೆಚ್ಚು ಮಹಿಳೆಯರಿದ್ದಾರೆ ಎಂಬುದು

[illegible]

[illegible]

[illegible]

[illegible]

[illegible]

ಆಶ್ಚರ್ಯಕರ ಸಂಗತಿಯಾಗಿದೆ. ಮಹಿಳೆಯರ ಮೇಲೆ ನಡೆಯುವ ಕಿರುಕುಳಗಳಲ್ಲಿ ಯುರೋಪ್ ರಾಷ್ಟ್ರಗಳನ್ನು ಬಿಟ್ಟರೆ ಭಾರತವೇ ಮುಂಚೂಣಿಯಲ್ಲಿರುವುದು ತಿಳಿದುಬಂದಿದೆ. ಭಾರತದಲ್ಲಿ ಲೈಂಗಿಕ ಕಿರುಕುಳದ ಪ್ರಥಮ ಪ್ರಕರಣ ಬಹುರಾಷ್ಟ್ರೀಯ 'ಟೀನ್' ಕಂಪನಿಯಲ್ಲಿ ಕಂಡುಬಂದಿತು. ಕಂಪನಿಯ ಮ್ಯಾನೇಜರನು ಸೆಕ್ರೆಟರಿಯತ್ತ ಕೆಟ್ಟದೃಷ್ಟಿಯಿಂದ ನೋಡುತ್ತಿದ್ದ. ಆಕೆಗೆ, ನಿನಗೆ ಹೆಚ್ಚು ಸಂಬಳ ಹಾಗೂ ಬಡ್ತಿ ಸಹ ಕೊಡುತ್ತೇನೆ, ಆದರೆ ನಾನು ಹೇಳಿದಂತೆ ಮಾಡಬೇಕು ಎಂಬ ಒತ್ತಡ ತರುತ್ತಿದ್ದ. ಆ ಯುವತಿ ಸ್ಪಷ್ಟವಾಗಿ ಅದಕ್ಕೆ ನಿರಾಕರಿಸಿದ್ದರ ಪರಿಣಾಮವಾಗಿ ಆಕೆ ಕೆಲಸ ಕಳೆದುಕೊಳ್ಳಬೇಕಾಯಿತು. ಇಂತಹ ಉದಾಹರಣೆಗಳು ಸಾಕಷ್ಟು ಸಿಗುತ್ತವೆ. ಅದರಲ್ಲೂ ಗಾರ್ಮೆಂಟ್ಸ್ ಫ್ಯಾಕ್ಟ್ರಿಯಲ್ಲಿ ಕೆಲಸಮಾಡುವ ಮಹಿಳೆಯರು ಸಾಕಷ್ಟು ಸಾವಿರಾರುಗಟ್ಟಲೆ ಸಿಗುತ್ತವೆ. ಏಕೆಂದರೆ ಒಬ್ಬ ಜವಾನನಿಂದ ಹಿಡಿದು ಮಾಸ್ಟರ್, ಸೂಪರ್‌ವೈಸರ್, ಮಾಲೀಕರತನಕ ಗಾರ್ಮೆಂಟ್ಸ್ ಮಹಿಳೆಯರು ಲೈಂಗಿಕ ಕಿರುಕುಳಕ್ಕೆ ಒಳಗಾಗಿ ಕೆಲಸವನ್ನು ಕಳೆದುಕೊಂಡಿರುವ ಉದಾಹರಣೆಗಳು ಸಿಗುತ್ತವೆ. ಇದರ ಒತ್ತಡ ತಾಳಲಾರದೆ ಮಾನಸಿಕವಾಗಿ ಗಟ್ಟಿ ಇಲ್ಲದೆ ಇರುವವರು ಆತ್ಮಹತ್ಯೆಗೆ ಒಳಗಾಗಿರುವ ಘಟನೆಗಳು ಗಾರ್ಮೆಂಟ್ಸ್ ಫ್ಯಾಕ್ಟ್ರಿಯಲ್ಲಿ ಸಾಕಷ್ಟು ಸಿಗುತ್ತವೆ. ಬೈಲದಿಲ್ದಾರ ಕಬ್ಬಿಣದ ಅದುರಿನ ಗಣಗಳ ಕಾರ್ಮಿಕ ಹೋರಾಟದಲ್ಲಿ ಹೋರಾಟವನ್ನು ಅಡಗಿಸಲೆಂದು ಅನೇಕ ಮಹಿಳೆಯರ ಮೇಲೆ ಅತ್ಯಾಚಾರವೆಸಗಲಾಯಿತು. ವೇತನದಲ್ಲಿ ಹಚ್ಚಳ, ಬಡ್ತಿ, ಮತ್ತು ವಿಶೇಷ ಸ್ಥಾನಮಾನಗಳ ಆಸೆ–ಆಮಿಷಗಳಿಗೊಳಗಾದ ಇಂತಹ ಹಲವು ಮಹಿಳೆಯರು ವಿವಿಧ ರೀತಿಯ ಕಿರುಕುಳಗಳಿಗೆ ಬಲಿಯಾಗಿದ್ದಾರೆ. ಹೀಗೆ ಮಹಿಳೆ ಪ್ರತಿಯೊಂದು ಕ್ಷೇತ್ರದಲ್ಲಿ ಆರೋಗ್ಯ, ಧಾರ್ಮಿಕ, ಕೃಷಿ, ಕೈಗಾರಿಕಾ, ಶೈಕ್ಷಣಿಕ ಕತ್ತಲಾವರಿಸಿದ ಕಾರಾಗೃಹಗಳು ಪತ್ರಿಕಾರಂಗ, ಚಿತ್ರರಂಗ ಇನ್ನಿತರ ಕ್ಷೇತ್ರದಲ್ಲಿ ಹಲವು ಬಗೆಯಲ್ಲಿ ಲೈಂಗಿಕ ಕಿರುಕುಳ ನಡೆಯುತ್ತವೆ.

ಆಧುನಿಕ ಕಾಲದಲ್ಲಿ ಸ್ತ್ರೀಯರು ಪುರುಷರ ಜೊತೆ ವಿವಿಧ ಉದ್ಯೋಗ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ, ಸ್ತ್ರೀ ಎಂಬ ಕಾರಣಕ್ಕೆ ಹಲವಾರು ವಿಧದ ಕಿರುಕುಳವನ್ನು ಎದುರಿಸುತ್ತಿದ್ದಾರೆ. ಸಹೋದ್ಯೋಗಿಗಳು ಅಸಹ್ಯ ಹಾಗೂ ಅಸಭ್ಯವರ್ತನೆಯನ್ನು ಪ್ರದರ್ಶಿಸುತ್ತಾರೆ. ಅನವಶ್ಯಕವಾಗಿ ಪ್ರದರ್ಶಿಸುತ್ತಾರೆ. ಅನವಶ್ಯಕವಾಗಿ ಸ್ತ್ರೀಯರನ್ನು ಕೆಲಸದ ಅವಧಿ ಮೀರಿ ಸ್ಥಳದಲ್ಲಿರುವಂತೆ ಒತ್ತಾಯಿಸುವುದು. ಈ ರೀತಿಯಾದಂತಹ ಕಿರುಕುಳಕ್ಕೆ ಒಳಪಡಿಸಲಾಗುತ್ತದೆ. ನಾಲ್ಕು ಗೋಡೆಗಳ ಮಧ್ಯೆನೇ ಮೇಲಾಧಿಕಾರಿಗಳಿಂದ ಮತ್ತು ಸಹೋದ್ಯೋಗಿಗಳಿಂದ ಲೈಂಗಿಕ ಕಿರುಕುಳಕ್ಕೆ ಒಳಗಾಗುತ್ತಿರುವುದು, ಮೇಲಾಧಿಕಾರಿಗಳೂ ಮತ್ತು ಸಹೋದ್ಯೋಗಿಗಳಿಂದಲೂ ಲೈಂಗಿಕ ಒಳಗಾಗುವ ಅನೇಕ ಸಂದರ್ಭಗಳು ಗಾರ್ಮೆಂಟ್ಸ್ ಮಹಿಳೆಗೆ ತಂದೊಡ್ಡುತ್ತಿವೆ.

ಮಹಿಳೆಯರ ಮೇಲಿನ ಅತ್ಯಾಚಾರ, ಅಪಹರಣ, ಹಿಂಸೆ, ಲೈಂಗಿಕ ಕಿರುಕುಳಗಳು ಅತ್ಯಂತ ನಾಚಿಕೆಗೇಡಿನ ಸಂಗತಿಗಳೆಂದು ಸಮಾಜಕ್ಕೆ ತಿಳಿದಿದ್ದರೂ, ಅದೇ ಸಮಾಜದಲ್ಲಿ ದಿನಗಳು ಉರುಳಿದಂತೆಲ್ಲಾ ಲೈಂಗಿಕ ಕಿರುಕುಳಗಳ ಸಂಖ್ಯೆ ಹೆಚ್ಚುತ್ತಲಿವೆ. ಮಹಿಳೆಯರ ಮೇಲೆ ನಡೆಯುವ ಇಂತಹ ದೌರ್ಜನ್ಯಗಳಿಗೆ ಭೌಗೋಳಿಕ, ಸಾಂಸ್ಕೃತಿಕ, ಧಾರ್ಮಿಕ, ಯಾವ ಚೌಕಟ್ಟುಗಳಿಲ್ಲ. ಮಹಿಳೆಯರ ಮೇಲೆ ಆಗುತ್ತಿರುವ ಲೈಂಗಿಕ ಕಿರುಕುಳಗಳನ್ನು ತಡೆಯಲು ಅನೇಕ ಕಾಯ್ದೆಗಳು ಇದ್ದರೂ ಸಹಿತ ದಿನ ಬೆಳಗಾದಂತೆ

ಮಹಿಳೆಯರು ಹಿಂಸೆ, ಅತ್ಯಾಚಾರ, ಅಥವಾ ಇನ್ನಾವುದೋ ರೀತಿಯ ಕಿರುಕುಳಕ್ಕೆ ಒಳಗಾದ ತಕ್ಷಣ ದೂರು ಕೊಡದೆ ಇರುವುದರಿಂದ ಅಪರಾಧಿಗಳು ಸುಲಭವಾಗಿ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ.

"ಬಂಡವಾಳಶಾಹಿ ಆರ್ಥಿಕತೆ ಮತ್ತು ಬಂಡವಾಳಶಾಹಿ ಪುರುಷಾಧಿಪತ್ಯ ಸಂಸ್ಕೃತಿಗಳೆರಡೂ ಸಹ ಸ್ತ್ರೀಯರ ಮನತೃಪ್ತಿ ಮತ್ತು ದೈಹಿಕತೆಯ ಮೇಲೆ ಹಿಡಿತವನ್ನು ಇಟ್ಟುಕೊಳ್ಳಬಯಸುತ್ತದೆ. ಸ್ತ್ರೀಯರಿಗೆ ಫಲಶಕ್ತಿಯೂ ಸೇರಿದಂತೆ ಅವರ ದೇಹದ ಮೇಲಿನ ಯಾವುದೆ ರೀತಿಯ ಹಕ್ಕುಗಳನ್ನು ನಿರಾಕರಿಸಲಾಗಿದೆ. ಸ್ಥಿತ್ಯಂತರ ಸಾಂಸ್ಕೃತಿಕ ನೆಲೆಯಲ್ಲಿ ಶಿಶು ಜನನವನ್ನು ತಡೆಯಲು ಹಲವಾರು ಗರ್ಭನಿರೋಧಕಗಳನ್ನು ಬಿಡುಗಡೆ ಮಾಡಲಾಗಿದ್ದು, ಇದು ಉತ್ತಮ ವಿನಾಶಕಾರಿ ಪರಿಣಾಮಗಳಿಗೆ ಕಾರಣವಾಗಿದೆ. ಗರ್ಭಪಾತದ ಸಂದರ್ಭಗಳಲ್ಲಿ ಸ್ತ್ರೀಯರ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಯಾವುದೇ ರೀತಿಯ ಲಕ್ಷ್ಯ, ಬೆಲೆ ಇರುವುದಿಲ್ಲ. ಇದಕ್ಕೆ ಬಂಡವಾಳಶಾಹಿ ಪುರುಷಾಧಿಪತ್ಯ ಸಂಸ್ಕೃತಿಯು ಸ್ತ್ರೀಯರ ದೇಹ, ಮನಸ್ಸು, ಭಾವನೆ ಕೊನೆಗೆ ಕನಸುಗಳನ್ನು ಕೂಡ ಅದರ ಪ್ರಧಾನ ಅಗತ್ಯಗಳಿಗೆ ಪೂರಕವಾಗಿ ರೂಪಿಸುವುದನ್ನು ಸ್ಥಿತ್ಯಂತರ ಸಾಂಸ್ಕೃತಿಕ ನೀತಿಯ ಬರವಣಿಗೆಗಳು ಬಯಲುಗೊಳಿಸುತ್ತವೆ.[೧೭]

ಬೈಯ್ಯುವುದು, ದೈಹಿಕ ಹಿಂಸೆ ನೀಡುವುದು ಮತ್ತು ಲೈಂಗಿಕ ಕಿರುಕುಳ ನೀಡುವುದು ಗಾರ್ಮೆಂಟ್ಸ್ ಫ್ಯಾಕ್ಟ್ರಿಗಳಲ್ಲಿ ಒಂದು ಸಂಸ್ಕೃತಿಯಾಗಿ ಬೆಳೆದಿದೆ. ಅಂತನೆ ಹೇಳಬಹುದು ಆದರೆ ಇದು ಒಂದು ಕ್ಷೇತ್ರಕ್ಕೆ ಸೀಮಿತವಾಗದೆ ಭಾರತದ್ಯಾದ್ದಂತ ಕಂಡುಬರುತ್ತದೆ. ಎಷ್ಟೇ ಕಾರ್ಮಿಕರನ್ನು ಒಳಗೊಂಡಿದ್ದರೂ ಸಹ ಎಲ್ಲ ಕಾರ್ಮಿಕರು ಒಂದಲ್ಲಾ ಒಂದು ಬಗೆಯ ಹಿಂಸೆಗೆ ಒಳಗಾದವರೇ. ಇದಕ್ಕೆ ಯಾರು ಹೊರತಾಗಿರುವುದು ಕಂಡುಬರುವುದಿಲ್ಲ.

ಶಾಂತ ಎಂಬುವರನ್ನು ಸಂದರ್ಶಿಸಿ ಪ್ರಶ್ನೆಕೇಳಿದಾಗ, ಕೆಲಸಬಿಡುವುದಕ್ಕೂ ಸಂಬಂಧ ಏನು, ಹೇಳು? ಅಳುವಂತಹದ್ದೇನಾಯ್ತು? ಎಷ್ಟು ಕೆಲಸ ಮಾಡಿದ್ರೂ ಮತ್ತೂ ಮಾಡಬೇಕೆನ್ನುತ್ತಿದ್ದರು, ಲೇಟಾಗಿ ಬಿಡ್ತಾ ಇದ್ರು ನಿಧಾನಕ್ಕೆ ಉತ್ತರಿಸಿದಳು. ನೊಂದ ಮನಸ್ಸಿಗೆ ಒಂದು ಸಾಂತ್ವನದ ಭರವಸೆ ಬೇಕಿತ್ತು. ಅಂತಹ ಭರವಸೆಯನ್ನು ಬಹುಶಃ ಆ ಹಸ್ತ ನೀಡಿ ತಿನ್ನಿಸುತ್ತದೆ. ಎಷ್ಟು ಸರಿಯಾಗಿ ಕೆಲಸ ಮಾಡಿದರೂ ಸುಮ್ಮನೆ ತಪ್ಪು ಕಂಡುಹಿಡಿಯುತ್ತಿದ್ದರು, ಕೆಟ್ಟ ಮಾತುಗಳಿಂದ ಅಂತಹವಳು ಇಂತಹವಳೆಂದು ಬೈಯ್ಯುತ್ತಿದ್ದರು. ಇದರಿಂದ ವಸ್ತ್ರೋದ್ಯಮದಲ್ಲಿ ನಡೆಯಬಹುದಾದ ಕೆಲವೊಂದು ಕುತೂಹಲಕಾರಿ ಘಟಕಗಳು ಹೊರಬಂದವು. ಕೆಲಸ ಮಾಡಿದಷ್ಟೂ ಮತ್ತು ಮಾಡಲು ಒತ್ತಡ ಹೇರುವುದರಿಂದ ಹಿಡಿದು ಅಶ್ಲೀಲ ಮಾತುಗಳನ್ನಾಡುವುದು. ತಿರುಗಾಡುವಾಗ ಬೇಕಂತಲೇ ಮೈ ಕೈ ಮುಟ್ಟುವುದು, ಲೈಂಗಿಕ ಪ್ರಚೋದನೆ ನೀಡುವುದು, ಒಪ್ಪದಿದ್ದರೆ ಅನವಶ್ಯಕ ತಪ್ಪನ್ನು ಕಂಡು ಹಿಡಿದು-ಎಲ್ಲರೆದುರಲ್ಲಿ ಅವಮಾನ ಮಾಡುವವರೆಗೆ ಎಲ್ಲವನ್ನು ಆಕೆ ಹೇಳಿದಳು. ನಂಗೆ ಅಲ್ಲಿ ಕೆಲಸಕ್ಕೆ ಹೋಗಲು ಇಷ್ಟವಿಲ್ಲ ಬೇರೆಕಡೆ ನೋಡಿಕೊಡಿ ಎಂದು ಎಲ್ಲವನ್ನು ಬಿಚ್ಚಿಟ್ಟಿದ್ದಳು. ಈ ಉದ್ಯಮದೊಳಗೆ ಇಂತಹ ಅದೆಷ್ಟು ನೋವುಗಳು ಆಪ್ತರಲ್ಲೂ ಹೇಳಿಕೊಳ್ಳಲಾರದಂತೆ ಹೆಪ್ಪುಗಟ್ಟಿರಬಹುದು?

[illegible]

"ಲಕ್ಷ್ಮಿಯ ಮನಸ್ಸಿಗೆ ಕಸಿವಿಸಿ" ಏನಿದು ಧೂರ್ತತನ PM ಎನಿಸಿಕೊಂಡವನು. ಹೊಟ್ಟೆಪಾಡಿಗಾಗಿ ಬರುವ ೧೮-೨೦ ವರ್ಷದ ಹೆಣ್ಣು ಮಕ್ಕಳ ಅಸಹಾಯಕತೆಯನ್ನು ಬಳಸಿಕೊಂಡು ಸದಾ ಕ್ಯಾಂಟಿನ್ಗೆ ಕರೆಸಿಕೊಂಡು ಅವರ ಮೈಕೈ ಮುಟ್ಟುತ್ತಾ ಮೋಜು ಮಾಡುತ್ತಾನೆ. ಹಾಗೆ ನೋಡಿದರೆ ಆ ವಯಸ್ಸಿನ ಮೊಮ್ಮಕ್ಕಳಿರಬೇಕು ಅವನಿಗೆ.

ಇವನ ಈ ಚಪಲವನ್ನು ಲಕ್ಷ್ಮೀ ಕೆಲಸಕ್ಕೆ ಸೇರಿದಾಗಿನಿಂದ ನೋಡುತ್ತಲೇ ಇದ್ದಾಳೆ. ಊಟದ ಸಮಯದಲ್ಲಿ, ಕಾರ್ಖಾನೆ ಬಿಟ್ಟಾಗಲೆಲ್ಲಾ ಹುಡುಗಿಯರನ್ನು ಕರೆದು, ಅವನು ಹೇಳಿದಂತೆ ಕುಣಿಯದಿರಲು ಬುದ್ಧಿ ಮಾತು ಹೇಳಿದ್ದಾಳೆ. ಹಾಗೆ ಹೇಳಿದಾಗಲೆಲ್ಲಾ ಆ ಹುಡುಗಿಯರ ಕಣ್ಣಲ್ಲಿ ನೀರಾಡುವುದೇ ಹೊರತು ಉತ್ತರ ಬರುವುದಿಲ್ಲ.

ಅದನ್ನು ಹೀಗೆ ಬಿಟ್ಟರೆ ಸರಿಯೋಗುವುದಿಲ್ಲ ಎಂದು ಜನರಿಗೆ ವಿವರವಾದ ಪತ್ರ ಬರೆದು, PM. ನ ದುರ್ನಡತೆಯನ್ನು ತಿಳಿಸಿದ್ದಳು." ಒಂದು ದಿನವಾಯಿತು, ಎರಡು ದಿನವಾಯಿತು, ಮೂರನೆಯ ದಿನವಾಯಿತು, ನಾಲ್ಕನೆಯ ದಿನ ನಾಮಕಾವಸ್ಥೆಯಾಗಿ ಇದ್ದ ವಿಚಾರಣಾ ಸಮಿತಿಯಿಂದ 'ವಿಚಾರಣಾ ನಾಟಕ' ಶುರುವಾಯಿತು. PM ಬೆವರತೊಡಗಿದ್ದ, ಎಲ್ಲರೂ ಲಕ್ಷ್ಮಿ ಪರ ನಿಂತರು. ಹುಡುಗಿಯರು ಸಾಕ್ಷಿ ಹೇಳಿದರು. ಲಕ್ಷ್ಮಿ ಹಿರಿಹಿರಿ ಹಿಗ್ಗಿದಳು. 'ನ್ಯಾಯಕ್ಕೆ ಜಯ ಸಿಕ್ಕೇ ಸಿಗುತ್ತದೆ' ಎಂದು ಕಾದಳು. ಕಡೆಗೊಂದು ದಿನ ಈಕೆಗೆ ನೋಟಿಸ್ ನೀಡಲಾಯಿತು.

"ನೀವು ಗಂಟೆಗೆ ಕೇವಲ ೫೦ ಪೀಸ್ ಪ್ರೊಡಕ್ಷನ್ ನೀಡುತ್ತಿದ್ದೀರಿ. ಗಂಟೆಗೆ ೧೫೦ ಪೀಸ್ ಸಾಧ್ಯ ಎಂದು ಇಂಜಿನಿಯರ್ ಅಭಿಪ್ರಾಯಪಟ್ಟಿರುತ್ತಾರೆ. ಹಲವು ಎಚ್ಚರಿಕೆಯ ನಂತರವು ನೀವು ನಿಮ್ಮ ತಪ್ಪು ತಿದ್ದಿಕೊಳ್ಳದ ಕಾರಣ ನಿಮ್ಮನ್ನು ಕೆಲಸದಿಂದ ವಜಾಗೊಳಿಸಲಾಗಿದೆ." ಕಡೆಯಲ್ಲೊಂದು ಸಾಲು ಸೇರಿಸಲಾಗಿತ್ತು. "ಮೇಲಿನವರ ತಪ್ಪು ಹುಡುಕುವುದು ನಿಮ್ಮ ಕೆಲಸವಲ್ಲ.[೧೮] ಇದರಿಂದ ಆಡಳಿತಶಾಹಿಯ ಕುತಂತ್ರತೆಯು ತಿಳಿಯುತ್ತದೆ. ಹೆಣ್ಣು ಎನ್ನುವ ಕಾರಣಕ್ಕೆ ಹಲವು ನೆಪ ಹೇಳಿ ಸುಲಭವಾಗಿ ಕೆಲಸದಿಂದ ತೆಗೆದುಹಾಕಿದರು.

ಶೈಲ ಹೇಳುವಂತೆ "ನಾನು ಅವರು ಹೇಳಿದಷ್ಟು ಉತ್ಪಾದನೆಯನ್ನು ಮಾಡಲಿಲ್ಲ ಎಂದರೆ, ತುಂಬಾ ಹೊಲಸಾಗಿ ಮಾತನಾಡುತ್ತಾರೆ, ಬೈಯುತ್ತಾರೆ ಬಟ್ಟೆಯ ಪಿಸುಗಳನ್ನು ಮುಖದ ಮೇಲೆ ಎಸಿಯುತ್ತಾರೆ." ಸೂಪರ್‌ವೈಸರುಗಳು ಬಂದು "ನೀವು ಗರಿಷ್ಠ ಮಟ್ಟದಲ್ಲಿ ಕೆಲಸ ಮಾಡಲಿಲ್ಲ ಅಂದ್ರೆ ಇಲ್ಲಿ ಕೆಲಸಕ್ಕೆ ಯಾಕೆ ಬರ್ತೀರಿ, ನಿಮ್ಮ ಮನೆಯಲ್ಲಿಯೇ ಆರಾಮವಾಗಿ ಇರಬಹುದಲ್ಲಾ? ಎಂದು ಕೇಳುತ್ತಾರೆ.

"ಒಬ್ಬ ಮಹಿಳೆಯಾಗಿ, ಶಾಂತ ವಾತವರಣವಿಲ್ಲದೆ, ಅವಮಾನಿಸಿಕೊಳ್ಳದೆ, ಬೈಸಿಕೊಳ್ಳದೆ ಇಲ್ಲಿ ಕೆಲಸ ಮಾಡಲು ಸಾಧ್ಯವಿಲ್ಲ ಕೆಲಸಗಾರರನ್ನು ಅತಿ ಕೆಟ್ಟದಾಗಿ ಬೈಯ್ತಾರೆ, ತುಂಬಾ ನೋವಾಗುತ್ತೆ,

ಅಷ್ಟೇ ಅಲ್ಲ, ಲಿಂಗವನ್ನಾಧರಿಸಿ ಅವರ ಬೈಯ್ಗುಳಗಳೂ ಇರುತ್ತವೆ. ಇದರಿಂದಲೇ ಹೆಣ್ಣು ಮಕ್ಕಳು ಕೆಲಸ ಬಿಡುವ ಸಾಧ್ಯತೆ ಇರುತ್ತದೆ.

ಹಲವಾರು ವರುಷಗಳ ನಂತರ ಭಾರತದ ಸರ್ವೋಚ್ಚ ನ್ಯಾಯಲಯ ೧೯೯೭ ರಲ್ಲಿ ಒಂದು ಮಹತ್ವದ ತೀರ್ಪನ್ನು ನೀಡಿತು. ಅದರ ಪ್ರಕಾರ ಕೆಲಸ ನಡೆಯುವ ಪ್ರತಿಯೊಂದು ಸ್ಥಳದಲ್ಲಿ ಒಂದು ಕಮಿಟಿಯನ್ನು ಸ್ಥಾಪಿಸುವುದು ಮತ್ತು ಆ ಕಮಿಟಿಯು ಈ ಲೈಂಗಿಕ ದೌರ್ಜನ್ಯ ಮತ್ತು ಕಿರುಕುಳಗಳನ್ನು ತಡೆಗಟ್ಟುವುದು ಇದರ ಕೆಲಸವಾಗಬೇಕು. ಆದರೆ ಆಡಳಿತ ಮಂಡಳಿಗಳು ಅದನ್ನು ತೀವ್ರವಾಗಿ ವಿರೋಧಿಸಿದವು ಮತ್ತು ಲೈಂಗಿಕ ದೌರ್ಜನ್ಯ ನೀಡುವವರು ಒಂದೇ ತೆರನಾದ ಮೈಕೈ ಮುಟ್ಟಿಯೇ ದೌರ್ಜನ್ಯ ನಡೆಸಬೇಕು, ಅಂತ ಏನೂ ಇಲ್ಲ. ಅವರು ಮಾತನಾಡುವ ಧಾಟಿಯಲ್ಲಿಯೇ ಅವರ ಲೈಂಗಿಕ ತೃಷೆಯಿಂದ ತೃಪ್ತಿ ಪಟ್ಟಕೊಳ್ಳಬಹುದು. ರೇಖಾ ಹೇಳುವಂತೆ "ಸುಪ್ರವೈಜರ್ ನನ್ನ ಜೊತೆ ತೀರ ವ್ಯಕ್ತಿಗತ ಮಾತನಾಡುತ್ತಾನೆ. ಅದರಲ್ಲಿ ಅವನಿಗೆ ನನ್ನ ಮೇಲೆ ಇರುವ ಅಭಿಪ್ರಾಯ ಯಾವುದು ಅಂತ ತೋರಿಸುತ್ತೆ. ಹಾಗಂತ ಅವನು ನನ್ನ ಮೈಕೈ ಮುಟ್ಟಿಲ್ಲ ಅವನ ಮಾತಿನ ಧಾಟಿಯೇ ಅಸಹ್ಯ ಹುಟ್ಟಿಸುತ್ತೆ. ಆದ್ರೆ ಇವೆಲ್ಲ ನಾನೇ ನಾನು ಸಹಿಸಿಕೊಳ್ಳಲೇಬೇಕು. ಕೆಲಸಬೇಕೆಬೇಕು. ಅಂದಾಗ ಒಪ್ಪಿಕೊಳ್ಳಬೇಕು ಇಲ್ಲದಿದ್ದರೆ ಮನೆ ಪರಿಸ್ಥಿತಿ ತೀರ ಹದಗೆಡುತ್ತದೆ ಅಂತ ಹೇಳುತ್ತಾಳೆ.

ಗಾರ್ಮೆಂಟ್ಸ್ ಉದ್ಯಮದಲ್ಲಿ ಕೆಲಸ ಮಾಡುತ್ತಿರುವ ಲಕ್ಷಾಂತರ ಹೆಣ್ಣು ಮಕ್ಕಳ ಇಂತಹ ನೋವಿಗೆ ಹಲವಾರು ನಿದರ್ಶನಗಳಲ್ಲಿ ಇವರು ಕೆಲವೊಬ್ಬರು ಉದಾಹರಣೆ ಸಿಗುತ್ತಾರೆ. ಕಿತ್ತು ತಿನ್ನುವ ಬಡತನ, ಕುಡುಕ ಗಂಡ, ಮನೆಯವರ ಕಿರುಕುಳ, ಬಿಟ್ಟುಹೋದ ಗಂಡ ವಿಧವಾ ಪಟ್ಟ ಇಂತಹ ಅನೇಕ ರೀತಿಯ ಕೌಟುಂಬಿಕ ಸಮಸ್ಯೆಗಳಿಂದ ಹೊರಬರುವ ಪ್ರಯತ್ನವೇ ಇಂದು ಗಾರ್ಮೆಂಟ್ ಉದ್ಯಮದಲ್ಲಿರುವ ಬಹುತೇಕ ಹೆಣ್ಣು ಮಕ್ಕಳನ್ನು ಅಲ್ಲಿನ ಎಲ್ಲ ಪರಿಸ್ಥಿತಿಗಳಿಗೂ ಹೊಂದಿಕೊಳ್ಳುವಂತೆ ಮಾಡಿದೆ.

ಮಹಿಳೆಯರನ್ನು ಗೂಬೆ, ನಾಯಿ, ಕತ್ತೆ, ಎಂದು ಪ್ರಾಣಿಗಳಿಗೆ, ಹೋಲಿಸಿ ಮಾತನಾಡುವುದು. ಅವರ ವಯಸ್ಸಿನ ಬಗ್ಗೆ ನಿಂದಿಸುವುದು. ಮಹಿಳೆಯರನ್ನು "ಅದು ಇದು" ಎಂದು ವಸ್ತುಗಳ ರೀತಿಯಲ್ಲಿ ಮಾತನಾಡಿಸುವುದು, ನಿನಗೆ ಇಷ್ಟು ವರ್ಷವಾಯಿತು ನಿನಗೆ ಕೆಲಸ ಮಾಡಲು ಆಗುವುದಿಲ್ಲ ಎಂದು ವಯಸ್ಸಿನ ಬಗ್ಗೆ ಚುಚ್ಚಿ ಮಾತನಾಡುವುದು. ದೈಹಿಕ ನ್ಯೂನತೆಗಳನ್ನು ಎತ್ತಿ ಅಪಹಾಸ್ಯ ಮಾಡುವುದು. ಇದೆಲ್ಲವೂ ಗಾರ್ಮೆಂಟ್ಸ್ ಫ್ಯಾಕ್ಟ್ರಿಯಲ್ಲಿ ದಿನನಿತ್ಯ ನಡೆಯುವ ಸಂಗತಿಯಾಗಿದೆ. ಮಾಲೀಕರು ನಿಗದಿಪಡಿಸಿದಷ್ಟು ಪ್ರೊಡಕ್ಷನ್ ಕೊಡಲಿಲ್ಲವಂದ್ರೆ ಕೇಳುವುದೇ ಬೇಡ ಮಹಿಳೆಯರನ್ನು ನಿಂದಿಸಿ ಅಪಹಾಸ್ಯ, ಅಶ್ಲೀಲ ಬೈಗುಳಗಳು ಕಟ್ಟಿಟ್ಟಬುತ್ತಿಯಾಗಿವೆ.

ಲೈಂಗಿಕ ಕಿರುಕುಳವನ್ನು ಕೆಲಸ ಮಾಡುವಾಗ ಮಹಿಳೆಯರು ಎದುರಿಸುತ್ತಿರುವ ಮೂದಲಿಕೆ, ನಿಂದನೆ, ಅಪಮಾನಗಳಿಗೆ ಬಹಳ ವ್ಯತ್ಯಾಸವಿದೆ. ಕೆಲವು ಮಹಿಳೆಯರಂತೂ ಇದಕ್ಕೆ ಎಷ್ಟು ಹೊಂದಿಕೊಂಡು ಬಿಟ್ಟಿರುತ್ತಾರೆಂದರೆ, ಸ್ವತಃ ಅವರೇ ಒಪ್ಪುವ ಹಾಗೆ ನಮ್ಮ ಮನೆಯಲ್ಲಿ ಅಣ್ಣತಮ್ಮಂದಿರು ಬೈಯುವುದಿಲ್ಲವೇ,

[illegible]

[illegible]

[illegible]

[illegible]

[illegible]

[illegible]

ಹಾಗೆಯೇ ಇವರೂ ಸಹ, ನಾವೇ ಹೊಂದಿಕೊಂಡು ಹೋಗಬೇಕು ಎಂದು ಹೇಳುತ್ತಾರೆ. ಆದರೆ ಮನೆಯಲ್ಲಿಯೂ ಸಹ ಅಣ್ಣ-ತಮ್ಮಂದಿರು ಈ ರೀತಿ ಬಯ್ಯುವುದು ಕಾನೂನಿಗೆ ವಿರುದ್ಧ ಎಂದು ಮಹಿಳೆಯರು ತಿಳಿದುಕೊಳ್ಳಬೇಕು. ಇವರ ಈ ರೀತಿಯ ಮನಸ್ಥಿತಿಯನ್ನು ಮಾಸ್ಟರುಗಳು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ.

ಈ ರೀತಿಯ ಬೈಗುಳ, ಅವಹೇಳನಗಳು ಮಹಿಳೆಯನ್ನು ಯಾವ ಮಟ್ಟಕ್ಕೆ ಮುಟ್ಟುತ್ತಿದೆ ಎಂಬುದನ್ನು ಇತ್ತೀಚೆಗೆ ಅಮ್ಮು ಎಂಬ ಮಹಿಳೆಯು ಕಾರ್ಖಾನೆಯ ಶೌಚಾಲಯದಲ್ಲಿಯೆ ಆತ್ಮಹತ್ಯೆ ಮಾಡಿಕೊಂಡ ಘಟನೆಯು ನಿರೂಪಿಸುತ್ತದೆ. ಆ ಮಹಿಳೆ ತನ್ನ ಸೂಪರ್‌ವೈಸರ್ ಒಬ್ಬರಿಂದ ದಿನನಿತ್ಯ ಅಶ್ಲೀಲ ಮಾತುಗಳನ್ನು ಕೇಳಿ ಕೇಳಿ ಕೊನೆಗೆ ಆತ್ಮಹತ್ಯೆಗೆ ಒಳಗಾಗುವ ಸ್ಥಿತಿ ಬಂದಿತು, ಎಂದು ದಿನಪತ್ರಿಕೆಗಳು ವರದಿ ಮಾಡಿವೆ.

ಬೆಂಗಳೂರು ಮೈಸೂರು ರಸ್ತೆಯಲ್ಲಿರುವ ಖಾಸಗಿ ಗಾರ್ಮೆಂಟ್ಸ ಕಾರ್ಖಾನೆಯಲ್ಲಿ ೨೦೦೦ಕ್ಕೂ ಹೆಚ್ಚಿನ ಮಹಿಳೆಯರು ಕೆಲಸಕ್ಕಿದ್ದಾರೆ. ೩-೪ ವರ್ಷಗಳಿಂದ ಈ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ರಮಾಳಿಗೆ ಸಹೋದ್ಯೋಗಿಯೊಬ್ಬ ಲೈಂಗಿಕ ಕಿರುಕುಳ ನೀಡುತ್ತಿದ್ದನು. ಇದನ್ನು ತಿಳಿದ ಮಾಲೀಕರು ಕಿರುಕುಳ ಕೊಡುತ್ತಿದ್ದವನ ಜೊತೆಗೆ ರಮಾಳನ್ನು ಕೆಲಸದಿಂದ ತೆಗೆದು ಹಾಕಿದರು. ಶಿವಮೊಗ್ಗದಿಂದ ಬಂದಿರುವಂತ ರಮಾ ಮಾತ್ರ ಮನೆಗೆ ಸೇರಿದಳು. ಅಂದರೆ ರಮಾಳಿಗೆ ಆಗಿರುವಂತಹ ಅನ್ಯಾಯವನ್ನು ಪ್ರತಿಭಟಿಸಿ ಮತ್ತೆ ಕೆಲಸ ಕೊಡಿಸುವವರಾಗಲಿ, ಪಡೆಯುವುದಾಗಲಿ ಯಾವುದೂ ಕೂಡ ಇಲ್ಲದಂಗಾಗಿದೆ. ಇದರಿಂದ ಅವಳ ಅಸಹಾಯಕತೆಯ ಪರಮಾವದಿ ಮಟ್ಟ ಎಲ್ಲಿಗೆ ಮುಟ್ಟುತ್ತಿದೆ ಎಂಬುದನ್ನು ಸಂಶೋಧನೆಗೆ ಒಳಪಡಿಸಿದಾಗ ತಿಳಿಯುತ್ತದೆ. ಯಾವುದೆ ತಪ್ಪು ಮಾಡದೆ ಇರುವಂತ ರಮಾ ಕೆಲಸಕಳೆದುಕೊಂಡು ಮನೆಯ ಆರ್ಥಿಕ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಕಷ್ಟದ ಪರಿಸ್ಥಿತಿಯನ್ನು ಎದುರಿಸುವುದು ಕಂಡುಬರುತ್ತದೆ. ಇಂತಹ ಹಲವಾರು ಘಟನೆಗಳನ್ನು ಪರಿಗಣಿಸಿದ ಮಹಿಳಾ ಸಂಘಟನೆಗಳಲ್ಲಿ ಕೌನ್ಸಿಲರ್ ಆಗಿರುವ ಪಂಕಜ ಅವರ ಪ್ರಕಾರ ಉದ್ಯೋಗಸ್ಥ ಮಹಿಳೆಯರ ಮೇಲೆ ಹೆಚ್ಚಿನ ದೌರ್ಜನ್ಯಗಳು ಕೆಲಸದ ಸ್ಥಳದಲ್ಲೇ ಸಹೋದ್ಯೋಗಿಗಳಿಂದ ಮೇಲಾಧಿಕಾರಿಗಳಿಂದ ಮಾನಸಿಕ, ಲೈಂಗಿಕ ಕಿರುಕುಳ ಹೆಚ್ಚುತ್ತಿವೆ.[೧೯]

"ಗಾರ್ಮೆಂಟ್ಸ ಕಾರ್ಮಿಕರ ಮೇಲೆ ಲೈಂಗಿಕ ಕಿರುಕುಳವಾದ ಬಗ್ಗೆ ಯಾವುದೇ ವರದಿಯಾಗಿಲ್ಲ."
ಬಿ. ಎನ್. ಬಚ್ಚೇಗೌಡ[೨೦] ಗಾರ್ಮೆಂಟ್ಸ - ೩.೫೫ ಲಕ್ಷ ಕಾರ್ಮಿಕರು

ಬೆಂಗಳೂರು : ರಾಜ್ಯದಲ್ಲಿ ಒಟ್ಟು ೯೨೦ ಗಾರ್ಮೆಂಟ್ಸ ಕಾರ್ಖಾನೆಗಳಿದ್ದು, ಅವುಗಳಲ್ಲಿ ೩.೬೨ ಲಕ್ಷ ಕಾರ್ಮಿಕರು ಕೆಲಸ ಮಾಡುತ್ತಿದಾರೆ. ಎಂದು ಕಾರ್ಮಿಕ ಸಚಿವ ಬಿ. ಎನ್. ಬಚ್ಚೇಗೌಡ ಗುರುವಾರ ವಿಧಾನಸಭೆಗೆ ತಿಳಿಸಿದರು. ಕಾಂಗ್ರೆಸ್ ನೆ.ಲ. ನರೇಂದ್ರಬಾಬು ಅವರ ಪ್ರಶ್ನೆಗೆ ಉತ್ತರಿಸಿದ

[illegible]

[illegible]

[illegible]

[illegible]

[illegible]

[illegible]

ಅವರು ಬೆಂಗಳೂರು ನಗರದಲ್ಲೇ ೯೧೦ ಗಾರ್ಮೆಂಟ್ಸ ಕಾರ್ಖಾನೆಗಳಿದ್ದು, ಅವುಗಳಲ್ಲಿ ೩.೩೫ ಲಕ್ಷ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ ಎಂದರು.

೫೦೦ ಮಂದಿಗೂ ಹೆಚ್ಚು ಕಾರ್ಮಿರಿರುವ ಕಡೆ ಕಡ್ಡಾಯವಾಗಿ ವೈದ್ಯರನ್ನು ನೇಮಿಸಬೇಕಿದೆ. ಆ ಪ್ರಕಾರ ೧೭೩ ಕಡೆ ವೈದ್ಯರನ್ನು ನೇಮಿಸಿದ್ದು ಕಾನೂನು ಪ್ರಕಾರ ಕೆಲಸಮಾಡುತ್ತಿದ್ದಾರೆ. ಎಂದು ಹೇಳಿದರು. ೬೭೯ ಕಡೆ ಕಲ್ಯಾಣ ಸಮಿತಿಗಳನ್ನು ರಚಿಸಿದ್ದು. ಯಾವುದೇ ಸಮಸ್ಯೆಗಳ ಬಗ್ಗೆ ಅಲ್ಲಿ ಚರ್ಚೆ ಸಬಹುದಾಗಿದೆ. ಗಾರ್ಮೆಂಟ್ಸಗಳಲ್ಲಿ ಮಹಿಳಾ ಕಾರ್ಮಿಕರ ಮೇಲೆ ಲೈಂಗಿಕ ಕಿರುಕುಳ ನೀಡಿದ ಯಾವ ಪ್ರಕರಣಗಳು ವರದಿಯಾಗಿಲ್ಲ ಎಂದು ಹೇಳಿದರು. ರಾಜ್ಯದಲ್ಲಿನ ದರ್ಜಿಗಳಿಗೂ ಸಾಮಾಜಿಕ ಭದ್ರತೆ ಒದಗಿಸಲು ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದರು. ಕಾಂಗ್ರೆಸ್‌ನ ಯು.ಟಿ. ಖದರ್ ಪ್ರಶ್ನೆಗೆ ಉತ್ತರಿಸಿ. ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರ ಕಾನೂನು ರಚನೆ ಮಾಡಲಿದ್ದು, ಆಗ ಇವರಿಗೆ ಅನುಕೂಲ ಕಲ್ಪಿಸುವುದಾಗಿ ತಿಳಿಸಿದರು.[೨೧]

ಕ್ಷೇತ್ರಾಧ್ಯಯನದ ಮಾಹಿತಿ ಪ್ರಕಾರ ಸಾಕಷ್ಟು ಲೈಂಗಿಕ ಕಿರುಕುಳದಿಂದ ಬಳಲುವ ಮಹಿಳಾ ಕಾರ್ಮಿಕರ ಉದಾಹರಣೆಗಳು ಸಿಕ್ಕಿವೆ. ಸತ್ಯಕ್ಕೆ ಸಾಕ್ಷಿ ಎನ್ನುವಂತೆ ಮಾಲೀಕರ ಲೈಂಗಿಕ ದೌರ್ಜನ್ಯದ ಕಾರಣದಿಂದಾಗಿ ಅಮ್ಮು, ರೇಣುಕಾ ಸತ್ತಿರುವ ಘಟನೆಯನ್ನು ಪರಿಗಣನೆಗೆ ತೆಗೆದುಕೊಳ್ಳಬಹದಾಗಿದೆ. ಅಂದರೆ ಸರ್ಕಾರ ಇವತ್ತಿನ ದಿನದಲ್ಲಿ ಮಹಿಳೆಯರ ಕುರಿತು ಯಾವ ಬಗೆಯ ಕೆಲಸ ಮಾಡುತ್ತಿದ್ದರು. ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ದಿನನಿತ್ಯ ಮಹಿಳಾ ಕಾರ್ಮಿಕರು ಲೈಂಗಿಕ ಹಿಂಸೆಯಿಂದ ಮಾನಸಿಕವಾಗಿ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ದುಡಿಮೆಯ ಅನಿವಾರ್ಯ ಕಾರಣಕ್ಕಾಗಿ ಯಾರ ಹತ್ತಿರನೂ ಹೇಳಿಕೊಳ್ಳಲಾಗದೆ ಹಲವು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ. ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಲೈಂಗಿಕ ಕಿರುಕುಳದಿಂದ ಎಷ್ಟೋ ಮಹಿಳೆಯರು ಮಾನಸಿಕ ಮತ್ತು ದೈಹಿಕ ಒತ್ತಡಗಳನ್ನು ತಾಳಲಾರದೆ ಆತ್ಮಹತ್ಯೆಗೊಳಗಾಗುವ ಘಟನೆಗಳನ್ನು ಪ್ರಾಥಮಿಕ ಮಾಹಿತಿಗಳಿಂದ ತಿಳಿದುಕೊಳ್ಳಬಹುದಾಗಿದೆ.

೪.೫.೪ ಮಕ್ಕಳ ಪಾಲನೆ ಪೋಷಣೆಯ ನಿರ್ವಹಿಸುವಲ್ಲಿ ಎದುರಿಸುವ ಸಮಸ್ಯೆ

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರಿಗೆ ಅತಿ ಹೆಚ್ಚು ಕಾಡುವ ಸಮಸ್ಯೆಗಳಲ್ಲಿ ಮಕ್ಕಳ ಜವಾಬ್ದಾರಿ ಹಾಗೂ ಪಾಲನೆ ಪೋಷಣೆ, ಏಕೆಂದರೆ ಅವರು ಕೆಲಸಕ್ಕೆ ಹೋದಾಗ ಮಕ್ಕಳ ಪಾಲನೆ ವ್ಯವಸ್ಥೆ ಮಾಡುವುದೆ ಒಂದು ದೊಡ್ಡ ತೊಂದರೆ. ಅದರಲ್ಲೂ ಹೆಚ್ಚಾನು ಹೆಚ್ಚು ಮಹಿಳೆಯರು ಬಹುಪಾಲು ಕೆಲಸ ಅರಸಿ ಪರ ಊರುಗಳಿಂದ ಬಂದಿರುವ ಕಾರಣ ಕೆಲವೊಮ್ಮೆ ಕುಟುಂಬದಲ್ಲಿ ಯಾವ ಸದಸ್ಯರೂ ಇರುವುದಿಲ್ಲ. ಕಾರ್ಖಾನೆಗಳಲ್ಲಿ ಕ್ರೀಚ್ ಇರುವುದಿಲ್ಲ. ಕೆಲವೇ ಕಾರ್ಖಾನೆಯಲ್ಲಿ ಇದ್ದರೂ ಅಲ್ಲಿನ ವ್ಯವಸ್ಥೆ ಚೆನ್ನಾಗಿಲ್ಲ, ಇಂತಹ ಸಂದರ್ಭದಲ್ಲಿ ಮಕ್ಕಳನ್ನು ಒಬ್ಬರೇ ಮನೆಯ ಬಳಿ ಆಟವಾಡಿಕೊಂಡಿರಲು ಬಿಡಬೇಕು, ಇಲ್ಲದೇ ತಮ್ಮ ಹುಟ್ಟಿದೂರಿನಲ್ಲಿ ತಾಯಿಯ ಮನೆಯಲ್ಲಿ ಬಿಡಬೇಕು, ಇವರದೇ ಈ ಮಹಿಳೆಯರಿಗೆ ಇರುವ ಅವಕಾಶಗಳು. ಬೆಂಗಳೂರು ಅಂತ ನಗರದಲ್ಲಿ ಪುಟ್ಟ ಮಕ್ಕಳನ್ನು ಮನೆಯ ಬಳಿ ಆಟವಾಡಲು ಬಿಡುವುದೂ ಸಹ ಒಳ್ಳೆಯದಲ್ಲ.

ಉದಾಹರಣೆಗೆ:–"ಎರಡು ವರ್ಷಗಳ ಹಿಂದೆ ಸುಂಕದ ಕಟ್ಟೆಯಲ್ಲಿ ವಾಸಿಸುತ್ತಿದ್ದ ಮಹಿಳಾ ಕಾರ್ಮಿಕರ ಪುಟ್ಟ ಮಕ್ಕಳಿಬ್ಬರು ಮಧ್ಯಾಹ್ನ ಶೌಚಾಲಯಕ್ಕೆಂದು ಕೆರೆಯ ಬಳಿಗೆ ಹೋಗಿ ಮುಳುಗಿ ಸಾವನ್ನಪ್ಪಿದ್ದರು. ಮತ್ತೊಂದು ಘಟನೆಯಲ್ಲಿ, ತಾಯಿಕೆಲಸಕ್ಕೆ ಹೋದ ಸಂದರ್ಭದಲ್ಲಿ ಮನೆಯಲ್ಲಿದ್ದ ೭ ಹಾಗೂ ೫ ವರ್ಷದ ಪುಟ್ಟ ಮಕ್ಕಳಿಬ್ಬರು ಟ.ವಿ. ಕಾರ್ಯಕ್ರಮವೊಂದನ್ನು ನೋಡುತ್ತಾ ಅದರಂತೆಯೇ ಬೆಂಕಿ ಹಚ್ಚಿಕೊಂಡು ಸುಟ್ಟು ಕರಕಲಾದ ಘಟನೆ ಎಂತಹವರ ಮನಸ್ಸಿಗೂ ನೋವಾಗುತ್ತದೆ. ಅದೇ ಮನೆಯಲ್ಲಿ ಮಕ್ಕಳು ಜವಾಬ್ದಾರಿಯನ್ನು ಹೊತ್ತುಕೊಳ್ಳುವವರಿದ್ದಾಗ ಈ ಘಟನೆ ನಡೆಯಲು ಸಾಧ್ಯವಿರುತ್ತಿದ್ದಿಲ್ಲ.

ಕ್ರೇಚ್ ವ್ಯವಸ್ಥೆಯ ಸಮಸ್ಯೆ

ಕಾನೂನಿನ ಪ್ರಕಾರ ಕಾರ್ಖಾನೆಯಲ್ಲಿ ೩೦ ಮಂದಿಗಿಂತ ಹೆಚ್ಚು ಮಹಿಳೆಯರಿದ್ದರೆ ಅಲ್ಲಿ ೭ ವರ್ಷದವರೆಗೂ ಮಕ್ಕಳನ್ನು ನೋಡಿಕೊಳ್ಳಲು ಸುಸಜ್ಜಿತ ಕ್ರೇಚ್ ಇರಲೇಬೇಕು, ಅಲ್ಲಿ ತೊಟ್ಟಿಲಿರಬೇಕು, ಆಟಿಗೆಗಳಿರಬೇಕು, ಹೊತ್ತು ಹೊತ್ತಿಗೆ ಮಕ್ಕಳಿಗೆ ಹಾಲು ಬ್ರೆಡ್, ಊಟ ವಿತರಿಸಬೇಕು, ಹಾಲುಕುಡಿಸುವ ತಾಯಂದಿರಿದ್ದರೆ ದಿನಕ್ಕೆ ಎರಡು ಬಾರಿ ಹಾಲು ಕುಡಿಸಲು ಬಿಡವುಕೊಡಬೇಕು. ತರಬೇತಿ ಪಡೆದ ಆಯಗಳನ್ನು ನೇಮಕಮಾಡಬೇಕು. ಇವೆಲ್ಲವೂ ಮಾಲೀಕರು ಕಡ್ಡಾಯವಾಗಿ ಪಾಲಿಸಲೇಬೇಕು.

ಆದರೆ ವಾಸ್ತವದಲ್ಲಿ ಕೆಲವೇ ಕಾರ್ಖಾನೆಗಳು ಕ್ರಷ್ ವ್ಯವಸ್ಥೆಯನ್ನು ಹೊಂದಿರುತ್ತವೆ. ಅವು ಸಹ ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ. ಮಕ್ಕಳನ್ನು ನೋಡಿಕೊಳ್ಳಲು ತರಬೇತಿ ಹೊಂದಿರುವ ಆಯಾಗಳು ಇಲ್ಲ. ಕೆಲವೊಂದು ಕಾರ್ಖಾನೆಗಳಲ್ಲಿ ಕಸಗೂಡಿಸುವ ಹಾಗೂ ಹೋಟೆಲ್‌ನಲ್ಲಿ ಟೀ, ಕಾಫಿ ಮಾಡುವ ತೊಳೆಯುವ ಕೆಲಸಗಾರರು ಮಕ್ಕಳನ್ನು ನೋಡಿಕೊಳ್ಳುವ ವ್ಯವಸ್ಥೆಗೆ ಕಲ್ಪಿಸಲಾಗಿರುತ್ತದೆ. ಕೆಲವೊಂದು ಕಾರ್ಮಿಕರ ಅನುಭವದಲ್ಲಿ ಮಕ್ಕಳಿಗೆ ನಿದ್ದೆ ಮಾತ್ರೆ ಹಾಕಿ ಮಕ್ಕಳನ್ನು ಯಾವಾಗಲೂ ಮಲಗಿಸಿರುತ್ತಾರೆ. ಕೆಲವೊಮ್ಮೆ ಜನರೇಟರ್ ರೂಮ್‌ನ ಪಕ್ಕದಲ್ಲಿ ಅಪಾಯಕಾರಿ ಸ್ಥಳದಲ್ಲಿ ಈ ಕ್ರೇಚ್‌ಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಮಕ್ಕಳ ಪಾಲನೆಯ ವ್ಯವಸ್ಥೆ ಹೀಗಿರುವಾಗ ಗಾರ್ಮೆಂಟ್ಸ ಮಹಿಳೆಯರ ಮಾನಸಿಕ ಮನಸ್ಥಿತಿ ಹೇಗಾಗಿರುತ್ತದೆ ಎಂಬುದನ್ನು ಯೋಚಿಸುವುದಕ್ಕೂ ಸಾಧ್ಯವಿಲ್ಲ. ಏಕೆಂದರೆ ಮಾಲೀಕರುಪ್ರೊಡಕ್ಷನ್ ಉತ್ಪಾದನೆಯನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳುತ್ತಾರೆ. ಆದರೆ ಕಾರ್ಮಿಕರ ಯೋಗಕ್ಷೇಮದ ಕುರಿತಾಗಲಿ, ಮಕ್ಕಳ ಪಾಲನೆ– ಪೋಷಣೆಯ ಕುರಿತಾಗಲಿ ಯಾವುದು ಕೂಡ ಯೋಚಿಸುವುದಿಲ್ಲ. ಒಂದು ಕಡೆ ಮಕ್ಕಳನ್ನು ಮನೆಯಲ್ಲಿ ಬಿಟ್ಟು ಬಂದ್ರೆ ಯಾರು ನೋಡಿಕೊಳ್ಳದೆ ಕೆಲವೊಂದು ಅನಾಹುತಗಳು ಆಗುವ ಉದಾಹರಣೆಗಳು ಸಿಗುತ್ತವೆ. ಒಂದು ವೇಳೆ ಮಕ್ಕಳನ್ನು ಕ್ರಷ ಇದೆ ಅಂತ ಕರೆದುಕೊಂಡು ಬಂದ್ರೆ ಫ್ಯಾಕ್ಟ್ರಿಯಲ್ಲಿ ಹೆಸರಿಗೆ ಕ್ರಷ ವ್ಯವಸ್ಥೆ ಮಾಡಿರುತ್ತಾರೆ. ಆದರೆ ವಾಸ್ತವದಲ್ಲಿ ಮಾತ್ರ ಯಾವ ಸವಲತ್ತನ್ನೂ ಒದಗಿಸಿರುವುದಿಲ್ಲ. ಮಕ್ಕಳಿಗೆ ಹಾಲು ಹಣ್ಣುಗಳ ವ್ಯವಸ್ಥೆ ಕೂಡ ಮಾಡಿರುವುದಿಲ್ಲ. ಸಂಶೋಧನೆ ಸಂದರ್ಭದಲ್ಲಿ ಎಷ್ಟೋ ಮಹಿಳೆಯರನ್ನು ಸಂದರ್ಶಿಸಿದಾಗ ಕೌಟುಂಬಿಕವಾಗಿ ಮತ್ತು

ಫ್ಯಾಕ್ಟ್ರಿಯಲ್ಲಿ ಎರಡು ಕಡೆ ಸಂಕಷ್ಟ ಪರಿಸ್ಥಿತಿಯನ್ನು ಎದುರಿಸುವುದನ್ನು ನೋಡಬಹುದಾಗಿದೆ. ಏಕೆಂದರೆ ಈ ಪುರುಷ ಪ್ರಧಾನ ಸಮಾಜ ವ್ಯವಸ್ಥೆ ಕುಟುಂಬದಲ್ಲಿ ಪುರುಷ ಮಕ್ಕಳ ಸಂತಾನೋತ್ಪತ್ತಿಗೆ ಕಾರಣವಾಗುತ್ತಾನೆ ವಿನಃ ಅವುಗಳ ಪಾಲನೆ– ಪೋಷಣೆಯ ಜವಾಬ್ದಾರಿಯನ್ನು ಹೊತ್ತುಕೊಂಡಿರುವುದಿಲ್ಲ. ಸಮಾಜ ವ್ಯವಸ್ಥೆ ಚಿಕ್ಕಂದಿನಿಂದಲು ಹೆಣ್ಣು ಮತ್ತು ಗಂಡು ಬೆಳೆಸುವಾಗಲೇ ಲಿಂಗ ನಿರ್ದಿಷ್ಟ ಪಾತ್ರವಹಿಸಿ ಹೆಣ್ಣೆಂದ್ರೆ ಮಕ್ಕಳನ್ನು ನೋಡಿಕೊಳ್ಳಬೇಕು, ಗಂಡನನ್ನು, ತಂದೆಯನ್ನು, ಹಿರಿಯರನ್ನು, ಒಟ್ಟಾರೆ ಕುಟುಂಬವನ್ನು ನೋಡಿಕೊಳ್ಳಬೇಕೆಂಬ ಮನಸ್ಥಿತಿಯನ್ನು ಸೃಷ್ಠಿಸಿರುತ್ತದೆ. ಅವಳ ಜೀವನ ಪೂರ್ತಿ ಕೌಟುಂಬಿಕ ಜವಾಬ್ದಾರಿಯನ್ನು ಹೊತ್ತುಕೊಂಡು ಯೋಗಕ್ಷೇಮವನ್ನು ಮಾಡುವುದೇ ಅವಳ ಕರ್ತವ್ಯವೆಂದು ಭಾವಿಸಿರುತ್ತದೆ. ಆದರೆ ಎಲ್ಲಿಯೂ ಪುರುಷನು, ಮಗು ಹುಟ್ಟಿನಿಂದ ಪ್ರತಿಯೊಂದು ಹಂತದಲ್ಲಿ ಯಾವ ಜವಾಬ್ದಾರಿಯನ್ನು ಹೊತ್ತುಕೊಳ್ಳದಿರುವುದನ್ನು ವಾಸ್ತವ ಸಂಗತಿಯಲ್ಲಿ ಕಾಣಬಹುದು. ಆದರೆ ಈ ಗಾರ್ಮೆಂಟ್ಸ ಮಹಿಳೆಯನ್ನು ತೆಗೆದುಕೊಂಡಾಗ ಕುಟುಂಬವನ್ನು ನೋಡಿಕೊಂಡು ಮಕ್ಕಳ ಪಾಲನೆಯ ಹೊಣೆಗಾರಿಕೆಯನ್ನು ಹೊರುವುದರ ಜೊತೆಗೆ ಆರ್ಥಿಕ ಉತ್ಪಾದನೆಯಲ್ಲಿ ಭಾಗಿಯಾಗಿ ಪ್ರತಿದಿನ ಗಾಣದೆತ್ತಿನ ತರಹ ದುಡಿಯುತ್ತಿದ್ದಾಳೆ. ಇನ್ನೊಂದು ಕಡೆ ಮಹಿಳೆಯರು ಫ್ಯಾಕ್ಟ್ರಿಗೆ ಮಕ್ಕಳನ್ನು ಕರೆದುಕೊಂಡು ಬಂದ್ರೆ ಅಲ್ಲಿ ಉತ್ತಮ ವಾತಾವರಣ ಇಲ್ಲದ ಸಂದರ್ಭವಿರುವ ಕಾರಣ ಮಾನಸಿಕ ಮತ್ತು ದೈಹಿಕ ನೋವನ್ನು ಅನುಭವಿಸುತ್ತಾಳೆ. ಏಕೆಂದರೆ ಮಕ್ಕಳು ಪದೇ ಪದೇ ಅತ್ತರೆ, ತೊಂದರೆ ಕೊಟ್ಟರೆ ಮಾಸ್ಟರ್‌ಗಳು ಕೆಲಸದಿಂದಲೇ ತೆಗೆದುಹಾಕುತ್ತಾರೆ, ಇದರಿಂದ ಮನೆಯ ಖರ್ಚನ್ನು ನೀಗಿಸುವುದು ತುಂಬಾಕಷ್ಟಕರವಾಗುತ್ತದೆ. ಮಾಸ್ಟರನು ಇನ್ನೂ ಸೂಕ್ಷ್ಮ ಒಳತಂತ್ರದಲ್ಲಿ ಟೈಲರನ ಮಕ್ಕಳಿಗೆ ಮಾತ್ರ ಕ್ರೇಚ್ ವ್ಯವಸ್ಥೆ ಮಾಡಿರುತ್ತಾರೆ. ಹೆಲ್ಪರ್ ಮಕ್ಕಳನ್ನು ಸೇರಿಸಿಕೊಳ್ಳುವುದಿಲ್ಲ. ಅಲ್ಲಿ ಟೈಲರ್ ಕೆಲಸವು ಪ್ರಮುಖವಾಗಿ ಹೆಲ್ಪರ್ ಕೆಲಸ ಅಪ್ರಮುಖವೆಂದು ಪರಿಗಣಿಸಲಾಗುತ್ತದೆ. ಇಂತಹ ಸಂದರ್ಭದಲ್ಲಿ ಗಾರ್ಮೆಂಟ್ಸ ಮಹಿಳೆಯರು ಮಕ್ಕಳನ್ನು ಮನೆಯಲ್ಲಿ ಬಿಟ್ಟು ಬರುವ ಹಾಗಿಲ್ಲ. ಕರೆದುಕೊಂಡು ಬರುವ ಹಾಗಿಲ್ಲ, ಜೊತೆಗೆ ಕೆಲಸನೂ ಕಳೆದುಕೊಳ್ಳುವಹಾಗಿಲ್ಲ ಇವು ಮೂರನ್ನೂ ಬ್ಯಾಲೆನ್ಸ್ ಮಾಡುವಲ್ಲಿ ಹರಸಾಹಸ ಪ್ರತಿಕ್ಷಣ ಮಾಡುತ್ತಿರುತ್ತಾರೆ.

“ಗಾರ್ಮೆಂಟ್ಸ ಮಹಿಳಾ ಕಾರ್ಮಿಕರ ಮುನ್ನುಡಿ; ಗಾರ್ಮೆಂಟ್ಸ ಮಹಿಳಾ ಕಾರ್ಮಿಕರು ಮಕ್ಕಳನ್ನು ಬೆಳೆಸುವಲ್ಲಿ ಕೆಲಸಕ್ಕೆ ಹೋಗುವಾಗ ಮಕ್ಕಳ ಪಾಲನೆಯನ್ನು ಹೇಗೆ ನಿಭಾಯಿಸುತ್ತಾರೆ ಎಂಬುದರ ಕುರಿತು ಒಂದು ಸಮೀಕ್ಷೆ ನಡೆಸಿದೆ. ಅದು ಈ ಕೆಳಗಿನಂತಿದೆ.

ಪಟ್ಟಿ 1. ಕಾರ್ಮಿಕರು ಹಾಗೂ ಮಕ್ಕಳ ವಿವಿರಗಳು (ಜೂನ್ 2008 ಸೂಜಿದಾರ)

ಕಾರ್ಖಾನೆ	ಕಾರ್ಮಿಕರ ಸಂಖ್ಯೆ	ಗಂಡು ಮಕ್ಕಳ ಸಂಖ್ಯೆ	ಹೆಣ್ಣು ಮಕ್ಕಳ ಸಂಖ್ಯೆ	ಒಟ್ಟು	7ವರ್ಷಕ್ಕಿಂತ ಕಡಿಮೆ ಇರುವ ಮಕ್ಕಳ ಸಂಖ್ಯೆ
ವಿಗೋಸಾ ಎಕ್ಸಪೋರ್ಟ್	30	27	24	51	18
ರಿಬೌಂಡ ಎಕ್ಸ್‌ಪೋರ್ಟ್	29	24	26	50	35

[illegible]

ಶಾಲಿನಿ ಕ್ರಿಯೇಶನ್ಸ್	30	29	24	53	24
ಎಚ್.ಪಿ.ಎಫ್	30	27	24	51	24
ಬಾಂಬಿಶಿಯಾನ್ ಫ್ಯಾಷನ್ಸ ಲಿ.	30	21	30	51	16
ಅರವಿಂದ ಮಿಲ್ಸ್	31	24	35	59	28
ಮಂದಾನ	30	30	31	51	28
ವಿ.ಎಫ್.ಇಂಡಿಯಾ	30	23	31	54	22
(ಟೆಸ್ಪ ಮಾರ್ಟ್ಸ ಇಂಡಸ್ಟ್ರೀಸ್ ವಿ.ಕೆ.ಎಎನ್ ಎಕ್ಸ ಪೋರ್ಟ್ಸ್	30	31	6	57	22
ಟೆಕ್ಸ್ ಮಾರ್ಟ್ಸ್ ಕ್ರಿಯೇಶನ್ಸ್	30	24	28	52	24

ಮೇಲಿನ ಸಮೀಕ್ಷೆಯಿಂದ ಎರಡು ವಿಷಯಗಳು ಸ್ಪಷ್ಟವಾಗುತ್ತವೆ.

1. ಸಂದರ್ಶನ ಮಾಡಿದ ಮೂರುನೂರು ಕಾರ್ಮಿಕರಲ್ಲಿ ಮಹಿಳೆಯರು ಮಕ್ಕಳನ್ನು ಹೊಂದಿರುವ ಸಂಖ್ಯೆ ಗಣನೀಯ ಪ್ರಮಾಣದಲ್ಲಿದೆ. ಮತ್ತು ಅವರು ನೋಡಿಕೊಳ್ಳುವ ಹೊಣೆಗಾರಿಕೆ ಮಹಿಳೆಯರ ಮೇಲಿದೆ.

2. ಹಿರಿಯರ ಪಾಲನೆ–ಪೋಷಣೆ ಮಕ್ಕಳಿಗೆ ತುಂಬಾ ಅವಶ್ಯವಾಗಿದೆ. ಸಂದರ್ಶನ ನಡೆಸಿದ ಕಾರ್ಮಿಕರ 529 ಮಕ್ಕಳಲ್ಲಿ, ಸುಮಾರು ಅರ್ಧದಷ್ಟು (46%) ಮಕ್ಕಳು 7 ವರ್ಷಕ್ಕಿಂತ ಚಿಕ್ಕವರು.

ಇಂತ ಮಹಿಳೆಯರು ಕಾರ್ಖಾನೆಯಲ್ಲಿ ಇರುವ ಕ್ರೇಚ್‌ಗಳನ್ನು ಅತಿ ಕಡಿಮೆ ಬಳಸಿಕೊಳ್ಳುತ್ತಾರೆ. 529 ಮಕ್ಕಳಲ್ಲಿ ಕೇವಲ 33 ಮಕ್ಕಳು ಕಾರ್ಖಾನೆಯ ಕ್ರೇಚ್ ಅನ್ನು ಬಳಸಿಕೊಳ್ಳುತ್ತಿದ್ದಾರೆ. ಏಕೆಂದರೆ ಕೆಲವೊಬ್ಬ ಮಹಿಳೆಯರನ್ನು ಪ್ರಶ್ನಿಸಿದಾಗ ನಮ್ಮ ಕಾರ್ಖಾನೆಯಲ್ಲಿ ಕ್ರೇಚ್ ವ್ಯವಸ್ಥೆ ಚೆನ್ನಾಗಿಲ್ಲದ್ದರಿಂದ ಪಕ್ಕದ ಮನೆಯವರಿಗೆ ದುಡ್ಡು ಕೊಟ್ಟು ನೋಡಿಕೊಳ್ಳಲು ಹೇಳುತ್ತೇವೆ. ಇನ್ನು ಕೆಲವರು ಈಗಾಗಲೇ ಕ್ರೇಚ್‌ನಲ್ಲಿ ತುಂಬಾ ಮಕ್ಕಳಿರುವುದರಿಂದ ನಮ್ಮ ಮಕ್ಕಳಿಗೆ ಪ್ರವೇಶ ಸಿಗಲಿಲ್ಲ ಎಂದು ಹೇಳುತ್ತಾರೆ.

ಕೆಲವೊಬ್ಬ ಮಹಿಳೆಯರು ನಾವು ಮಾಡುವ ಕಾರ್ಖಾನೆಯಲ್ಲಿ ಮೂರು ವರ್ಷದ ನಂತರ ಮಕ್ಕಳಿಗೆ ನೋಡಿಕೊಳ್ಳಲು ಅವಕಾಶವಿರುವುದಿಲ್ಲ. ಮೂರು ವರ್ಷ ಆದ ಮೇಲೆ ನಮ್ಮ ಮಕ್ಕಳನ್ನು ನಾವೇ ಹೊರತರಬೇಕು. ಇದರಿಂದ ಮತ್ತೆ ಮಕ್ಕಳನ್ನು ಹೇಗೆ ನೋಡಿಕೊಳ್ಳಬೇಕೆಂಬುದು ಪ್ರತಿ ನಿತ್ಯ ಪ್ರತಿ ಕ್ಷಣನೂ ಸಮಸ್ಯೆಯಾಗಿ ಕಾಡುತ್ತದೆ. ಮಾಲೀಕರು ನಮ್ಮ ಮಕ್ಕಳ ಜವಾಬ್ದಾರಿಯನ್ನು ಹೊತ್ತುಕೊಂಡಾಗ ನಿಶ್ಚಿಂತೆಯಿಲ್ಲದೆ ಅವರ ನಿರೀಕ್ಷೆಯಂತೆ ಪ್ರೊಡಕ್ಷನ್‌ನನ್ನು ಕೊಡಬಹುದು. ಆದರೆ ಮಾಲೀಕರ ಮತ್ತು ಗಂಡನ ಸಹಕಾರ ಸಹಾಯ ಇಲ್ಲದೆ ಮಕ್ಕಳನ್ನು ಹೇಗೆ ಬೆಳೆಸಬೇಕು ಎಂದು ಅವರ ಮುಂದಿನ ಭವಿಷ್ಯದ ಬಗ್ಗೆ ಚಿಂತೆ ಕಾಡುತ್ತಿರುತ್ತದೆ.

ಮಕ್ಕಳನ್ನು ನೋಡಿಕೊಳ್ಳುವ ವ್ಯವಸ್ಥೆ[22]

ಕಾರ್ಖಾನೆ	ಒಟ್ಟು ಮಕ್ಕಳು	ಸಂಬಧಿಕರು	ಪಕ್ಕದ ಮನೆ	ಪ್ಲೇಹೋಂ	ಕಾರ್ಖಾನೆ ಕ್ರೇಚ್	ಯಾರು ಇಲ್ಲ
ವಿಗೋಸಾ	51	37	0	1	0	13
ಎಕ್ಸಪೋರ್ಟ್ಸ್	50	15	13	1	6	11
ಎಬೌಂಡ್	53	23	02	0	7	16
ಎಕ್ಸ್‌ಪೋರ್ಟ್ಸ್	51	16	03	0	8	24
ಶಾಲಿನಿ ಕ್ರಿಯೆಶನ್ಸ್	51	27	0	3	0	16
ಎಚ್.ಪಿ.ಎಫ್	51	17	1	5	6	28
ಬಾಂಬೆಶಿಯನ್	59	17	7	6	2	18
ಫ್ಯಾಷನ್ಸ್ ಲಿ.	51	27	8	1	1	16
ಅರವಿಂದಮಿಲ್ಸ್	57	26	0	2	2	22
ಮಂದಾನ್	52	24	2	2	1	18
ವಿ.ಎಫ್.						
ಇಂಡಿಯಾ						
ಟೆಕ್ಸ್‌ಪೋರ್ಟ್						
ಕ್ರಿಯೇಶನ್ಸ್						

ಗಾರ್ಮೆಂಟ್ಸ ಮಹಿಳಾ ಕಾರ್ಮಿಕರು ಮಕ್ಕಳನ್ನು ನೋಡಿಕೊಳ್ಳುವಲ್ಲಿ ಆ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಂಡಿರುತ್ತಾರೆ.

1. ಮಹಿಳೆಯರು 4%ರಷ್ಟು ಮಕ್ಕಳನ್ನು ಮಾತ್ರ ಖಾಸಗಿ ಪ್ಲೇ ಹೋಮ್‌ಗೆ ಸೇರಿಸಿದ್ದಾರೆ. ಅಥವಾ ಆಯಾಗಳನ್ನು ನೇಮಿಸಿಕೊಂಡಿದ್ದಾರೆ. ಆದರೆ ಇದಕ್ಕೆ ಕಾರ್ಮಿಕರು ಸುಮಾರು 300 ರಿಂದ 500 ರೂ.ವರೆಗೂ ಪಾವತಿಸಬೇಕಾಗಿದೆ.

2. ಶೇ.7ರಷ್ಟು ಮಕ್ಕಳನ್ನು ಪಕ್ಕದ ಮನೆಯಲ್ಲಿ, ಗೆಳೆಯರ ಮನೆಯಲ್ಲಿ ಹಣ ಕೊಟ್ಟು ಬಿಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಕೆಲವೊಬ್ಬ ಮಹಿಳೆಯರಿಗೆ ಕೊಡುವ ಸಂಬಳನೇ ಕಡಿಮೆ ಇದ್ದಾಗ ಇದು ಕಷ್ಟಕರವಾಗಿರುತ್ತದೆ.

3. ಶೇ.43ರಷ್ಟು ಮಕ್ಕಳು ಕುಟುಂಬದ ಇತರ ಸದಸ್ಯರ ಪೋಷಣೆಯಲ್ಲಿ ಬೆಳೆಯುತ್ತಿದ್ದಾರೆ. ಕಾರ್ಮಿಕರು ತಮ್ಮ ಮಕ್ಕಳನ್ನು ತಾಯಿ, ಅತ್ತಿ, ಅಕ್ಕ ಕೆಲವೊಮ್ಮೆ ಮಗುವಿನ ತಂದೆಯ ಬಳಿ ಬಿಡುತ್ತಿದ್ದಾರೆ. ಇನ್ನು ಕೆಲವು ಕಾರ್ಮಿಕರು ತಮ್ಮ ಹುಟ್ಟೂರು ಎಷ್ಟೇ ದೂರದಲ್ಲಿದ್ದರೂ (ಚನ್ನಪಟ್ಟಣ, ಮಳವಳ್ಳಿ, ಆಂದ್ರಪ್ರದೇಶ) ಅಲ್ಲಿಯೇ ತಮ್ಮ ತಾಯಿ, ಅತ್ತೆಯ ಬಳಿ ಬಿಟ್ಟಿದ್ದಾರೆ. ಇದರಿಂದ ಮಕ್ಕಳು ಬಾಲ್ಯದಲ್ಲಿಯೇ ತಾಯಿಯಿಂದ ದೂರವಿರುವ ಪರಿಸ್ಥಿತಿ ಒದಗಿದೆ.

4. ಸುಮಾರು ಶೇ.34ರಷ್ಟು ಮಕ್ಕಳನ್ನು ಯಾರೂ ನೋಡಿಕೊಳ್ಳುವುದಿಲ್ಲ. ಇದರಲ್ಲಿ 3–4 ವಯಸ್ಸಿನ ಮಕ್ಕಳೂ ಇದ್ದಾರೆ. ಅತಿ ಹೆಚ್ಚಿನ ಮಕ್ಕಳು ಶಾಲೆ ಬಿಟ್ಟ ಮೇಲೆ ತಮ್ಮ ತಂದೆ ತಾಯಿ ಬರುವವರೆಗೂ ಮನೆ ಹತ್ತಿರಾನೆ ಆಟವಾಡುತ್ತಿದ್ದಾರೆ. ಹೀಗಾಗಿ ಸ್ವಲ್ಪ ದೊಡ್ಡ ಮಗುವಿಗೆ ತನ್ನ ತಂಗಿ ಮತ್ತು ತಮ್ಮನನ್ನು ನೋಡಿಕೊಳ್ಳುವ ಜವಾಬ್ದಾರಿಯು ಚಿಕ್ಕ ವಯಸ್ಸಿನಿಂದಲೇ ಬೀಳುತ್ತಿದೆ.

ಪಿತೃಪ್ರಧಾನ ವ್ಯವಸ್ಥೆ ಅನ್ನುವುದು ಹೆಣ್ಣನ್ನೇ ಕೇಂದ್ರದಲ್ಲಿಟ್ಟುಕೊಂಡು, ಮಕ್ಕಳು ಆದರೂ ಕೂಡ ಅವರ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಮಾನಸಿಕವಾಗಿ ನೋವನ್ನು ಅನುಭವಿಸುತ್ತಾರೆ. ಏಕೆಂದರೆ (ಉತ್ಪಾದನೆ) ಅವರು ದುಡಿಯದಿದ್ದರೆ ಜೀವನ ಸಾಗಿಸಲು ಸಾಧ್ಯವಿಲ್ಲ. ಈ ಗಾರ್ಮೆಂಟ್ಸ್ ಮಹಿಳೆಯರನ್ನೇ ತೆಗೆದುಕೊಂಡಾಗ ಫ್ಯಾಕ್ಟ್ರಿ ಕೆಲಸಕ್ಕೆ ದುಡಿಯಲು ಹೋಗಲೇಬೇಕು ಇಲ್ಲದಿದ್ದರೆ ಉಪವಾಸವೇ ಗತಿ, ಹೀಗಿದ್ದಾಗ ತಾವು ಕೆಲಸಕ್ಕೆ ಹೋಗಿ ಬರುವ ತನಕ ಮಕ್ಕಳ ಕಡೆ ಮಾನಸಿಕವಾಗಿ ಯೋಚಿಸುತ್ತಿರುತ್ತಾರೆ. ದೇಹ ಫ್ಯಾಕ್ಟ್ರಿಯಲ್ಲಿ ಕೆಲಸಮಾಡುತ್ತಿದ್ದರೂ ಮನಸ್ಸು ಮಾತ್ರ ಮಕ್ಕಳು ಏನು ಮಾಡುತ್ತವೆ, ಹೇಗೆ ಇರುತ್ತಾವೋ, ಎಂಬುದರ ಬಗ್ಗೆನೆ ಆಲೋಚಿಸುತ್ತದೆ, ಒಂದೊಂದು ಸಾರಿ ಸೀಜನ್ ಇದ್ದ ಸಂದರ್ಭದಲ್ಲಿಯಂತೂ ಮಾಸ್ಟರ್‌ಗಳು ಪ್ರೊಡಕ್ಷನ್ ಉತ್ಪಾದನೆಯನ್ನು ಹೆಚ್ಚು ಡಿಮ್ಯಾಂಡ್ ಮಾಡಿದಾಗಂತೂ ಅವರ ಮನಸ್ಥಿತಿ ಹೇಳಲಾರದು. ಮಾಸ್ಟರ್‌ಗಳಿಗೆ ವಿರೋದ ಮಾಡದೇ, ಕೆಲಸನೂ ಮಾಡಕ್ಕಾಗದೆ ಒದ್ದಾಡುವ ಸ್ಥಿತಿಯನ್ನು ಕಾಣಬಹುದು. ಆದರೆ ವ್ಯವಸ್ಥೆ, ಒಂದು ವೇಳೆ ಮಕ್ಕಳಾಗದೆ ಇದ್ದ ಸಂದರ್ಭದಲ್ಲಿ ಮಾತ್ರ ಅವಳನ್ನ ದೋಷಿಸುತ್ತದೆ. ಒಟ್ಟಾರೆ ಸಮಾಜ ಮತ್ತು ಕುಟುಂಬ ಹೆಣ್ಣನ್ನು ಆರೋಪದ ದೃಷ್ಟಿಕೋನದಲ್ಲಿ ಬಂದಿಸುವ ಪ್ರಯತ್ನ ಮಾಡುತ್ತಿರುತ್ತದೆ. ಒಂದು ವೇಳೆ ಮಕ್ಕಳ ಬಗ್ಗೆ ಕಾಳಜಿವಹಿಸದೆ ಇದ್ದರೆ ಆಕೆಯೆಂತ ತಾಯಿ, ಅವಳು ಒಬ್ಬಳು ಹೆಣ್ಣು ಇನ್ನಿತರ ಸಾಂಪ್ರದಾಯಿಕ ಮನಸ್ಥಿತಿಯನ್ನು ಮೂಡಿಸುವ ಮೂಲಕ ಅವಳನ್ನು ವ್ಯವಸ್ಥೆಯಲ್ಲಿ ಕಟ್ಟಿಹಾಕುತ್ತಿರುತ್ತದೆ.

೪.೫.೫ ಸಾರಿಗೆ ಸಮಸ್ಯೆ

ಪ್ರಪಂಚದಲ್ಲಿ ಅಥವಾ ದೇಶದಲ್ಲಿ ಹಲವಾರು ಕಾರ್ಖಾನೆಗಳಲ್ಲಿ ದುರ್ಘಟನೆಗಳು ನಡೆಯುತ್ತಿದ್ದರೂ, ಅಧಿಕಾರಕ್ಕೆ ಯಾವ ಸರ್ಕಾರ ಬಂದರೂ ಕೂಡ ಯಾವ ಸರ್ಕಾರವಾಗಲಿ, ಆಡಳಿತ ವರ್ಗವಾಗಲಿ ಗಮನಹರಿಸದೆ ಇರುವುದು ವಿಪರ್ಯಾಸದ ಸಂಗತಿಯಾಗಿದೆ. ಐಟಿ, ಬಿಟಿಗಳ ಕಂಪೆನಿಗಳಲ್ಲಿ ಕೆಲವೊಂದು ಚಿಕ್ಕ ಪುಟ್ಟ ಘಟನೆಗಳಾದರೂ ಸಾಕು ಮಾಧ್ಯಮಗಳೂ ದೊಡ್ಡದಾಗಿ ಮೊದಲ ಮುಖಪುಟದಲ್ಲಿ ಚಿತ್ರ ಪ್ರಪಂಚದ್ಯಾದಂತ ಸುದ್ದಿ ಮಾಡುತ್ತವೆ. ಆದರೆ ಅದೇ ಗಾರ್ಮೆಂಟ್ಸ ಮಹಿಳೆಯರನ್ನೇ ತೆಗೆದುಕೊಂಡಾಗ,

ಅವರ ಅನ್ನದ ಪ್ರಶ್ನೆಯಾಗಲಿ, ವಸತಿ, ಸಾರಿಗೆ ಪ್ರಶ್ನೆಯಾಗಲಿ, ಕೊನೆಗೆ ದಿನನಿತ್ಯ ಅನುಭವಿಸುವ ಲೈಂಗಿಕ ಕಿರುಕುಳದ ಬಗ್ಗೆ ಎಷ್ಟೇ ಕಂಪ್ಲೆಂಟ್ಸ್ ಬಂದರೂ, ಅದರ ಹಿಂಸೆತಾಳಲಾರದೆ ಆತ್ಮಹತ್ಯೆಗೆ ಒಳಗಾದರೂ ಮಾಧ್ಯಮದವರಾಗಲಿ, ಸರ್ಕಾರವಾಗಲಿ, ಯಾವುದಕ್ಕೂ ಅಷ್ಟಾಗಿ ತಲೆಕೆಡಿಸಿಕೊಳ್ಳುವುದಿಲ್ಲ. ಬೇಲಿನೇ ಎದ್ದು ಹೊಲ ಮೇಯ್ದಂಗೆ ಎನ್ನುವಂತೆ ಸರ್ಕಾರವೇ ಇದಕ್ಕೆ ನ್ಯಾಯಕೊಡುವುದರ ಬದಲು ಮಾಲೀಕರಿಂದ ಲಕ್ಷಾಂತರ ರೂಪಾಯಿ ಪಡೆದುಕೊಂಡು ಅನ್ಯಾಯವನ್ನೆ ಮುಚ್ಚಿಹಾಕುತ್ತಾರೆ. ಇಂತಹ ಸಂದರ್ಭದಲ್ಲಿ ಗಾರ್ಮೆಂಟ್ಸ್ ಮಹಿಳೆಯರನ್ನು ಸಮಸ್ಯೆಗಳಿಗೆ ಎಷ್ಟೇ ಕಾನೂನುಗಳು ಬಂದಿರಲಿ, ಯಾವ ಸರ್ಕಾರವೇ ಅಧಿಕಾರಕ್ಕೆ ಬಂದ್ರು ಅಷ್ಟೇ, ಶೋಷಣೆ ತಪ್ಪಿದ್ದಲ್ಲ. ಏಕೆಂದರೆ ಇಡೀ ವ್ಯವಸ್ಥೆಯೇ ಪುರುಷ ಪ್ರಧಾನ ಸಮಾಜವಾಗಿರುವುದರಿಂದ ಹೆಣ್ಣನ್ನು ಕೇವಲ ಬಳಕೆ ಉಪಯೋಗಿ ವಸ್ತುವಾಗಿ ನೋಡುತ್ತದೆ ವಿನಃ ಅವಳಿಗೂ ಮನಸ್ಸಿದೆ ಎಂಬುದು ಆಲೋಚಿಸುವುದಿರಲಿ, ದೇಹವಾಗಿ ನೋಡಿದರೂ ಅವಳಿಗೆ ಮೂಲಭೂತ ಅವಶ್ಯಕತೆಗಳೂ ಬೇಕು ಎಂದು ಯೋಚಿಸುವುದಿಲ್ಲ. ಬಂಡವಾಳಶಾಹಿ ವ್ಯವಸ್ಥೆ ಉದ್ದೇಶ ಪೂರ್ವಕವಾಗಿಯೂ ಪ್ರಕೃತಿಯಲ್ಲಿ ಭಿನ್ನವಾಗಿದ್ದಾಳೆಂದು ತಿಳಿದಿದ್ದರೂ, ಶೌಚಾಲಯ, ವಿಶ್ರಾಂತಿ, ಕ್ಯಾಂಟಿನ್, ಸಾರಿಗೆ ವ್ಯವಸ್ಥೆಯ ಅಗತ್ಯ ಇದ್ದರೂ ಕೂಡ ಅನಾಹುತಗಳು, ಅಪಘಾತಗಳಾದರೂ ಕೂಡ ಯಾವುದನ್ನು ಲೆಕ್ಕಿಸದೆ ಅವರ ಜೀವಕ್ಕೆ ಬೆಲೆನೂ ಕೂಡದೆ ಕೇಲಸನ್ನೆ ಮುಚ್ಚಿಹಾಕುತ್ತಾರೆ. ಉದಾಹರಣೆ:- ಬೆಂಗಳೂರಿನಲ್ಲಿ ಇತ್ತೀಚಿನ ದಿನಗಳಲ್ಲಿ ಹಲವಾರು ಗಾರ್ಮೆಂಟ್ಸ ಕಾರ್ಖಾನೆಗಳು ಮಹಿಳೆಯರಿಗೆ ಕೆಲಸ ಕೊಡುವಲ್ಲಿ ಮುಂದೆ ಬರುತ್ತವೆ. ಆದರೆ ಮಾಲೀಕರುಮಾತ್ರ ಉದ್ದೇಶಪೂರ್ವಕವಾಗಿ ಕಾರ್ಮಿಕರ ಯಾವುದೆ ಸವಲತ್ತುಗಳನ್ನು ಒದಗಿಸಿಕೊಡ್ತಿಲ್ಲ ಎಂಬುದಕ್ಕೆ ಹಲವಾರು ಘಟನೆಗಳು ಸಾಕ್ಷಿಯಗಿ ನಿಲ್ಲುತ್ತವೆ. ಕಾನೂನು ಪ್ರಕಾರ ಸೌಲಭ್ಯಗಳು ಮತ್ತು ಸುರಕ್ಷತೆಯನ್ನು ಕಾರ್ಮಿಕರಿಗೆ ಮಾಲೀಕರು ಒದಗಿಸಲೇಬೇಕು ಎಂಬ ನಿಯಮವಿದ್ದರೂ ಹಣ, ಅಧಿಕಾರ ನೆಲೆಯಲ್ಲಿ ಎಲ್ಲವೂ ಗಾಳಿಗೆ ತೂರಲ್ಪಡುತ್ತಿವೆ.

ಇತ್ತೀಚೆಗೆ ಪೀಣ್ಯದ ೧೩ನೇ ಅಡ್ಡರಸ್ತೆಯಲ್ಲಿರುವ ಒಂದು ಗಾರ್ಮೆಂಟ್ಸ್ ಕಾರ್ಖಾನೆಯ ಕಾರ್ಮಿಕರು ೩ನೇ ಪಾಳಿಯನ್ನು ಮುಗಿಸಿಕೊಂಡು ರಾತ್ರಿ ೧೨ ಗಂಟೆಗೆ ಮನೆಗೆ ನಡೆದುಕೊಂಡು ಹೋಗುವಾಗ ದರೋಡೆಕೋರರು ಅವರಿಂದ ವಾಚು, ಮೊಬೈಲ್ ಅಲ್ಪ ಸ್ವಲ್ಪವಿದ್ದ ಹಣವನ್ನು ದೋಚಿಕೊಂಡು ಪರಾರಿಯಾಗಿದ್ದಾರೆ. ಎರಡನೆ ಶಿಫ್ಟ್ ಮುಗಿಸಿಕೊಂಡು ಹೊರಗೆ ಬಂದರೆ ಯಾವುದೇ ಬಸ್ ವ್ಯವಸ್ಥೆ ಇರುವುದಿಲ್ಲ. ಕಾರ್ಮಿಕರು ಈ ಸಮಸ್ಯೆಯನ್ನು ಹೇಗೆ ಬಗೆಹರಿಸಿಕೊಳ್ಳುತ್ತಾರೆ ಎಂಬ ಯೋಚನೆ ಮಾಲಿಕರಿಗಿಲ್ಲ. ಗೊರಗುಂಟೆ ಪಾಳಿಯ ಕಾರ್ಮಿಕರು ೨ನೇ ಪಾಳಿ ಮುಗಿಸಿಕೊಂಡು ಪೀಣ್ಯ ಲಗ್ಗೆರೆಯ ಮೂಲಕ ಕಾರ್ಖಾನೆಯ ಬಸ್ಸಿನಲ್ಲಿ ಬರುತ್ತಿರಬೇಕಾದರೆ ೪ ಜನರ ದರೋಡೆಕೋರರ ಗುಂಪೊಂದು ಬಸ್ಸನ್ನು ನಿಲ್ಲಿಸಿ ಕಾರ್ಮಿಕರಿಂದ ಹಣ, ಮೊಬೈಲ್ ವಸ್ತುಗಳನ್ನು ದೋಚಿದ್ದಾರೆ. ಪುರುಷರಿಗೇ ಹೀಗಾಗಿರುವ ಸಂದರ್ಭದಲ್ಲಿ ಇನ್ನು ಮಹಿಳೆಯರ ಪರಿಸ್ಥಿತಿಯಂತೂ ಹೇಳತೀರದು. ಸ್ತ್ರೀವಾದಿಗಳ ಮುಖ್ಯ ತರ್ಕವೆಂದರೆ ಮಹಿಳೆಗೆ ಕೌಟುಂಬಿಕ ಮತ್ತು ಸಾರ್ವಜನಿಕ ವಲಯದಲ್ಲಾಗಲಿ, ಎಲ್ಲಿಯೂ ಕೂಡ ಅವಳಿಗೆ ರಕ್ಷಣೆ ಇಲ್ಲ. ಒಂದು ಕಡೆ ಶೀಲ ಪಾತಿವ್ರತ್ಯ ಎನ್ನುವ ಸಾಂಪ್ರದಾಯಿಕ ಮನಸ್ಥಿತಿ ಕಲ್ಪಿಸಿ ಯಾವಾಗಲೂ ಪ್ರತಿಕ್ಷಣ ತನ್ನ ದೇಹಕ್ಕೆ ಏನಾಗುತ್ತೆ ಎಂಬುದನ್ನು ಆಲೋಚಿಸುವ ಆತಂಕವನ್ನೇ ಸೃಷ್ಟಿಸುತ್ತದೆ.

[illegible]

[illegible]

ಮೈಸೂರು ರಸ್ತೆಯ ಒಂದು ಗಾರ್ಮೆಂಟ್ಸ್ ಫ್ಯಾಕ್ಟ್ರಿಯಲ್ಲಿ ಕೆಲಸ ಮಾಡುತ್ತಿರುವ ಮೂವರು ಮಹಿಳೆಯರ ಗುಂಪು ಸಂಜೆ ಕೆಲಸ ಮುಗಿಸಿ ಬೇಗ ಮನೆಗೆ ಹೋಗುವ ಆತುರದಲ್ಲಿದ್ದಾಗ, ಕಾರ್ಖಾನೆಯ ಮುಂದೆ ಬಂದ ಯಾವುದೋ ಖಾಸಗಿ ವಾಹನವನ್ನು ಹತ್ತಿಕೊಂಡಿದ್ದಾರೆ. ವಾಹನದ ಡ್ರೈವರ್ ಹಾಗೂ ಇತರು ಈ ಯುವತಿಯರಿಗೆ ಯಾವುದೋ ಪಾನೀಯವನ್ನು ಕೊಟ್ಟು ಜ್ಞಾನ ತಪ್ಪಿಸಿ ಒಬ್ಬ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿ ರಸ್ತೆಯಲ್ಲಿ ಬಿಸಾಡಿ ಹೋಗಿದ್ದಾರೆ. ಕಾರ್ಖಾನೆಯ ಆಡಳಿತ ವರ್ಗದವರು ಕಾರ್ಮಿಕರ ಸುರಕ್ಷತೆಯ ನಿರ್ಲಕ್ಷತೆಯನ್ನು ಎತ್ತಿ ತೋರಿಸುತ್ತದೆ. ಸ್ವಲ್ಪ ಮಟ್ಟಿಗಾದರೂ ಕರ್ಮಿಕರ ಸುರಕ್ಷತೆ ಬಗ್ಗೆ ಯೋಚಿಸಿದ್ದರೂ ಈ ಘಟನೆ ಆಗದೆ ಇರುವ ರೀತಿಯಲ್ಲಿ ನೋಡಿಕೊಳ್ಳಬಹುದಾಗಿತ್ತು. "ಪೀಣ್ಯಾ ಕೈಗಾರಿಕ ಪ್ರದೇಶದಲ್ಲಿರುವ ಇನ್ನೊಂದು ಕಾರ್ಖಾನೆಯ ಬಾಯ್ಲರ್ ಸಿಡಿದು ಹಲವಾರು ಕಾರ್ಮಿಕರಿಗೆ ಗಾಯಗಳು ಉಂಟಾಗಿವೆ. ಹೆಚ್ಚಿನ ಪ್ರಮಾಣದಲ್ಲಿ ಸಾವು ನೋವುಗಳು ಸಂಭವಿಸಿಲ್ಲವಾದರೂ ಘಟನೆಯ ತೀವ್ರತೆಯು ಗಂಭೀರವಾಗಿದೆ.[೨೩] ಬೆಂಗಳೂರಿನಿಂದ ಮೈಸೂರಿನವರೆಗೂ ಇರುವ ಹಲವು ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಮಹಿಳೆಯರ ಸ್ಥಿತಿಯಂತೂ ತುಂಬ ಶೋಚನೀಯ. ಹೊತ್ತಿಗೆ ಸರಿಯಾಗಿ ಬಾರದ ಬಸ್ಸುಗಳು ಪ್ರಯಾಣಿಕರನ್ನು ಮಿತಿಮೀರಿ ತುಂಬಿಕೊಂಡು ಬರುವ ಮೆಟಡೋರ್‌ಗಳನ್ನು ಕಾಯುತ್ತ ಭಯದ ನೆರಳಿನಲ್ಲಿ ನಿಂತಿರುತ್ತಾರೆ. ಈ ಮಹಿಳೆಯರು ಹೆಬ್ಬಾಳದ ಫ್ಯಾಕ್ಟ್ರಿಯೊಂದರಲ್ಲಿ ಕೆಲಸ ಮಾಡುತ್ತಿರುವ ಮಂಜುಳ ಎಂಬುವವರು ಫ್ಯಾಕ್ಟ್ರಿ ೬ ಗಂಟೆಗೆ ಬಿಟ್ಟರೂ ಕೂಡ ನಮ್ಮ ಹಳ್ಳಿಗೆ ಹೋಗುವ ಬಸ್ ಬರುವುದು ೭.೪೫ ಅಥವಾ ೮ ಗಂಟೆಗೆ. ಅಲ್ಲಿಯವರೆಗೆ ಬಸ್ ನಿಲ್ದಾಣದಲ್ಲಿ ಕೂಡಲು ಜಗವಿಲ್ಲದೆ ಕಾಯುತ್ತಿರಬೇಕು. ಈ ಸಂದರ್ಭದಲ್ಲಿ ಪುಂಡ ಪೋಕರಿಗಳ ಕಾಟ, ದರೋಡೆಕೋರರ ಕಾಟಕ್ಕೆ ವಾಚನ್ನು ಬ್ಯಾಗ್‌ನಲ್ಲಿ ಇಟ್ಟುಕೊಂಡಿರುತ್ತೇವೆ ಎನ್ನುತ್ತಾಳೆ.

ಸರ್ಜಾಮರ ಠಾಣೆಯ ಸಬ್ ಇನ್ಸಪೆಕ್ಟರ್ ನಾಗರಾಜ್ ಹೇಳುವಂತೆ ಪಿಕ್‌ಪಾಕೆಟ್ ಸರಗಳ್ಳತನ ಮೊಬೈಲ್ ಕಳ್ಳತನ ಮೋಸ ಇಂತ ಪ್ರಕರಣಗಳು ನಗರದ ಹೊರವಲಯದಲ್ಲಿರುವ ಆಫೀಸ್‌ಗಳ ಬಳಿ ಹೆಚ್ಚು ನಡೆಯುತ್ತವೆ. ಫ್ಯಾಕ್ಟ್ರಿ ಕಾಯಿದೆಯಡಿ ಮನೆಯಿಂದ ಫ್ಯಾಕ್ಟ್ರಿಗೆ ಕೆಲಸಗಾರರ ಓಡಾಟಕ್ಕೆ ಸುರಕ್ಷಿತ ಸೌಲಭ್ಯ ಕಲ್ಪಿಸುವುದು ಉದ್ಯೋಗದಾತ ಕಂಪನಿಗಳ ಜವಾಬ್ದಾರಿ. ಆದರೆ ಐಟಿ ಕಂಪನಿಗಳಿಂದ ಹಿಡಿದು ಸಾಮಾನ್ಯ ಕಾರ್ಖಾನೆಗಳವರೆಗೆ ಯಾರು ಈ ನಿಯಮಗಳತ್ತ ಗಮನ ಹರಿಸುತ್ತಿಲ್ಲ.[೨೪]

ಒಂದರ ಮೇಲೊಂದು ಸರಣಿ ಅಪಘಾತ ಸಂಭವಿಸಿದರೂ ಎಚ್ಚೆತ್ತುಕೊಳ್ಳದೆ ನಿರ್ಲಕ್ಷ್ಯ ತೋರಿಸುತ್ತಿರುವ ಬಾಂಬೆಶಿಯಾನ್ ಫ್ಯಾಶನ್ಸ್ ಲಿ. ಆಡಳಿತ ವರ್ಗವು ಕಾರ್ಮಿಕರ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ.

ದಿನಾಂಕ ೦೪-೦೬-೨೦೦೮ರಂದು, ಬಾಂಬೇಶಿಯಾನ್ ಫ್ಯಾಶನ್ಸ್ ಲಿ.ನ ಬಸ್ ಅಪಘಾತಕ್ಕೀಡಾಗಿದೆ.

[illegible]

[illegible]

[illegible]

“ದಿನಾಂಕ ೦೪-೦೬-೨೦೦೯ರಂದು ಚಿಕ್ಕ ಮುದುವಾಡಿಯಿಂದ ಮೈಸೂರು ರಸ್ತೆಯಲ್ಲಿರುವ ಎಲ್.ಎನ್.ಜಿ. ಕಾರ್ಖಾನೆಗೆ ಕರೆತರುತ್ತಿದ್ದ ಮಿನಿಬಸ್ ವಾಹನವು ಗೋಪಹಳ್ಳಿ ಕೆರೆಯ ಏರಿಯ ಮೇಲೆ ಬರುವಾಗ ಕೆಳಗೆ ಉರುಳಿಬಿದ್ದು ಸುಮರು ೧೮ ಮಂದಿ ಕಾರ್ಮಿಕರು ಗಾಯಗೊಂಡಿದ್ದಾರೆ.

ಬಾಂಬೆಶಿಯಾನ್ ಕಾರ್ಖಾನೆಗೆ ಬಸ್ ಅಪಘಾತವೆಂಬುದು ಹೊಸದಲ್ಲ. ೨೦೦೬ರಲ್ಲಿ ಕಾರ್ಖಾನೆಯ ಬಸ್ ಅಪಘಾತಕ್ಕೀಡಾಗಿ ಕಾರ್ಮಿಕರು ಕೈಕಾಲು ಮುರಿದುಕೊಂಡಿದ್ದರು. ೨೦೦೭ರ ಏಪ್ರಿಲ್‌ನಲ್ಲಿ ಗಾಯಿತ್ರಿ ಎಂಬ ಕಾರ್ಮಿಕರು ಕಾರ್ಖಾನೆಯ ಬಸ್ ಡಿಕ್ಕಿ ಹೊಡೆದು ಸ್ಥಳದಲ್ಲಿ ಸಾವೀಗಿಡಾಗಿದ್ದರು. ೨೦೦೮ ರಲ್ಲಿಯೂ ಕಾರ್ಖಾನೆಯ ಬಸ್ ಅಪಘಾತದಲ್ಲಿ ೨೦ ಕಾರ್ಮಿಕರು ಗಾಯಗೊಂಡು ಚಿಕಿತ್ಸೆಗೆ ಒಳಗಾಗಿದ್ದಾರೆ.[೨೫]

ಕಾರ್ಮಿಕರನ್ನು ಕರೆತರುವ ವ್ಯವಸ್ಥೆ ಮಾಡುವುದೇ ದೊಡ್ಡ ವಿಷಯ ಎಂಬ ಧೋರಣೆ ತೋರುವ ಆಡಳಿತ ವರ್ಗದವರು ಈ ರೀತಿ ಸರಣಿ ಅಪಘಾತಗಳು ನಡೆಯುತ್ತಿದ್ದರೂ ಯಾವುದೇ ಮುಂಜಾಗ್ರತವಾಗಿ ಯಾವ ಕ್ರಮಗಳನ್ನು ಕೈಗೊಳ್ಳದೇ ಕಾರ್ಮಿಕರ ಸುರಕ್ಷತೆಯನ್ನು ನಿರ್ಲಕ್ಷಿಸುತ್ತಿದ್ದಾರೆ ಎಂಬುದಕ್ಕೆ ಈ ಘಟನೆಗಳು ತಲೆ ಎತ್ತಿನಿಂತಿವೆ.

ಮೈಸೂರು ರೋಡಿನಲ್ಲಿ ಬರುವ ಗಾರ್ಮೆಂಟ್ಸ್ ಕಾರ್ಖಾನೆಯೊಂದು ಕಾರ್ಮಿಕರಿಗೆ ಸಾರಿಗೆ ವ್ಯವಸ್ಥೆಯನ್ನು ಒದಗಿಸಲಿಲ್ಲ. ಇದರಿಂದ ಹಳ್ಳಿಗಳಿಂದ ಬರುವ ಕಾರ್ಮಿಕರಿಗೆ ತಮ್ಮ ಪ್ರಯಾಣದ ಧರವನ್ನು ನೀಗಿಸುವುದು ಕಷ್ಟವಾಗುತ್ತದೆ. ಕಂಪನಿಯು ಕೆಲಸಗಾರರಿಗೆ ಪ್ರಾಥಮಿಕ ಅವಶ್ಯಕತೆಯನ್ನು ಪೂರೈಸದಿರುವುದರಿಂದ ಸುಮಾರು ೬೦೦ ಜನ ಸ್ವತಃ ತಾವೇ ಕೆಲಸವನ್ನು ಬಿಟ್ಟು ಹೋಗುವ ಸಂದರ್ಭ ಒದಗಿಬಂದಿತು. ಇದರಿಂದ ೬೦೦ ಜನ ಮಹಿಳಾ ಕಾರ್ಮಿಕರ ಕುಟುಂಬಕ್ಕೆ ಆದಾರಯಿಲ್ಲದೆ ಮನೆ ಖರ್ಚನ್ನು ನಿರ್ವಹಿಸಕ್ಕಾಗದೆ ಮಾನಸಿಕವಾಗಿ ಹೆಣಗಾಡುತ್ತಿದ್ದರು. ಇದರಿಂದ ಮಾಲೀಕರಿಗೆ ಏನು ತೊಂದರೆ ಇಲ್ಲ. ಏಕೆಂದರೆ ಈ ಕಾರ್ಮಿಕರಲ್ಲದಿದ್ದರು ಮತ್ತೊಬ್ಬ ಕಾರ್ಮಿಕರೂ ಸಿಕ್ಕೆಸಿಗುತ್ತಾರೆ. ಆದರೆ ನಕರಾತ್ಮಕ ಪರಿಣಾಮಗಳೆಲ್ಲವೂ ಮಹಿಳೆಯರಿಗೆ ಕಾರಣವಾಗುತ್ತದೆ.

ಈ ಎಲ್ಲಾ ಘಟನೆಗಳನ್ನು ಪರಿಗಣಿಸಿದಾಗ ಅಧಿಕಾರಶಾಹಿ ಬಂಡವಾಳಶಾಹಿ ವ್ಯವಸ್ಥೆಯು ಕಾರ್ಮಿಕರ ಯೋಗಕ್ಷೇಮವನ್ನು ಯಾವ ಸ್ಥಾನದಲ್ಲಿ ಇರಿಸಿದೆ ಎಂಬುದು ತಿಳಿಯಬಹುದಾಗಿದೆ. ಬದುಕು ಮಾಡಲು ಜೀವವೇ ಮುಖ್ಯ. ಅದೇ ಇಲ್ಲದೆ ಇದ್ದರೆ ಜೀವನನೇ ಅಂತ್ಯವಾಗುತ್ತದೆ. ಹೀಗಾಗಿ ಕಾರ್ಮಿಕರಿಗೆ ಸಾರಿಗೆ ವ್ಯವಸ್ಥೆಯನ್ನು ಉತ್ತಮ ರೀತಿಯಲ್ಲಿ ಒದಗಿಸಿಕೊಟ್ಟರೆ ಅವರ ಜೀವಕ್ಕೂ, ಜೀವನಕ್ಕೂ ದಾರಿ ಮಾಡಿ ಕೊಡುತ್ತದೆ. ಸಾವು ಎನ್ನುವುದು ತುಂಬಾ ಭಯಾನಕವಾಗಿರುವಂತಹದು. ಹೀಗಿರುವಾಗ ಕಾರ್ಮಿಕರ ಪ್ರಾಣಕ್ಕೆ ಬೆಲೆನೆ ಇಲ್ಲ. ಮೊದಲಿನಿಂದಲೂ ಬಂದಿರುವ ಸಾಂಪ್ರದಾಯಿಕ ವ್ಯವಸ್ಥೆಯು ಹೆಣ್ಣಿಗೆ ಹಲವಾರು ನಿರ್ಬಂಧಗಳನ್ನು ಹೇರಿದೆ. ಅಂತಹದರಲ್ಲಿ ಗಾರ್ಮೆಂಟ್ ಮಹಿಳಾ ಕಾರ್ಮಿಕರ ಅತ್ಯಾಚಾರಮಾಡಿ ಬಿಸಾಕಿದಾಗ ಈ ಪುರುಷ ಪ್ರಧಾನ ಸಮಾಜ ಹೆಣ್ಣಿನ ದೇಹಕ್ಕೂ, ಪ್ರಾಣಕ್ಕೂ ಎಷ್ಟು ಬೆಲೆಕೊಡುತ್ತಿದೆ ಎಂಬುದನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಗೊತ್ತಾಗುತ್ತದೆ.

[illegible]

೪.೫.೬ ಇನ್ನಿತರ ಸಮಸ್ಯೆಗಳು

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ಒಂದು ಕ್ಷಣಾನೂ ಬಿಡುವಿಲ್ಲದೆ ದುಡಿಯುತ್ತಿರುವುದನ್ನು ಕಾಣಬಹುದಾಗಿದೆ. ಕಾರ್ಖಾನೆಯಲ್ಲಿ ಪ್ರೊಡಕ್ಷನ್ ಒತ್ತಡ ಮನೆಯಲ್ಲಿ ಕೆಲಸದ ಒತ್ತಡ ಇವುಗಳಿಂದ ಅವರ ಆರೋಗ್ಯದ ಕಡೆಗೆ ಗಮನ ಹರಿಸಲು ಸಾಧ್ಯವಾಗುವುದಿಲ್ಲ. ಪ್ರತಿ ನಿತ್ಯ ಗಾರ್ಮೆಂಟ್ಸ್ ಮಹಿಳೆಯರು ಬೆನ್ನುನೋವು, ತಲೆನೋವು ಕಣ್ಣುನೋವು, ಉಸಿರಾಟದ ತೊಂದರೆ, ಮುಟ್ಟಿನ ತೊಂದರೆ ಇತ್ಯಾದಿಗಳನ್ನು ಅನುಭವಿಸುತ್ತಲೇ ಇದ್ದಾರೆ. ಆದರೆ ಇವುಗಳ ಕಡೆಗೆ ಗಮನ ಹರಿಸದೇ ಉಪೇಕ್ಷಿಸುತ್ತಿರುವುದೇ ಹೆಚ್ಚು. ತೀರಾ ತಡೆಯಲು ಸಾಧ್ಯವಿಲ್ಲ ಎಂದಗ ಹತ್ತಿರದ ಖಾಸಗಿ ವೈದ್ಯರ ಬಳಿ ಹೋಗುತ್ತಾರೆ. ಆದರೆ ಈ ಆರೋಗ್ಯದ ಸಮಸ್ಯೆಗಳೆಲ್ಲ ತಾವು ಮಾಡುತ್ತಿರುವ ಕೆಲಸದ ಪರಿಣಾಮದಿಂದ ಎಂದು ಮಹಿಳಾ ಕಾರ್ಮಿಕರು ತಿಳಿದುಕೊಳ್ಳುವ ಅವಶ್ಯಕತೆ ಇಂದು ಬಹಳ ಇದೆ. ಪ್ರತಿನಿತ್ಯ ಎಂಟರಿಂದ ಹತ್ತು ಗಂಟೆಗಳಕಾಲಕುಳಿತು ಅಥವಾ ನಿಂತು ಕೆಲಸ ಮಾಡುತ್ತಿರುವುದು, ಏಕಾಗ್ರತೆಯಿಂದ ಸೂಜಿಯನ್ನೇ ದಿಟ್ಟಿಸುತ್ತಾ ಹೊಲಿಯುವುದು, ಧೂಳು ತುಂಬಿದ ವಾತವರಣ, ಪೌಷ್ಟಿಕ ಆಹಾರದ ಕೊರತೆ, ಮಾನಸಿಕ ಒತ್ತಡ ಇವುಗಳ ಪರಿಣಾಮವನ್ನು ಅನುಭವಿಸಬೇಕಾಗಬಹುದು. ಬಂಡವಾಳಶಾಹಿ ವ್ಯವಸ್ಥೆ ಕಾರ್ಖಾನೆಯಲ್ಲಿ ಕೆಲಸಮಾಡುವ ಕಾರ್ಮಿಕರನ್ನಂತೂ ಪ್ರಾಣಿಗಳಿಗಿಂತ ಕಡೆಯಾಗಿ ನಡೆಸಿಕೊಳ್ಳುವ ಕಾನೂನಿನ ಪ್ರಕಾರ ವ್ಯವಸ್ಥೆಯಿದೆ. ಅದನ್ನು ಉಲ್ಲಂಘಿಸಿದರೆ ಶಿಕ್ಷಿಸಲು ಅಧಿಕಾರಿಗಳಿದ್ದಾರೆ ಆದರೂ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ದುಡಿಯುತ್ತಿರುವ ಕಾರ್ಮಿಕರ ಆರೋಗ್ಯ ಹಾಗೂ ಸುರಕ್ಷತೆ ಯಾವ ಮಟ್ಟಕ್ಕೆ ಮುಟ್ಟಿದೆ ಎಂಬುದನ್ನು ಅಧ್ಯಯನ ಸಂದರ್ಭದಲ್ಲಿ ತಿಳಿದುಕೊಳ್ಳಬಹುದಾಗಿದೆ.

ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ವಯಸ್ಸು ಸಾಮಾನ್ಯವಾಗಿ ೧೮ರಿಂದ ೩೫ ವರ್ಷ. ಹದಿನೆಂಟು ವರ್ಷಕ್ಕೆ ಕೆಲಸಕ್ಕೆ ಸೇರಿ ಸುಮಾರು ೧೫ ರಿಂದ ೨೦ವರ್ಷ ದುಡಿಯುವ ಹೊತ್ತಿಗೆ ಅವರ ಶಕ್ತಿ ಸಾಮರ್ಥ್ಯವೆಲ್ಲ ಮುಗಿದಿರುತ್ತದೆ. ನಂತರ ಈ ಕಾರ್ಮಿಕರ ಮುಂದಿನ ಭವಿಷ್ಯ ಏನು? ಮಾಲೀಕರು ಕಾರ್ಮಿಕರ ಆರೋಗ್ಯವಾಗಲಿ, ಸುರಕ್ಷತೆಯ ಬಗ್ಗೆಯಾಗಲಿ ಯಾವುದರ ಬಗ್ಗೆನೂ ಯೋಚಿಸುವುದಿಲ್ಲ. ವಿಶ್ರಾಂತಿ ಇಲ್ಲದೆ ದಿನಕ್ಕೆ ಎಂಟರಿಂದ ಹದಿನಾಲ್ಕು ಗಂಟೆಗಳ ಕಾಲ ಕೆಲಸ ಧೂಳು ಅಪಾಯಕಾರಿ ರಾಸಾಯನಿಕಗಳನ್ನು ಹೊಂದಿರುವ ಬಟ್ಟೆಯ ಬಣ್ಣ ಯಂತ್ರಗಳಿಂದ ಆಗುವ ಸಣ್ಣ ಅಪಘಾತಗಳು ವಿದ್ಯುತ್ ಅಪಘಾತಗಳು ಸಮಯಕ್ಕೆ ಸರಿಯಾಗಿ ಊಟವಿಲ್ಲದೆ ಇರುವುದು, ಎಂಟರಿಂದ ಹದಿನಾಲ್ಕು ಗಂಟೆಯವರೆಗೂ ಸತತವಾಗಿ ನಿಂತು ಅಥವಾ ಕುಳಿತು ಕೆಲಸ ಮಾಡುವುದು ಕೆಲಸಕ್ಕೆ ತಕ್ಕಂತಹ ವೇತನವಿಲ್ಲದಿರುವುದರಿಂದ ಪೌಷ್ಠಿಕ ಆಹಾರದ ಕೊರತೆ ಜೊತೆಗೆ ಕಾರ್ಖಾನೆಯಲ್ಲಿ ಆಗುತ್ತಿರುವ ಶೋಷಣೆಗಳು ಇವೆಲ್ಲವುಗಳಿಂದ ಮಹಿಳೆಯರು ಹಲವಾರು ರೀತಿಯ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಿದ್ದಾರೆ.

ಸಾಮಾನ್ಯವಾಗಿ ಗಾರ್ಮೆಂಟ್ಸ್ ಕಾರ್ಖಾನೆಗಳಿಗೆ ಬರುವ ಮಹಿಳೆಯರೆಲ್ಲರೂ ಸುಮಾರು ಹದಿನಾಲ್ಕರಿಂದ ಹದಿನಾರು ವರುಷಗಳಿಂದಲೇ ಸೇರಿರುತ್ತಾರೆ. ಇದರಲ್ಲಿ ಎರಡು ವಿಧದಲ್ಲಿ ಕೆಲಸ ನಿರ್ವಹಿಸುತ್ತಾರೆ. ಎಂಟರಿಂದ ಹದಿನಾಲ್ಕು ಗಂಟೆಗಳವರೆಗೆ ಕುಳಿತೆ ಕೆಲಸಮಾಡುವ ಟೈಲರ್‌ಗಳು,

[illegible]

ನಿಂತುಕೊಂಡೆ ಕೆಲಸ ಮಾಡುವ ಹೆಲ್ಪರ್‌ಗಳು, ಐರನ್‌ಗಳು, ಚೆಕರಗಳು, ಟ್ರಿಮರ್‌ಗಳು, ಕಟ್ಟಿಂಗ್ ವಿಭಾಗದಲ್ಲಿ ಕೆಲಸಮಾಡುವುದರಿಂದ ಬೆನ್ನು ನೋವು ಮಂಡಿ ನೋವು, ಕೈಕಾಲಹರಿತ, ಕಾಲುನೋವು ಇನ್ನಿತರವುಗಳಿಂದ ಬಳಲುತ್ತಾರೆ.

ಕಾರ್ಮಿಕರು ಊಟ ಮಡಲು ಬಿಡುವಿಲ್ಲದೆ ಕಾರ್ಖಾನೆಯಲ್ಲಿ ದುಡಿಯುತ್ತಿರುವುದರಿಂದ ಹಾಗೂ ಪ್ರೊಡಕ್ಷನ್ ಒತ್ತಡಗಳಿಂದ ಹೆಚ್ಚಿನ ಕಾರ್ಮಿಕರು ಟಿ.ಬಿ. ಕಾಯಿಲೆಯಿಂದ ಬಳಲುತ್ತಿದ್ದಾರೆ. "ಬೆಂಗಳೂರಿನ ರಾಜಾಜಿನಗರದ ಇ.ಎಸ್.ಐ. ಆಸ್ಪತ್ರೆಯಲ್ಲಿ ಟಿ.ಬಿ.ಕಾಯಿಲೆಯಿಂದ ಬರುವ ಶೇಕಡಾ ೮೫ ಮಹಿಳೆಯರು ಗಾರ್ಮೆಂಟ್ಸ್ ಕಾರ್ಮಿಕರು ಎಂದು ವೈದ್ಯರೊಬ್ಬರು ಹೇಳುತ್ತಾರೆ. ಹೆಚ್ಚು ನೀರು ಕುಡಿದರೆ ಶೌಚಾಲಯಕ್ಕೆ ಪದೇ ಪದೇ ಹೋಗಬೇಕೆಂದು ಕಾರ್ಮಿಕರು ನೀರನ್ನೇ ಕುಡಿಯದೆ ಕೆಲಸ ನಿರ್ವಹಿಸುತ್ತಿದ್ದಾರೆ. ಇದರಿಂದ ಮೂತ್ರಾಶಕ್ಕೆ ಸಂಬಂಧ ಪಟ್ಟ ತೊಂದರೆಗಳೂ, ಮುಟ್ಟಿನ ತೊಂದರೆಗಳನ್ನು ಸಹ ಅನುಭವಿಸುತ್ತಿದ್ದಾರೆ.[೨] ಕೆಲವೊಬ್ಬ ಮಹಿಳೆಯರು ಮಾಲೀಕರು ಮಾತನಾಡುವ ಅವಾಚ್ಯ ಶಬ್ದಗಳಿಂದ ನಿಂದಿಸುವುದು, ಅವಮಾನಿಸುವುದು ಸಣ್ಣ ಮಕ್ಕಳಿಗೆ ಶಿಕ್ಷೆಕೊಡುವ ಹಾಗೆ ಗಂಟೆಗಟ್ಟಲೆ ಎಲ್ಲರ ಮುಂದೆ ಅವಮಾನಿಸುವುದು ,ಹೊರಗೆ ನಿಲ್ಲಿಸುವುದು, ಲೇಟಾಗಿ ಬಂದ್ರೆ ಗೇಟ್ ಹೊರಗಡೆ ನಿಲ್ಲುಸುವುದು. ಅವರು ಪ್ರತಿದಿನ ಮಾಡುವ ಕೆಲಸ ನೀಡದೆ ಬೇರೆ ಬೇರೆಯ ಕೆಲಸ ನೀಡುವುದು. ಮತ್ತೊಂದು ಕೆಲಸಕ್ಕೆ ವರ್ಗಾಯಿಸುವುದು, ಇನ್ನು ಅನೇಕ ರೀತಿಯಲ್ಲಿ ಮಾನಸಿಕ ಕಾಯಿಲೆಗೆ ಒಳಗಾಗುವ ಹಾಗೆ ಸೂಪರ್‌ವೈಸರುಗಳು ಪ್ಲೋರ್ ಇನ್‌ಚಾರ್ಜಗಳು ಶೋಷಣೆ ನಡೆಸುತ್ತಿದ್ದಾರೆ. ಇದರಿಂದ ಕಾರ್ಮಿಕರು ಅವಮಾನಕ್ಕೊಳಗಾಗಿ ಆತ್ಮಹತ್ಯೆಯನ್ನು ಸಹ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಗೊತ್ತಾಗುತ್ತದೆ, ಮಾಲೀಕರುಕಾರ್ಮಿಕರನ್ನು ಯಾವ ಮಟ್ಟದಲ್ಲಿ ನಡೆಸಿಕೊಳ್ಳುತ್ತಾರೆ ಎಂಬುದು. ಜೊತೆಗೆ ಕಾರ್ಖಾನೆಯ ಆಡಳಿತಾಧಿಕಾರಿಗಳ ಅತಿಯಾದ ಸಮಯ ಪಾಲನೆಯಿಂದಾಗಿ ಕಾರ್ಮಿಕರು ಹಲವಾರು ರೀತಿಯ ಅಪಘಾತಗಳಿಗೀಡಾಗುತ್ತಾರೆ. ಕೆಲವರು ಗಂಭೀರವಾಗಿ ಗಾಯಗೊಂಡರೆ ಕೆಲವರು ಪ್ರಾಣವನ್ನೇ ಕಳೆದುಕೊಳ್ಳುತ್ತಿದ್ದಾರೆ. ಕಾರ್ಮಿಕರು ತೆಗೆದುಕೊಳ್ಳುವ ಕಡಿಮೆ ಸಂಬಳಕ್ಕೆ ಯಾರೂ ಸಹ ಸರ್ಕಾರಿ ಬಸ್ಸುಗಳನ್ನು ಅವಲಂಬಿಸದೆ ನಡದೇ ಹೋಗುತ್ತಾರೆ. ಆದರೆ ಗ್ರಾಮಾಂತರ ಪ್ರದೇಶಗಳಿಂದ ಕೆಲಸಕ್ಕೆ ಬರುವ ಕಾರ್ಮಿಕರು ಹೆಚ್ಚಾದ ಸಾರಿಗೆ ವೆಚ್ಚವನ್ನು ಭರಿಸಲಾಗದೇ ಖಾಸಗಿ ಬಸ್ಸು, ಲಾರಿ, ಟೆಂಪೂಗಳನ್ನು ಅವಲಂಬಿಸಿ ಫ್ಯಾಕ್ಟ್ರಿಗೆ ಬರುತ್ತಾರೆ, ಇದರಿಂದ ಕೆಲವೊಬ್ಬ ಕಾರ್ಮಿಕರಿಗೆ ಕೆಲವೊಂದು ಸಂದರ್ಭದಲ್ಲಿ ಅತ್ಯಾಚಾರಗಳು ಆಗುವ ಸಂಭವಗಳು ಇವೆ. ಇದರಿಂದ ಕುಟುಂಬದಲ್ಲಿ ಮಾತ್ರ ಅತಿ ಹೆಚ್ಚು ಸಮಸ್ಯೆಗಳು ಅರೋಪಗಳು ಅವಳ ಮೇಲೆ ಬೀಳುತ್ತವೆ. ವಿಪರ್ಯಾಸದ ಸಂಗತಿಯೆಂದರೆ ಕಾರ್ಮಿಕರಿಗೆ ತಮಗಾಗುತ್ತಿರುವ ಅನ್ಯಾಯ ಶೋಷಣೆಗಳಿಗೆ ತಮ್ಮ ಕೆಲಸದ ಒತ್ತಡವೇ ಕಾರಣವೆಂದು ತಿಳಿಯದಿರುವಷ್ಟು ಅಮಾಯಕ ಸ್ಥಿತಿಯಲ್ಲಿರುತ್ತಾರೆ. ಮಾಲೀಕರುಕಾರ್ಮಿಕರ ಸುರಕ್ಷತೆ ಹಾಗೂ ಆರೋಗ್ಯದ ವಿಷಯದಲ್ಲಿ ಎಷ್ಟರ ಮಟ್ಟಿಗೆ ನಿರ್ಲಕ್ಷಕ್ಕೆ ಒಳಗಾಗುತ್ತಿದ್ದಾರೆ ಎಂಬುದನ್ನು ಈ ಕೆಳಗಿನ ವರದಿ ಪ್ರಕಾರ ತಿಳಿಸುತ್ತವೆ.

೧. ಕಲುಷಿತ ನೀರು ಕುಡಿದು ೮೦ ಕಾರ್ಮಿಕರು ಆಸ್ಪತ್ರೆಗೆ ದಾಖಲಾಗಿರುವುದು (೨೦೦೪)

೨. ಕಲುಷಿತ ನೀರು ಕುಡಿದು ೨೦ ಮಂದಿ ಕಾರ್ಮಿಕರು ಅಸ್ವಸ್ಥರಾದುದು (೨೦೦೬)

೩. ಕಲುಷಿತ ನೀರು ಕುಡಿದು ೨೬೦ ಕಾರ್ಮಿಕರು ಅಸ್ವಸ್ಥರಾದುದು (೨೦೦೮)

೪. ಉಸಿರಾಟದ ತೊಂದರೆಯಿಂದ ಹಲವಾರು ಕಾರ್ಮಿಕರು ಎ.ಎಸ್.ಐ. ಗೆ ದಾಖಲಾಗಿರುವುದು (೨೦೦೮)

೫. ಪೌಷ್ಠಿಕ ಆಹಾರವಿಲ್ಲದೆ, ಒತ್ತಡದಿಂದ ಹಲಾವಾರು ಕಾರ್ಮಿಕರು ಟಿ,ಬಿ, ಕಾಯಿಲೆಗೆ ತುತ್ತಾಗಿರುವುದು. (೨೦೦೭-೨೦೦೮)

೬. ಬಸ್ಚಾರ್ಜ್ ಹೆಚ್ಚು ಕೊಡಬೇಕೆಂದು ಲಾರಿಯಲ್ಲಿ ಹತ್ತಿ ;ಮಹಿಳಾ ಕಾರ್ಮಿಕರೊಬ್ಬರು ಚಾಲಕನಿಂದ ಅತ್ಯಾಚಾರಕ್ಕೆ ಒಳಗಾಗಿದ್ದು (೨೦೦೬)

೭. ಮ್ಯಾನೇಜ್‌ಮೆಂಟ್‌ನವರು ನೀಡುವ ದೈಹಿಕ ದಂಡನೆ ಪರಿಣಾಮವಾಗಿ (Corporeal punishment) (ಬೈಗುಳ, ಎಲ್ಲರ ಮುಂದೆ ನಿಲ್ಲಿಸುವದು ಅವಮಾನಿಸುವುದು) ಇದರ ಕಾರಣದಿಂದಾಗಿ ಅಮ್ಮು, ರೇಣುಕಾ, ಶಿಲ್ಪಾರ ಅತ್ಮಹತ್ಯೆಗಳು.

೮. ಅತಿ ಕಟ್ಟುನಿಟ್ಟಿನ ಸಮಯಪಾಲನೆಯಿಂದ ಸಂಭವಿಸುತ್ತಿರುವ ಅಪಘತಗಳು - ಬಾಂಬಿಶಿಯಾನ್ ೩ ಅಪಘಾತ, ಕಾರ್ಮಿಕರ ದುರ್ಮರಣಗಳು (೨೦೦೬-೨೦೦೮)

೯. ರಜೆಯ ನಿರಾಕರಿಸುತ್ತಿರುವುದರಿಂದ ಸಾವು ನೋವುಗಳು (೨೦೦೭) (ಮಾರ್ಚ್೨೦೦೮)

ಗಾರ್ಮೆಂಟ್ಸ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಎಲ್ಲ ರೀತಿಯ ಕಾನೂನುಗಳೂ ಇದ್ದರೂ ಸಹ ಯಾವ ಕಾರ್ಮಿಕ ಕಾನೂನುಗಳೂ ಜಾರಿಗೊಂಡಿಲ್ಲ. ಸಂಬಂಧಪಟ್ಟ ಸರ್ಕಾರಿ ಇಲಾಖೆಗಳು ಇದರ ಕಡೆ ಗಮನವನ್ನು ಹರಿಸುತ್ತಿಲ್ಲ. ಅಧಿಕಾರಿಗಳೇ ಕಾರ್ಖಾನೆಗಳ ಮಾಲೀಕರ ಪರವಾಗಿ ಮಾತನಾಡುತ್ತಾರೆ, ಕಾರ್ಮಿಕರಿಗೆ ಕೆಲಸ ದೊರತಿರುವುದೇ ದೊಡ್ಡದು ಎಂಬಂತೆ ವರ್ತಿಸುತ್ತಿದ್ದಾರೆ. ಕಾನೂನುಗಳು ಸರಿಯಾಗಿ ಪಾಲನೆಯಾಗುತ್ತಿಲ್ಲದ ಕಾರಣದಿಂದಲೇ ಕಾರ್ಮಿಕರು ಈ ರೀತಿ ಆರೋಗ್ಯ ಹಾಗೂ ಸುರಕ್ಷತೆಗೆ ಸಂಬಂಧಪಟ್ಟ ಹಲವಾರು ತೊಂದರೆಗೊಳಗಾಗುತ್ತಿದ್ದಾರೆ.

ಇದಕ್ಕಿಂತ ಹೆಚ್ಚು ಘಟನೆಗಳು ಸಂಬಂವಿಸಿದರೂ ಯಾವ ಕಾನೂನಾಗಲಿ, ಆಡಳಿತಶಾಹಿ ವರ್ಗವಾಗಲಿ ಕಾರ್ಮಿಕರ ಸಾವು ನೋವಿನ ಬಗ್ಗೆ ಬೆಲೆಕೊಡುತ್ತಿಯಾದ್ದಾರೆ ಎಂಬುದು ತಿಳಿದುಕೊಳ್ಳಬಹುದಾಗಿದೆ.

ಸಿದ್ದ ಉಡುಪು ತಯಾರಿಕಾ ಘಟಕಗಳಲ್ಲಿ ಶೇ 30 ರಷ್ಟು ಬಟ್ಟೆಗೆ ಹಾಕುವ ಬಣ್ಣಗಳಲ್ಲಿ ಪರಿಸರಕ್ಕೆ ಸೇರಿಕೊಳ್ಳುತ್ತದೆ. ದಿನನಿತ್ಯ ಈ ಬಣ್ಣಗಳಿಗೆ ಒಡ್ಡಿಕೊಳ್ಳುವ ಕಾರ್ಮಿಕರು ಹಲವಾರು ಚರ್ಮದ

ಶ್ವಾಸಕೋಶದ, ಅಲರ್ಜಿಯಂತಹ ಹಲವಾರು ರೋಗಗಳಿಗೆ ತುತ್ತಾಗುತ್ತಿದ್ದಾರೆ. ನಮ್ಮ ದೇಶದಲ್ಲಿ ಬಣ್ಣ ಹಾಕಲು ಉಪಯೋಗಿಸುವ ಪದಾರ್ಥಗಳನ್ನು ಹೆಚ್ಚಾಗಿ ಸಿದ್ಧ ಉಡುಪುಗಳಿಗೆ ಬಳಸುತ್ತಾರೆ. (ಶೇ 80 ರಷ್ಟು)

ಆರೋಗ್ಯ– ಅದರ ಬಗ್ಗೆ ಕಾಳಜಿ ವಹಿಸುವವರಾರು?

ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವ ಮಹಿಳೆಯರು ಅಲ್ಲಿ ಕೆಲಸ ಯಾವುದೇ ಇರಬಹುದು. ಆದರೆ ಸುಮಾರು ತಾಸುಗಳ ಕಾಲ ಒಂದೇ ಕಡೆ ನಿಂತುಕೊಂಡು ಅಥವಾ ಕುಳಿತುಕೊಂಡು ಕೆಲಸಮಾಡಬೇಕಾದರೆ ಅವರಿಗೆ ಬೆನ್ನುನೋವು ಮತ್ತು ಉಸಿರಾಟ ತೊಂದರೆ ಇರುವುದಾಗಿ ಬಹಳಷ್ಟು ಮಹಿಳೆಯರು ತಮ್ಮ ನೋವನ್ನು ತೋಡಿಕೊಂಡಿದ್ದಾರೆ. 2008ರಲ್ಲಿ ಸಿವಿಡೆಪ್ ಎಂಬುವವರು ಅಧ್ಯಯನ ನಡೆಸಿದಾಗ ಈ ವಿಷಯ ತಿಳಿದು ಬಂತು.

ಶೈಲಜಾ ಎಂಬುವವರನ್ನು ಸಂದರ್ಶಿಸಿದಾಗ ಅವರು ನನಗೆ ಬೆನ್ನುನೋವು, ಕಾಲು ಮತ್ತು ತೊಡೆನೋವು ತುಂಬ ಬರುತ್ತೆ. ಟೇಬಲ್ ಕೆಳಗಿನ ಸೂಜಿಯನ್ನು ನೋಡಬೇಕಾದಾಗ ಮತ್ತು ಯಂತ್ರದ ಮೇಲೆ ನನ್ನ ಕಾಲುಗಳು ಬಹಳ ತಾಸುಗಳವರೆಗೆ ಇರುವುದರಿಂದ ತಡೆಯಲಾರದಷ್ಟು ನೋವು ಕಾಣಿಸಿಕೊಳ್ಳುತ್ತೆ. ಆದರೆ ಅದರ ಕಡೆಗೆ ಗಮನ ಕೂಡ ಕೊಡಲು ಸಾಧ್ಯವಿಲ್ಲ.

ಇಲ್ಲಿ ಗಾಯಗಳು ಆಗುವುದು ಸರ್ವೇ ಸಾಮಾನ್ಯ, ಸೂಜಿ ಕೈ ಬೆರಳಿಗೆ ಉಗುರಿಗೆ ಚುಚ್ಚಿಕೊಳ್ಳುವುದು ಮತ್ತು ಯಂತ್ರಗಳ ಜೊತೆ ಕೆಲಸಮಾಡುವಾಗ ಗಾಯಗಳು ಆಗ್ತಾ ಇರ್ತಾವೆ. ಇವುಗಳ ಬಗ್ಗೆ ಏನಾದರೂ ಕೇಳಿದರೆ, ಕೆಲಸದಿಂದ ತೆಗೆದು ಹಾಕ್ತಾರೆ. loy chance ದೊಡ್ಡಗಾಯಗಳಾದರೆ ಆ ಮಹಿಳೆಗೆ ಆಸ್ಪತ್ರೆ ಮತ್ತು ವಿಶ್ರಾಂತಿಗಾಗಿ ಕೊನೆ ಪಕ್ಷ ಒಂದು ತಿಂಗಳಾದರೂ ಕೆಲಸದಿಂದ ದೂರ ಇರಬೇಕಾಗುತ್ತೆ. ಇದರಿಂದ ಆರ್ಥಿಕ ಪರಿಸ್ಥಿತಿ? ಯಾವ ಮಟ್ಟಕ್ಕೆ ಮುಟ್ಟುತ್ತದೆ ಎಂಬುದನ್ನು ಆಲೋಚಿಸಬೇಕಾಗುತ್ತದೆ. ಮತ್ತು ಸಮಸ್ಯೆಗಳ ಉಲ್ಬಣ ಯಾವ ಬಗೆಯದು ಎಂದು ಚಿಂತನೆಗೊಳಪಡಿಸಬೇಕಾಗುತ್ತದೆ.

ಇಲ್ಲಿ ಕೆಲಸ ಮಾಡುವಲ್ಲಿ ಯಂತ್ರಗಳು ರಿಪೇರಿಗೆ ಬಂದ್ರೂ ಸಹ, ಅವುಗಳನ್ನು ರಿಪೇರಿ ಮಾಡಿಸುವುದಿಲ್ಲ. ಅವುಗಳ ಬಾರೀ ಸೌಂಡ್‌ನಿಂದ, ಒಮ್ಮೊಮ್ಮೆ ಭಯ ಗಾಬರಿ, ಕಿವಿ ಗು...ಯ್‌ಯ್ ಅಂತ ಅನ್ನಿಸ್ತಾ ಇರ್ತಾವೆ. ಇಲ್ಲಿ ಕೆಲವೇ ಕೆಲವು ಮಹಿಳೆಯರು ಮಾತ್ರ ಕೆಲಸದ ವೇಳೆ ಮಾಸ್ಕ್ ಹಾಕಿಕೊಂಡಿರ್ತಾರೆ. ಬಟ್ಟೆಗಳನ್ನು ಕತ್ತರಿಸುತ್ತಿರುವಾಗ ಧೂಳಿನಿಂದ ಸುತ್ತುವರಿದು, ಅದನ್ನೇ ನುಂಗಿ, ಅದನ್ನೇ ಕುಡಿಯಬೇಕಾದ ಪರಿಸ್ಥಿತಿ, ಇದರಿಂದ ಎದೆನೋವು, ಉಸಿರಾಟದ ತೊಂದರೆ, ಅಲರ್ಜಿ ಕೆರೆತ ಮತ್ತು ಸೌಂಡಿನ ಕಿರಿಕಿರಿ ಅನುಭವಿಸಬೇಕಾಗುತ್ತದೆ. ಇದರಿಂದ ೮೦% ಮಹಿಳೆಯರು ಟಿ.ಬಿ., ಅಸ್ತಮಾ, ಎನ್ನುವಂತಹ ರೋಗಗಳಿಗೆ ತುತ್ತಾಗುತ್ತಿದ್ದಾರೆ ಎಂದು ESI (Employees state insurence) ವರದಿಮಾಡುತ್ತದೆ. ಕೆಲಸಗಾರರಿಗೆ ESI ಎನ್ನುವ ಸೌಲಭ್ಯವನ್ನು ಸ್ಥಾಪನೆ ಮಾಡಿದ್ರೂ ಕೂಡ ಅದು

[illegible]

ಹೇಳಿಕೊಳ್ಳುವಷ್ಟು ಕೆಲಸವನ್ನು ಮಾಡಿಲ್ಲ. ಅದರಿಂದ ಕಾರ್ಮಿಕರಿಗೆ ಉಪಯೋಗವಾಗುತ್ತಿಲ್ಲ. ಬಹಳ ಹೊತ್ತು ಕುಳಿತುಕೊಳ್ಳುವುದರಿಂದ ಕಡಿಮೆ ಪ್ರಮಾಣದಲ್ಲಿ ನೀರು ಕುಡಿಯುವುದರಿಂದ ಮತ್ತು ಪುನಃ ಪುನಃ ಶೌಚಾಲಯಕ್ಕೆ ಹೋಗಲು ಹೆದರುವುದರಿಂದ ಇದರಿಂದ ಮೂಲವ್ಯಾಧಿ, ಮಲಬದ್ಧತೆ ಬರುತ್ತದೆ. ಕಾರ್ಖಾನೆಯಲ್ಲಿ ಕೆಲವೊಂದು ಸಾರಿ ಗಾರ್ಮೆಂಟ್ಸ ಮಹಿಳೆಯರ ಚಲನವಲನಗಳನ್ನು ಗಮನಿಸಲು ಮತ್ತು ಎಷ್ಟು ಬಾರಿ ಶೌಚಾಲಯಕ್ಕೆ ಹೋಗುತ್ತಾರೆ ಎಂಬುದನ್ನು ಗಮನಿಸಲು ಮೇಲು ಉಸ್ತುವಾರಿಯನ್ನು ನೇಮಿಸುತ್ತಾರೆ. ಇದು ಒಂದು ಕಾರಣದಿಂದಲೇ ಎಷ್ಟೋ ಜನ ಹೆಣ್ಣು ಮಕ್ಕಳು ಕೆಲಸವನ್ನೆಬಿಟ್ಟು ಹೋಗಬಹುದು ಅಥವಾ ಅವರು ಹೇಳಿದ ಕೆಲಸವನ್ನು ಒಪ್ಪಿಕೊಂಡು ಕೆಲಸವನ್ನು ನಿರ್ವಹಿಸುವುದು. ಒಂದು ಸಮೀಕ್ಷೆಯ ಪ್ರಕಾರ ಸುಮಾರು ಜನ ಕೆಲಸಗಾರರು, ಕೆಲಸ ಮುಗಿಯುವವರೆಗೆ ನೀರನ್ನೆ ಕುಡಿಯುವುದಿಲ್ಲಾ.

ಮನೆಯ ವೆಚ್ಚವನ್ನು ನಿರ್ವಹಿಸಲು ಹೆಚ್ಚಿನ ಅವಧಿ ಕೆಲಸ ಮಾಡಬೇಕಾಗುತ್ತದೆ. ಮಕ್ಕಳನ್ನು ನೋಡಿಕೊಳ್ಳುವುದು ಮತ್ತು ಬಹಳ ಹೊತ್ತು ನಿಂತುಕೊಂಡು ಕೆಲಸಮಾಡುವುದರಿಂದ ಮಹಿಳೆಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ.

ಮಹಿಳೆಯರು ಕೆಲಸಕ್ಕೆ ಹೋಗುವ ರಬಸದಲ್ಲಿ ಬೆಳಗಿನ ತಿಂಡಿಯನ್ನು ಬೆಳಗ್ಗೆ ತಿಂದು ಹೋಗಲು ಆಗುವುದಿಲ್ಲಾ ಮತ್ತು ಮಧ್ಯಾಹ್ನ ಊಟದ ಸಮಯದಲ್ಲಿ ತಾವು ಮುಟ್ಟಲೇಬೇಕಾದ ಉತ್ಪಾದನ ಗುರಿಯನ್ನು ತಲುಪುವ ಕಾರಣ ಮಧ್ಯಾಹ್ನದ ಊಟವನ್ನು ಕೂಡ ಮಾಡಲು ಆಗುವುದಿಲ್ಲಾ ಹಾಗೂ ಸಾಯಂಕಾಲ ಮನೆಗೆ ಬಂದಾಗ ಮನೆಯ ಕೆಲಸದಲ್ಲಿ ನಿರತಾಗುವುದರಿಂದ ಶೈಲಾ ಅವರು ಹೆಳುತ್ತಾರೆ. "ನಾವು ಮಾತ್ರ ಊಟಮಾಡುವಾಗ ಕೇವಲ ನಮ್ಮ ಹಸಿವನ್ನು ನೀಗಿಸಿಕೊಳ್ಳುವುದಕ್ಕಾಗಿ ನಾವು ಇಲ್ಲಿ ಕುಳಿತುಕೊಂಡು ನಿಧಾನವಾಗಿ ಸಮಾಧಾನಕರವಾಗಿ ಊಟ ಮಾಡಲು ಸಾಧ್ಯವಿಲ್ಲ. ಏಕೆಂದರೆ ಕೊಟ್ಟಿರುವ ಅವಧಿಯಲ್ಲಿ ಮುಗಿಸದಿದ್ದರೆ ಶೋಷಣೆ ತಪ್ಪಿದ್ದಲ್ಲ.

ಕಠಿಣವಾದ ಕೆಲಸ, ಸರಿಯಾದ ಸಮಯಕ್ಕೆ ತಕ್ಕಂತೆ ಆಹಾರ ತೆಗೆದುಕೊಳ್ಳದೆ ಇರುವುದು, ಊಟವನ್ನೆ ಬಿಡುವುದು, ಕಡಿಮೆ ನೀರುಕುಡಿಯುವುದು, ಮತ್ತು ಅತಿಯಾದ ಕಿರಿಕರಿ, ಇವು ಎಲ್ಲಾವುಗಳಿಂದ ಮಹಿಳೆ ಕೀಳರಿಮೆಗೆ ಮತ್ತು ರಕ್ತಹೀನತೆಗೆ ಮತ್ತು ಉಬ್ಬಸ ಮತ್ತು ಹಾಲ್ಸ್‌ರ್ ಕಾಯಿಲೆಗೆ ಒಳಗಾಗುತ್ತಿದ್ದಾಳೆ.

೧೯೪೮ರ ಕಾರ್ಖಾನೆಯ ಕಾಯಿದೆಯ ಪ್ರಕಾರ ಶಿಶುಪಾಲನ ಕೇಂದ್ರ, ಕುಡಿಯುವ ನೀರಿನ ವ್ಯವಸ್ಥೆ, ಕೆಲಸ ಮಾಡುವ ಸಮಯದಲ್ಲಿ ಕ್ಯಾಂಟಿನ್ ವ್ಯವಸ್ಥೆಯನ್ನು ಆಡಳಿತ ಮಂಡಳಿಯು ನೋಡಿಕೊಳ್ಳುವುದು ಅದರ ಆದ್ಯ ಕರ್ತವ್ಯ. ಶಿಶು ಪಾಲನ ಕೇಂದ್ರಗಳು ಇದ್ದರೂ ಸಹ ಅವು ಉಪಯೋಗಕ್ಕೆ ಬಾರದವುಗಳಾಗಿವೆ. ನೀರಿನ ವ್ಯವಸ್ಥೆ ಇದ್ದರೂ ಸಹ ನೀರಿನ ಗುಣಮಟ್ಟದ ಬಗ್ಗೆ ಹೇಳಲು ಸಾಧ್ಯವಿಲ್ಲ. ಉದಾಹರಣೆಗೆ ೨೦೦೪ ಮತ್ತು ೨೦೦೮ ರಲ್ಲಿ ಕಲುಷಿತ ನೀರಿನ ಸೇವನೆಯಿಂದ ಹಲವಾರು ಕಾರ್ಮಿಕರು ಹೊಟ್ಟೆ ನೋವಿನಿಂದ ಮೈತುರಿಕೆಯಿಂದ ಚಿಕಿತ್ಸೆ ಪಡೆದುಕೊಂಡಿರುವುದು

ತಿಳಿದುಬಂದಿರುತ್ತದೆ. ಇವುಗಳನ್ನು ನೋಡಿದಾಗ ಮಹಿಳೆಯರ ದೈಹಿಕ ಆರೋಗ್ಯದ ಬಗ್ಗೆ ಯಾವುದೇ ತರಹದ ಸೌಲಭ್ಯಗಳಿರುವುದಿಲ್ಲ ಹಾಗೇಯೇ ಆಡಳಿತ ಮಂಡಳಿಯ ಮೇಲೆ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಕಾರಣ ಕಾರ್ಖಾನೆಯಲ್ಲಿರುವ ಧೂಳು ಮತ್ತು ಅಲ್ಲಿನ ಕೆಲಸದ ಪರಿಸ್ಥಿತಿಯಲ್ಲಿ ಒಳ್ಳೆಯ ನೀರನ್ನು ಒದಗಿಸುವುದು ಸಹ ಕಷ್ಟ ಹಾಗೆಯೇ ಕೆಲವೊಂದು ಕಾರ್ಖಾನೆಯಲ್ಲಿ ಕ್ಯಾಂಟಿನ್ ವ್ಯವಸ್ಥೆ ಇದ್ದರೂ ಸಹ ಅವು ತುಂಬ ಬಡತನದಿಂದ ಮತ್ತು ನಿಲ್ಲಲು ಸಹ ಆಗದೆ ನಲುಗುತ್ತಿವೆ. ಇವೆಲ್ಲಾ ಕಾರಣಗಳಿಂದ ಕಾರ್ಮಿಕರು ಕಾರ್ಖಾನೆಯ ಹೊರಗೆ, ರಸ್ತೆ ಬದಿಯಲ್ಲಿ, ಅಥವಾ ಚಿಕ್ಕ ಜಾಗದಲ್ಲಿ ಊಟ ಮಾಡುವುದು ಸಾಮಾನ್ಯ.

ಟಿಪ್ಪಣಿಗಳು

೧ ಹೈದಿ ಹಾರ್ಟಮನ್; ದಿ ಆನ್ ಹ್ಯಾಪಿ ಮ್ಯಾರೇಜ್ ಆಧಿ ಮಾರ್ಕ್ಸಿಸಂ ಅಂಡ್ ಫಯಿನಿನಂ

೨ ಮಹಿಳಾ ಸಾಮಾಜಿಕತೆ ಡಾ. ಜ್ಯೋತಿ ಶಶಿಕುಮಾರ್ ಕ.ವಿ.ವಿ ೨೦೦೭

3 ಮಹಿಳೆ ಸಮಾಜ ಮತ್ತು ಸಂಸ್ಕೃತಿ–ಡಾ.ಆರ್.ಇಂದಿರಾ ಕ.ವಿ.ವಿ

೪ ಕೆ ಸರೋಜ – ಮಹಿಳೆ ಮತ್ತು ಆರೋಗ್ಯ

೫ ನೈಲಾ ಕಬೀರ್–೧೯೯೬–೧೪೪–ಟಿ,ಆರ್ ಚಂದ್ರಶೇಖರ್ ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ ಕ.ವಿ.ವಿ.ಹಂಪಿ

೬ ಮಹಿಳೆ & ಆರೋಗ್ಯ–ಡಾ.ಕೆ.ಸರೋಜ. ಕ.ವಿ.ವಿ. ಪಿ–೧೩೮

೭ ಹದಿಹರೆಯದ ಆ ಒಂದು ವಿಶ್ಲೇಷಣೆ–೩೫

೮ Binnaial report, 1992-93 WHO

೯. ೨೦೦೬–ಅಕ್ಟೋಬರ್ ೧೬ ಭೂಮಿಕ

೧೦ ಮಹಿಳೆ ದುಡಿಮೆ & ಬಿಡುವು–೪೨–೪೩

೧೧ ಟಿ.ಆರ್.ಚಂದ್ರಶೇಖರ ಅಮರ್ತ್ಯಸೇನ ೧೯೯:೫೪

೧೨ ಟಿ.ಆರ್.ಚಂದ್ರಶೇಖರ್ ಮಹಿಳೆ ಮತ್ತು ಆರ್ಥಿಕತೆ

೧೩ ಸ್ತ್ರೀವಾದಿ ಪ್ರವೇಶಕೆ–ಪುಟ –೧೫೭

೧೪ ಮಹಿಳಾ ಅಧ್ಯಯನ ವಿಶೇಷ ಸಂಚಿಕೆ –೩ ಆರ್ಥಿಕ ವಲಯದ ಜ ಮಹಿಳೆ–೬೯

೧೫ ೨೭ ನವಂಬರ್ ೨೦೦೫ ಪ್ರಜಾವಣಿ ವೇತನದಲ್ಲಿ ತಾರತಮ್ಯ

೧೬ ಮಹಿಳಾ ಅಧ್ಯಯನ–ಜನವರಿ–ಡಿಸೆಂಬರ್–೨೦೦೪ ಕ.ವಿ.ವಿ. ಪೇಜ್ ೭೯–೯೮

೧೭ ಮಹಿಳಾ ಅಧ್ಯಯ–ಜ–ಡಿ೦೪ P-೬೧

೧೮ ಸೂಜಿದಾರ ೨೦೦೬

೧೯ ೨೦೦೫ ಅಕ್ಟೋಬರ್ ೧೬.ಅಂ.ರಾ. ಮಹಿಳಾ ಸಂಪದ

೨೦ ದಿನಾಂಕ ೧–೮–೨೦೦೮ರ ಪ್ರಜಾವಾಣಿ

೨೧ ಸೂಜಿದಾರ ಜೂನ್ ೨೦೦೮

೨೨ ಜೂನ್ ೨೦೦೮ ಸೂಜಿದಾರ

೨೩ ಸೆಪ್ಟೆಂಬರ್ ೨೦೦೬ ಸೂಜಿದಾರ

೨೪ ಅಕ್ಟೋಬರ್ ೧೬ ೨೦೦೫ ಮಹಿಳಾ ಸಂಪದ

೨೫ ಸೂಜಿದಾರ, ಜೂನ್ ೨೦೦೯

೨೬ ಸೂಜಿದಾರ, ಮಾರ್ಚ್ ೨೦೦೮

ಅಧ್ಯಾಯ : ಐದು

ಆಯ್ದ ಪ್ರಕರಣಗಳ ಸ್ತ್ರೀವಾದಿ ವಿಶ್ಲೇಷಣೆ

೫.೧ ಪ್ರಸ್ತಾವನೆ

೫.೨ ಆಯ್ದ ಪ್ರಕರಣಗಳ ನಿರೂಪಣೆ ಹಾಗೂ ವಿಶ್ಲೇಷಣೆ

- ೫.೨.೧ ಶಾರದಮ್ಮಳ ಪ್ರಕರಣ
- ೫.೨.೨ ಸುನಂದಳ ಪ್ರಕರಣ
- ೫.೨.೩ ಮಾನಸಮ್ಮಳ ಪ್ರಕರಣ
- ೫.೨.೪ ಸೆಲ್ವ ಕೆ. ಪ್ರಕರಣ
- ೫.೨.೫ ತರನಮ್‌ಳ ಪ್ರಕರಣ
- ೫.೨.೬ ಕತಿಜಾಬಾನು ಪ್ರಕರಣ
- ೫.೨.೭ ರೇಣುಕಾಳ ಪ್ರಕರಣ
- ೫.೨.೮ ಜಾನಕಿಯ ಪ್ರಕರಣ
- ೫.೨.೯ ವೆಂಕಮ್ಮಳ ಪ್ರಕರಣ
- ೫.೨.೧೦ ಜಯಮ್ಮಳ ಪ್ರಕರಣ
- ೫.೨.೧೧ ಕನಕಳ ಪ್ರಕರಣ
- ೫.೨.೧೨ ರತ್ನಮ್ಮಳ ಪ್ರಕರಣ
- ೫.೨.೧೩ ಸಾಬೀಯಾಳ ಪ್ರಕರಣ
- ೫.೨.೧೪ ರೇಖಾಳ ಪ್ರಕರಣ
- ೫.೨.೧೫ ಸುಭದ್ರಳ ಪ್ರಕರಣ
- ೫.೨.೧೬ ಹೇಮಳ ಪ್ರಕರಣ
- ೫.೨.೧೭ ರಾಜೇಶ್ವರಿಯ ಪ್ರಕರಣ
- ೫.೨.೧೮ ಸರಸ್ವತಿಯ ಪ್ರಕರಣ
- ೫.೨.೧೯ ಭಾಗ್ಯಳ ಪ್ರಕರಣ
- ೫.೨.೨೦ ಮಾರಕ್ಕಳ ಪ್ರಕರಣ
- ೫.೨.೨೧ ಈರಮ್ಮಳ ಪ್ರಕರಣ
- ೫.೨.೨೨ ನೂರಜಹಾನಳ ಪ್ರಕರಣ
- ೫.೨.೨೩ ಮಂಗಳನ ಪ್ರಕರಣ
- ೫.೨.೨೪ ತಿಮ್ಮರಾಜಮ್ಮಳ ಪ್ರಕರಣ
- ೫.೨.೨೫ ಪಾರ್ವತಮ್ಮಳ ಪ್ರಕರಣ
- ೫.೨.೨೬ ಗೀತಾಳ ಪ್ರಕರಣ
- ೫.೨.೨೭ ಪುಷ್ಪಲತಾಳ ಪ್ರಕರಣ
- ೫.೨.೨೮ ಜಾಹೀದಾಳ ಪ್ರಕರಣ
- ೫.೨.೨೯ ಸುಜಾತಳ ಪ್ರಕರಣ
- ೫.೨.೩೦ ಪಲ್ಲವಿಯ ಪ್ರಕರಣ

೫.೩ ಪ್ರಕರಣಗಳ ತೌಲನಿಕ ವಿಶ್ಲೇಷಣೆ

[illegible]

[illegible]

[illegible]

[illegible]

[illegible]

ಅಧ್ಯಾಯ : ಐದು

ಆಯ್ದ ಪ್ರಕರಣಗಳ ಸ್ತ್ರೀವಾದಿ ವಿಶ್ಲೇಷಣೆ

೫.೧ ಪ್ರಸ್ತಾವನೆ

ಪ್ರಸ್ತುತ ಅಧ್ಯಯನವು ಗಾರ್ಮೆಂಟ್ಸ ಮಹಿಳಾ ಕಾರ್ಮಿಕರನ್ನು ಪ್ರಧಾನವಾಗಿ ಇಟ್ಟುಕೊಂಡು ಕ್ಷೇತ್ರಕಾರ್ಯವನ್ನು ಆಧಾರವಾಗಿರಿಸಿಕೊಂಡಿದೆ. ಕ್ಷೇತ್ರಾಧರಿತ ಸಂಶೋದನೆಯು ಎರಡು ನಲೆಗಳಲ್ಲಿ ಸಾಗುತ್ತದೆಯೆಂದು ಹೇಳಬಹುದು. ಇರುವ ಸಿದ್ಧಾಂತಗಳನ್ನು ಆಧರಿಸಿ ಸಾಕ್ಷರಿಸಲು ಪ್ರಕರಣಗಳನ್ನು ಒದಗಿಸುವುದು ಒಂದು ಬಗೆಯದಾದರೆ, ಕ್ಷೇತ್ರದಿಂದ ಸಂಗ್ರಹಿಸಿದ ಮಾಹಿತಿಗಳನ್ನು ಆಧರಿಸಿ ಹೊಸ ಬಗೆಯ ಸಿದ್ಧಾಂತವನ್ನು ಕಟ್ಟುವುದು ಇನ್ನೊಂದು ಬಗೆಯದು ಎಂದು ಹೇಳಬಹುದು. ಒಟ್ಟಿನಲ್ಲಿ ಕ್ಷೇತ್ರಕಾರ್ಯವೆನ್ನುವುದು ಸಂಶೋಧನೆಗಳ ಆತ್ಮವೆಂದು ಹೇಳಬಹುದು. ಹೆಣ್ಣಿಗೆ ವಿಧಿಸಲಾಗಿರುವ ಮರ್ಯಾದೆಯ ಚೌಕಟ್ಟು ಮತ್ತು ನಿರ್ಭಂಧಗಳಲ್ಲಿ ಜೀವಿಸಬೇಕಾದಂತಹ ಸಂದರ್ಭಗಳು ಸಾರ್ವಜನಿಕ ವಲಯಗಳಲ್ಲಿ ಇನ್ನಷ್ಟು ಗಾಢವಾಗಿ ಕಂಡುಬರುವುದರಿಂದ ಅವಳ ಮೇಲಾಗುವ ದೌರ್ಜನ್ಯ ಹಿಂಸೆಗಳನ್ನು ಸಮಸ್ಯೆಯೆಂದು ಗುರುತಿಸುವುದೇ. ಅಧ್ಯಯನ ಕ್ರಮದಲ್ಲಿ ಬಹು ಮುಖ್ಯವಾಗಿ ಸವಾಲಾಗಿ ತಲೆದೂರಿತು , ಸಮಸ್ಯೆಯ ಶೋಧವೇ ಸವಾಲದಾಗ, ಇದನ್ನು ನಿರ್ವಹಿಸುವುದು, ನಿಬಾಹಿಸುವುದು ಇನ್ನಷ್ಟು ಸಂಕೀರ್ಣತೆಯಿಂದ ಕೂಡಿದ ಸಂಗತಿ ಎನ್ನಬಹುದು. ಆದ್ದರಿಂದ ಅಧ್ಯಯನ ಕ್ರಮವೊಂದು ರೂಪಿಸಿಕೊಳ್ಳುವ ಹಂತದಿಂದ ಅದನ್ನು ಬಳಸಿಕೊಳ್ಳುವಲ್ಲಿ ಪಲಿತಗಳನ್ನು ಕಂಡುಕೊಳ್ಳುವಲ್ಲಿ ಕೂಡ ಅನೇಕ ಸಮಸ್ಯೆಗಳನ್ನು ಎದರಿಸುವುದು ಸಹಜವಾಗಿದೆ. ಮಹಿಳೆಯರಿಗಷ್ಟೇ ಸಮುದಾಯ, ಸಂಸ್ಕೃತಿಯ ಹೊಣೆಯನ್ನು ಹೊರಿಸಲಾಗಿರುವ ಸಮಾಜ ವ್ಯವಸ್ಥೆಯಲ್ಲಿ ಅವಳಿಗಾಗುವ ಸಂಕಷ್ಟಗಳನ್ನು ಹೊರಹಾಕಲಾಗದಂತಹ ಪರಿಸ್ಥಿತಿಯಲ್ಲಿ ಬದುಕನ್ನು ನಡೆಸುವಂತೆ ಮಾಡುತ್ತಿದೆ. ಹಲವಾರು ಸಂದರ್ಭಗಳಲ್ಲಿ ಪ್ರಧಾನ ವ್ಯವಸ್ಥೆಯ ದೌರ್ಜನ್ಯದ ಹಿಂಸೆಯ ಪರಮಾವದಿಯನ್ನು ಮೀರಿದರೂ ಅವುಗಳನ್ನು ಅಸಹಾಯಕರಾಗಿ ಒಪ್ಪಿಕೊಂಡಿರುವುದು ಅವರ ಕೆಲಸದ ಅಭದ್ರತೆಯ ಮತ್ತು ಅಸುರಕ್ಷತೆಯ ಪ್ರಶ್ನೆಗಳಿಂದ

[illegible]

[illegible]

[illegible]

ಸಮಸ್ಯೆಯ ಅಳವನ್ನು ಗ್ರಹಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಮಹಿಳಾ ಬದುಕು ಪುರುಷ ಬದುಕಿಗೆ ಪೂರಕವಾಗಿ ನಿಲ್ಲಬೇಕೆನ್ನುವ ಆಶಯವನ್ನು ಹೊಂದಿರುವ ವ್ಯವಸ್ಥೆಯಲ್ಲಿ ಸ್ತ್ರೀ ಸಮುದಾಯದ ಅಸ್ತಿತ್ವ ರೂಪಿಕೆಯನ್ನು ನಿರಂತರವಾಗಿ ತಳ್ಳಿ ಹಾಕುತ್ತಿರುವ ಸಂಸ್ಥೆಗಳಲ್ಲಿ ಮಹಿಳೆಯು ಆ ಬಗೆಯ ಎಲ್ಲೆಗಳನ್ನು ಮೀರಿ ಸಾಧನೆಗೈಯುವುದು ಕಷ್ಟಸಾಧ್ಯ. ಸಾರ್ವಜನಿಕ ವಲಯವು ವ್ಯವಹಾರ ಲೋಕವೆಂದೆ ಒಪ್ಪಿತವಾಗಿದ್ದು, ಮಹಿಳೆಯರ ದುಡಿಮೆಯ ಪ್ರವೇಶ ಆಶಾದಾಯಕವಾದರೂ, ಪ್ರತಿ ಕ್ಷಣನೂ ಅತಂತ್ರತೆ, ಅಭದ್ರತೆಯ, ಕರಿನೆರಳಿನಲ್ಲಿ ಜೀವಿಸುತ್ತಿರುವ ಹಾಗೆ ವ್ಯವಸ್ಥೆ ರೂಪಿಸುತ್ತದೆ. ಘಾಢವಾಗಿ ಪರಿಣಾಮ ಬೀರುವ ಪುರುಷ ಪರ ಚಿಂತನೆಗಳು ಮಹಿಳಾ ಬದುಕನ್ನು ರೂಪಿಸಿರುವ ಸಾಮಾಜೀಕರಣದ ಪಾತ್ರದಿಂದಾಗಿ ಮಹಿಳ ಸಮಸ್ಯೆಗಳ ಶೋಧವೇ ಕಷ್ಟಕರವಾದ ಸವಾಲಾಗಿ ನಿಲ್ಲುವುದು ಕಾರಣವಾಗಬಹುದಾಗಿದೆ. ಒಟ್ಟಿನಲ್ಲಿ ಕ್ಷೇತ್ರಕಾರ್ಯವೆನ್ನುವುದು ಸಂಶೋಧನೆಗಳ ಆತ್ಮವೆಂದು ಹೇಳಬಹುದು. ಈ ಕೆಲವು ಬಗೆಯ ಹಿನ್ನಲೆಯನ್ನಾಧರಿಸಿ, ಗಾರ್ಮೆಂಟ್ಸ ಮಹಿಳಾ ಕಾರ್ಮಿಕರ ಸಮಸ್ಯೆಗಳನ್ನು ಅರ್ಥೈಸಿಕೊಳ್ಳಲು ವಾಸ್ತವವಾಗಿ ಅವುಗಳ ಸ್ವರೂಪವನ್ನು ಗ್ರಹಿಸುವುದು. ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದರುವುದರಿಂದ ಸಾಂಪ್ರದಾಯಿಕ ಸಮಾಜವ್ಯವಸ್ಥೆಯಲ್ಲಿ ಮಹಿಳೆಯೊಬ್ಬಳು ಹೊರ ಜಗತ್ತಿಗೆ ಮುಖಾಮುಖಿಯಾಗುವುದು ಇವತ್ತಿನ ಸಂದರ್ಭದಲ್ಲಿ ಸರಳವೆನಿಸಿದರೂ ಸಹ ಸಾಕಷ್ಟು ಕಷ್ಟಕರ ಪರಿಸ್ಥಿತಿಗಳಲ್ಲಿ ಮಹಿಳಾ ಸಮುದಾಯ ಜೀವಿಸುತ್ತಿರುವುದನ್ನು ಹತ್ತು ಹಲವು ಪ್ರಕರಣಗಳ ಉದಾಹರಣೆಗಳಿಂದ ಹೇರಳವಾಗಿ ದೊರೆಯುತ್ತಿರುವುದನ್ನು ಕಾಣಬಹುದಾಗಿದೆ.

ಇಂತಹ ಸಂದಿಗ್ಧ ಪರಿಸ್ಥಿತಿಗಳಲ್ಲಿ ಮಹಿಳಾ ದುಡಿಮೆಗಾರರು ಗಣನೀಯ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತಿರುವುದು ಸಂಘಟಿತ ವಲಯಕ್ಕಿಂತ ಹೆಚ್ಚು, ಅಸಂಘಟಿತ ವಲಯಗಳಲ್ಲಿ ಮಾತ್ರ ಅಂತನೇ ಹೇಳಬಹುದು. ಏಕೆಂದರೆ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತಿರುವುದಕ್ಕೆ ಬಡತನ ಅನಕ್ಷರತೆ, ಕೌಶಲ್ಯ ಇಲ್ಲದಿರುವುದಕ್ಕೆ, ಫೆಕ್ಸಿಲ್ ಗುಣ, ಇನ್ನಿತರ ಹಲವಾರು ಕಾರಣಗಳಾಗಿವೆ ಎಂಬುದನ್ನು ಗುರುತಿಸಬಹುದಾಗಿದೆ. ಇಂತಹ ಅಸಂಘಟಿತ ವಲಯಗಳಲ್ಲಿ ಒಂದಾದ ಗಾರ್ಮೆಂಟ್ಸ ವಲಯದಲ್ಲಿಯೂ ಸಹಿತ ಮಹಿಳೆಯ ದುಡಿಮೆಯ ಸಹಭಾಗಿತ್ವವು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ. ಮಹಿಳೆಯ ಯಾವುದೇ ಸಮಸ್ಯೆಯ ಮೂಲವು ಲೈಂಗಿಕತೆಯನ್ನಧರಿಸಿಯೇ ಸೃಷ್ಟಿಯಾಗುವುದು ಎಲ್ಲ ಆಯಾಮಗಳಲ್ಲಿಯೂ ಕಂಡು ಬರುತ್ತದೆಯಾದ್ದರಿಂದ, ಸಾರ್ವಜನಿಕ ವಲಯವು ಸಹ ಇದಕ್ಕೆ ಹೊರತಾಗಿಲ್ಲವೆಂಬುದಕ್ಕೆ, ಸಮಾಜ ವ್ಯವಸ್ಥೆಯಲ್ಲಾದ ಪಲ್ಲಟಗಳಿಂದಾಗಿ ಮಹಿಳೆಯ ಲೈಂಗಿಕತೆಯನ್ನೊಳಗೊಂಡು ಒಟ್ಟು ಬದುಕು ಪುರುಷಧೀನಗೊಂಡಿದ್ದು ಅಲ್ಲದೆ, ಪುರುಷ ನಿರ್ದೇಶಿತ ಬದುಕನ್ನು ಮಹಿಳೆಯು ಬದುಕಬೇಕಾದು ನ್ಯಾಯೋಚಿತವೆಂದು ಹೇಳುವುದಷ್ಟೆ ಅಲ್ಲದೆ, ಅದಕ್ಕೆ ಪೂರಕವಾಗಿ ಧರ್ಮ ವಿವಾಹ ಕುಟುಂಬ ಇತ್ಯಾದಿ ಸಂಸ್ಥೆಗಳ ಹೆಸರಿನಲ್ಲಿ ಮಹಿಳೆಯ ಚಲನ ಶೀಲತೆಯನ್ನು ನಿಯಂತ್ರಿಸುವುದು ಕಂಡುಬರುತ್ತದೆ. ಶತಮಾನಗಳಿಂದಲೂ ಶೋಚನಿಯ ಬದುಕನ್ನು ಬದುಕುತ್ತಿರುವ ಮಹಿಳಾ ಸಮುದಾಯ ಇಂದು ಕೌಟುಂಬಿಕ ಚೌಕಟ್ಟಿನಾಚೆಗೆ ಕಾಲಿರಿಸುತ್ತಾ ಸಾರ್ವಜನಿಕ ರಂಗಕ್ಕೆ ಮುಖಾ ಮುಖಿಯಾಗುತಿರುವಾಗಲೂ ಅವಳ ಸಮಸ್ಯೆಗಳು ಅವಳೊಂದಿಗೆ ಎಲ್ಲ ವಲಯಗಳಿಗೂ ವಿಸ್ತರಿಸುತ್ತಿವೆ ಎಂಬುದಕ್ಕೆ ಗಾರ್ಮೆಂಟ್ಸ ಮಹಿಳೆಯ ಬದುಕಿನ ಶೋಷಣೆಯ ಸ್ವರೂಪಗಳೇ ಸಾಕ್ಷಿಗಳಾಗಿ

[illegible]

ನಿಲ್ಲುತ್ತವೆ. ಸಾರ್ವಜನಿಕ ವಲಯದ ಭಾಗವಾಗಿ ಪರಿಗಣಿತವಾಗುವ ಪ್ರಸ್ತುತ ಅಧ್ಯಯನವು ಬಳ್ಳಾರಿ-ಬೆಂಗಳೂರಿನಲ್ಲಿನ ಗಾರ್ಮೆಂಟ್ಸ ಮಹಿಳೆಯರನ್ನು ಅಧ್ಯಯನಕ್ಕೊಳಪಡಿಸಿ ನೂರು ಕೆಸ್‌ಗಳನ್ನು ಸಂಗ್ರಹಿಸಲಾಗಿದ್ದು, ಅದರಲ್ಲಿನ ಆಯ್ದುಕೆಲವು ಪ್ರಕರಣಗಳನ್ನು ಈ ಅಧ್ಯಾಯದಲ್ಲಿ ವಿಶ್ಲೇಷಣೆಗೊಳಪಡಿಸಲಾಗಿದೆ.

ಗಾರ್ಮೆಂಟ್ಸ ಮಹಿಳೆಯರು ಹಲವು ಬಗೆಯ ದೌರ್ಜನ್ಯಗಳನ್ನು ಘೋರ ಪ್ರಮಾಣದಲ್ಲಿ ನಡೆಯುತ್ತಿರುವಾಗಲೂ ಯಾವುದನ್ನು ವಿರೋಧ ಮಾಡಲಾಗದೆ ಅಸಾಯಕರಾಗಿ ಒಪ್ಪಿಕೊಂಡು ಕೆಲಸ ನಿರ್ವಹಿಸಿದರು ಕೂಡ ಬೀಕರ ಸಮಸ್ಯೆಯು ಅವಳ ಬದುಕಿನೊಳಗಿದೆ ವಿನಃಹ ಬದುಕಿನಾಚೆಗಿಲ್ಲ. ಈ ಬಗೆಯ ಸಮಸ್ಯೆಗಳೊಂದಿಗೆ ಹೋರಾಡುವ ಸ್ಥಿತಿ ಅವಳದಾಗಿದೆ. ಎಂಬುದು ಮುಂದೆ ವಿಶ್ಲೇಷಿಸುವ ಎಲ್ಲ ಪ್ರಕರಣಗಳಲ್ಲಿಯೂ ಕಾಣಬಹುದಾಗಿದೆ.

ಈ ಪ್ರಕರಣಗಳ ಮೂಲಕ ಸಮುದಾಯದ ಪ್ರಶ್ನೆಯೊಂದು ಮಹಿಳಾ ಬದುಕಿನ ಸಮಸ್ಯೆಯೊಂದನ್ನು ಪ್ರತಿನಿದಿಸುವಲ್ಲಿ ಬಳಸಕಲಾಗಿದೆ. ಈ ಬಗೆಯ ಪ್ರಕರಣ ಅಧ್ಯಯನ ಸಂದರ್ಶನವನ್ನು ಕೈಗೊಂಡಾಗ ಮುಖ್ಯವಾಗಿ ಅನುಸರಿಸಿದ ವ್ಯಕ್ತಿನಿಷ್ಠ ಸಂಶೋಧನ ವಿಧಾನ ಆಯಾಮಗಳನ್ನು ಕ್ಷೇತ್ರಕಾರ್ಯದ ಮಾಹಿತಿ ಸಂಗ್ರಹಣೆಯಲ್ಲಿ ಬಳಸಲಾಗಿದೆ.

ಮಹಿಳೆಯರ ಒಟ್ಟು ಸಮಸ್ಯೆಗಳಿಗೆ ಕಾರಣ ಸಮಾಜ ವ್ಯವಸ್ಥೆಯಲ್ಲಿ ಅಡಕವಾಗಿದೆ. ಆದರೆ ಅವುಗಳಿಗೆ ಪರಿಹಾರಗಳನ್ನು ಸಮಾಜ ವ್ಯವಸ್ಥೆಯಲ್ಲಿ ಶೋಧಿಸುವ ಬದಲು ವ್ಯಕ್ತಿಗತ ಸ್ಥಿತಿಯಲ್ಲಿ ಶೋಧಿಸತೊಡಗಿದಾಗ ಸಮಸ್ಯೆಗೆ ಕಾರಣವು ಮಹಿಳೆಯೆ ಎಂಬಂತೆ ಪ್ರತಿನಿಧಿಸಲಾಗಿದೆ. ಈ ಅಂಶವು ಕ್ಷೇತ್ರಕಾರ್ಯದಲ್ಲಿ ಪ್ರಕರಣಗಳನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಹೆಚ್ಚು ಸ್ಪಷ್ಟವಾಗಿಸಿಕೊಳ್ಳಲು ಸಾಧ್ಯವಾಯಿತು.

ಸಿಂಧೂ ನಾಗರಿಕತೆಯ ಕಾಲದಿಂದಲೂ ವಿಭಿನ್ನರೂಪಗಳಲ್ಲಿ ಕಂಡು ಬರುವ ಗಾರ್ಮೆಂಟ್ಸಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಇತ್ತೀಚಿನದೆಂದು ಹೇಳಬಹುದಾದರೂ ಕ್ಷೇತ್ರಕಾರ್ಯದಿಂದ ದೊರೆತ ಕೆಲವು ಮಾಹಿತಿಗಳ ಅಂಕಿ ಅಂಶಗಳಲ್ಲಿ ಮಹಿಳೆಯ ಭಾಗವಹಿಸುವಿಕೆ ಹೆಚ್ಚಿನ ಪ್ರಮಾಣದಲ್ಲಿದೆಯಂಬುದನ್ನು ದೃಡಪಡಿಸುತ್ತದೆ. ಈ ನಿಟ್ಟಿನಲ್ಲಿ ಗಾರ್ಮೆಂಟ್ಸಗಳಿಗೆ ಭೇಟಿ ನೀಡಿದಾಗ ಬಳ್ಳಾರಿಯಲ್ಲಿ ಮುಸ್ಲಿಂ ಮಹಿಳೆಯರು ಬೆಂಗಳೂರಿನಲ್ಲಿ ಎಲ್ಲ ವರ್ಗದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಂಡಿದ್ದಾ ಒಟ್ಟು ಗಾರ್ಮೆಂಟ್ಸ ಮಹಿಳೆಯರ ಬದುಕ್ಕನ್ನು ಪ್ರತಿನಿಧಿಸುವ ಉದ್ದೇಶದ ಹಿನ್ನಲೆಯಲ್ಲಿ ವಿವಿಧ ಜಾತಿಯ ಹುದ್ದೆಯನ್ನು ನಿರ್ವಹಿಸುವ ಮಹಳೆಯರನ್ನು ಸಂಗ್ರಹಿಸಿ ದಾಖಲಿಸಲಾಗಿದೆ.

ಇದುವರೆಗಿನ ಸಾಂಪ್ರದಾಯಿಕ ಸಂಶೋಧನ ವಿಧಾನವನ್ನು ಆಧರಿಸಿ ನಡೆದ ಚಿಂತನೆಗಳಿಂದ ಮಹಿಳಾ ಬದುಕಿನ ಸಮಸ್ಯೆಗಳನ್ನು ನಿಜವಾಗಿ ಖಚಿತವಾಗಿ ಶೋಧಿಸಲು ಪರಿಹಾರೋಪಯಗಳನ್ನು ಕಂಡುಕೊಳ್ಳುವಲ್ಲಿ ತೊಡಕನ್ನುಂಟು ಮಾಡುತ್ತಿದೆ ಎಂಬುದಕ್ಕೆ ಸ್ತ್ರೀವಾದಿಗಳು ಸ್ತ್ರೀವಾದಿ ಸಂಶೋಧನಾ

ವೈಧಾನಿಕತೆಯೊಂದನ್ನು ರೂಪಿಸಿಕೊಂಡಿದ್ದಾರೆ. ಸಾಂಪ್ರದಾಯಿಕ ವಿಧಾನಗಳಲ್ಲಿನ ಕೆಲವು ವಿಧಾನಗಳನ್ನು ನಿರಾಕರಿಸುವ ವಿಸ್ತರಿಸುವ ಮತ್ತು ಹೊಸ ವಿಧಾನಗಳನ್ನು ಸೇರಿಸಿಕೊಳ್ಳುವ ಅಗತ್ಯತೆಯನ್ನು ಸ್ಪಷ್ಟಗೊಳಿಸುತ್ತಾ, ಸ್ತ್ರೀವಾದಿ ಸಂಶೋಧನಾ ವೈಧಾನಿಕತೆಯ ಚೌಕಟ್ಟನ್ನು ಕಟ್ಟಿಕೊಂಡಿರುತ್ತಾರೆ. ಹಾಗಾಗಿ ಗಾರ್ಮೆಂಟ್ಸ ಮಹಿಳಾ ಬದುಕನ್ನು ಅರ್ಥೈಸಿಕೊಳ್ಳಲು ಸ್ತ್ರೀವಾದಿ ಸಂಶೋಧನ ವೈದಾನಿಕತೆಯನ್ನು ಆಧರಿಸಿಕೊಳ್ಳಲಾಗಿದೆ. ಆ ಕಾರಣವಾಗಿ ಕ್ಷೇತ್ರಕಾರ್ಯದಿಂದ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲು ಸಂದರ್ಶನ ಪ್ರಶ್ನಾವಳಿ (ರಚಿತ ಮತ್ತು ಅರಚಿತ) ವಿಧಾನಗಳ ಜೊತೆಗೆ ಬಹುಮುಖ್ಯವಾಗಿ ಅವಲೋಕನ ವಿಧಾನವನ್ನು ಬಳಸಿಕೊಳ್ಳಲಾಗಿದೆ. ಪುರುಷ ಚಿಂತನೆಗಳನ್ನೆ ಬಿತ್ತಿ ಘೋಷಿಸುವ ಸಮಾಜ ವ್ಯವಸ್ಥೆಯಲ್ಲಿ ಮಹಿಳಾ ಬದುಕು ನಗಣ್ಯವಾಗಿದೆ. ಅವಳ ಅಂತರಂಗದ ಸಂಗತಿಗಳಂತೂ ಅವಳೊಳಗೆ ಪಾಚಿಗಟ್ಟಿ ಹೋಗುವುದೇ ಹೆಚ್ಚು. ಇದಕ್ಕೆ ಗಾರ್ಮೆಂಟ್ಸ ಮಹಿಳೆಯರು ಹೊರತಲ್ಲವೆಂಬುದಕ್ಕೆ ಇಲ್ಲಿ ದಾಖಲಾದ ಪ್ರಕರಣಗಳಿಂದ ಗುರುತಿಸಬಹುದು.

ಬಹುಪಾಲು ಸಂದರ್ಭಗಳಲ್ಲಿ ಸಂದರ್ಶನಕ್ಕೊಳಪಡಿಸಿದ ಮಹಿಳೆಯರು ತಮ್ಮ ಸ್ಥಾನ ಮಾನದ ಅಭದ್ರತೆ, ಸಾಂಪ್ರದಾಯಿಕ ಮನೋಭಾವದಿಂದ ಸಮಸ್ಯೆಯನ್ನು ಹೊರಹಾಕುವುದಕ್ಕಿಂತ ಅವುಗಳನ್ನು ಘೋಷಿಸಿರುವ ಸನ್ನಿವೇಶಗಳು ಆರಂಭದ ಮಾಹಿತಿಗಳನ್ನು ಪಡೆಯುವಲ್ಲಿ ತೊಡಕನ್ನುಂಟು ಮಾಡಿದವು. ಸ್ತ್ರೀವಾದಿ ಸಂಶೋಧನಾ ವಿಧಾನಗಳು ಸೂಚಿಸುವಂತೆ ರಚಿತ ಪ್ರಶ್ನಾವಳಿಯು ಅಂಕಿ ಸಂಖ್ಯೆಗಳ ಸಾಮಾನ್ಯ ಮಾಹಿತಿಯನ್ನು ಪಡೆಯಲು ಬಳಸುವುದೊಂದಿಗೆ ಅರಚಿತ ಪ್ರಶ್ನಾವಳಿಯು ಹೆಚ್ಚು ಬಳಸಿಕೊಳ್ಳಲಾಗಿದೆ. ಈ ಮೂಲಕ ಗಾರ್ಮೆಂಟ್ಸ ಮಹಿಳೆಯರ ಸಮಸ್ಯೆಯನ್ನು ಗ್ರಹಿಸಲು ಪ್ರಯತ್ನಿಸಲಾಗಿದೆ.

ಸಾಧಾರಣವಾಗಿ ಸಮಾಜ ವ್ಯವಸ್ಥೆಯಲ್ಲಿ ಮಹಿಳೆಯನ್ನು ದೇಹ ಕೇಂದ್ರಿತವಾಗಿ ನಿರ್ವಯಿಸಲಾಗಿದ್ದು, ಆ ಮೂಲಕ ಅವಳ ಒಟ್ಟು ಬದುಕನ್ನು ನಿರ್ಬಂದಕ್ಕೊಳಪಡಿಸಲಾಗಿದೆ. ಜೈವಿಕ ಸಭಿನ್ನತೆಯನ್ನು ಆಧರಿಸಿ ಸಾಮಾಜಿಕತೆಯಲ್ಲಿ ಅಸಮಾನತೆ, ತಾರತಮ್ಯಗಳನ್ನು ನಿರಂತರವಾಗಿ ಮುಂದುವರಿಸಲಾಗುತ್ತದೆ. ಮಹಿಳಾ ಬದುಕಿನ ಯಾವುದೇ ಸಮಸ್ಯೆಗಳು ಸಹ ಲೈಂಗಿಕತೆಯನ್ನೇ ಕೇಂದ್ರವಾಗಿರಿಸಿಕೊಂಡು ಸೃಷ್ಟಿಗೊಳ್ಳುತ್ತವೆಯೆಂಬುದಕ್ಕೆ ಇತಿಹಾಸದ ಪುಟಗಳನ್ನು ತಿರುವಿದಾಗಿನಿಂದ ದೊರೆಯುವ ಸಾಕ್ಷಿಗಳು ಇಂದಿಗೂ ಭಿನ್ನ ಸ್ಥಿತಿಗಳಲ್ಲಿ ದೊರೆಯುತ್ತದೆ. ಈ ಹಿನ್ನಲೆಯಲ್ಲಿ ಗಾರ್ಮೆಂಟ್ಸ ಮಹಿಳೆಯ ಬದುಕು ಸಹ ಒಳಗೊಂಡಿದೆಯೆಂಬುದಕ್ಕೆ ಈ ಕೆಳಗೆ ವಿಶ್ಲೇಷಣೆಗೊಳಪಡಿಸಲಾದ ಪ್ರಕರಣಗಳು ನಿರ್ದೇಶನವಾಗಿ ನಿಲ್ಲುತ್ತವೆ.

೫.೨.೧ ಶಾರದಮ್ಮಳ ಪ್ರಕರಣ

ನಿರೂಪಣೆ

ನಾವು ಸುಮಾರು ೨೦ ವರ್ಷಗಳ ಹಿಂದೆ ತಮಿಳುನಾಡಿನಿಂದ ಬೆಂಗಳೂರಿಗೆ ವಲಸೆ ಬಂದೆವು. ಏಕೆಂದರೆ ಅಲ್ಲಿ ಕೂಲಿ ಸೂಕ್ತ ರೀತಿಯಲ್ಲಿ ದೊರೆಯುತ್ತಿರಲಿಲ್ಲ. ಹೀಗಾಗಿ ಬೆಂಗಳೂರಿನಲ್ಲಿ ಕೂಲಿ

ಜಾಸ್ತಿ ಸಿಗುತ್ತೆ ಅಂತ ಬಂದೆವು. ಬಂದ ಹೊಸದರಲ್ಲಿ ಕಟ್ಟಡ ಕೆಲಸ ಮಾಡ್ತಾ ಇದ್ದೆ. ನನ್ನ ಗಂಡನೂ ಸಹ ಕಟ್ಟಡ ಕೆಲಸ ಮಾಡಿ ಜೀವನ ಸಾಗಿಸ್ತಇದ್ವಿ, ನಮಗೆ ೪ ಜನ ಮಕ್ಕಳು, ರಮೇಶ, ಭಾಗ್ಯ, ಮುರುಗನ್, ಸೆಲ್ವಿ

ಮಕ್ಕಳಾದ ಮೇಲೆ ತುಂಬಾ ಕಷ್ಟ ಆಗೋಯ್ತು, ಮಕ್ಕಳನ್ನು ಸಾಕೋಕೆ, ಗಂಡನಿಗೆ ಟಿ.ಬಿ ಕಾಯಿಲೆ ಬಂತು. ಆಸ್ಪತ್ರೆಗೆ ತುಂಬಾ ಖರ್ಚುಆಯ್ತು. ನಾನು ದುಡಿಯೋ ದುಡ್ಡೆಲ್ಲ ನನ್ನ ಗಂಡನಿಗೆ ತೋರಿಸಲಿಕ್ಕೆ ಹೋಯ್ತು. ನನ್ನ ಆರೋಗ್ಯವು ಆಗ ಸರಿಯಿಲ್ಲದಂಗಾಯ್ತು. ಮಕ್ಕಳನ್ನು ಸಹ ಜಾಸ್ತಿ ಓದಿಸಲಿಲ್ಲ. ಕಟ್ಟಡ ಕೆಲಸ ತುಂಬ ಕಷ್ಟ ಅಂತ ಬೇರೆ ಕೆಲಸ ಹುಡುಕೋಕೆ ಪ್ರಾರಂಭ ಮಾಡ್ದೆ. ಸೌಭಾಗ್ಯ ಟೆಕ್ಸ್‌ಟೈಲ್ಸ್ ಗಾರ್ಮೆಂಟ್‌ನಲ್ಲಿ ಕೆಲಸಕ್ಕೆ ಬರಲಿಕ್ಕೆ ಹೇಳಿದ್ದರು. ಸುಮಾರು ಹತ್ತು ವರ್ಷಗಳಿಂದ ನಾನು ಇಲ್ಲೇ ಕೆಲಸ ಮಾಡ್ತ ಇದೀನಿ. ಗಂಡನಿಂದ ದುಡಿಯೋಕಾಗಲ್ಲ, ಹೀಗಾಗಿ ನನ್ನ ಇಬ್ಬರು ಮಕ್ಕಳು ಸಹ ಇಲ್ಲೇ ಕೆಲಸ ಮಾಡ್ತಿದ್ದಾರೆ. ಕಟ್ಟಡ ಕೆಲಸಕ್ಕಿಂತ ಈ ಕೆಲಸ ತುಂಬಾನೇ ಕಷ್ಟ. ಹೆವಿಡ್ಯೂಟಿ ಮಾಡಬೇಕು. ಮೂತ್ರ ವಿಸರ್ಜನೆಗೂ ಹೋಗೋದಿಕ್ಕೂ ಬಿಡಲ್ಲ, ಬಿಟ್ಟರೂ ಕಡಿಮೆ ವೇಳೆಯಲ್ಲಿ ಹೋಗಿ ಬರಬೇಕು ಇಲ್ಲದಿದ್ದರೆ ಸಂಬಳ ಕಟ್ ಮಾಡ್ತಾರೆ. ಸೂಪರ್ ವೈಸರ್‌ಗಳು ತುಂಬಾ ಕೆಟ್ಟವರಿದ್ದಾರೆ. ಅವರು ಹೇಳಿದ ಹಾಗೆ ನಡೆದುಕೊಳ್ಳುವರು, ಲೇಟಾಗಿ ಬಂದರೂ ಕರಿಸಿಕೊಳ್ಳುತ್ತಾರೆ. ಅವರನ್ನು ಫ್ರೀಯಾಗಿ ಬಿಡ್ತಾರೆ. ಆದರೆ ನಾನು ಅವರು ಕರೆದಾಗಲೆಲ್ಲಾ ಅವರ ಜೊತೆ ಸಂಬಂಧ ಬೆಳೆಸೋದನ್ನು ನಾನು. ನಿರಾಕರಿಸಿದ್ದೀನಿ ಅದಕ್ಕೆ ಅವರಿಗೆ ನನ್ನ ಕಂಡರೆ ಆಗಲ್ಲ. ಏನೇನೋ ಪ್ಲಾನ್ ಮಾಡಿ ಸಂಬಳ ಕಟ್ ಮಾಡಿಸ್ತಾರೆ. ಏನು ಮಾಡೋದು ವಿಧಿ ಇಲ್ಲ. ಇಲ್ಲೇ ಕೆಲಸ ಮಾಡಬೇಕು. ಇಲ್ಲಿ ಬಿಟ್ಟು ಬೇರೆ ಗಾರ್ಮೆಂಟ್ಸ್‌ಗೆ ಹೋದರೂ ಅಲ್ಲೂ ಇದೇ ವ್ಯವಸ್ಥೆ. ಏನು ಮಾಡೋದು ಅದಕ್ಕೆ ಸುಮ್ನೆ ಇದೀನಿ. ಹೆಚ್ಚಿನ ಸಂಬಳಕ್ಕಾಗಿ ತುಂಬಾ ಓಟಿ ಕೆಲಸ ಮಾಡ್ತೀನಿ. ಇದರಿಂದ ಈಗೀಗ ಆರೋಗ್ಯ ಮತ್ತಷ್ಟು ಕೆಟ್ಟು ಹೋಗಿದೆ. ತುಂಬಾ ದಿನ ಆಗಿ ಮೈಯಲ್ಲಿ ಬಿಳುಪು ಹೋಗುವುದು. ಹೊಟ್ಟೆ ಉರಿ, ಕಣ್ಣು ತಲೆ ಉರಿ ಹಾಗೆ ಕಾಯಿಲೆಗಳು ಉದ್ದಕ್ಕೂ ಬರುತ್ತಾನೇ ಇವೆ. ಏನು ಮಾಡೋದು ಕಾಯಿಲೆ ಅಂತ ಮನೆಯಲ್ಲಿ ಕೂತುಕೊಂಡರೆ ಹೊಟ್ಟೆತುಂಬಲ್ಲಮ್ಮ ಏನಾದರೂ ಮಾಡಲೇಬೇಕು.

ನಾನು ಇಲ್ಲಿ ಪ್ರಾರಂಭದಲ್ಲಿಯೂ ಹೆವಿಡ್ಯೂಟಿ ಮಾಡಿದ್ದರಿಂದ ಸೆಲ್ವಿ ಹಿಂದಿನ ಒಂದು ಮಗು ಅಭಾಷನ್ ಆಗೊಯ್ತು. ನಮಗೆ ಏನಾದರೂ ಕಾಯಿಲೆ ಬಂದರೆ ಫ್ಯಾಕ್ಟರಿಯವರೇ ತೋರಿಸಬೇಕು ಅಂತ ರೂಲ್ಸ್ ಇದೆ, ಆದರೆ ಅದನ್ನು ಯಾರೂ ಕೇರ್ ಮಾಡಲ್ಲ. ನಮಗೆ ಯಾವುದೇ ರೀತಿಯ ಸಹಾಯ ಮಾಡಿಲ್ಲ.

ಮಕ್ಕಳು ಚಿಕ್ಕವಾಗಿದ್ದಾಗಲಂತೂ ಟಿ.ಬಿ ಬಂದರೂ ಗಂಡನೇ ನೋಡಿಕೊಳ್ಳುತ್ತಿದ್ದ. ಅಡಿಗೆ ಮಾಡ್ತಾಇದ್ದ, ಅವರ ಕಾಯಿಲೆ ಇನ್ನೂ ಜಾಸ್ತಿ ಆದ ಮೇಲೆ ನಾನೆ ಫ್ಯಾಕ್ಟರಿ ಕೆಲಸ, ಮನೆ ಕೆಲಸ, ಮಕ್ಕಳನ್ನು, ಗಂಡನನ್ನು ಅಬ್ಬಬ್ಬಾ ಸಾಕಾಗಿ ಹೋಗ್ತಾಇತ್ತು. ಎಷ್ಟು ಅಂತ ದುಡಿತೀರಾ ದುಡ್ಡು ದುಡ್ಡು ಅಂತ ಸಾಯಲಿಕ್ಕೆ ಹೋದರು, ಇಲ್ಲಿಯ ತನಕ ನಾವು ಉದ್ದಾರ ಆಗಿಲ್ಲ. ಹಲವಾರು ದರಿದ್ರ

[illegible]

[illegible]

[illegible]

[illegible]

ಸಮಸ್ಯೆಗಳು ಬರ್‍ತಾಇವೆ. ದರಿದ್ರ ಅಂದರೆ ನನಗೆ ನನ್ನ ಗಂಡನಿಗಿರುವ ಕಾಯಿಲೆಯೇ ನಮಗೆ ದೊಡ್ಡ ಕಂಟಕವಾಗಿಯೇ ಇದೆ. ಇನ್ನು ಚೆನ್ನಾಗಿ ಬದಕೋದು, ಮಕ್ಕಳನ್ನು ಓದಿಸೋದು ಎಲ್ಲ ಕನಸು.

ವಿಶ್ಲೇಷಣೆ

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರನ್ನು ಅಧ್ಯಯನಕ್ಕೆ ಆಯ್ದುಕೊಂಡು ಕ್ಷೇತ್ರಕಾರ್ಯಕ್ಕೆ ತೊಡಗಿರುವಲ್ಲಿ ಬಹುಪಾಲು ಪ್ರಕರಣಗಳು, ಅದರಲ್ಲೂ ಬೆಂಗಳೂರು ನಗರದ ಗಾರ್ಮೆಂಟ್ಸ್‌ಗಳಲ್ಲಿ ವಲಸೆ ಬಂದಿರುವ ಮಹಿಳೆಯರ ಸಂಖ್ಯೆಯು ಹೆಚ್ಚಾಗಿದೆ. ಅಂತಹ ಪ್ರಕರಣಗಳಲ್ಲಿ ಶಾರದಮ್ಮಳದು ಒಂದು. ತಮಿಳುನಾಡಿನಲ್ಲಿ ಸಿಗದ ಕೂಲಿಯಿಂದಾಗಿ ಸಂಸಾರದ ನಿರ್ವಹಣೆ ಕಷ್ಟವಾದ್ದರಿಂದ ಶಾರದಮ್ಮ ಬೆಂಗಳೂರು ನಗರಕ್ಕೆ ಸೇರಿಕೊಂಡರು, ಆದರೆ ಕೆಲವು ಕಾಲದ ನಂತರ ಶಾರದಮ್ಮಳ ಗಂಡನಿಗೆ ಟಿ.ಬಿ ಕಾಯಿಲೆಯಿಂದಾಗಿ ಅನಾರೋಗ್ಯದಿಂದಾಗಿಯೇ ಕೆಲಸಕ್ಕೆ ಹೋಗಲು ಅಸಮರ್ಥನಾದನು. ಇದರಿಂದ ಮಕ್ಕಳ ವಿದ್ಯಾಭ್ಯಾಸವು ಸ್ಥಗಿತಗೊಂಡಿತು. ಬರುವ ಸಂಬಳ ಸಾಲದಾದ್ದರಿಂದ, ಹಾಗೂ ಕಟ್ಟಡದ ಧೂಳಿನ ವಾತಾವರಣದಿಂದ ಮುಕ್ತರಾಗಲು ಬೇರೆ ಕೆಲಸ ಹುಡುಕಿದಾಗ ಅವರಿಗೆ ಲಭ್ಯವಾಗಿದ್ದು ಸೌಭಾಗ್ಯ ಟೆಕ್ಸ್‌ಟೈಲ್ಸ್ ಗಾರ್ಮೆಂಟ್ಸ್‌ನಲ್ಲಿ ಈಗ ೧೦ ವರ್ಷಗಳಿಂದ ಶಾರದಮ್ಮ ಅಲ್ಲೇ ಕಾರ್ಯನಿರ್ವಹಿಸುತ್ತಿದ್ದಾರೆ. ಅದು ಇಬ್ಬರೂ ಮಕ್ಕಳು ಕೂಡ ಇದೇ ಫ್ಯಾಕ್ಟ್ರಿಯಲ್ಲಿ ದುಡಿಯುತ್ತಿದ್ದಾರೆ.

ಆದರೆ ಸ್ವಲ್ಪ ದಿನಗಳಾದ ಮೇಲೆ ಶಾರದಮ್ಮಳಿಗೆ ಕಟ್ಟಡ ಕೆಲಸಕ್ಕಿಂತ ಈ ಕೆಲಸ ಹೆಚ್ಚು ಕಷ್ಟಕರವೆನಿಸಿತು. ಹೆವಿಡ್ಯೂಟಿ, ಪದೇಪದೇ ಓ.ಟಿ.ಗಳು ಮಾಡಬೇಕಾಗುವುದು. ಅದು ಬಹುಪಾಲಿನಲ್ಲಿ ಸಂಬಳವಿಲ್ಲದೆ, ಮೂತ್ರವಿಸರ್ಜನೆಗೆ ಹೋದರು ಸಮಯ ಹಾಳಾಗುತ್ತದೆಯೆಂಬ ಕಂಪನಿ ಮಾಲೀಕರ ಧೋರಣೆಯು ಅಲ್ಲಿ ನಡೆಯುವ ಸಮಸ್ಯೆಗಳ ಸ್ವರೂಪವನ್ನು ಅನಾವರಣಗೊಳಿಸುತ್ತದೆ. ಮೂತ್ರವಿಸರ್ಜನೆಯ ಸಂದರ್ಭದಲ್ಲಿ ಸ್ವಲ್ಪ ವಿಳಂಬವಾದರೂ ಕೂಡ ಸಂಬಳವನ್ನು ಕಡಿತಗೊಳಿಸುವುದನ್ನು ಶಾರದಮ್ಮ ವ್ಯಕ್ತಪಡಿಸಿದ್ದಾರೆ. ಹಾಗೆಯೇ ಅಲ್ಲಿನ ಮೇಲಾಧಿಕಾರಿಗಳ ಕಾಮುಕತೆಗೆ ಹೊಂದಿಕೊಂಡಲ್ಲಿ ಈ ಎಲ್ಲ ರೀಯಾಯಿತಿಗಳು ನೀಡಲಾಗುತ್ತದೆ. ಅದನ್ನು ಪ್ರತಿಭಟಿಸಿದರೆ ಕೆಲಸ ಕಳೆದುಕೊಳ್ಳಬೇಕು ಇಲ್ಲವೇ ಹೇಳಿದಷ್ಟು ಕೆಲಸ, ಹಾಕಿದಷ್ಟು ನಿರ್ಬಂಧಗಳೊಂದಿಗೆ ದುಡಿಯಬೇಕು. ಈ ಬಗೆಯ ಹೆಚ್ಚಿನ ಕೆಲಸದಿಂದಾಗಿ ಶಾರದಮ್ಮ ಬಿಳುಪು, ಹೊಟ್ಟೆಉರಿ, ಕಣ್ಣು, ತಲೆ ನೋವಿನಿಂದ ನಿರಂತರ ನರಳುತ್ತಾಳೆ, ಹಾಗೆಯೆ ಓ.ಟಿ ಗಳನ್ನು ಮಾಡುತ್ತಾಳೆ. ಎಂಟರಿಂದ-ಹತ್ತುಗಂಟೆಗಳ ಕಾಲ ನಿರಂತರವಾಗಿ ನಿಂತೆ ಕೆಲಸಮಾಡಬೇಕಾದ್ದರಿಂದ, ಆರಂಭದಲ್ಲಿ ಇವರು ಒಂದು ಗರ್ಭಪಾತವನ್ನು ಅನುಭವಿಸಿದ್ದನ್ನು ಹಂಚಿಕೊಂಡಿದ್ದಾರೆ.

ಆದರೆ ಸರ್ಕಾರ ಅಸಂಘಟಿತ ವಲಯಕ್ಕೆ ಅದರಲ್ಲು ಕಾರ್ಖಾನೆಯಂತಹ ಕಾಯಿದೆಗಳಡಿಯಲ್ಲಿ ಹಲವಾರು ನಿಯಮಗಳನ್ನು ಮಾಡಿದ್ದಾರೆ. ಆ ನಿಯಮಗಳನುಸಾರ ಕಾರ್ಮಿಕರು ಅನಾರೋಗ್ಯದ ಸಂದರ್ಭಗಳಲ್ಲಿ ಗಾರ್ಮೆಂಟ್ಸ್‌ನ ಮಾಲೀಕರು ವೈದ್ಯಕೀಯ ಸೌಲಭ್ಯವನ್ನು ಕಲ್ಪಿಸಬೇಕು. ಆದರೆ ಬಹುತೇಕ ಕಾನೂನುಗಳು ಕೇವಲ ಪುಸ್ತಕಕ್ಕೆ ಮಾತ್ರ ಸೀಮಿತವಾಗಿವೆಯೆಂಬುದಕ್ಕೆ, ಗಾರ್ಮೆಂಟ್ಸ್

[illegible]

[illegible]

[illegible]

[illegible]

[illegible]

ಮಹಿಳಾ ಕಾರ್ಮಿಕಳೊಬ್ಬಳು ಅನುಭವಿಸುವ ಯಾತನೆಯೇ ಉದಾಹರಣೆಯಾಗಿದೆ. (ಹೆಸರು : ಶಾರದಮ್ಮ, ವಯಸ್ಸು : ೩೬, ಊರು : ತಮಿಳ್ ನಾಡು, ವಿದ್ಯಾರ್ಹತೆ : ಎಸ್. ಎಸ್.ಎಲ್. ಸಿ, ಜಾತಿ : ತಮಿಳಿಯನ್ಸ್)[೧]

೫.೨.೨ ಸುನಂದಳ ಪ್ರಕರಣ

ನಿರೂಪಣೆ

ಬೆಂಗಳೂರಿಗೆ ನಾನು ನಮ್ಮ ಚಿಕ್ಕಮ್ಮನ ಮನೆಗೆ ಬಂದಿದ್ವಿ ನಮ್ಮದು ಹಾಸನದ ಹತ್ತಿರ ಒಂದು ಹಳ್ಳಿ. ನಮ್ಮ ಊರಿನಲ್ಲಿದ್ದ ಒಬ್ಬ ಮೇಸ್ತ್ರಿ ನಮಗೆ ಬೆಂಗಳೂರಿನಲ್ಲಿ ಕೆಲಸ ಕೊಡಿಸ್ತೀನಿ, ನೀವು ಎಸ್.ಎಸ್.ಎಲ್.ಸಿ ಆಗಿರೋದ್ರಿಂದ ಒಳ್ಳೆ ಸಂಬಳ ಸಿಗುತ್ತೆ ಅಂತ ನಮ್ಮನ್ನು ಬೆಂಗಳೂರಿನ ಹತ್ತಿರ ದೊಡ್ಡ ಬಳ್ಳಾಪುರದ ಗಾರ್ಮೆಂಟ್ಸ್‌ನಲ್ಲಿ ಒಂದು ಕೆಲಸಕ್ಕೆ ಸೇರಿಸಿದ್ದ. ನಾವು ಬಟ್ಟೆ ಐರನ್ ಮಾಡುವ ಕೆಲಸ ಮಾಡ್ತಾ ಇದ್ವಿ, ಒಂದುವಾರ ಕೆಲ್ಸ ಮಾಡಿದ್ವಿ ದೊಡ್ಡ ಬಳ್ಳಾಪುರದಲ್ಲೇ ಒಂದು ಮನೀನ ಬಾಡಿಗೆ ತೆಗೆದುಕೊಂಡಿದ್ವಿ, ಬರ್ತಾ ಬರ್ತಾ ಕೆಲ್ಸ ಹೆವಿ ಅನಿಸ್ತು. ತುಂಬಾ ನಾನು ಕೆಲಸಕ್ಕೆ ಇನ್ನೂ ಮೇಲಿಂದ ಬರಲ್ಲ ನಾವು ಅರ್ಜೆಂಟಾಗಿ ಹಾಸನಕ್ಕೆ ಹೋಗಬೇಕಂತ ನಮ್ಮ ಸೂಪರ್ ವೈಜರ್, ಮ್ಯಾನೇಜರ್ ಹತ್ತಿರ ಕೇಳಿಕೊಂಡ್ವಿ, ಅವರು ಇದನ್ನ ಕೇಳಿ ಬಿಲ್‌ಕುಲ್ ಒಪ್ಪಲಿಲ್ಲ. ನಿಮ್ಮನ್ನು ಬಂದು ಸೇರಿಸಿರುವ ಆಸಾಮಿ ನಮ್ಮ ಹತ್ತಿರ ಹತ್ತು ಸಾವಿರ ರೂಪಾಯಿ ತಗೊಂಡಿದ್ದಾನೆ. ನಿಮ್ಮನ್ನು ಯಾವುದೇ ಕಾರಣಕ್ಕೆ ಇಲ್ಲಿಂದ ಹೊರಗಡೆ ಕಳುಹಿಸಬೇಡಿ ಅಂತ ಹೇಳಿಹೋಗಿದ್ದಾನೆ. ಅಂತ ಹೇಳಿದ್ರು, ಆಗ ನಮಗೆ ಏನು ಮಾಡಬೇಕು ಅಂತ ಗೊತ್ತಾಗಲಿಲ್ಲ. ನಾವು ಹಠ ಮಾಡಿದ್ವಿ, ಇಲ್ಲ ನಾವು ಹೋಗಲೇಬೇಕಂತ, ಆಗ ಅವರು ನಮ್ಮ ಜೊತೆ ತುಂಬಾ ಕೆಟ್ಟದಾಗಿ ನಡಕೊಂಡ್ರು. ಬಾಯಿಗೆ ಬಂದಂಗ ಬೈದರು, ಹೊಡೆದರು.

ನಾವು ಎಲ್ಲಿ ತಪ್ಪಿಸಿಕೊಂಡು ಹೋಗ್ತಿವೊ ಅಂತ ಒಂದು ರೂಮಲ್ಲಿ ಕೂಡಿಟ್ಟರು. ದಿಕ್ಕು ತಿಳಿದಂಗ ಆಯ್ತು ತುಂಬಾ ಅತ್ವಿ, ಇಂತಹ ಮೇಸ್ತ್ರಿಗಳು ಇರ್‌ತಾರೆ ದೇವರ್‍ರೆ, ಅಣ್ಣಮ್ಮನ ಹತ್ರ ಮೊಬೈಲ್ ಇತ್ತು. ಆಗ ನನ್ನ ಗೆಳತಿ ದೊಡ್ಡಬಳ್ಳಾಪುರದವಳೇ, ಅವಳು ಇದೇ ಗಾರ್ಮೆಂಟ್ಸನಲ್ಲೇ ಕೆಲ್ಸ ಮಾಡ್ತಾ ಇದ್ದಾಳು ಅವಳಿಗೆ ಫೋನ್ ಮಾಡಿ ನಡೆದ ವಿಷಯವನ್ನು ಎಲ್ಲ ತಿಳಿಸಿದ್ವಿ, ಅವಳು ಸಂವಾದ ಹಾಗೂ ಮಹಿಳಾ ಸಮಾಜ ಎಂಬ ಸಂಸ್ಥೆಗಳಿಗೆ ಹೋಗಿ ಈ ವಿಷಯವನ್ನು ತಿಳಿಸಿ ಅವರನ್ನು ನಾವು ಇರುವ ಜಾಗಕ್ಕೆ ಕರೆದುಕೊಂಡು ಬಂದಳು. ಸಂವಾದದ ಕಾರ್ಯಕ್ರಮದ ಸಂಚಾಲಕರಾದ ರಾಮಕ್ಕ ಪೋಲಿಸಿನವರಿಗೆ ಕಂಪ್ಲೈಟ್ ಮಾಡ್ತೀವಿ, ನಾವು ಮಹಿಳಾ ಆಯೋಗದಿಂದ ಬಂದಿದ್ದೀವಿ ನೀವು ಈರೀತಿಯಾಗಿ ಹೆಣ್ಣು ಮಕ್ಕಳಿಗೆ ಹಿಂಸೆ ಕೊಡ್ತೀರೊದು ತುಂಬಾ ಅಪರಾಧ ಎಂದು ಹೇಳಿದರೆ ಅವರು ಅದನ್ನು ಏನು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಅದಕ್ಕೆ ಸಂಸ್ಥೆಯವರು ಪೋಲಿಸ್ಸಿಗೆ ಕಂಪ್ಲೈಟ್ ಕೊಟ್ಟು, ಪೋಲೀಸರನ್ನು ಫ್ಯಾಕ್ಟರಿಯ ಹತ್ತಿರ ಕರೆದುಕೊಂಡು ಬಂದ್ರು. ಆಗ ಮ್ಯಾನೇಜರ್, ಓನರ್ ಎಲ್ಲರನ್ನೂ ನಾವು ಎಳೆದುಕೊಂಡೋಗ್ತಿವಿ. ಮರ್ಯಾದೆಯಾಗಿ ಅವರನ್ನು ಬಿಟ್ಟು ಬಿಡಿ ಅಂತ ಹೇಳಿ ಪೋಲೀಸಿನವರು ಹೆದರಿಸಿದ್ರು, ಅದಕ್ಕೆ ಹೆದರಿದಂತೆ ಕಂಡ ಅವರು ಆ ಸಂಸ್ಥೆಯವರೊಂದಿಗೆ ನಮ್ಮನ್ನು ಕಳುಹಿಸಿಕೊಟ್ಟರು.

[illegible]

[illegible]

[illegible]

[illegible]

[illegible]

[illegible]

ಈ ರೀತಿ ಮಾಡಿರುವ ಮ್ಯಾನೇಜರ, ಓನರ್ಸ್‌ಗೆ ದಂಡ ವಿಧಿಸಬೇಕು, ಶಿಕ್ಷೆ ನೀಡಬೇಕು ಅಂತ ಕಂಪ್ಲೈಟ್ ಮಾಡಿದ್ವಿ ಆದರೆ ಪೊಲೀಸನವರೂ ಕೂಡ ಹೋನರ್ ಹತ್ರ ದುಡ್ಡು ತಗೊಂಡು ತಿಂದು ಸುಮ್ಮನಾದರೂ ಸಂವಾದ ಸಂಸ್ಥೆಯವರು ನಮ್ಮನ್ನು ಹಾಸನಕ್ಕೆ ಬಸ್ ಚಾರ್ಜ್ ಕೊಟ್ಟು ಕಳುಸಿದರು.

ವಿಶ್ಲೇಷಣೆ

ಇಲ್ಲಿ ಮೂವರು ಮಹಿಳೆಯರನ್ನು ಒಂದೇ ಪ್ರಕರಣದಡಿಯಲ್ಲಿ ಬಳಸಿಕೊಳ್ಳಲಾಗಿದೆ. ಅಣ್ಣಮ್ಮ, ಸಾವಿತ್ರಿ, ಸುನಂದ ಮೂವರು ಹಾಸನದ ಬಳಿ ಇರುವ ಹಳ್ಳಿಯವರು. ಎಸ್.ಎಲ್.ಸಿ ವರೆಗೂ ಓದಿದ ಇವರು ಚಿಕ್ಕಮ್ಮನ ಭೇಟಿಗಾಗಿ ಬೆಂಗಳೂರಿಗೆ ಬಂದವರು, ಉದ್ಯೋಗ ಮತ್ತು ಸಂಬಳದ ಆಸೆಗಾಗಿ ಇವರು ವ್ಯಕ್ತಿಯೊಬ್ಬ (ಸಹಾಯವೆಂದು ನಂಬಿ)ನಿಂದ ದೊಡ್ಡ ಬಳ್ಳಾಪುರ ಗಾರ್ಮೆಂಟ್ಸ್‌ಗೆ ೧೦,೦೦೦/-ರೂ.ಗಳಿಗೆ ಮಾರಾಟವಾದವರು, ಆರಂಭದಲ್ಲಿ ಐರನ್ ಕೆಲಸಕ್ಕೆ ಸೇರಿದ ಇವರು ಹೆಚ್ಚಿನ ಕೆಲಸದ ಒತ್ತಡದಿಂದ ಬೆಸತ್ತು, ಅನಾರೋಗ್ಯಕ್ಕೆ ಒಳಗಾಗುತ್ತಿದ್ದರಿಂದ ಉದ್ಯೋಗವನ್ನು ಬಿಡಬೇಕೆಂಬ ತೀರ್ಮಾನಕ್ಕೆ ಬಂದು ಅಲ್ಲಿನ ಸೂಪ್ರವೈಜರ್, ಮ್ಯಾನೇಜರ್‌ಗಳಿಗೆ ಹೇಳಿದರು. ಆದರೆ ಇವರಿಗೆ ಕೊನೆಪಕ್ಷ ರಜೆಯನ್ನು ನೀಡದ ಬಂಡವಾಳಶಾಹಿಗಳು, ಇವರನ್ನು ಖರೀದಿಸಿರುವುದಾಗಿ ಹೇಳಿದರು. ಅಲ್ಲದೆ ಇವರನ್ನು ತಮ್ಮ ಖಾಸಗಿ ಆಸ್ತಿಯೆಂದು ಹೇಳಿದ್ದರು. ಕೊನೆಗೆ ಸುನಂದ, ಸಾವಿತ್ರಿ, ಅಣ್ಣಮ್ಮ ಇವರ ಸಹಾಯಕ್ಕೆ ಬಂದಿದ್ದು, ಸಂವಾದ ಮತ್ತು ಮಹಿಳಾ ಎಂಬ ಸಂಘಟನೆಗಳು. ಆದರೆ ಪುರುಷ ಪ್ರಧಾನ ವ್ಯವಸ್ಥೆ ಅಸಹಾಯಕ ಅಮಾಯಕ ಹೆಣ್ಣನ್ನು ಬಹು ಸುಲಭವಾಗಿ ಮೋಸಗೊಳಿಸುವುದನ್ನು ಈ ಪ್ರಕರಣದಲ್ಲಿ ಕಂಡುಕೊಳ್ಳಬಹುದು.

ಇಲ್ಲಿ ಮನುಷ್ಯ ಮೂಲಭೂತ ಹಕ್ಕಿನ ಉಲ್ಲಂಘನೆಯಾಗುತ್ತಿದ್ದರು ಸರ್ಕಾರ ಅದನ್ನು ಶಿಕ್ಷಿಸುವ, ಗೋಜಿಗೆ ಹೋಗದಿರುವುದು ವಿಪರ್ಯಾಸ. ಈ ಮೂವರು ಮಹಿಳೆಯರ ಸ್ಥಿತಿ ಚಿಂತಾಜನಕವಾದರೂ ನಿಜ, ಆದರೆ ಈ ಬಗೆಯ ಘಟನೆಗಳು ಮತ್ತೆ ಘಟಿಸದಂತೆ ಅಂಗಡಿಯ ಮಾಲೀಕರಿಗೆ ಯಾವ ಶಿಕ್ಷೆಯನ್ನು ವಿಧಿಸಲಿಲ್ಲ. ಈ ಬಗೆಯ ಘಟನೆಗಳು ಪೋಲಿಸರ ಆದಾಯವನ್ನು ಹೆಚ್ಚಿಸಲು ಸಹಾಯಕವಾಗಿವೆಯೆಂದು ಹೇಳಬಹುದು. ಆದಾಯದ ಮೂಲವೆಂದು ಇದನ್ನು ಗುರುತಿಸುವುದಾದರೆ, ಈ ಘಟನೆಗಳಿಗೆ ಪರಿಹಾರ ಸಿಗದೇ ಇದ್ದರೆ ಬಡ ಕಾರ್ಮಿಕರು ಜೀವನ ನಡೆಸುವುದು ತುಂಬ ಕಷ್ಟಕರ ಎಂದು ಸ್ಪಷ್ಟಪಡಿಸಬಹುದು. ಅಧಿಕಾರಶಾಹಿ ವ್ಯವಸ್ಥೆಯು ಮಹಿಳಾ ಪರ ದೃಷ್ಟಿಕೋನದಿಂದ ಚಿಂತಿಸಿದಾಗ ಮಾತ್ರ ನ್ಯಾಯ ದೊರೆಯಲು ಸಾಧ್ಯಗುತ್ತದೆ. (ಹೆಸರು :ಸುನಂದಮ್ಮ, ವಯಸ್ಸು : ೨೧, ಊರು : ಹಾಸನ ಪಕ್ಕ ಒಂದು ಹಳ್ಳಿ, ವಿದ್ಯಾರ್ಹತೆ : ಎಸ್. ಎಸ್.ಎಲ್. ಸಿ, ಜಾತಿ : ರೆಡ್ಡಿ)[೨]

೫.೨.೩ ಮಾನಸಮ್ಮಳ ಪ್ರಕರಣ

ನಿರೂಪಣೆ

ನನ್ನ ಹೆಸರು ಮಾನಸಮ್ಮ ನಮ್ಮದು ಬ್ಯಾಟರಾಯನಪುರ. ನಾವು ಎಲ್ಲಿಂದಲೂ ಇಲ್ಲಿ ಬಂದಿಲ್ಲ. ಮೊದಲಿನಿಂದಲೂ ಇದೇ ಊರು. ನಮ್ಮ ತಾತ, ಮುತ್ತಾತರೆಲ್ಲ ಬಾಳಿ ಬದುಕಿದ್ದು ಇಲ್ಲೆ. ನಾನು

[illegible]

[illegible]

[illegible]

[illegible]

ಸುಮಾರು ೧೫ ವರ್ಷಗಳಿಂದ ಬ್ಯಾಟರಾಯನಪುರದಲ್ಲೆ ಇರುವ ಗಾರ್ಮೆಂಟ್‌ನಲ್ಲಿ ಕೆಲ್ಸ ಮಾಡ್ತಾ ಇದೀನಿ ನಾನು ನನ್ನ ಗಂಡ ಮಕ್ಕಳು ಹರೀಶ್, ಅಂಕೇಶ್,. ನನ್ನ ಗಂಡನೂ ಇದೇ ಗಾರ್ಮೆಂಟ್‌ನಲ್ಲೇ ಕೆಲ್ಸ ಮಾಡ್ತಾರೆ. ನನ್ನ ದೊಡ್ಡ ಮಗ ಹುಟ್ಟಿದಾಗ ಚಿಕ್ಕವನಾಗಿದ್ದರಿಂದ ಮನೆಯಲ್ಲಿ ಬಿಟ್ಟು ಬರಲು ಆಗ್ತಾ ಇರಲಿಲ್ಲ. ಮಗುನ ನೋಡಿಕೊಳ್ಳೋದೆ ನನಗೆ ದೊಡ್ಡ ಸಮಸ್ಯೆ ಆಗೋಯ್ತು. ಯಾವುದೋ ಒಂದು ಸಂಸ್ಥೆಯವರು ಬಂದಿದ್ರು, ತುಂಬಾ ದಿನ ಆಯ್ತು ಅದರ ಹೆಸರು ಜ್ಞಾಪಕಯಿಲ್ಲ. ಅವರು ಬಂದು ನಮ್ಮ ಸಮಸ್ಯೆಗಳನ್ನ ವಿಚಾರಿಸಿದ್ರು. ನಮ್ಮ ಹಕ್ಕುಗಳಿಗಾಗಿ ನಾವು ಹೋರಾಟ ಮಾಡಬೇಕು ಅಂತ ಹೇಳಿದ್ರು. ಚೈಲ್ಡ್‌ಕೇರ್ ಸೆಂಟರ್ ಮಾಡೋದಕ್ಕೆ ಡಿಮ್ಯಂಡ್ ಮಾಡಿ ಅಂತ ಹೇಳಿದ್ರು. ಅದೇ ತರಾನೇ ನಾವು ಒಂದು ದಿನ ಕೆಲ್ಸ ಮಾಡದೇ ಸ್ಟ್ರೈಕ್ ಮಾಡಿದ್ವಿ. ನಮಗೆ ನಮ್ಮ ಮಕ್ಕಳನ್ನು ನೋಡಿಕೊಳ್ಳಲು ಚೈಲ್ಡ ಕೇರ್ ಸೆಂಟರ್ ಮಾಡಬೇಕು. ಗಾರ್ಮೆಂಟ್ಸನಲ್ಲಿ ಕಾನೂನು ಪ್ರಕಾರ ಇದು ನ್ಯಾಯಯುತ ಮಾಡಲೇಬೇಕಾದುದು, ನೀವು ಇದನ್ನ ಮಾಡದೇ ಇದ್ರೆ, ನಾವು ಕೆಲ್ಸ ಮಾಡಲ್ಲ ಅಂತ ಹೇಳಿದ್ವಿ. ಅವರು ಅದಕ್ಕೆ ಏನೋ ತಲೆ ಕೆಡಿಸಿ ಕೊಳ್ಳಲಿಲ್ಲ. ನಮ್ಮ ಗಲಾಟೆ ಹೀಗೆ ಒಂದು ವಾರ ಕಳೆಯಿತು. ನಾವು ಎಷ್ಟು ಸ್ಟ್ರೈಕ್ ಮಾಡಿದ್ರು ಓನರ್ ನಾವು ತರಹದ ಸೌಲಭ್ಯಗಳನ್ನು ಕೊಡವುದಕ್ಕೆ ಆಗಲ್ಲ. ನಾವು ಇರೋದು ಹೀಗೆ ನಿಮಗೆ ಇಷ್ಟ ಇದ್ರೆ ಕೆಲ್ಸ ಮಾಡಿ ಇಲ್ಲದಿದ್ದರೆ ಬೇರೆಕಡೆ ಹೋಗಿ ಕೆಲ್ಸ ಮಾಡಿ ಗೊತ್ತಾಗುತ್ತೆ ಅಂತ ಹೇಳಿದ್ರು, ನಮಗೂ ಗಾಬರಿ ಆಯ್ತು ಏನು ಮಾಡೋದು ಅಂತ. ಅವತ್ತು ಮಾರನೇ ದಿನ ಇಡೀ ಗಾರ್ಮೆಂಟ್ ಚನ್ನಪಟ್ಟಣಕ್ಕೆ ಶಿಫ್ಟ್ ಮಾಡಿದ್ರು. ಇದರ ಬಗ್ಗೆ ನಮಗೆ ಯಾವುದೇ ಮಾಹಿತಿ ಕೊಡಲಿಲ್ಲ. ಇಷ್ಟು ದಿವಸ ಕೆಲ್ಸ ಮಾಡಿ ಏನು ಪ್ರಯೋಜನ, ಯಾರ ಹತ್ರ ಹೇಳೋದು ಅಂತ ಸುಮ್ಮನಾದ್ವಿ.

ಆಮೇಲೆ ರ್‍ಯಾಂಡಮ್ ಗಾರ್ಮೆಂಟ್ಸ್‌ಲ್ಲಿ ಕೆಲಸಕ್ಕೆ ಸೇರಿಕೊಂಡ್ವಿ, ಇಲ್ಲಿ ಬರೇ ಜೀನ್ಸ್ ಫ್ಯಾಂಟಗಳನ್ನು ಹೊಲಿಯೊ ಕೆಲ್ಸ ಮಾಡ್ತಾರೆ. ಇದರಲ್ಲಿ ನಾನು ಐರನ್ ಮಾಡೋ ಕೆಲ್ಸ ಮಾಡ್ತೀನಿ. ಕೆಲವು ಸಲ ಕಸಗುಡಿಸೋ ಕೆಲ್ಸ ಮಾಡ್ತೀನಿ. ೨,೫೦೦ ರೂಪಾಯಿ ಕೊಡ್ತಾರೆ. ಓಟಿ (ಓವರ್ ಟೈಮ್) ಕೆಲ್ಸ ಮಾಡ್ತಿನಿ. ತಿಂಗಳಿಗೆ ೩,೫೦೦ ರೂ. ಬರುತ್ತದೆ. ಹೇಗೋ ಜೀವನ ಮಾಡ್ತಾ ಇದೀನಿ. ನನ್ನ ದುಡಿಮೆಯಲ್ಲಿ ಆಸ್ಪತ್ರೆಗೆ ಜಾಸ್ತಿ ದುಡ್ಡು ಖರ್ಚಾಗುತ್ತೆ. ನನ್ನ ಗಂಡ ಇದೇ ಫ್ಯಾಕ್ಟರಿಯಲ್ಲಿ ಸೆಕ್ಯುರಿಟಿ ಕೆಲ್ಸ ಮಾಡ್ತಾ ಇದ್ದಾರೆ.

ಎಷ್ಟೇ ಕೆಲ್ಸಕ್ಕೆ ಹೋದ್ರು ಹೆಣ್ಣು ಮಕ್ಕಳು ಮಾಡೋದು ಅಷ್ಟು ಈಜಿ ಇಲ್ಲರಿ, ತುಂಬ ಕಷ್ಟ. ಯಾರೇ ಏನೂ ಅಂದ್ರು ಅನಿಸಿಕೊಳ್ಳಬೇಕು, ಏನಾದ್ರೂ ಜಾಸ್ತಿ ಜೋರ್ ಮಾಡಿದ್ರೆ ಅಟೆಂಡೇನ್ಸ್‌ಕೊಡಲ್ಲ ಸುಮ್ನೆ ತೆಪ್ಪಗಿರಬೇಕಾಗುತ್ತದೆ. ಸುಮ್ನೆ ಕೆಲಸ ಮಾಡಲು ಕಾಯಿಸೋದು, ಸಿಂದಿಬಟ್ಟೆಗಳಿಂದ ಗಂಟುಮಾಡಿ ಎದೆಗೆಲ್ಲಾ ಹೊಡಿತಾರೆ. ಇದನ್ನೆಲ್ಲಾ ಹೆಣ್ಣು ಮಕ್ಕಳು ಯಾರೂ ಕೇಳಲ್ಲ. ಇದನ್ನೆಲ್ಲ ಹೇಳಿಕೊಂಡು, ಕೇಳಿಕೊಂಡು ಸುಮ್ಮನಾಗ್ತಾರೆ. ಒಂದ್ಸಲ ಅಂದ್ರೆ ಜಗಳ ಮಾಡಬಹುದು, ಆದರೆ ಪದೇ ಪದೇ ಎಷ್ಟು ಸಾರಿ ಅಂತ ಜಗಳ ಮಾಡೋದು.

[illegible]

ವಿಶ್ಲೇಷಣೆ

ಬ್ಯಾಟರಾಯನ ಪುರದಲ್ಲಿ ವಾಸವಾದ ಮಾನಸಮ್ಮ ತಮ್ಮ ಗಾರ್ಮೆಂಟ್ಸ್ ಸಮಸ್ಯೆಗಳನ್ನು ವಿಭಿನ್ನವಾಗಿ ಹೇಳಿಕೊಂಡಿದ್ದಾರೆ. ಗಾರ್ಮೆಂಟ್ಸ್‌ಗಳಲ್ಲಿ ಯಾವುದೇ ಸೌಲಭ್ಯಗಳಿಲ್ಲದೆ ಇರುವುದನ್ನು ಕಂಡು, ತುಂಬಾ ಅಸಹಾಯಕಳಾದ ಇವಳು ಯಾವುದೋ ಒಂದು ಸಂಸ್ಥೆಯವರು ಬಂದು ನೀಡಿದ ಕೆಲವು ಮಾಹಿತಿಗಳಿಂದಾಗಿ ಇವರು ತಮ್ಮ ಹಕ್ಕುಗಳಿಗಾಗಿ ಹೋರಾಟಕ್ಕಿಳಿದಿರುವುದು ಸಮರ್ಥನೀಯ ಸಂಗತಿಯೇ ಆಗಿದೆ.

ಬಹುಪಾಲು ವಿವಾಹಿತರು ಕೆಲಸ ಮಾಡುತ್ತಿರುವ ಈ ಫ್ಯಾಕ್ಟ್ರಿಯಲ್ಲಿ (ಚೆಲ್ಡ್ ಕೇರ್ ಸೆಂಟರ್) ಶಿಶು ಸಂರಕ್ಷಣಾ ಕೇಂದ್ರವು ಅಗತ್ಯವಾಗಿ ಬೇಕಾಗಿರುವ ಬೇಡಿಕೆಯನ್ನು ಮತ್ತು ತಮ್ಮ ದುಡಿಮೆಗೆ ಸಲ್ಲಬೇಕಾದ ಬೋನಸ್ ಒಳಗೊಂಡ ಬೇಡಿಕೆಗಳನ್ನು ಮುಂದಿಟ್ಟರು. ಇವುಗಳೆಲ್ಲವನ್ನು ಆಲಿಸಿದ ಗಾರ್ಮೆಂಟ್ಸ್ ಮಾಲೀಕರು ತಲೆ ಕೆಡಿಸಿಕೊಳ್ಳಲಿಲ್ಲ. ಇಂದಿನ ಸಂದರ್ಭದಲ್ಲಿ ಹೆಚ್ಚುತ್ತಿರುವ ನಿರುದ್ಯೋಗದಿಂದಾಗಿ,ಅಸಹಾಯಕರಾಗಿ ವಿಧಿ ಇಲ್ಲದೆ ಅನಿವಾರ್ಯವಾಗಿ ಕೆಲಸ ಮಾಡುತ್ತಿರುವುದನ್ನು ಕಾಣಬಹುದು. ಇದನ್ನೆ ದುರುಪಯೋಗ ಪಡಿಸಿಕೊಂಡು ಅಂದರೆ ಈ ಪ್ರಕರಣದಲ್ಲಿ ಮಾಲಿಕತ್ವ ಅಧಿಕಾರವು ಯಾವ ಬಗೆಯಲ್ಲಿ ಕಾರ್ಮಿಕರು ಬೇಡಿಕೆಗಳಿಗೆ ಸ್ಪಂದಿಸುವುದು ಕಂಡು ಬಂದಿಲ್ಲ ಕಾರ್ಮಿಕರು ಎಷ್ಟೆ ಹೋರಾಟ ಮಾಡಿದರು ತಲೆಕೆಡಿಸಿಕೊಳ್ಳದ ಸಹಕಾರ ನೀಡದ ಸರ್ಕಾರದ ಆಡಳಿತವನ್ನು ಕೂಡ ಪ್ರಶ್ನಿಸಬಹುದಾಗಿದೆ. ಬ್ಯಾಟರಾಯನ ಪುರದ ಈ ಕಂಪನಿಯು ಅಲ್ಲಿನ ಕೆಲಸಗಾರರು ಒಂದು ವಾರ ಹೋರಾಟಕ್ಕಿಳಿದರು ತೆಲೆ ಕೆಡಿಸಿಕೊಳ್ಳದೆ, ಅವರಿಗೆ ಯಾವುದೇ ಬಗೆಯ ಸೌಲಭ್ಯಗಳನ್ನು ನೀಡಲು ನಿರಾಕರಿಸಿದ್ದು ಕಂಡುಬರುತ್ತದೆ.

ಅಲ್ಲದೆ ಕೆಲಸಗಾರರಿಲ್ಲದೆ ಫ್ಯಾಕ್ಟ್ರಿಯು ಮುಚ್ಚಲ್ಪಡುವ ಸಂಗತಿಯತ್ತ ಸಾಗಬೇಕು ಆದರೆ ಇಲ್ಲಿ ಆ ಬಗೆಯ ಪರಿಣಾಮಗಳು ಕಾಣದೆ, ಇಡಿಯಾದ ಫ್ಯಾಕ್ಟ್ರಿಯೇ ಬೇರೊಂದು ಸ್ಥಳಕ್ಕೆ (ಚನ್ನ ಪಟ್ಟಣಕ್ಕೆ) ವರ್ಗಾವಣೆಯಾಗಿ, ಹೊಸ ಕೆಲಸಗಾರರನ್ನು ನೇಮಿಸಿಕೊಂಡು ಲಾಭವನ್ನು ಮಾಡುತ್ತಿದೆ. ಹಾಗೆಯೇ ಮೊದಲಿನ ಆ ಕೆಲಸಗಾರರಿಗೆ ದುಡಿದ ಸಂಬಳವು ಸಿಗದೆ, ಅವರಿಗೆ ಯಾವುದೇ ಮಾಹಿತಿಯು ಕೊಡದೆ ಫ್ಯಾಕ್ಟ್ರಿಯನ್ನು ಸ್ಥಳಾಂತರಿಸಿದ್ದು, ಬಂಡವಾಳಶಾಹಿಗಳ ಅಧಿಕಾರಶಾಹಿ ಧೋರಣೆ ಬಿತ್ತರಿಸುತ್ತದೆ. ಲಾಭವನ್ನೆ ಕೇಂದ್ರವಾಗಿಸಿಕೊಂಡು, ಗಾರ್ಮೆಂಟ್ಸ್ ಮಾಲೀಕರು ಅಲ್ಲಿನ ಕೆಲಸಗಾರರನ್ನು ಬಲಿಪಶುವನ್ನಾಗಿ ಮಾಡುತ್ತವೆ. ಕಾನೂನು ಪ್ರಕಾರ ಪ್ರತಿಯೊಂದು ಫ್ಯಕ್ಟ್ರಿಯಲ್ಲಿ ಶಿಶುಪಾಲನ ಕೇಂದ್ರ ವ್ಯವಸ್ಥೆ ಕಲ್ಪಿಸಬೇಕು ಅಂತ ಇದ್ದರು ಕೂಡ ಯಾವುದು ವ್ಯವಸ್ಥೆಯನ್ನು ಕಲ್ಪಿಸರುವುದು ಕ್ಷೇತ್ರಧ್ಯಯನದಲ್ಲಿ ಕಂಡುಬರುತ್ತದೆ.

ಮಾನಸಮ್ಮ ಹೇಳುವಂತೆ ಅಲ್ಲಿ ಹೆಣ್ಣುಮಕ್ಕಳು ಕೆಲಸಮಾಡುವುದು ಸಾಕಷ್ಟು ಕಷ್ಟದಾಯಕವಾದುದು. ಅದಕ್ಕೆ ಅವರು ಹೆಣ್ಣನ್ನು ದೇಹದ ನೆಲೆಯಿಂದ, ಮತ್ತು ಕಾಮದ ಬೊಂಬೆಯಾಗಿ ಪರಿಗಣಿಸಿ ಅವರೊಂದಿಗೆ ವರ್ತಿಸುವುದು ಕಂಡುಬರುತ್ತದೆ. ಒಂದೆಡೆ ಗಾರ್ಮೆಂಟ್ಸ್‌ನಲ್ಲಿ ಹೋರಾಟ ಮಾಡಿದ್ದರೆ ಪ್ರತಿಫಲವಾಗಿ ಅವರು ಪಡೆದಿದ್ದು ಕೆಲಸ ಕಳೆದುಕೊಂಡು, ಇನ್ನೊಂದೆಡೆ ಕೆಲಸಕ್ಕೆ ಅಲೆಯಬೇಕಾಗಿ

ಬಂದಿರುವುದು ಕಂಡುಬರುತ್ತದೆ. (ಹೆಸರು :ಮಾನಸಮ್ಮ, ವಯಸ್ಸು : ೨೨, ಊರು : ಬ್ಯಾಟರಾಯನಪುರ, ವಿದ್ಯಾರ್ಹತೆ : ೮ನೇ ತರಗತಿ, ಜಾತಿ : ಒಕ್ಕಲಿಗ)[೩]

೫.೨.೪. ಸೆಲ್ವಿ ಕೆ. ಪ್ರಕರಣ

ನಿರೂಪಣೆ

ನಮ್ಮದು ತಮಿಳುನಾಡಿನ ಕನಕಗಿರಿ. ನಾವು ಇಲ್ಲಿಗೆ ಬಂದು ಸುಮಾರು ೩೦-೪೦ ವರ್ಷಗಳಾಗಿದೆ. ನಮ್ಮ ಅಪ್ಪ ಇಲ್ಲಿ ಗೋಲ್ಡ್ ಮೈನಿಂಗ್‌ನಲ್ಲಿ ಕೆಲ್ಸಕ್ಕೆ ಅಂತ ಬಂದು ಲೇಬರ್ ಆಗಿ ಕೆಲಸಕ್ಕೆ ಸೇರಿಕೊಂಡರು. ಎಕ್ಸಫಿರಿಯಂನ್ಸ್ ಆದ ಹಾಗೆಲ್ಲ ನಮಗೆ ಕ್ವಾಟ್ರರ್ಸ್ ಎಲ್ಲ ಕೊಟ್ಟರು. ಮೊದ್ಲು ಕಂಪನಿ ಚೆನ್ನಾಗಿ ನಡಿತಾ ಇತ್ತು. ಮೈನಿಂಗ್ ಕ್ಲೋಜ್ ಆದ ಮೇಲೆ ನಾವು ಎನು ಮಾಡಬೇಕು ಅಂತ ಗೊತ್ತಾಗಲಿಲ್ಲ. ನಮ್ಮಂತೆ ಇಲ್ಲಿ ಸುಮಾರು ೩೫೦೦ ಕುಟುಂಬಗಳು ಬೀದಿಪಾಲಾಗ್ಯಾವ. ಕೆ.ಜಿ.ಎಫ್. ನಲ್ಲಿ ನಮಗೆ ಸರಿಯಾಗಿ ಕೆಲ್ಸ ಸಿಗಲಿಲ್ಲ ಅದಕ್ಕೆ ನಾವು ಬೆಂಗಳೂರಿನ ಗಾರ್ಮೆಂಟ್ಸೆ ಕೆಲ್ಸಕ್ಕೆ ಹೋಗ್ತಿವಿ. ಇಲ್ಲಿಂದ ಬೆಂಗಳೂರಿಗೆ ಡೈರೆಕ್ಟ್ ಟ್ರೈನ್ ಇದೆ. ಪಾಸ್ ಮಾಡಿಸಿವಿ. ಬೆಳಿಗ್ಗೆ ಏಳು ಘಂಟೆಗೆ ಹೋಗಿ ರಾತ್ರಿ ೯.೩೦ ಕ್ಕೆ ಬರ್ತಿವಿ. ದಿನಾಲು ಇಲ್ಲಿಂದ ಸುಮಾರು ೨೦೦೦ ರಿಂದ ೫೦೦೦ ರವರೆಗೆ ಮಹಿಳೆಯರು ಬೆಂಗಳೂರಿನ ಗಾರ್ಮೆಂಟ್ಸ್‌ಗೆ ಹೋಗಿ ಬರ್ತಾರೆ.

ಓಟಿ(ಓವರ್ ಟೈಮ್) ಕೆಲ್ಸ ಮಾಡುವಾಗಂತು ನಾವು ಹೋಗಿ ಬರೋದಕ್ಕೆ ಪಡೋ ಕಷ್ಟ ಯಾರಿಗೂ ಬೇಡ. ಇಲ್ಲಿ ಸಂಬಳ ೨೦೦೦ ರೂ ತಿಂಗಳಿಗೆ ಕೊಡ್ತಾರೆ. ಸುಮಾರು ದಿನಗಳಿಂದ ಕೆಲ್ಸ ಮಾಡ್ತಾ ಇದ್ರು. ಸಂಬಳ ಜಾಸ್ತಿ ಮಾಡ್ತಾ ಇಲ್ಲ. ನಮ್ಮ ಮನೆಯಲ್ಲಿ ೮ ಜನ ಇದೀವಿ ನಾನು ನನ್ನ ಅಪ್ಪ, ಅಮ್ಮ, ತಮ್ಮ, ತಂಗಿ, ಅಕ್ಕ, ಅತ್ತೆ ಹೀಗೆ ನಮ್ಮ ಕುಟುಂಬ ಇದೆ. ನಮ್ಮನೆಯಲ್ಲಿಯೇ ನಾನು, ಅತ್ತೆ ನನ್ನ ಇಬ್ರು ತಂಗಿಯರು ಗಾರ್ಮೆಂಟ್‌ಗೆ ಹೋಗ್ತಾ ಇದೀವಿ.

ಇಲ್ಲಿಯ ಕೆಲ್ಸ ತುಂಬ ಕಷ್ಟ ಅಂದ್ರೆ ತುಂಬಾ ಕಷ್ಟ. ಆದ್ರೆ ನಮಗೆ ಅದನ್ನು ಬಿಟ್ರೆ ಬೇರೆ ದಾರಿಯಿಲ್ಲ. ಮನೆ ಪಕ್ಕ ಇರುವ ಕೆಲವು ಹೆಣ್ಣು ಮಕ್ಕಳು ಈ ಕೆಲ್ಸ ಕಷ್ಟ ಅಂತ ಬೆಂಗಳೂರಿನಲ್ಲಿ ಸೆಕ್ಸ್ ವರ್ಕ ಮಾಡ್ತಾರೆ. ಈ ಒಂದು ಗೇಣು ಹೊಟ್ಟೆ ಏನೆಲ್ಲಾ ಮಾಡಿಸುತ್ತೆ ನೋಡಿ. ನಾವು ಇಂತಹ ಕೆಲ್ಸಕ್ಕೆ ಹೋಗೋ ಪರಿಸ್ಥಿತಿ ಬಂದ್ರೆ ಹೆಂಗಪ್ಪ ಅಂತ ಭಯ ಆಗುತ್ತೆ. ಅದಕ್ಕೆ ಎಷ್ಟೇ ತೊಂದ್ರೆ, ಕಷ್ಟ ಆದ್ರೂ ಪರವಾಗಿಲ್ಲ ಅಂತ ಈ ಗಾರ್ಮೆಂಟ್ಸ್ ಕೆಲ್ಸನೇ ಮಾಡ್ತಿದಿವಿ. ಬೆಳಿಗ್ಗೆ ೪ ಗಂಟೆಗೆ ಏಳ್ತಿವಿ. ಮನೆ ಕೆಲ್ಸ ಎಲ್ಲಾ ಮುಗಿಸಿಕ ಮಕ್ಕಳಿಗೆಲ್ಲಾ ನೋಡಿಕೊಂಡುಬೆಳಿಗ್ಗೆ ಬಿಟ್ರೆ ರಾತ್ರಿ ೯:೩೦ ಕ್ಕೆ ಬರ್ತಿವಿ. ಅಂದರೆ ಕೆ. ಜಿ. ಎಫ್.ನಲ್ಲಿ ಬೆಳಕನ್ನೇ ನೋಡಲ್ಲ. ಅಂತಹ ಪರಿಸ್ಥಿತಿ ನಮಗೆ ಒದಗಿ ಬಂದಿದೆ. ತುಂಬಾ ಕಡಿಮೆ ನಿದ್ದೇ ಮಾಡೋದ್ರಿಂದ ಗಾರ್ಮೆಂರ್ಟನಲ್ಲಿ ಸೂಜಿ ನೋಡಿ ನೋಡಿ ಕಣ್ಣು ದೃಷ್ಟಿನೇ ಕಡಿಮೆ ಆಗೋಗಿದೆ. ಹೆಚ್ಚುಕಮ್ಮಿ ಸರಿಯಾಗಿ ಡೇಟ್ ಆಗೋದೆ ಇಲ್ಲ. ಆಸ್ಪತ್ರೆಯಲ್ಲಿ ತೋರಿಸಿ ಕೊಂಡ್ವಿ ಆದ್ರೆ ವಾಸಿ ಆಗ್ತಾ ಇಲ್ಲ. ಈಗಲೂ ತೋರಿಸಿಕೊಳ್ತಾ ಇದೀವಿ. ಅವರ ಕೈಯ ಬೆರಳಿನ ಉಗುರಿನ ಮೇಲೆಲ್ಲಾ

[illegible]

[illegible]

[illegible]

[illegible]

[illegible]

ತೂತುಗಳಿವೆ. ಈ ರೀತಿಯ ಗಾರ್ಮೆಂಟ್ ಕೆಲಸದಿಂದ ಬೆರಳುಗಳು ಈ ತರಹ ಆಗುತ್ತೆ ಎಂದು ಸ್ವೆಲ್ವಿ ತೋರಿಸುವರು. ನಮ್ಮ ಕಷ್ಟಗಳನ್ನು ಇನ್ನೂ ಕೇಳ ಬೇಡ ಬಿಡಮ್ಮ ಏನು ಇಂತ ಕಷ್ಟಗಳನ್ನು ಹೇಳೋದು. ಇಂತಹ ಹಲವಾರು ಸಮಸ್ಯೆಗಳ ಸುಳಿಯಲ್ಲಿ ಈ ಗಾರ್ಮೆಂಟ್ಸಗಳಲ್ಲಿ ದುಡಿಯುವ ಮಹಿಳೆಯರ ಬದುಕು ತುಂಬಾ ದುಸ್ಥಿತಿಯಲ್ಲಿದೆ.

ವಿಶ್ಲೇಷಣೆ

ಪ್ರಸ್ತುತ ಪ್ರಕರಣವು ಸುಮಾರು ೨೦೦೦ ದಿಂದ ೫೦೦೦ ದವರೆಗಿನ ಮಹಿಳೆಯರು ಗಾರ್ಮೆಂಟ್ಸ್‌ಗೆ ಹೋಗುವ ಸಂಗತಿಯನ್ನು ಹೊರಹಾಕುತ್ತದೆ. ಅಲ್ಲದೆ ಇವರ ಮಾಸಿಕ ವೇತನವನ್ನು, ಇವರ ಒಟ್ಟು ಕೆಲಸದ ಅವಧಿ ಬೆಳಿಗ್ಗೆ ೪:೦೦ ಗಂಟೆಯಿಂದ ರಾತ್ರಿ ೧೧:೦೦ ಗಂಟೆಯೆಂಬುದು ಖಚಿತವಾಗುತ್ತದೆ. ಮಹಿಳೆಯೊಬ್ಬಳು ಕುಟುಂಬ ಮತ್ತು ಉದ್ಯೋಗವನ್ನು ನಿಭಾಯಿಸುತ್ತಿರುವವರ ದುಡಿಮೆಯ ಅವಧಿ ಸಾಮಾನ್ಯವಾಗಿ ೪:೩೦ ರಿಂದ ೧೧:೦೦ ಗಂಟೆಯವರೆಗೂ ಆಗುತ್ತದೆಯೆಂಬುದು ಸಾಕಷ್ಟು ಅಧ್ಯಯನಗಳು ಸ್ಪಷ್ಟ ಪಡಿಸಿವೆ. ಅದರಲ್ಲೂ ಗಾರ್ಮೆಂಟ್ಸ್ ಮಹಿಳೆಯರ ಕೆಲಸವು ಅತೀ ಹೆಚ್ಚಿನ ಏಕಾಗ್ರತೆಯನ್ನು ನಿರೀಕ್ಷಿಸುವುದರಿಂದ, ಇಲ್ಲಿ ಕೊಂಚ ಲಕ್ಷ ತಪ್ಪಿದರೂ ಪರಿಣಾಮವನ್ನು ಭೀಕರವಾಗಿ ಅನುಭವಿಸಬೇಕಾಗುತ್ತದೆ.

ನಿದ್ರಾಹೀನತೆಯಿಂದಾಗಿ ಅನೇಕ ಕಾಯಿಲೆಗಳು ಅದು ಇವತ್ತಿನ ಸಂದರ್ಭದಲ್ಲಿ ಸುಲಭವಾಗಿಯೇ ಬರುತ್ತವೆ. ಹೆಣ್ಣುಮಕ್ಕಳಲ್ಲಿ ಈ ಬಗೆಯ ಕೆಲಸದ ಒತ್ತಡಗಳು ಋತುಚಕ್ರದಲ್ಲಿ ಏರುಪೇರುಂಟುಮಾಡುತ್ತಿದೆ. ರಾತ್ರಿಯಿಡಿ ನಿದ್ರೆಯಿಲ್ಲದೆ, ಕೆಲಸದ ಅವಧಿಯಲ್ಲಿ ಸೂಜಿಯನ್ನು ಏಕಾಗ್ರತೆಯಿಂದ ನೋಡುವುದರಿಂದ ದೃಷ್ಟಿದೋಷದಂತಹ ಸಮಸ್ಯೆಗೆ ಗಾರ್ಮೆಂಟ್ಸ್ ಮಹಿಳೆಯರು ಒಳಗಾಗುತ್ತಿದ್ದಾರೆ. ಈ ಪ್ರಕರಣದಲ್ಲಿ ಮಾಲೀಕರು ಕಾರ್ಮಿಕರ ಆರೋಗ್ಯದ ಬಗ್ಗೆ ನಿಷ್ಕಾಳಜಿಯನ್ನು ತೋರಿಸುತ್ತದೆ. ಯಾವ ತೊಂದರೆಗಳು ಆದರೂ ತಲೆ ಕೆಡಿಸಿಕೊಳ್ಳದ ಆಡಳಿತ ಶಾಹಿ ವರ್ಗವನ್ನು ಇಲ್ಲಿ ಕಾಣಬಹುದಾಗಿದೆ.

ಸಂದರ್ಶನ ಸಂದರ್ಭದಲ್ಲಿ ಬಹುಜನ ಗಾರ್ಮೆಂಟ್ಸ್ ಮಹಿಳೆಯರು ಇದೆಲ್ಲವೂ ತಮ್ಮ ಕರ್ಮ, ಪೂರ್ವಜನ್ಮದ ಫಲವೆಂದು, ವಿಧಿಯಾಟವೆಂದು ನಂಬಿಬದುಕುತ್ತಿದ್ದಾರೆ. ಹಾಗೆಯೇ ತಮ್ಮ ಮೇಲ್ಪದರದ ಸಮಸ್ಯೆಗಳನ್ನು ಮಾತ್ರ ಹೆಚ್ಚಿಕೊಳ್ಳುವುದರಲ್ಲೆ ಬೇಸತ್ತು, ಕೆಲವು ಗೌಪ್ಯ ಸಮಸ್ಯೆಗಳು ಕೇಳುವುದು, ಪಾಪಕರವೆಂಬಷ್ಟು ಕುಬ್ಜವಾಗಿದ್ದಾರೆ. ಹೀಗೆ ಗಾರ್ಮೆಂಟ್ಸ್ ಮಹಿಳೆಯರ ಬದುಕು ಅವರ ದೈಹಿಕ-ಮಾನಸಿಕ ಆರೋಗ್ಯದ ಮೇಲೆ ತೀವ್ರತರವಾದ ಪರಿಣಾಮವನ್ನುಂಟು ಮಾಡುತ್ತಿದೆ. ಎಂಬುದಕ್ಕೆ ಈ ಪ್ರಕರಣವು ಆಧಾರವಾಗಿದೆ. (ಹೆಸರು : ಸೆಲ್ವಿ ಕೆ, ವಯಸ್ಸು : ೨೮, ಊರು : ತಮಿಳುನಾಡಿನ ಕನಕಗಿರಿ, ವಿದ್ಯಾರ್ಹತೆ : ಇಲ್ಲ, ಜಾತಿ : ಕೊರವ)[೪]

೫.೨.೫ ತರನಮ್‌ಳ ಪ್ರಕರಣ

ನಿರೂಪಣೆ

ನಮ್ಮ ತಂದೆ-ತಾಯಿಗೆ ನಾನು ಒಬ್ಬಳೇ ಮಗಳು. ನನ್ನನ್ನ ಆಂದ್ರದ ಕರ್ನೂಲಿಗೆ ಮದುವೆ ಮಾಡಿಕೊಟ್ಟರು. ನನ್ನ ಗಂಡ ಬಟ್ಟೆ ಅಂಗಡಿ ವ್ಯಾಪಾರಿ. ನನಗೆ ಮೊದಲಿನಿಂದಲೂ ಹೊಲಿಗೆ ಬರ್ತಾ

[illegible]

[illegible]

[illegible]

[illegible]

[illegible]

[illegible]

[illegible]

ಇತ್ತು. ನನ್ನ ಗಂಡ ಬರ್ತಾ ಬರ್ತಾ ವರದಕ್ಷಿಣೆ ತರಲು ಪೀಡಿಸ್ತಾ ಇದ್ದರು. ಅಲ್ಲದೆ ನಾನು ಖಾಯಿಲೆ ಬಿದ್ದು ಮಲಗಿದೆ. ಸರಿಯಾಗಿ ಚಿಕಿತ್ಸೆ ಕೊಡಿಸಲಿಲ್ಲ. ನಾನು ಬಳ್ಳಾರಿಗೆ ಬಂದು ತವರಿನಲ್ಲೇ ಚಿಕಿತ್ಸೆ ಪಡೆಯುತ್ತಿದ್ದೆ. ಅದಕ್ಕೂ ಅಡ್ಡಗಾಲು ಹಾಕಿ ನಾನೇ ತೋರಿಸುತ್ತೇನೆ ಅಂತ ಕರೆದುಕೊಡು ಹೋಗಿ ಸರಿಯಾಗಿ ತೋರಿಸಲಿಲ್ಲ. ಆಮೇಲೆ ಗೊತ್ತಾಯಿತು ಅವರಿಗೆ ಖಾಯಿಲೆ ಇತ್ತು. ಅದರಿಂದ ನನಗೆ (ಎಚ್.ಐ.ವಿ) ಬಂದಿದೆ. ನನ್ನ ತೂಕ ಅಷ್ಟೇನೂ ಕಡಿಮೆಯಾಗಿರಲಿಲ್ಲ. ನಂತರ ವೈದ್ಯರು(ಏಡ್ಸ್) ಹೇಳಿದರು. ನನಗೆ ಈಗ ಏನು ಮಾಡಬೇಕೋ ತೋಚ್ತಾ ಇಲ್ಲ. ನನ್ನ ಗಂಡ ಮೊನ್ನೆ ತೀರಿಕೊಂಡರಂತೆ. ನಾನು ಹೋಗಿಲ್ಲ. ಇಲ್ಲಿ ತಂದೆ-ತಾಯಿಯರ ಹತ್ತಿರವೂ ಇಲ್ಲ. ಡಿ.ಸಿ. ನಗರ ಅಂತ ಬರುತ್ತೆ. ಅಲ್ಲಿ ರೂಂ ಮಾಡಿಕೊಂಡಿದ್ದೀನಿ, ನಾನೇ ಊಟಕ್ಕೆ ಮಾಡಿಕೊಳ್ತೀನಿ. ಇನ್ನೂ ಫಸ್ಟ್ ಸ್ಟೇಜ್ ಅಂತ ಹೇಳಿದ್ದಾರೆ. ಇಲ್ಲಿ ಯಾರಿಗೂ ಆ ವಿಷಯ ಗೊತ್ತಿಲ್ಲ. ಸಾಧ್ಯವಾದಷ್ಟು ಕುಳಿತುಕೊಂಡು ಮಾಡುವ ಕೆಲಸಗಳನ್ನ ಮಾಡ್ತೇನೆ. ನಾನೂ ಅಂತ ಅಲ್ಲ, ಇಲ್ಲಿ ಇರುವ ಶೇ ೧೦ರಷ್ಟು ಹೆಣ್ಣುಮಕ್ಕಳಿಗೆ ಈ ರೋಗವಿದೆ. ಅದಕ್ಕೆ ಅವರು ಕಾರಣರಲ್ಲ. ಸಮಯ ಸಂದರ್ಭ, ಶೋಷಣೆ ಮತ್ತು ದೌರ್ಜನ್ಯ ಕಾರಣ . ಇಂಥ ರೋಗವಿದ್ರೂ ಕೂಡ ನನ್ನಂಥವರಿಗೆ ಇಲ್ಲಿ ಶೋಷಣೆ ತಪ್ಪಲ್ಲ, ಕಣ್ ಹೊಡೀತಾರೆ, ಬರ್ತೀಯ ಅಂತ ಕರೀತಾರೆ. ಒಳ್ಳೇ ಸೈಜು ಅಂತ ಕರೀತಾರೆ. ಇಲ್ಲಿ ಕೊಡುವ ಕೂಲಿ ನನ್ನ ಆಸ್ಪತ್ರೆಗೆ ಸಾಕಾಗಲ್ಲ ಹೀಗಾಗಿ ಅದಕ್ಕೆ ಒಪ್ಪಿಕೊಳ್ತೇನೆ. ಆದ್ರೆ ಅವರಿಗೆ ಮೋಸ ಮಾಡಲ್ಲ ನಿರೋಧ ಬಳಸಿದರೆ ಮಾತ್ರ ಒಪ್ಪಿಕೊಳ್ತೇನೆ. ಹ್ಯಾಗಿದ್ರೂ ಇರೋದು ಸೂಳೆಗೇರಿ (ಆಅ ನಗರ) ಯಲ್ಲಿ. ಜೀವನ ಎಲ್ಲಿಯವರಿಗೆ ಸಾಗಿರುತ್ತೋ ಅಲ್ಲಿಯವರೆಗೆ. ಇಲ್ಲಿಯೇ ಬದುಕನ್ನು ಸಾಗಿಸುತ್ತೇನೆ. ಇಲ್ಲಿರುವ ಮುಕ್ಕಾಲು ಗಂಡಸರು ನನ್ನ ಜೊತೆ ಲೈಂಗಿಕ ಸಂಪರ್ಕ ಇಟ್ಟುಕೊಂಡಿದ್ದಾರೆ. ಔಷಧಿ, ಮನೆಬಾಡಿಗೆ, ಒಳ್ಳೆಯ ಆಹಾರ ಇದಕ್ಕೆಲ್ಲಾ ದುಡ್ಡುಬೇಕು. ಅವರಿಗೆ ಅದುಬೇಕು. ಸಾಯ್ತೇನೆ ಅಂತ ಗೊತ್ತಿದೆ. ಸಾಯೋವರೆಗೆ ಇರುವ ಜೀವನ ಮತ್ತು ಜೀವ ಚೆನ್ನಾಗಿರಬೇಕಲ್ಲ. ಬೇಜಾರ್ ಆಗುತ್ತೆ, ಕಣ್ಣೀರು ಬರುತ್ತೆ, ಬದುಕೋ ಆಸೆ ಆಗುತ್ತೆ. ಧೈರ್ಯ ಕಳೆದುಕೊಂಡ್ರೆ ಇನ್ನೂ ಬೇಗ ಸತ್ತೋಗ್‌ಬಿಡ್ತೀನಿ ಅಂತ ಆತ್ಮ ವಿಶ್ವಾಸದಿಂದ ಇದ್ದೀನಿ..

ವಿಶ್ಲೇಷಣೆ

ಪ್ರಸಕ್ತ ಪ್ರಕರಣದಲ್ಲಿ ವಿವಾಹದಿಂದಾದ ಅವಘಡಗಳು ಒಂದು ಮುಖವನ್ನು ತೆರೆದಿಡುತ್ತದೆ. ಆದರೆ ಇದು ಮಹಿಳೆಯೊಬ್ಬಳು ಗಾರ್ಮೆಂಟ್ಸ್ ಕೆಲಸಕ್ಕೆ ಬರುವ ಅನಿವಾರ್ಯತೆಯನ್ನು ಹೇಳುತ್ತದೆ. ವರದಕ್ಷಿಣೆಯಿಂದ ನಿರಂತರ ಹಿಂಸೆಯನ್ನು ಅನುಭವಿಸಿ, ಗಂಡನಿಂದಾಗಿ ಏಡ್ಸ್ ಕಾಯಿಲೆಯಿಂದ ನರುಳುತ್ತಿರುವ ತರನಮ್ ಚಿಕಿತ್ಸೆಗಾಗಿ ತವರಿಗೆ ಬಂದರೂ, ಸಾಂಪ್ರದಾಯಿಕ ಸಮಾಜ ವ್ಯವಸ್ಥೆಯಲ್ಲಿ ಹೆಣ್ಣನ್ನು ಖಾಸಗಿ ಆಸ್ತಿಯಾಗಿ ಪರಿಗಣಿಸುವ ನಿಟ್ಟಿನಲ್ಲಿ ವಿವಾಹದ ನಂತರ ಹೆಂಡತಿಯನ್ನು ತನ್ನ ಸ್ವಂತದ ಸ್ವತ್ತೆಂದು, ತನ್ನಿಚ್ಛೆಗೆ ಅನುಗುಣವಾಗಿ ಅವಳ ಜೀವಿತವು ಇರಬೇಕೆಂಬ ಸಂಗತಿಯು ತರನಮ್‌ಳ ಬದುಕಿನಲ್ಲಿಯೂ ಕಾಣುತ್ತದೆ. ಅವಳಿಗೆ ಚಿಕಿತ್ಸೆಯೂ ನಡೆಯಬಾರದೆಂಬ ಹಿನ್ನೆಲೆಯಲ್ಲಿ ಮತ್ತೆ ಅವಳನ್ನು ಕರ್ನೂಲ್‌ಗೆ ಕರೆದುಕೊಂಡು ಹೋಗುತ್ತಾರೆ. ಆದರೆ ಆ ನಂತರ ಅವಳಿಗೆ ಮತ್ತೆ, ಮತ್ತೆ ಹಿಂಸೆಗಳು ಅನುಭವಿಸಲು ಸಾಧ್ಯವಾಗದಾಗ ಮತ್ತೆಮತ್ತೆ ತವರಿಗೆ ಹೋದರೆ ಹಿಂಸಿಸುತ್ತಾನೆಂಬ ಭಯದಿಂದ,

ಅವಳು ಅನಿವಾರ್ಯವಾಗಿ ಸೂಳೆಗೆರೆಯಲ್ಲಿ ವಾಸವಾಗುತ್ತಾಳೆ. ಆದರೆ ಬಾವಿಯಲ್ಲಿನ ಕಪ್ಪೆ ನೀರು ಕುಡಿದರೂ ಬಂತು, ಕುಡಿಯದಿದ್ದರೂ ಬಂತು ಎನ್ನುವ ಗಾದೆ ಮಾತಿನಂತೆ, ಆ ವಾತಾವರಣದಲ್ಲಿರುವುದರಿಂದ ಅವಳು ಹಾಗೆಯೇ ಎಂದು ಜನ ಭಾವಿಸಿದ್ದು, ಗಾರ್ಮೆಂಟ್ಸ್‌ನಲ್ಲಿಯೂ ಅವಳನ್ನು ಅದೇ ದೃಷ್ಟಿಯಿಂದ ನೋಡುತ್ತಿರುವುದು, ಹಾಗೂ ಆ ಬಗೆಯ ಕ್ರೂರ ವರ್ತನೆಗಳನ್ನು ಅವರ ಮಾತುಗಳಲ್ಲೇ ಹೊರಹಾಕಿದ್ದಾರೆ. ಕಾಯಿಲೆ ಇರುವಾಗಲೂ ಸಹ, ತನ್ನ ಆಸ್ಪತ್ರೆಯ ಖರ್ಚಿನ ವಿಷಯದಲ್ಲಾದ ಅನುಕೂಲದಿಂದಾಗಿ ಅವಳು ಈ ಬಗೆಯ ಕೆಲಸಕ್ಕೆ ಒಪ್ಪಿಕೊಂಡಿರುವುದಾಗಿ ತಿಳಿಸಿದ್ದಾಳೆ.

ಅವರೇ ಹೇಳುವಂತೆ "ಮುಕ್ಕಾಲು ಪಾಲು ಗಂಡಸರು ನನ್ನ ಜೊತೆ ಲೈಂಗಿಕ ಸಂಪರ್ಕ ಇಟ್ಟುಕೊಂಡಿದ್ದಾರೆ" ಎಂದು ಹೇಳುವ ಸಂಗತಿಯು ಗಾರ್ಮೆಂಟ್ಸ್‌ನಲ್ಲಿನ ಮಹಿಳೆಯರ ಬದುಕಿನ ಪರಿಸ್ಥಿತಿಯನ್ನು ಹೊರಹಾಕುತ್ತದೆ. ಬದುಕುವ ಆಸೆ, ಹೊಟ್ಟೆಪಾಡಿಗಾಗಿ ಬದುಕುವುದನ್ನಾದರೂ, ತನ್ನ ಕಾಯಿಲೆಯ ವಿಷಯವನ್ನು ಹೇಳಿ. ಆ ಕಾಯಿಲೆ ಇತರರಿಗೆ ಹರಡದಂತೆ ಎಚ್ಚರ ವಹಿಸುವ ಸಂಗತಿಯು ಗಮನಾರ್ಹವಾದುದು. (ಹೆಸರು :ತರನಮ್, ವಯಸ್ಸು : ೨೮, ಊರು : ಬಳ್ಳಾರಿ ಜಿಲ್ಲೆ , ವಿದ್ಯಾರ್ಹತೆ : ೯ನೆ ತರಗತಿ, ಜಾತಿ : ಮುಸ್ಲಿಂ)[೫]

೫.೨.೬ ಕತಿಜಾಬಾನು ಪ್ರಕರಣ

ನಿರೂಪಣೆ

ನಮ್ಮ ಮನೆಯಲ್ಲಿ ನಾವು ೧೩ ಜನ ಇದ್ದೀವಿ ನಮ್ಮ ತಂದೆ–ತಾಯಿಗೆ, ಅಮ್ಮ ಮನೆಯಲ್ಲಿ ಬೀಡಿ ಕಟ್ತಾಳ್ರಿ. ಅಪ್ಪನಿಗೆ ಇತ್ತಿಚಿಗೆ ಕಣ್ಣು ಕಾಣಿಸುವುದಿಲ್ಲ. ಒಂದು ಸಣ್ಣ ಗುಡಿಸಲಿನಲ್ಲಿ ಅಪ್ಪ–ಅಮ್ಮ ಮತ್ತು ೧೧ ಜನ ಮಕ್ಕಳು ಅದರಲ್ಲಿ ನಮ್ಮ ಅಣ್ಣನಿಗೆ ಮದುವೆಯಾಗಿದೆ. ಅವನು ಬೇರೆ ಆಗಿದ್ದಾನೆ. ಬೀಡಿ ಕಟ್ಟಿಲಿಲ್ಲಂದ್ರೆ ಜೀವನ ಮಾಡಕ್ಕಾಗಲ್ಲ. ನಮ್ಮ ಊರಿನ ಜನ ಇಲ್ಲಿಗೆ ಕೆಲಸಕ್ಕೆ ಬರ್ತಾ ಇದ್ರಲ್ರಿ ಅವರ ಜೊತೆ ನಾನೂ ಬಂದಿನ್ರಿ. ಇಲ್ಲಿಗೆ ಬಂದು ನಾಲ್ಕೂ ವರ್ಷ ಆಯ್ತು. ಅದಕ್ಕಿಂತ ಮುಂಚೆ ಗಾರೆ ಕೆಲಸಕ್ಕೆ ಹೋಗ್ತಿದ್ರಿ, ಸರಿಯಾದ ಊಟ ಇಲ್ಲದ, ನಿದ್ದೆ ಇಲ್ಲದ ಆ ಕೆಲಸ ತುಂಬಾ ಕಷ್ಟ ಐತ್ರಿ. ಕೆಲಸಕ್ಕ ಬಂದ ಮ್ಯಾಲ ಒಂದುಗಳಿಗಿ ಕುಂದ್ರಂಗಿಲ್ರಿ, ಮಾಡ್ತಾನಾ ಇರ್ಬೇಕು. ಕತ್ತೆತ್ತಿ ನೋಡೋಹಾಗಿಲ್ಲ. 'ಭೋಸುಡಿ ಏನು ಮಾತಾಡಕ್ ಬಂದಿ' ಉಳಿದೊರನ್ನ ಕೆಡಸ್ತಿದಿ, 'ನೀಯಮ್ಮ' ಅಂತೆಲ್ಲ ಬೈಯ್ತರ್ರಿ. ಕೆಲಸದ ನೆವದಾಗ ನಮ್ಮನ್ನು ಮೈಮುಟ್ಟೋದು, ಕೈಸವರೋದು ಮಾಡೇ ಮಾಡ್ತಾರ್ರಿ ಕೆಲಸ ಬಿಟ್ರ ಮನೆಯಲ್ಲಿ ಒಂದು ಹೊತ್ತಿನ ಊಟಕ್ಕೂ ಕಷ್ಟ ಆಗ್ತಾತ್ರಿ. ತಮ್ಮಾರು, ತಂಗ್ಯಾರು ಇನ್ನು ಸಣ್ಣರದಾರ್ರಿ. ಕಷ್ಟ ಆಗುತ್ತೆ ಅಂತ ಕೆಲಸ ಬಿಡಕಾಗಲ್ರಿ, ಬಡವರಾದಮ್ಯಾಲ ಎಲ್ಲವನ್ನಾ ಸಹಿಸಿಕೊಳ್ಳಬೇಕಲ್ರಿ. ನೀರು ಕೂಡ ಕುಡಿಯದೇ, ಕೆಲಸಮಾಡ್ತೇವ್ರಿ. ನಿರ್ವಇಲ್ರಿ.

ವಿಶ್ಲೇಷಣೆ

ಈ ಪ್ರಕರಣದಲ್ಲಿ ಮುಸ್ಲಿಂಳಾದ ಖತೀಜಾಬಾನು ತಾನು ಮಾಡುವ ಗಾರೆಕೆಲಸವನ್ನು ಬಿಟ್ಟು, ಗಾರ್ಮೆಂಟ್ಸ್‌ಗೆ ಕೆಲಸಕ್ಕೆ ಸೇರಿರುವುದು ಬಡತನ, ಜನಸಂಖ್ಯೆಯ ಪರಿಣಾಮದಿಂದ ಪೌಷ್ಠಿಕತೆಯಿಂದ

ಗಾರೆ ಕೆಲಸ ಕಷ್ಟದ ಕೆಲಸವೆಂದು ಬಿಟ್ಟು, ಗಾರ್ಮೆಂಟ್ಸ್‌ಗೆ ಸೇರಿದ್ದುದರ ಕುರಿತು ಹೇಳುತ್ತಿದ್ದಾರೆ. ಆದರೆ ಗಾರ್ಮೆಂಟ್ಸ್‌ನಲ್ಲಿ ಅವಳು ಎದುರಿಸುವ ಸಮಸ್ಯೆಗಳನ್ನು ಹೇಳಿಕೊಂಡಿದ್ದಾರೆ. ಖತೀಜಾಬಾನು ಎಲ್ಲ ಹುಡುಗಿಯರಂತೆ ವಿವಾಹದ ಬಗ್ಗೆ ಸುಂದರ ಸಂಸಾರದ ಕನಸನ್ನು ಚುರಾಗಿಸಿ ಹೊರತಾಗಿಯು ದುಡಿಯುವ ಅನಿವಾರ್ಯತೆಯಿದೆ. ಸಮಾಜ ವ್ಯವಸ್ಥೆಯಲ್ಲಿನ ಹಲವು ಸಮಸ್ಯೆಗಳು ಮಹಿಳೆಯರ ಮೇಲೆ ಬೀರುವ ಪರಿಣಾಮ ಹೆಚ್ಚು ಗಾಢವಾದುದು ಎಂಬುದಕ್ಕೆ ಖತೀಜಾ ಒಂದು ಉದಾಹರಣೆಯಾಗಿದ್ದಾರೆ. ಬಹುತೇಕ ಮಹಿಳೆಯರು ಕೆಲಸಕ್ಕೆ ಸೇರುವುದು ಅವಳ ವ್ಯಕ್ತಿಗತ ಬದುಕಿಗಾಗಿ ಅಲ್ಲವೆಂಬುದನ್ನು ಕುರಿತು ಪ್ರತಿಯೊಂದು ಗಾರ್ಮೆಂಟ್ಸ್ ಮಹಿಳೆಯರ ಬದುಕಿನಲ್ಲಿಯೂ ಕಾಣಬಹುದಾಗಿದೆ. ಈ ನಿಟ್ಟಿನಲ್ಲಿ ಖತೀಜಾ ಗಾರ್ಮೆಂಟ್ಸ್‌ನಲ್ಲಿ ದುಡಿಯುತ್ತಿರುವುದು ಮನೆಯವರ ಹೊತ್ತಿನ ಗಂಜಿಗಾಗಿ. ಗಾರ್ಮೆಂಟ್ಸ್ ಕೆಲಸವು ಮಹಿಳೆಯರಿಗೆ ಹೆಚ್ಚು ಸೂಕ್ತವೆಂದು ನಂಬಿದ್ದು, ಒಳ್ಳೆಯ ವಾತಾವರಣದ ಊಹೆಯಿಂದ ಕೆಲಸಕ್ಕೆ ಬಂದು, ಇಲ್ಲಿನ ಅವಾಚ್ಯ ಪದಗಳಿಂದ ಮಾಲೀಕರು ಬೈಯುವುದು. ಅರೆಘಳಿಗೆಯು ವಿಶ್ರಾಂತಿಯಿಲ್ಲದ ದುಡಿಮೆ, ಗಂಟೆಗಟ್ಟಲೇ ನಿಂತೇ ಕೆಲಸಮಾಡಬೇಕಾದ ಅನಿವಾರ್ಯತೆ ಇದೆ. ಹಾಗೆಯೇ ಖತೀಜಾಬಾನು ಹೇಳುವಂತೆ ಅವರು ನೀರನ್ನು ಕುಡಿಯದೇ ಯಂತ್ರದ ರೀತಿಯಲ್ಲಿ ಕೆಲಸ ಮಾಡುವ ಪರಿಯನ್ನು ಗಮನಿಸಿದರೆ ಮಹಿಳೆಯರ ಸ್ಥಿತಿಯು ತುಂಬ ಕಡು ಕಷ್ಟಮಯವಾಗಿದೆಯೆನಿಸುತ್ತದೆ.

ಇದರರ್ಥ ಪದೇ ಪದೇ ಅವರು ನೀರು ಕುಡಿದರೆ, ಮೂತ್ರ ವಿಸರ್ಜನೆಗೆ ಹೋಗಬೇಕಾಗುತ್ತದೆ. ಅಲ್ಲಿ ಶೌಚಾಲಯ ಮತ್ತು ನೀರಿನ ವ್ಯವಸ್ಥೆಯು ಇಲ್ಲದಿರುವುದು ಸಹ ಗಾರ್ಮೆಂಟ್ಸ್‌ಗಳಲ್ಲಿ ಮಹಿಳೆಯರಿಂದ ದುಡಿಮೆಯ ನಿರೀಕ್ಷೆಯಿದೆ ದುಡಿತದ ಫಲೀತಗಳ ಬಗ್ಗೆ ಒಲವಿದೆಯೇ ಹೊರತು ಇದರಿಂದಾಗಿ ಅವರ ಆರೋಗ್ಯದ ಮೇಲಾಗುವ ಪರಿಣಾಮದ ಕುರಿತು ಬಂಡವಾಳಶಾಹಿಗಳಿಗೆ ಕಿಂಚಿತು ಕನಿಕರವಿಲ್ಲದೆ ಬಡತನದ ಕಾರಣದಿಂದ ಹೊತ್ತಿನ ಊಟಕ್ಕಾಗಿ, ಬದುಕಿನ ಕೆಲಸಕ್ಕೆ ಸೇರಿದ ಮಹಿಳೆಯರು ಗಾರ್ಮೆಂಟ್ಸ್‌ಗಳಲ್ಲಿ ಇರುವ ಅವ್ಯವಸ್ಥೆಯಿಂದಾಗಿ ಭೀಕರವಾದ ಕಾಯಿಲೆಗಳೀಗೆ ಬಲಿಯಾಗುತ್ತಿದ್ದಾರೆ. ಹೆಚ್ಚುತ್ತಿರುವ, ಕೆಲಸದ ಅಗತ್ಯತೆ, ಕಡಿಮೆ ಕೂಲಿಗಳಿಂದಾಗಿ ಹೆಚ್ಚು ಮಹಿಳೆಯರು ಗಾರ್ಮೆಂಟ್ಸ್‌ಗಳಲ್ಲಿ ತೊಡಗುತ್ತಿದ್ದಾರೆ. ಅದರಿಂದ ಸುಗಮವಾಗಿ ಸಾಗಬೇಕಾದ ಬದುಕು ಇನ್ನಷ್ಟು ಸಂಕೀರ್ಣಕ್ಕೆ ಹಿಂಸೆಗೆ, ಒಳಗಾಗುತ್ತಿದೆ. (ಹೆಸರು :ಕತಿಜಾಬಾನು, ವಯಸ್ಸು : ೨೨, ಊರು : ಬಳ್ಳಾರಿ (ಕೌಲ್ ಬಜಾರ್), ವಿದ್ಯಾರ್ಹತೆ : ಇಲ್ಲ, ಜಾತಿ : ಮುಸ್ಲಿಂ)[೬]

೫.೨.೭. ರೇಣುಕಾಳ ಪ್ರಕರಣ

ನಿರೂಪಣೆ

ನಾನು ಸಣ್ಣ ಹಳ್ಯಾಗ ಹುಟ್ಟಿ ತುಂಬ ಬಡತನದಲ್ಲಿ ಬೆಳೆಯುತ್ತಿದ್ದೆ. ಅದರಲ್ಲಿಯೇ ಓದಬೇಕೆಂಬ ಆಸೆ ಇತ್ತು. ನಾವು ದಲಿತರು. ಊರಾಗ ಹುಡುಗಿಯರು ಶಾಲೆಗೆ ಏನು ಹೋಗ್ತಾ ಇದ್ದಿಲ್ಲ ಆದ್ರೆ

ನಾನು ಹಟಮಾರಿ ಶಾಲೆಗೆ ಹೋಗ್ತಾಇದ್ದೆ. ನಮ್ಮ ಜಾತಿಯಲ್ಲಿ (ಬಸವಿ ಬಿಡುವುದು ದೇವರ ಹೆಸರಲ್ಲಿ) ಪದ್ದತಿ ಇತ್ತು. ನನ್ನ ಸ್ವಂತ ಅಪ್ಪ, ಚಿಕ್ಕಪ್ಪ, ಇನ್ನು ಕೆಲವರು ಸೇರಿ ನನಗೆ ತಾಳಿಕಟ್ಟಿಸಲಿಕ್ಕೆ ಮುಂದಾದರು. ನಾನು ಎಷ್ಟು ಅತ್ತರೂ ಸತ್ತೋಗ್ ಬಿಡ್ತೀನಿ ಅಂದ್ರೂ ಸಹ ಕೇಳದೆ ನನಗೆ ಒತ್ತಾಯ ಮಾಡಿದರು. ನಾನು ಅಲ್ಲಿಂದ ನಮ್ಮ ಪಕ್ಕದ ನನ್ನ ಅಜ್ಜಿಯ ಊರಿಗೆ ಬಂದೆ. ಅಲ್ಲಿಂದ ಗುತ್ತಿಗೆ ಆಧಾರದ ಮೇಲೆ ಕಾಫಿ ಸೀಮೆಗೆ ಅಡಿಕೆ ತೋಟದಲ್ಲಿ ದುಡಿಯಲು ಹೋದೆವು. ನಂತರ ನಮ್ಮಲ್ಲೇ ಕೆಲವರು ಈ ಕೆಲಸಕ್ಕೆ ಬಂದು ಸೇರಿಕೊಂಡರು. ಆದರೆ ನನ್ನ ಓದು ಹೋಯ್ತು ಅಪ್ಪ-ಅಮ್ಮ-ಮನೆ ಎಲ್ಲರೂ ದೂರಾದರು. ನಾನು ಒಬ್ಬಂಟಿ, ಆದ್ರೆ ಕೆಲವರು ಗೆಳತಿಯರು ಇದ್ದಾರೆ. ಅವರೇ ನನಗೆ ಎಲ್ಲಾ. ಇಲ್ಲಿ ಹುಡುಗಿಯರು ಕೆಲಸ ಮಾಡೋದು ಅಂದ್ರ ಬೆಂಕಿಯ ಮೇಲೆ ನಡೆದಾಂಗ, ಯಾವಗಳಿಗೆಯಲ್ಲಿ ಬೇಕಾದರೂ ಅವರು ನಮ್ಮನ್ನ ಹಿಂಸೆ ಮಾಡಬಹುದು. ಒಬ್ಬರೇ ಸಿಕ್ಕರೆ ಬಲವಾಗಿ ತಬ್ಬಿಕೊಂಡು, ಏನೇನೋ ಆಸೆ ತೋರಿಸುತ್ತಾರೆ ಒಪ್ಪಕೊಳ್ಳದಿದ್ದರೆ ಬಿಗಿಯಾಗಿ ಸಿಕ್ಕ-ಸಿಕ್ಕಾ ಕಡೆಗೆ ಎಲ್ಲಾ ಹಿಸುಕಾಡುತ್ತಾರೆ. ಇಲ್ಲ ಅಂದ್ರೆ ನಾಯಿ, ಲೇ, ಭೋಸುಡಿ, ಬಾರಿ ವೈಯಾರ, ಯಾರಿಗೂ ಇಲ್ಲದ್ದು ನಿನಗೈತಾ, ಲೌಡಿ ಇನ್ನೂ ಹೇಳಬಾರದ ಬೈಗುಳಗಳು ಬೈಯ್ತಾರೆ. ಊಟಕ್ಕೆ ಕುಂತ್ರ ಅದು ಎಷ್ಟು ಹೊತ್ತು ತಿನ್ನೋದು, ಕೊಬ್ಬು ಆಗೈತೇನ ಮುಂತಾಗಿ ಮಾತಾಡ್ತಾರೆ. ಓ.ಟಿ. ಮಾಡದಿದ್ರ ಯಾರ ಹತ್ರ ಹೊಂಟಿದಿ? ಅಂತ ಕೇಳ್ತಾರೆ. ಓ.ಟಿ ಮುಗಿಸಿಕೊಂಡು ರೂಂಗೆ ಹೋಗಬೇಕಾದರೆ ಬಸ್ಸು ಸಿಗಲ್ಲ. ಆಮೇಲೆ ದುಡ್ಡು ಕೊಡಲು ನಮ್ಮ ಹತ್ರ ದುಡ್ಡು ಇರಲ್ಲ. ನಡಕೊಂಡು ಹೋಗಬೇಕು. ಹೋದಮ್ಯಾಲ ಅಡಿಗೆ ಮಾಡಿಕೊಂಡು ಉಂಡು ಮಲಗಬೇಕು. ಈ ಜೀವನವೆ ಬೇಡ ಎಲ್ಲೆರ ಸತ್ತೋದ್ರೆ ಪಾಡ ಅಂತ ಅನ್ನುಸುತೈತಿ. ಅಲ್ಲಿ ಎಲ್ಲರಿಗೂ ಹೀಗೆ ಇರ್‍ತೈತ್ರಿ.

ವಿಶ್ಲೇಷಣೆ

ಕೆಳವರ್ಗದಲ್ಲಿ ಜನಿಸಿದ_ಈ ಹುಡುಗಿಯು ಸಂಪ್ರದಾಯದ ಕಟ್ಟಳೆಗಳಿಗೆ ಬಲಿಯಾಗಬೇಕಾದಂತಹ ಸನ್ನಿವೇಶವು ಈ ಪ್ರಕರಣದಲ್ಲಿದೆ. ಭಾರತ ದೇಶದಲ್ಲಿ ಇಂದಿಗೂ ತನ್ನ ಕುರುಹನ್ನು ಕಳೆದುಕೊಳ್ಳದ ಜಾತಿ ವ್ಯವಸ್ಥೆಯಿಂದಾಗಿ ಆಸಮುದಾಯದ ಮಹಿಳೆಯರೂ ಸುವ,ಸಂಪ್ರದಾಯದ ಹೆಸರಿನಲ್ಲಿಹೆಣ್ಣನ್ನು ಸಾರ್ವಜನಿಕ ಉಪಭೋಗದ ವಸ್ತುವನ್ನಾಗಿಸಿದಂತಹ ಕ್ರೂರತೆ ದೇವದಾಸಿ ಸಂಪ್ರದಾಯದಲ್ಲಿದೆ. ಆದರೆ ಈ ಪ್ರಕರಣದಲ್ಲಿ ರೇಣುಕಾ – ಅದನ್ನು ಧಿಕ್ಕರಿಸಿ, ಎದುರಿಸಿ ಮನೆಬಿಟ್ಟು ತನ್ನವರೆಲ್ಲರನ್ನು ಕಳೆದುಕೊಳ್ಳುವಂತಹ ಪ್ರಸಂಗ ಇಲ್ಲಿದೆ. ಮಹಿಳೆಯರ ಬದುಕೇ ಒಂದು ಬಗೆಯ ಸಂಕಷ್ಟದಿಂದ ಪಾರಾಯಿತು ಎನ್ನುವಷ್ಟರಲ್ಲಿಯೇ, ಇನ್ನೊಂದು ಬಗೆಯ ಸಂಧಿಗ್ಧತೆಗೆ ಸಿಲುಕಿಕೊಳ್ಳುವುದು ಸಂಕೀರ್ಣ ಸಮಾಜ ವ್ಯವಸ್ಥೆಯಲ್ಲಿ ಹೊಸತೇನಲ್ಲ. ಹಾಗೇಯೇ ಈ ಪ್ರಕರಣದಲ್ಲಿಯೂ ಸಹ ದೇವದಾಸಿಯಂತಹ ಭೀಕರ ಸಮಸ್ಯೆಯಿಂದ ಬಿಡಿಸಿಕೊಂಡು, ಗಾರ್ಮೆಂಟ್ಸ್ ಉದ್ಯೋಗ ತೊಡಗಿಕೊಂಡು ಇನ್ನೇನು ಬದುಕಿಗೊಂದು ನೆಲೆ ದೊರೆಯಿತು. ಎಂದು ನಿರಾಳವಾಗುತ್ತಿರುವಷ್ಟರಲ್ಲಿಯೇ. ಮತ್ತೊಂದು ಕ್ರೂರ ಲೋಕ ಇದೆ ಎನ್ನುವುದು ಗೋಚರಿಸಿತು.

ಗಾರ್ಮೆಂಟ್ಸ್‌ನಲ್ಲಿನ ರಾಕ್ಷಸ ಮುಖಗಳು ಅನಾವರಣಗೊಂಡಿರುವುದು ಕಂಡು ಮತ್ತಷ್ಟು ಜೀವನಕ್ಕೆ ನೋವಾಯಿತು. ಈ ಮಹಿಳೆ ಹೇಳುವಂತೆ ಗಾರ್ಮೆಂಟ್ಸ್ ಉದ್ಯೋಗ ಪ್ರಾರಂಭದಲ್ಲಿ ಸೂಕ್ತವೆನಿಸುವಂತಾದರೂ, ದಿನಕಳೆದಂತೆ ಇಲ್ಲಿನ ಹೊಸರೂಪಗಳು ಕಾಣಿಸಿಕೊಂಡವು. ಇಲ್ಲಿನ ಸಮಸ್ಯೆಗಳು ನೇರವಾಗಿ ಹೊರಹಾಕಲಾಗದೆ 'ಇಲ್ಲಿ ಹುಡುಗಿಯರು ಕೆಲಸ ಮಾಡೋದು ಅಂದ್ರ ಬೆಂಕಿಯ ಮೇಲೆ ನಡೆದಂಗ' ಎಂಬ ಹೇಳಿಕೆಯು, ಗಾರ್ಮೆಂಟ್ಸ್ ಮಹಿಳೆ ಸಮಸ್ಯೆಯ ಸೂಕ್ಷ್ಮತೆಯನ್ನು ಹೊರಹಾಕಲೆತ್ನಿಸುವಂತಿದೆ. ಮಹಿಳೆಯನ್ನು ಸಮಾಜ ವ್ಯವಸ್ಥೆಯಲ್ಲಿ ದೇಹ ಮತ್ತು ಅದರಿಂದ ಒದಗಿರುವ ಸೇವೆಯನ್ನು ಆಧರಿಸಿ ವ್ಯಾಖ್ಯಾನಿಸಲಾಗಿದೆ. ಈ ಪ್ರಕರಣದಲ್ಲಿ ಮಹಿಳೆಯ ಮೇಲಾದ ಆಕ್ರಮಣಗಳು, ಅವಾಚ್ಯ ಪದಗಳುಂಟುಮಾಡುವ ಸೌಜನ್ಯವನ್ನು ಪ್ರತಿನಿಧಿಸುತ್ತವೆ. ಗಾರ್ಮೆಂಟ್ಸ್ ಮಹಿಳೆಗೆ ಇರುವ ಸಮಸ್ಯೆಗಳ ವಿಕೃತತೆಯು ಅವಳ ಬದುಕನ್ನೇ ನಿರಾಕರಿಸುವ ಹಂತವನ್ನು ತಲುಪಿರುವುದನ್ನು ಈ ಪ್ರಕರಣವು ವಿವರಿಸುತ್ತದೆ. (ಹೆಸರು :ರೇಣುಕ, ವಯಸ್ಸು : ೨೧, ಊರು : ದಾಬಸ್ ಪೇಟೆ, ವಿದ್ಯಾರ್ಹತೆ : ಎಸ್. ಎಸ್.ಎಲ್. ಸಿ, ಜಾತಿ : ದಲಿತ್)[೭]

೫.೨.೮ ಜಾನಕಿಯ ಪ್ರಕರಣ

ನಿರೂಪಣೆ

ನಾನು ಎಸ್.ಎಸ್.ಎಲ್.ಸಿ ಓದಿದೀನಿ. ಓದ್ತಾ ಇರಬೇಕಾದರೆ ಇವರ (ಗಂಡ) ಪರಿಚಯವಾಯ್ತು. ಸ್ನೇಹ ಪ್ರೀತಿ ಕೊನೆಗೆ ಊರನ್ನ ಬಿಟ್ಟು (ನಮ್ಮ ಜಾತಿ ಬೇರೆ ಬೇರೆಯಾದ್ದರಿಂದ) ಬೆಂಗಳೂರಿಗೆ ಬಂದ್ವಿ. ತಕ್ಷಣ ಏನು ಮಾಡಬೇಕು ಎಂಬುದು ಗೊತ್ತಾಗಲಿಲ್ಲ. ಇರಲಿಕ್ಕೆ ನೆಲೆ ಇರಲಿಲ್ಲ. ತಂದ ಒಡವೆಯನ್ನ ಮಾರಿ ಮನೆ ಬಾಡಿಗೆಗೆ ತೆಗೆದುಕೊಂಡು (ಅದೂ ದುಬಾರಿ ಆಗುತ್ತೆ) ಜೀವನ ಪ್ರಾರಂಭ ಮಾಡಿದೆವು. ಅವರು ಗ್ಯಾರೇಜ್‌ನಲ್ಲಿ ಕೆಲಸಮಾಡ್ತಾರೆ. ನಾನು ಇಲ್ಲಿ ಕೆಲಸಕ್ಕೆ ಬರ್ತೇನೆ. ಏನು ಅಂದ್ರೆ ಏನೂ ಗೊತ್ತಿಲ್ಲದ ನಾನು ಕೆಲಸಕ್ಕೆ ಬಂದಾಗ ಹೊಸತರದ ಪ್ರಪಂಚ ಕಾಣಿಸಿತು. ಇಲ್ಲಿ ಕೆಲಸಗಾರರಿಗೆ ಕುಡಿಯಲಿಕ್ಕೆ ನೀರಿನ ವ್ಯವಸ್ಥೆಯಿಂದ ಹಿಡಿದು ವಿಶ್ರಾಂತಿಗೆ, ಊಟಮಾಡಲಿಕ್ಕೆ ಅಥವಾ ಗರ್ಭಿಣಿಯರಿಗೆ ಯಾವುದೇ ಸವಲತ್ತುಗಳು ಇರುವುದಿಲ್ಲ. ಎಂಟು ತಾಸು ನಿಂತುಕೊಂಡೆ ಕೆಲಸ ಮಾಡಬೇಕು ಒಂದು ತಾಸಿಗೆ ಇಷ್ಟು ಪೀಸು ವರ್ಕ ಮಾಡಲೇಬೇಕು. ಇಲ್ಲದಿದ್ದರೆ ಮಾಲೀಕರ ಕೆಂಗಣ್ಣನ್ನು ನೆಟ್ಟು ಬೈಗುಳಗಳಿಗೆ ತುತ್ತಾಗಬೇಕು. ಇಲ್ಲದಿದ್ದರೆ ಮುಲಾಜಿಲ್ಲದೆ ಕೆಲಸದಿಂದ ತೆಗೆಯುತ್ತಾರೆ. ಯಾವುದೇ ಬೇಡಿಕೆಗಳನ್ನು, ಸವಲತ್ತುಗಳನ್ನು ಅವರಲ್ಲಿ ಕೇಳುವಹಾಗಿಲ್ಲ. ಹಾಗೇನಾದರೂ ಮಾಡಿದರೆ ಲೀಡರ್ ಪಟ್ಟ ಕಟ್ಟಿ ಕೆಲಸದಿಂದ ತೆಗೆದು ಹಾಕುತ್ತಾರೆ. ನಾನು ಉತ್ತಮ ಕುಟುಂಬದಿಂದ ಬಂದವಳು ಈ ಹಸಿವು, ಕಷ್ಟಾಗಳು ಕಿರಿ-ಕಿರಿ ಬೈಗುಳಗಳನ್ನೆಲ್ಲ ಸಹಿಸಿಕೊಳ್ಳಬೇಕು ತುಂಬ ನೋವಾಗುತ್ತೆ. ಆದರೆ ಬದುಕಲೇಬೇಕಲ್ಲ. ಅದರಲ್ಲಿ ಈಗ ಗರ್ಭಿಣಿ, ಬೇರೆ ಹಾಗಾಗಿ ಎಲ್ಲವನ್ನು ಸಹಿಸಿಕೊಳ್ತಾ ಇದ್ದೀನಿ. ಈ ಒತ್ತಡದಿಂದ ದೈಹಿಕವಾಗಿ ಮಾನಸಿಕವಾಗಿ ತೊಂದರೆ ಆಗ್ತಾ ಇದೆ. ಡಾಕ್ಟರ್ ಹತ್ತಿರ ತೋರಿಸಿದಾಗ ಮಾನಸಿಕವಾಗಿ ಶಾಂತರೀತಿಯಾಗಿ ಇರಿ ಇಲ್ಲದಿದ್ದರೆ ಬೆಳೆಯುವ ಮಗುವಿಗೆ ತೊಂದರೆ ಆಗುತ್ತೆ. ಗರ್ಭಪಾತವಾಗುವ ಸಂಭವ ಇದೆ ಎಂದು ಹೇಳ್ತಾರೆ. ಆದರೆ ಇಲ್ಲಿ ಶಾಂತ ರೀತಿಯಿಂದ ಇರುವುದಾದರೂ ಹೇಗೆ. ಭಯ ಆಗುತ್ತೆ ಒಂದೊಂದು

[illegible]

[illegible]

[illegible]

[illegible]

ಸಾರಿ ಬಿ.ಪಿ ಕಡಿಮೆಯಾಗುತ್ತೆ, ತಲೆ ಸುತ್ತು ಬರುತ್ತೆ ಅವರ ಅಸಹ್ಯವಾದ ಮಾತುಗಳಿಗೆ ವಾಂತಿಬರುತ್ತೆ. ನಾನು ಎಲ್ಲಿ ಹುಚ್ಚಿಯಾಗಿ ಬಿಡ್ತೀನೋ ಅಂತ ಅನ್ನಿಸ್ತಾ ಇದೆ..

ವಿಶ್ಲೇಷಣೆ

ಗರ್ಭಿಣಿ ಮಹಿಳೆಯೊಬ್ಬಳ ಈ ಪ್ರಕರಣವು, ಅವಳು ಗಾರ್ಮೆಂಟ್ಸ್‌ಗೆ ಬರಲು ಕಾರಣ ಅವರು ಪ್ರೇಮವಿವಾಹವಾಗಿ ಅದು ಅಂತರ್ಜಾತಿ ವಿವಾಹವಾದ್ದರಿಂದ ಕುಟುಂಬವನ್ನು ತಿರಸ್ಕರಿಸಿ ಬೆಂಗಳೂರಿಗೆ ಬಂದಿದ್ದು, ಆಗ ಸುಲಭವಾಗಿ ದೊರೆತ ಕೆಲಸ ಗಾರ್ಮೆಂಟ್ಸ್ ಉಪಜೀವನಕ್ಕಾಗಿ ಕೆಲಸವನ್ನು ನಿರ್ವಹಿಸುವ ಇವಳಿಗೆ ಗಂಡ ಹಾಗೂ ಇತರೆ ಯಾವುದೇ ತೊಂದರೆಗಳಿಲ್ಲ.

ಆದರೆ ಗಾರ್ಮೆಂಟ್ಸ್‌ನಲ್ಲಿ ಕುಡಿಯುವ ನೀರಿನ, ವಿಶ್ರಾಂತಿಯ, ಸಮಯಾನುಸಾರ ಊಟಕ್ಕೂ ಬಿಡದಂತಹ ಸಂದರ್ಭಗಲ್ಲದಿರುವುದರಿಂದಾಗಿ ಹೆಚ್ಚು ಅನಾರೋಗ್ಯಕ್ಕೆ ಒಳಗಾಗುತ್ತಿರುವುದು, ಅಲ್ಲದೆಯೇ ಗರ್ಭಿಣಿಮಹಿಳೆಯಾದ್ದರಿಂದ ಶೌಚಾಲಯದ ವ್ಯವಸ್ಥೆಯಿಲ್ಲದಿದ್ದರಿಂದಾಗಿ ಮತ್ತು ನಿರಂತರವಾದ ಕೆಲಸದ ಒತ್ತಡದಿಂದಾಗಿ ಹೆಚ್ಚು ಹಿಂಸೆಗೆ ಒಳಗಾಗುತ್ತಿದ್ದಾಳೆ. ಯಾವುದೇ ಕನಿಷ್ಟ ಪಕ್ಷದ ಸೌಲಭ್ಯಗಳನ್ನು ಕೇಳುವ ಹಾಗಿಲ್ಲ. ಹಾಗೆ ಪ್ರಸ್ತಾಪಿಸಿದ್ದೆ ಆದರೆ ಸಂಘಟನೆಯನ್ನು ಮಾಡುತ್ತೇವೆಂದು ಕೆಲಸದಿಂದ ತೆಗೆದು ಹಾಕುವ ಬೆದರಿಕೆಯನ್ನು ಹಾಕುವುದರಿಂದ, ಅಲ್ಲಿ ನಡೆಯುವ ಎಲ್ಲ ಕ್ರೌರ್ಯಗಳನ್ನು ಮೌನವಾಗಿ ಸಹಿಸುವುದನ್ನು ಈ ಪ್ರಕರಣ ವಿವರಿಸುತ್ತದೆ. ಈ ಬಗೆಯ ಒತ್ತಡದಿಂದಾಗಿ ವೈದ್ಯರು ಮಾನಸಿಕ, ದೈಹಿಕ ಬಳಲಿಕೆಯ ಬಗ್ಗೆ ಗಮನ ಹರಿಸಲು ಹೇಳುತ್ತಾರೆ. ಹಾಗೆಯೇ ಈ ಬಗೆಯ ಒತ್ತಡದಿಂದ ಬೆಳೆಯುವ ಮಗುವಿಗೆ ತೊಂದರೆಯಾಗುತ್ತೆಂದು, ಗರ್ಭಪಾತವಾಗುವುದಾಗಿ ಹೇಳಿದ್ದಾರೆ. ಆದರೆ ಈ ವಾತಾವರಣದಲ್ಲಿ ಶಾಂತವಾಗಿ ಇರುವುದು ಸಾಧ್ಯವಿಲ್ಲ. ಹಾಗಾಗಿ ಅದೇ ವಿಚಿತ್ರ ಹಿಂಸೆಯಾಗುವುದು ಗಾರ್ಮೆಂಟ್ಸ್ ವಾತಾವರಣದಿಂದ ಎಂಬುದು ಒಟ್ಟು ಗಾರ್ಮೆಂಟ್ಸ್ ಪರಿಸರವನ್ನು ಅನಾವರಣಗೊಳಿಸುತ್ತದೆ. (ಹೆಸರು : ಜಾನಕಿ, ವಯಸ್ಸು:೨೪ ಜಾತಿ :ಸಿಂಪಿಗ್ಗರು, ಕೆಲಸ:ಹೆಲ್ಪರ, ಊರು:ದಾವಣಗೆರೆ, ವಿದ್ಯಾರ್ಹತೆ:ಎಸ್.ಎಸ್,ಎಲ್.ಸಿ.)[೮]

೪.೨.೯. ವೆಂಕಮ್ಮಳ ಪ್ರಕರಣ

ನಿರೂಪಣೆ

ನಾವು ಮೊದಲಿನಿಂದಲೂ ಬಡತನದಲ್ಲೇ ಬಂದವರು ಚಿಕ್ಕವಯಸ್ಸಿನಲ್ಲಿಯೇ ಮದುವೆಯಾಯ್ತು. ಎರಡು ಹೆಣ್ಣುಮಕ್ಕಳಾದ ಮೇಲೆ ಟಿ.ಬಿ ರೋಗ ಬಂದು ನನ್ನ ಗಂಡ ಸತ್ತೋದ್ರು. ಅವರು ಸೈಕಲ್ ರಿಕ್ಷಾ ಓಡಿಸ್ತಾ ಇದ್ರು. ೨ ಮಕ್ಕಳ ನಾನು ನನಗಂಡ ಗುಡಿಸಿಲಿನಲ್ಲಿಯೇ ಗಂಜಿ ಕುಡಕೊಂಡು ಜೀವನ ಸಾಗಿಸ್ತಾ ಇದ್ವಿ. ಅವರು ಹೋದನಂತರ ನಾನು ಈ ಪ್ಯಾಟ್ಯಾಗ ಕೆಲಸಕ್ಕೆ ಸೇರಿಕೊಂಡೆ, ನೋಡೋಕ ಚೆನ್ನಾಗಿ, ಬೆಳ್ಳಗ ಇದ್ದೆ ಅದಕ ಆ ವಯ್ಯ ನನ್ನ ಮಾಡುಕ್ಕಂಡ ಬಿಟ್ಟ. ನಾನು ಬೇಡ ಅನ್ನೊಷ್ಟು ಹೊತ್ತಿಗೆ ಆಗ್ಲೇ ಎಲ್ಲಾ ಮುಗಿದು ಹೋಗಿತ್ತು. ಇನ್ನೇನ್ ಬಿಡು ಅಂದ್ಕಂಡು ಅದರಲ್ಲೇ ಜೀವನ ಸಾಗಿಸ್ತಾ ಇದ್ದೆ.

ಒಂದೊಂದು ದಿನ ಕೆಲಸಕ್ಕೆ ಬರದೇ ಇದ್ರು ನಡೀತಾ ಇತ್ತು. ಆದ್ರೆ ನನ್ನ ದೇಹದಾಗ ಎಷ್ಟು ದಿನ ಕಸುವು ಇರ್ತೈತಿ ಹೇಳಿ. ಈ ಬಿಸಿಲಿಗೆ, ಬಡತನಕ್ಕೆ ಕರ್ರಗೆ ನೋಡೋಕೆ ಚೆಂದ್ ಇಲ್ಲದಾಂಗ ಆಗಿಬಿಟ್ನೆ. ಅವರು ನನ್ನನ್ನ ನೋಡೋದು ಬಿಟ್ ಬಿಟ್ರು. ಅಂತ ದೊಡ್ಡ ಕೆಲಸಾವ ನಾನು ಮಾಡಿದ್ದಿಲ್ಲ, ಆದ್ರ ಇತ್ತಿತ್ತಲಾಗ ಕೆಲಸ ಬಾಳ ಹಚ್ಚಿದರು. ಬೈಯಲಿಕ್ಕೆ ಸುರು ಮಾಡಿದ್ರು. ಮುದುಕ ಆಗೀದಿ ಗೋತ್ತಾಗದಿಲ್ಲ ಅಂತ ಅಂತಿದ್ರು ಇಲ್ಲ ಅಂದ್ರ ಕೆಲಸ ಬಿಟ್ಟು ಹೋಗು ಅನ್ನಕ್ಕತ್ತಾರೆ. ನಾನು ಯಾರ ಹತ್ತಿರ ಹೇಳಲಿ? ನಾನು ಚೆಂದ್ ಇದ್ದಾಗ ನಾನು ಎಲ್ಲಾ ರೀತಿಯಿಂದ ಬೇಕಿತ್ತು ಈಗ ಕೆಲಸಕ್ಕ ಬಾರದಂಗ ಆಗೀದೀನಿ, ತುಂಬ ಬೈಯ್ತಾರ ತುಂಬ ಕಾಡಿಸ್ತಾರ, ಒಂದು ಸೂಳೆ ನೋಡಿಕೊಂಡಂಗ ನೋಡಿಕೊಳ್ತಾರ. ಆದ್ರೂ ನಾನು ಇಲ್ಲಿ ಕೆಲಸ ಮಾಡಕ್ಕತ್ತಿನಿ. ಜೀವನ ಸಾಗಬೇಕಲ್ಲ. ಒಬ್ಬಕೇದು ಮದುವೆ ಆಗೈತಿ, ಇನ್ನೊಬ್ಬಾಕಿ ಮನೆಯಲ್ಲೇ ರಾಟಿ ಹೋಲಿತಾಳ ಆಕೀನ ಮದುವೆ ಮಡನಾದ್ರೂ ನಾನು ದುಡಿಯಬೇಕಲ್ರಿ ನೆನೆಸಿಕೊಂಡ್ರ ಸಂಕಟ ಆಗ್ತೈತ್ರಿ ಇದ್ದಾಗ ಬಳಿಸಿಕೊಂಡು ಈಗ ಕಸಬರಿಕೆ ತರ ನೋಡ್ತಾ ಇದ್ದಾರ. ಎಲ್ಲೆತ್ರಿ ನ್ಯಾಯ? ಹೆಣ್ಣಾಗಿ ಗಂಡು ದಿಕ್ಕಿಲ್ಲದಂಗ ಜೀವನ ಮಾಡಾದು ಕಷ್ಟ ಐತ್ರಿ ದಿನವೆಲ್ಲ ಕೆಲಸ ಮಾಡಿ,ಮಾಡಿ ಕಣ್ಣು ಉರೀತಾವ, ಬೆನ್ನುನೋವು ಬರ್ತಾದ. ಕಾಲು ಸೇದ್ತಾವ ಝಂಡುಬಾಮ್ ಹಚ್ಚಕೊಂಡು ಕೆಲಸ ಮಾಡ್ತೀನ್ರಿ. ಎಲ್ಲಾ ದೇವರ ಇಚ್ಛಾ.

ವಿಶ್ಲೇಷಣೆ

ಗಂಜಿ ಕುಡಕೊಂಡು ಗಂಡ–ಮಕ್ಕಳೊಂದಿಗೆ ಗುಡಿಸಿಲಿನಲ್ಲಿ ಹಾಯಾಗಿದ್ದ ವೆಂಕಮ್ಮನ ಗಂಡ ಟಿ.ಬಿ ಕಾಯಿಲೆಯಿಂದ ತೀರಿಕೊಂಡಿದ್ದು, ಅವಳ ಸಂಸಾರದ ಆಸರೆಯೇ ಕಿತ್ತು ಹೋದಾಗಾಯ್ತು. ಆಗ ದುಡಿಯೋದಕ್ಕೆ ಅಂತ ವೆಂಕಮ್ಮ ಗಾರ್ಮೆಂಟ್ಸ್ ಕೆಲಸಕ್ಕೆ ಸೇರಿದಳು. ಅವಳ ಸೌಂದರ್ಯಕ್ಕೆ ಮಾರುಹೋದ ಅಲ್ಲಿರುವ ವ್ಯಕ್ತಿ ಅವಳೊಂದಿಗೆ ಬಲತ್ಕಾರದಿಂದ ಸಂಬಂಧ ಬೆಳೆಸಿಕೊಂಡ. ಹೆಣ್ಣನ್ನು ಕೇವಲ ದೇಹಕೇಂದ್ರಿಯವಾಗಿ ನಿರ್ವಹಿಸಲಾದ ಸಾಮಾಜಿಕ ವ್ಯಾಖ್ಯಾನದಲ್ಲಿ ಅದರಿಂದ ಒದಗುವ ಸೇವೆಯನ್ನು ಆಧರಿಸಿದೆ ಎಂಬುದಕ್ಕೆ ವೆಂಕಮ್ಮಳದೆ ಉದಾಹರಣೆ. ಕುಟುಂಬ ನಿರ್ವಹಣೆಯ ಕಾರಣದಿಂದ ಮರ್ಯಾದಸ್ಥ ಉದ್ಯೋಗವೆಂದು ಮತ್ತು ಸುಲಭವಾಗಿ ಸಿಗುವ ಉದ್ಯೋಗವೆಂದು ಗಾರ್ಮೆಂಟ್ಸ್ ಕೆಲಸಕ್ಕೆ ಸೇರಿ ಅಲ್ಲಿರುವ ಕಾಮುಕ ಶಕ್ತಿಗೆ ಬಲಿಯಾಗಿದ್ದಳು. ಮಹಿಳೆಯೊಬ್ಬಳು ಲಿಂಗ ತಟಸ್ಥ ಸಾಮಾಜಿಕ ವ್ಯವಸ್ಥೆಯಲ್ಲಿ ಇರುವ ಸಂದರ್ಭಗಳನ್ನು ಒಪ್ಪಿ ಬದುಕಿದಾಗಲೂ ಅಂತಿಮವಾಗಿ ಅವಳ ಕಷ್ಟದ ಬವಣೆ ತಪ್ಪಿದ್ದಲ್ಲ ಎಂಬುದಕ್ಕೆ ಸಾರ್ವಜನಿಕ ವಲಯದ ಭಾಗವಾದ ಅಸಂಘಟಿತ ವಲಯವನ್ನ ಪ್ರತಿನಿಧಿಸುವ ಗಾರ್ಮೆಂಟ್ಸ್ ಮಹಿಳೆಯ ಹಿಂಸಾತ್ಮಕ ಬದುಕು ಉದಾಹರಣೆಯಾಗಿ ನಿಲ್ಲುತ್ತವೆ. ಅವಳ ವಯಸ್ಸಿನಲ್ಲಿ ಅವಳನ್ನು ಬಳಸಿಕೊಡು, ಅಲ್ಲಿಂದ ಕೆಲಸ ಮುಗಿದ ಮೇಲೆ ಮುಂದೆ ಅದರತ್ತ ತಿರಸ್ಕಾರದ ನೋಟದಿಂದ ಮತ್ತಷ್ಟು ಹಿಂಸೆಗೆ ಒಡ್ಡುವ ಪ್ರಸಂಗ ಈ ಪ್ರಕರಣದಲ್ಲಿ ಕಾಣಬಹುದು. ಹೆಣ್ಣು ಸಾರ್ವಜನಿಕ ಬದುಕಿಗೆ ಮುಖಾಮುಖಿಯಾಗುವ ಬಹುಪಾಲು ಸಂದರ್ಭಗಳು ಅನಿವಾರ್ಯತೆಯಿಂದ ಎಂಬುದು ಸಮಾಜದಲ್ಲಿ ಪ್ರತಿಬಿಂಬಿತವಾದಂತೆ ಇಲ್ಲಿನ ಪ್ರಕರಣವು ಇದೆ. ವೆಂಕಮ್ಮ ಕೆಲಸಕ್ಕೆ ಸೇರಿದ್ದು ಗಂಡನ ಆಸರೆ ತಪ್ಪಿದ ಮೇಲೆ ಗಂಡ ಇರುವವರೆಗೂ ಗಂಜಿ ಕುಡಿದು ಬದುಕಿದ್ದರೆ ವಿನಃ ತಾನು ದುಡಿದು ಸಂಸಾರ ಚೆನ್ನಾಗಿ

[illegible]

[illegible]

[illegible]

ನಿರ್ವಹಿಸಬಹುದು ಎಂದು ಅವಳ ಗಂಡನಾಗಲಿ, ಅವಳಾಗಲಿ ಯೋಚಿಸಲಿಲ್ಲ ಕಷ್ಟವೋ? ಸುಖವೋ? ಗಂಡ–ತಂದೆ–ಅಣ್ಣ ತಮ್ಮಂದಿರು ಮಾತ್ರ ಹೊರಗೆ ದುಡಿಯಬೇಕು, ಹೆಣ್ಣು ಮಾತ್ರ ಮನೆಯಲ್ಲಿರಬೇಕೆಂದು ನೀತಿಯೇ ಇದೆ. ಎಂಬುದಕ್ಕೆ ಈ ಪ್ರಕರಣದಲ್ಲಿ ಕಾಣುತ್ತದೆ. ಯಾರು ಇಲ್ಲದಂತಹ ಸಂದರ್ಭದಲ್ಲಿ ದುಡಿಮೆಗಳಿಂದ ವೆಂಕಮ್ಮ ಅನುಭವಿಸಿದ ಪರಿಣಾಮದ ಹಿಂದೆ ಪಿತೃಸಂಸ್ಕೃತಿಯ ಒಟ್ಟು ಧೋರಣೆಯೆ ಇದೆ. ಹೆಣ್ಣೊಬ್ಬಳು ಕುಟುಂಬಕ್ಕೆ ಸೀಮಿತವಾಗಬೇಕು. "ಪಿತಾರಕ್ಷತಿ ಕಾಮರ್ಯೆ ಭರ್ತಾರಕ್ಷತಿಯೌವನ ರಕ್ಷತಿ ಸ್ಥವಿರೆ, ನಾಸ್ತ್ರೀ ಸ್ವಾತಂತ್ರಂ ಅರ್ಹತೆ" [ಉಲ್ಲೇಖಃ ಮನುಸ್ಮೃತಿ, ಶೇಷ ನವರತ್ನರಾವ್](೭ನೇಪುಟ)

ಇನ್ನೊಬ್ಬರ ರಕ್ಷಣೆಯಲ್ಲದೆ ಹೋದರೆ ಈ ಬಗೆಯ ದುರಂತಗಳಿಗೆ ಒಳಗಾಗುವವಳು ಎಂಬುದನ್ನು ಇಂತಹ ಪ್ರಕರಣಗಳು ಮತ್ತೆ, ಮತ್ತೆ ಹೆಣ್ಣನ್ನು ಸೀಮಿತ ನೆಲೆಗೆ ನೇಮಿತವಾಗಲು ಪ್ರತಿ ನಿಧಿಸಲಾಗುತ್ತವೆ. (ಹೆಸರು: ವೆಂಕಮ್ಮ , ವಯಸ್ಸು: ೪೫ವರ್ಷ, ಜಾತಿ: ವಾಲ್ಮೀಕಿ ಜನಾಂಗ (ವಿಧವೆ), ಊರು:ಬಳ್ಳಾರಿ (ಕಾಂಟೋನ್ ಮೆಂಟ್)

೫.೨.೧೦. ಜಯಮ್ಮಳ ಪ್ರಕರಣ

ನಿರೂಪಣೆ

ನಾವು ಇಲ್ಲಿಗೆ ಬಂದು ಐದು ವರ್ಷ ಆಯಿತಮ್ಮ ಮೊದಲೆ ಗೊತ್ತಿತ್ತು ಗಾರ್ಮೆಂಟ್ಸ್‌ಲ್ಲಿ ಕೆಲಸ ಸಿಕ್ಕುತ್ತೆ ಅಂತ. ಗಂಡ ಆಟೋ ಡ್ರೈವರಾಗಿ ಕೆಲಸ ಮಾಡುತ್ತಾರೆ. ನಮಗೆ ಮೂರು ಜನ ಮಕ್ಕಳು. ನಾವು ಮೊದಲಿನಿಂದಲೂ ಶ್ರೀಮಂತಿಕೆಯಲ್ಲಿ ಬೆಳೆದವರು. ನಮ್ಮ ದುರಾದೃಷ್ಠ ಅಣ್ಣತಮ್ಮರ ಜಗಳದಿಂದ ಆಸ್ತಿಯೆಲ್ಲಾ ಕಳ್ಕೊಂಡಿವಿ. ಹಾಗಾಗಿ ಬೆಂಗಳೂರಲ್ಲಿ ಏನಾದರೂ ಒಂದು ಕೆಲಸ ಸಿಕ್ಕೆಸಿಗುತ್ತೆ ಎಂದು ಬಂದಿವಿ. ಆದರೆ ಫ್ಯಾಕ್ಟ್ರಿಗೆ ಹೋಗೊಕೆ ಮನಸ್ಸೆ ಇದ್ದಿಲ್ಲ. ಯಾಕಂದ್ರೆ ಮ್ಯಾನೆಜಾರುಗಳು ತೀರ ಕೆಟ್ಟದಾಗಿ ಬೈಯುತ್ತಾರೆ, ಹೊಡಿತಾರೆ ಇನ್ನಿತರ ಮನಸ್ಸಿಗೆ ನೋವು ಆಗುವ ಹಾಗೆ ನಡಕೋತಾರೆ ಅಂತ ನಮ್ಮ ಅಕ್ಕಗೆ ಹೇಳಿದ್ರು ಅವರು ಯಾರಿಗೂ ಆಗದೆ, ನಿನಗೆ ಒಬ್ಬಳಿಗೆ ಆಗೊತ್ತೆ ಅಂತ ಏಕೆ ಅನುಕೊಂಡೆ ಅಂತ ಬೈದು ಫ್ಯಾಕ್ಟ್ರಿ ಕೆಲಸಕ್ಕೆ ಕರೆದುಕೊಂಡು ಹೋದ್ಲು. ಮೊದಲೆ ಭಯ ಇತ್ತು, ಅಲ್ಲಿ ಹೇಗಿರುತ್ತೆ ಅಂತ ಆದರೂ ಕೆಲಸಕ್ಕೆ ಹೋದೆ ಹೊಲಿಯಾಕೆ ಬರ್ದೆ ಇದ್ದಕ್ಕೆ ಹೆಲ್ಪರ್ ಆಗಿ ಕೆಲಸಕ್ಕೆ ಸೇರಿದೆ. ಸರಿಯಾಗಿ ಕೆಲಸ ಮಾಡೊಕೆ ಬರ್ತಿದ್ದಿಲ್ಲಾ. ಅದಕ್ಕೆ ಬಾಯಿ ಸಿಕ್ಕ ಹಾಗೆ ಬೈತಿದ್ರು ಇಷ್ಟು ವಯಸ್ಸಾದರೂ ಬುದ್ದಿ ಇಲ್ಲ ನಿಮಗೆ, ಯಾಕ ಬಂದು ತೊಂದರೆ ಕೊಡ್ತಿದಿರಿ. ಎಲ್ಲಿಯಾದರೂ, ಅರಳಿಕಟ್ಟೆಗೆ ಹೋಗಿ ಸಾಯಬಾರದು ಅಂತ ಬೈತಾರೆ ಮೊದ್ಲೆ ತುಂಬಾ, ಶ್ರೀಮಂತ ಕುಟುಂಬದಿಂದ ಬಂದವರು ಇವತ್ತು ಯಾರಯಾರ ಜೊತೆ ಏನೇನೋ ಬೈಯಿಸಿಕೊಳ್ಳಬೇಕು. ಮನಸ್ಸಿಗೆ, ದೇಹಕ್ಕೆ ತುಂಬಾ ನೋವಾಗುತ್ತಿದೆ.

ವಿಶ್ಲೇಷಣೆ

ಪ್ರಸಕ್ತ ಪ್ರಕರಣದ ಜಯಮ್ಮ ಬೆಳೆದಿರುವುದು ಅಗರ್ಭ ಶ್ರೀಮಂತ ಕುಟುಂಬದಲ್ಲಿ ಬಂದವರು ಕಾಲನಂತರದಲ್ಲಿ ತನ್ನ ಗಂಡನ ಮನೆಯವರು ಹಾಗೆಯೆ ದೊರೆತಿದ್ದ ಆದರೆ ಕುಟುಂಬದಲ್ಲಿನ

[illegible]

[illegible]

[illegible]

[illegible]

ಕಲಹಗಳಿಂದ ಮೈದನರಿಂದ ಮಾಡಿದ ಮೊಸದಿಂದಾಗಿ ಇರುವ ಆಸ್ತಿಯಲ್ಲಿ ಬಿಡುಗಾಸು ಸಿಗದೆ ಛಿದಿಪಾಲಾಗಿದ್ದರಿಂದ ಅವಳು ಅನಿವಾರ್ಯವಾಗಿ ಕೆಲಸಕ್ಕೆ ಹೋದಳು ಅಲ್ಲಿ ಕೆಲಸಗಳಿಗೆ ಹೆಲ್ಪರ್ ಕೆಲಸ ದೊರೆತಿದ್ದದು ಜೀವನ ಸಾಗಾಣಿಕೆಗೆ ಆಧಾರವಾಯಿತು ಆದರೆ ಈ ಗಾರ್ಮೆಂಟ್ಸಗಳಲ್ಲಿ ಕಾರ್ಮಿಕರನ್ನು ನಡೆಸಿಕೊಳ್ಳುವ ಪೆರಿಜೀತದಾಲಿನದೆ ಎಂದು ಹೇಳಬಹುದು. ಇಂತಹ ಕೆಲಸದಲ್ಲಿ ಸೇರಿದ ಜಯಮ್ಮ ಅಲ್ಲಿನ ಮ್ಯಾನೇಜ್‌ರಗಳು ಬೈಯುವ, ಹೊಡೆಯುವ ಸಂಗತಿಗಳಿಂದಾಗಿ ಮಾನಸಿಕವಾಗಿ ಕುಗ್ಗಿ ಹೋಗಿರುವುದಕ್ಕೆ ಅವರು ಬೆಳೆದಂತಹ ಶ್ರೀಮಂತಿಕೆಯ ಪರಿಸರ, ಧಿಡಿರನೆ ಒದಗಿ ಬಂದ ಕಷ್ಟದಿಂದ ಮನೆಯಿಂದಾಚೆಗೆ ದುಡಿಯಬೇಕಾದ ಅನಿವಾರ್ಯತೆಯು, ಅಲ್ಲಿನ ವಾತಾವರಣದ ಅನಾನುಕುಲದಿಂದ ಕೆಲಸ ನಿರ್ವಹಿಸಿದರು ಅಲ್ಲಿ ನೀಡುವ ಹಿಂಸೆಯು ದಿನ, ದಿನೆ ಕುಗ್ಗಿಸುತ್ತಿರುವುದು ಕಾಣುಬಹುದು.[೧೦]

೫.೨.೧೧ ಕನಕ ಪ್ರಕರಣ

ನಿರೂಪಣೆ

ನಮ್ಮದು ಹೊಸಪೇಟೆ ಪಕ್ಕದಲ್ಲಿ ಒಂದು ಸಣ್ಣಹಳ್ಳಿ. ಮದ್ಯಮ ವರ್ಗದ ಅಷ್ಟೇನು ಬಡತನ ಇದ್ದಿಲ್ಲ. ನಾವು ಇಬ್ಬರು ಹೆಣ್ಣು ಮಕ್ಕಳು ಇಬ್ಬರು ಗಂಡು ಹುಡುಗರು. ನಮ್ಮ ತಂದೆ ಹೊಸಪೇಟೆಯಲ್ಲಿ ದಬ್ಬೊಬಂಡಿಯಲ್ಲಿ ಹಣು ಮಾರುತ್ತಿದ್ದರು. ನಾನೇ ಹಿರೇಮಗಳು ಓದಲು ಸಾದ್ಯವಾಗಲಿಲ್ಲ ಆದರೆ ತಂಗಿ ತಮ್ಮಂದಿರನ್ನು ಸ್ಕೂಲ್‌ಗೆ ಕಳುಸ್ತಾ ಇದ್ರು. ಮನೆಯಲ್ಲಿ ಅಮ್ಮ ಕೆಲವೊಂದುಸಾರೆ ಹೊಲಗಳಿಗೆ, ಕಬ್ಬುಕಡಿಯಲಿಕ್ಕೆ ಹೋಗ್ತಾ ಇದ್ರು. ಸ್ವಂತ ಮನೆ ಇದ್ದೀದ್ದರಿಂದ ಹೇಗೋ ಜೀವನ ಸಾಗ್ತಾ ಇತ್ರಿ. ೧೬ ವರ್ಷಕ್ಕೆ ನನಗೆ ಮದುವೆ ಮಾಡಿದರು. ಆಗ ನನಗೆ ಇನ್ನೂ ಸರಿಯಾದ ತಿಳುವಳಿಕೆ ಇದ್ದಿಲ್ಲ. ಗಂಡ ಲಾರಿ ಡ್ರೈವರ್ ೩ದಿನ ಹೋದರೆ, ಒಂದು ದಿನ ಮಾತ್ರ ಮನೆಯಲ್ಲಿ ಇರ್ತಾ ಇದ್ರು ಆದ್ರೆ ತುಂಬ ಕುಡೀತಿದ್ದ ಕುಡಿದೇ ಲಾರಿ ಓಡಿಸ್ತಾ ಇದ್ದ ನನ್ನ ಹಣೆಬರಹ ವಿಧಿ ಅವರನ್ನ ಕರೆದುಕೊಂಡುಬಿಡ್ತು. ಮೊದಮೊದಲು ನನ್ನನ್ನ ಚೆನ್ನಾಗಿ ನೋಡಿಕೊಳ್ಳುತ್ತಿದ್ದ ಗಂಡನ ಮನೆಯವರು ರೊಕ್ಕ ಬರುವುದು ಯವಾಗ ನಿಂತು ಬಿಡ್ತೋ ನನ್ನ ಗಂಡ ಸತ್ತು ಎರಡೇ ತಿಂಗಳಿನಲ್ಲಿ ನನ್ನನ್ನು ಮನೆಯಿಂದ ಹೊರಹಾಕಿದರು. ಆಗ ನಾನು ಆರು ತಿಂಗಳು ಬಸುರಿ ಅವರಿಗೆ ಆಸ್ತಿ ಅಂತೆನಾದ್ರೂ ಏನೂ ಇದ್ದಿಲ್ಲ ಅನಿವಾರ್ಯ ಇಲ್ಲದೆ ನಾನು ನನ್ನ ತವರು ಮನೆಗೆ ಬಂದೆ. ವಯಸ್ಸಾದ ತಂದೆ-ತಾಯಿಗಳು ತಂಗಿ ತಮ್ಮಂದಿರು ಆದ್ರೂ ತಂದೆ ನಮಗೆ ಊಟಕ್ಕೆ ಕಡಿಮೆ ಮಾಡಿದ್ದಿಲ್ಲ. ಹೆರಿಗೆ ಆಯ್ತು ಗಂಡು ಮಗು ಆಯ್ತು. ಆದರೆ ಮುಂದೆ ಜೀವನದ ಗತಿ ಏನು ಎಂಬ ಯೋಚನೆ ಕಾಡ್ತಾ ಇತ್ತು. ಮಗುವನ್ನ ಮನೆಯಲ್ಲಿ ಬಿಟ್ಟು ಹೊಲಕ್ಕೆ ಹೋಗ್ತಾಇದ್ದೆ. ೪೦ ರೂ. ಕೊಡ್ತಾ ಇದ್ದರು. ಅದರಿಂದ ಯಾವ ಪ್ರಯೋಜನವೂ ಆಗ್ತಾಇರ್ಲಿಲ್ಲ. ಯಾರೋ ಹೇಳಿದ ಮಾತು ನಮಗೂ ತಲುಪಿ ಮನೆಯಲ್ಲಿ ತಂದೆ-ತಾಯಿಯನ್ನು ಒಪ್ಪಿಸಿ ಒಬ್ಬ ತಮ್ಮನನ್ನು ಕರೆದುಕೊಂಡು ಬಳ್ಳಾರಿಗೆ ಬಂದೆ. ನಾನು ಮದುವೆಯಾಗಿದ್ದೆ ಅನ್ನುವುದನ್ನ ಮರೆತು

ಕೆಲಸಕ್ಕೆ ಹೋಗ್ತಾ ಇದ್ದೆ. ಮೊದಮೊದಲು ಏನೂ ಆಗ್ತಾ ಇದ್ದಿಲ್ಲ. ಆದರೆ ಬರ್ತಾ ಬರ್ತಾ ಗಂಡ ಇಲ್ಲ ಅನ್ನುವ ನೋವು ಕಾಡಲಿಕ್ಕೆ ಶುರುವಾಯ್ತು. ಅದಕ್ಕಿಂತ ಹೆಚ್ಚಾಗಿ, ಇಲ್ಲಿನ ವಾತಾವರಣ, ಬಯ್ಯೋದು ಕತ್ತು ಹಿಚುಕೋದು ಹೊಲಸು ಶಬ್ದಗಳನ್ನು ಬಳಸೋದು ಹೀಗೆ ಹಿಂಸೆ ಆಗ್ತಾ ಇತ್ತು. ಜೊತೆಗೆ ಕೆಲಸದ ಒತ್ತಡ ದಿನಕ್ಕೆ ಇಷ್ಟು ಪೀಸು ಅಂತ ಲೆಕ್ಕ ಕೊಡ್ತಾರೆ. ಆ ಕೆಲಸ ಪೂರ್ತಿ ಮಾಡಲೇಬೇಕು ಅಲ್ಲದೆ ಮಗುವನ್ನ ನೋಡಬೇಕು ಅನ್ನಿಸೋದು ಇಲ್ಲಿ ರಜೆ ಕೊಡ್ತಿದ್ದಿಲ್ಲಸ ನಾನು ನೋಡುವುದಕ್ಕೆ ಆಕರ್ಷವಾಗಿಯೂ ಇದ್ದೀನಿ. ಸುಪ್ರೇಜರ್‌ಗಳು ನೋಡುವ ನೋಟವೇ ಬೇರೆ ರೀತಿಯಾಗಿರುತ್ತೆ ಮೊದಮೊದಲು ಅರ್ಥ ಆಗದೇ ಇದ್ರೂ. ಒಂದುದಿನ ಆವಯ್ಯಾ ನನ್ನ ಹತ್ತಿರವೇ ಬಂದು ಕೈ-ಮುಟ್ಟಿದ್ದು ಮುಖದಲ್ಲಿ ಒಂದು ರೀತಿ ಮಾಡುವುದು. ನಾನು ಯಾಕಣ್ಣ ಅಂದೆ ಅಲ್ಲಿಂದ ಒಂದೇ ಸಮನೆ ಬೈಯುತ್ತಿದ್ದ. ತುಂಬಾ ಅತ್ತೆ ಮತ್ತು ಒಡೆಯರಿಗೆ ತಿಳಿಸಿದೆ ಅವರು ಸಮಾಧಾನ ಮಾಡುವ ನೆಪದಲ್ಲಿ ನನ್ನ ಮೈಮುಟ್ಟಿ ತಬ್ಬಿಕೊಂಡು.......ಹೇಳಲು ಹೇಸಿಗೆಯಾಗುತ್ತೆ. ತುಂಬ ಒತ್ತಡಗಳನ್ನ ಹೇರಿ ಆವಯ್ಯ ನನ್ನ ಕೆಡಿಸಿದ ಅಂದಿನಿಂದ ಬೈಯ್ಯುವುದು ಕಡಿಮೆಯಾಯ್ತು ಆದ್ರೆ ಅವಕಾಶ ಸಿಕ್ಕಾಗಲೆಲ್ಲಾ ನನ್ನನ್ನು ಬಳಸಿಕೊಂಡ. ನನ್ನಂಥ ಬಡವರು, ಅಸಹಾಯಕರು ಇತ್ತ ಬದುಲ;ಉ ಆಗದೆ ಸಾಯಲು ಆಗದೆ ಬದುಕ್ತಾಇದ್ದೀನಿ ಕೆಲಸ ಬಿಡಬೇಕು ಅನ್ನಿಸುತ್ತೆ ನನಗೆ ಮಗನ ಭವಿಷ್ಯದ ಚಿಂತೆ, ಅಥವಾ ಬೇರೆ ಕಡೆ ಕೆಲಸಕ್ಕೆ ಹೋದರೂ ಸಹ ಅಲ್ಲಿಯೂ ಈ ಶೋಷಣೆ, ಕಿರಿಕಿರಿ, ಒತ್ತಡ, ಹಿಂಸೆ, ಕಾರ್ಯ, ತಪ್ಪೋದಿಲ್ಲ. ಏನು ಮಾಡಬೇಕೋ ಗೊತ್ತಾಗ್ತಾ ಇಲ್ಲ. ದಯವಿಟ್ಟು ಇದನ್ನ ಯಾರಹತ್ತಿರನೂ ಹೇಳಬೇಡಿ..........ಅವಳು ಅಳ್ತಾ ಇದ್ದಳು.

ವಿಶ್ಲೇಷಣೆ

ಅಪ್ರಾಪ್ತ ವಯಸ್ಸಿನಲ್ಲೆ ಮದುವೆ ಯಾದ (ಜಯಮ್ಮ) ಗಂಡನ ದುಶ್ಚಟದಿಂದ ಅನಾಥಳಾದಳು. ಆವರೆಗೂ ಗಂಡನಿಂದ, ಗಂಡನ ಮನೆಯವರೆಗೆ ಆದಾಯ ಇದ್ದಿದ್ದರಿಂದ ಇವಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಆದರೆ ಆದಾಯ ನಿಂತ ಮೇಲೆ, ಇವಳು ಕುಟುಂಬಕ್ಕೆ ಹೊರೆಯಾದಳು. ಹಾಗಾಗಿ ತುಂಬು ಗರ್ಭಿಣಿಯಿದ್ದಾಗ ಗಂಡನ ಮನೆಯಿಂದ ತವರಿಗೆ ಬಂದಳು. ಹೆರಿಗೆಯ ನಂತರ ಹೊಲದಲ್ಲಿ ಕೂಲಿಗೆ ಹೋಗಿ ೪೦ ರೂ. ತರ್ತಿದ್ದರೂ ಕುಟುಂಬಕ್ಕೆ ಸಾಕಾಗುತ್ತಿರಲಿಲ್ಲ. ತವರಿನವರೆಗೂ ಹೊರೆಯೆಂದು ಭಾವಿಸಿ, ಯಾರೋ ಪರಿಚಿತರಿಂದ ಮಾಹಿತಿ ತಿಳಿದು ಗಾರ್ಮೆಂಟ್ಸ್ ಕೆಲಸಕ್ಕಾಗಿ ವಲಸೆ ಬಂದಳು. ಆದರೆ ಹೊಲಿಗೆ ಕೆಲಸ ಕಷ್ಟವಾಗಲ್ಲ ಎಂದು ನಂಬಿ ಕೆಲಸಕ್ಕೆ ಬಂದಳು. ಆದರೆ ದಿನಕಳೆದಂತೆ ಇಲ್ಲಿನ ವಾತಾವರಣ, ಜನರ ಕಾಮುಕ ವರ್ತನೆ, ಕೆಲಸಗಾರರನ್ನು ನಡೆಸಿಕೊಳ್ಳೊ ರೀತಿ ಅದರಲ್ಲೂ ಹೆಂಗಸರ ಮೇಲೆ ಕೆಟ್ಟ ದೃಷ್ಠಿ ಹಾಕೋದು ಹೊಲಸು ಪದಗಳಿಂದ ಬೈಸಿಕೊಂಡು ಬದಕೊದು ತುಂಬಾ ಆಘಾತ ಅನ್ನಿಸ್ತಿರುವುದು ಈ ಮಹಿಳೆಯ ಪ್ರಕರಣದಲ್ಲಿ ಕಾಣಬಹುದು. ದಿನಕ್ಕೆ ಇಷ್ಟು ಅಂತ ಒಪ್ಪಿಸಿದ ಕೆಲಸವು ಆ ದಿನ ಎಷ್ಟೊತ್ತಾದರೂ ಮುಗಿಸಬೇಕೆಂಬ ಕಡ್ಡಾಯವು ತುಂಬಾ ಒತ್ತಡ ತರುತ್ತಿದ್ದು, ಬಂಡವಾಳಶಾಹಿಗಳಿಗೆ ಲಾಭದ ಉದ್ದೇಶ ಒಂದೆಡೆಯಾದರೆ, ಮಹಿಳೆಯರು ಹೊತ್ತಾಗೊವರೆಗೂ ಇಲ್ಲೆ ಇರಬೇಕೆಂಬ ಅಲ್ಲಿನ ದುರ್ಮನಸ್ಸಿನ ಆಲೋಚನೆಗಳ ಸುಪರ್‌ವೈಸರ್‌ಗಳು,

ಅವರಿಗೆ ಪೂರಕವಾಗಿರುವ ಮಾಲೀಕರು ಈ ಪ್ರಕರಣದ ಮೂಲಕ ಗಾರ್ಮೆಂಟ್ಸ್‌ಗಳಲ್ಲಿನ ಗೌಪ್ಯ ಬದುಕನ್ನ ಹೊರತೆಗೆಯಲು ಯತ್ನಿಸಲಾಗಿದೆ.

ಅವರ ಕೆಲವೊಂದು ಅರ್ಥವಾಗದೆ ಮುಗ್ದ ಮಹಿಳೆಯರು ಪಡುವ ಯಾತನೆ ಈ ಪ್ರಕರಣವು ವಿವರಿಸುತ್ತದೆ. ಅದರಿಂದ ತಪ್ಪಿಸಿಕೊಳ್ಳಲು ಗಾರ್ಮೆಂಟ್ಸ್ ಮಾಲೀಕರಿಗೆ ಹೇಳಿದಾಗ, ಸಂತೈಸುವ ನೆಪದಲ್ಲಿ ಅವಳನ್ನು ಬೇರೆ ಆಯಾಮವಾಗಿ ಹಿಂಸೆಗೊಳಪಡಿಸುವ ಪರಿಕಂಡು ಬರುತ್ತದೆ. ಅಂತಿಮವಾಗಿ ಅವಳನ್ನು ಉಪಭೋಗದ ವಸ್ತುವಾಗಿ ಬಳಸಿಕೊಂಡಿರುವುದು ಕಾಣಬಹುದಾಗಿದೆ. ಅವರನ್ನು ಒಪ್ಪಿಕೊಂಡ ಸಂದರ್ಭಗಳಲ್ಲಿ ಮಾತ್ರ ಕಡಿಮೆಯಾಗುವ ಕೆಲಸದ ಒತ್ತಡಗಳು, ಆದಿನಗಳು ಕಳೆದಂತೆ ಮತ್ತೆ ಹೆಚ್ಚಾಗುವುದು ಈಪ್ರಕರಣ ವಿವರಿಸುತ್ತದೆ. ಹೆತ್ತ ಮಗುವಿನ ಭವಿಷ್ಯಕ್ಕಾಗಿ ಮಗುವೊಂದು ಕಡೆ, ತಾನೊಂದುಕಡೆ ಬದುಕುವ ಬಗೆಯೂ ಒಂದು ಬಗೆಯ ದೌರ್ಜನ್ಯವೇ ಆಗಿದೆಯಲ್ಲದೆ? ಮತ್ತೇನು ಬೇರೆಡೆ ಕೆಲಸಗಳು ಇದೇಬಗೆಯ ಹಿಂಸೆ, ಕಾರ್ಯದಿಂದ ಕೂಡಿರುತ್ತದೆಯೆಂಬುದು ಹೆಣ್ಣೊಬ್ಬಳು ಸಾರ್ವಜನಿಕ ಬದುಕಿಗೆ ಮುಖಾಮುಖಿಯಾಗುವುದನ್ನು ತಡೆಯಲು ಪ್ರಯತ್ನಿಸುವ ಸಾಂಪ್ರದಾಯಿಕ ವ್ಯವಸ್ಥೆಯ ಹುನ್ನಾರವಾಗಿದೆ. (ಹೆಸರು :ಕನಕ, ವಯಸ್ಸು :೨೦, ಊರು : ಹೊಸಪೇಟೆ, ವಿದ್ಯಾರ್ಹತೆ : ೭ನೇ ತರಗತಿ, ಜಾತಿ : ಒಕ್ಕಲಿಗ)[೧೧]

೫.೨.೧೨ ರತ್ನಮ್ಮಳ ಪ್ರಕರಣ

ನಿರೂಪಣೆ

ನಾವು ತುಮಕೂರು ಕಡೆಯವರು. ನಾನು ಗಾರ್ಮೆಂಟ್ಸ್ ಫ್ಯಾಕ್ಟ್ರಿ ಕೆಲಸಕ್ಕೆ ಸೇರಿ ಇಪ್ಪತ್ತೈದು ವರ್ಷ ಆಯಿತು. ನನ್ನ ಗಂಡ ಬಿಟ್ಟು ಹೋಗಿ ಹದಿಮೂರು ವರ್ಷ ಆಯಿತು. ಆವನಿಂದಲೂ ನಾ ಪಟ್ಟಿರುವ ಕಷ್ಟ ಅಷ್ಟಿಷ್ಟಲ್ಲ. ಯಾಕಂದ್ರೆ ನನಗೂ ಎರಡು ಹೆಣ್ಣು ಮಕ್ಕಳು. ಅವರನ್ನು ಸಾಕಿ ಸಲುಹಿದೆ ಒಬ್ಬಳಿಗೆ. ಮದುವೆನೂ ಮಾಡಿದೆ. ಅವಳನ್ನು ನೋಡಿಯಾದರೂ ಸ್ವಲ್ಪ ಸಂತೋಷ ಪಡೋಣ ಅಂತ, ಅವಳಿಂದಾದರೂ ನೆಮ್ಮದಿ ಕಾಣೋಣ ಅಂತ ಮಾಡಿದ್ದೆ. ಆದರೆ ಅವಳಿಂದಲೂ ನನಗೆ ನೆಮ್ಮದಿ ಸಿಗಲಿಲ್ಲ. ಯಾಕೆಂದರೆ ಅವಳ ಗಂಡನೂ ಬಿಟ್ಟುಹೋಗಿ ಏಳು ವರ್ಷ ಆಯಿತು. ಅವಳಿಗೂ ಒಂದು ಗಂಡು ಮಗು. ಅವಳು ಕೂಡ ಫ್ಯಾಕ್ಟ್ರಿಕೆಲಸಕ್ಕೆ ಹೋಗುತ್ತಾಳೆ. ಇಬ್ಬರೂ ದುಡಿದರೂ ಬರುವ ಸಂಬಳ ಮಾತ್ರ ತುಂಬಾ ಕಡಿಮೆನೆ, ೮ೀ ದಿನ ಬೆಳಗಾದರೆ ಹೇಗಪ್ಪಾ ಜೀವನ ಮಾಡುವುದು ಎಂಬ ಚಿಂತೆಯಲ್ಲಿ ಮಲಗ್ತೀವಿ, ನಾನು ಸತ್ತ ಮೇಲೆ ಅನ್ಸುತ್ತೆ ನೆಮ್ಮದಿ ಸಿಗೋದು. ಏಕೆಂದರೆ ಅಷ್ಟು ಕಷ್ಟ ನೋವುಗಳನ್ನು ಅನುಭವಿಸುತ್ತೀವಿ. ಇರೋದು ಒಬ್ಬ ಮೊಮ್ಮಗ ಅವನ್ಗೆ ಒಂದು ಹೊಸ ಬಟ್ಟೆ ಕೊಡಿಸುವುದಕ್ಕೂ ಆಗಲ್ಲ. ನಮ್ಮ ಕೈಲಿ. ಎಂಟು ವರ್ಷ ಕಷ್ಟ ಆಯಿತು. ಬಟ್ಟೆ ಕೊಡಿಸುವುದಕ್ಕೂ ಆಗಲ್ಲ. ಯಾರೋ ಬೇರೆಯವರು ತಗೊಂಡು ಮಗುಗೆ ಸಂಬಂದಿಕರು ಯಾರೋ ಕೊಡಿಸಿದ ಬಟ್ಟೆಗಳನ್ನು ಹಾಕುತ್ತಿದ್ದೇವೆ. ಮಗುವಿಗೆ ಅನ್ನಹಾಕೋಕೆ ಒದ್ದಾಡುತ್ತಿರುವಾಗ ಹಾಲು, ಮೊಸರು, ತುಪ್ಪ, ಸೊಪ್ಪು, ತರಕಾರಿ ಎಲ್ಲಮ್ಮ ಉಣ್ಣಾಕಾಗುತ್ತೆ. ಇಪ್ಪತ್ತೈದು ವರ್ಷಗಳಿಂದಲೂ ಫ್ಯಾಕ್ಟ್ರಿಯಲ್ಲಿ ಕೆಲಸ ಮಾಡಿ ಮಾಡಿ ಜೀವನನೇ

ಸಾಕಾಗಿದೆ. ಕರೆಂಟ್ ಮಶಿನ್ ಭಯಂಕರ ಹಿಟ್‌ಕಣಮ್ಮ, ನಮ್ಮ ರಕ್ತ ಹೀರಿ ಹಿಂಡಿ ಹಿಪ್ಪಿ ಮಾಡಿ ಬಿಟ್ಟಿದೆ. ನಂಗಂತೂ ನಲವತ್ತೈದು ವರ್ಷ ಆದರೂ ದುಡಿಯೋದು ತಪ್ಪಿಲ್ಲ. ಕೊನೆಗೆ ಸಾಯೊತನಕ ಇಷ್ಟೆ ಕಣಮ್ಮ. ನಮಗೆ ಒಂದು ಗಂಡು ದಿಕ್ಕಿಲ್ಲ. ಯಾವ ಆಸ್ತಿಪಾಸ್ತಿನೂ ಇಲ್ಲ. ದಿನ ದುಡಿಬೇಕು ತಿನ್‌ಬೇಕು. ನಾನು ಸೂಜಿದಾರ ಪತ್ರಿಕೆಗೆ ಸದಸ್ಯಳಾಗಿನಂತೆ ಗೊತ್ತಾಗಿ ಒಂದು ತಿಂಗಳ ಕೆಲಸದಿಂದ ತಗ್ದಿದ್ರು, ಜೊತೆಗೆ ಹತ್ತು ಜನನ್ನು ಕೆಲಸದಿಂದ ತೆಗೆದಿದ್ರು ಮತ್ತೆ ಈ ಪತ್ರಿಕೆಯವರು ಆಸರೆಯಾಗಿ ಕೆಲಸಕ್ಕೆ ಸೇರಿಸಿ ಜೀವನಕ್ಕೆ ಒಂದು ದಾರಿ ಮಾಡಿಕೊಟ್ಟಾವೆ, ಇಗ ಸ್ವಲ್ಪ ಮಟ್ಟಿಗೆ ಬದಲಾವಣೆ ಆದರೂ ನಮ್ಮ ಜೀವನದ ಸ್ಥಿತಿಯೇನು ಬದ್ಲಾಗಿಲ್ಲ. ಏಕಂದ್ರೆ ಬರುವ ಕಡಿಮೆ ಸಂಬಳದಲ್ಲೆ ದಿನನೂ ಪರದಾಡ್ತಿವಿ. ದೇಹ ಎಷ್ಟ ಹಿಂಸೆ ಪಟ್ಟರು ಪರ್ವಾಗಿಲ್ಲಮ್ಮ ಆದರೆ ಮನಸ್ಸಿಗೆ ನೆಮ್ಮದಿ ಕೂಡಸಿಗ್ತಾ ಇಲ್ಲ. ನನ್ನ ಮಗಳ ಬಾಳು ಸರಿಹೋಗೋತನಕ ಕಷ್ಟ ತಪ್ಪಿದ್ದಲ್ಲ ಇನ್ನು ಇನ್ನೊಂದು ಮಗಳ ಜೀವನ ಸ್ಥಿತಿ ಹೇಗೊ ಏನೊ, ನಾನು ಯಾವ ಜನ್ಮದಲ್ಲಿ ಯಾವ ಪಾಪ ಮಾಡಿದಿನೊ ಏನೊ ಅದಕ್ಕೆ ದೇವರು ಇಂಥ ಶಿಕ್ಷೆಕೊಟ್ಟವನೆ. ಪ್ಯಾಕ್ಟ್ರಿ ಕೆಲಸ ಮಾಡಿ ಬಂದೂ ಕೂಡ ಮನೆಯಲ್ಲಿ ಹೂವು ಕಟ್ತವಮ್ಮ ಅವರನ್ನು ನೋಡಿದಾಗ ಕೈಯಲ್ಲ ಸುಲಿದು ಕಾಲುದಪ್ಪಾಗಿ ಬೊಬ್ಬೆಬಂದಂತಾಗಿ ಉಬ್ಬಿ ಬಿಟ್ಟು ತೋರಿಸ್ಕಣಕ್ಕೂ ದುಡ್ಡು ಇಲ್ಲಮ್ಮ. ನಮಗೆ ಯಾವ ಆಸರೆನೂ ಇಲ್ಲದೆ ಜೀವ ಇರೋತನಕ ದುಡಿಬೇಕು. ಏನ್ ಮಾಡೋದು ನಮ್ಮ ಹಣೆಬರಹನೇ ಇಷ್ಟು ಎನು ಕರ್ಮ ಮಾಡಿವಿ. ಸಾಲ ಮಾಡಿ ಮಗಳ ಮದುವೆ ಮಾಡಿದರೆ ಅವಳು ಜೀವನಪೂರ್ತಿ ಕಣ್ಣೀರಲ್ಲೆ ಕೈತೊಳೆಬೇಕಾತು. ಅದಕ್ಕೆ ಹೆಣ್ಣಾಗಿ ಹುಟ್ಟಬಾರದವ್ವ, ನಾನು ಅನುಭವಿಸಿದ ನೋವು ನನ್ನ ಶತ್ರೂಗೂಬೇಡ.

ವಿಶ್ಲೇಷಣೆ

ಹೆಣ್ಣಿನ ಬದುಕಿನಲ್ಲಿ ಮದುವೆಯೊಂದು ಅನಿವಾರ್ಯವೆಂಬಂತಹ ಸಿದ್ಧಾಂತಗಳು ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿದೆ. ಅವಳು ಯವುದೇ ಹಂತದಲ್ಲಿದ್ದರು ಮದುವೆಯಾಗಲೇಬೇಕೆಂಬ ಒತ್ತಡಗಳಿವೆ. ಆದರೆ ಈ ಪ್ರಕರಣದಲ್ಲಿ ಮದುವೆಯಿಂದ ಆದ ಕೆಲವು ಪರಿಣಾಮಗಳನ್ನು ಗುರುತಿಸಬಹುದು. ವಿವಾಹಿತಳಾದರು ಗಂಡನಿಲ್ಲದೆ ಬದುಕುವ ಅನಿವಾರ್ಯತೆ. ಸಮಾಜದಲ್ಲಿ ಗಂಡನಿಲ್ಲದವಳನ್ನು ಯಾರಾದರೂ ಬಳಿಸಿಕೊಳ್ಳಬಹುದು ಎಂಬುದು, ಸಂಸಾರದ ಜವಾಬ್ದಾರಿಯನ್ನು ಸಮ ಪ್ರಮಾಣದಲ್ಲಿ ಹೊರಬೇಕಾದ ಹೆಣ್ಣು-ಗಂಡು; ಬಡ ಕುಟುಂಬಗಳೆಲ್ಲ ಹೆಣ್ಣಿನ ಹೊಣೆಯಾಗಿದೆಯೆಂಬುದಕ್ಕೆ ರತ್ನಮ್ಮನದೆ ಉದಾಹರಣೆ. ಗಂಡ ನಾಪತ್ತೆಯಾದ ಮೇಲೆ ಎರಡು ಮಕ್ಕಳ ಬದುಕಿಗಾಗಿ ಗಾರ್ಮೆಂಟ್ಸ್ ಕೆಲಸಕ್ಕೆ ಸೇರಿದ್ದು, ಮಗಳಿಗೆ ಕಷ್ಟ ಪಟ್ಟು ಸಾಲ ಮಾಡಿ ಮದುವೆ ಮಾಡಿದ್ದು, ಅವಳಿಗೆ ಗಂಡನೂ ಕೂಡ ಬಿಟ್ಟು ಹೋಗಿದ್ದು, ಆಸರೆಯಾಗಬೇಕಿದ್ದ ಅಳಿಯನು ಹೋದನಂತರ ಮಗಳು ಮತ್ತೆ ಹೊರೆಯಾದಳು. ವಿಧಿಯಿಲ್ಲದೆ ಮಗಳನ್ನು ಗಾರ್ಮೆಂಟ್ಸ್‌ಗೆ ಕರೆದುಕೊಂಡು ಹೊರಟೆ. ಇಂತಹ ಕಷ್ಟದ ದಿನದಲ್ಲಿ ಬರುವ ಸಂಬಳ ವಿಶ್ರಾಂತಿ ಇಲ್ಲದ ದುಡಿಮೆ ಮನಸ್ಸು ಹಾಳುಗೆಡುವಂತಹ ಫ್ಯಾಕ್ಟ್ರಿಯಲ್ಲಿನ ಸಂಗತಿಗಳು. ಓ.ಟಿ. ಮತ್ತೊಂದು ರಗಳೆ, ಹೆತ್ತ ಮಗುವನ್ನು ನೋಡಿಕೊಳ್ಳದಂತಹ ಪರಿಸ್ಥಿತಿ ಜೊತೆಗೆ ನಿತ್ಯಬಲೆಏರಿಕೆ ಸಂದರ್ಭದಲ್ಲಿ ಬೆಲೆ ಏರಿಕೆಗಳು ಸರಿಯಾಗಿ

ಹೊಟ್ಟೆಗೂ ತಿನ್ನದಂತಹ ಪರಿಸ್ಥಿತಿಯನ್ನು ಈ ಪ್ರಕರಣ ಹೊರಹಾಕುತ್ತದೆ. ಬಂಡವಾಳ ಶಾಹಿಗಳ ಲಾಭದ ದೃಷ್ಟಿಯಿಂದ ಬಳಸುವ ಆಧುನಿಕ ಉಪಕರಣಗಳು ಕೆಲಸಗಾರರ ಆರೋಗ್ಯದ ಮೇಲೆ ಬೀರುವ ಪರಿಣಾಮವನ್ನು ಇಲ್ಲಿ ಕಾಣಬಹುದು.

ಮಹಿಳೆಯರಿಗೆ ಅಸಂಘಟಿತ ವಲಯದಲ್ಲಿ ಕೆಲಸಗಳು ಹೆಚ್ಚಾಗಿ ಲಭ್ಯವಾಗುವುದು, ಅವರು ಸಂಘಟಿತರಾಗದಿರಲು ಸಾಧ್ಯವಿಲ್ಲವೆಂದು. ಹಾಗೊಮ್ಮೆ ಸಂಘಟಿತರಾದರೂ ಅದರಿಂದಾಗಿಯೇ ಅವರು ಇನ್ನಷ್ಟು ಸಮಸ್ಯೆಗಳಿಗೆ ಬಲಿಯಾಗೋದಕ್ಕೆ ಈ ಪ್ರಕರಣದಲ್ಲಿ ಈ ಮಹಿಳೆಯು ಸೇರಿದಂತೆ ಇನ್ನೂ ಹತ್ತುಜನ ಮಹಿಳೆಯರು ಕೆಲಸ ಕಳೆದುಕೊಂಡಿರುವುದು ಕಾಣಬಹುದು. ಹಾಗೆಯೇ ಬಲವಾದ ಸಂಘಟನೆಯಿಂದ ಮತ್ತೆ ಕೆಲಸ ಪಡೆದುಕೊಂಡಿದ್ದು, ಮಹಿಳೆಯರು ಗಟ್ಟಿಯಾಗಿ ಸಂಘಟಿತರಾದರೆ ತಮ್ಮ ಸಮಸ್ಯೆಗಳನ್ನು ಕಡಿಮೆ ಪ್ರಮಾಣದಲ್ಲಾದರೂ ನಿವಾರಿಸಿಕೊಳ್ಳಬಹುದೆಂಬುದಕ್ಕೆ ಈ ಪ್ರಕರಣ ಉದಾಹರಿಸಬಹುದು. ಸಮಾಜ ವ್ಯವಸ್ಥೆಯಲ್ಲಿ ಹೆಣ್ಣಿಗಿರುವ ಪರಿಸ್ಥಿತಿಗಳಿಂದ ನಲುಗಿದ ರತ್ನಮ್ಮ ಹೆಣ್ತನಕ್ಕೆ, ಹೆಣ್ಣು ಜನ್ಮವನ್ನು ತಿರಸ್ಕರಿಸುತ್ತಾರೆ. (ಹೆಸರು :ರತ್ನಮ್ಮ ವಯಸ್ಸು : ೪೫, ಊರು : ತುಮಕುರು, ವಿದ್ಯಾರ್ಹತೆ : ಇಲ್ಲ, ಜಾತಿ :ಕುರುಬ)[೨]

೫.೨.೧೩ ಸಾಬೀಯಾಳ ಪ್ರಕರಣ

ನಿರೂಪಣೆ

ನಮ್ಮ ಮನೆಯಲ್ಲಿ ಎಲ್ಲಾ ಸೇರಿ ೧೭ ಜನ ಇದ್ದೀವಿ. ನಾವು ೬ ಜನ ಹೆಣ್ಣು ಮಕ್ಕಳು. ೪ ಜನ ತಮ್ಮಂದಿರು ಅಪ್ಪ ಅಮ್ಮ ಮಕ್ಕಳು (ನನಗೆ ಮಕ್ಕಳಾಗಿಲ್ಲ) ನನ್ನ ಗಂಡ ತಂಗಿಯರ ಮಕ್ಕಳು ಎಲ್ಲರೂ ಒಂದೇ ಕಡೆ ಇದ್ದೇವೆ. ನಾನು ಮೊದಲು ಇಲ್ಲಿಗೆ ಕೆಲಸಕ್ಕೆ ಬರ್ತಾ ಇದ್ದಿಲ್ಲ. ನನಗೆ ಮೊದಲನೇ ಹೆರಿಗೆಯಲ್ಲಿ ಸಿಜಿರಿನ್ ಆಗಿ ಮಗು ತೀರಿಕೊಂಡಿತು. ನನ್ನ ರಕ್ತ ಪರೀಕ್ಷೆಮಾಡಿದಾಗ ಬಿಳಿಕಾಮಾಲೆ ಇರುವುದು ತಿಳೀಯಿತು ಗಂಡ–ಹೆಂಡತಿ ಸೇರುವುದು ಬೇಡ ಅಂದರು. ನನ್ನ ಗಂಡನಿಗೆ ನನ್ನ ಮೇಲೆ ತಿರಸ್ಕಾರ, ಸಿಟ್ಟು ಜೊತೆಗೆ ಎರಡನೇ ಮದುವೇನೂ ಮಾಡಿಕೊಂಡರು ನಾನು ಕೇಳಿದರೆ ನಿನಗೆ ತಲಾಖ್ ಹೇಳಿಲ್ಲವಲ್ಲ ಎಂದರು. ಅಲ್ಲಿ ಇರಲಾರದೇ ಈ ಕೆಲಸಕ್ಕೆ ಬಂದೆ. ಯಾರೂ ಬೇಡ ಅನ್ನಲಿಲ್ಲ. ದುಡ್ಡಿನ ಅವಶ್ಯಕತೆಯೂ ಇತ್ತು. ಅದಕ್ಕೆ ಬಂದೆ. ಇಲ್ಲಿ ಕೆಲಸ ಮಾಡ್ತೇನೆ. ಅವರೇನು ಹೇಳ್ತಾ ಇದ್ದರೇ, ಏನು ಬೈಯ್ತಾರೋ, ಕಿರಿ ಕಿರಿ ಮಾಡ್ತಾರೋ ಎಲ್ಲವೂ ಅರ್ಥ ಆಗುತ್ತೆ. ಆದ್ರೆ ಅದೇನು ಅನ್ನೋಲ್ಲ ಬಗ್ಗೆ ತಲೆಕೆಡಿಸೊಲ್ಲ ಒಂಥರ ಜೀವಂತ ಶವವಾಗಿ ಬಿಟ್ಟಿದ್ದೀನಿ ನಿಂತ್ರು ಬೈಯ್ತಾರೆ. ಕುಂತ್ರು ಬೈಯ್ತಾರೆ. ನನ್ನ ಕಣ್ಣಲ್ಲಿ ನೀರೇ ಬತ್ತಿ ಹೋಗಿದೆ. ನಮಗೆ ಏನು ಸ್ವಾತಂತ್ರ್ಯ ಇದೆ ಹೇಳಿ ಮೇಡಮ್. ಇವರು ದುಡಿಸಿಕೊಳ್ತಾರೆ. ನಾಯಿ ಅಂತಾರೆ. ಊಟಕ್ಕೆ ಕುಂತಾಗ ಇಷ್ಟೆ ಟೈಮ್ ಅಂತ ಫಿಕ್ಸ್ ಮಾಡ್ತಾರೆ. ಎಲ್ಲ ಹೆಣ್ಣು ಮಕ್ಕಳೂ ಇಲ್ಲಿ ಕಷ್ಟ ಇರೋದಕ್ಕೆ ಬರ್ತಾರೆ. ಆದ್ರೆ ಇವರಿಗೆ ನಾವು ಪರದೇಸಿ ಥರ ಕಾಣಿಸ್ತೇವೆ. ಮನುಷ್ಯರ ಹಾಗೆ ಹಾಣಿಸಲ್ಲ. ಮ್ನೊನ್ನೆ ಎರಡು ಪೀಸ್ ಕಡಿಮೆ ಮಾಡಿದೆ ಅಂತ ಬೈತರೆ. ಆ ಯಪ್ಪನಿಗೆ

ಸಮಾಧಾನವಾಗಲಿಲ್ಲ. ನನ್ನ ಬಲರಟ್ಟೆಯಲ್ಲಿ ಹೇಗೆ ಚೂಟಿದಾನೆ ನೋಡಿ, ಇನ್ನೂ ರಕ್ತ ಹೆಪ್ಪಾಗಿದೆ. ಇವೆಲ್ಲವನ್ನ ಸಹಿಸಿಕೊಂಡ್ರೇನೆ ನಮಗೆ ಕೆಲಸ, ಇಲ್ಲ ಅಂದ್ರ ಹೋಗು ಹೋಗು ಅಂತಾರೆ.

ವಿಶ್ಲೇಷಣೆ

ಮನುಷ್ಯ ಬದುಕಿನಲ್ಲಿ ಆರೋಗ್ಯ-ಅನಾರೋಗ್ಯದ ಪ್ರಶ್ನೆಗಳು ಹೆಣ್ಣಿಗೂ-ಗಂಡಿಗೂ ಇರುತ್ತವೆ. ಆದರೆ ಅವುಗಳ ಪರಿಣಾಮಗಳೂ ಭಿನ್ನವಾಗಿದೆ. ಗಂಡನ ಅನಾರೋಗ್ಯದಲ್ಲಿ ಹೆಂಡತಿ ನಿರಂತರವಾಗಿ ಸೇವಕಳಾಗಿ ಅವನಿಂದ ಏನೇ ಹಾನಿಯಿದ್ದರೂ ಬದುಕಬೇಕು. ಆದರೆ ಅದೇ ಅವಳ ವಾಸಿಯಾಗದ ಗಂಡಿಗೆ ಅನಾನುಕೂಲಕರವಾದ, ಅನಾರೋಗ್ಯಕ್ಕೆ ತುತ್ತಾದರೆ, ಅವಳು ಅನಾಥತೆಯಂತೆ ಒಂಟಿತನವನ್ನು ಅನುಭವಿಸಬೇಕಾಗುತ್ತದೆ. ಎಂಬುದಕ್ಕೆ ಸಬೀನಾ ಉದಾಹರಣೆಯಾಗಿದ್ದಾರೆ. ಹೆಣ್ಣು ಹೆರುವ ಯಂತ್ರಮಾತ್ನಂಡಿನ ಉಪಯೋಗಕ್ಕೆ ಬಾರದವಳು ಎಂಬುದನ್ನು ಕೆಲವೆನಿಗದಿತ ಮಾನದಂಡದಿಂದ ಅಳತೆ ಮಾಡುವುದು ಸಮಾಜದಲ್ಲಿನ ದುರಂತ ಹಾಗಾಗಿ ಇಲ್ಲಿ ಸಬೀನಾ ಅನಾರೋಗ್ಯದ ಕಾರಣದಿಂದ ಅನಾಥತೆಗೆ ಒಳಗಾಗುತ್ತಾಳೆ. ಆದ್ದರಿಂದ ದುಡಿಮೆಯತ್ತ ಮುಖ ಮಾಡಿದ ಸಬೀನಾ ನಿರಾಶೆಯ ಛಾಯೆಯಿಂದ, ತನ್ನ ಬದುಕು ಇದ್ದರೂ ಅಷ್ಟೇ ಸತ್ತರು ಅಷ್ಟೇ ಎಂಬ ನಿರಾಸೆಯ ಛಾಯೆಯಿಂದಾಗಿ ಗಾರ್ಮೆಂಟ್ಸ್‌ನಲ್ಲಿ ಬಾಯಿಗೆ ಬಂದ್ಹಂಗೆ ಬೈಯ್ದರು, ಊಟಕ್ಕೂ ಬಿಡದಿದ್ದರೂ ಸಹ ತಮ್ಮದು ಸ್ವಾತಂತ್ರ್ಯವಿಲ್ಲದ ಬದುಕು ಎಂದು ಅದಕ್ಕೆ ಒಗ್ಗಿಕೊಂಡು ಆಗುವ ದೌರ್ಜನ್ಯವನ್ನು ಮೌನವಾಗಿ ಸಹಿಸಿಕೊಂಡಿದ್ದಾರೆ, ಅವರು ಕೆಲಸದ ಕೊಂದು ಕೊರತೆಯ ನೆಪವಾಗಿಸಿಕೊಂಡು ಅವಳ ರಟ್ಟೆಯ ಮೇಲೆ ಚಿವುಟಿರುವುದು ಕ್ರೌರ್ಯವನ್ನು, ಹೆಣ್ಣನ್ನು ಅಧೀನವಾಗಿ ನಡೆಸಿಕೊಳ್ಳುವ ಪರಿಯನ್ನು ಗಮನಿಸಬಹುದು. ಆದರೆ ಮನೆಯಲ್ಲಿ ನಿರಾಕೃತಳಾಗಿ ಆಲೋಚನೆಗೆ ಬಲಿಯಾಗುವುದರಬದಲು, ದುಡಿದಾದರೂ ಕಷ್ಟ ಮರೆಯಬೇಕೆಂದು ಗಾರ್ಮೆಂಟ್ಸ್‌ಗೆ ಸೇರಿದ್ದು, ಬಾಣಲೆಯಿಂದ ಬೆಂಕಿಗೆ ಬಿದ್ದಂತೆ ಇದೆ. ಇದರರ್ಥ ಹೆಣ್ಣಿನ ಬದುಕಿನಲ್ಲಿ bad ಮತ್ತು worst ಎರಡರ ಆಯ್ಕೆಮಾತ್ರ ಇರುವುದೆಂದು ಹೇಳಬಹುದು. (ಹೆಸರು :ಸಾಬಿಯಾ, ವಯಸ್ಸು : ೭೫, ಊರು :ಕೌಲ್ ಬಜಾರ್ ಬಳ್ಳಾರಿ, ವಿದ್ಯಾರ್ಹತೆ : ಇಲ್ಲ, ಜಾತಿ : ಮುಸ್ಲಿಂ)[೧೩]

೫.೨.೧೪ ರೇಖಾಳ ಪ್ರಕರಣ

ನಿರೂಪಣೆ

ನಾನು ನೋಡೋಕೆ ಚೊಲೊ ಇದಿನಿ ಅಂತನೆ ನನ್ನ ಜೀವನ ಹೀಗಾಯಿತು ಅನ್ಸುತ್ತೆ. ಏಕೆಂದರೆ ಏನಾಗಬಾರದಾಗಿತ್ತು ಅದೆಲ್ಲವೂ ಎರಡು ವರ್ಷದಲ್ಲಿ ಆಗಿ ಹೋಯಿತು. ನಮ್ಮದು ತುಂಬಾ ಬಡಕುಟುಂಬ. ಇವತ್ತು ದುಡಿಬೇಕು ಇವತ್ತ ತಿನ್ನಬೇಕು. ಹಾಗಾಗಿ ನಮ್ಮ ತಂದೆ ಹುಡುಗನ್ನು ನೋಡಿ ಕಷ್ಟಪಟ್ಟು ಸಾಲಮಾಡಿ ಮದುವೆ ಮಾಡಿದರು. ಮದುವೆ ಆದರೆ ಒಂದು ಜೀವನಕ್ಕೆ ದಾರಿ ಸಿಗುತ್ತೆ

ಅಂತ ತಿಳಿಕೊಂಡ್ರು. ಆದರೆ ನನ್ನ ಹಣೆಬರಹ ಗಂಡನಿಗೆ ಮದುವೆ ಮುಂಚೆ ಕಾಯಿಲೆ ಇತ್ತು. ಒಂದು ವರುಷದಲ್ಲಿ ನನ್ನಿಂದ ಗಂಡ ಶಾಶ್ವತ ದೂರವಾಗಿ ಎಲ್ಲ ಮುಗಿದೆ ಹೋಯಿತು. ನಂತರ ಗಂಡನ ಮನೆಯವರ ಹಿಂಸೆ ಶುರುವಾಯಿತು. ಮೈದುನನ ಕಾಟ ಹೆಚ್ಚಾಗ ತೊಡಗಿದ್ದರಿಂದ ಯಾರಿಗೂ ಹೇಳಕ್ಕಾಗದೆ ತವರಿಗೆ ನಾನೇ ಸಾಕಾಗಿ ಬಂದೆ. ಇಲ್ಲಿ ಕೂತ್ಕೊಂಡು ತಿನ್ನುವ ಭಾಗ್ಯವಂತೂ ನನಗಿಲ್ಲ. ಹಾಗಾಗಿ ಬೆಂಗಳೂರಿಗೆ ಬಂದು ಅಪ್ಪ ಅಮ್ಮ ನಾನು ಮೂವರು ದುಡಿಯಲು ಬಂದ್ವಿ, ಅಪ್ಪ ಹಮಾಲಿ ಕೆಲಸಮಾಡಿದ್ರು, ಅಮ್ಮ ಹೂವು ಮಾರುವುದು, ನಾನು ಗಾರ್ಮೆಂಟ್ಸ್ ಕೆಲಸಕ್ಕೆ ಸೇರಿದೆ. ಪ್ರಾರಂಭದಲ್ಲೆ ಶುರುವಾಯಿತು, ಮಾಸ್ಟರ ಮಾಲೀಕರ ಕಿರುಕುಳ ಒಂದು ಸಾರಿ ಕಾರ್ಮಿಕ ಇಲಾಖೆಯವರು ಬರ್ತಾರೆ ಎಲ್ಲಾ ಸೌಲತ್ತನ್ನು ಕೊಡ್ತಾರೆ, ಏನು ತೊಂದರೆ ಇಲ್ಲ ಎಂದು ಹೇಳಲೇಬೇಕು, ಹೇಳದೆ ಇದ್ದರೆ ನಿಮ್ಮನ್ನು ಕೆಲಸದಿಂದ ಹಾಕುತ್ತೇವೆ ಎಂದು ಹೇಳಿದರು. ಆಗ ನಾನು ಕೂಡ ಹೊಸದಾಗಿ ಅವರು ಹೇಳಿಕೊಟ್ಟಹಾಗೆ ಹೇಳುತ್ತಿದ್ದೆ. ಮಾಲೀಕರು ಯಾವುದೊನೆಪಹೇಳಿ ನನ್ನನ್ನು ಕ್ಯಾಂಟೀನ್‌ಗೆ ಕರೆಸುತ್ತಿದ್ದರು. ಮೈ ಕೈ ಮುಟ್ಟಿ ಮಾತನಾಡಲು ಶುರುವಾಯಿತು, ಏನಬೇಕು ನಿನಗೆ, ಸೀರೆ ಕೊಡ್ಲಿ , ಬಂಗಾರ ಇನ್ನಿತರ ಅನೇಕ ಆಶೆಗಳನ್ನು ತೋರಿಸಿದರು. ಅದಕ್ಕೆ ಯಾವುದಕ್ಕೂ ನಾನು ಬಗ್ಗಲಿಲ್ಲ. ಆಗ ಮತ್ತೆ ಬೇರೆ ರೀತಿ ಸ್ವಲ್ಪ ದಿನ ಸುಮ್ಮನಿದ್ದರು.

ನಂತರ ನಿನ್ನನ್ನು ತುಂಬಾ ಇಷ್ಟಪಡ್ತೀನಿ, ಮದುವೆ ಆಗಬೇಕೆಂದು ನಿರ್ಧಾರ ಮಾಡಿದಿನಿ. ವಿಧವೆ ಆದರೂ ಬಾಳಕೊಡ್ತಿನಿ ಅಂತ ಹೇಳಿ ಯೋಚಿಸಿ ನಿರ್ಧಾರ ಹೇಳು. ತುಂಬಾ ಯೋಚಿಸಿದೆ, ನನಗೂ ಗಂಡ ಇಲ್ಲ, ಮಕ್ಕಳು ಇಲ್ಲ ಜೀವನಪೂರ್ತಿ ಒಬ್ಬ ಜೊತೆಗಾರ, ಬದುಕಿಗೊಂದು ಆಸರೆ ಸಿಗುತ್ತೆ ಅಂತ ಒಪ್ಪಿಕೊಂಡೆ. ಆಗ ಫ್ಯಾಕ್ಟ್ರಿಯಲ್ಲಿ ಅಷ್ಟು ಕೆಲಸಮಾಡದೆ ಇದ್ದರೂ ತೊಂದರೆ ಇದ್ದಿಲ್ಲ, ಯಾರು ಏನು ಕೇಳ್ತಾ ಇದ್ದಿಲ್ಲ.

ಸಾಯಂಕಾಲ ಅವರು ನಾನು ತಿರ್ಗಾಡುತ್ತಿದ್ದಿವಿ. ಸ್ವಲ್ಪ ದಿನ ಅಂತೂ ಸ್ವರ್ಗನೆ ಇಲ್ಲಿದೆ ಅನ್ಕೊಂಡಿದ್ದೆ. ಒಂದು ದಿನ ಹೋಟೆಲ್‌ನಲ್ಲಿ ರೂಮ ಮಾಡಿ ಕರೆದುಕೊಂಡು ಹೋಗಿದ್ದರು. ನಾನೇ ಎಷ್ಟೆ ನಿರಾಕರಿಸಿದರೂ ನನ್ನ ದೇಹ ಅವನ ಸ್ಪರ್ಶಕ್ಕೆ ಸೋತುಹೋಗಿಬಿಡ್ತು. ಆಮೇಲೆ ಗೊತ್ತಾಯಿತು ಮಾಲೀಕರ ಒಳತಂತ್ರ ಬುದ್ಧಿ. ಮೂರು ತಿಂಗಳಾಯಿತು. ಮಾಲೀಕರ ಹತ್ತಿರ ಮಾತನಾಡಲು ಎಷ್ಟು ಪ್ರಯತ್ನ ಮಾಡಿದರು, ಮಾಸ್ಟರು ಒಳಗಡೆನೆ ಕಳಿಸಲು ಅವಕಾಶ ಕೊಡ್ತಿದ್ದಿಲ್ಲ. ಈ ಸ್ಥಿತಿಯಲ್ಲಿ, ಮೊದಲೆ ವಿಧವೆ ಬೇರೆ. ಅವರಿಗೆ ಹೇಳದೆ ಮಗುವನ್ನು ತಗಿಸಿಹಾಕಲು ಇಷ್ಟಇದ್ದಿಲ್ಲ ಮಗು ಬೆಳವಣಿಗೆ ಶುರುವಾಯಿತು. ಮನೆಯಲ್ಲಿ ಹೇಗೆ ಹೇಳೋದು ಗೊತ್ತಾಗದೆ, ಮಾನಸಿಕ ದೈಹಿಕವಾಗಿ ಎಷ್ಟು ನೋವನ್ನು ಅನುಭವಿಸಿದಿನಿ ಅನ್ನುವುದು ಆ ದೇವರಿಗೆ ಗೊತ್ತು. ಏಕೆ ಇಷ್ಟ್ ಕಷ್ಟಕೊಡ್ತಿದಾನೇನೊ ಆ ದೇವರು ನಮ್ಮಂತವರಿಗೆ ಮನೆಯಲ್ಲಿ ಗೊತ್ತಾಗಬಾರದೆಂದು ಪ್ರತಿ ತಿಂಗಳು ಹೊರಗೆ ಆಗಿದಿನಿ ಅಂತ ತೋರ್ಸಿಕೊಡುತ್ತಿದ್ದೆ. ನಂತರ ಮಾಸ್ಟರ ಎಷ್ಟೆ ಏನೆ ಹೇಳಿದರು ಕೇಳದೆ ದಬ್ಬಿದರೂ ಬಿಡದೆ, ಹೋಗಲೇಬೇಕೆಂದು ಹಠಮಾಡಿ ಕೊನೆಗೂ ಒಳಗಡೆ ಹೋದೆ ನನಗೆ ಆರುತಿಂಗಳಾಗಿದೆ, ನನ್ನ ಹೊಟ್ಟೆಯಲ್ಲಿ ನಿಮ್ಮ ಮಗು ಬೆಳೆಯುತ್ತಿದೆ..

[illegible]

[illegible]

[illegible]

ಅದಕ್ಕೆ ಬೇಗ ಮದುವೆ ಆಗೋಣ ಅಂತ ಕೇಳಿದೆ. ಎಷ್ಟೇ ಕೇಳಿದರು ಏನೆ ಹೇಳಿದರು ಕೇಳಲೆ ಇಲ್ಲ. ನನಗೆ ಹೆಂಡ್ತಿ ಮಕ್ಕಳು ಇದ್ದಾರೆ ಅವರನ್ನೇನೂ ಮಾಡ್ಲಿ ಅಂತ ಹೇಳಿದ. ಸುಮ್ಮನೆ ಇದ್ರೆ ಸ್ವಲ್ಪ ದುಡ್ಡು ಕೆಲಸ ಎರಡು ಸಿಕ್ಕುತ್ತೆ ಇಲ್ಲದಿದ್ದರೆ ಎರಡು ಕಳ್‌ಕೊಳ್ತೀಯಾ ಅಂತ ಬೆದರಿಕೆ ಒಡ್ಡಿದರು. ಏನೂ ಮಾಡೊಕೆ ಆಗದೆ ಅಸಹಾಯಕಳಾಗಿ ಸುಮ್ಮನೆ ಕೆಲಸಕ್ಕೆ ಹೋದೆ. ಸ್ವಲ್ಪ ದಿನದ ನಂತರ ಅಕ್ಕಪಕ್ಕದವರಿಂದ ಮನೆಯಲ್ಲಿ ಹೇಗೊ ಗೊತ್ತಾಯಿತು. ಅಪ್ಪ ಅಮ್ಮ ಸಿಕ್ಕಪಟ್ಟೆ ಬೈದು ಮಾಲೀಕರ ಹತ್ತಿರ ನ್ಯಾಯ ಕೇಳಲು ಹೋದರು. ನ್ಯಾಯ ಸಿಗದೆ ಇದ್ದಕ್ಕೆ ಅಪ್ಪ ಡಾಕ್ಟರ ಹತ್ತಿರ ಹೋಗಿ ಹೆರಿಗೆ ಮಾಡಿಸಿ, ಅನಾಥಾಲಯಕ್ಕೆ ಮಗು ಕೊಟ್ಟು ನಮಗೂ ಅದಕ್ಕೂ ಯಾವ ಸಂಬಂಧ ಇಲ್ಲ ಎಂದು ಬರೆಸಿಕೊಟ್ಟು ಬಂದು ಬಿಟ್ರು. ನನ್ನ ಮಾತನ್ನು ಯಾವುದನ್ನು ಕೇಳಲಿಲ್ಲ. ಸ್ವಲ್ಪ ದಿನ ಬಿಟ್ಟು ಅಮ್ಮನ ಜೊತೆ ಹೂವು ಮಾರಲು ಹೋಗುತ್ತೇನೆ. ಸೂಜಿದಾರ ಪತ್ರಿಕೆಯವರ ಪರಿಚಯವಾಯಿತು ನನ್ನ ಹಾಗೆ ಬೇರೆ ಯಾವ ಹೆಣ್ಣು ಕಷ್ಟಪಡಬಾರದೆಂದು ಅವರಿಗೆ ಕೈ ಜೋಡಿಸಿ ಹೋರಾಡಲು ನಿರ್ಧಾರ ಮಾಡಿದ್ದೀನಿ.

ವಿಶ್ಲೇಷಣೆ

ಸೌಂದರ್ಯವೇ ಮೂಲ ಸಮಸ್ಯೆಗೆ ಕಾರಣವೆಂದು ರೇಖಾಳ ಅಭಿಪ್ರಾಯ. ಬಡತನದ ಕಾರಣದಿಂದಾಗಿ ತಮ್ಮ ಅನುಕೂಲದಲ್ಲಿ ತಂದೆ ಮದುವೆ ಮಾಡಿಕೊಟ್ಟಾಗ ಕಾಯಿಲೆ ಇರುವ ಹುಡುಗನಿಗೆ ಜೊತೆಯಾಗಿದ್ದು, ಸಮಾಜದಲ್ಲಿನ ಮುಗ್ದ ಜನರಿಗೆ ನಡೆಯುವ ಮೋಸದ ಸಮತಿಯು ಅನಾವರಣಗೊಳ್ಳುತ್ತದೆ. ಮದುವೆ ಆದ ವರ್ಷದಲ್ಲಿಯೇ ಗಂಡನನ್ನು ಕಳೆದುಕೊಂಡ ರೇಖಾ, ಗಂಡನ ಮನೆಯವರಿಗೆ ಭಾರವಾಗಿದ್ದ ಭಾವನೆಯಿಂದ ಹಿಂಸೆಗೊಳಗಾದ ರೇಖಾ ಅದನ್ನು ಸಹಿಸದೆ ಅಮಗೆ ಬಂದರು ಅಲ್ಲಿಯೂ ನಿರ್ಗತಿಕ ಚಿಂತಾಜನಕ ಸ್ಥಿತಿಯನ್ನು ಅನುಭವಿಸವುದನ್ನು ತಪ್ಪಿಸಲೂ ಉದ್ಯೋಗವನ್ನರಿಸಿ ಬೆಂಗಳೂರಿಗೆ ವಲಸೆ ಬಂದಳು ತಂದೆ ತಾಯಿ ಒಂದೊಂದು ಕೆಲಸಕ್ಕೆ ಸೇರಿದ್ದೇ ರೇಖಾ ಗಾರ್ಮೆಂಟ್ಸ ಕೆಲಸವನನ್ನು ಆಯ್ದು ಕೊಂಡಳು. ಅಲ್ಲಿನ ಬಂಡವಾಳ ಶಾಹಿಗಳ ದಬ್ಬಾಳಿಕೆಯಿಂದಾಗಿ ಸಿಗುವ ಸೌಲತ್ತುಗಳಿಂದ ವಂಚಿತವಾಗುತ್ತಿದ್ದರು ಅದನ್ನು ಸರ್ಕಾರದ ಅಧಿಕಾರಿಗಳಾಗಲಿ ಇತೆ ಸಂಸ್ಥೆಗಳಾಗಲಿ ತಿಳಿಸುವಂತಹ ಅವಕಾಶಗಳು ಕಲ್ಪಿತವಾಗದಿರುವುದು ಅಲ್ಲಿನ ಸಮಸ್ಯೆಗಳಿಗಿರುವ ಮುಖವಾಡಗಳು ಕಾಣುತ್ತವೆ. ಹಾಗೆಯೆ ಅರಕ್ಷತತೆಯಲ್ಲಿ ನೆರಳುವ ಹೆಣ್ಣಿಗೆ ಸಮಾಜದಲ್ಲಿ ಶಾಪ ವಾದ ವೈಧವ್ಯಕ್ಕೆ ಒಳಗಾದ ರೇಖಾಗೆ ಮರು ಮದುವೆಯ ಪ್ರಸ್ತಾಪವು ಆಸರೆಯನ್ನು ಬದುಕಿನ ಹೊಸ ಕನಸುಗಳತ್ತ ಪ್ರೇರೇಪಿಸಿತೆ ವಿನಃ ಅದು ಕೂಡ ಅವಳ ಬದಕನ್ನು ನಿರ್ನಾಮಮಾಡುವುದರತ್ತ ಸಾಗಲಿಲ್ಲ. ವ್ಯಕ್ತಿಗಳ ಮೇಲಿನ ಬಲವಾದ ನಂಬಿಕೆ ಬದುಕಿನದಾರಿಯನ್ನು ಅರಸುತ್ತ ಸಾಗಿದ ರೇಖಾ ಪುರುಷನ ಕಾಮುಕತೆಗೆ ಬಲಿಯಾಗಿದ್ದು, ಅದರ ಅಪರಾಧ ಸ್ತ್ರೀ ಪುರಷ ಇಬ್ಬರದಾದರು ಶಿಕ್ಷೆ ಮಾತ್ರ ಹೆಣ್ಣು ಅನುಭವಿಸುವಂತಹ ಸ್ಥಿತಿ ಇರುವ ಸಂಕೀರ್ಣ ಸಮಾಜದಲ್ಲಿ ತನ್ನ ಮಗುವಿಗೆ ಅಪ್ಪನ ಹೆಸರನ್ನು ಒದಗಿಸುವ ಅನಿವಾರ್ಯತೆಗಾಗಿ ತನ್ನ ಉಳಿವಿಗಾಗಿ, ಸಮಾಜದಲ್ಲಿ ಹೇರಿರುವ ಅನಿಷ್ಠ ಹೋಣೆಗಾರಿಕೆಯಿಂದಾಗಿ ಅನುಭವಿಸುವ ಹಿಂಸೆ ಗಾರ್ಮೆಂಟ್ಸ ಮಹಿಳೆಗೆ ಎದುರಾಗುವ ಸಮಸ್ಯೆಯ ಆಯಾಮಗಳನ್ನು ಪ್ರತಿನಿಧಿಸುತ್ತದೆ ಕೊನೆಗೆ ಪಾರಂಪರಿಕ ವ್ಯವಸ್ಥೆಗೆ ಕಟ್ಟುಬಿದ್ದ ರೇಖಾಳ ಕುಟುಂಬ ಅವಳ ಭಾವನೆಗಳನ್ನು ಆಕ್ರಮಿಸುವ ಮೂಲಕ

[illegible]

[illegible]

ಅನೈತಿಕ ಸಂತಾನವೆಂಬ ಹೆಸರಿನಲ್ಲಿ ಮಗುವನ್ನು ಅನಾಥಲಯಕ್ಕೆ ಸೇರುಸುವುದಕ್ಕೆ ಮುಂದಾಗುತ್ತಾರೆ. ಯಾರದೋ ತಪ್ಪಿಗೆ ಯಾರಿಗೋ ಶಿಕ್ಷೆಯೆಂಬುತೆ ಮಗುವು ಮತ್ತು ರೇಖಾ ಬಲಿಯಾಗುವುದನ್ನು ಗಾರ್ಮೆಂಟ್ಸ ನಲ್ಲಿಯ ಪುರುಷ ಸಂಸ್ಕೃತಿಯ ಅಟ್ಟಹಾಸವನ್ನು ಬಿಂಬಿಸುತ್ತದೆ ಅಂತಿಮವಾಗಿ ರೇಖಾಳನ್ನು ಮೋಸ ಮಾಡಿದ ವ್ಯಕ್ತಿಯು ತನ್ನ ವಿವಾಹದ ಹೆಂಡತಿಯ ಪ್ರಶ್ನೆಯನ್ನು ನೆಪವಾಗಿರಿಸಿರುವುದು ಸಮಾಜದಲ್ಲಿ ಲಿಂಗ ಶ್ರೇಣಿಕರಣದಿಂದಾಗಿ ಗಂಡಿಗೆ ಲಭ್ಯವಾದ ಸ್ವತಂತ್ರ್ಯವು ಅದರೆ ವ್ಯಾಖ್ಯಾನದ ಅಥವೇ ಕಳೆದುಕೊಳ್ಳುವಂತಾಗಿದೆ. ತನ್ನ ಮೇಲಾದ ಆಕ್ರಮಣದಿಂದ ಎಚ್ಚೆತ್ತೆ ರೇಖಾ, ತನ್ನಂತೆ ಇನ್ನೊಂದು ಹೆಣ್ಣು ಬಲಿಯಾಗಬಾರದು ಎಂಬುದಕ್ಕೆ ಸೂಜಿದಾರ ದಂತಹ ಪ್ರತಿಕೆಯೊಂದಕ್ಕೆ ಮೊರೆ ಹೋಗಿದ್ದು, ನಿರಂತರ ಹೋರಾಟಕ್ಕೆ ಸಿದ್ದವಾಗಿರುವುದು ಸ್ತ್ರೀ ಸಂಕುಲವು ಹೆಮ್ಮೆ ಪಡುವ ಸಂಗತಿ, ಪ್ರತಿಯೊಬ್ಬ ಶೋಷಿತ ಮಹಿಳೆಯು ಹೀಗೆ ಧೈರ್ಯಗೆಡದೆ ನಿಂತದ್ದೆ ಆದರೆ ಗಾರ್ಮೆಂಟ್ಸ ಮಹಿಳೆಯ ಸಮಸ್ಯೆಯ ನಿವಾರಣೆಯತ್ತ ಸಾಗಬಹುದು. (ಹೆಸರು : ರೇಖಾ ವಯಸ್ಸು : ೨೧, ಊರು : ಮಂಡ್ಯ ಜಿಲ್ಲೆ, ಜಾತಿ : ಸಿಂಪಿಗರು)[೧೪]

೫.೨.೧೫ ಸುಭದ್ರಳ ಪ್ರಕರಣ

ನಿರೂಪಣೆ

ನಮ್ಮದು ಮಧ್ಯಮವರ್ಗದ ಕುಟುಂಬವಮ್ಮ. ನಮ್ಮ ಅಪ್ಪನಿಗೆ – ಅಮ್ಮನಿಗೆ ಒಂದು ಗಂಡು ಮಗು ಮೂರು ಹೆಣ್ಣು ಮಕ್ಕಳು. ತಂದೆ ಎಲೆಕ್ಟ್ರೀಶಿಯಲ್ಲಿ ಕೆಲಸ ಮಾಡುತ್ತಿದ್ದ, ತಿಂಗಳ ಸರಿಯಾಗಿ ಸಂಬಳ ಬರುತ್ತಿರಲಿಲ್ಲ. ಅಮ್ಮ ಚಿಕ್ಕ ಪುಟ್ಟ ಹೊಲಿಗೆಯನ್ನು ಹೊಲಿದು ಸಂಸಾರದ ಖರ್ಚನ್ನು ನಿಭಾಯಿಸುತ್ತಿದ್ದಳು. ಹೀಗಾಗಿ ನನಗೆ ಓದಲು ಅಷ್ಟುಆಗಲಿಲ್ಲ. ಬೇಗ ಮದುವೆ ಮಾಡಿಕಳಿಸಿದರು.ಆದರೂ ಆರ್ಥಿಕವಾಗಿ ಇನ್ನು ಹೆಚ್ಚು ಸಮಸ್ಯೆಗಳೂ ಪ್ರಾರಂಭವಾದವು. ಮನೆ ಕಟ್ಟಲು ಮತ್ತು ಮದುವೆ ಮಾಡಿದ್ದಕ್ಕೆ ತುಂಬಾ ಸಾಲಾವಾಗಿದ್ದರಿಂದ, ಅದರಲ್ಲೆ ಹಾಸಿಗೆ ಹಿಡಿದು ತೀರಿಕೊಂಡರು. ಇದರಿಂದ ಮನೆ ಪರಿಸ್ಥಿತಿ ತುಂಬಾ ಹದಗೆಟ್ಟಿತು. ನಮ್ಮ ಮನೆಯಲ್ಲಿ ನನ್ನ ಗಂಡ ನನ್ನ ಇಬ್ಬರು ಮಕ್ಕಳು ಹಾಗೂ ನನ್ನ ಅತ್ತೆ ಇದ್ದರು. ಆಗ ತಾನೆ ಮನೆನೂ ಕಟ್ಟಿಸುತ್ತಿದ್ದೇವೆ. ಎಲ್ಲಾ ಚೆನ್ನಾಗಿ ಇತ್ತು. ಗಂಡ ಒಳ್ಳೆಯ ಸಂಪಾದನೆ ಮಾಡ್ತಾ ಇದ್ದರು. ಆದರೆ ಒಂದು ದಿನ ಮೈಯಲ್ಲಿ ಹುಷಾರಿಲ್ಲವೆಂದು ಮಲಗಿದವರು, ಮತ್ತೆ ಏಳಲಿಲ್ಲ. ನನ್ನ ಎಲ್ಲಾ ಸಮಯ ಅವರನ್ನು ನೋಡಿಕೊಳ್ಳುವುದರಲ್ಲೇ ಹೋಗ್ತಾಯಿತ್ತು ಆರು ತಿಂಗಳಾದರು ಹುಷಾರಾಗದೆ ಶಾಶ್ವತವಾಗಿ ದೂರವಾದರು. ನನ್ನ ಅತ್ತೆ ಎರಡು ಸಣ್ಣ ಮಕ್ಕಳನ್ನು ಬಿಟ್ಟು ನನ್ನ ಅನಾಥಳನ್ನಾಗಿ ಮಾಡಿದ ಇಡೀ ಮನೆ ಜವಾಬ್ದಾರಿ ನನ್ನ ತಲೆ ಮೇಲೆ ಬಿತ್ತು. ಸುಮಾರು ೫೦ ಸಾವಿರ ಸಾಲ ನನ್ನ ಮೇಲೆ ಇತ್ತು ಹೇಗೆ ನಿಭಾಯಿಸುವುದು.

ಆದ್ರೆ ಹೇಗಾದರೂ ನಾನು ಸಂಪಾದನೆ ಮಾಡಲೇಬೇಕು. ಆದರೆ ನಮ್ಮ ಹಳ್ಳಿಯಲ್ಲಿ ನಮ್ಮದು ಗೌರವಾನ್ವಿತ ಸಂಪ್ರಾದಾಯಸ್ಥ ಕುಟುಂಬ. ಅತ್ತೆಗೆ ಕೂಡ ನಾನು ದುಡಿಯುವುದು ಇಷ್ಟವಿಲ್ಲ. ಹೆಣ್ಣು ಮಕ್ಕಳು ಹೊರಗಡೆ ದುಡಿಯುವುದು ಮರ್ಯಾದೆಗೆ ಧಕ್ಕೆ ಎಂಬ ಅಭಿಪ್ರಾಯ ಬೇರೆ. ಹಾಗಾಗಿ

[illegible]

[illegible]

[illegible]

[illegible]

[illegible]

[illegible]

ಅದು ಕಷ್ಟವಾಯಿತು. ನನಗೆ ತಂದೆಯಾದರೂ ಇಲ್ಲ. ಅಥವಾ ನನ್ನನ್ನು ಸಾಕುತ್ತೇನೆ ಅನ್ನೊ ಆತ್ಮವಿಶ್ವಾಸ ನೀಡಲು ಅಣ್ಣತಮ್ಮಂದಿರು ಇಲ್ಲ. ನನಗೆ ನಾನೇ ಧೈರ್ಯ ತಂದುಕೊಂಡು ಬೇರೆ ದಾರಿ ಇಲ್ಲದೆ ನನ್ನ ತಂಗಿಯರ ಜೊತೆ ಗಾರ್ಮೆಂಟ್ಸ್ ಕೆಲಸಕ್ಕೆ ಸೇರಿಕೊಂಡೆ ಒಂದು ಮನೆ ಕೆಲಸ ಮಾಡುವುದಕ್ಕಿಂತ, ಅಡುಗೆ ಮಡುವುದಕ್ಕಿಂತ ಮುಸರೆ ತಿಕ್ಕುವುದಕ್ಕಿಂತ ಆಯಾ ಕೆಲಸಕ್ಕಿಂತ ಇದು ಗೌರವದ ಕೆಲಸವೆಂದು ನಾನು ನನ್ನ ಅತ್ತೆಗೆ ತಿಳಿ ಹೇಳಿದೆ. ಆದರೆ ಸಂಬಂಧಿಕರ ವಿರೋಧ ಇತ್ತು. ಆದರೆ ನನ್ನ ಕಷ್ಟಕ್ಕೆ ಅವರಾರು ಸಹಾಯ ಮಾಡಲಿಲ್ಲ. ಹೆಲ್ಪರ್ ಕೆಲಸಕ್ಕೆ ತೆಗೆದುಕೊಂಡಿದ್ದರು. ಸ್ವಲ್ಪ ದಿನದ ನಂತರ ಟೈಲರ್‌ಗೆ ಸೀನಿರ್‌ಟಿ ಪಡೆದೆ. ಇದರಿಂದ ಸ್ವಲ್ಪ ಮಟ್ಟಿಗೆ ಮನೆ ಕೆಲಸ ಮತ್ತು ಮಕ್ಕಳನ್ನು ನೋಡಿಕೊಳ್ತಾ ಇದ್ದಳು. ವಾರಕ್ಕೆ ಒಂದು ದಿನರಜೆ ಬಿಟ್ಟರೆ ಸಂಬಳ ರಹಿತ ವಿಶ್ರಾಂತಿಯನ್ನು ನೀಡ್ತಾಇದ್ದಿಲ್ಲ. ಎಷ್ಟೋ ಸಲ ನನ್ನ ತಂಗಿಯರು ನನಗೆ ಹೇಳ್ತಾದ್ದಿದ್ದರು ಮಾಲೀಕರ ವಿರುದ್ಧ ಹೇಳ್ತಾ ಇದ್ದರು. ಅವರು ನನಗಿಂತ ಹೆಚ್ಚು ಓದಿದರು. ಬೇರೆ ಕಡೆ ಕೆಲಸನೋಡಿಕೊಳ್ಳಲು ಸಹ ಅವರಿಗೆ ಕಷ್ಟವಾಗಲಾರದು. ನಾವೇನಾದ್ರೂ ಸ್ವಲ್ಪ ತಪ್ಪು ಮಾಡಿದರೆ ನಮ್ಮನ್ನು ಕೆಲಸದಿಂದ ಕಿತ್ತು ಹಾಕ್ತಾರೆ.

ವಿಶ್ಲೇಷಣೆ

ಬಹುಪಾಲು ಮಹಿಳೆಯರು ಕಡು ಬಡತನದಿಂದ, ಕೆಲಸದ ಅನಿವಾರ್ಯತೆಯಿರುವುದರಿಂದ, ಟೇಲರಿಂಗ್ ಕೆಲಸ ಹೆಣ್ಣು ಮಕ್ಕಳಿಗೆ ಸೂಕ್ತವೆಂದು ಈ ಕೆಲಸಕ್ಕೆ ಬಂದು ಸೇರಿಕೊಂಡಿದ್ದುದು ಕಂಡುಬರುತ್ತದೆ. ಈ ಪ್ರಕರಣದ ಸುಭದ್ರ ಕೂಡ ಗಂಡನ ಆರೋಗ್ಯಕ್ಕೆ ಮಾಡಿದ ಸಾಲ ತೀರಿಸಲು ಮತ್ತು ಕುಟುಂಬ ನಿರ್ವಹಣೆಗೆ ಈ ಕೆಲಸಕ್ಕೆ ಸೇರಿದ್ದು ಕಂಡುಬರುತ್ತದೆ. ಎಲ್ಲ ಕುಟುಂಬಗಳಂತೆ ಇಲ್ಲಿಯೂ ಸಹ ಹೆಣ್ಣುಮಗಳು ಕೆಲಸಕ್ಕೆ ಹೋಗುವುದರ ಕುರಿತು ತೀವ್ರತರ ವಿರೋಧಗಳೂ ಕಾಣಬಹುದು. ಆದರೆ ಹೆಣ್ಣು ಮಕ್ಕಳು ಬಟ್ಟೆ ಹೊಲಿಯೋದು, ಕಸೂತಿ ಕೆಲಸ ಮಾಡಬಹುದೆಂಬುದು ಸೂಕ್ತವಾದ್ದರಿಂದ ಈ ಗಾರ್ಮೆಂಟ್ಸ್‌ಗೆ ಸುಭದ್ರ ಸೇರಿಕೊಂಡಳು. ಸ್ವಲ್ಪದಿನದಲ್ಲೆ ಒಳ್ಳೆ ಕೆಲಸದಿಂದಾಗಿ ಹೆಲ್ಪರನಿಂದ, ಟೈಲರ್‌ಗೆ ಪ್ರಮೋಷನ್ ಪಡೆದಳು. ಆದರೆ ಅಗತ್ಯಕ್ಕೆ ಬೇಕೆಂದಾಗ ಸಿಗದೆ ಇರುವ ರಜೆಗಳೂ, ಸಂಬಳ ಕಳೆದು ಕೊಂಡರು ಅಗತ್ಯವಿದ್ದಾಗ ರಜೆ ಸಿಗುವುದಿಲ್ಲದರ ಕೊರಗು ಈ ಅಸಂಘಟಿತ ವಲಯದಲ್ಲಿನ ದುಡಿಮೆಯ ಪರಿಯನ್ನು ವಿವರಿಸುತ್ತದೆ. ಹಾಗೆಯೆ ಕೊಂಚ ವ್ಯತ್ಯಾಸವಾದರೂ ಯವುದೇ ದಾಖಲೆ, ಭದ್ರತೆಯಿಲ್ಲದ ಗಾರ್ಮೆಂಟ್ಸ್ ಕೆಲಸದಿಂದ ಯಾವಾಗಲೂ ತೆಗೆದು ಹಾಕುವ ಅಭದ್ರತೆಗಳೂ ಕಾಣಿಸುತ್ತವೆ. ಒಟ್ಟು ಮಹಿಳಾ ಬದುಕೇ ಅಭದ್ರತೆ ಅರಕ್ಷತತೆಯಿಂದ ಕೂಡಿರುವುದು ಹಾಗೆಯೇ ಈ ಅಭದ್ರವಾತಾವರಣದ ದುಡಿಮೆಯು ಹಿಂಸೆಯನ್ನು, ನಿರಂತರ ಆತಂಕದ ಬದುಕನ್ನು ಕಳೆಯುವುದನ್ನು ಪ್ರತಿನಿಧಿಸುತ್ತದೆ. (ಹೆಸರು : ಸುಭದ್ರ ವಯಸ್ಸು :೨೮, ಊರು :ಮದ್ದೂರು ಜಾತಿ : ಬ್ರಾಹ್ಮಣ, ವಿದ್ಯಾರ್ಹತೆ : ೧೦ನೇ)[೧೫]

[illegible]

[illegible]

[illegible]

೫..೨.೧೬ ಹೇಮಳ ಪ್ರಕರಣ

ನಿರೂಪಣೆ

ನಾನು ನಾಲ್ಕು ಜನ ಮಕ್ಕಳು ನಮ್ಮ ತಂದೆ ಸರ್ಕಾರಿ ನಿವೃತ್ತಿ ಹೊಂದಿದ ವ್ಯಕ್ತಿ. ನಾನೇ ದೊಡ್ಡವಳು ನಮ್ಮ ಮನೆಯಲ್ಲಿ ತಂದೆ ಎಷ್ಟೇ ಸಂಬಳ ತೆಗೆದುಕೊಂಡಿದ್ದರೂ ಅದು ಯಾವುದನ್ನು ಉಳಿಸಲಿಲ್ಲ. ಕೂಡಿಟ್ಟು ಇಲ್ಲ. ಯಾವಾಗಲೂ ಕುಡಿಯುವುದು, ಇಸ್ಪೆಟ್ ಆಡುವುದು ಮಾಡುತ್ತಿದ್ದರು. ನಮ್ಮ ತಾಯಿ ಬೇರೆಯವರ ಮನೆಗೆ ಅಡಿಗೆ ಕೆಲಸಕ್ಕೆ ಹೋಗುತ್ತಾರೆ. ಅವರು ದುಡಿದಿರುವುದು ಮನೆ ಖರ್ಚಿಗೆ ಸಾಕಾಗಲಾರದ್ದಕ್ಕೆ, ನಾನು ಗಾರ್ಮೆಂಟ್ಸ್ ಕೆಲಸಕ್ಕೆ ಹೋಗುತ್ತಿದ್ದೇನೆ. ತಂದೆಗೆ ಮಕ್ಕಳ, ಮನೆಯ ಯಾವ ಜವಾಬ್ದಾರಿಗೂ ಇಲ್ಲದೆ ದುಡಿದು ಕುಡಿದು ತುಂಬಾ ಸಾಲ ಮಾಡಿದ್ದಾರೆ. ಸಾಲಗಾರರು ದಿನಾಲು ಬಂದು ಬಾಯಿಗೆ ಬಂದ ಹಾಗೆ ಬೈಯ್ದು ಹೋಗುತ್ತಾರೆ. ಇಷ್ಟೆ ದಿನದಲ್ಲಿ ಸಾಲ ತೀರಿಸಬೇಕೆಂದು ನಿರ್ಧಾರ ಹೇಳುತ್ತಾರೆ. ನಮಗಂತೂ ಯಾಕಾದರೂ ಜೀವ ಇದೆ ಅಂತ ಅನ್ನುತ್ತಿದೆ. ಕೆಲವೊಬ್ಬರು ತಂದೆ ಇಲ್ಲದೆ ಅನಾಥರಾಗಿರುತ್ತಾರೆ. ಆದರೆ ನಾನು ಇದ್ದು ಇಲ್ಲದಾಗಾಯಿತೆ. ನಮ್ಮ ತಾಯಿ ನಾನು ದುಡಿಯದಿದ್ದರೆ ಜೀವನನೇ ಸಾಕಾಗಲ್ಲ. ಇನ್ನು ಫ್ಯಾಕ್ಟ್ರಿ ವಿಷಯಕ್ಕೆ ಬಂದ್ರೆ ನನ್ನ ವಯಸ್ಸಿನವರು ಸುಮಾರು ಜನ ಸುಮಾರು ಕಾರಣಕ್ಕೆ ಕೆಲಸಕ್ಕೆ ಬರುತ್ತಿದ್ದಾರೆ. ಜೀವನದ ಉತ್ಸಾಹ ಕಳೆದುಕೊಂಡಿರುವರು, ವಿಚ್ಛೇದನ ಪಡೆದವರು, ಮದುವೆ ಆಗದೆ ಉಳಿದವರು ಇನ್ನು ಕಾರಣಗಳಿಂದ ಬರುತ್ತಿದ್ದಾರೆ. ಅದರಲ್ಲೂ ಫ್ಯಾಕ್ಟ್ರಿಯ ಕರಾರುಗಳೂ ತುಂಬಾನೆ ಒಂಬತ್ತು ಗಂಟೆಗೆ ಅಂದ್ರೆ ಸರಿಯಾದ ಸಮಯಕ್ಕೆ ೧೦ ನಿಮಿಷ ಮುಂಚೆನೆ ಬರಬೇಕು ೩ ದಿನನೂ ಲೇಟ್ ಮಾಡಿ ಬಂದ್ರೆ, ಅದು ೧೦-೧೫ ನಿಮಿಷ ಅಷ್ಟೇ ಆದರೂ ತಿಂಗಳು ಸಂಬಳ ತುಂಬಾ ದುಡ್ಡು ಕತ್ತರಿಸುತ್ತಾರೆ. ಹೆಚ್ಚಿನ ಅವದಿ (ಓ.ಟಿ) ಕೆಲಸ ಮಾಡ್ತಿನಿ ಅಂದ್ರೆ ಮಾತ್ರ ಬನ್ನಿ. ಇಲ್ಲದೆ ಇದ್ದರೆ ಬರ್ಬೇಡಿ ಅಂತ ಹೇಳುತ್ತಾರೆ. ತಕ್ಷಣ ಕೆಲಸದಿಂದಲೇ ತೆಗೆದು ಹಾಕಿಬಿಡ್ತಾರೆ. ಇತ್ತೀಚಿಗೆ ನಮ್ಮ ಸಹವರ್ತಿ ಮಗು ತುಂಬಾ ಹುಷಾರಿಲ್ಲ. ಹಾಸ್ಪಿಟಲ್‌ಗೆ ಅಡ್ಮಿಟ್ ಮಾಡಿದರು ಹಾಸ್ಪೆಟಲ್‌ಗೆ ಅಡ್ಮಿಟ್ ಮಾಡಿದರ ಅಂತ ಫೋನು ಮಾಡಿದರು ಬಿಡಲಿಲ್ಲ. ನೀವು ಮನೆಗೆ ಹೋಗೋಕೆ ಒಂದು ನೆವ ಹೇಳ್ತೀರಿ ಅಂತ ಬಾಯಿ ಸಿಕ್ಕ ಹಾಗೆ ಬೈತಾರೆ ಕೊನೆಗೂ ಒ.ಟಿ. ಮಾಡದೆ ಮೇಲೆನೆ ಕಳ್ಸಿದರು. ಅತಿ ಹೆಚ್ಚು ಮದುವೆ ಆದ ಮಹಿಳೆಯರಿಗೆ ಮಾನಸಿಕ ಮತ್ತು ದೈಹಿಕವಾದ ತೊಳಲಾಟವನ್ನು ಒದ್ದಾಟವನ್ನು ನೋಡಿ ಸಹಿಸಿಕೊಳ್ಳಲು ಆಕ್ತಿಲ್ಲ. ರವಿವಾರ ರಜಾ ಇದ್ದರೂ ಅವರು ಬಾ ಅಂದಾಗ ಬರ್ಲೆಬೇಕು ಅದು, ಸಂಪೂರ್ಣವಾಗಿ ಸಂಬಳ ಕೂಡ ಕೊಡುವುದಿಲ್ಲ. ಯಾರು ಯಾರ ಜೊತೆಗೂ ಮಾತಾಡುವ ಹಾಗೆ ಇಲ್ಲ. ಊಟಕ್ಕೂ ಕೂಡ ಅರ್ಧಗಂಟೆಗಿಂತ ಹೆಚ್ಚು ಕೊಡುವುದಿಲ್ಲ. ಊಟಕ್ಕೆ ಒಂದು ಸರಿಯಾದ ಸ್ಥಳ ಕೂಡ ಇಲ್ಲ ಬರೀ ದೂಳಿನಿಂದಲೇ ಕೂಡಿರುತ್ತದೆ. ಯಾರಾದರೂ ಆಫೀಸರ್ಸ್ ಬರ್ತಾರೆ ಅಂದ್ರೆ ಹ್ಯಾಂಡ್‌ಲೂಮ್, ಗೌಜ, ಮಾಸ್ಕ (ಪಿಲ್ಟರ್) ಶುದ್ದವಾದ ನೀರು, ಇನ್ನಿತರ ಸೌಲಭ್ಯಗಳನ್ನು ಅವರು ಮುಂದೆ ತೋರಿಸಿಕೊಡುತ್ತಾರೆ. ನಮಗೆ ಎಲ್ಲಾ ಸೌಲಭ್ಯಗಳನ್ನು ಕೊಟ್ಟಿದ್ದಾರೆ ಅಂತನೆ ಹೇಳಬೇಕು ಇಲ್ಲದಿದ್ದರೆ ಕೆಲಸದಿಂದಲೇ ತೆಗೆದುಹಾಕುತ್ತಾರೆ.

[illegible]

[illegible]

[illegible]

ವಿಶ್ಲೇಷಣೆ

ಕುಟುಂಬ ನಿರ್ವಹಣೆಯ ಕಾರಣದಿಂದಾಗಿ ಈಗಲೂ ಅವಿವಾಹಿತಳಾಗಿ ಉಳಿದ ಮಹಿಳೆಯೊಬ್ಬಳು ಗಾರ್ಮೆಂಟ್ಸ್ ಕೆಲಸಕ್ಕೆ ಸೇರಿದ್ದಕ್ಕೆ ಮನೆಯಬಡತನ, ತಾಯಿಯ ಮೇಲಿರುವ ಜವಾಬ್ದಾರಿಯಲ್ಲಿ ಪಾಲ್ಗೊಳ್ಳಲು ಗಾರ್ಮೆಂಟ್ಸ ಕೆಲಸಕ್ಕೆ ಸೇರಿದ್ದಾಳೆ ಆದರೆ ಈ ಪ್ಯಾಕ್ಟ್ರಿಯ ಕರಾರುಗಳು ಅಂದರೆ ೧೦ ನಿಮಿಷವು ತಡವಾದರೆ ಕೆಲಸದಿಂದ ತೆಗೆದು ಹಾಕುವ ನಿಯಮಗಳು ಪಾಲಿಸುವವ ಗಾರ್ಮೆಂಟ್ಸ್ ಮಾಲೀಕರು, ಅದರಿಂದ ಸಿಗುವ ಸೌಲಭ್ಯಗಳೂ ಕುರಿತ ನಿಯಮಗಳ ಪಾಲನೆಯಲ್ಲಿ ಪ್ರಸ್ತಾಪವೂ ದೂರವೇ ಉಳಿದಿರುತ್ತದೆ. ಕೇವಲ ೧೦ ರಿಂದ ೧೫ ನಿಮಿಷವನ್ನು ತಡವಾದ ಕಾರಣ ಮುಂದಿಟ್ಟು ದುಡ್ಡನ್ನು ಕತ್ತರಿಸುವುದು ಬಂಡವಾಳಶಾಹಿಗಳ ಲಾಭದ ತಂತ್ರಗಾರಿಕೆಯೇ ಆಗಿದೆ. ಮಾನವೀಯತೆಯನ್ನು ಮರೆತು ನಿಂತಿರುವ ಮಾಲೀಕರು ಗಾರ್ಮೆಂಟ್ಸ್‌ಗಳಿಗೆ ಲಾಭವೊಂದೆ ಗುರಿಯಾಗಿದೆಯೆಂಬುದಕ್ಕೆ ಈ ಪ್ರಕರಣದಲ್ಲಿ ಕಂಡುಬರುತ್ತದೆ ಹೇಮ ತನ್ನ ಸಹವರ್ತಿಯ ಮಗುವಿನ ಹುಶಾರಿಲ್ಲದ ಸಂಗತಿಯನ್ನು ಹೇಳಿದಾಗೂ ಕೂಡ ಮನೆಗೆ ಕಳಿಸಲ್ಲಿಲ್ಲ ಇದರಿಂದ ಮಾಲೀಕರ ಅಮಾನವೀಯೆಯ ಕ್ರೂರತೆಯನ್ನು ಎತ್ತಿ ತೋರಿಸಬಹಹುದು ಪ್ರಕರಣವು ಉದಾಹರಿಸುವುದು. ವಿವಾಹಿತೆ ಮಹಿಳೆಯರಿಗೆ ಗಂಡನಿಂದಾಗುವ ಒತ್ತಡ ಮತ್ತು ಮಕ್ಕಳ ಪಾಲನೆ –ಪೋಷಣೆ ಗಾರ್ಮೆಂಟ್ಸ್‌ನಲ್ಲಿನ ಕ್ರೂರ ವರ್ತನೆಗಳಿಂದಾಗಿ ಮಾನಸಿಕ ಮತ್ತು ದೈಹಿಕವಾಗಿ ಹೆಚ್ಚು ತೋಳಲಾಟಕ್ಕೆ ಒಳಗಾಗುತ್ತಾರೆಂದು ಹೇಳಿದ್ದಾರೆ. ರಜೆ ದಿನಗಳಲ್ಲಿ ಸಂಬಳರಹಿತ ದುಡಿಮೆಯು ಸಹ ಗಾರ್ಮೆಂಟ್ಸ್‌ನವರು ಹೇರುವ ಒತ್ತಡವನ್ನು ವಿವರಿಸಿಕೊಳ್ಳಬಹುದು. ಹಾಗೆಯೇ ಸರಿಯಾದ ಸಮಯಕ್ಕೆ ಊಟಕ್ಕೆ ಕೂರುವ ಸ್ಥಳದ, ನೀರಿನ ವ್ಯವಸ್ಥೆಯು ಇಲ್ಲದಂತಹ ಪರಿಸ್ಥಿತಿಗಳು ಗಾರ್ಮೆಂಟ್ಸ್‌ನಲ್ಲಿ ಕಂಡು ಬರುತ್ತವೆ. ಹಾಗೆಯೇ ಹಾರ್ಮೆಂಟ್ಸ್ ಕೆಲಸಗಾರರು ಸಂಘಟಿತರಾದರೆ ಅವರನ್ನು ಎದುರಿಸುವುದು. ನಿಯಂತ್ರಣದಲ್ಲಿರಿಸಿಕೊಳ್ಳುವುದು ಕಷ್ಟವೆಂದು ಮನಗಂಡ ಗಾರ್ಮೆಂಟ್ಸ್ ಅಲ್ಲಿನ ಕಾರ್ಮಿಕರನ್ನು ಮಾತನಾಡಲು ಸಹ ಬಿಡುವುದಿಲ್ಲ. ಹಾಗೆಯೇ ಯಾರಾದರೂ ಗಾರ್ಮೆಂಟ್ಸ್ ಮೇಲ್ವಿಚಾರಕರು ಬರುವವರಿದ್ದರೆ ಎಲ್ಲಾ ಸೌಲಭ್ಯ ಒದಗಿಸಿದಂತೆ ವಾತಾವರಣ ಸೃಷ್ಟಿಸುತ್ತಾರೆ. ಹಾಗೆಯೇ ಇದು ದಿನವೂ ಇರುವಂತೆ ಹೇಳಲು ಒತ್ತಾಯಿಸುವುದು ಗಾರ್ಮೆಂಟ್ಸ್ ಕಾರ್ಮಿಕರ ಬದುಕನ್ನು ವಿವರಿಸುತ್ತದೆ. (ಹೆಸರು : ಹೇಮ ವಯಸ್ಸು : ೨೬, ಊರು : ಕನಕ ಪುರ, ವಿದ್ಯಾರ್ಹತೆ : ಬಿ.ಎ, ಜಾತಿ: ಹೊಲೆಯ)[೧೬]

೫.೨.೧೭ ರಾಜೇಶ್ವರಿಯಳ ಪ್ರಕರಣ

ನಿರೂಪಣೆ

ನಾನು ಹದಿನೆಂಟು ವರ್ಷದವಳಾಗಿದ್ದಾಗಲೇ ಒಂದು ಫ್ಯಾಕ್ಟ್ರಿಗೆ ಟೈಲರ್ ಆಗಿ ಕೆಲಸಮಾಡುತ್ತಿದ್ದೆ. ನಾಲ್ಕು ವರ್ಷಗಳಿಂದಲೂ ಸಾವಿರಾರೂ ಸಂಬಳ ಸಿಗುತ್ತಿತ್ತು. ಸಂಬಳ ಕಡಿಮೆ ಇದ್ದರು ಸ್ವಲ್ಪ ಮಟ್ಟಿಗಾದರೂ ನೆಮ್ಮದಿಯಿಂದ ಇದ್ದೆ. ಈ ನಡುವೆ ನನ್ನ ಸಂಬಂಧಿಕರ ಸ್ನೇಹಿತರ ಮಗನಿಗೆ ನನ್ನನ್ನು ಕೊಟ್ಟು ಮದುವೆ ಮಾಡಿದರು. ಗಂಡಿನ ಕಡೆಯವರು ನಾವು ಕೇಳದೆ ವರದಕ್ಷಿಣೆ ಕೊಡುತ್ತಾರೆ. ಎಂದು

ಕೊಂಡಿದ್ದರಂತೆ, ಇತ್ತ ನಮ್ಮ ಮನೆಯಲ್ಲಿ "ಸ್ನೇಹಿತರಲ್ಲವೇ?ಏನೂ ಕೇಳುವುದಿಲ್ಲ" ಎಂಬ ವಿಶ್ವಾಸದಲ್ಲಿ ಸುಮ್ಮನಾಗಿಬಿಟ್ಟರು. ಮಧ್ಯೆ ನಾನು ಬಲಿಪಶುವಾದೆ.

ಮೊದಲ ಮಗ ಹುಟ್ಟಿದ ಮೇಲೆ ನನ್ನ ಗಂಡ ತನ್ನ ಪ್ರತಾಪ ಶುರುಮಾಡಿದರು ರಾತ್ರಿ ಗಂಡ ತನ್ನ ಪ್ರತಾಪ ಶುರಮಾಡಿದರು. ರಾತ್ರಿ ಇಡಿ ಅಳುವದೇ ನನ್ನ ಕೆಲಸವಾಯಿತು. ಎರಡನೇ ಮಗ ಹುಟ್ಟಿದ ಮೇಲಂತೂ ಇವರು ಕೊಡುವ ಹಿಂಸೆ ತಾರಕಕ್ಕೆ ಏರಿತು. ಮದುವೆಯಾದ ಮೇಲೆ ನಾನೂ ಕೆಲಸ ಬಿಟ್ಟಿದ್ದೆ ನಾನು ಮನೆಯಲ್ಲೆ ಇರುವುದನ್ನು ಸಹಿಸದ ಇವರು "ನಿನ್ನನ್ನ ಕೂರಿಸಿ ಅನ್ನಹಾಕ್ತೀನಿ ಅಂತ ನಿಮ್ಮ ಮನೆಯವರಿಗೆ ಅಗ್ರಿಮೆಂಟ್ಸ್ ಮಾಡಿಕೊಟ್ಟಿಲ್ಲಾ. ನಾನು ಪಡುತ್ತಿರುವ ಕಷ್ಟಗೊತ್ತಿಲ್ಲವಾ? ಕೆಲಸಕ್ಕೆ ಹೋಗಿ ಸಂಬಳ ತಂದುಕೊಟ್ಟರೆ ಈ ಮನೆಯಲ್ಲಿ ನಿನಗೆ ಜಾಗ" ಎಂದು ಆಜ್ಞೆಮಾಡಿದರು. ಬೇರೆ ದಾರಿ ಕಾಣದೆ ಚಿಕ್ಕ ಮಕ್ಕಳನ್ನು ಕಟ್ಟಿಕೊಂಡು ಎಲ್ಲಿಯಾದರೂ, ಯಾವುದಾದರೂ ಒಂದು ಫ್ಯಾಕ್ಟ್ರಿಗೆ ಸೇರೋಣವೆಂದು ಕೆಲಸಕ್ಕೆ ಸೇರಿದೆ. ಆದರೆ ಸಂಬಳವೇ ಸಿಗಲಿಲ್ಲ. ಆಗ ಬೇರೆ ಫ್ಯಾಕ್ಟ್ರಿಗೆ ಸೇರಿಕೊಂಡೆ ಮೊದಲೆರಡು ವರ್ಷ ಏನೂ ತೊಂದರೆ ಇರಲಿಲ್ಲಾ. ಆದರೆ ಪಿ.ಎಂ.ಗಳು ಬದಲಾದಂತೆಲ್ಲ ತೊಂದರೆ ಜಾಸ್ತಿಯಾಯಿತು. ಆದರೂ ಯಾರಾದರೂ ಬರಲಿ ಹೋಗಲಿ ನಾನು ನನ್ನ ಪಾಡಿಗೆ ನನ್ನ ಕೆಲಸ ಮಾಡುತ್ತಿದ್ದೆ. ನನ್ನ ಜೀವನವೆ ವಿಚಿತ್ರ! ನನ್ನ ಗಂಡ ಹೇಳಿದಂತೆ ಕೆಲಸಕ್ಕೆ ಹೋಗಿ ಪೂರ್ತಿ ಸಂಬಳ ಕೈಲಿಟ್ಟರೂ–ಅವರಿಗೆ ತೃಪ್ತಿಯಾಗಲಿಲ್ಲ. ಮಕ್ಕಳು ಸಣ್ಣ ಪುಟ್ಟ ತಪ್ಪು ಮಾಡಿದರೆ ನನ್ನನ್ನು ಹೊಡೆಯುತ್ತಿದ್ದರು. ನನ್ನ ಮನೆಯವರನ್ನೆಲ್ಲಾ ಹೀನಾಯವಾಗಿ ಬಯ್ಯುತ್ತಿದ್ದರು. ಒಮ್ಮೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಲು ಪ್ರಯತ್ನಿಸಿದರು ದೇವರ ದಯೆ ಬದುಕಿ ಉಳಿದಿದ್ದೇನೆ.

ಹೀಗೆ ೩ ವರ್ಷಗಳ ನಂತರ ನನ್ನ ಗಂಡನಿಗೆ ಮತ್ತೊಂದು ಹೆಂಗಸಿನ ಜೊತೆ ಸಂಬಂಧ ಇರುವುದು ತಿಳಿಯಿತು. ಇದನ್ನು ಪ್ರಶ್ನಿಸಿದ್ದಕ್ಕೆ ನನ್ನಿಂದ ಮಕ್ಕಳನ್ನು ದೂರ ಮಾಡಿದರು. ಈಗ ನನ್ನ ವಯಸ್ಸಾದ ಅಮ್ಮನೊಂದಿಗೆ ಪುಟ್ಟ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇನೆ ಈ ಇಳಿವಯಸ್ಸಿನಲ್ಲಿ ಅವರಿಗೆ ನೋವಾಗಬಾರದೆಂದು ನಗು ನಗುತ್ತಾ ಜೀವನಮಾಡ್ತಿದಿನಿ ಅವರ ಮುಂದೆ, ಹೀಗೆ ವೈಯಕ್ತಿಕ ಜೀವನದಲ್ಲಿ ತೊಂದರೆ ಅನುಭವಿಸುತ್ತಿರುವವಳು ನಾನೊಬ್ಬಳೆ ಅಲ್ಲ ಗಾರ್ಮೆಂಟ್ಸ್‌ಗಳಲ್ಲಿ ದುಡಿಯುವ ಅನೇಕ ಹೆಣ್ಣು ಮಕ್ಕಳ ಕಥೆ ಇದಕ್ಕಿಂತ ಚಿಂತಜನಕವಾಗಿದೆ. ನಮಗೆ ಮನೆಯಲ್ಲಿ ಅನುಭವಿಸುವ ನರಕದ ಜೊತೆ ದಿನ ಬೆಳಗಾದರೆ ಕಾರ್ಖಾನೆಯಲ್ಲೂ ದೌರ್ಜನ್ಯ ತಪ್ಪಿದ್ದಲ್ಲ. ಒಟ್ಟಿನಲ್ಲಿ ನಮಗೆ ನೆಮ್ಮದಿ ಎನ್ನುವುದು ಕನಸಿನ ಮಾತಾಗಿದೆ. (ಮರಿಚಿಕೆಯೆ?)

ವಿಶ್ಲೇಷಣೆ

ಒಟ್ಟು ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬ ಮತ್ತು ಸಾರ್ವಜನಿಕ ಬದುಕು ಪ್ರತಿಯೊರ್ವರಿಗೂ ಇದೆ. ಆದರೆ ಪುರುಷ ಪ್ರಧಾನ ವ್ಯವಸ್ಥೆಯ ಹುನ್ನಾರದಿಂದ ಕುಟುಂಬದ ವಲಯವನ್ನು ಮಾತ್ರ

[illegible]

[illegible]

[illegible]

[illegible]

ಹೆಣ್ಣಿಗೆ ಸೀಮಿತಗೊಳಿಸಲಾಯಿತು. ಪ್ರಾಕೃತಿಕವಾಗಿ ಹೆಣ್ಣಿಗೆ ದತ್ತವಾಗಿರುವ ಪ್ರಬಲ ಸಂಗತಿಗಳನ್ನು ಸಾಮಾಜಿಕ ವ್ಯಾಖ್ಯಾನದಲ್ಲಿ ದುರ್ಭಲತೆಯೆಂದು ವ್ಯಾಖ್ಯಾನಿಸಲಾಗಿದೆ. ವಿವಾಹವೇ ಅವಳ ಬದುಕಿನ ಅಂತಿಮ ಗುರಿಯೆಂಬಂತಾಗಿಸಿ ಅವಳನ್ನು ಅಧೀನವಾಗಿರಿಸಿಕೊಂಡು, ಅವಳ ಚಲನಶೀಲತೆಯ ಮೇಲೆ ನಿಯಂತ್ರಣವನ್ನು ಹೇರಲಾಯಿತು. ಆದರೆ ಕಾಲಕಳೆದಂತೆ ಹೊರಬದುಕಿಗೆ ಹೆಣ್ಣು ಮುಖಾಮುಖಿಯಾದರೂ ಅಲ್ಲಿ ಇರದಂತಹ, ಮತ್ತೆ ಗೃಹಕ್ಕೆ ಸೀಮಿತವಾಗಬೇಕೆಂಬ ಹುನ್ನಾರಗಳೇ ಅವಳಿಗೆ ಈ ಗಾರ್ಮೆಂಟ್ಸ್‌ಗಳಲ್ಲಿಯೂ ನಡಿಯುವ ದೌರ್ಜನ್ಯಕ್ಕೆ ಪೂರಕವಾಗಿವೆ. ಇಂದು ಗಾರ್ಮೆಂಟ್ಸ್‌ಗಳಲ್ಲಿ ಬಹುಪಾಲು ಮಹಿಳೆಯರೇ ಪಾಲ್ಗೊಳ್ಳುತ್ತಿರುವುದಕ್ಕೆ ಇದೇ ಸಮಾಜ ವ್ಯವಸ್ಥೆಯಲ್ಲಿ ಬಂಡವಾಳಶಾಹಿಗಳ ಲಾಭದ ಉದ್ದೇಶದಿಂದ ಕೂಡಿದೆ. ಕಡಿಮೆ ಕೂಲಿ, ಹಾಗೂ ಹೆಣ್ಣನ್ನು ತಮ್ಮ ಅಂಕೆಯಲ್ಲಿರಿಸಿಕೊಳ್ಳಬಹುದೆಂಬ ಕಾರಣದಿಂದ ಹೆಚ್ಚು ಅಸಂಘಟಿತ ವಲಯದ ಅವಕಾಶಗಳು ಅವಳಿಗೆ ತೆರೆದುಕೊಳ್ಳುತ್ತಿವೆ.

ಈ ಪ್ರಕರಣದಲ್ಲಿ ವರದಕ್ಷಿಣೆಯ ಸಮಸ್ಯೆಯನ್ನು ಗಮನಿಸಬಹುದು ವರದಕ್ಷಿಣೆಯೆಂಬುದು ಹೆಣ್ಣು ಗಂಡಿಗೆ ಹಾಗೂ ಆತನ ಕುಟುಂಬಕ್ಕೆ ದುಡಿಯದೆ ಬರುವ ಐಷರಾಮಿ ಆದಾಯವಾಗಿದೆ. ಆದರೆ ಇದು ಕಂತಿನಲ್ಲಿ ನಿರಂತರ ಬರುವ ಆದಾಯವಾಗಿಯೂ ಪಲ್ಲಟಗಳನ್ನು ಪಡೆಯುತ್ತದೆ. ಹಾಗಾಗಿ ಇಲ್ಲಿ ವರದಕ್ಷಿಣೆ ತರದ ಕಾರಣ ಅವಳನ್ನು ದುಡಿಮೆಗೆ ನೂಕಿದ್ದು, ಅದರಿಂದ ಬರುವ ಸಂಬಳ ಸಾಲದಿರುವುದಕ್ಕೆ ಮಕ್ಕಳ ನೆಪವಾಗಿಸಿಕೊಂಡು ಇನ್ನೊಂದು ಹಣ್ಣನ್ನು ಸಹವಾಸಮಾಡಿರುವುದು, ಪ್ರತಿಭಟನೆಯ ಧ್ವನಿಯೆತ್ತಿದಾಗ ಭಾವನಾತ್ಮಕತೆಯಿಂದ ಕಟ್ಟಿಹಾಕಲು ಮಕ್ಕಳನ್ನು ದೂರಮಾಡುವುದು ಒಂದೆಡೆಯಾದರೆ, ತಿಂಗಳುಗಟ್ಟಲೆ ದುಡಿದರೂ ಗಾರ್ಮೆಂಟ್ಸ್‌ಗಳು ಸಂಬಳ ಕೊಡದಿರುವುದು, ಸಂಬಳ ಪಡೆಯಲು ಹೋರಾಡಲು ಯತ್ನಿಸಿದರೆ ಕೆಲಸ ಕೆಳೆದುಕೊಳ್ಳುವ ಬೆದರಿಕೆಯೊಡ್ಡುವುದು ಕಾಣಬಹುದು. (ಹೆಸರು: ರಾಜೇಶ್ವರಿ, ವಯಸ್ಸು : ೨೭ ಊರು :ಯಶವಂತಪುರ ವಿದ್ಯಾರ್ಹತೆ : ಎಸ್.ಎಸ್. ಎಲ್.ಸಿ ಜಾತಿ)[೧೭]

೫.೨.೧೮ ಸರಸ್ವತಿಯಳ ಪ್ರಕರಣ

ನಿರೂಪಣೆ

ನನಗೆ ನಲವತ್ತು ವರ್ಷ ಆಗಿರಬಹುದಮ್ಮ. ಗಂಡಇಲ್ಲ, ಚಿಕ್ಕ ವಯಸ್ಸಲ್ಲೆ ನನ್ನ ಗಂಡನನ್ನು ಕಳೆದುಕೊಂಡು ಎರಡು ಮಕ್ಕಳನ್ನು ಸಾಕಿ ಸಲುಹುಷ್ಟರಲ್ಲೇ ಜೀವನನೆ ಮುಪ್ಪಾಗಿದೆ. ಆದರೆ ಇವತ್ತು ಎರಡು ಗಂಡು ಮಕ್ಕಳು ಮದುವೆ ಆಗಿ ನನ್ನನ್ನು ಬೀದಿಪಾಲುಮಾಡುತ್ತಿದ್ದಾರೆ. ಎಷ್ಟು ಕಷ್ಟ ಪಟ್ಟು ಸಾಕಿದೆ. ಆದರೆ ನನಗೆ ಎರಡು ಹೊತ್ತಿನ ಊಟ ಹಾಕಲು ಯೋಚಿಸುತ್ತಾರೆ. ಫ್ಯಾಕ್ಟ್ರಿಯಲ್ಲಿ ಸುಮಾರು ವರ್ಷದಿಂದ ದುಡಿಯುತ್ತಿದ್ದೇನೆ. ದುಡಿದಿದ್ದೆಲ್ಲ (ಅವರಿಗೆ) ಮಕ್ಕಳಿಗೆ ಕೊಡಬೇಕು. ಆದರೂ ಮಕ್ಕಳು,

[illegible]

[illegible]

[illegible]

[illegible]

[illegible]

ನೀ ಕೊಡುವ ದುಡ್ಡು ಯಾವುದಕ್ಕೂ ಸಾಲುವುದಿಲ್ಲ. ಕೊಡುವದುಡ್ಡು ಬಾಡಿಗೆಗೆ ಸಾಲದು ಅಂತ ಬೈಯ್ಯುತ್ತಾರೆ. ಊಟಕ್ಕೂ ಕೂಡ ಸರಿಯಾಗಿ ಹಾಕೋಲ್ಲ. ವಯಸ್ಸಾದ ಮೇಲೆ ಇರ್ಬಾದಮ್ಮ ಮಕ್ಕಳಿಗೆ ಭಾರ, ಭೂಮಿಗೆ ಭಾರ, ಯಾಕಿರಬೇಕು ನಮ್ಮಂಥವರೆಲ್ಲ ವಯಸ್ಸಾದ ಮೇಲೆ ಮಕ್ಕಳು ನೋಡಿಕೊಳ್ಳುತ್ತಾರೆ ಅಂತ ಎಲ್ಲರೂ ಅನ್ನೊಳ್ಳುತ್ತಾರೆ. ಆದರೆ ಅವರಿಗೆ ನಾವು ಹೊರೆಯಾಗಿ ಬಿಡ್ತಿವಿ. ಇತ್ತೀಚಿಗೆ ನನಗೆ ಫ್ಯಾಕ್ಟ್ರಿಯಲ್ಲಿ ಕಸ ಹೊಡೆಯಲು ಕೂಡ ಆಕ್ತಿಲ್ಲ. ನನಗೆ ತುಂಬಾ ಕಷ್ಟ ಆಗೋದಕ್ಕೆ ಕೂತೆ ಕಸ ಹೊಡೆತೀನಿ. ಮಾಲೀಕರು ಸರಿಯಾಗಿ ಹೊಡೆಯಲಿಲ್ಲಂದರೆ ಬಿಟ್ಬಿಡಮ್ಮ ವಯಸ್ಸಾಯಿತು. ನಿನ್ನ ಕೈಯಲ್ಲಿ ಆಗೊಲ್ಲ ಅಂತಾರೆ. ಒಂದು ವೇಳೆ ಅವರು ಕೆಲಸದಿಂದ ತೆಗೆದು ಹಾಕಿದರೆ ನನ್ನ ಮಕ್ಕಳು ಸೊಸೆಯಂದಿರು ಮನೆಗೆ ಸೇರಿಸಿಕೊಳ್ಳುವುದಿಲ್ಲ ಆಗ ನನಗೆ ಯಾವುದೇ ಆಸರೆ ಇಲ್ಲದೆ ಸಾವೇ ಗತಿ.

ವಿಶ್ಲೇಷಣೆ

ಕಾಲಬದಲಾದಂತೆಲ್ಲ ಮನುಷ್ಯರ ಜೀವನ ಶೈಲಿಯು, ಬದುಕುವ ಕ್ರಮವು ಭಿನ್ನವಾಗುತ್ತದೆ. ಇವತ್ತಿನ ಜಾಗತಿಕ ಸಂದರ್ಭದಲ್ಲಿ ಯುವ ಪೀಳಿಗೆಯು ಹಿರಿಯರನ್ನು ಅವರೆ ಹೊಣೆಯನ್ನು ನಿರಾಕರಿಸುವ ಸಂಗತಿಗಳೇ ಹೆಚ್ಚು, ಅದರಲ್ಲೂ ಕೊಂಚ ಪ್ರಮಾಣದ ಆಸ್ತಿಯೋ, ದುಡ್ಡೋ ಇನ್ನೊಂದೂ ಇದ್ದರೆ, ಅದರ ಆಮಿಷಕ್ಕಾಗಿ ಮಕ್ಕಳು ನೋಡಿಕೊಳ್ಳಬಹುದೆಂಬ ನಂಬಿಕೆಗಳೂ ಇವೆ. ಆದರೆ ತಮ್ಮ ಬದುಕಿನ ನಿರ್ವಹಣೆಯು ಸಂಕೀರ್ಣವಾದಾಗ ಹಣಕಾಸು ಕೂಡಿಡುವುದು ಆಸ್ತಿ-ಅಂತಸ್ತನ್ನು ಮಾಡಿಕೊಳ್ಳುವುದು ಯೋಚನೆಗೂ ನಿಲುಕದ ಸಂಗತಿಯಾಗಿರುತ್ತದೆ. ಸ್ತ್ರೀವಾದಿ ಚಿಂತನೆ ಹೇಳುವಂತೆ ಹೆಣ್ಣಿನ ಸಮಸ್ತ ಬದುಕು ಪುರುಷ ಬದುಕಿನ ಸುತ್ತಲು ಗಿರಿಕಿಹೊಡೆಯುತ್ತದೆ. ಈ ಮಾತಿನಂತೆಯೆ ಈ ಪ್ರಕರಣ –ಮಹಿಳೆಯು ತನ್ನ ಮಕ್ಕಳನ್ನು ಬೆಳೆಸಲು ಗಾರ್ಮೆಂಟ್ಸ್ ಕೆಲಸಕ್ಕೆ ಸೇರಿದ್ದು, ಮಕ್ಕಳು ಬೆಳೆದು ಹೇಗೋ ಕಷ್ಟದಲ್ಲಿಯೇ ಮದುವೆಯನ್ನು ಮಾಡಿದಳು. ಅನಂತರದಲ್ಲಿ ಅದೇ ಮಕ್ಕಳು ತಾಯಿಯ ಸಂಬಳವು ಯಾವುದಕ್ಕೂ ಸಾಲದೆಂಬುದನ್ನು ಹಿಯಾಳಿಸುವುದು ಹೆಣ್ಣಿನ ಕೆಲಸದ ಅಭದ್ರತೆ ಮತ್ತು ಅರಕ್ಷತತೆಯ ಪ್ರಶ್ನೆಯನ್ನು ಮತ್ತೆ ಮತ್ತೆ ಮುಂದೊಡ್ಡುತ್ತದೆ. ಆದರೆ ತನ್ನ ಬದುಕಿಗೆ ಪರಿವೆಯನ್ನು ಬಿಟ್ಟು ಗಂಡು ಸಂತಾನಕ್ಕಾಗಿ ದುಡಿದ ಈ ಮಹಿಳೆ ಕೊನೆಗೂ ಎಲ್ಲರೂ ಇದ್ದು ಬೀದಿಗೆ ಬೀಳುವಂತಹ ಸಂದರ್ಭ ಕಾಣಬಹುದು. ಕಷ್ಟದ ಬೇಸುಗೆಯ ಬೆಂದು ಬಸವಳಿದ ಈ ಮಹಿಳೆಗೆ ಇಂದು ಅದೇ ಗಾರ್ಮೆಂಟ್ಸ್‌ನಲ್ಲಿ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಹಾಗೂ ಬಡತನ ಬಹುಬೇಗ ಮುಪ್ಪನ್ನು ತರುತ್ತದೆಯೆಂಬುದು ಇಲ್ಲಿ ಕಾಣಬಹುದು. ಇವಳ ಅಸಹಾಯಕತೆಯಿಂದಾಗಿ ಕೆಲಸದಲ್ಲಿ ಸ್ವಲ್ಪ ಕುಂದುಕೊರತೆಗಳಾದರೂ ಕೆಲಸದಿಂದ ತೆಗೆದು ಹಾಕುವ ಭಯದಿಂದಾಗಿ ತನ್ನೆಲ್ಲ ನೋವುಗಳನ್ನು, ತನ್ನ ಮೇಲಾದ, ಆಗುತ್ತಿರುವ ಕಾರ್ಯಗಳನ್ನು ಬದಿಗಿಟ್ಟು ತನ್ನೆಲ್ಲ ನೋವುಗಳನ್ನು, ತನ್ನ ಒಂದೊತ್ತಿನ ಗಂಜಿಗಾಗಿ ಶ್ರಮಪಡುತ್ತಿದ್ದು, ಕೆಲಸ ಹೋದರೆ ಕುಟುಂಬದಿಂದಲೂ ಹೊರಹಾಕುತ್ತಾರೆಂಬ ಅಭದ್ರತೆಯಿಂದ ಕಾಣಬಹುದು ಎಂದು ನರಳುತ್ತಿರುವಳು. (ಹೆಸರು: ಸರಸ್ವತಿ, ವಯಸ್ಸು: ೪೦ ಊರು: ಮಂಡ್ಯ ಜಿಲ್ಲೆ, ವಿದ್ಯಾರ್ಹತೆ : ಇಲ್ಲ, ಜಾತಿ: ಕುಂಚಿಗ)[೧೮]

[illegible]

[illegible]

[illegible]

[illegible]

೫.೨.೧೯ ಭಾಗ್ಯಳ ಪ್ರಕರಣ

ನಿರೂಪಣೆ

ನಮ್ಮ ಅಪ್ಪ–ಅಮ್ಮನಿಗೆ ಮಕ್ಕಳು ಒಬ್ಬಳೆ ಮಗಳು ಅಂತ ತುಂಬಾ ಪ್ರೀತಿಯಿಂದ ಸಾಕಿ ಸಲುಹಿದರು. ಓದುವುದಕ್ಕೆ ಎಷ್ಟೆ ಪ್ರಯತ್ನಿಸಿದರೂ ವಿದ್ಯೆನೆ ಹತ್ತಿಲ್ಲ. ಹಾಗಾಗಿ ಮದುವೆ ಮಾಡಿದರು. ಆದರೆ ನನ್ನ ಗಂಡ ದಿನಾಲು ಕುಡಿದು ಬಂದು ಹೊಡಿತಾರೆ. ಕುಡಿದುಕೊಂಡು ಬಂದು ದುಡ್ಡು ಕೊಡು ಅಂತ ಹಿಂಸೆ ಮಾಡ್ತಾರೆ. ನನಗಂತೂ ಗಂಡ ಮಕ್ಕಳು ಯಾವ, ಸಂಸಾರನೂ ಬೇಡ, ಎಲ್ಲಿಯಾದರು ಹೋಗಿ ಸಾಯೋಣ ಅಂತ ಅನ್ಸಿಬಿಟ್ಟಿದೆ. ಹೆಂಡ್ತಿ ಮಕ್ಕಳ ಬಗ್ಗೆ ಸ್ವಲ್ಪನೂ ಜವಾಬ್ದಾರಿ ಇಲ್ಲದ್ದಕ್ಕೆ ತವರುಮನೆಯಲ್ಲಿ ಇದ್ದಿನಿ ಅಪ್ಪ ಇಲ್ಲ, ಅಣ್ಣನಿಗೆ ಮದುವೆ ಆಗಿದೆ. ಅವರದು ಸಂಸಾರ ಇದೆ, ಆದರೂ ಅಸಹಾಯಕಳಾಗಿ ವಾಸಮಾಡೋಕೆ ಒಂದು ನೆಲೆನೂ ಇಲ್ಲದ್ದಕ್ಕಾಗಿ ಇರಬೇಕಾದ ಸಂದರ್ಭ ಬಂದಿದೆ. ಯಾವಾಗಾದರೂ ಬರ್ತಾನೆ, ಬಂದು ಅಧಿಕಾರ ಚಲಾಯಿಸ್ತಾನೆ. ಬೇರೆ ಮನೆಮಾಡಿ ಕೊಡ್ರಿ ನಿಮ್ಮ ಮಗಳನ್ನು ಸಾಕ್ತೀನಿ ಅಂತ ಹೇಳಿದ್ದಕ್ಕೆ ಮನೆನೂ ಮಾಡಿಕೊಟ್ಟರು ಮಾಡಿದಾದ ಮೇಲೆನೂ, ಸ್ವಲ್ಪ ದಿನ ದುಡಿದ, ಆದರೆ ದುಡಿದಿದ್ದ ಮಾತ್ರ. ಯಾವುದು ಕೊಡ್ತಿದ್ದಿಲ್ಲ. ಹೆಂಡ್ತಿ ಅಂದ್ರೆ ಮಲಗಕಷ್ಟು ಇರ್ಬೇಕು. ಜೊತೆಗೆ ಮಲ್ಗಲ್ಲ ಅಂದ್ರೆ, ಮನೆಯಲ್ಲಿ ಬಂದು ಅಮ್ಮ ಅಣ್ಣನ ಹತ್ತಿರ ಬಂದು ಯಾವುದೇ ನಾಚಿಕೆ ಇಲ್ಲದೆ ಹೇಳ್ತಿದ್ದ. ಅದಕ್ಕೆ ಬೈದು ಜಗಳ ಮಾಡಿದರೆ ಸುಮಾರು ಎರಡು ತಿಂಗಳಾಯಿತು ಮನೆಗೆ ಬರ್ದೆ ಹೀಗಾದರೆ ನಾನೊಬ್ಬಳೆ ಸಂಸಾರ ನಿಬಾಯಿಸುವುದು ಕಷ್ಟ ಅಂತ ಫ್ಯಾಕ್ಟ್ರಿ ಕೆಲಸಕ್ಕೆ ಹೋದೆ. ನನಗೆ ಹೊಲಿಯುವುದಕ್ಕೆ ಬಾರದೇ ಇದ್ದಕ್ಕೆ ಹೆಲ್ಪರ್ ಕೆಲಸ ಕೊಟ್ಟರು. ಅವರು ಕೊಡುವ ಸಂಬಳ ಮೂರೊಪ್ಪತ್ತಿನ ಊಟಕ್ಕೂ ಸಾಲದೆ ಇದ್ದಾಗ ಮನೆ ಬಾಡಿಗೆ ಕಟ್ಟುವುದು ಮಕ್ಕಳನ್ನು ಬೆಳೆಸುವುದು ತುಂಬಾನೆ ಕಷ್ಟ ಆಯಿತು. ಮತ್ತೆ ತಾಯಿ ಮನೆಗೆ ಬಂದಿದಿನಿ ಆದರೆ ಅತ್ತಿಗೆ ನಮಗೂ ಮಗು ಇದೆ ಅದರ ಭವಿಷ್ಯಕ್ಕಾಗಿ ದುಡ್ಡನ್ನು ಉಳಿಸಬೇಕಂತ ನೇರವಾಗಿ ಎಷ್ಟು ಸಲ ಹೇಳಿದ್ದಾರೆ ಆದರೆ. ನನ್ನ ಅಸಹಾಯಕ ಸ್ಥಿತಿ ಯಾವ ಮಟ್ಟಕ್ಕೆ ಮುಟ್ಟಿದೆ ಅಂತ ಹೇಳಕ್ಕಾಗುತ್ತಿಲ್ಲ. ಅಷ್ಟು ನೋವಾಗುತ್ತಿದೆ. ಕೆಲವೊಬ್ಬರ ಹಣೆಬರಹನೇ ಇಷ್ಟು ಎಲ್ಲದಕ್ಕೂ ಪಡ್ಕೊಂಡು ಬಂದಿರಬೇಕು. ಫ್ಯಾಕ್ಟ್ರಿಯಲ್ಲಿ ಕೂಡ ಅಷ್ಟೆ ಹಿಂಸೆ ಮಾಡ್ತಾರೆ. ಎಂಟೂ ತಾಸು ನಿಂತುಕೊಂಡೆ ಕೆಲಸ ಮಾಡಬೇಕು. ಒಂದು ಐದು ನಿಮಿಷನೂ ಕೂತ್ಕೊಳ್ಳಕ್ಕೆ ಬಿಡಲ್ಲ. ಕರೆಂಟು ಇಲ್ಲ ಅಂದ್ರು ಬಿಡೊಲ್ಲ. ಪೀಸ್ ಇಲ್ಲ ಅಂದ್ರು ಬಿಡಲ್ಲ. ಒಂದು ವೇಳೆ ಅದಕ್ಕು ಮೀರಿ ಕೂತರೆ ದನಕಾಯೋಕೆ ಹೋಗಿ, ಕತ್ತೆ ಕಾಯೋಕೆ ಹೋಗಿ ಅಂತ ಎಲ್ಲರ ಮುಂದೆ ತೀರ ಅವಮಾನವಾಗೋ ಹಾಗೆ ಬೈಯ್ಯುಸ್ತಾರೆ. ನಿಮಗೇನು ಸಂಬಳ ಕೊಡಲ್ವ, ಸುಮ್ನೆ ನಿಲ್ಲಿರಿ. ಅದರಲ್ಲೂ ಹೆಲ್ಪರಿಗಂತೂ ತೀರ ಕೆಟ್ಟದಾಗಿ ನೋಡ್ತಾರೆ. ಅವರ ಕೆಲಸವೇನು ಅಷ್ಟು ಮುಖ್ಯವಾದದ್ದಲ್ಲ ಅಂತ ಹೇಳ್ತಾರೆ.

[illegible]

ವಿಶ್ಲೇಷಣೆ

'ಕುಟುಂಬ ಜವಾಬ್ದಾರಿಯ ಹೊಣೆಯೆಂಬುದು ಕೇವಲ ಹೆಂಡ್ತಿಯದೇ ಎಂಬಂತಹ ಬೇಜವಾಬ್ದಾರಿ ಗಂಡಂದಿರನ್ನು ಹೊಂದಿದ ಎಷ್ಟೋ ಕುಟುಂಬಗಳು ಇವೆ. ಹೀಗೆ ಕುಡಿತದ ಚಟಕ್ಕೆ ಬಲಿಯಾಗಿ ತಮ್ಮ ಬಗೆಗಿನ ಪ್ರಜ್ಞೆಯನ್ನು ಒಳಗೊಂಡು ಇತರರ ಹಿತಾಸಕ್ತಿಯನ್ನು ಕಡೆಗಣಿಸುವ, ತನ್ನ ಅಧೀನದಲ್ಲಿರುವವರನ್ನು ಹಿಂಸಿಸುವಂತಹ ಕುಟುಂಬದವಳೂ ಈ ಮಹಿಳೆ. ಗಂಡನ ಬಡಿತದಿಂದ ತಪ್ಪಿಸಿಕೊಳ್ಳಲು ಅವನಿಗೆ ಹಣ ನೀಡಿಯಾದರೂ ಬಾಯ್ಮುಚ್ಚಿಸಬಹುದೇನೋ ಎಂದು ಕೆಲಸಕ್ಕೆ ಸೇರಿ ದುಡಿದ ದುಡ್ಡನ್ನೂ ಕೊಟ್ಟು ಸಂಸಾರವು ನಿಬಾಯಿಸಲಾಗದಿದ್ದರಿಂದ ಬೇರೆ ವಿಧಿಯಿಲ್ಲದೆ ತವರಿಗೆ ಹೋದಳು. ಸಾಂಪ್ರದಾಯಿಕ ಸಮಾಜ ವ್ಯವಸ್ಥೆಯಲ್ಲಿ ಹೆಣ್ಣಿಗೆ ಒಂದು ಬದ್ರ ನೆಲೆಯಿಲ್ಲದೆ ಹಾಗೂ ಅವಳದೇ ಆದ ನೆಲೆಯೆಂಬುದಿಲ್ಲ. ಹುಟ್ಟಿದ ಮನೆಯಲ್ಲಿ ಅವಳು ಮನೆಯಿಂದ ಬಂದವಳು ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎಂಬುದರಿಂದ ಬಹುಪಾಲು ಸಂದರ್ಭಗಳಲ್ಲಿ ನಿರಾಕರಣೆಗೆ ಒಳಗಾಗುತ್ತಾಳೆ. ಹೀಗೆ ಒಟ್ಟು ಬದುಕಿನಲ್ಲಿ ಹೆಣ್ಣನ್ನು ತವರಿಗೆ ಬಂದು ಹೋಗುವ ಅತಿಥಿಯಾಗಿಸಲಾಗಿದೆಯೇ ಹೊರತು ಅವಳಿಗೆ ಅವಳದೇ ಆದ ಒಂದು ಅಸ್ತಿತ್ವವಾಗಲಿ, ತಾಣವಾಗಲಿ ಇಲ್ಲವೆಂಬುದು ಈ ಪ್ರಕರಣದಲ್ಲಿಯೂ ಕಾಣಿಸಿಕೊಳ್ಳುತ್ತದೆ.

ಸಂಪೂರ್ಣ ಮಹಿಳಾ ಬದುಕು ಅವಳ ಆಯ್ಕೆಗನುಗುಣವಾಗಿ ನಡೆಯುವುದು ತೀರಾಗೌಣ, ಅವಳ ಉದ್ಯೋಗವು ಸಹ ಇದೇ ಬಗೆಯದು. ಇಲ್ಲಿಯೂ ಸಹ ಹೆಂಡ್ತಿ ತನ್ನ ಮೇಲಾಗುವ ಆಕ್ರಮಣವನ್ನು ತಪ್ಪಿಸಿಕೊಳ್ಳಲು ದುಡಿಮೆಗೆ ತೊಡಗುತ್ತಾಳೆ. ಆದರೆ ಅದು ಸಾಲದಾದಾಗ ಮತ್ತೆ ತವರಿಗೆ ಹೋಗುತ್ತಾಳೆ. ಅಲ್ಲಿಯು ಸಹ ಅನೇಕ ಬಗೆಯ ತೊಂದರೆಗಳಿಗೆ ಒಳಗಾಗಲು ಕಾರಣ ಅದು ತನ್ನದಲ್ಲದ ಸ್ಥಳವಾದ್ದರಿಂದ, ಅಲ್ಲಿಯೂ ಅನ್ಯಳಾಗುತ್ತಾಳೆ. ಈ ನಡುವೆ ಉದ್ಯೋಗದಲ್ಲಿಯಾದರೂ ತೃಪ್ತಿಯಿದೆಯೇ ಎಂದರೆ, ಅಲ್ಲಿಯೂ ಅವಳು ಹೊಲಿಗೆ ಕೆಲಸವು ಬಾರದಿದ್ದರಿಂದ ಹೆಲ್ಪರ್ ಆಗುತ್ತಾಳೆ. ಇಲ್ಲಿಯು ಹುಟ್ಟಿಕೊಳ್ಳುವ ಅಧೀನ-ಪ್ರಧಾನ ನೆಲೆಗಳು ಕಾಣಬಹುದು ಪ್ರಧಾನವು-ಅಧೀನತೆಯ ಮೇಲೆ ಸವಾರಿ ಮಾಡುವುದರಿಂದ ಇಲ್ಲಿನ ಅಧಿಕಾರಿ ವರ್ಗದಿಂದ ವಿಪರೀತ ಕೆಲಸದ ಒತ್ತಡವನ್ನು ಅನುಭವಿಸುತ್ತಾಳೆ. ಅದನ್ನು ಪ್ರತಿಭಟಿಸಿದ್ದೆ ಆದರೆ ಕೆಲಸ ಕಳೆದುಕೊಳ್ಳಬೇಕಾದ ಅತಂತ್ರತೆಯಿಂದ ಹಿಂಸೆಯಾದರೂ ಮೌನವಾಗಿ ಬದುಕುವುದು ಕಾಣಬಹುದು. (ಹೆಸರು: ಭಾಗ್ಯ, ವಯಸ್ಸು:೨೧, ಊರು: ಮೋಖ, ವಿದ್ಯಾರ್ಹತೆ : ೪ನೇ ಜಾತಿ: ಕುರುಬರು)[೯೯]

೫.೨.೨೦ ಮಾರಕ್ಕಳ ಪ್ರಕರಣ

ನಿರೂಪಣೆ

ನಮ್ಮ ಮನೆಯಲ್ಲಿ ಅತ್ತೆ ಮಾವ, ಗಂಡ ಮಗು ಇದಿವಮ್ಮ. ನನ್ನ ಗಂಡ ತರಕಾರಿ ವ್ಯಾಪಾರಮಾಡ್ತಾರೆ. ಅತ್ತೆ ಮಾವ ಮನೆಯಲ್ಲಿ ಇರ್ತಾರೆ. ಮನೆಯಲ್ಲಿ ಎಲ್ಲರ ಹಿಂಸೆಯಿಂದ ದುಡಿದು ದುಡ್ಡು ಕೊಡ್ಲೆಬೇಕೆಂದು ಅವರೆ ನನ್ನನ್ನು ಫ್ಯಾಕ್ಟ್ರಿ ಕೆಲಸಕ್ಕೆ ಕಳಿಸಿದ್ದಾರೆ. ಹೆರಿಗೆ ಆಗಿ ಎರಡು ತಿಂಗಳು ಮುಗಿದಿದೆ. ಆದರೂ ಮಗುವನ್ನು ಕರೆದುಕೊಂಡು ಬಂದಿದಿನಿ, ಬೇಬಿ ಸಿಟ್ಟಿಂಗ್‌ನಲ್ಲಿ ಮಗುವನ್ನು

ಬಿಟ್ಟು ಟೈಲರಾಗಿ ಕೆಲಸ ಮಾಡುತ್ತಿದ್ದೇನೆ. ಮೊದಲು ಮಾಲೀಕರು ಸೇರಿಸಿಕೊಳ್ಳಲು ಒಪ್ಪಲಿಲ್ಲ. ಆದರೂ ಕೈ ಕಾಲಿಗೆ ಬಿದ್ದು ನೀವು ಏನೇ ಹೇಳೀದರು ಮಾಡುತ್ತೇನೆ. ಆದರೆ ನನಗೆ ಕೆಲಸ ಬೇಕೆಬೇಕು ಎಂದದ್ದಕ್ಕೆ ಕೊನೆಗೆ ಕೆಲಸ ಕೊಟ್ಟರು. ಏನ್ಮಾಡಬೇಕಾಗುತ್ತೆ, ಕೊನೆಗೆ ಯಾವ ದಾರಿ ಸಿಕ್ಕಿತೊ ಆ ದಾರಿಗೆ ಹೋಗುತ್ತಿದ್ದೇನೆ, ದುಡಿದು ಕೊಡ್ಬೇಕಷ್ಟೆ. ನನಗೆ ಏನಾಗುತ್ತೆ ಎಂತಾಗುತ್ತೆ ಅಂತನೂ ಇಲ್ಲ. ತಂದೆ ತಾಯಿ ಇಬ್ಬರೂ ಇಲ್ಲ. ನನಗೆ ನನ್ನವರು ಅಂತ ಯಾರು ಇಲ್ಲ. ಗಂಡನ ಬಿಟ್ಟರೆ ಎಲ್ಲಿ ಆಸರೆ ಕೂಡ ಸಿಕ್ಕೊಲ್ಲ, ಅವರು ಏನು ಹೇಳ್ತಾರೆ ಹಾಗೆ ಕೇಳಬೇಕು. ಒಂಟಿ ಹೆಣ್ಣು ಬದುಕುವುದಕ್ಕೆ ಆಗಲ್ಲ ಈ ಸಮಾಜದಲ್ಲಿ ಹೇಗೆ ಬರುತ್ತೋ ಹಾಗೆ ಜೀವನ ಮಾಡಬೇಕು. ಫ್ಯಾಕ್ಟ್ರಿ ಮಾಲೀಕರು ಯಾವಾಗ ಏನ್ ಕೇಳಿದರೂ ಇಲ್ಲ ಅನ್ನುವ ಹಾಗೆ ಇಲ್ಲ. ಅವರು ಹೇಳಿದ ಹಾಗೆ ಕೇಳಿದ್ದಕ್ಕೆ ನಾನು ಇಲ್ಲಿ ತನಕ ಕೆಲಸಮಾಡುತ್ತಿರುವುದಕ್ಕೆ ಅವಕಾಶ ಸಿಕ್ಕಿರುವುದು. ಎಷ್ಟೋ ಜನ ಹೆಣ್ಣುಮಕ್ಕಳು ತುಂಬಾ ಅಸಹಾಯಕತೆಯಿಂದ ಕೆಲಸಕ್ಕೆ ಬರುತ್ತಿದ್ದಾರೆ. ಹೆರಿಗೆ ಆಗಿ ಮೂರು ತಿಂಗಳು ಆದ ನಂತರ ಬೇಬಿ ಸಿಟ್ಟಿಂಗ್‌ನಲ್ಲಿ ಮಕ್ಕಳನ್ನು ಹಾಕಿ ಕೆಲಸ ಮಾಡಲು ಅವಕಾಶ ಕೊಟ್ಟರು ಕೂಡ ಮಕ್ಕಳಿಗೆ ಟೈಮ್ ಸರಿಯಾಗಿ ಹಾಲು ಕೊಡಲು ಜಾಸ್ತಿ ಅತ್ತರು ಕೂಡ ನಮ್ಮನ್ನು ಮಗುವಿಗೆ ಹಾಲು ಕುಡಿಸಲು ಕಳಿಸಿಕೊಡುವುದಿಲ್ಲ. ಜೊತಗೆ ಎಂಟು ತಾಸು ನಿಂತುಕೊಂಡೆ ಕೆಲಸ ಮಾಡಬೇಕು ಇವರು ಕೊಡುವ ಸಂಬಳ ಮನೆ ಬಿಡುವುದಿಲ್ಲ ಖರ್ಚಿಗೂ ಸಾಕಾಗದೆ, ಮಗುವನ್ನು ಚೆನ್ನಾಗಿ ನೋಡಿಕೊಳ್ಳದ ಸ್ಥಿತಿ ನಮಗಮ್ಮ. ಎಷ್ಟೋ ಜನ ಹೆಣ್ಮಕ್ಕಳು ಮದುವೆ ಮಾಡಿಕೊಂಡ್ರು ಬೇಗ ಮಕ್ಕಳು ಆಗದ ಹಾಗೆ ನೋಡಿಕೊಳ್ಳುತ್ತಾರೆ. ಒಂದು ವೇಳೆ ಆದರೂ ಅಬಾರ್ಶನ್ ಮಾಡಿಸಿಕೊಂಡಿದ್ದಾರೆ. ನಮಗೆ ತಿನ್ನೋಕೆ ಅನ್ನ ಇಲ್ಲ. ಇನ್ನು ಮಕ್ಕಳನ್ನು ಹುಟ್ಟಿಸಿ ಅವನ್ನು ಯಾಕೆ ಉಪವಾಸ ಕೊಲ್ಲಬೇಕು ಎಂದು ಹೇಳಿದರು. ಗರ್ಭಿಣಿ ಆದರೆ ಅಷ್ಟು ದುಡಿಯುವುದಕ್ಕೆ ಆಗಲ್ಲ ಮತ್ತೆ, ಕೆಲಸ ಕಳೆದುಕೊಳ್ಳಬೇಕಮ್ಮ, ಹಿಂಗಾದರೆ ನಮ್ಮ ಜೀವನ ಮಾಡುವುದೇ ಕಷ್ಟವಾಗುತ್ತೆ.

ವಿಶ್ಲೇಷಣೆ

ಮಾರೆಕ್ಕಳು ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವುದು ಅವಳ ಆಯ್ಕೆ ಅಲ್ಲ. ಗಂಡನ ಮನೆಯವರ ಒತ್ತಡ, ತವರಿನವರ ಆಸರೆ, ವರದಕ್ಷಿಣೆಯ ಮೂಲಕವಾಗಲಿ, ಇತರೆ ಮೂಲದಿಂದಾಗಲಿ ಹಣ ತರುವ ಸಾಮರ್ಥ್ಯ ಅವಳದಿಲ್ಲ. ಅವಳಿಂದ ಆದಾಯವನ್ನು ಬಯಸುವ ಅವರ ಗಂಡನ ಮನೆಯವರು ಅವಳಿಗೆ ಕೆಲಸಕ್ಕೆ ಹೋಗುವ ಅನಿವಾರ್ಯತೆಯನ್ನು ಸೃಷ್ಟಿಸಿದ್ದು ಎಂದು ಅವಳು ಹೇಳುವ ಮಾತಿನಲ್ಲಿದೆ.

ಇಪ್ಪತ್ತೆಂಟು ವರ್ಷದ ಮಾರೆಕ್ಕ ಮೊದಲ ಮಗುವಿಗೆ ಜನ್ಮನೀಡಿದ ಎರಡೇ ತಿಂಗಳಲ್ಲಿ ಕೆಲಸಕ್ಕೆ ಬರಬೇಕಾಯಿತು. ಕೊನೆಯ ಪಕ್ಷ ಅವಳೀಗೆ ತವರಿನಲ್ಲಿ ಹೆರಿಗೆಯಾದರೆ ಗಂಜಿ ಕುಡಿದಾದರೂ ಕನಿಷ್ಠ ದಿನಗಳ ಹೆರಿಗೆಯನ್ನು ಮಾಡಿಸಿಕೊಳ್ಳಬಹುದಿತ್ತು. ಹೆಣ್ಣಿಗಿರುವ ಅಭದ್ರ – ಅತಂತ್ರ ಬದುಕು ಈ ಪ್ರಕರಣದಲ್ಲಿ ಕಾಣಿಸಿಕೊಳ್ಳುತ್ತದೆ. ವಿದ್ಯಾರ್ಹತೆಯಿಲ್ಲದ ಮಾರೆಕ್ಕ ದಲಿತ ಕುಟುಂಬದಲ್ಲಿ ಜನಿಸಿದ್ದು,

[illegible]

[illegible]

[illegible]

[illegible]

ಮನೆಗೆಲಸಗಳಿಗೆ ಹೋಗುವುದು ಮರ್ಯಾದೆ ಪ್ರಶ್ನೆಯೆಂದು ಅವಳ ಭಾವನೆಗಳು ಮಾತಿನ ಮಧ್ಯ ತಲೆದೋರುತ್ತಿದ್ದವು. ಹಾಗಾಗಿ ಅವಳಿಗೆ ಕೊನೆಗೆ ದೊರೆತ ಕೆಲಸವೆ ಗಾರ್ಮೆಂಟ್ಸ್. ಬೆಂಗಳೂರು ನಗರದಲ್ಲಿ ಸುಲಭದಲ್ಲಿ ಸಿಗುವ ಕೆಲಸವೇ ಗಾರ್ಮೆಂಟ್ಸ್ ಕೆಲಸ ಎಂಬುದು ಬಹು ಪ್ರಕರಣಗಳಲ್ಲಿ ಹೇಳುವಂತೆ ಗಾರ್ಮೆಂಟ್ಸ್‌ಗಳಲ್ಲಿನ ಮಹಿಳೆಯರ ಹೇಳಿಕೆಗಳು ಕಂಡು ಬಂದಿವೆ.

ಸಹಜವಾಗಿಯೇ ಬಂಡವಾಳಶಾಹಿಗಳ ವ್ಯಾಪಾರಿ ಮನೋಧರ್ಮವು ತನ್ನ ಆದಾಯದ ಮೂಲದ ಕುರಿತು ಹೆಚ್ಚಾಗಿ ಯೋಚಿಸುವಂತಹ ಸಂದರ್ಭದಲ್ಲಿ ಮಾನವೀಯತೆಯನ್ನು ಮರೆತಿರುವುದು.

ಮಾರೆಕ್ಕಳ ಎರಡು ತಿಂಗಳ ಶಿಶುವಿಗೆ ಹಾಲುಣಿಸಲು ಅವಕಾಶವು ನೀಡದಿರುವುದು. ಅಂದರೆ ಇಲ್ಲಿ ಅತಿಯಾದ ಸಮಯ ಪ್ರಜ್ಞೆ ಮಹಿಳಾ ಬದುಕಿನ ಮೇಲೆ ಎಸಗುವ ಪರಿಣಾಮವನ್ನು ಸೂಚಿಸುತ್ತದೆ. ಈ ಪ್ರಕರಣದಲ್ಲಿ ಮಾರಕ್ಕ ಹೇಳುವ ಹಾಗೆ ಬವು ಮುಖ್ಯ ಅಂಶವೆಂದರೆ ಫ್ಯಾಕ್ಟ್ರಿ ಮಾಲೀಕರು ಯಾವಾಗ ಏನ್ ಹೇಳಿದರು ಇಲ್ಲಿ ಅನ್ನುವ ಹಾಗೆ ಇಲ್ಲಾ ಅವರು ಹೇಳಿದ ಹಾಗೆ ಕೇಳಿದ್ದಕ್ಕೆ ನಾನು ಇಲ್ಲಿಯತನಕ ಕೆಲಸ ಮಾಡುತ್ತಿರುವುದಕ್ಕೆ ಅವಕಾಶ ಸಿಕ್ಕಿರುವುದು" ಎಂಬ ಹೇಳಿಕೆಯು ಸಾಕಷ್ಟು ನಿಗೂಡಾರ್ಥಗಳನ್ನು ಒಳಗೊಂಡಿದೆ. ಸಂದರ್ಶನ ಸಂದರ್ಭದಲ್ಲಿ ಈ ಮಾತನ್ನು ಬಿಡಿಸಿಕೊಳ್ಳಲು ಸಾಕಷ್ಟು ಬೇರೆ ಬಗೆಯ ಪ್ರಶ್ನೆಗಳನ್ನು ಹಾಕಿದಾಗ ಮಾರಕ್ಕಳ ಉತ್ತರ ಮೌನವಾಗುತ್ತಿದ್ದವು. ಮತ್ತೊಮ್ಮೆ ಆ ಬಗೆಯ ಮಾತಗಳು ಮಾತನಾಡದಿರುವುದೇ ಲೇಸು ಎಂದು ಉತ್ತರಿಸಿದ್ದರು ಅವಳ ಮೇಲೆ ಆಗುವ ಆಕ್ರಮಣಗಳ ಸೂಕ್ಷ್ಮ ಎಳೆಗಳು ಈ ಮಾತಿನಲ್ಲಿ ಅಡಕವಾಗಿದೆಯೆಂಬುದು ಈ ಪ್ರಕರಣ ಸ್ಪಷ್ಟಪಡಿಸುತ್ತವೆ. ಅಲ್ಲದೆ ಇತರೆ ಮಹಿಳೆಯರ ಉದಾಹರಣೆಗಳನ್ನು ನೀಡುತ್ತ ಮಾರೆಕ್ಕ ಗಾರ್ಮೆಂಟ್ಸ್ ಮಹಿಳೆಯರ ಹಲವು ಸಮಸ್ಯೆಗಳನ್ನು ಅನಾವರಣಗೊಳಿಸುತ್ತಾರೆ. ಮಹಿಳೆಯರ ಒಟ್ಟು ಬದುಕು ಪುರುಷ ಪ್ರಧಾನ ವ್ಯವಸ್ಥೆಯ ನಿಯಂತ್ರಣದಲ್ಲಿದೆಯೆಂಬುದಕ್ಕೆ, ಇದೇ ವ್ಯವಸ್ಥೆಯ ಬಹುಮುಖ್ಯ ಭಾಗವಾದ ಗಾರ್ಮೆಂಟ್ಸ್ ಮಹಿಳೆಯ ಬದುಕು ಆ ಗಾರ್ಮೆಂಟ್ಸ್‌ನ ಅಧಿಕಾರಿ ವರ್ಗ ನಿಯಂತ್ರಿಸುತ್ತದೆ. ಅವಳ ಮಗುವಿಗೆ ಜನ್ಮ ನೀಡುವ ಗಾರ್ಮೆಂಟ್ಸ್‌ನ ಅಧಿಕಾರಿವರ್ಗ ಕ್ಕಿದೆಯೆಂಬುದು ಈ ಪ್ರಕರಣ ಪ್ರತಿನಿಧಿಸುತ್ತದೆ. ಹಾಗೆಯೇ ಕಡಿಮೆ ವೇತನದ ಪ್ರಸ್ತಾಪವು ಇಲ್ಲಿದೆ.

ಆದರೆ ಈ ಅಂಶವು ಕೇವಲ ಮರ್ಯಾದೆಯ ಪ್ರಶ್ನೆಯೆಂಬುದಕ್ಕಿಂತ, ಮನೆಗೆಲಸದಲ್ಲಿ ಹೆಣ್ಣು ಒಂಟಿಯಾಗುವಂತಹ ಸನ್ನಿವೇಶಗಳು ಹೆಚ್ಚು. ಅದರಲ್ಲೂ ದಲಿತ ಮಹಿಳೆಯ ಮೇಲಿನ ಆಕ್ರಮಣಗಳು ಹೆಚ್ಚು ಆ ಬಗೆಯ ಭಯ, ಆತಂಕದ ಸಂಗತಿಗಳು ಕಾಣಿಸಿಕೊಳ್ಳುತ್ತಿವೆ. ಆ ಕಾರಣವಾಗಿ ಮಾರೆಕ್ಕ ಈ ಮನೆಗೆಲಸವನ್ನು ನಿರಾಕರಿಸಿದ್ದಾರೆ. (ಹೆಸರು : ಮಾರೆಕ್ಕ, ವಯಸ್ಸು : ೨೦ ಊರು : ವಿಜಾಪುರ ವಿದ್ಯಾರ್ಹತೆ : ಇಲ್ಲ, ಜಾತಿ : ಎಸ್.ಸಿ)[೨೦]

೫.೨.೨೧ ಈರಮ್ಮಳ ಪ್ರಕರಣ

ನಿರೂಪಣೆ

ನಮ್ಮ ಮದುವೆ ಅಗಿ ಇಪ್ಪತ್ತೆರಡು ವರ್ಷವಾಯಿತು. ನನ್ನ ಗಂಡ ಕಾರ್ ಓಡಿಸುತ್ತಿದ್ದರು. ಆದರೆ ಅವನು ಬೇರೆ ಮದುವೆ ಆಗಿ ನನ್ನ, ನನ್ನ ಮಕ್ಕಳನ್ನು ಬೀದಿಪಾಲುಮಾಡಿದ. ಹೀಗಾಗಿ ಅನಿವಾರ್ಯ ಕಾರಣಕ್ಕಾಗಿ ಗಾರ್ಮೆಂಟ್ಸ್ ಫ್ಯಾಕ್ಟ್ರಿ ಕೆಲಸಕ್ಕೆ ಹೋಗಲು ಶುರುಮಾಡಿದೆ. ಏಳು ವರ್ಷ ಮಾಡಿದಿನಿ. ಈಗಲೂ ನಾನೇ ಯಾವಾಗಲಾದರೂ ಫೋನ್ ಮಾಡ್ತಿರ್ತಿನಿ, ಬೈಯ್ಯೊಕ್ಕಾದರೂ, ಸಹಿಸಿಕೊಳ್ಳಲು ಆಕ್ತಾ ಇಲ್ಲ. ಆದರೆ ಅವನು ಮಾತ್ರವನಾರೂ ಮನೆಗೆ ಬಂದರೆ ಸೇರಿಸಿಕೊಳ್ಳುವುದಿಲ್ಲ. ಅಲ್ಲದೆ, ಫ್ಯಾಕ್ಟ್ರಿಯಲ್ಲಿ ಇನ್ನು ಅನೇಕ ಕಷ್ಟಗಳನ್ನು ಅನುಭವಿಸ್ತಿವಮ್ಮಾ. ನಾನು ಬೇರೆ ಓದಿಲ್ಲಾ, ನನಗೆ ಚಕರ್ ಕೆಲಸಕೊಟ್ಟಿದ್ದಾರೆ. ಅದರಲ್ಲಿ ಸ್ವಲ್ಪ ವ್ಯತ್ಯಾಸ ಅದರಂತೂ ನಿನಗೆ ಕಣ್ ಕಾಣಲ್ಲ. ಸುಮಾರು ವರ್ಷದಿಂದಲೂ ಕೆಲಸ ಮಾಡ್ತಿದಿಯಾ. ಅಷ್ಟೊಂದು ಬೇಜಾರು ಆಯಿತಂದ್ರೆ ಬಿಟ್ಟು ಹೋಗಿ ಮನೆಗೆ ಅಂತ ಬಾಯಿಗೆ ಬಂದ ಹಾಗೆ ಬೈಯುತ್ತಾರೆ. ಎಲ್ಲರ ಮುಂದೆ ಬೈಯ್ಯುವುದಲ್ಲದೆ ಕ್ಯಾಬಿನ್‌ಗೆ ಕರೆದು ಬೈಯುತ್ತಾರೆ. ಏನನ್ನಾದರೂ ಮಾತನಾಡಿದರೆ ಕೆಲಸದಿಂದ ಹೊರಹಾಕುತ್ತೇನೆ ಎಂದು ಹೆದರಿಸುತ್ತಾರೆ. ಒಂದು ದಿನ ಹುಷಾರಿಲ್ಲ ಅಂತ ಕೆಲಸ ಬಿಟ್ಟರೆ ಮರುದಿನ ಕೆಲಸದಿಂದಲೇ ತೆಗೆದುಹಾಕಿಬಿಟ್ರು. ನಂತರ ಅಸಾಯಕಳಾಗಿ ಕೈ ಕಾಲು ಬಿದ್ದು ಸೂಜಿದಾರ ಪತ್ರಿಕೆಯವರಿಂದ ಕೆಲಸ ಪಡೆದುಕೊಂಡೆ. ಕೆಲಸ ಸಿಕ್ಕರೂ ಕೂಡ ಫ್ಯಾಕ್ಟ್ರಿಯಲ್ಲಿ ಮಾತ್ರ ಯಾವ ರೀತಿಯ ಬದಲಾವಣೆನೂ ಆಗಲಿಲ್ಲ. ಮೊದಲು ನನಗೆ ಹೇಗೆ ಬಾಯಿಗೆ ಬಂದ ಹಾಗೆ ಬೈಯುತ್ತಿದ್ದರೋ ಈಗಲೂ ಹಾಗೆ ಬೈಯುತ್ತಾರೆ. ಪತ್ರಿಕೆಯವರ ಬೆಂಬಲ ಇದೆ ಅಂತ ತಿಳಿದುಕೊಂಡಿಯಾ, ಅದು ಇಲ್ಲಿ ಏನು ನಡೆಯುವುದಿಲ್ಲ. ಮೊದಲಿಗಿಂತಲೂ ಅತಿ ಹೆಚ್ಚು ಹಿಂಸೆ ಮಾಡ್ತಾರೆ. ನನ್ನ ಕಷ್ಟಗಳನ್ನು ಹೇಳೋಕೆ ನಿಂತ್ರೆ ಕೊನೆನೆ ಇಲ್ಲ. ಅಲ್ಲಿ ನೆಮ್ಮದಿ ಸಿಕ್ಕಲ್ಲ. ಜೀವನನೆ ಸಾಕಾಗಿಬಿಟ್ಟಿದಮ್ಮ ಏಕಾದರೂ ಹೆಣ್ಣಾಗಿ ಹುಟ್ಟಿವೋ, ನನ್ನ ಜೀವನನೇ ಇಷ್ಟು ಆಗಿದೆ. ಇನ್ನು ಮೂವರು ಹೆಣ್ಣು ಮಕ್ಕಳ ಬಗ್ಗೆ ಯೋಚಿಸಿದರೆ ಜೀವ ಹಿಡಿದಂಗೆ ಆಗುತ್ತೆ.

ವಿಶ್ಲೇಷಣೆ

ಸಮಾಜ ವ್ಯವಸ್ಥೆಯಲ್ಲಿ ಪುರುಷ ಸಮುದಾಯಕ್ಕಿರುವ ಅನಿರ್ಭಂದಿತ ಬದುಕು ಹೆಣ್ಣಿನ ಬದುಕಿಗೆ ಮಾರಕವಾಗುತ್ತಿರುವುದಕ್ಕೆ ಈ ಪ್ರಕರಣ ಸಾಕ್ಷಿಯಾಗಬಹುದು. ಸಂಸ್ಕೃತಿ, ಮೌನ, ಮರ್ಯಾದೆಯ ಚೌಕಟ್ಟಿನ ನೋವನ್ನು ಹೆಣ್ಣಿಗೆ ಮಾತ್ರ ಹೋರಿಸಿ ಗಂಡು ಜೀವಿ ತನಗೆ ಬೇಕಾದಂತೆ ಒಟ್ಟು ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದ, ಹೆಣ್ಣಿನ ಬದುಕಿನಲ್ಲಿ ವರದಕ್ಷಿಣೆ, ವೇಶ್ಯಾವಾಟಿಕೆಯಂತಹ ಸಮಸ್ಯೆಗಳಂತೆಯೇ 'ಬಹುಪತ್ನಿತ್ವ'ವು ಒಂದು. ಶೀಲ, ಆದರ್ಶನಾರಿ ಮತ್ತೊಂದು ಸಂಪ್ರದಾಯವನ್ನು ಹೇರಿ ಹೆಣ್ಣನ್ನು ಬಂಧಿಸುವ ಸಮಾಜ 'ಬಹುಪತ್ನಿತ್ವ' ದ ಸಂಗತಿಯನ್ನು ಗಂಡಿನ ಬಲವಾಗಿ ನಿರ್ವಹಿಸಿದ್ದು. ಪುರುಷ ಚಿಂತನೆಯ ಹೊನ್ನಾರವೇ ಅಲ್ಲವೇ? ಅಂತಹ ಒಂದು ಸಂಗತಿಗೆ ಬಲಿಯಾದ ಈ ಮಹಿಳೆಯು ಉದ್ಯೋಗಕ್ಕಾಗಿ ಆಯ್ಕೆ ಮಾಡಿಕೊಂಡಿದ್ದು ಗಾರ್ಮೆಂಟ್ಸ್. ಸ್ತ್ರೀ ಸಮುದಾಯವು ವ್ಯವಸ್ಥೆಗೆ ಬದ್ಧವಾಗಿ

[illegible]

[illegible]

[illegible]

[illegible]

[illegible]

ಬದುಕಿದಾಗಲೂ, ಪ್ರತಿಧ್ವನಿಎತ್ತಿದಾಗಲೂ ಎರಡು ಸಂದರ್ಭಗಳಲ್ಲಿಯೂ ಕೂಡ ಕಷ್ಟ ಅನುಭವಿಸುವುದಂತೂ ಕಟ್ಟಿಟ್ಟ ಬುತ್ತಿಯೆಂಬಂತೆ, ಇಲ್ಲಿನ ಮಹಿಳೆ ಅನಾರೋಗ್ಯದ ಕಾರಣದಿಂದ ಕೆಲಸಕ್ಕೆ ಗೈರುಹಾಜರಾಗಿದ್ದಕ್ಕೆ ಕೆಲಸದಿಂದ ತೆಗೆದುಹಾಕಿರುವುದರಿಂದ ವಿನಂತಿಯ ಎಲ್ಲ ಹಂತವನ್ನು ಮುಗಿಸಿ, ಅನಿವಾರ್ಯವಾಗಿ ಸಂಘಟನೆಯ ಮೊರೆ ಹೋಗಿ ಕೆಲಸವನ್ನು ಮರು ಪಡೆದಿರುವುದು ಹೆಮ್ಮೆ ಪಡಬಹುದಾದ ಸಂಗತಿಯೇ ಸರಿ, ಆದರೆ ಈ ಬಗೆಯ ಸಂಘಟನೆಗೆ ಮುಖಾಮುಖಿಯಾದ್ದರಿಂದ ಅವಳ ಮೇಲಿನ ಆಕ್ರಮಣಗಳು ಕಡಿಮೆಯಾದವೆ? ಎಂದರೆ ಸಿಗುವ ಉತ್ತರ ಶೂನ್ಯ, ಬದಲಿಗೆ ಅವಳ ಸಮಸ್ಯೆಗಳು ಇನ್ನಷ್ಟು ಉಲ್ಬಣವಾಗುತ್ತವೆ ಎಂಬುದನ್ನು ಈ ಪ್ರಕರಣ ಸಮರ್ಥವಾಗಿ ವಿವರಿಸುತ್ತದೆ. ಒಂದು ಹಂತದವರೆಗೂ ಈ ಬಗೆಯ ಸಂಘಟನೆ ಹೋರಾಟಗಳೂ ಅಗತ್ಯವಾದವು ಆದರೆ ಇವುಗಳನ್ನೇ ಆಧರಿಸಿ ಯಾರು ಬದುಕಲಾಗದು. ಅರ್ಥಾತ್ ಇಲ್ಲಿ ಸಂಘಟನೆಗಳ ನಿರಾಕರಣೆ ಅಲ್ಲ. ಸಮಾಜ ವ್ಯವಸ್ಥೆಯಲ್ಲಿ ಲಿಂಗ ಭೇದ, ಜಾತಿ ವರ್ಣಭೇಧಗಳು ಹೋಗಿ, ಮಾನವೀಯ ಸಮಾಜ ರೂಪಿಕೆಯಾಗಬೇಕೆಂಬ ಆಶಯ ಈ ಪ್ರಕರಣದ ಹಿನ್ನೆಲೆಯಲ್ಲಿ ವಿವರಿಸಬಹುದಾಗಿದೆ. (ಹೆಸರು : ಈರಮ್ಮ, ವಯಸ್ಸು : ೩೮, ಊರು: ದಾವಣಗೇರೆ ಜಿಲ್ಲೆ, ವಿದ್ಯಾರ್ಹತೆ: ೮ನೇ, ಜಾತಿ:...)[೨೧]

೫.೨.೨೨ ನೂರಜಹಾನ್‌ಳ ಪ್ರಕರಣ

ನಿರೂಪಣೆ

ನನಗೆ ತಂದೆ–ತಾಯಿ ಇಲ್ಲ, ಅಣ್ಣರು ಇಬ್ಬರು. (ಹಿಂದಿಯಲ್ಲಿ ಮಾತನಾಡಿದರು) ಹದಿನೇಳು ವರ್ಷದಲ್ಲಿ ಮದುವೆಮಾಡಿಕೊಟ್ಟರು. ಮದುವೆ ಆಗಿ ಸ್ವಲ್ಪ ದಿನಕ್ಕೆ ಮನೆ ಪರಿಸ್ಥಿತಿ ತುಂಬಾ ಕಷ್ಟವಾಯಿತಮ್ಮ. ನಾನು ಹೆಚ್ಚು ಓದಿಲ್ಲ. ಓದಿರುವುದೆ ಉರ್ದು. ಕೊನೆಗೆ ಯಾವ ಕೆಲಸವೂ ಸಿಕ್ಕದೆ ಇರುವುದಕ್ಕೆ ಗಾರ್ಮೆಂಟ್ ಕೆಲಸಕ್ಕೆ ಹೋಗುತ್ತಿದ್ದೇನೆ. ಇತ್ತೀಚೆಗೆ ಓದಿರುವ ಸರ್ಟಿಫಿಕೆಟ್ ಕೇಳುತ್ತಿದ್ದಾರೆ. ಓದಿದವರಂತೆ ಕೇಳುತ್ತಾರೆ, ಓದದೆ ಇರುವವರು, ವಯಸ್ಸಾದವರು. ಇನ್ನಿತರರು ಇವರ ಜೀವನಕ್ಕೆ ಯಾವುದೆ ಆಸರೆ ಇಲ್ಲದೆ ಇರುವ ಸಂದರ್ಭದಲ್ಲಿ ಹೀಗೆಲ್ಲ ಕೇಳಿದಾಗ ಬದುಕನ್ನು ನಡೆಸುವುದು ತುಂಬಾನೆ ಕಷ್ಟ. ಸುಮಾರು ವರುಷದಿಂದ ಕೆಲಸಮಾಡುತ್ತಿದ್ದಕ್ಕೆ ಉಳಿಯಲು ಸಾಧ್ಯವಾಗಿದೆ. ನಾನು ಅಣ್ಣ ಅತ್ತಿಗೆ ಹತ್ತಿರನೆ ಇದಿನಿ. ನನ್ನ ಗಂಡ ಒಬ್ಬ ಮೋಸಗಾರ, ಅವನೇನಾದರೂ ಸಿಕ್ಕರೆ ಚೆನ್ನಾಗಿ ಹೊಡೆದು ಸಾಯಿಸಿಬಿಡ್ತೀನಿ, ಅವನು ನನ್ನ ಜೀವನನೆ ಹಾಳುಮಾಡಿದ ಮೊದಲನೆ ಬಸುರಿ ಇದ್ದಾಗ ತವರ ಮನೆಗೆ ಹೆರಿಗೆಗೆ ಅಂತ ತವರುಮನೆಗೆ ಬಂದೆ. ಅದೇ ಸಂದರ್ಭ ಕಾಯುತ್ತಿದ್ದ ಅವನು ಬೇರೆ ಹೆಣ್ಣಿನ ಜೊತೆ ಸಂಬಂಧ ಬೆಳೆಸಿದ. ಅದರಿಂದ ಮನೆಗೂ ಬರ್ದೆ ಕರೆದುಕೊಂಡು ಹೋಗದೆ ಬೈಯ್ದು ಸಿಕ್ಕಾಪಟ್ಟೆ ಜಗಳಮಾಡಿದರು. ಮೂರು ವರ್ಷ ಆದರೂ ನನ್ನ ಮಗುಗೆ ಏನಾಯಿತು, ಎಂತಾಯಿತು ಅಂತ ಕೇಳೋಕೆ ಒಂದು ಸಾರಿನೂ ಬರ್ಲೆ ಇಲ್ಲ. ಅಣ್ಣಾರು ಹೋಗಿ ಕರೆದರೆ ಜಗಳಮಾಡುವರು. ಆದರೂ 'ಇಟ್ಟುಕೊಂಡವಳು ಇರುವ ತನಕ, ಕಟ್ಟಿಕೊಂಡವಳು ಕಡೆತನಕ' ಅನ್ನುವ ಹಾಗೆ ಅವಳೂ ದುಡ್ಡು ಇರುವ ತನಕ ಅವನ ಜೊತೆಗೆ ಇದ್ಲು ಕೊನೆಗೆ ಎಲ್ಲ ಖಾಲಿ ಆದ ಮೇಲೆ ಓಡಿಹೋದಳು. ಆಮೇಲೆ

[illegible]

ನನ್ನ ಗಂಡ ನನ್ನನ್ನು ನಮ್ಮ ಮನೆಯವರನ್ನು ಕೈಕಾಲು ಬಿದ್ದು ಚೆನ್ನಾಗಿ ನೋಡಿಕೊಳ್ಳುತ್ತೇನೆ. ಎಂದು ಬೇಡಿಕೊಂಡದ್ದಕ್ಕೆ ನನ್ನ ಮನಸ್ಸು ಕರಗಿ ಅವನ ಜೊತೆ ಸಂಸಾರ ಮಾಡಲು ಹೋದೆ. ಸ್ವಲ್ಪ ದಿನ ಚೆನ್ನಾಗಿಯೇ ನೋಡಿಕೊಂಡ, ಎರಡನೆ (ಮಗುವಿಗೆ ಗರ್ಭಿಣಿಯಾದೆ, ಆಗ ಮಾತ್ರ ತವರಿಗೆ ಹೆರಿಗೆಗೆ ಬಂದೆ. ಆಗ ಮತ್ತೆ ನನ್ನ ಗಂಡ ತವರಿಗೆ ಬರ್ಲೆ ಇಲ್ಲ. ಹೆಣ್ಣು ಮಗು ಆಯಿತು ಬರ್ಲೆ ಇಲ್ಲ. ಈಗೂ ಅವನು ಎಲ್ಲಿದ್ದಾನೋ ಅಂತ ಗೊತ್ತು ಇಲ್ಲ. ಅವನೇನಾದರೂ ಬಂದ್ರೆ ನಾನೇ ಹೊಡೆದು ಸಾಯಿಸುತ್ತೇನೆ. ಎರಡು ಹೆಣ್ಣು ಮಕ್ಕಳನ್ನು ಕಟ್ಟಿಕೊಂಡು ಹೇಗೆ ಜೀವನ ಮಾಡ್ಬೇಕು. ಪುಣ್ಯಕ್ಕೆ ಅಣ್ಣರು ಚೆನ್ನಾಗಿದ್ದಾರೆ. ಅವರೆ ನನ್ನನ್ನು ನನ್ನ ಮಕ್ಕಳನ್ನು ನೋಡಿಕೊಳ್ಳುತ್ತಿದ್ದಾರೆ.

ಎರಡನೇ ಅಣ್ಣ ! ನನ್ನ ತಂಗಿ ಜೀವನ ಹೀಗಾಯಿತಲ್ಲ, ಅವಳಿಗೆ, ಅವಳ ಮಕ್ಕಳಿಗೆ ಯಾರ ಗತಿ ಎಂದು ಮದುವೆನೆ ಮಾಡಿಕೊಳ್ಳುವುದಿಲ್ಲ. ಎಂದು ನಿರ್ಧಾರ ಮಾಡಿದ್ದಾನೆ. ನನ್ನಂಥ ಎಷ್ಟೋ ಜನ ಹೆಣ್ಣುಮಕ್ಕಳು ಅನೇಕ ಕಷ್ಟಗಳಿಂದ ಇಲ್ಲಿಗೆ ಬರುತ್ತಿದ್ದಾರೆ. ನನಗಂತೂ ಜೀವನನೇ ಸಾಕಾಗಿದೆ. ಎರಡು ಮಕ್ಕಳ ಸಂಬಂಧ ಜೀವನಮಾಡ್ತಿದಿನಿ. ಆದರೆ ಈ ಫ್ಯಾಕ್ಟ್ರಿಯವರಂತು ತುಂಬಾ ಕೆಟ್ಟದಾಗಿ ನಡೆಸಿಕೊಳ್ಳುತ್ತಾರೆ. ಏಕಾದರೂ ಬಂದ್ದಿದೇನೋ ಅಂತ ಅನ್ಸುತ್ತೆ. ನನಗೆ ಗೊತ್ತಾಗದೆ ಇದ್ದಾಗ ಬೇರೆಯವರು ಬಂದು ಹತ್ತಿರಕ್ಕೆ ನಿಂತು ಹೇಳಿಕೊಡುತ್ತಿದ್ದಾಗ ಏಕೆ ಚಳಿ ಆಗುತ್ತಾ ! ನಾ ಚಳಿ ! ಬಿಡ್ಸಿಲಾ, ನಾನೇ ಹಿಟ್ ಮಾಡ್ತೀನಿ ಬಾ ಅಂತ ಅನ್ನೋರೋ, ಏನಾದರೂ ನೆಪಹೇಳಿ ಮೈಕೈ ಮುಟ್ಟೋರು, ಸನ್ನೆ ಮಾಡಿ ಕರೆಯುವರು, ಆಸಹಾಯಕ ಸ್ಥಿತಿಯಲ್ಲಿರುವ ನಮಗೆ ಇದು ಬಿಟ್ಟರೆ ಜೀವನ ಮಾಡಲು ತುಂಬಾ ಕಷ್ಟ ಆಗುತ್ತೆ ಅಂತ ಸಹಿಸಿಕೊಂಡು ಹೋಗ್ತಿದೀವಿ.

ವಿಶ್ಲೇಷಣೆ

ಉರ್ದುವಿನಲ್ಲಿ ಆರನೇ ತರಗತಿಯನ್ನು ಓದಿದ ನೂರ್‌ಜಹಾನ್ ದಾಬಸ ಪೇಟೆಯಲ್ಲಿ ವಾಸವಾಗಿದ್ದರೆ. ಕೌಟುಂಬಿಕ ವಿಘಟನೆಯಿಂದ ನೂರ್‌ಜಹಾನ್ ಗಾರ್ಮೆಂಟ್ಸ್ ಕೆಲಸಕ್ಕೆ ಸೇರಿಕೊಂಡಿದ್ದಾರೆ. ನೂರ್‌ಜಹಾನರಿಗೆ ಬೇರೆ ಕೆಲಸಗಳಿಗೆ ಹೋಗುವ ಆಸೆಯಿದ್ದರು ಸರ್ಟಿಫಿಕೇಟಿನ ಕೊರತೆಗಳೂ ಮುಂದಿಡುತ್ತಾರೆ. ಆಕಾರಣಗಳಿಂದ ನನಗೆ ಗಾರ್ಮೆಂಟ್ಸ್ ಕೆಲಸ ಅನಿವಾರ್ಯವಗಿದೆ. ಮೋಸಗಾರ ಗಂಡನಿಂದಾಗಿ ನಾನು ಈಗ ತವರು ಮನೆಯಲ್ಲಿ ಭಾರವಾಗಿದ್ದೇನೆ ಎಂಬ ಅಂಶವು ಹೆಣ್ಣಿಗೆ ತನ್ನದೆ ಆದ ಒಂದು ಸ್ಥಳವಿಲ್ಲದಿರುವುದನ್ನು ಸೂಚಿಸುತ್ತದೆ. ಗಂಡನಿಗಿರುವ ಅನೈತಿಕ ಸಂಬಂಧದಿಂದಾಗಿ ಅವಳನ್ನು ನಿರಾಕರಿಸಿರುವುದೇ ಅವಳಿಂದು ಗಾರ್ಮೆಂಟ್ಸ್‌ಗಳಲ್ಲಿ ಕೆಲಸಮಾಡಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿದೆ. ಎಂದು ಈ ಪ್ರಕರಣವು ತಿಳಿಸುತ್ತದೆ. ಗಂಡನಿಂದ ಪದೇ ಪದೇ ಆಗುವ ಮೋಸಗಳು ಅವಳೂ ಅಂತಿವವಾಗಿ ತವರಿನಲ್ಲಿ ಉಳಿಯಬೇಕಾದ ಪ್ರಸಂಗವನ್ನು ಹೆಚ್ಚಾಗಿ ಹೇಳುತ್ತಾರೆ. ತನ್ನ ಕಾರಣದಿಂದಾಗಿ ತನ್ನಅಣ್ಣನ ಬದುಕು ವ್ಯರ್ಥವಾಗುತ್ತಿದೆಯೆಂದು. ನೂರ್‌ಜಹಾನ್ ದುಡಿಮೆಗೆ ಇಳಿದಿದ್ದಾರೆ.

ಆದರೆ ಈ ಗಾರ್ಮೆಂಟ್ಸ್‌ನಲ್ಲಿ ನಡೆಸಿಕೊಳ್ಳುವ ಅನೈತಿಕತೆಯ ಪರಿಯನ್ನು ಸೂಕ್ಷ್ಮವಾಗಿ ಹೇಳಿದ್ದಾರೆ. ಕೆಲಸಗಳು ಹೇಳಿಕೊಡುವ ನೆಪದಲ್ಲಿ ಅಸಭ್ಯವಾಗಿ ವರ್ತಿಸುವುದು ಮಾನಸಿಕ ಹಿಂಸೆ ನೀಡುವುದನ್ನು

ಹೇಳುತ್ತಿದ್ದಾರೆ. ತನಗಿರುವ ಅಸಹಾಯಕತೆಯಿಂದಾಗಿರುವ ಕೆಲಸ, ಕೆಲಸದ ಸ್ಥಳದಲ್ಲಾಗುವ ಕಿರುಕುಳಗಳು, ಅಶ್ಲೀಲ ಪದಗಳನ್ನು ಬಳಸುವ ಮೂಲಕ ಅನೈತಿಕ ಕೆಲಸಕ್ಕೆ ತೊಡಗಿಸಲು ಯತ್ನಿಸುತ್ತಾರೆ. ಮಾಲೀಕರಿಗೆ ಕಾರ್ಮಿಕರಿಂದಲೆ ಇವರ ಪ್ರಕಾರ ಪ್ರಾಣಿಗಳ ರೀತಿ ನೆಡೆಸಿ ಕೊಳ್ಳುತ್ತಾರೆ ಆದರೆ ಇವುಗಳನ್ನು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪ್ರತಿಭಟಿಸಲು ಸಾಧ್ಯವಿಲ್ಲ. ಹಾಗೆ ಪ್ರತಿಭಟನೆಗಿಳಿದಿದ್ದೆ ಆದರೆ ಕೆಲಸ ಕಳೆದುಕೊಳ್ಳಬೇಕಾದ ಪ್ರಸಂಗ ಬರುತ್ತದೆ. (ಹೆಸರು: ನೂರ್ ಜಹಾನ್, ವಯಸ್ಸು: ೨೦, ಊರು: ದಾಬಸ್ ಪೇಟೆ, ವಿದ್ಯಾರ್ಹತೆ:೬ನೆ (ಉರ್ದು) ಜಾತಿ: ಮುಸ್ಲಿಂ)[೨೨]

೫.೨.೨೩ ಮಂಗಳನ ಪ್ರಕರಣ

ನಿರೂಪಣೆ

ನಾನು ಕೆಲಸಕ್ಕೆ ಸೇರಿ ಐದು ವರ್ಷ ಆಯಿತಮ್ಮ. ಗಂಡ ಆಟೋ ಡ್ರೈವರ್. ನಮಗೆ ಮೂರು ಜನನೂ ಹೆಣ್ಣು ಮಕ್ಕಳೆ. ನಾವಿಬ್ಬರೂ ದುಡಿದೆ ಇದ್ರೆ ಜೀವನನೇ ಸಾಗದು. ಇಬ್ಬರೂ ದುಡಿದರು ಸಿಗುವ ಸಂಬಳ ತುಂಬ ಕಡಿಮೆ ಕಡಿಮೆ ಆದರೂ ಬಾಯಿಸಿಕ್ಕ ಹಾಗೆ ಅಧಿಕಾರಿಗಳು ಬೈತಾರೆ. ದನಕ್ಕಾಯಾಕೆ ಹೋಗಿ ದರಿದ್ರಗಳಾ, ಸರಿಯಗಿ ಪ್ಯಾಂಟ್‌ಗೆ ಜಿಪ್ ಹಾಕದೆ ಇದ್ದಾಗ ಮಾಸ್ಟರ್ ಮುಂದೆ ಬಂದು ಪ್ಯಾಂಟ್‌ಜಿಪ್‌ನ್ನು ಬಿಚ್ಚಿ ಹಾಕಿ ತೋರಿಸುತ್ತಾರೆ. ಹಿಂಗೆ ಕೆಟ್ಟದಾಗಿ ನಡೆಸಿಕೊಳ್ಳುವುದರಿಂದ ತುಂಬಾನೋವಾಗುತ್ತೆ. ಒಂದೊಂದು ಸಾರಿ ಕತ್ ಹಿಡಿದು ಬಗ್ಗಿಸಿ ಹೀಗಾ, ಹೊಲಿಯುವುದೆಂದು ತೋರಿಸಿ ಬೈಯ್ದು ಮತ್ತೆ, ಒಂದು ಹತ್ತು ಪೀಸ್ ಹೆಚ್ಚಾಗಿ ಹೊಲಿಯಲು ಹಾಕುತ್ತಾರೆ. ಮಕ್ಕಳನ್ನು ಮನೆಯಲ್ಲಿಬಿಟ್ಟು ಬಂದಿರ್ತೀವಿ, ಮಾಸ್ಟರ ಎಲ್ಲ ಪೀಸುಗಳನ್ನು ಹೊಲಿಯುವ ತನಕನೂ ಬಿಡುವುದಿಲ್ಲ. ಹೆಚ್ಚಿನ ಅವಧಿ ಮಾಡದೆ ಇದ್ದರೆ ಬರ್ಬೇಡಿ, ಮನೆಯಲ್ಲೆ ಮಕ್ಕಳನ್ನು ನೋಡಿಕೊಳ್ತ ಇರ್ರಿ. ಹೆಚ್ಚಿನ ಅವಧಿ ಮಾಡ್ತಿನಿ ಅಂದ್ರೆ ಮಾತ್ರ ಬನ್ನಿ. ಇಲ್ದಿದ್ದರೆ ಬರೋಕೆ ಹೋಗಬೇಡಿ ಆದರೆ ನಮ್ಮ ಸ್ಥಿತಿ ಹೇಗಾಗಿದೆ ಅಂದ್ರೆ ಅತ್ಲೂ ಇಲ್ಲ ಇತ್ಲೂ ಅನ್ನೊ ಹಾಗಾಗಿದೆ. ಬದಕೊಕು ಆಗ್ತಾ ಇಲ್ಲ, ಸಾಯೊಕೂ ಆಗ್ತಾ ಇಲ್ಲ. ದಿನನಿತ್ಯ ಅನ್ನಕ್ಕಾಗಿ ಪರದಾಡ್ತಿವಿ, ಕೆಲಸಕ್ಕೆ ಹೋದರೆ ಮಾನಸಿಕ ಮತ್ತು ದೈಹಿಕ ತೊಂದರೆಗಳನ್ನು ಮಾಸ್ಟರ್‌ನಿಂದ ಅನುಭವಿಸಬೇಕು. ನಮಗೆ ಯಾವತ್ತೂ ಒಳ್ಳೆಯ ಟೈಮ್ ಬರೋದಿಲ್ಲ ಅಂತ ಕಾಣುತ್ತೆ. ಏಕೆಂದರೆ ದಿನೇ ದಿನೇ ಬೆಲೆಗಳು ಗಗನಕ್ಕೇರುತ್ತಿದ್ದಾವೆ. ಅಕ್ಕಿ ಬೇಳೆ ತರಕಾರಿ ಇತ್ಯಾದಿ ರೇಟುಗಳು ಹೆಚ್ಚುತ್ತಿರುವುದರಿಂದ ಮಕ್ಕಳನ್ನು ಹೇಗೆ ಸಾಕುವುದು, ಅವರ ಭವಿಷ್ಯದ ಬಗ್ಗೆ ಯೋಚಿಸಿದರೆ ರಾತ್ರಿಯೆಲ್ಲಾ ನಿದ್ದೇನೆ ಬರ್ತಿಲ್ಲ. ನಮ್ಮ ಹಾಗೆ ನಮ್ಮ ಮಕ್ಕಳು ಕಷ್ಟಪಡಬಾರದು ಎಂದು ನಾವು ಕೆಲಸಕ್ಕೆ ಹೋಗ್ತಿವಿ. ನೀವು ನಮ್ಮ ಕಷ್ಟನ ಕೇಳಿರಿ ಸಂಬಳ ಹೆಚ್ಚು ಮಾಡಿಸಿ ಅಂತ ಕೈಮುಗಿಯುತ್ತಾಳೆ.

ವಿಶ್ಲೇಷಣೆ

ಬಡತನದ ಕುಟುಂಬಗಳಿಗೆ ಹೆಣ್ಣು ಮಕ್ಕಳ ಜನನವು ವರದಕ್ಷಿಣೆಯಿಂದಲೋ, ಇನ್ನಿತರೆ ಸಾಮಾಜಿಕತೆಯಲ್ಲಿರುವ ಸಮಸ್ಯೆಗಳಿಂದಾಗಿ ಹೊರೆಯೆನಿಸುತ್ತದೆ ಎಂಬ ಅಂಶವು ಈ ಪ್ರಕರಣದಿಂದ

ಗುರುತಿಸಬಹುದು. ಇಂದಿನ ಸಾಮಾಜಿಕ ವಾಸ್ತವದಲ್ಲಿ ಸಂಕೀರ್ಣವಾಗುತ್ತಿರುವ ಜೀವನೋಪಾಯವೂ ಗಂಡ–ಹೆಂಡತಿಯರಬ್ಬರೂ ದುಡಿದರೂ ಸುಲಭವಾಗಿ ಸಾಗುತ್ತಿಲ್ಲವೆಂಬುದು ಕಂಡುಬರುತ್ತದೆ.

ಇಂಥ ಶಿಕ್ಷಣದ ಕೊರತೆಯೋ ಮತ್ಯಾವುದೋ ಕಾರಣದಿಂದಾಗಿ ಬೆಂಗಳೂರಿನಂತಹ ಸ್ಥಳದಲ್ಲಿ ತಕ್ಷಣಕ್ಕೆ, ಸುಲಭವಾಗಿ ಒದಗಿಬರುವ ಕೆಲಸವೆಂದರೆ ಗಾರ್ಮೆಂಟ್ಸ್. ಈ ಗಾರ್ಮೆಂಟ್ಸನಲ್ಲಿ ಮಹಿಳೆಯರು ಅನುಭವಿಸುವ ಹಲವು ಆಯಾಮದ ನೋವುಗಳನ್ನು ಒಂದೊಂದು ಪ್ರಕರಣವು ಬಿಂಬಿಸುತ್ತದೆ. ಹಾಗೆಯೇ ಈ ಪ್ರಕರಣವು ಒಬ್ಬ ಹೊಲಿಗೆ ಹಾಕುವ ಮಹಿಳೆಗೆ ಅಲ್ಲಿನ ಅಧಿಕಾರಿ ವರ್ಗದಿಂದಾಗುವ ಕಿರುಕುಳವನ್ನು ಕಾಣಬಹುದು.

ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣೊಬ್ಬಳು ಹೊರ ಜಗತ್ತಿಗೆ ಕಾಲಿಟ್ಟಿರುವುದೇ ಆಶ್ಚರ್ಯದ ಸಂಗತಿಯಾಗಿದೆ. ಇಂತಹ ಸಂದರ್ಭದಲ್ಲಿ ಸಮಾಜ ನಿರ್ಮಿತ ಕೆಲವು ಬಿಕ್ಕಟ್ಟುಗಳಿಗೆ, ಸೀಮಿತತೆಯಿಂದಾಗಿ ವೈಚಾರಿಕ ಆಲೋಚನೆಗಳಿಗೆ ಮುಖಾಮುಖಿಯಾಗದಿರುವುದೇ ಹೆಚ್ಚು . ಹಾಗಾಗಿ ಕೆಲಸದ ನೆಪದಲ್ಲಿ ಅವಳನ್ನು ಸ್ಪರ್ಶಿಸುವ, ಕತ್ತು ಹಿಡಿದು ಬಗ್ಗಿಸುವ, ಮುಖದ ಮೇಲೆ ಬಟ್ಟೆಯನ್ನು ಎಸೆಯುವ ಹಾಗೂ ಜಿಪ್ ಹಾಕಿ ತೋರಿಸುವಂತಹ ಅಸಹ್ಯ ವರ್ತನೆಗಳು ಮಾನಸಿಕ ಹಿಂಸೆಯನ್ನುಂಟು ಮಾಡುತ್ತವೆ. ಬದುಕಿನ ಸಹಜ ಸಂಗತಿಗಳನ್ನು ನಿರ್ಭಂದಿತ ವಾತಾವರಣದಲ್ಲಿ ಬಂಧಿಸಿಟ್ಟಾಗ, ದಿಡೀರ್‌ನೆ ಆಗುವ ಬದಲಾವಣೆಗಳಿಗೆ ಮಹಿಳೆಯರು ಒಗ್ಗಿಕೊಳ್ಳುವುದಕ್ಕಿಂತ ಮಾನಸಿಕ ಕ್ಷೋಭೆಯನ್ನು ಅನುಸರಿಸುವುದೇ ಹೆಚ್ಚು. ಅಂತಹ ಸಂದರ್ಭದಲ್ಲಿ ಈ ಗಾರ್ಮೆಂಟ್ ಲೋಕದಲ್ಲಿ, ಅವಿರತ ದುಡಿಮೆ, ಅಸಭ್ಯ ವರ್ತನೆಗಳು ಒಂದೆಡೆ ಹಿಂಸೆಯನ್ನುಂಟುಮಾಡಿದರೆ, ಇಂದಿನ ಸಂದರ್ಭದಲ್ಲಿ ಗಗನಕ್ಕೇರುತ್ತಿರುವ ಬೆಲೆಗಳೂ, ಬದುಕುವ ಒತ್ತಡಗಳೂ, ಅದನ್ನು ನಿವಾರಿಸಿಕೊಳ್ಳಲು ಹೋಗಿ ಅವಳ ಮೇಲಾಗುವ ಆಕ್ರಮಣಗಳೂ ಗಾರ್ಮೆಂಟ್ಸ್ ಮಹಿಳೆಯ ಮೇಲಾಗುವ ಪರಿಯನ್ನು ಚಿತ್ರಿಸುತ್ತದೆ. (ಹೆಸರು: ಮಂಗಳ, ವಯಸ್ಸು: ೪೨, ಊರು: ಮಂಡ್ಯ ಜಿಲ್ಲೆ, ವಿದ್ಯಾರ್ಹತೆ : ೬ನೇ, ಜಾತಿ: ನಾಯಕರು)[೨೩]

೫.೨.೨೪ ತಿಮ್ಮರಾಜಮ್ಮ ಪ್ರಕರಣ

ನಿರೂಪಣೆ

ಕೇವಲ ಹತ್ತನೇ ತರಗತಿ ಓದಿರುವ ನನಗೆ ಕೆಲಸವೇ ಜೀವನದ ಆಧಾರ. ಎಲ್ಲಾ ಕಾರ್ಖಾನೆಗಳಲ್ಲಿ ಕಾರ್ಮಿಕರಿಗೆ ಆಡಳಿತ ವರ್ಗವು ನೀಡುವ ಕಿರುಕುಳದ ಜೊತೆಗೆ ನನ್ನಂತ ಕಾರ್ಮಿಕರ ವೈಯಕ್ತಿಕ ಜೀವನವು ದುರಂತಗಳಿಂದಲೇ ಕೂಡಿದೆ. ನಾನು, ನನ್ನ ಗಂಡ ಹಾಗೂ ಹಲವು ರೋಗಗಳಿಂದ ಬಳಲುತ್ತಿರುವ ನನ್ನ ಮಗ. ಇದು ನನ್ನ ಸಂಸಾರ. ನನ್ನ ಗಂಡ ಗಾಡಿಯಲ್ಲಿ ಈರುಳ್ಳಿ ವ್ಯಾಪಾರ ಮಾಡುತ್ತಾರೆ. ನನ್ನ ಮಗನಿಗೆ ಯಾವ ಖಾಯಿಲೆ ಇಲ್ಲ ಅಂತ ಹೇಳಲಿ, ಅವನಿಗೆ ಟಿ.ಬಿ. ಪೀಟ್ಸ್, ಇರುಳುಗುರುಡು, ಗುದದ್ವಾರದ ಬಳಿ ತೊಂದರೆ, ತೊಡೆಗಳಲ್ಲಿ ದುರ್ಮಾಂಸ, ವಯಸ್ಸಿಗೆ ಮೀರಿದ ದೇಹದ ಬೆಳವಣಿಗೆಗಳಿವೆ. ಇವನ್ನು ಈ ರೋಗಗಳಿಂದ ಗುಣವಾಗಲು ನಾವು ತೋರಿಸಿದ ಡಾಕ್ಟರುಗಳಿಲ್ಲ.

[illegible]

[illegible]

[illegible]

ಎಲ್ಲರೂ ಇದು ಹುಟ್ಟಿನಿಂದ ಬಂದ ಕಾಯಿಲೆಯಾದ್ದರಿಂದ ಏನೂ ಮಾಡಲು ಸಾಧ್ಯವಿಲ್ಲವೆಂದು ಕೈಚೆಲ್ಲಿದರು. ಆದರೆ ಈ ವೇಳೆಗೆ ನಾನು ಕಂಡ ಕಡೆ ೧೦% ಬಡ್ಡಿಗೆ ಸಾಲವನ್ನು ಪಡೆದು, ಅದರ ಉರುಳಿಗೆ ಸಿಕ್ಕು ನರಳತೊಡಗಿದೆ. ನಂತರದ ದಿನಗಳಲ್ಲಿ ಚರ್ಚಿನ ಫಾದರ್ ಒಬ್ಬರ ಪರಿಚಯವಾಗಿ ಅವರ ಅಕ್ಕರೆಯ ನೆರಳಲ್ಲಿ ನನ್ನ ಮಗ ಈಗ ಸ್ವಲ್ಪ ಸುಧಾರಿಸಿದ್ದಾನೆ. ಅದರೆ ಇತ್ತ ನನ್ನ ಬೇರೆ ಧರ್ಮದ ಆರಾಧನೆಯಿಂದ ಮನೆಯಲ್ಲಿ ನೆಮ್ಮದಿ ಇಲ್ಲವಾಯಿತು. ಏನಾದರೂ ಸರಿ, ಮಗನ ಚೇತರಿಕೆಗಾಗಿ ನಾನು ತಿಂಗಳೆಲ್ಲಾದುಡಿದು ಸಾಲ ಕೊಟ್ಟವರ ಕೈಗೆ ಅಕೌಂಟ್ ಬುಕ್ ಒಪ್ಪಿಸಿದ್ದೆ. ಈ ಮಧ್ಯೆ ಬಹಳ ಒಳ್ಳೆಯ ಸ್ನೇಹಿತರೆಂದು ನಂಬಿ ಒಬ್ಬರಿಗೆ ಸಾಲ ಪಡೆಯಲು ಜಾಮೀನು ಹಾಕಿದೆ. ಅದರೆ ಅವರು ಕೈಕೊಟ್ಟು ಓಡಿಹೋದರು, ಹೀಗೆ ಸಾಲದ ಮೇಲೆ ಸಾಲದ ಹೊರೆ ಬೀಳತೊಡಗಿತು. ಸಂಸಾರ ನಿರ್ವಹಣೆ ಕಷ್ಟವಾಗಿ ತಾಯಿ ಮನೆ ಸೇರಿದೆವು.

ಈ ನಡುವೆ ಮುನ್ನಡೆ ಸಂಘಟನೆಯ ಜೊತೆಗೆ ಒಡನಾಟ ಬೆಳೆಯಿತು. ಆದರೆ ಸಂಘಟನೆಗಳ ಮೂಲಕ ನಾವು ಮಾಡುವ ಹೋರಾಟ, ನಮಗಲ್ಲದಿದ್ದರೂ ನಮ್ಮ ಮುಂದಿನ ಪೀಳಿಗಗೆ ಸಹಾಯ ಮಾಡುತ್ತದೆ. ಎಂದು ನಂಬಿ ಅದರಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಕಾರ್ಮಿಕರು ಸಂಘಟಿತರಾಗುತ್ತಿದ್ದ ಸೂಚನೆ ದೊರೆತ ಆಡಳಿತವರ್ಗ ಈ ಸಂಘಟನೆಯಾಗಲು ನಾನೇ ಕಾರಣ. ಎಂದು ನನ್ನನ್ನು ಕೆಲಸದಿಂದ ತೆಗೆದುಹಾಕಲು ಯೋಜನೆ ರೂಪಿಸಿತು. ನನ್ನನ್ನು ಕ್ಯಾಬಿನ್‌ಗೆ ಕರೆದು ಕಾರ್ಖಾನೆಯಲ್ಲಿ ರಾಜಕೀಯ ಮಾಡುತ್ತಿದ್ದೀಯಾ ಎಂದು ಅರೋಪಿಸಿ ರಾಜಿನಾಮೆ ನೀಡಲು ಆಗ್ರಹಿಸಿದರು. ನಾನು ಸಾಧ್ಯವಿಲ್ಲ ಎಂದದ್ದಕ್ಕೆ ನನ್ನ ಕುಟುಂಬದ ಮೂಲಕ ಒತ್ತಡ ಹೇರಿಸಿದರು. ಕಡೆಗೂ ಅವರ ನಾಟಕೀಯತೆಯಲ್ಲಿ ರಾಜಿನಾಮೆ ನೀಡಲೇ ಬೇಕಾಯ್ತು.

ವಿಶ್ಲೇಷಣೆ

ಪದವಿಧರರಾದರೂ ಇಂದಿನ ದಿನ ಕೆಲಸ ಪಡೆಯುವುದು ತೀರಾ ಸಂಕೀರ್ಣತೆಯನ್ನು ಒಡ್ಡುತ್ತಿದೆ. ಅದರಲ್ಲಿಯು ಎಸ್.ಎಸ್.ಎಲ್.ಸಿ ಮುಗಿಸಿದರೂ ಅದು ಅನಕ್ಷರತೆಯೆಂಬಂತಿದೆ. ಯಾವುದೇ ನಿಗದಿತ ವಿದ್ಯಾರ್ಹತೆಯನ್ನು ಬಯಸದ ಗಾರ್ಮೆಂಟ್ಸ್‌ಗಳಲ್ಲಿ ಸಿಗುವ ಕೆಲಸವೆಂದು ಫೀಲ್ಡ್‌ವರ್ಕರ್ ಆಗಿ ಕೆಲಸ ಮಾಡುತ್ತಿದ್ದಾರೆ. ಅಡಳಿತ ವರ್ಗ ಕಿರುಕುಳ ನೀಡುವುದು, ಅನುಭವಿಸುವುದು ಸರ್ವೇ ಸಾಮಾನ್ಯವೆಂಬಂತೆ ಹೇಳಿಕೊಂಡಿದ್ದಾರೆ. ಗಾರ್ಮೆಂಟ್ಸ್ ಎಂದರೆ ಸಮಸ್ಯೆ, ಕಿರುಕುಳಗಳಿರುವುದು ಸಹಜವೆಂಬುದನ್ನು ಹೊರಹಾಕುತ್ತದೆ.

ಸಂಸಾರದಲ್ಲಿರುವ ಬಡತನ, ಮಗನಿಗಿರುವ ಕಾಯಿಲೆಗಳ ನಿವಾರಣೆಗಾಗಿ ಮಾಡಿರುವ ಸಾಲದಿಂದ ಮುಕ್ತರಾಗಲು ಗಾರ್ಮೆಂಟ್ಸ್ ಕೆಲಸಕ್ಕೆ ಸೇರಿದ್ದು, ದಿನಂಪ್ರತಿ ದುಡಿದು ಸಾಲ ತೀರಿಸಿದ್ದಾರಾದರೂ ಯಾವುದೋ ನಂಬಿಕೆಯಿಂದ ಸಾಲ ಕೊಡಿಸಲು ಸಾಕ್ಷಿ ಹಾಕಿ ಅದರಿಂದ ಮೋಸಹೋಗಿ ಮತ್ತೆ ಸಾಲದ ಸುಳಿಗೆ ಸಿಲುಕಿ ದುಡಿಯುತ್ತಿದ್ದಾರೆ.

ಆದರೆ ಗಾರ್ಮೆಂಟ್ಸಗಳಲ್ಲಿ ನಡೆಯುವ ಹಿಂಸೆ-ಕಿರುಕುಳ ವಿರುದ್ಧ ದನಿಯೆತ್ತಲು ಅವರು ಸಂಘಟನೆಯ ಒಡನಾಟದಿಂದ ಹೋರಾಟಕ್ಕೆ ಮುಂದಾಗುತ್ತಿದ್ದಾರೆಂದು, ಮಾಹಿತಿಯನ್ನು ಸಂಗ್ರಹಿಸಿದ ಮಾಲೀಕರು ಅವಳಿಗೆ ರಾಜಕೀಯದ ಆರೋಪವನ್ನು ಹೋರಿಸಿ, ಕೆಲಸದಿಂದ ತೆಗೆದು ಹಾಕುವ ಬದಲು, ಕೆಲಸ ಬೇಡವೆಂದು ರಾಜಿನಾಮೆ ಕೊಡಲು ಒತ್ತಾಯಿಸಿದ್ದನ್ನು ಪ್ರತಿಭಟಿಸಿದ್ದಕ್ಕೆ, ಅವಳ ಮೆಲೆ ಅನ್ಯೈತಿಕತೆಯ ಪಟ್ಟಿ ಹೋರಿಸಿ ಕುಟುಂಬಕ್ಕೆ ಸುಳ್ಳು ಮಾಹಿತಿ ಹೇಳಿ ಅವಳೂ ರಾಜಿನಾಮೆ ಕೊಡುವಂತೆ ಮಾಡುತ್ತಾರೆ. ಸಮಾಜ ವ್ಯವಸ್ಥೆಯಲ್ಲಿ ಗಂಡಿಗಿರದ ಆದರ್ಶಶೀಲ, ಚಾರಿತ್ರ್ಯದ ಪ್ರಶ್ನೆಗಳು, ಹೆಣ್ಣಿನ ಸಂದರ್ಭದಲ್ಲಿರುವುದರಿಂದ ಅವಳ ಶಿಕ್ಷಣ, ಸಾಧನೆ, ಕೆಲಸ ಇತ್ಯಾದಿಯಾಗಿ ಅವಳ ಒಟ್ಟು ಬದುಕಿನ ಮೇಲೆ ಕರಾಳ ಛಾಯೆಯನ್ನು ಮೂಡಿಸುವುದರೊಂದಿಗೆ, ಅವಳ ಚಲನಶೀಲತೆಯನ್ನು ನಿರ್ಭಂದಿಸುತ್ತದೆ. ಅದರಲ್ಲಿಯೂ ಗಾರ್ಮೆಂಟ್ಸ್‌ನಂತಹ ಅಸಂಘಟಿತವಲಯದಲ್ಲಿ ಯಾವುದೇ ಭದ್ರವಾದ ಕಾನೂನುಗಳಾಗಲಿ, ಸಮಸ್ಯೆಯು ಹೊರಹಾಕುವಂತಹ ಪರಿಸ್ಥಿತಿಗಳಿಲ್ಲ. ಮೊದಲಾಗಿ ಸಂಘಟಿತರಾಗಲು ಸಾಧ್ಯವಾಗುವುದಿಲ್ಲ. ಪ್ರತಿಭಟಿಸಿದರೆ ಕೆಲಸ ಕಳೆದುಕೊಳ್ಳಬೇಕಾದಂತಹ ಸಂದರ್ಭಗಳು ಹೆಚ್ಚಿವೆ. ದುಡಿಮೆಯ ಅನಿವಾರ್ಯತೆ, ಕೆಲಸದ ಅಗತ್ಯತೆ, ಮರ್ಯಾದೆಯ ಚೌಕಟ್ಟಿನಲ್ಲಿ ಗಾರ್ಮೆಂಟ್ಸ ಮಹಿಳೆಯ ಬದುಕು ನಲಗುತ್ತಿದೆಯೆಂಬುದಕ್ಕೆ ತಿಮ್ಮ ರಾಜಮ್ಮ ಉದಾಹರಣೆಯಾಗಿ ನಿಲ್ಲುತ್ತಾರೆ. (ಹೆಸರು: ತಿಮ್ಮರಾಜಮ್ಮ, ವಯಸ್ಸು:೨೨, ಊರು: ಕುಡ್ತಿನಿ, ಜಾತಿ: ಕುಂಚಟಿಗ, ವಿದಾರ್ಹತೆ :೧೦ನೇ)[೨೪]

೫.೨.೨೫ ಪಾರ್ವತಮ್ಮಳ ಪ್ರಕರಣ

ನಿರೂಪಣೆ

ನಮ್ಮ ಜೀವನ ಅನ್ನೋದು ಮಾಲೀಕರ ಕೈಯಲ್ಲಿ ಗೊಂಬೆಯಾಗಿ ಬಿಟ್ಟಿದೆ. ಏಕೆಂದರೆ ಅವರು ಯಾವಾಗ ಕೆಲಸದಿಂದ ತೆಗೆದು ಹಾಕುತ್ತಾರೊ ನಮ್ಮ ಸಂಸಾರನೇ ಬೀದಿಪಾಲು ಮಾಡ್ತಾರೊ ಸರಿಯಾಗಿ ತಿಳಿಯದಾಗಿದೆ. ಇದರಿಂದ ಮನೆ ಖರ್ಚು ನಿಭಾಯಿಸುವುದು, ಮಕ್ಕಳ ಫೀಜ್ ಕಟ್ಟಿಸುವುದು, ಮನೆ ಬಾಡಿಗೆ ರೇಷನ್, ತರಕಾರಿ ಇನ್ನಿತರ ಎಲ್ಲಾ ಅವಶ್ಯಕತೆಗಳನ್ನು ಹೇಗೆ ನಿಭಾಯಿಸುವುದು ಎಂದು ಯೋಚಿಸಿದರೆ. ಆ ಕ್ಷಣನೇ ಯಾವ ದಾರಿ ಸಾಗದೆ ನಾವೇ ಗತಿ ಎಂದು ಪ್ರಯತ್ನಮಾಡಿರುವುದು ಉಂಟು. ಪ್ರತಿ ತಿಂಗಳು ಸಂಬಳದಲ್ಲಿ ಪಿ.ಪಿಫ್. ಕಟ್ತಿವಿ ಅಂತ ಹೇಳಿ ಸಂಬಳ ಕಟ್ ಮಾಡ್ತಾರೆ. ಆದರೆ ಅದನ್ನು ಯಾವುದು ಕಟ್ಟಿರುವುದೇ ಇಲ್ಲ. ಇದ್ದಕ್ಕಿದ್ದ ಹಾಗೆ ಫ್ಯಾಕ್ಟ್ರಿ ಮುಚ್ಚುವುದರಿಂದ ಯಾವುದು ಏನನ್ನು ಕೇಳಲು ಆಗುವುದಿಲ್ಲ. ಬೇರೆ ಫ್ಯಾಕ್ಟ್ರಿ ಅಥವಾ ಅದರ ಇನ್ನೊಂದು ಬ್ರ್ಯಾಂಚ್ (ಉಪಸಂಸ್ಥೆ) ಗೆ ಸೇರಲು ಹೇಳುತ್ತಾರೆ. ಅದು ನಮಗೆ ದೂರ ಇರುವ ಕಾರಣ ಸೇರಲು ಆಗುವುದಿಲ್ಲ. ದುಡಿದಿರುವ ತಿಂಗಳೂ ಸಂಬಳ ಕೂಡ ಕೊಡದೆ ನಾಯಿ ತಿರುಗುವ ಹಾಗೆ ಆ ವಾರ ಬಾ ಈ ವಾರ ಬಾ ಎಂದು ತಿರ್‍ಗುಸ್ತಾನೆ ಇರ್ತಾರೆ. ಸೆಕ್ಯುರಿಟಿ ಗಾರ್ಡ್ ಗೇಟ್ ಕೂಡ ತೆಗೆಯದ ಬೈಯ್ದು ಕಳಿಸ್ತಾರೆ. ನಮಗೆ ಇಲ್ಲಿ ಕನಿಷ್ಠ ವೇತನ ಕೂಡ ನೀಡುವುದಿಲ್ಲ. ಬೋನಸ್ ಕೊಡದಿರುವುದು, ಹೇಳದೆ ಕೇಳದೆ ರಜೆ ಘೋಷಿಸಿ ಅರ್ಧ ಸಂಬಳ ನೀಡುತ್ತಿರುವುದು.

ವಿಶ್ಲೇಷಣೆ

ನಲವತ್ತು ವರ್ಷದ ಪಾರ್ವತಮ್ಮ ಸುಮಾರು ೧೫, ೨೦ ವರ್ಷದಿಂದ ಗಾರ್ಮೆಂಟ್ಸ್ ಕೆಲಸಕ್ಕೆ ಸೇರಿದ್ದಾರೆ. ಇಲ್ಲಿ ಇವರ ಕೆಲಸ ಬಟನ್ ಹಚ್ಚುವುದು. ಕ್ಷೇತ್ರಕಾರ್ಯದಲ್ಲಿ ಇವರನ್ನು ಸಂದರ್ಶನಕ್ಕೊಳಪಡಿಸಿದಾಗ ಇವರಿಂದ ದೊರೆತ ಮಾಹಿತಿಯಿಂದ ಇವರದು ಇದು ಮೂರನೆಯ ಫ್ಯಾಕ್ಟ್ರಿ. ಈಗಾಗಲೇ ಎರಡು ಫ್ಯಾಕ್ಟ್ರಿಗಳಲ್ಲಿ ವರ್ಷಾನುಗಟ್ಟಲೇ ದುಡಿದ್ದು ಮಾಲೀಕರು ಹೇಳಿದಂತೆ ಬರುವ ಸಂಬಳದಲ್ಲಿ ಪಿ. ಎಫ್ ದುಡ್ಡು ಅಂತ ಕಟ್ ಮಾಡಿಕೊಂಡಿದ್ದು ಯಾವುದನ್ನು ಮರಳಿ ಕೊಟ್ಟಿಲ್ಲ. ವರ್ಷಗಳವರೆಗೆ ದುಡಿಸಿಕೊಂಡು ಎರಡೆರಡು ತಿಂಗಳುಗಟ್ಟಲೇ ಸಂಬಳ ನೀಡದೇ ಈ ಫ್ಯಾಕ್ಟ್ರಿ ಹಾನಿಯಲ್ಲಿದೆಯೆಂದು ತೋರಿಸುತ್ತಾರೆ.

ಅಸಂಘಟಿತ ವಲಯದಲ್ಲಿನ ಮಹಿಳೆಯರು ಕೆಲಸಕ್ಕೆ ಸೇರುವುದಕ್ಕೆ ಯಾವುದೇ ಅರ್ಹತೆಗಳಿರುವುದಿಲ್ಲ. ಹಾಗಾಗಿ ಅಶಿಕ್ಷಿತರಾದ ಪಾರ್ವತಮ್ಮ ಇದು ಸುಲಭವಾಗಿ ದೊರೆಯುವ ಕೆಲಸವೆಂದು ಸೇರಿದ್ದು. ಕೆಲಸಕ್ಕೆ ಸೇರಿದ ಮೊದಲ ಹಂತದಲ್ಲಿ ಸಂಬಳ ಸರಿಯಾಗಿ ಕೊಡುವ ಮೂಲಕ ಹೆಣ್ಣುಮಕ್ಕಳನ್ನು ಸೇರಿಸಿಕೊಳ್ಳುವತ್ತ ಗಾರ್ಮೆಂಟ್ಸ್‌ಗಳು ಮುಂದಾಗಿವೆ. ಇದೇ ಗಾರ್ಮೆಂಟ್ಸ್‌ಗಳಲ್ಲಿ ಪುರುಷರ ಕೆಲಸಗಾರರ ಸಂಖ್ಯೆ ಕಡಿಮೆಯಿದ್ದುದಕ್ಕೆ ಕಾರಣ ಅವರಿಗೆ ಹೆಚ್ಚು ಸಂಬಳ ಕೊಡಬೇಕಾಗುತ್ತದೆ. ಆದ್ದರಿಂದ ಅವರಿಗೆ ಕೊಡುವ ಸಂಬಳದಲ್ಲಿ ಇಬ್ಬರೂ ಮಹಿಳೆಯರ ದುಡಿಮೆಗೆ ಕೊಡಬಹುದು. ಬಂಡವಾಳ ಶಾಹಿ ವ್ಯವಸ್ಥೆ ಹೆಣ್ಣನ್ನು ಯಾವ ಮಟ್ಟಕ್ಕೆ ದುರುಪಯೋಗ ಪಡಿಸಿಕೊಳ್ಳುತ್ತದೆ ಎಂಬುದು ಈ ಪ್ರಕರಣದಿಂದ ತಿಳಿಯಬಹುದಾಗಿದೆ.

ಹಾಗೆಯೇ ಹೆಣ್ಣುಮಕ್ಕಳಾದರೆ ಹೇಳಿದಂತೆ ಕೆಲಸವಮಾಡಿಕೊಡುತ್ತಾರೆ. ಹೆದರುತ್ತಾರೆ. ಸಂಘಟಿತವಾಗುವುದಿಲ್ಲ. ಪದೇ ಪದೇ ಟೀ, ಕಾಫಿಯೆಂದು ಹೊರಗಡೆ ಹೋಗುವುದಿಲ್ಲ. ಇದರಿಂದ ಕಡಿಮೆ ಕೂಲಿಯಲ್ಲಿ ಹೆಚ್ಚಿನ ಲಾಭ ಪಡೆಯುವ ಉದ್ದೇಶವನ್ನು ಹೊರಹಾಕುತ್ತದೆ. ಪಾರ್ವತಮ್ಮನಿಗೆ ಹಿಂದಿನೆರಡು ಫ್ಯಾಕ್ಟ್ರಿಗಳಲ್ಲಿ ಮೂರು-ನಾಲ್ಕು ತಿಂಗಳ ಸಂಬಳ ಹಾಗೂ ಪಿ.ಎಫ್ ಹಣ ನೀಡದಿರುವುದು. ಹತ್ತಾರು ಸಾರಿ ಅಡ್ಡಾಡಿದರು, ಆ ಸಂಬಳದ ಹಣ, ಇತರೆ ದುಡ್ಡು ಕೊಡದೆ, ಫ್ಯಾಕ್ಟ್ರಿ ಗೇಟಿನ ಒಳಗಡೆಯೂ ಬಿಡದೆ ಹೆದರಿಸಿ ಕಳಿಸಿರುವ ಈ ಪ್ರಕರಣ ಬಂಡವಾಳ ಶಾಹಿಗಳ ಉದ್ದೇಶವನ್ನು ಲಾಭದಾಯಕ್ಕಾಗಿ ಮಾಡುವ ಶೋಷಣೆಯನ್ನು ಸ್ಪಷ್ಟಪಡಿಸುತ್ತದೆ. (ಹೆಸರು: ಪಾರ್ವತಮ್ಮ, ವಯಸ್ಸು :೪೫, ಊರು: ಹೆಬ್ಬೂಳ ಜಾತಿ:ಲಿಂಗಾಯತ)[೨೫]

೫.೨.೨೬ ಗೀತಾಳ ಪ್ರಕರಣ

ನಿರೂಪಣೆ

ಇಪ್ಪತ್ತೈದು ವಯಸ್ಸಿನ ಹದಿಹರೆಯದ ಹುಡುಗಿ ಒಂಬತ್ತನೆ ತರಗತಿಯಲ್ಲಿ ತಂದೆ ತಾಯಿ ಒತ್ತಡದಿಂದ ಮದುವೆ ಆಗಿದ್ದಳು., ನನ್ನ ಮತ್ತು ಗಂಡನ ವಯಸ್ಸಿಗೆ ೧೫ ವರ್ಷ ವ್ಯತ್ಯಾಸ ಆದರೂ ನಮ್ಮ ತಂದೆಯ ಒತ್ತಡದಿಂದ ಮದುವೆ ಮಾಡಿಕೊಂಡೆ. ನಮ್ಮ ತಂದೆ ಇನ್ನೊಂದು ಮದುವೆ ಆಗಿದ್ದು

[illegible]

[illegible]

[illegible]

[illegible]

[illegible]

[illegible]

ಅವರಿಗೆ ಒಬ್ಬ ಮಗ ಇದ್ದಾನೆ. ಅವರ ಕರ್ತವ್ಯ ನಿರ್ವಹಿಸಲು ಸಮಾಜದಲ್ಲಿ ಸಂಬಂದಿಗಳು ಗುರುಹಿರಿಯರ ಸಮ್ಮುಖದಲ್ಲಿ ಬಲವಂತದಿಂದ ಏರ್ಪಟ್ಟಿತು. ಅವಳಿಗೆ ಮದುವೆಯಾಗಲು ಇಷ್ಟ ಇಲ್ಲದಿದ್ದರೂ, ತಂದೆ ತಾಯಿಗೆ ಒತ್ತಡ ಹೇರಿದ, ಮಗಳಿಗೆ ಮದುವೆಗೆ ಆಗಲು ಒಪ್ಪಿಸದಿದ್ದರೆ ಆಕೆ ನನಗೆ ಹುಟ್ಟೆ ಇಲ್ಲ. ಅಂತ ಹೇಳಿ ವಿವಾಹ ಆಗಲು ಒಪ್ಪಿಸುತ್ತಾನೆ. ಆದರೆ ಮದುವೆ ಆದ ನಂತರ ಅತ್ತೆ ಮೈದುನರ ಕಾಟದಿಂದ ಅತಿಯಾದ ಹಿಂಸೆಗೆ ಒಳಪಡಲು ಶುರುವಾಯಿತು. ಎಷ್ಟು ಸಾರಿ ಅತ್ತೆ ಮೈದುನರು ಹೊಡೆದು ಹೊರಹಾಕಿದ್ದಾರೆ. ಒಂದು ಸಾರಿ ಗರ್ಭಿಣಿ ಇದ್ದಾಗೂ ಹೊಡೆದು ಇಡೀ ರಾತ್ರಿಯಿಂದ ಬೆಳಗಾಗುವ ತನಕ ಹೊರ ಕೂಡಿಸಿದ್ದರು. ಏನಿಲ್ಲಾ ಅಂದರು ಹತ್ತು ವರ್ಷ ಸಹಿಸಿಕೊಂಡಿದ್ದೇನೆ. ನಾಲ್ಕು ವರ್ಷ ನನ್ನ ಗಂಡನಿಗೆ ಫ್ಯಾಕ್ಟ್ರಿಯಿಂದ ದುಡಿದು ಕೊಟ್ಟಿದಿನಿ. ಅದರಲ್ಲಿ ನನಗೆ ಐದು ಪೈಸೆನೂ ದುಡ್ಡು ಕೊಡ್ತಿದ್ದಿಲ್ಲ. ಆದರೆ ಇತ್ತೀಚಿಗೆ ಒಂದು ವರ್ಷ ಆಯಿತು ಗಂಡನ ಬಿಟ್ಟು ಬಂದು ಒಂಟಿಯಾಗಿ ನನ್ನ ಮಗಳ ಜೊತೆ ಜೀವನ ಮಾಡುತ್ತಿದ್ದೇನೆ. ನನ್ನ ನೆರವಿಗೆ ನಿಂತು ಹೊರಟ ಮಾಡಿದವರಿಗೆಲ್ಲಾ ಅವನು ಇಟ್ಟುಕೊಂಡಿಯಾ, ಇವನು ಇಟ್ಟುಕೊಂಡಿಯ ಅವನ ಜೊತೆಗೆ ಇದಿಯಾ ಅದಕ್ಕೆ ನಿಂತು ಜಗಳ ಮಾಡ್ತಾರೆ. ಅಂತ ಬಾಯಿಗೆ ಬಂದ ಹಾಗೆ ಬೈಯ್ಯುತ್ತಾರೆ. ಹಾಗಾಗಿ ನನ್ನ ಗಂಡನ ಜೊತೆ ಸಂಸಾರ ಮಾಡಲು ಇಷ್ಟ ಇಲ್ಲದೆ ಹೊರಗಡೆ ಬಂದು ಜೀವನ ಮಾಡಲು ಶುರುಮಾಡಿದೆ. ಆದರೂ ಜಗಳ ತಪ್ಪಿದ್ದಲ್ಲ. ಆವಾಗವಾಗ ಬರೋದು ಜಗಳ ಮಾಡುವುದು ಇದ್ದೆ ಇದೆ. ಒಂದು ಸಾರಿ ತಾಯಿ ಅಥವಾ ಯಾರು ಹೇಳಿಕೊಟ್ಟಿದಾರೋ ಗೊತ್ತಿಲ್ಲ ಮನೆಗೆ ಬಂದು ಜಗಳ ಆಡಿ ನನ್ನ ಮೈಮೇಲೆ ಸೀಮೆ ಎಣ್ಣೆ ಹಾಕಿ ಬೆಂಕಿ ಹಚ್ಚಲು ಪ್ರಯತ್ನಿಸಿದರು ತಪ್ಪಿಸಿಕೊಳ್ಳಲು ಎಷ್ಟೆ ಪ್ರಯತ್ನ ಮಾಡಿದರು ಬಿಡದೆ ಇದ್ದಾಗ ಅಲ್ಲೆ ಮಲಗಿಕೊಂಡಿದ್ದ ನನ್ನ ಮಗಳು ಬಾಯಿಮಾಡಿ ಅಳುತ್ತಾ ಹೊರಗೆ ಹೊರಗೋಡಿದಾಗ ಓಣಿಯಲ್ಲಿರುವ ಜನ ಎಲ್ಲ ಬಾಗಿಲು ದೂಗಿ ನಾ ಸಾಯುವುದನ್ನು ತಪ್ಪಿಸಿದರು. ನಂತರ ಪೋಲಿಸ್ ಕೇಸ್ ಆಯಿತು. ಅವರಿಗೆ ಸಿಕ್ಕಪಟ್ಟೆ ಹೊಡೆದರು. ನಂತರ ಅವರ ತಮ್ಮಂದಿರು ಬಂದು ಬಿಡಿಸಿಕೊಂಡರು. ಈಗಲೂ ಆ ಸಂಬಂಧದ ಜಗಳ ಬಗೆಹರಿದಿಲ್ಲ. ಇನ್ನು ಫ್ಯಾಕ್ಟ್ರಿ ಬಗ್ಗೆ ಹೇಳುವುದಾದರೆ ಮಾಲೀಕರು ಫ್ಯಾಕ್ಟ್ರಿಯಲ್ಲಿ ಒಬ್ಬರಿಗೆ ಒಂದೊಂದು ತರಹ ನಡೆಸಿಕೊಳ್ಳುತ್ತಾರೆ. ಹಾಗೆ ಸಂಬಳ ಕೂಡನು ಕೆಲಸಕ್ಕೆ ಸೇರಿಸಿಕೊಳ್ಳುವಾಗಲೇ ಕೆಲವೊಂದು ಕರಾರನ್ನು ಹಾಕುತ್ತಾರೆ, ನಾವು ಕೊಡುವ ಸಂಬಳ ಯಾರಿಗೂ ಗೊತ್ತಾಗಬಾರದು ಎಂಬ ಅಭಿಪ್ರಾಯವನ್ನು ಮಂಡಿಸುತ್ತಾರೆ. ಅಲ್ಲಿ ಎಷ್ಟು ಕೆಲಸ ಮಾಡುತ್ತಾರೆ, ಯಾರು ಹೆಚ್ಚು ವೇಗವಾಗಿ ಮಾಡುತ್ತಾರೊ ಅವರಿಗೆ ಸಂಬಳ ಜಾಸ್ತಿ ಅದರಲ್ಲಿ ನಾವಾಗಲಿ ಕೇಳೊ ತನಕ ಸಂಬಳನೇ ಹೆಚ್ಚು ಮಾಡೊಲ್ಲ. ಎಷ್ಟೋ ಜನ ವರ್ಷ ಆದರೂ ಅದೇ ಸಂಬಳದಲ್ಲಿ ದುಡಿತಿದಿರಾ. ನಮಗೆ ಟಾಯ್ಲೆಟ್ ರೂಮ್ ವ್ಯವಸ್ಥೆ ಕೂಡ ಮಾಡಿಲ್ಲ ಹೊರಗಡೆನೆ ಹೋಗಬೇಕು. ನಮಗೆಲ್ಲಾ ಹೋಗೋಕೆ ಅಷ್ಟು ಇಷ್ಟು ವೇಳೆ ಆಗಲ್ಲ. ಹಾಗಾಗಿ ನಾನು ಊಟ ಮಾಡುವುದಾಯಿತು, ಹೆಚ್ಚು ನೀರು ಕುಡಿಯುವುದಾಯಿತು ಯಾವುದು ಹೆಚ್ಚು ಮಾಡಲ್ಲ ರೀ, ಎಷ್ಟೇ ಕಷ್ಟ ಆದರೂ ಮನೆಗೆ ಹೋದ ಮೇಲೆ ಶೌಚಾಲಯಕ್ಕೆ ಹೋಗ್ತಿನಿ. ಮಾಲಿಕ ಅಂತೂ ಒಬ್ಬರೊಬ್ಬರನ್ನು ಒಂದೊಂದು ತರಹ ನಡೆಸಿಕೊಳ್ಳುತ್ತಾರೆ. ನೋಡೋಕೆ ಚಂದಿದ್ದರೆ ಸಾಕು ಅವರನ್ನು ನೋಡೋದೆ ಬೇರೆ. ಸಂಬಳ ಕೊಡದೆ ಬೇರೆ. ನಾಲ್ಕು ಗೋಡೆ ಮಧ್ಯ

ಗಾಳೀ ಬೆಳಕು ಇಲ್ಲದೆ ಕತ್ತಲ ಕೋಣೆಗೆ ಕೂಡಿ ಹಾಕಿದಾಂಗ ಹಾಕಿ ಬರಿ ಧೂಳಿನಲ್ಲಿ ಕೆಲಸ ಮಾಡಿ ಮಾಡಿ ಇತ್ತೀಚೆಗೆ ಉಸಿರು ಗಟ್ಟಿದಂಗಾಗಿದೆ. ಜೊತೆಗೆ ಹೊಟ್ಟೆನೋವು ಜಾಸ್ತಿ ಆಗಿಬಿಟ್ಟಿದೆ. ಡಾಕ್ಟರ್ ಹತ್ತಿರ ತೋರಿಸಿಕೊಂಡರೆ ಸರಿಯಾದ ಸಮಯಕ್ಕೆ ಊಟ ನೀರು ಕುಡಿಯದಿದ್ದರೆ ಅಪಾಂಡೆಕ್ಸ್ ಮಾಡಿಸಬೇಕಾಗುತ್ತದೆ ಅಂತ ಹೇಳಿದ್ದಾರೆ, ನಮಗೆ ಕೊಡುವ ಸಂಬಳನೆ ಕಡಿಮೆ ಮೂರೊಪ್ಪತ್ತಿನ ಊಟಕ್ಕೂ ಸಾಕಗದೆ ಇದ್ದಾಗ, ಒಳ್ಳೆಯ ಡಾಕ್ಟರ್ ಹತ್ತಿರ ತೋರಿಸಿಕೊಂಡು ಔಷಧಿ, ಗುಳಿಗೆ ತೆಗೆದುಕೊಳ್ಳಲು ದುಡ್ಡು ಇಲ್ಲ. ಜೀವ ಇರೋತನಕ ದುಡಿದು ಜೀವನ ಮಾಡಬೇಕು, ನಮ್ಮ ಹಣೆಬರಹನೇ ಇಷ್ಟೇ ರೀ. ಬಂದಿದ್ದನ್ನೆಲ್ಲ ಅನುಭವಿಸಬೇಕಲ್ವಾ.

ವಿಶ್ಲೇಷಣೆ

ಮೊದಲಿನಿಂದಲೂ ಈ ಸಾಂಪ್ರಾದಾಯಿಕ ಚೌಕಟ್ಟು ಗಂಡು ಹೆಣ್ಣನ್ನು ಬೆಳೆಸುವುದರಿಂದ ಹಿಡಿದುಕೊಂಡು ಮದುವೆ ಆಗಿ ಸಾಯುವ ತನಕನು ಹೆಣ್ಣಿನ ಸಂದರ್ಭದಲ್ಲಿ ಲಿಂಗಭೇಧವನ್ನು ಅನುಸರಿಸುವುದನ್ನು ಕಾಣಬಹುದು. ಉದಾಹರಣೆ:- ಗೀತಾ ಎಂಬ ಗಾರ್ಮೆಂಟ್ಸ್ ಮಹಿಳೆಯನ್ನು ತೆಗೆದುಕೊಂಡಾಗ ಚಿಕ್ಕಂದಿನಿಂದಲೂ ವ್ಯವಸ್ಥೆ ಅವಳ ಮೇಲೆ ಹೇರಿರುವ ನಿಯಂತ್ರಣವನ್ನು ತಿಳಿದುಕೊಳ್ಳಬಹುದಾಗಿದೆ. ಒಬ್ಬ ತಂದೆಯಗಿ ತನ್ನ ಹೆತ್ತ ಮಗಳ ಮದುವೆ ಮಾಡಿಕೊಡಬೇಕೆಂಬ ಕೇವಲ ಕರ್ತವ್ಯಕ್ಕಾಗಿ ಮತ್ರ ಅವಳ ಜೀವನವನ್ನ ಹಾಳುಮಾಡಿದ, ಆದರೆ ಅವಳದೆ ಆದ ಆಶೆ ಆಕಾಂಕ್ಷೆಗಳಿಗೆ ಯಾವುದೇ ಬೆಲೆಯಿಲ್ಲದೆ ತಂದೆ ಒಪ್ಪಿದ ಎನ್ನುವ ಒಂದು ಒಂದೇ ಕಾರಣಕ್ಕೆ ವಿವಾಹವಾದಳು. ಅಂದ್ರೆ ವ್ಯವಸ್ಥೆಯಲ್ಲಿ ಹೆಣ್ಣು ಹುಟ್ಟಿದ ಮೇಲೆ ಮದುವೆ ಆಗಲೇಬೇಕು ಆದ್ರೆನೆ ಮೋಕ್ಷ ಎಂಬ ಸಾಂಪ್ರಾದಾಯಿಕ ಮನಸ್ಥಿತಿಯನ್ನು ಏರ್ಪಡಿಸಿ ಚಿಕ್ಕವಯಸ್ಸಿನಲ್ಲಿ ಸಂಸಾರದ ಭಾರ ಹೊತ್ತುಕೊಂಡು ಪಡಬಾರದ ಕಷ್ಟಗಳನ್ನೆಲ್ಲಾ ಅನುಭವಿಸುತ್ತಿದ್ದಾಳೆ. ಪ್ರಧಾನ ಧಾರೆಯ ವ್ಯವಸ್ಥೆಯು ಎರಡು ಕಡೆನೂ ಅವಳ ಮೇಲೆ ನಿರ್ಬಂಧ ಹೇರಿ ಗಂಡನ ಮನೆಯಲ್ಲಿ ಸ್ವತಃ ಅವಳೆ ದುಡಿದು ತಂದಿರುವ ಹಣವನ್ನು ತನಗೋಸ್ಕರ ಒಂದು ರೂಪಾಯಿನೂ ಖರ್ಚಿಗೆ ತೆಗೆದುಕೊಳ್ಳದೆ ಸಂಪೂರ್ಣ ಸಂಬಳವೆಲ್ಲ ತನ್ನ ಗಂಡನಿಗೆ ನಾಲ್ಕು ವರ್ಷನು ಕೈಯಲ್ಲೆ ಕೊಟ್ಟಳು. ಅಂದ್ರೆ ವ್ಯವಸ್ಥೆ ಎನ್ನುವುದು ಗಂಡ ದುಡಿಯಲಿ ದುಡಿಯದೆ ಇರಲಿ ಒಟ್ಟಾರೆ ಗಂಡು, ಗಂಡಸು ಅಂದ್ರೆ ಯಜಮಾನ ಎನ್ನುವ ಮನಸ್ಥಿತಿಯನ್ನು ಸೃಷ್ಟಿಸಿ ಅವಳು ಎಷ್ಟೆ ದುಡಿದರು ದುಡಿದಿರುವ ಸಂಬಳದ ಮೇಲೆ ಯಾವುದೇ ಅಧಿಕಾರ ಇಲ್ಲ. ಇನ್ನು ಫ್ಯಾಕ್ಟ್ರಿಗೆ ಸಂಬಂಧಪಟ್ಟಂತೆ ಸಮಸ್ಯೆಯನ್ನು ಎತ್ತಿಕೊಂಡಾಗ ಅವಳ ಜೀವನ ಅಲ್ಲಿ ಕೂಡ ಒಂದು ಕ್ಷಣನೂ ವಿಶ್ರಾಂತಿ ಇಲ್ಲದೆ ಹೊಲಿಯುವುದನ್ನು ಕಾಣಬಹುದು.

ಆದರೂ ಇಲ್ಲಿ ಕೂಡ ಅವಳ ಕೆಲಸವನ್ನು ಸೇವಾವಲಯವಾಗಿ ಪರಿಗಣಿಸಿ ಕೊಡುವ, ಸಂಬಳದಲ್ಲಿ ತರತಮ್ಯವನ್ನು ಕಾಣಬಹುದು. ಅವರ ಕೆಲಸವೇನಷ್ಟು ಮುಖ್ಯವಲ್ಲ ಎಂಬ ಅಭಿಪ್ರಾಯವನ್ನು ಮಾಲೀಕರು ಕೊಡುತ್ತಾರೆ. ಅಂದ್ರೆ ಒಂದು ಪ್ಯಾಂಟ್ ಅಥವಾ ಶರ್ಟ್ ತಯಾರಾಗಬೇಕಾದರೆ ಇಬ್ಬರ ಕೆಲಸವು ಇಲ್ಲಿ ಮುಖ್ಯವಾದದ್ದೆ. ಆದರೆ ಪುರುಷನ ಕೆಲಸ ಶ್ರೇಷ್ಠತೆಯನ್ನು ಮಹಿಳೆಯ ಕೆಲಸವನ್ನು ಅಧೀನತೆಯಲ್ಲಿ

ತೋರ್ಪಡಿಸುತ್ತಾರೆ. ಹೀಗೆ ಮಹಿಳೆಗೆ ಕೊಡುವ ಸಂಬಳನೆ ಕಡಿಮೆ ಕೊಟ್ಟಾಗ ಸಂಸಾರ ನೀಗಿಸುವುದೇ ಕಷ್ಟವಾದಾಗ ಅವರ ಆರೋಗ್ಯ ಕೆಟ್ಟು ಹೋಗಿದ್ದಾಗ ಎಷ್ಟರ ಮಟ್ಟಿಗೆ ಕಾಳಜಿ ವಹಿಸಲು ಸಾಧ್ಯ. ೧೯೪೮ರ ಕಾಯ್ದೆ ಪ್ರಕಾರ ಪ್ರತಿಯೊಂದು ಕಾರ್ಖಾನೆ ಚೊಕ್ಕಟವಾಗಿರಬೆಕು. ಗಾಳಿ ಬೆಳಕಿನ ವ್ಯವಸ್ಥೆ ಸರಿಯಾಗಿರಬೇಕು. ಶೌಚಾಲಯದ ವುವಸ್ಥೆ ಇರಬೇಕು. ಇನ್ನಿತರ ಸೌಲಭ್ಯಗಳು ಕಾರ್ಮಿಕರ ಹಿತದೃಷ್ಟಿಯಿಂದ ಕಾನೂನು ಮಾಡಿದರೂ ಕೂಡ ಎಲ್ಲಿಯು ಇವು ಉಪಯೋಗ ವಾಗದೆ ಹಾಗೆ ವ್ಯವಸ್ಥೆಯನ್ನು ಸ್ವತಃ ಮಾಲಿಕರೇ ಮಾಡಿರುತ್ತಾರೆ. ಕಾರ್ಮಿಕರು ಫ್ಯಾಕ್ಟ್ರಿ ಸ್ವಚ್ಛತೆ ಇಲ್ಲದೆ ಧೂಳಿನಿಂದ ಉಸಿರಾಟದ ತೊಂದರೆಯಿಂದ ಇನ್ನು ಅನೇಕ ಕಾಯಿಲೆಗೆ ಒಳಗಾಗುತ್ತಿದ್ದಾರೆ. ಶೌಚಾಲಯದ ವ್ಯವಸ್ಥೆಯಲ್ಲಿದ್ದಕ್ಕೆ ಅನೇಕ ಕಾಯಿಲೆಗಳಿಗೆ ಒಳಗಾಗುತ್ತಿದ್ದಾರೆ. ಸಾಕಷ್ಟು ಕಾರ್ಮಿಕರಲ್ಲಿ ಗೀತಾ ಕೂಡ ಒಬ್ಬಳು. ಶೌಚಾಲಯದ ವ್ಯವಸ್ಥೆ ಇಲ್ಲದ್ದಕ್ಕೆ ಇವತ್ತಿನ ದಿನದಲ್ಲಿ ಸರಿಯಾದ ಸಮಯಕ್ಕೆ ನೀರು ಆಹಾರ ಸೇವಿಸದೆ ಅಪೆಂಡಿಸೈಟಸ್ ಅಪರೇಶನ್‌ಗಳಿಗೆ ಒಳಗಾಗುವ ಸಂದರ್ಭ ಒದಗಿ ಬಂದಿದೆ. ಏಕೆಂದರೆ ಶೀಲ ಪಾತಿವೃತ್ಯ, ಮರ್ಯಾದೆ ಇನ್ನಿತರ ಮನಸ್ಥಿತಿಯನ್ನು ಹೆಣ್ಣಿನಲ್ಲೆ ಬೆಲೆಸಿರುವ ಕಾರಣ ಆ ಮಹಿಳೆ ಎಷ್ಟೆ ಕಷ್ಟವಾದರೂ ಮನೆಗೆ ಹೋದ ಮೇಲೆನೆ ಶೌಚಾಲಯಕ್ಕೆ ಹೋಗುತ್ತೇನೆ ಎಂಬ ದೃಡಮನಸ್ಥಿತಿಗೆ ತಲುಪುವಷ್ಟು ವ್ಯವಸ್ಥೆ ರೂಪಿಸಲ್ಪಟ್ಟಿರುವುದನ್ನು ಕಾಣಬಹುದು. ಕೆಲವೊಂದು ಸಮಯದಲ್ಲಿ ಜಾತೀಯತೆನೂ ಕೆಲಸ ಮಾಡುವುದನ್ನು ಈ ಪ್ರಕರಣದಲ್ಲಿ ಕಾಣಬಹುದು. (ಹೆಸರು: ಗೀತಾ, ವಯಸ್ಸು: ೨೫, ಊರು: ಕನಕಗಿರಿ, ಜಾತಿ: ಲಿಂಗಾಯತ್, ವಿದ್ಯಾರ್ಹತೆ:ಎಸ್.ಎಸ್,ಎಲ್,ಸಿ)[೨೬]

೫.೨.೨೭ ಪುಷ್ಪಲತಾ ಪ್ರಕರಣ

ನಿರೂಪಣೆ

ನಾವು ಪ್ರೀತಿಸಿ ಮದುವೆ ಆದಿವಿ. ನಮ್ಮ ತಾಯಿ ತುಂಬಾ ವಿರೋದ ಮಾಡಿದರು ಆದರೂ ನಾನು ಕೇಳದೆ ಆತರಕ್ಕೆ ಬಿದ್ದು ಮದುವೆ ಆದೆ. ಈಗ ನನ್ನ ಜೀವನ ಒಂದೊಂದು ಕ್ಷಣವೂ ಪಶ್ಚಾತಾಪ ಪಡುವ ಸ್ಥಿತಿಗೆ ಬಂದಿದೆ. ನನ್ನ ಗಂಡನೆ ಸ್ವತಃ ಬೇರೆಯವರ ಜೊತೆಗೆ ಸಂಬಂಧ ಬೆಳೆಸಲು ಒತ್ತಾಯ ಹೇರಿದ ಮೊದಮೊದಲು ಚೆನ್ನಾಗೆ ಇದ್ದಿವಿ. ಬರುಬರುತಾ ಆತನ ಹಿಂಸೆ ಜಾಸ್ತಿಯಾಯಿತು. ಬರೀ ಚಂದಿದಿ ಅಂತ ಮಾತ್ರ ನಿನ್ನ ಮದುವೆ ಆಗಿಲ್ಲ. ನನಗೆ ದುಡ್ಡು ಬೇಕು ಅದಕ್ಕ ನೀನು ಕೊಡ್ಲಬೇಕು ಅಂತ ಹೊಡಿತಿದ್ದರು. ಕೊನೆಗೆ ನಾನು ಮಾತು ಕೇಳಿಲ್ಲ ಅಂತ ಆತನ ಗೆಳೆಯನನ್ನೆ ಮನೆಗೆ ಕರೆದುಕೊಂಡು ಬಂದ್ರು. ನೀನು ಅವನು ಜೊತೆಗೆ ಮಲಗಿ ದುಡ್ಡು ಇಸ್ಕೊಳ್ಳೇಬೇಕೆಂದು ಹೊರಗಡೆ ಹೋಗಿ ಬಾಗಿಲ ಲಾಕ್ ಮಾಡಿಕೊಂಡು ಹೊರಟೆ ಹೊಗಿದ್ರು, ವಿಧಿಯಿಲ್ಲದೆ ಕೊನೆಗೆ ನಾನೆ ಒಂದಾದೆ, ಆದರೂ ಗಂಡನ ದುಡ್ಡಿನ ದುರಾಸೆ ಹೆಚ್ಚುತಾನೆ ಬಂತು ಎರಡನೇ ಮಗುವಿಗೆ ಗರ್ಭಿಣಿ ಆದೆ. ಆದರೆ ಗಂಡ ಅದಕ್ಕೆ ನಾನೇ ಕಾರಣ ಅಂತ ಒಪ್ಪಲಿಲ್ಲ. ಅವನೆ ಅದಕ್ಕೆ ಕಾರಣ ಎಂದು ಹಿಂಸೆ ಮಾಡಿದ ನಾನೇನಾದರೂ ಒಪ್ಪಿಕೊಳ್ಳಬೇಕಂದ್ರೆ ಅವನಿಂದ ಐವತ್ತು ಸಾವಿರ ದುಡ್ಡು ತರ್ಲೆಬೇಕೆಂದು

[illegible]

[illegible]

[illegible]

[illegible]

ನಿರ್ಧಾರ ಹೇಳಿದ ಅವನಿಗೆ ಕೇಳಿದರೆ ನಾಯಾಕ್ ಕೊಡ್ಲಿ, ಅದಕ್ಕೆ ನಿನ್ನ ಗಂಡನೆ ಕಾರಣ ಎಂದು ಹೇಳಿ ಹೊರಟು ಹೋದ. ದುಡ್ಡು ತರ್ಲಿಲ್ಲ ಅಂದ್ರೆ ಮನೆಗೆ ಸೇರ್ಸಿಕೊಳ್ಳಲ್ಲ. ಮನೆಗೆ ಬರ್ಬಡ ಅಂತ ಹೇಳಿ ಹೊರಟರು, ನನ್ನನ್ನು ಮನೆಗೆ ಸೇರ್ಸಿಕೊಳ್ಳಲಿಲ್ಲ. ಇದರಿಂದ ನನ್ನ ತಾಯಿ ಹತ್ತಿರ ಬಂದು ಹೆರಿಗೆ ಮಾಡ್ಸಿಕೊಂಡೆ. ತಾಯಿ ಎಷ್ಟೇ ವಿರುದ್ಧ ಮಾಡಿದರೂ ಕೊನೆಗೆ ನನ್ನನ್ನು ನೋಡಿಕೊಂಡು ಹಾರೈಕೆ ಮಾಡಿದಳು. ನಮ್ಮ ತಾಯಿಗೆ ಕಷ್ಟ ಆಗುತ್ತೆ ಅಂತ ಮತ್ತು ಎರಡು ಮಕ್ಕಳು ನನ್ನನ್ನು ಎಲ್ಲರನ್ನು ಸಾಕೆಂದ್ರೆ ಕಷ್ಟ ಆಗುತ್ತೆ ಅಂತ ಮೂರು ತಿಂಗಳಲ್ಲಿ ದುಡಿಯುವುದಕ್ಕೆ ಬಂದಿದಿನಿ. ಎಲ್ಲರೂ ಹೇಳ್ತಾರೆ ಹಸಿ ಮೈ ಹೊರಗೆ ಹೋಗ್ಬಾರದು, ಹೆಚ್ಚು ಕೆಲಸಮಾಡಬಾರದು ಅಂತ ಆದರೆ ವಿದಿ ಇಲ್ಲ ಮಾಡ್ಲೇಬೇಕು. ಈ ಫ್ಯಾಕ್ಟ್ರಿಯಲ್ಲಿ ಬೇರೆ ಶೌಚಾಲಯ ವ್ಯವಸ್ಥೆನೂ ಇಲ್ಲ. ನನಗಂತೂ ತುಂಬಾನೆ ತ್ರಾಸ್ ಆಗ್ಬಿಟ್ಟಿದೆ. ಏನ್ ಮಾಡೋದು ಬಿಡುಗಡನೆ ಇಲ್ಲ. ಕೆಲಸ ಬಿಟ್ಟರೆ ಉಪವಾಸ ಬೀಳ್ಬೇಕು. ಮಕ್ಕಳ ಬಗ್ಗೆಯಾದರೂ ಯೋಚನೆ ಮಾಡ್ಲೆಬೇಕಲ್ಲ. ನನಗೆ ಏನಾದರೂ ಆಗಲಿ ಮಕ್ಕಳಿಗೆ ಏನಗಬಾರದು ಅಂತ, ಬೆಳೆಯುವ ಮಕ್ಕಳನ್ನು ಉಪವಾಸ ಕೆಡವಿದರೆ ಹೇಗಮ್ಮ ಮುಂದೆ ಅವರು ನಮ್ಮನ್ನು ನೋಡಿಕೊಳ್ಳುವುದು. ಹಂಗಾಗಿ ಇಲ್ಲಿ ಎಷ್ಟೆ ಕಷ್ಟ ಆದರೂ ಸಹಿಸಿಕೊತಿನಿ. ಮನೆಯಿಂದ ಫ್ಯಾಕ್ಟ್ರಿಗೆ ಬರುವುದು ತುಂಬಾ ದೂರ ಬಂದು ಹೋಗುವಷ್ಟರಲ್ಲಿ ಸಾಕಸಾಕಾಗಿ ಬಿಟ್ಟಿರುತ್ತದೆ. ಸಾಯಂಕಾಲ ಮನೆಗೆ ಹೋಗುವಷ್ಟರಲ್ಲಿ ಮಗು ಅತ್ತು ಅತ್ತು ಸುಮ್ಮನೆ ಮಲ್ಗಿಬಿಡುತ್ತೆ. ನನಗಂತೂ ಒಂದೊಂದು ಸಾರಿ ತುಂಬಾ ಎದೆಬಿಗಿತಿರ್ತಾವೆ. ನೋವಾಗುತ್ತಿರುತ್ತವೆ. ಇವರು ಸಹಿಸಿಕೊಂಡು ಕೆಲಸಮಾಡ್ತಿನಿ. ಆದರೂ ಕೊಡುವ ಸಂಬಳನೂ ಕಡಿಮೆ. ಬಡತನ ಒಂದು ಕಡೆ ಕಿತ್ತು ತಿಂದರೆ, ಪುರುಷ ಶಾಹಿ ವ್ಯವಸ್ಥೆ ಇನ್ನೊಂದು ಕಡೆ ಕಿತ್ತು ತಿನ್ನುತ್ತದೆ.

ವಿಶ್ಲೇಷಣೆ

ಪುರುಷ ಪ್ರಧಾನ ಸಮಾಜ ವ್ಯವಸ್ಥೆ ಹೆಣ್ಣನ್ನು ದೇಹವಾಗಿ ಭೋಗ ವಸ್ತುವಾಗಿ ಯಾವ ರೀತಿ ಬಳಕೆ ಮಾಡುತ್ತಿದೆ ಎಂಬುದನ್ನು ಈ ಕೇಸಿನ ಮೂಲಕ ತಿಳಿದುಕೊಳ್ಳಬಹುದಾಗಿದೆ. 'ಮದುವೆ' ಎಂಬ ಸಂಸ್ಥೆಗೆ ಸಮಾಜದಲ್ಲಿ ಮೊದಲಿನಿಂದಲೂ ಪವಿತ್ರವಾದ ಸ್ಥಾನ ಕೊಟ್ಟಿದೆ ಅಂತ ಹೇಳಿದರೂ, ಪುಷ್ಪಲತಾಳ ವಿಷಯದಲ್ಲಿ ಆ ಮದುವೆನೆ ಜೀವನ ಪೂರ್ತಿ, ಅವಳ ಜೀವನಕ್ಕೆ ನೇಣು ಹಾಕಿಕೊಳ್ಳಬೇಕೆಂಬ ಮನಸ್ಥಿತಿಯನ್ನು ಸೃಷ್ಟಿಸುತ್ತದೆ. ಏಕೆಂದರೆ ಮದುವೆ ಮಾಡಿಕೊಂಡು ಸ್ವತಃ ಗಂಡನೆ ತನ್ನ ಹೆಂಡತಿಯನ್ನು ತಲೆಹಿಡಿಯುವ ಕೆಲಸ ಮಾಡಿದ. ಆದರೆ ವ್ಯವಸ್ಥೆಯ ಪುರುಷನ ಪರವಾಗಿರುವುದರಿಂದ ಯಾರು ಇದನ್ನು ಪ್ರಶ್ನಿಸಲಿಲ್ಲ. ಅತಿಯಾದ ಹಣದ ದುರಾಸೆ ಒಂದು ಕಡೆಯಾದರೆ ಇನ್ನೊಂದು ಕಡೆ ಬಹು ಸುಲಭವಾಗಿ ಬಳಸಿಕೊಳ್ಳಲು ಸಿಗುವ ಹೆಣ್ಣಿನ ದೇಹ ಇವೆರಡರ ನಡುವೆ ಹೆಣ್ಣಿನ ಮನಸ್ಸು ವ್ಯಕ್ತಿತ್ವ ಆಶೆ ಆಕಾಂಕ್ಷೆಗಳು ಯಾವು ಕೂಡ ಕಾಣದಂತಾಯಿತು. ಒಂದೆ ಸಮಯಕ್ಕೆ ಇಬ್ಬರೂ ಗಂಡಸರಿಂದ ಶೋಷಣೆಗೊಳಗಾದಳು. ಎಲ್ಲಿ ಕೂಡ ನ್ಯಾಯ ಸಿಕ್ಕದೆ, ಆಸರೆನೂ ಸಿಕ್ಕದೆ ಬೀದಿಪಾಲದಳು. ಆದರೆ ಅದೇ ಹೆಣ್ಣು ತನ್ನ ಗಂಡನನ್ನು ಬಿಟ್ಟು ಬೇರೆ ಗಂಡಿನ ಜೊತೆ ಸಂಬಂಧ ಹೊಂದಿರುವುದನ್ನು

[illegible]

ನೋಡಿದರೆ ಇಬ್ಬರನ್ನು ಕೊಲೆ ಮಾಡಿರುವ ಉದಾಹರಣೆಗಳು ಸಾಕಷ್ಟು ಸಿಗುತ್ತವೆ. ವ್ಯವಸ್ಥೆಯು ಪುರುಷನಿಗೆ ತನ್ನ ಅನುಕೂಲಕ್ಕೆ ತಕ್ಕಂತೆ ಹೆಣ್ಣನ್ನು ಬಳಸಿಕೊಳ್ಳಲು ಪ್ರತಿಕ್ಷಣ ಬಯಸುತ್ತಿರುತ್ತಿರುತ್ತದೆ.

ಕುಟುಂಬದಲ್ಲಿ ಮೊದಲು ತಾಯಿ ಎಷ್ಟೇ ವಿರೋಧ ಮಾಡಿದರೂ ಕೊನೆಗೆ ತಾಯಿನೆ ಆಸರೆಯಾಗಿ ಮಗಳ ನೋವಿಗೆ ಸ್ಪಂದಿಸುತ್ತಾಳೆ. ಆದರೆ ಬಂಡವಾಳ ಶಾಹಿ ವ್ಯವಸ್ಥೆ ಮಾತ್ರ ತನ್ನ ಲಾಭದ ಉದ್ದೇಶದಿಂದ ಕಾರ್ಮಿಕರನ್ನು ಸಮಸ್ಯೆಗಳಿಗೆ ಸ್ಪಂದಿಸದೆ ಇನ್ನಷ್ಟು ಶೋಷಣೆಗೆ ಒಳಪಡಿಸುವ ಹಾಗೆ ಮಾಡುತ್ತದೆ. ಕಾನೂನು ಪ್ರಕಾರ ಸೌಲತ್ತುಗಳಿದ್ದರೂ ಅವೆಲ್ಲವೂ ಗಾಳಿಗೆ ತೂರುವುದನ್ನು ಕಾಣಬಹುದು. ಈ ಮಹಿಳೆ ಮಾನಸಿಕವಾಗಿ ದೈಹಿಕವಾಗಿ ಹಿಂಸಿಗೆ, ಒಳಪಟ್ಟರೂ ಸಹಜವಾಗಿ ಒಪ್ಪಿಕೊಳ್ಳುವಂತ ಮನಸ್ಥಿತಿ ರೂಪಿಸುತ್ತದೆ. ಕೆಲವೊಂದು ಸಂದರ್ಭದಲ್ಲಿಯಾದರೂ ಹೆಣ್ಣಿಗೆ ಆರೈಕೆ ಸಿಗುತ್ತಿತ್ತು. ಆದರೆ ಅದು ಕೂಡ ಇವಳಿಗೆ ತಲುಪದೆ ಇರುವ ಹಾಗೆ ಮಾಡಿದೆ. ಮಹಿಳೆ ಭಾವನಾತ್ಮಕವಾಗಿ, ಮಾನಸಿಕವಾಗಿ, ದೈಹಿಕವಾಗಿ ಶೋಷಣೆಗೆ ಒಳಪಡುವುದನ್ನು ಕಾಣಬಹುದು. (ಹೆಸರು : ಪುಷ್ಪಲತಾ, ವಯಸ್ಸು : ೨೮, ಊರು: ಬಳ್ಳಾರಿ, ಜಾತಿ: ಕ್ರಿಶ್ಚಿಯನ್, ವಿದ್ಯಾರ್ಹತೆ: ೧೦ನೇ)[೨೭]

೫.೨.೨೮ ಜಾಹೀದಾ ಪ್ರಕರಣ

ನಿರೂಪಣೆ

ನಾವು ನಾಲ್ಕು ಜನ ಅಕ್ಕ ತಂಗಿಯರು ಇರುವ ಕಾರಣ, ನಮ್ಮ ತಂದೆ-ತಾಯಿಗಳು ಹುಡುಗನ ಹುಡುಕಿ ಬೇಗ ಮದುವೆ ಮಾಡಿಬಿಟ್ಟರು. ಆದರೆ ಈಗ ನನ್ನ ಸ್ಥಿತಿ ಅಂತೂ ಹೇಳತೀರದು. ನನಗೂ ಎರಡೂ ಹೆಣ್ಣು, ಹೆರಿಗೆ ಸಂದರ್ಭದಲ್ಲಿ ನನ್ನ ತಂಗಿಯನ್ನು ಕರೆದುಕೊಂಡು ಬಂದಿದ್ದೆ. ನನ್ನ ಸಹಾಯಕ್ಕಾಗಿ ಅಂತ, ಆದರೆ ನನ್ನ ಗಂಡ ಅವಳ ಮನಸ್ಸು ಒಲಿಸಿಕೊಂಡು ಅವಳ ಜೀವನವನ್ನು ಹಾಳು ಮಾಡಿದ. ಇದರಿಂದ ಅವಳನ್ನು ಆತನಿಗೆ ಕಟ್ಟಬೇಕಾಯಿತು. ಗಂಡ ಕುಡುಕನಾಗಿದ್ದರೂ ನನ್ನ ತಂಗಿ ಜೀವನ ಕೂಡ ನಾನೇ ಹಾಳು ಮಾಡಿದೆ ಏನ್ ಮಾಡ್ಲಿ, ಈ ಸ್ಥಿತಿ ಬೇರೆ ಹೆಣ್ಣಿಗಾದರೆ ಅವರಾಗಲಿ, ಅವರ ಮನೆಯವರಾಗಲಿ ಸುಮ್ಮನೆ ಬಿಡುವುದಿಲ್ಲ ಎಂದು ನನ್ನ ತಂಗಿಯನ್ನು ಸೌತಿಯಾಗಿ ಒಪ್ಪಿಕೊಂಡೆ. ಏಕೆಂದರೆ ನಾನಿಲ್ಲದಾಗ ಅವಳು ಅವಳಿಲ್ಲದಾಗ ನಾನು ಗಂಡನನ್ನು ನೋಡಿಕೊಳ್ಳಬಹುದಲ್ಲ ಅಂತ. ಆದರೆ ಆ ಗಂಡಸು ನಮ್ಮಿಬ್ಬರನ್ನು ಬಿಟ್ಟು, ದುಡಿದು ಹಾಕದೆ ನಮ್ಮನ್ನು ಮತ್ತು ಮಕ್ಕಳನ್ನು ಬಿಟ್ಟು ಬೇರೆ ಹುಡುಗಿನ ಕಟ್ಟಿಕೊಂಡು ಓಡಿಹೋದ. ಇದರಿಂದ ನಮ್ಮಿಬ್ಬರ ಜೀವನ ಯಾವ ಮಟ್ಟಕ್ಕೆ ಮುಟ್ಟಿದೆ ಅಂತ ಆ ದೇವರಿಗೆ ಗೊತ್ತು. ಮೊದಲೆ ಎಲ್ಲಿ ಹೋಗ್ತಿದ್ದಿಲ್ಲ. ಕೊನೆಗೆ ಯಾವ ದಾರಿನೂ ಸಿಗದೆ ಗಾರ್ಮೆಂಟ್ಸ ಕೆಲಸಕ್ಕೆ ಬಂದೆ. ಮಾಲೀಕರು ಕೊಡುವ ಸಂಬಳದಲ್ಲಿ ನಾನು, ನನ್ನ ಎರಡು ಮಕ್ಕಳನ್ನು, ಗರ್ಭಿಣಿಯಿರುವ ತಂಗಿಯನ್ನು ಹೇಗೆ ಸಾಕಬೇಕೆಂಬುದು ಗೊತ್ತಾಗ್ದಿದ್ದಕ್ಕೆ ಈ ಕೆಲಸಕ್ಕೆ ಬಂದೆ. ಇವೆಲ್ಲ ಗೊತ್ತಿರುವ ಮಾಲೀಕರು ಎಷ್ಟೊ ಸಾರಿ ತಮ್ಮ ಜೊತೆ ಸಂಬಂಧ ಬೆಳೆಸಿದರೆ ನಿನ್ನ ಎಲ್ಲ ಸಮಸ್ಯೆಗಳನ್ನು ಬಗೆಹರಿಸುತ್ತೇನೆ ಅಂತ ಹೇಳುತ್ತಿದ್ದರು. ಅವರಿಗೂ ಮದುವೆ ಆಗಿತ್ತು, ಮಕ್ಕಳು ಇದ್ದರೂ ಕೂಡ ನನ್ನನ್ನು ದಿನಾ ಹಿಂಸೆ ಮಾಡುತ್ತಿದ್ದರು. ಕೆಲಸ ಬಿಟ್ಟರೆ ಮೂರೊಪ್ಪತ್ತಿನ ಗಂಜಿಗೂ ಹಣ

[illegible]

[illegible]

[illegible]

[illegible]

ಇಲ್ಲದಂಗಾಗುತ್ತೆ. ಕೆಲಸವನ್ನು ಬಿಡಕ್ಕೂ ಆಗದೆ ಅನುಭವಿಸಕ್ಕೂ ಆಗದೆ ದಿನನಿತ್ಯ ಹಿಂಸೆ ಪಡುವ ಹಾಗಾಗಿದೆ. ಗಂಡಿನ ಆಸರೆ ಇಲ್ಲದಿದ್ದರೆ ನೂರೆಂಟು ಜನ ನಮ್ಮನ್ನು ದೈಹಿಕವಾಗಿ ಬಳಸಿಕೊಳ್ಳಬೇಕೆಂದು ಯೋಚಿಸುತ್ತಾರೆಯೆ ವಿನಃ ಯಾರು ಆಸರೆಯಾಗಿ ನಿಲ್ಲುವುದಿಲ್ಲ.

ಒಂದು ದಿನ ಇಟ್ಕೊಳ್ತಿನಿ, ಎರಡು ದಿನ ಇಟ್ಕೊತ್ತಿನಿ ಅಂತ ಹೇಳ್ತಾರೆ. ನಾವು ಅಂತಹ ಮನೆತನದವರಲ್ಲಾ ಒಂದು ಹೊತ್ತಿನ ಊಟಕ್ಕೆ ಗತಿಯಿಲ್ಲದೆ ಇದ್ದರೂ ಮಾನ ಮರ್ಯಾದೆ ಬಿಟ್ಟು ಜೀವನ ಮಾಡೋದಿಲ್ಲರಿ. ದೇವರು ಎಲ್ಲಿ ತನಕ ಹೀಗೆ ಇಟ್ಟಿರುತ್ತಾನೋ, ಎಲ್ಲ ಆ ಅಲ್ಲಾಗೆ ಬಿಟ್ಟಿದಿವಿ ರ್ರಿ. ಎಷ್ಟು ಸಾರಿ ಗಂಡಿನ ಆಸರೆ ಬೇಕೆನ್ಸುತ್ತೆ ಆದರೆ ಮಾದಲೇ ಕಟ್ಟಿಕೊಂಡೆ ಪಡಬಾರದ ಕಷ್ಟ ಪಡ್ತಿದಿವಿ. ಇನ್ನೊಂದು ಗಂಡಿನ ಬಯಸಿ ಆಸರೆ ಅಂತ ಮಾಡಿಕೊಂಡ್ರೆ ಎಷ್ಟು ದಿನ ಜೀವನ ಮಾಡಿವಿ ಆದರೆ ಮುಂದೆ ಅಷ್ಟು ಕೂಡ ಜೀವನ ಮಾಡದೆ ನೇಣೆ ಹಾಕಿಕೊಳ್ಳಬೇಕಾದ ಪರಿಸ್ಥಿತಿ ಬರುತ್ತೆ. ನಮ್ಮಂಥ ಹೆಣ್ಣು ಮಕ್ಕಳಿಗೆ ಎಲ್ಲಿ ಹೋದರೂ ಸಮಸ್ಯೆ ನೋವು ತಪ್ಪಿದ್ದಲ್ಲ. ಚಿಕ್ಕಂದಿನಿಂದಲೂ ಇಲ್ಲಿ ತನಕ ಸುಖವಾಗಿ ದಿನಗಳೆದ ನೆನಪುಗಳೆ ಇಲ್ಲವಾಗಿದೆ. ಫ್ಯಾಕ್ಟ್ರಿಯಲ್ಲಾದರೂ ಅಷ್ಟೇ ಕುಟುಂಬದಲ್ಲಾದರೂ ಅಷ್ಟೆ.

ವಿಶ್ಲೇಷಣೆ

ಈ ಪ್ರಕರಣದಲ್ಲಿ ಹೆಣ್ಣಿನ ಜೀವನ ಬಿರುಗಾಳಿಗೆ ಸಿಕ್ಕಗಾಳಿಪಟದ ಹಾಗಾಗಿದೆ. ಏಕೆಂದರೆ ಪುರಷ ಶಾಹಿ ವ್ಯವಸ್ಥೆ ಮದುವೆ ಎಂಬ ಬಂಧನದಲ್ಲಿ ಬಂಧಿಸಿ ಜೀವನ ಪೂರ್ತಿ ಒಂದೊಪ್ಪತ್ತಿನ ಊಟಕ್ಕೂ ಪರದಾಡುವ ಮಟ್ಟಕ್ಕೆ ತಂದಿರುವುದನ್ನು ಕಾಣಬಹುದು. ಸಾಂಪ್ರದಾಯಿಕ ಸಮಾಜವ್ಯವಸ್ಥೆ ಕಟ್ಟಲ್ಪಟ್ಟಿರುವುದು ಗಂಡು ಮದುವೆ ಆದ ಮೇಲೆ ಕೊನೆ ತನಕನೂ ಹೆಂಡತಿ ಮಕ್ಕಳ ಜವಾಬ್ದಾರಿ ನಿರ್ವಹಿಸಬೇಕು ಅಂತ ಹೇಳುತ್ತೆ. ಆದರೆ ಒಂದಲ್ಲ ಎರಡು ಹೆಣ್ಣಿನ ಜೀವನ ಹಾಳುಮಾಡಿದರು ಕೇಳದೆ ಇರುವ ಸಮಾಜ ವ್ಯವಸ್ಥೆ ಇಲ್ಲಿದೆ ಅಂತನೇ ಹೇಳಬಹುದು. ಗಂಡ ದುಡಿಯಲಿ ದುಡಿಯದಿರಲಿ, ಕುಡುಕನಾಗಲಿ, ಮೋಸಗಾರನಾಗಿರಲಿ ಏನೇ ಆದರೂ ಅವಳು ಒಪ್ಪಿಕೊಂಡು, ಸಹಿಸಿಕೊಂಡು ಜೀವನ ಮಾಡಬೇಕೆಂದು ಹೇಳುವ ಸಮಾಜ ಹೆಣ್ಣನ್ನು ಕೇವಲ ಉಪಬೋಗದ ವಸ್ತುವಾಗಿ ನೋಡುತ್ತದೆ.

ಇನ್ನು ಫ್ಯಾಕ್ಟ್ರಿಯಲ್ಲಿ ಅವಳ ಜೀವನದ ಪರಿಸ್ಥಿತಿಯನ್ನು ಪರಿಗಣಿಸಿದಾಗಲೂ ಜಾಹೀದಾಳ ಜೀವನ ಬಾಣಲೆಯಿಂದ ಬೆಂಕಿಗೆ ಬಿದ್ದಹಾಗೆ ಆಗಿದೆ. ಏಕೆಂದರೆ ಕುಟುಂಬದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಒಂದೆ ಸಮಯಕ್ಕೆ ಎರಡು ಕಡೆನೂ ಶೋಷಣೆಯನ್ನು ಅನುಭವಿಸುತ್ತಾಳೆ. ಮಾಲಿಕನ ದಿನನಿತ್ಯ ಕೊಡುತ್ತಿರುವ ಲೈಂಗಿಕ ಶೋಷಣೆಯನ್ನು ತಾಳಲಾರದೆ, ಅನುಭವಿಸಕ್ಕೂ ಆಗಲಾರದೆ, ಕೆಲಸವನ್ನು ಬಿಡೊಕ್ಕಾಗದೆ ಈ ಪ್ರಕರಣದ ಮೂಲಕ ತಿಳಿದುಕೊಳ್ಳಬಹುದು. ಕುಟುಂಬದಲ್ಲಿ ಗಂಡ ಎಷ್ಟೇ ತಪ್ಪು ಮಾಡಿದರು ಸಹಿಸಿಕೊಂಡರು, ಹೊರಗಡೆ ಕೂಡ ಅದೇ ವ್ಯವಸ್ಥೆಯನ್ನು ಎದುರಿಸುತ್ತಿದ್ದಾಳೆ. ಲಿಂಗಾಧಾರಿತ ಸಮಾಜದಲ್ಲಿ ಎಲ್ಲಿ ತನಕ ಅಧಿಕಾರಶಾಹಿ ವ್ಯವಸ್ಥೆಯೇ ಆಳ್ವಿಕೆ ನಡೆಸುತ್ತಿರುತ್ತದೆ ಅಲ್ಲಿ ತನಕ ಜಾಹೀದಾಳಂಥ ಒಬ್ಬ ಮಹಿಳೆ ಜೀವನವಲ್ಲ, ಇಂತಹ ಸುಮಾರು ಮಹಿಳೆಯರು ಅಮಾಯಕತೆಯಲ್ಲೆ,

[illegible]

[illegible]

[illegible]

[illegible]

[illegible]

ಅಸಹಾಯಕತೆಯಲ್ಲಿ ಕಳೆಯುವ ಪ್ರಸಂಗಗಳನ್ನು ಕಾಣಬಹುದಾಗಿದೆ. (ಹೆಸರು : ಜಾಹಿದ, ವಯಸ್ಸು: ೨೨, ಊರು: ಬಳ್ಳಾರಿ, ಜಾತಿ: ಮುಸ್ಲಿಂ, ವಿದ್ಯಾರ್ಹತೆ: ೯ನೇ)[೨೮]

೫.೨.೨೯ ಸುಜಾತಳ ಪ್ರಕರಣ

ನಿರೂಪಣೆ

ನಮ್ದು ಸಂಡೂರು ಪಕ್ಕಾ ಒಂದು ಹಳ್ಳಿ. ನನ್ನನ್ನು (ಬಳ್ಳಾರಿ) ಇಲ್ಲಿಗೆ ಕೊಟ್ಟರು ನನ್ನ ಮದುವೆ ಆಗಿ ಏಳು ವರ್ಷ ಆಯ್ತರಿ. ನನ್ನ ಗಂಡ ಆಟೋ ಡ್ರೈವರ್. ನನಗೆ ಮಕ್ಕಳಾಗದೆ ಇದ್ದಕ್ಕೆ ನನ್ನ ಗಂಡ ಇನ್ನೊಂದು ಮದುವೆ ಆಗಿದಾನೆ ರೀ. ನಮ್ಮನೆಯಲ್ಲಿ ಎಲ್ಲರೂ ಸೇರಿ ಏಳು ಜನ. ನನಗೆ ನನ್ನವರು ಅಂತ ಯಾರು ಇಲ್ಲ. ತವರು ಮನೆಯಲ್ಲೂ ಯಾರು ಇಲ್ಲ. ಗಂಡನ ಮನೆಯಲ್ಲಿ ಈ ಪರಿಸ್ಥಿತಿ. ಗಂಡ ಒಂದೊತ್ತಿನ ಊಟ ಹಾಕೊಕು ಯೋಚನೆ ಮಾಡ್ತಾನೆ ಆ ಕಾರಣಕ್ಕೆ ಈ ಕೆಲಸಕ್ಕೆ ಬಂದೆ. ಆದರೆ ಇಲ್ಲಿ ಮಾಲೀಕರು ನನಗೆ ಸರಿಯಾಗಿ ಹೊಲಿಯುವುದಕ್ಕೆ ಬರುವುದಿಲ್ಲ ಅಂತ ಬಾಯಿ ಸಿಕ್ಕ ಹಾಗೆ ಬೈಯ್ಯುತ್ತಾರ. ಮುಕದ ಮೇಲೆ ಬಿಸಾಕ್ತಾರೆ. ಒಂದು ದಿನ ಪ್ಯಾಂಟ್‌ಗೆ ಜಿಪ್ ಸರಿಯಾಗಿ ಹಾಕಿಲ್ಲ ಎನ್ನುವ ಕಾರಣಕ್ಕೆ ಅವರೆ ಮುಂದೆ ಬಂದು ಶರ್ಟ ಎತ್ತಿ ಜಿಪ್ ಹಾಕಿ ತೋರಿಸುತ್ತಾರೆ. ಸರಿಯಾಗಿ ಕೆಲಸ ಮಾಡುವುದಕ್ಕೆ ಬರಲಿಲ್ಲ ಅಂದ್ರೆ ಯಾಕ ಕೆಲಸಕ್ಕೆ ಬರ್ತಿರಾ. ನಮಗ ಮೂಲಾಗೋಕೆ ಹಿಂಗೆ ಬಾಯಿಗೆ ಸಿಕ್ಕ ಹಾಗೆ ಬೈಯತಾರೆ, ನಮ್ಮ ಮನಸ್ಸಿಗೆ ನೋವಾದರೂ ಕೇಳೋರೆ ಇಲ್ಲದಂಗಾಗಿದೆ. ಮಾಸ್ಟರ ಯವಾಗಲೂ ಕೆಲಸ ಹೇಳಬೇಕಂದ್ರು ಮೈ ಕೈ ಮುಟ್ಟಿ ಮಾತಾಡಸುತ್ತಾರೆ. ಇದನ್ನು ತಿಳಿದ ನನ್ನ ಗಂಡ ಮನೆಯಲ್ಲಿ ಹೊಡೆಯುವುದು ಹಿಂಸೆ ಮಾಡ್ತಾರೆ. ಮತ್ತೆ ಕೆಲಸನೂ ಬಿಡಬಾರದು, ಅವನು ಮೈಕೈ ಮುಟ್ಟುಬಾರದು ಅಂದ್ರ ಹೆಂಗಮ. ಇವೆರಡರ ನಡುವೆ ಸಾಯಕೂ ಆಗದೆ ಬದುಕೋಕು ಆಗದೆ ಒದ್ದಾಡಕತಿನಿ. ಫ್ಯಾಕ್ಟ್ರಿ ಮಾತ್ರ ಒಂದು ತರಹ ಗೋಡಾನ್ ಇದ್ದಂಗೈತಿ, ಒಂದೊಂದು ಸಾರಿ ತುಂಬಾ ಹೆದರಿಕೆ ಆಗುತ್ತೆ. ಆದರೂ ಕೆಲಸ ಮಾಡಲೇಬೇಕು ಬಿಡುಗಡೆ ಇಲ್ಲ. ಮಾಲೀಕರು ಏನಂದ್ರು ಅನ್ನಿಸಿಕೊಳ್ಳಬೇಕು. ಇಲ್ಲದಿದ್ದರೆ ಉಪವಾಸ ಸಾಯುವುದೆ ಅಂತಿಮವಾಗುತ್ತದೆ.

ವಿಶ್ಲೇಷಣೆ

ಈ ಪ್ರಕರಣ ಹೆಣ್ಣಿಗೆ ಮಕ್ಕಳಾಗಲೇಬೇಕೆಂಬ ಒತ್ತಾಯ ಹೇರುತ್ತದೆ. ಮಕ್ಕಳನ್ನು ಹೆರದೆ ಇರುವವಳು ಬಂಜೆ ಇನ್ನಿತರ ಪದಗಳನ್ನು ಬಳಸಿ ಮಾನಸಿಕವಾಗಿ ದೈಹಿಕವಾಗಿ ಹಿಂಸಿಸುವ ಮೂಲಕ ಅವಳೇ ಸ್ವತಃ ನಾನ್ ಏಕ ಬದುಕಬೇಕು ಎನ್ನುವ ಮಟ್ಟಕ್ಕೆ ತಂದೊಡ್ಡುತ್ತದೆ. ಆದರೆ ಅದೇ ಗಂಡಿನಲ್ಲಿ ದೋಷ ಇದ್ದು, ಹೆಣ್ಣಿಗೆ ಮಕ್ಕಳ ಹೆರುವುದರಲ್ಲಿ ಇಷ್ಟವಿದ್ದು ಅವಳೇ ಇನ್ನೊಂದು ಮದುವೆ ಆಗುತ್ತೇನೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರೆ ಮೊದಲಿನಿಂದಲೂ ಇರುವಂತ ಪುರುಷ ಶಾಹಿ ಕಟ್ಟಲ್ಪಟ್ಟಿರುವ ಸಮಾಜ ವ್ಯವಸ್ಥೆ ಬುಡಮೇಲಾಗುತ್ತವೆ. ಆದರೆ ಅದೇ ಹೆಣ್ಣು ಮಾತ್ರ ಗಂಡ ಇನ್ನೊಂದು ಮದುವೆ ಮಾಡಿಕೊಂಡು

[illegible]

[illegible]

[illegible]

[illegible]

[illegible]

[illegible]

[illegible]

ಸುಖವಾಗಿದ್ದರು ಸಹಿಸಿಕೊಂಡು ಸುಮ್ಮನಿರಬೇಕು. ಮಕ್ಕಳಾಗದೆ ಇರುವ ಒಂದೆ ಒಂದು ಕಾರಣಕ್ಕೆ ಜೀವನ ಈಡೀ ಅನೇಕ ಸಮಸ್ಯೆಗಳನ್ನು ಎದುರಿಸುವ ಪರಿಸ್ಥಿತಿಯನ್ನು ಕಾಣಬಹುದು ಗಂಡನಾದವನು ಒಂದು ಹೊತ್ತಿನ ಊಟ ಹಾಕುವ ಸಾಮರ್ಥ್ಯವಿಲ್ಲದಿದ್ದರೂ ಅವಳ ಮೇಲೆ ಲೈಂಗಿಕವಾಗಿ ಮಾಡುವುದು ಬೇರೆ, ಅವಳಿಗೆ ಫ್ಯಾಕ್ಟ್ರಿಯಲ್ಲೂ ನೆಮ್ಮದಿ ಇಲ್ಲ, ಮನೆಯಲ್ಲಿ ಕೂಡ ನೆಮ್ಮದಿ ಇಲ್ಲದಂಗಾಗಿದೆ. ಸಾಮಾಜಿಕರಣ ವ್ಯವಸ್ಥೆ ಮೊದಲಿನಿಂದಲೂ ಹೆಣ್ಣಾದವಳು ಎಲ್ಲವನ್ನು ಸಹಿಸಿಕೊಳ್ಳಬೇಕು, ಸಂಪ್ರಾದಾಯ ಮೀರಿ ನಡೆದುಕೊಳ್ಳಬಾರದು ಇನ್ನಿತರ ಮನಸ್ಥಿತಿಯನ್ನು ಬಾಲ್ಯದಿಂದಲೂ ಅಚ್ಚುಕಟ್ಟಾಗಿ ಮೂಡಿಸಿದೆ. ಈ ಪ್ರಕರಣದಲ್ಲಿ ಮಾಲಿಕನ ಅಸಭ್ಯ ವರ್ತನೆಯ ಪರಮಾವಧಿಯನ್ನು ಕಾಣಬಹುದಾಗಿದೆ. ಆದರೂ ವ್ಯವಸ್ಥೆಯಲ್ಲಿ ಸಾರ್ವಜನಿಕ ಕೆಲಸದ ಸ್ಥಳದಲ್ಲಿ ಗಂಡನಿಂದ ಲೈಂಗಿಕ ಶೋಷಣೆ ಆಗುವುದು ಸಹಜ ಇದನ್ನು ಒಪ್ಪಿಕೊಳ್ಳಲೇಬೇಕೆಂಬ ಅನಿವಾರ್ಯತೆಯನ್ನು ಸೃಷ್ಟಿಸುತ್ತದೆ. ಬಡತನದ ಅನಿವಾರ್ಯ ಕಾರಣಕ್ಕೆ, ಅನ್ನದ ಅವಶ್ಯಕತೆಗೂ ಅಸಹಾಯಕರಾಗಿ ಗಂಡನ ಒತ್ತಾಯಕ್ಕೂ, ಕೌಟುಂಬಿಕ ಇವರ ಅಸಹಾಯಕತೆಯನ್ನು ದುರುಪಯೋಗಪಡಿಸಿಕೊಳ್ಳುವುದನ್ನು ಕಾಣಬಹುದು. (ಹೆಸರು : ಸುಜಾತ, ವಯಸ್ಸು : ೨೬, ಊರು: ಬಳ್ಳಾರಿ, ಜಾತಿ: ಲಿಂಗಾಯತ, ವಿದ್ಯಾರ್ಹತೆ: ೯ನೇ)[೨೯]

೫.೨.೩೦ ಪಲ್ಲವಿಯ ಪ್ರಕರಣ

ನಿರೂಪಣೆ

ನಮ್ಮ ಅಪ್ಪ ಅಮ್ಮನಿಗೆ ಮೂರು ಮಕ್ಕಳು. ಅಪ್ಪ ಮಾತ್ರ ಕುಡಿದು ಕುಡುದು ಹೆಂಡ್ತಿ ಮಕ್ಕಳ ಜವಾಬ್ದಾರಿನೆ ಇಲ್ಲದೆ ಎಲ್ಲಿಬೇಕೋ ಅಲ್ಲಿ ಕುಡಿದು ಬೀಳುತ್ತಾರೆ. ಇನ್ನು ಅಣ್ಣ ನಾಲ್ಕು ದಿನ ಮನೆಯಲ್ಲಿ ಇದ್ದರೆ ಇನ್ನು ಎಂಟು ದಿನ ಎಲ್ಲೊ ಇರ್ತಾನೆ, ಇಂತಹದರಲ್ಲಿ ತಮ್ಮ ಚಿಕ್ಕವನು. ಹೀಗಿದ್ದಾಗ ಮನೆ ಪರಿಸ್ಥಿತಿಯಂತೂ ಹೇಳಬಾರದು. ವಯಸ್ಸಾದ ತಾಯಿ ಬೇರೆ ಮನೆ ಕೆಲಸಮಾಡಿಕೊಂಡು ದುಡಿಯುತ್ತಿರುತ್ತಾರೆ. ಅದು ಮನೆ ಖರ್ಚಿಗೆ ಸಾಕಾಗದೆ ಇರುವುದಕ್ಕೆ ನಾನು ಈ ಕೆಲಸಕ್ಕೆ ಬರುತ್ತಿದಿನಿ. ಆದರೆ ಮಾಲೀಕರ ಹಿಂಸೆ ತಾಳಾಕ್ಕೆ ಆಗ್ತಿಲ್ಲ. ಮೊದಲು ಒಂದು ಫ್ಯಾಕ್ಟ್ರಿ ಕೆಲಸಕ್ಕೆ ಹೋಗುತ್ತಿದ್ದೆ. ಅವರಂತು ಸರಿಯಗಿ ಹೊಲಿಯಲಿಕ್ಕೆ ಬರ್ಲಿಲ್ಲ ಅಂತ ಒಂದು ಸಾರಿ ಅಂತೂ ಎಲ್ಲರ ಮುಂದೆ ಕೆನ್ನಗೆ ಭಾರಿಸಿದರು. ಬಡತನದ ಅನಿವಾರ್ಯವಾಗಿ ದುಡಿಯುತ್ತಿದ್ದೆ. ಆದರೂ ಕೊನೆಗೂ ಒಂದು ಮಿತಿ ಇರಬೇಕಲ್ವ ಆ ಕಾರಣವಾಗಿ ಆ ಕೆಲಸ ಅದು ಬೇಕು ಇದು ಬೇಡ ಅನ್ನುವ ಪರಿಸ್ಥಿತಿ ಆಗಿದೆ. ಎಲ್ಲರೂ ಕೆಲಸಮುಗಿಸಿಕೊಂಡು ಹೋಗುತ್ತಿದ್ದಾಗ, ನನಗೆ ಹೆಚ್ಚು ಕೆಲಸ ಹಚ್ಚುತ್ತಾರೆ. ಹೊಲಿಯುವುದಿಲ್ಲ ಅಂದ್ರೆ ಕೆಲಸಕ್ಕೆ ಬರ್ಬೆಡ ಅಂತ ಮಾಲೀಕರು ಹೇಳುತ್ತಾರೆ. ಕಣ್‌ಸೊನ್ನೆ ಕೈಸೊನ್ನೆ ಮಾಡ್ತಾರೆ. ಮೈಕೈ ಮುಟ್ಟಿಸಿಕೊಳ್ಳಲಿಲ್ಲ ಅಂದ್ರೆ ಕೆಲಸಕ್ಕೆ ಬರ್ಬೇಡ ನಾವು ಹೇಳಿದಂಗೆ ಕೇಳಿರಿ ಅಂತ್ರಂದೆ ಕೆಲಸಕ್ಕೆ ಬನ್ನಿ ಇಲ್ಲ ಅಂದ್ರೆ ಬರ್ಬೆಡಿ ಇಂತಹದರಲ್ಲಿ ನಮ್ಮಣ್ಣ ಜವಾಬ್ದಾರಿನೆ ಹೊತ್ತುಕೊಳ್ಳದೆ ದುಡಿದುಹಾಕದೆ ಫ್ಯಾಕ್ಟ್ರಿಯಲ್ಲಿ ಆಗುತ್ತಿರುವುದನ್ನು ಕೇಳಿಕೊಂಡು ಬಾಯಿಗೆ ಸಿಕ್ಕ ಹಾಗೆ ಬೈಯ್ಯುತಾನೆ, ಮಾನ ಮರ್ಯಾದೆ

[illegible]

[illegible]

[illegible]

[illegible]

ಬಿಟ್ಟು ಏಕ ಜೀವನ ಮಾಡಬೇಕು, ಎಲ್ಲರೂ ಹೋಗಿ ಸಾಯಿ ಅಂತ ಬೈಯ್ಯುತ್ತಾನೆ, ಸ್ವಂತ ಅಣ್ಣನೆ ಈ ಅಭಿಪ್ರಾಯ ಹೇಳಿದಾಗ ನನ್ನ ಮದುವೆ ಆಗೋ ಗಂಡ ಇನ್ನೂ ಹೇಗೆ ಹೇಳಬಹುದು ರೀ.

ವಿಶ್ಲೇಷಣೆ

ಈ ಪ್ರಕರಣದಲ್ಲಿ ಅತಿ ಚಿಕ್ಕ ವಯಸ್ಸಾಗಿದ್ದರೂ ಈಡೀ ಮನೆಯ ಜವಾಬ್ದರಿ ಹೊತ್ತುಕೊಂಡರು ಕೂಡ ಅಧಿಕಾರಶಾಹಿಯ ನೆಲೆಯಲ್ಲಿ ತಂದೆ ಅಣ್ಣ, ಮಾಲೀಕರು ಮೂವರು ಅವಳ ಜೀವನದ ಪ್ರತಿ ಕ್ಷಣ ಅಧಿಕಾರ ಹೊಂದುವುದರ ಜೊತೆಗೆ ನಿರ್ಬಂಧನ ಹಾಕುವುದಕ್ಕೆ ಪ್ರಯತ್ನ ಮಾಡುತ್ತಾರೆ. ವ್ಯವಸ್ಥೆ ಮೊದಲಿನಿಂದಲೂ ಪುರುಷ ದುಡಿಯಲಿ, ದುಡಿಯದಿರಲಿ ಮನೆಯ ಯಜಮಾನ ಅಂತ ಹೇಳುತ್ತಿರುವುದಕ್ಕೆ ಈ ಮಹಿಳೆ ಮಾನಸಿಕವಾಗಿ ಹಿಂಸೆ ಅನುಭವಿಸುತ್ತಿರುವುದು ಕಾರಣವಾಗಿದೆ. ಮಾಲೀಕರು ಮಹಿಳೆಯ ಅವಶ್ಯಕತೆಯ ಅನಿವಾರ್ಯತೆಯನ್ನು ದುರುಪಯೋಗಪಡಿಸಿಕೊಳ್ಳುವುದನ್ನು ಈ ಪ್ರಕರಣದಿಂದ ಮಾಲೀಕರ ದೌರ್ಜನ್ಯದ ಪರಮಾವಧಿಯನ್ನು ತಿಳಿಯಬಹುದು. ಹೆಣ್ಣು ಮಕ್ಕಳಿಗೆ ಕೆಲಸ ಬಿಟ್ಟರೆ ಗತಿನೆ ಇಲ್ಲ. ಬಿಟ್ಟರೆ ಉಪವಾಸ ಬೀಳ್ತರೆ ಎನ್ನುವುದನ್ನು ತಿಳಿದುಕೊಂಡಿದ್ದರಿಂದ ಅವರು ಏನೇ ಮಾಡಿದರು ಸಹಿಸಿಕೊಂಡು ಸುಮ್ಮನಿರುತ್ತಾರೆ. (ಹೆಸರು : ಪಲ್ಲವಿ, ವಯಸ್ಸು : ೧೮, ಊರು: ಬಳ್ಳಾರಿ, ಜಾತಿ: ಲಿಂಗಾಯತ, ವಿದ್ಯಾರ್ಹತೆ: ೯ನೇ)[೩೦]

೬.೩ ಪ್ರಕರಣಗಳ ತೌಲನಿಕ ವಿಶ್ಲೇಷಣೆ

ಪ್ರಸ್ತುತ ಅಧ್ಯಯನವು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಸಮಸ್ಯೆಯನ್ನು ಆಧರಿಸಿರುವುದಾಗಿದೆ. ಬೆಂಗಳೂರು ನಗರ ಮತ್ತು ಸುತ್ತಲಿನ ಪ್ರದೇಶದಲ್ಲಿ ಹಾಗೂ ಬಳ್ಳಾರಿಯಲ್ಲಿರುವ ಗಾರ್ಮೆಂಟ್ಸ್ ಮಹಿಳೆಯರನ್ನು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಹಾಗೆಯೆ, ಈ ಸಂಶೋಧನಾ ಅಧ್ಯಯನದಲ್ಲಿ ಕ್ಷೇತ್ರಕಾರ್ಯವೇ ಸಂಶೋಧನೆಯ ಆತ್ಮವೆಂದು ಹೇಳಬಹುದು. ಗಾರ್ಮೆಂಟ್ಸ್ ಮಹಿಳೆಯರ ಕುರಿತು ನಡೆದ ತಾತ್ವಿಕ ಚಿಂತನೆಗಳನ್ನು, ಸಿದ್ಧಾಂತಗಳನ್ನು, ಸ್ಥಿತಿಗತಿಗಳನ್ನು ಮೊದಲ ಭಾಗದಲ್ಲಿ ಅಧ್ಯಯನಕ್ಕೆ ಒಳಪಡಿಸಿದರೆ ಎರಡನೇ ಭಾಗ ಈ ಸಿದ್ಧಾಂತಗಳೂ, ಚಿಂತನೆಗಳು ವಾಸ್ತವದಲ್ಲಿ ಎಷ್ಟೆ ಪರಿಣಾಮಕಾರಿಯಾಗಿವೆಯೆ? ಅಥವಾ ನಿರುಪಯುಕ್ತವಾಗಿವೆಯೇ? ಎಂಬ ಕೆಲವು ಪ್ರಶ್ನೆಗಳನ್ನು ಆಧರಿಸಿ ಬಳ್ಳಾರಿ ಮತ್ತು ಬೆಂಗಳೂರು ನಗರದ ಕೆಲವು ಆಯ್ದ ಗಾರ್ಮೆಂಟ್ಸ್‌ಗಳನ್ನು ಕ್ಷೇತ್ರಕಾರ್ಯದ ವ್ಯಾಪ್ತಿಯಾಗಿ ಆಯ್ಕೆಮಾಡಿಕೊಳ್ಳಲಾಗಿದೆ.

ಬಳ್ಳಾರಿ ಬೆಂಗಳೂರು ಪ್ರದೇಶಗಳೂ ನಗರ ಪ್ರದೇಶಗಳೇ ಆದರೂ ಇವೇ ಪ್ರದೇಶಗಳನ್ನು ಆಯ್ದುಕೊಳ್ಳಲು ಕಾರಣವನ್ನು ಮೊದಲನೆಯ ಅಧ್ಯಾಯದಲ್ಲಿ ಸ್ಪಷ್ಟಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಒಟ್ಟು ನೂರು ಕೇಸುಗಳನ್ನು ಅಧ್ಯಯನಕ್ಕೆ ಅಧ್ಯಯನಕ್ಕೆ ಸಂಗ್ರಹಿಸಲಾಗಿದ್ದು, ಅದರಲ್ಲಿ ಆಯ್ದ-ಕೆಲವು ಪ್ರಕರಣಗಳನ್ನು ಇಲ್ಲಿ ದಾಖಲಿಸಲಾಗಿದೆ. ಬಹುಪಾಲು ಪ್ರಕರಣಗಳು ಒಂದೇ ಬಗೆಯ ಸಮಸ್ಯೆಯನ್ನು ಹೊರಹಾಕಿರುವ ಸಂಗತಿಗಳನ್ನು ಹೊಂದಿರುವ ಪ್ರಕರಣಗಳನ್ನು ಕೈಬಿಡಲಾಗಿದ್ದು, ಅದರಲ್ಲಿನ ಕೆಲವು

ವಿಭಿನ್ನ ಮಾದರಿಯ ಪ್ರಕರಣಗಳನ್ನು ಇಲ್ಲಿ ದಾಖಲಿಸಿಕೊಳ್ಳುವ ಮೂಲಕ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಸಮಸ್ಯೆಗಳನ್ನು ಪ್ರತಿನಿಧಿಸಲು ಬಳಸಿಕೊಳ್ಳಲಾಗಿದೆ.

ಇಲ್ಲಿ ವಿಶ್ಲೇಷಣೆಗೊಳಪಡಿಸಿದ –ಪ್ರಕರಣಗಳು ವಿವಾಹಿತ ಅವಿವಾಹಿತ, ಗರ್ಭಿಣಿ, ವಿಧವೆ, ವಿಚ್ಛೇದಿತ, ವೃದ್ಧ, ಮಧ್ಯಮವಯಸ್ಸಿನ, ಯುವ ವಯಸ್ಸಿನ ಮತ್ತು ಹಲವು ಜಾತಿಯ ಮಹಿಳೆಯರನ್ನು ಆಧರಿಸಿ ಪ್ರಕರಣಗಳನ್ನು ವಿಶ್ಲೇಷಿಸಲಾಗಿದೆ. ಈ ಪ್ರಕರಣಗಳಲ್ಲಿ ವರದಕ್ಷಿಣೆ, ಬಡತನ, ಅನಕ್ಷರತೆ, ಕೌಟುಂಬಿಕ ಹಿಂಸೆ, ಅತ್ಯಾಚಾರ, ಜಾಗತೀಕರಣದ ಪರಿಣಾಮಗಳು, ನಿರುದ್ಯೋಗದಂತಹ ಸಮಸ್ಯೆಗಳೂ ಮಹಿಳೆಯರ ಮೇಲೆ ಬೀರುವ ಪರಿಣಾಮಗಳನ್ನು ಗ್ರಹಿಸಲು ಸಾಧ್ಯವಾಗಿದೆ. ಬಂಡವಾಳಶಾಹಿಗಳ ಲಾಭದ ಧೋರಣೆ, ಕಡಿಮೆ ವೇತನ, ಗಾರ್ಮೆಂಟ್ಸ್ ಕಾಯಿದೆಗಳು, ಗರ್ಭಪಾತದ ಕಾಯ್ದೆಗಳು, ಕಾರ್ಮಿಕ ಕಾಯ್ದೆಗಳು, ಸಮಾನ ವೇತನ ಕಾಯಿದೆ ಇತ್ಯಾದಿಗಳು ವಿಶೇಷವಾಗಿ ಮಹಿಳೆ ನಿರುಪಯುಕ್ತವಾಗುತ್ತಿರುವುದು ಈ ಎಲ್ಲ ಪ್ರಕರಣಗಳ ಹಿನ್ನೆಲೆಯಲ್ಲಿ ಪ್ರತಿನಿಧಿಸುತ್ತವೆ. ಸಮಾಜ ವ್ಯವಸ್ಥೆಯಲ್ಲಿ ಹೆಣ್ಣನ್ನು ಕೇವಲ ದೇಹಕೇಂದ್ರಿತವಾಗಿ ನಿರ್ವಹಿಸಿದ್ದು, ದೇಹ ಮತ್ತು ಅದರಿಂದ ಲಭ್ಯವಾಗುವ ಸೇವೆಯನ್ನು ಮಾತ್ರ ಗಮನಹರಿಸುವುದು. ಹಾಗೆಯೆ ಜೈವಿಕ ಭಿನ್ನತೆಯನ್ನಾಧರಿಸಿ ಹೆಣ್ಣನ್ನು ಅಧೀನ ಲಿಂಗೀಯ ನೆಲೆಗೆ ಸ್ಥಿರಿಕರಿಸುವುದು, ಆ ಮೂಲಕ ಕುಟುಂಬ ಮತ್ತು ಕುಟುಂಬದ ಹೊರ ವಲಯದಲ್ಲಿ ಹಿಂಸೆಗೆ ಒಡ್ಡುತ್ತಿರುವುದು ಈ ಅಧ್ಯಯನವು ಕಂಡುಕೊಳ್ಳಲು ಯತ್ನಿಸಿದೆ.

ಗಾರ್ಮೆಂಟ್ಸ್ ಮಹಿಳೆಯರ ಸಮಸ್ಯೆಯನ್ನು ಕೇಂದ್ರಿಕರಿಸಿದ ಅಧ್ಯಯನವು ಇದಾದರೂ ಇಲ್ಲಿ ಕೆಲವು ಗಾರ್ಮೆಂಟ್ಸ್ ಪುರುಷರನ್ನು ಸಹ ಸಂದರ್ಶನಕ್ಕೆ ಒಳಪಡಿಸಲಾಗಿದೆ. ಆದರೆ ಅವುಗಳನ್ನು ಇಲ್ಲಿ ದಾಖಲಿಸಿಲ್ಲ. ಗಾರ್ಮೆಂಟ್ಸ್ ಪುರುಷ ಕಾರ್ಮಿಕರು ಸಹ ಕೆಲವು ಸಮಸ್ಯೆಗಳಿಗೆ ಒಳಗಾಗುತ್ತಿದ್ದರೂ ಅವು ಮಹಿಳೆಯರ ಸಮಸ್ಯೆಗಳು ಜೈವಿಕ ಭಿನ್ನತೆಯನ್ನಾಧರಿಸಿ ಹಾಗೂ ಅವುಗಳ ಸಾಮಾಜಿಕ ವ್ಯಾಖ್ಯಾನವಾಗಿ ನಿರ್ವಹಿಸಲ್ಪಟ್ಟಿದೆ.

ಟಿಪ್ಪಣಿಗಳು

೧ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೧

೨ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೨

೩ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೩

೪ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೪

೫ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೫

೬ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೬

೭ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೭

೮ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೮

೯ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೯

೧೦ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೧೦

[illegible]

[illegible]

[illegible]

[illegible]

[illegible]

೧೧ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೧೧
೧೨ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೧೨
೧೩ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೧೩
೧೪ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೧೪
೧೫ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೧೫
೧೬ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೧೬
೧೭ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೧೭
೧೮ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೧೮
೧೯ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೧೯
೨೦ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೨೦
೨೧ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೨೧
೨೨ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೨೨
೨೩ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೨೩
೨೪ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೨೪
೨೫ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೨೫
೨೬ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೨೬
೨೭ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೨೭
೨೮ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೨೮
೨೯ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೨೯
೩೦ ಧ್ವನಿ ಮುದ್ರಿತ ಕ್ಯಾಸೆಟ್ ಅನ್ನು ಆಧರಿಸಿದೆ, ವೈಯಕ್ತಿಕ ಸಂಗ್ರಹ ಕ್ಯಾಸೆಟ್ ಸಂ. ೩೦

ಅಧ್ಯಾಯ : ಆರು

ಸಮಾರೋಪ

೬.೧ ಅಧ್ಯಯನದ ಸ್ವರೂಪ

೬.೨ ಅಧ್ಯಯನದ ಫಲಿತಗಳು

೬.೩ ಅಧ್ಯಯನದ ಮಿತಿಗಳು

೬.೪ ಅಧ್ಯಯನದ ಮುಂದಿನ ಸಾಧ್ಯತೆಗಳು

೬.೫ ಅಧ್ಯಯನದ ಮೂಲಕ ಮಂಡಿಸುವ ಸಲಹೆಗಳು

ಅಧ್ಯಾಯ : ಆರು

ಸಮಾರೋಪ

ಆರ್ಥಿಕತೆಯೆಂಬುದು ಸಮಾಜದ ಒಂದು ಭಾಗವಾಗಿದೆ. ಸಮಾಜದಲ್ಲಿ ಆರ್ಥಿಕತೆಯ ಗಡಿಯನ್ನು ಮೀರಿ ದುಡಿಮೆಯ ಚಟುವಟಿಕೆಗಳು ನಡೆಯುತ್ತಿರುತ್ತವೆ. ಸಮಾಜ ಮತ್ತು ಆರ್ಥಿಕತೆಗಳ ನಡುವಿನ ಭಿನ್ನತೆಯು ಮಹಿಳೆ ಮತ್ತು ಲಿಂಗ ಸಂಬಂಧಗಳ ದೃಷ್ಟಿಯಿಂದ ಬಹಳ ಮುಖ್ಯವಾಗಿವೆ. ಹೀಗೆ ಆರ್ಥಿಕತೆಯ ಗಡಿಯ ಆಚೆ ನಡೆಯುವ ದುಡಿಮೆಯಲ್ಲಿ ಮುಕ್ಕಾಲು ಮೂರು ಪಾಲು ಮಹಿಳೆಯರು ತೊಡಗಿಕೊಂಡಿರುತ್ತಾರೆ ಆರ್ಥಿಕತೆಯ ಗಡಿಯ ಆಚೆಯೂ ನಡೆಯುವ ದುಡಿಮೆ ಚಟುವಟಿಕೆಗಳನ್ನು ಜೈವಿಕವೆಂದು ಪ್ರಾಕೃತಿಕವೆಂದು ಅವುಗಳು ಕೇವಲ ಉಪಯೋಗಿ ಮಹತ್ವ ಹೊಂದಿರುತ್ತವೆಂದು ಹೇಳಲಾಗಿದೆ. ಆರ್ಥಿಕತೆಯ ಚೌಕಟ್ಟಿನಲ್ಲಿ ನಡೆಯುವ ದುಡಿಮೆಯನ್ನು ಆರ್ಥಿಕೋತ್ಪಾದನೆಯೆಂದು ಆರ್ಥಿಕತೆಯ ಗಡಿಯ ಆಚೆಯಲ್ಲಿ ನಡೆಯುವ ಬಹುಪಾಲು ಚಟುವಟಿಕೆಗಳನ್ನು ಸಂತಾನೋತ್ಪತ್ತಿ ಚಟುವಟಿಕೆಗಳೆಂದು ಮಾತ್ರ ಪರಿಗಣಿಸಿ ಆರ್ಥಿಕತೆ ಚೌಕಟ್ಟಿನಲ್ಲಿ ನಡೆಯುವ ಚಟುವಟಿಕೆಗಳಿಗಷ್ಟೇ ಸಮಾಜ ಮನ್ನಣೆ ನೀಡುತ್ತದೆ. ಸಮಾಜಿಕವಾಗಿ ಮನ್ನಣೆಯಿಲ್ಲದ ಕೇವಲ ಉಪಯೋಗಿ ಮಹತ್ವವುಳ್ಳ ಚಟುವಟಿಕೆಗಳನ್ನೆಲ್ಲಾ ಮಹಿಳೆಯರಿಗೆ ಮುಡುಪಾಗಿಸಲಾಗಿದೆ. ಅತ್ಯಂತ ವಿಶಾಲವಾದ ಅರ್ಥದಲ್ಲಿ ಇಂತಹ ಚಟುವಟಿಕೆಗಳನ್ನು ಸಂತಾನೋತ್ಪತ್ತಿ ಚಟುವಟಿಕೆಗಳು ಎನ್ನಲಾಗಿದೆ.

ಹೀಗೆ ಆರ್ಥಿಕತೆ ಎಂಬುದು ಪುರುಷ ಪ್ರಪಂಚವಾಗಿ ಪುರುಷವಾಚಿಯಾಗಿ ರೂಪುಗೊಂಡು ಬಿಟ್ಟಿದೆ. ಆರ್ಥಿಕತೆಯ ಚೌಕಟ್ಟಿನಲ್ಲಿ, ಆರ್ಥಿಕೋತ್ಪಾದನೆಯಲ್ಲಿ ಮಹಿಳೆಯರೂ ಇರುತ್ತಾರೆ. ಅವರು ಆರ್ಥಿಕೋತ್ಪಾದನೆಯಲ್ಲಿ ತೊಡಗಿದ್ದರೂ ಅವರ ಚಟುವಟಿಕೆಗಳಿಗೆ ಅವರು ಉತ್ಪಾದಿಸುವ ಸರಕು ಸೇವೆಗಳಿಗೆ ಉಪಯೋಗಿ ಮಹತ್ವ ಇದೆ ವಿನಃ ವಿನಿಮಯ ಮಹತ್ವ ಇರುವುದಿಲ್ಲ. ಆದರೆ ಈ ಜಾಗತೀಕರಣದ ಸಂದರ್ಭದಲ್ಲಿ ಇದರ ಆರಂಭ ಮತ್ತು ಅಂತ್ಯಗಳೆರಡು ಮಾರುಕಟ್ಟೆಯೇ ಆಗಿರುವುದರಿಂದ ಇದು ಒಂದು ಕಡೆ ಮಹಿಳೆಯ ಶ್ರಮವನ್ನು ದೋಚಿದರೆ ಮತ್ತೊಂದು ಕಡೆ ಅವಳ ಶರೀರವನ್ನು

[illegible]

[illegible]

[illegible]

[illegible]

ದೋಚುತ್ತಿದೆ. ಸಾಮ್ರಾಜ್ಯಶಾಹಿಗಳು ಮೂರನೇ ಪ್ರಪಂಚದ ಮಹಿಳೆಯರ ಶ್ರಮಶಕ್ತಿಯನ್ನು ಕಡಿಮೆ ಕೂಲಿಗೆ ಖರೀದಿಸಿ, ಅಮಾಯಕ ಶ್ರಮಜೀವಿ, ಕಾರ್ಮಿಕ ಮಹಿಳೆ, ಕೃಷಿಕ ಮಹಿಳೆಯರ ಶ್ರಮವನ್ನು ಅಗ್ಗವಾಗಿ ಖರೀದಿಸುತ್ತಿದೆ. ರಾಷ್ಟ್ರದೊಳಗಿನ ಬಂಡವಾಳಿಗರ ಪೋಷಣೆ ಮತ್ತು ನವ ವಸಾಹತಿನ ವಕ್ತಾರರ ಹೊಸ ಹೊಸ ಶೋಷಣೆಯ ಭಾರವನ್ನು ಈ ಮಹಿಳೆಯರು ಹೊರಬೇಕಾಗಿದೆ. ಮತ್ತೊಂದು ಕಡೆ 'ಮಾತೃದೇವೋಭವ' ಎಂಬ ನಾಡಿನಲ್ಲಿ ಸ್ತ್ರೀಯನ್ನು ಸಂಕೀರ್ಣಗೊಳಿಸುವ ಸಂಸ್ಕೃತಿಕ ಅವಳ ಅಂತಃ ಸತ್ವವನ್ನು ಹಿಂಡುತ್ತಿದೆ. ಜಾಗತೀಕರಣದಿಂದ ಮಾರುಕಟ್ಟೆ ಅವಳನ್ನು ಕೇವಲ ಒಂದು ವಸ್ತುವಾಗಿಯೂ ಅವಳ ದೇಹವನ್ನು ಮಾರಾಟದ ಸರಕಾಗಿಯೂ ಪರಿಗಣಿಸುತ್ತಿವೆ. ಜಾಗತೀಕರಣದ ಪ್ರತಿಯೊಂದು ವಸ್ತುವೂ ವಿಷಯವೂ ಮಾರುಕಟ್ಟೆಯ ಮೂಲಕವೇ ತನ್ನ ಅಧೀಕೃತತೆಯನ್ನು ಪಡೆಯಬೇಕಾದ ಸ್ಥಿತಿಯಿದೆ. ಇಲ್ಲಿ ಮಹಿಳೆಯೂ ಸಹ ಗುರುತಿಸಲ್ಪಡುತ್ತಿರುವುದು ಕೇವಲ ಸರಕಾಗಿ ಮಾತ್ರ ಎಂಬ ವಿಷಯ ಇಲ್ಲಿ ಗಮನಾರ್ಹ.

ಪುರೋಹಿತಶಾಹಿ, ಜಮೀನ್ದಾರಿ ಹಿಡಿತಗಳಿಂದ ಬಿಡಿಸಿಕೊಳ್ಳುವ ಸಂದರ್ಭದಲ್ಲಿಯೇ ಮಹಿಳೆ ಜಾಗತೀಕರಣಕ್ಕೆ ಒಳಗಾಗಿದ್ದಾಳೆ. ಅವಳನ್ನು ಉಪಭೋಗದ ವಸ್ತುವಾಗಿ ಮಾಡುವುದು ಅವಳ ಅಭಿವೃದ್ಧಿಗೆ ಮಾರಕವಾಗಿವೆ. ಅವಳಲ್ಲಿಯ ಉತ್ಪಾದನಾ ಶಕ್ತಿ ಸಾಮರ್ಥ್ಯಗಳನ್ನು ಗುರುತಿಸದೆ ಉಪಭೋಗದ ವಸ್ತುವಾಗಿ ಪರಿಗಣಿಸುವುದು ಹಾಗೂ ಮನವ ಸಂಪನ್ಮೂಲದ ವಿಶೇಷ ಶಕ್ತಿಯೆಂದು ಪರಿಗಣಿಸದೇ ಹೋಗುವ ಅಪಾಯವಿದೆ. ಆದ್ದರಿಂದಲೇ ನೋಬೆಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞ ಅಮರ್ತ್ಯಸೇನ್‌ರಾಯ "ಅಭಿವೃದ್ಧಿ ಎಂಬುದನ್ನು ಕೇವಲ ಮೇಲ್ನೋಟದ ಬೆಳವಣಿಗೆ ದೃಷ್ಟಿಯಿಂದ ಮಾತ್ರವೇ ಅಲ್ಲ ಅದು ಜನಗಳ ಜೀವ, ಜೀವನದ ಮೇಲೆ ಅದರ ಪರಿಣಾಮದ ದೃಷ್ಟಿಯಿಂದಲೂ ನೋಡುವ ಅಗತ್ಯದತ್ತ ಗಮನ ಸೆಳೆಯುತ್ತಾರೆ.

೬.೧ ಅಧ್ಯಯನದ ಸ್ವರೂಪ

ಮಹಾಪ್ರಬಂಧವು ಒಟ್ಟು ೬ ಅಧ್ಯಾಯಗಳಲ್ಲಿ ವಿಭಾಗೀಕರಿಸಲಾಗಿದೆ. ಮೊದಲನೆಯ ಅಧ್ಯಾಯವು ಉದ್ದೇಶ, ವ್ಯಾಪ್ತಿ, ವೈಧಾನಿಕತೆ, ಮಹತ್ವ, ಸಾಹಿತ್ಯ ಸಮೀಕ್ಷೆ ಕುರಿತದ್ದಾಗಿದೆ. ಹಾಗೂ ವೈಧಾನಿಕತೆಯಲ್ಲಿ ಸ್ತ್ರೀವಾದಿ ಸಂಶೋಧನೆ ಸಾಂಪ್ರದಾಯಿಕ ಸಂಶೋಧನೆಗಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ತಿಳಿಸುವುದರ ಜೊತೆಗೆ ಇಡೀ ಅಧ್ಯಯನವು ಸ್ತ್ರೀವಾದಿ ಸಂಶೋಧನಾ ವೈಧಾನಿಕತೆಯನ್ನು ಒಳಗೊಂಡಿದೆ.

ಅಧ್ಯಾಯ ಎರಡು: ಅಸಂಘಟಿತ ವಲಯದ ಮಹಿಳಾ ದುಡಿಮೆ ಹಾಗೂ ನಿರ್ವಚನ ಎಂಬಂತಾಗಿದೆ. ಇದರಲ್ಲಿ ಅಸಂಘಟಿತ ವಲಯ ಅಂದರೇನು? ಸರ್ಕಾರ ಯಾವ ಯಾವ ಕ್ಷೇತ್ರಗಳನ್ನು ಅಸಂಘಟಿತ ವಲಯ ಅಂತ ಗುರುತಿಸಿದ್ದಾರೆ. ಮಹಿಳೆಯರೇ ಏಕೆ ಅಸಂಘಟಿತ ಕ್ಷೇತ್ರದಲ್ಲಿ ಕೇಂದ್ರೀಕೃತವಾಗಿರಲು ಕಾರಣಗಳಾವುವು ಎಂಬುದನ್ನು ಚರ್ಚಿಸಲಾಗಿದೆ. ಸಾಂಪ್ರದಾಯಿಕ ಸಮಾಜ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಮತ್ತೆ ಮತ್ತೆ ಅಸಂಘಟಿತ ವಲಯದಲ್ಲಿ ಉಳಿಯುವ ಹಾಗೆ ವ್ಯವಸ್ಥೆಯ ಸೂಕ್ಷ್ಮ ಎಳೆಗಳನ್ನು ವಿಶ್ಲೇಷಿಸಲಾಗಿದೆ. ಮಹಿಳೆಯರ ಜೀವನವು ಕುಟುಂಬಕ್ಕೆ ಸೀಮಿತಪಡಿಸಿರುವುದರಿಂದ,

[illegible]

[illegible]

[illegible]

[illegible]

[illegible]

ಅವಳು ಹೊರಗೆ ಹೋಗಿ ದುಡಿಯುವುದನ್ನು ಮೊದಲನೆಯದಾಗಿ ಸಮಾಜವು ಒಪ್ಪುವುದಿಲ್ಲ. ಆದರಾಚೆಗೂ ಅಸಂಘಟಿತ ವಲಯದ ಗಾರ್ಮೆಂಟ್ಸ್ ಮಹಿಳೆ ಕೌಟುಂಬಿಕ ಜವಾಬ್ದಾರಿಯ ಅನಿವಾರ್ಯ ಕಾರಣಕ್ಕಾಗಿ ಮೂರೊತ್ತಿನ ಅನ್ನದ ಅವಶ್ಯಕತೆಗಾಗಿ ದುಡಿದರು ಕುಟುಂಬ ಮತ್ತು ಸಮಾಜ ಎರಡು ಕೂಡ ಪ್ರೋತ್ಸಾಹಿಸುವುದಿಲ್ಲ ಎಂಬುದನ್ನು ಚರ್ಚಿಸಲಾಗಿದೆ. ಮಹಿಳೆಯ ಔದ್ಯೋಗಿಕ ವಲಯವನ್ನು ಅಸಂಘಟಿತ ವಲಯಕ್ಕೆ ಒಳಪಡಿಸುವ ಪುರುಷ ಪರ ಚಿಂತನೆಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ ಮೂರು: ಗಾರ್ಮೆಂಟ್ಸ್ ಉದ್ಯಮದಲ್ಲಿ ಮಹಿಳಾ ಕಾರ್ಮಿಕರು ಎಂಬ ಅಧ್ಯಾಯದಲ್ಲಿ ಗಾರ್ಮೆಂಟ್ಸ್ ಇತಿಹಾಸವನ್ನು ತಿಳಿಸುವುದರ ಮೂಲಕ ಮಹಿಳೆ ಯಾವಾಗ ಗಾರ್ಮೆಂಟ್ಸ್ ಫ್ಯಾಕ್ಟ್ರಿ ಕೆಲಸಕ್ಕೆ ಪ್ರವೇಶವಾದ ಮಹಿಳೆಯರು ಯಾವ ಯಾವ ಕಾರಣಕ್ಕಾಗಿ, ಅನಿವಾರ್ಯತೆಗಾಗಿ, ಅವಶ್ಯಕತೆಗಾಗಿ, ಯಾವ ಯಾವ ವಯಸ್ಸಿನ ಮಹಿಳೆಯರೆ ಹೆಚ್ಚಾಗಿ ಕೆಲಸಕ್ಕೆ ಬರುತ್ತಿದ್ದಾರೆ. ಮತ್ತು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರಿಗೆ ಇರುವ ಕಾನೂನು ಸೌಲಭ್ಯಗಳ ಬಗ್ಗೆ ಈ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸಾಧಾರಣವಾಗಿ ಜೈವಿಕ ಭಿನ್ನತೆಯನ್ನು ಆಧರಿಸಿ ಸಾಮಾಜಿಕವಾಗಿ ಮಹಿಳೆಯರ ನಿರ್ವಚನವು ಅವಳು ನಿರಂತರವಾಗಿ ಎರಡನೇ ದರ್ಜೆಯ ಪ್ರಜೆಯಾಗಿಯೇ ಉಳಿಯುವಂತಾಗಿದೆ. ಆಧುನಿಕತೆ ಬೆಳೆದಂತೆಲ್ಲಾ ಮಹಿಳಾ ಸಮಸ್ಯೆಗಳ ಹೊಸ ಮುಖಗಳು ಅನಾವರಣಗೊಳ್ಳುತ್ತಿವೆ. ಆದರೂ ಅವರಿಗಿರುವ ಬಡತನ ಕೆಲಸದ ಅಭದ್ರತೆ ದುಡಿಮೆಯ ಅಗತ್ಯತೆ ಮತ್ತು ಅನಿವಾರ್ಯತೆಯಿಂದಾಗಿ ಬಹುತೇಕ ಮಹಿಳೆಯರು ತಾವು ಸುರಕ್ಷಿತವಾಗಿ ಕೆಲಸ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಕೆಲವು ಸೂಕ್ಷ್ಮ ಆಯಾಮಗಳಿಂದ ಸಮಸ್ಯೆಗಳನ್ನು ಗ್ರಹಿಸಿದಾಗ ಅವುಗಳ ಪರಿಹಾರಕ್ಕೆ ಈಗಾಗಲೇ ಜಾರಿಯಿರುವ ಕಾನೂನುಗಳನ್ನು ಸ್ತ್ರೀವಾದಿ ವಿಶ್ಲೇಷಣೆಗೊಳಪಡಿಸುವ ಅಗತ್ಯತೆಯಾಗಿದೆ. ಹಲವು ಸಂಗತಿಗಳನ್ನು ಆಧರಿಸಲಾದ ಗಾರ್ಮೆಂಟ್ಸ್ ಮಹಿಳೆಯರಿಗೆ ವಿಶೇಷವಾದ ಕಾನೂನುಗಳು ಜಾರಿಗೆ ಬಂದಿಲ್ಲ. ಒಟ್ಟಾರೆ ಅಸಂಘಟಿತ ವಲಯಕ್ಕೆ ಹಲವಾರು ಕಾನೂನುಗಳು ಇದ್ದಾಗ್ಯೂ ಕೂಡ ವಾಸ್ತವದಲ್ಲಿ ಮಹಿಳೆಯರಿಗೆ ಯಾವುದೇ ರೀತಿ ಬಳಸಿಕೊಳ್ಳಲಾಗದೆ ಹಾಗೆ ವ್ಯವಸ್ಥೆಯ ಹುನ್ನಾರವನ್ನು ಪ್ರಶ್ನಿಸಬಹುದಾಗಿದೆ. ಆಡಳಿತಶಾಹಿ ವರ್ಗ ಮಾಲೀಕರ ಪರವಾಗಿ ಕೆಲಸ ನಿರ್ವಹಿಸುವುದರಿಂದ ವಾಸ್ತವದಲ್ಲಿ ಎಲ್ಲಿಯೂ ಕೂಡ ಮಹಿಳೆ ಕಾರ್ಮಿಕರಿಗೆ ಬಳಕೆ ಮಾಡದೆ ಇರುವ ವ್ಯವಸ್ಥೆಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ ನಾಲ್ಕು : ಗಾರ್ಮೆಂಟ್ಸ್ ಮಹಿಳೆಯರ ಸ್ಥಿತಿಗತಿ ಹಾಗೂ ಸಮಸ್ಯೆಗಳ ಸ್ವರೂಪ ಈ ಅಧ್ಯಾಯದಲ್ಲಿ ಮಹಿಳೆಯರ ಒಟ್ಟಾರೆ ಈ ಅಧ್ಯಾಯದಲ್ಲಿ ಗಾರ್ಮೆಂಟ್ಸ್ ಮಹಿಳೆಯರ ಸಾಮಾಜಿಕ-ಆರ್ಥಿಕೋತ್ತರ ಸ್ಥಿತಿಗಳ ಜೊತೆಗೆ ಮಹಿಳೆಯೇ ಎನ್ನುವ ಕಾರಣಕ್ಕೆ ಭಿನ್ನ ಬಗೆಯ ಸಮಸ್ಯೆಗಳನ್ನು ಅನುಭವಿಸುವುದನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪಿತೃಪ್ರಧಾನ ವ್ಯವಸ್ಥೆ ಮತ್ತು ಬಂಡವಾಳಶಾಹಿ ವ್ಯವಸ್ಥೆಗಳೆರಡು ಮಹಿಳೆಯರನ್ನು ಬದುಕಲು ಬಿಡದೆ ಸಾಯಲು ಬಿಡದೆ ಇರುವ ವಾಸ್ತವ ಸ್ಥಿತಿಯ ಘೋರತೆಯ ಬದುಕನ್ನು ನಡೆಸುತ್ತಿರುವುದನ್ನು ಕ್ಷೇತ್ರಾಧ್ಯಯನದ ಮೂಲಕ ವಿಶ್ಲೇಷಣೆಗೆ ಒಳಪಡಿಸಿದ್ದೇನೆ.

ಅಧ್ಯಾಯ ಐದು : ಆಯ್ದ ಪ್ರಕರಣಗಳ ಸ್ತ್ರೀವಾದಿ ವಿಶ್ಲೇಷಣೆ. ಈ ಅಧ್ಯಾಯದಲ್ಲಿ ಪ್ರತಿಯೊಬ್ಬರಿಗೂ ಸಮಸ್ಯೆಗಳಿದ್ದಾಗ್ಯೂ ಕೂಡ ಹೆಣ್ಣಾಗಿ ಹುಟ್ಟಿದ ಕಾರಣವಾಗಿ, ಹಲವು ಬಗೆಯ ಸಮಸ್ಯೆಗಳನ್ನು ಅನುಭವಿಸುವುದನ್ನು ಕಾಣಬಹುದು. ಅದರಲ್ಲೂ ಕೆಲವೊಂದು ಆಯ್ದ ಪ್ರಕರಣಗಳನ್ನು ಆಯ್ಕೆ ಮಾಡಿಕೊಂಡು ವಿಶ್ಲೇಷಣೆಗೆ ಒಳಪಡಿಸಿದ್ದೇನೆ. ನಗರದಿಂದ–ನಗರಕ್ಕೆ ವ್ಯತ್ಯಾಸವಾದರೂ ಕೂಡ ಒಟ್ಟಾರೆ ಮಹಿಳೆಯರ ಬದುಕು ಪುರುಷ ಪ್ರಧಾನ ವ್ಯವಸ್ಥೆ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ನಿಯಂತ್ರಣದಲ್ಲಿರುವುದರಿಂದ, ಅವಳ ಸ್ಥಿತಿ ಬಾಣಲೆಯಿಂದ ಬೆಂಕಿಗೆ ತಳ್ಳುವ ವ್ಯವಸ್ಥೆಯನ್ನು ಬಹು ಸೂಕ್ಷ್ಮವಾಗಿ ಕಾರ್ಯಕೈಗೊಳ್ಳುವುದನ್ನು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ. ಹೆಣ್ಣಿನ ಅಸಹಾಯಕತೆ, ಅನಿವಾರ್ಯತೆ, ಅವಶ್ಯಕತೆಯನ್ನು ಬಂಡವಾಳಶಾಹಿ ವ್ಯವಸ್ಥೆ ದುರುಪಯೋಗಪಡಿಸಿಕೊಳ್ಳುವುದನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಅಧ್ಯಯನಕ್ಕೆ ಒಳಪಡಿಸಿದ್ದೇನೆ.

ಅಧ್ಯಾಯ ಆರು : ಸಮಾರೋಪ ಈ ಅದ್ಯಯನದಲ್ಲಿ ಫಲಿತಗಳು, ಅಧ್ಯಯನ ಮಿತಿಗಳು, ಅದ್ಯಯನದ ಮುಂದಿನ ಸಾಧ್ಯತೆಗಳು, ಅಧ್ಯಯನದ ಮೂಲಕ ಮಂಡಿಸುವ ಸಲಹೆಗಳನ್ನು ಪ್ರಸ್ತಾಪಿಸಿದ್ದೇನೆ.

೬.೨ ಅಧ್ಯಯನದ ಫಲಿತಗಳು

ಭಾರತದಲ್ಲಿ ಶೇ.೧೦ಕ್ಕಿಂತ ಕಡಿಮೆ ಮಹಿಳೆಯರು ಸಂಘಟಿತ ವಲಯದಲ್ಲಿ ಶೇ.೯೦ರಷ್ಟು ಮಹಿಳೆಯರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ ಎಂದು ಹೇಳಿದರೂ ಗಾರ್ಮೆಂಟ್ಸ್ ವಲಯದಲ್ಲೇ ಶೇ.೯೦ರಷ್ಟು ಮಹಿಳೆಯರು ಕೆಲಸ ನಿರ್ವಹಿಸುವುದನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಈ ವಲಯವು ಐದು ಲಕ್ಷ ಕಾರ್ಮಿಕರ ಕುಟುಂಬಗಳಿಗೆ ಜೀವನಾಧಾರ ಆಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಆದರೂ ಬಳ್ಳಾರಿ ಮತ್ತು ಬೆಂಗಳೂರು ನಗರಗಳಲ್ಲಿ ಕೆಲಸ ಮಾಡುವ ಮಹಿಳೆಯ ಬದುಕನ್ನು ಅಧ್ಯಯನಕ್ಕೆ ಒಳಪಡಿಸಿದಾಗ, ಮಹಿಳೆಯರು ಫ್ಯಾಕ್ಟ್ರಿಯಲ್ಲಿ ಕೆಲಸ ಮಾಡುವಾಗ, ದಿನನಿತ್ಯದ ಜೀವನದಲ್ಲಿ ಅನೇಕ ಬಗೆಯ ಸಮಸ್ಯೆಗಳನ್ನು ಎದುರಿಸುವುದನ್ನು ಅಧ್ಯಯನದ ಫಲಿತಗಳ ಮೂಲಕ ಕಂಡುಕೊಳ್ಳಬಹುದಾಗಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಹಿಳೆಯರು ಭಿನ್ನ ಬಗೆಯ ಸಮಸ್ಯೆಗಳಲ್ಲಿ ತಮ್ಮ ಬದುಕನ್ನು ಕಳೆಯುತ್ತಿರುವುದನ್ನು ನಾಲ್ಕನೆ ಅಧ್ಯಾಯದ ಮೂಲಕ ಕಂಡುಕೊಳ್ಳಬಹುದಾಗಿದೆ. ಸಾಮಾಜಿಕ ಮೌಲ್ಯಗಳೆನಿಸಿದ ಕುಟುಂಬ ಮದುವೆ, ಸಂಪ್ರದಾಯ, ನಂಬಿಕೆಗಳು, ಧರ್ಮ ಇವೆಲ್ಲವೂ ಮಹಿಳೆಯರನ್ನು ಆಳುತ್ತಲೇ ಬರುತ್ತಿರುವುದರಿಂದ ಅವಳು ತನ್ನ ಅಸ್ತಿತ್ವದ ಹುಡುಕಾಟದಲ್ಲಿ ವಿಫಲಳಾಗುತ್ತಿದ್ದಾಳೆ. ಪುರುಷ ಪ್ರಧಾನ ವ್ಯವಸ್ಥೆಯ ಚೌಕಟ್ಟಿನಲ್ಲಿರುವ ಮಹಿಳೆಗೆ ವ್ಯವಸ್ಥೆಯ ಕಬಂಧ ಬಾಹುಗಳಿಂದ ಸ್ವತಂತ್ರಳಾಗಿ ವಿಮುಕ್ತಿ ಪಡೆಯಲು, ತನ್ನದೆ ಆದ ಅಸ್ತಿತ್ವವನ್ನು ಹುಡುಕಾಡುವ ಪ್ರಯತ್ನಗಳು ಅನೇಕ. ಹೆಣ್ಣಿನ ಅಸ್ತಿತ್ವವನ್ನು ಗುರುತಿಸಿ, ಪುರುಷ ಪ್ರಧಾನ ವ್ಯವಸ್ಥೆಯು ನಿರ್ಮಿಸಿದಂತಹ ಚೌಕಟ್ಟನ್ನು ಒಡೆದು, ಆ ಚೌಕಟ್ಟಿನ ಪುನರ್‌ನಿರ್ಮಾಣದ ಕಾರ್ಯಗಳನ್ನು ಅನೇಕ ಸ್ತ್ರೀವಾದಿಗಳು ಪ್ರಯತ್ನ ಮಾಡುತ್ತಿದ್ದಾರೆ.

ಜಾಗತೀಕರಣ ಸಂದರ್ಭದಲ್ಲಿ ಮಹಿಳೆಗೆ ಉದ್ಯೋಗ ಅವಕಾಶ ಸಿಕ್ಕಿರುವುದೇ ಒಂದು ಸಕಾರಾತ್ಮಕವಾದ ಸಂಗತಿಯಾಗಿದೆ. ಏಕೆಂದರೆ ಸಾಂಪ್ರದಾಯಿಕ ವ್ಯವಸ್ಥೆಯ ಎಳೆಗಳು ಮಹಿಳೆಯರ ವಿಷಯದಲ್ಲಿ ಸ್ವಲ್ಪಮಟ್ಟಿನ ಸಡಿಲತೆಯನ್ನು ಮಾಡಿಕೊಟ್ಟಿದೆ. ಹಾಗಾಗಿ ಇವತ್ತಿನ ಪ್ರಸ್ತುತ ಸಮಯದಲ್ಲಿ ಬಳ್ಳಾರಿ ನಗರವನ್ನು ಕ್ಷೇತ್ರಾಧ್ಯಯನಕ್ಕೆ ಒಳಪಡಿಸಿದಾಗ, ಐದು ಸಾವಿರಕ್ಕಿಂತ ಹೆಚ್ಚು ಮಹಿಳಾ ಕೆಲಸಗಾರರು ಫ್ಯಾಕ್ಟ್ರಿಯಲ್ಲಿ ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ. ಹಾಗೆ ಬೆಂಗಳೂರನ್ನು ತೆಗೆದುಕೊಂಡಾಗ ಐದು ಲಕ್ಷಕ್ಕಿಂತ ಹೆಚ್ಚು ಮಹಿಳಾ ಕಾರ್ಮಿಕರು ಗಾರ್ಮೆಂಟ್ಸ್ ಫ್ಯಾಕ್ಟ್ರಿಯಲ್ಲಿ ಕೆಲಸ ನಿರ್ವಹಿಸುತ್ತಿರುವುದು ಸಕಾರಾತ್ಮಕ ಸಂಗತಿ. ಏಕೆಂದರೆ ಮೊದಲೆಲ್ಲ ಕೃಷಿನೇ ಅವರ ಜೀವನಕ್ಕೆ ಆಧಾರವಾಗಿತ್ತು. ಆದರೆ ಬರಗಾಲ ಹೆಚ್ಚುತ್ತಿರುವ ಸಂದರ್ಭದಲ್ಲಿ, ವರ್ಷಪೂರ್ತಿ ಕೆಲಸ ಸಿಕ್ಕುವುದು ಒಂದು ಉತ್ತಮ ಸಂಗತಿಯಾಗಿದೆ.

ಮಹಿಳೆಯರು ಕೆಲಸಕ್ಕೆ ಹೋಗುತ್ತಿರುವುದು ಅನಿವಾರ್ಯತೆಗೂ, ಅವಶ್ಯಕತೆಗೂ, ಅಗತ್ಯತೆಗೂ, ಆಯ್ಕೆಯೂ ಒಟ್ಟಾರೆ ಉದ್ಯೋಗವಕಾಶವು ತನ್ನ ಕಾಲಮೇಲೆ ತಾನು ನಿಲ್ಲುವ ಮಟ್ಟಕ್ಕೆ ಈ ಕೆಲಸ ಸಿಕ್ಕುರುತ್ತದೆ. ಏಕೆಂದರೆ ಗಾರ್ಮೆಂಟ್ಸ್ ಫ್ಯಾಕ್ಟ್ರಿ ಕೆಲಸಕ್ಕೆ ಬರುವವರೆಲ್ಲರೂ ಹೆಚ್ಚಾನು ಹೆಚ್ಚು ಹದಿಹರೆಯದ ಹುಡುಗಿಯರು, ಗಂಡ ಬಿಟ್ಟವರು, ಗಂಡ ಸತ್ತವರು, ವಿಚ್ಛೇದನ ಹೊಂದಿದವರು ಇನ್ನೂ ಹಲವಾರು ಮಹಿಳೆಯರಿಗೆ ತಮ್ಮ ಬದುಕಿನ ಒಂದೊತ್ತಿನ ಉಪಜೀವನಕ್ಕೆ ತಾವೇ ದುಡಿದು ತಿನ್ನುವ ಅವಕಾಶ ಈ ಫ್ಯಾಕ್ಟ್ರಿಯಿಂದ ಒದಗಿಬಂದಿದೆ ಅಂತನೇ ಹೇಳಬಹುದು ಹೀಗಾಗಿ ಉದ್ಯೋಗ ಅವಕಾಶಗಳು ಸಿಕ್ಕಿರುವುದೇ ಒಂದು ರೀತಿಯ ಬಿಡುಗಡೆಯ ವಿಷಯವಾಗಿದೆ. ಏಕೆಂದರೆ ಪ್ರಾಚೀನ ಕಾಲದಿಂದಲೂ ಸಾಂಪ್ರದಾಯಿಕ ಸಮಾಜವಾಗಿರುವುದರಿಂದ ಮಹಿಳೆಯನ್ನು ಸಂಪೂರ್ಣವಾಗಿ ಮನೆಗೆ ಸೀಮಿತವಾಗಿಟ್ಟಿರುವ ಸಂದರ್ಭದಲ್ಲಿ ಜಾಗತೀಕರಣ ಪ್ರಕ್ರಿಯೆಯಿಂದ ಬಡತನ ಇನ್ನಿತರ ಹಲವಾರು ಕಾರಣಗಳಿಂದ ಮಹಿಳೆಯರು ಹೊರಗಡೆ ಬಂದು ದುಡಿಯುವುದು ಅನಿವಾರ್ಯವಾದರೂ ಸಾರ್ವಜನಿಕ ಕ್ಷೇತ್ರಕ್ಕೆ ಕಾಲಿಟ್ಟಿರುವುದೇ ವಿಶೇಷವಾಗಿದೆ. ಆದರೂ ಆಕೆ ತ್ರಿವಿಧ ಕೆಲಸಗಳನ್ನು ನಿರ್ವಹಿಸುವ ಹೊಣೆಯನ್ನು ಹೊತ್ತುಕೊಂಡು ಅನೇಕ ಬಗೆಯ ಶೋಷಣೆಗಳನ್ನು ಅನುಭವಿಸುತ್ತಿರುವುದು ವಿಷಾಧಕರ ಸಂಗತಿಯಾಗಿದೆ.

ಮಹಿಳೆಯರು ಕುಟುಂಬದಲ್ಲಿ ಅನುಭವಿಸುತ್ತಿರುವ ಹಿಂಸೆ, ದೌರ್ಜನ್ಯ, ಸಾಮಾಜಿಕ ಜೀವನದಲ್ಲಿ ಎದುರಿಸುತ್ತಿರುವ ಸಮಸ್ಯೆಗಳು, ಇದರೊಂದಿಗೆ ಕಾರ್ಖಾನೆಗಳಲ್ಲಿ ಅನುಭವಿಸುತ್ತಿರುವ ಶೋಷಣೆಯ ವಿರುದ್ಧ ಕೆಲಸ ಮಾಡಲು ಎಂದೇ ಮುನ್ನಡೆ ಹುಟ್ಟಿಕೊಂಡಿದ್ದು ಗಾರ್ಮೆಂಟ್ಸ್‌ಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಕಷ್ಟ ತೊಂದರೆಗಳನ್ನು ಗುರುತಿಸಿ ನಿವಾರಿಸುವುದು ಮುನ್ನಡೆಯ ಉದ್ದೇಶವಾಗಿದೆ. ಅವರನ್ನು ಕಾರ್ಖಾನೆಯಿಂದ ಹೊರಗೆ ಸಾಂಸ್ಕೃತಿಕವಾಗಿ ಒಗ್ಗೂಡಿಸುವುದು ಬಹಳ ಮುಖ್ಯ ಎಂಬುದನ್ನು ಮನಗಂಡು ಗಾರ್ಮೆಂಟ್ಸ್ ಮಹಿಳೆಯರ ದೈನಂದಿನ ಜೀವನದಲ್ಲಿಯೂ ಹಾಸುಹೊಕ್ಕಾಗುವಂತೆ ಮುನ್ನಡೆ ಬೆಳೆದು ನಿಂತಿದೆ. ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಗೆ ಐದು ಸಾವಿರಕ್ಕಿಂತ ಹೆಚ್ಚು ಮಹಿಳಾ ಕೆಲಸಗಾರರು ಸದಸ್ಯತ್ವ ಪಡೆದಿರುವುದು ಜೊತೆಗೆ ತಮಗಿರುವಂತ ಕಾನೂನಿನ ಸವಲತ್ತುಗಳನ್ನು ಪಡೆಯುವುದಕ್ಕೆ ಹೋರಾಟ ನಡೆಸುತ್ತಿರುವುದು ವಿಶೇಷವಾಗಿದೆ.

[illegible]

[illegible]

[illegible]

ಗಾರ್ಮೆಂಟ್ಸ್ ಕೆಲಸ ಅಕ್ಷರಸ್ಥರಿರಲಿ, ಅನಕ್ಷರಸ್ಥರಿರಲಿ ವಯಸ್ಸಿನ ನಿರ್ಧಿಷ್ಟತೆಯಿಲ್ಲದೆ, ಯಾವ ಶಿಫಾರಸ್ಸು ಇಲ್ಲದೆ ಬಹುಸುಲಭವಾಗಿ ಸಿಗುವ ಕೆಲಸವೇ ಗಾರ್ಮೆಂಟ್ಸ್ ಕೆಲಸವಾಗಿದೆ. ಉದಾ: ಕ್ಷೇತ್ರಾಧ್ಯಯನ ಸಂದರ್ಭದಲ್ಲಿ ಸಿಕ್ಕಿರುವ ಮಾಹಿತಿ ಪ್ರಕಾರ ಸಾಕಷ್ಟು ಮಹಿಳೆಯರು ಬೇರೆ ಕಡೆಯಿಂದ ಗಾರ್ಮೆಂಟ್ಸ್ ಕೆಲಸ ಸಿಕ್ಕೇಸಿಗುತ್ತದೆ ಎಂಬ ಆಶಾದಾಯಕದಿಂದಲೇ ಬಂದಿರುವವರಾಗಿರುತ್ತಾರೆ. ಇದು ಕೂಡ ಒಂದು ನಕರಾತ್ಮಕ ವಿಷಯವಾಗಿದೆ.

ಗಾರ್ಮೆಂಟ್ಸ್ ಕೆಲಸ ಸಿಕ್ಕಾಗಿಯೂ ಮಹಿಳೆಯರು ಮಾಲೀಕರಿಂದ ಹಲವು ಬಗೆಯ ಶೋಷಣೆಯನ್ನು ಅನುಭವಿಸಿರುವುದನ್ನು ಅಧ್ಯಯನದಲ್ಲಿ ಕಂಡುಕೊಂಡ ನಕರಾತ್ಮಕ ವಿಷಯವನ್ನು ಮುಂದೆ ಚರ್ಚಿಸಲಾಗಿದೆ. ಏಕೆಂದರೆ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಒಂದು ನಿಮಿಷನೂ ಬಿಡುವಿರದಂತೆ ದಿನವಿಡೀ ದುಡಿಯುವ ಮಹಿಳೆಯನ್ನು ಸಮಾಜಮುಖಿಯನ್ನಾಗಿಸಿದೆ. ಅವಳಿಗೂ ಆತ್ಮಗೌರವವಿದೆ, ಸಮಾಜಕ್ಕೆ, ದೇಶಕ್ಕೆ ಆಕೆ ಬಹುದೊಡ್ಡ ಕೊಡುಗೆಯಾಗಿ ನೀಡುತ್ತಿರುವುದನ್ನು ಆಡಳಿತಶಾಹಿ ವರ್ಗ ಮತ್ತು ಪ್ರಧಾನಧಾರೆಯ ವ್ಯವಸ್ಥೆಯು ದುರುಪಯೋಗಪಡಿಸಿಕೊಳ್ಳುವುದನ್ನು ಕಂಡುಕೊಳ್ಳಲಾಗಿದೆ.

೧. ಮಹಿಳೆ ಇತ್ತೀಚಿಗೆ ಸಾರ್ವಜನಿಕ ವಲಯದ ಉದ್ಯೋಗಕ್ಕೆ ಮುಖಾಮುಖಿಯಾಗುತ್ತಿರುವುದು ಅಲ್ಲಿಯೂ ಕೂಡಾ ವ್ಯವಸ್ಥೆ ಅವಳನ್ನು ಸೇವಾವಲಯಕ್ಕೆ ತಳ್ಳಲ್ಪಟ್ಟಿರುವುದು.

೨. ಉದ್ಯೋಗವೇ ಅವಳ ಬದುಕಿಗೆ ಅಂತಿಮ ಜೀವನದ ಆಧಾರವಾಗಿದೆ.

೩. ಕಾನೂನುಗಳು ಮಹಿಳೆಯರ ಬದುಕನ್ನು ಸುಧಾರಿಸಲು ಬಳಕೆಯಾಗುವ ಬದಲು ಆಡಳಿತಶಾಹಿ ವರ್ಗಕ್ಕೆ ಅಸ್ತ್ರಗಳಾಗಿ ಬಳಕೆಗೊಳ್ಳುತ್ತಿವೆ.

೪. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯನ್ನು ಅಧೀನ ನೆಲೆಯಲ್ಲಿ ಶಾಶ್ವತಗೊಳಿಸುವುದಕ್ಕಾಗಿ ಅವಳ ಮೇಲೆ ದಿನ ನಿತ್ಯ ಹಿಂಸೆಗಳನ್ನು ಎಸಗಲಾಗುತ್ತಿದೆ.

೫. ಕೌಟುಂಬಿಕ ವಲಯದಲ್ಲಿನ ಸ್ತ್ರೀಪುರುಷರ ಮಧ್ಯದ ಯಜಮಾನ್ಯ ಮತ್ತು ಅಧೀನ ನೆಲೆಯ ಸಂಬಂಧಗಳು ಸಾರ್ವಜನಿಕ ವಲಯಗಳಲ್ಲಿಯೂ ಮುಂದುವರೆಯುತ್ತಿವೆ. ಈವರೆಗೂ ಜಾರಿಯಾದ ಕಾನೂನುಗಳು ವಾಸ್ತವದಲ್ಲಿ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯಗಳಿಗೆ ಯಾವುದೇ ರೀತಿ ಉಪಯೋಗವಾಗುತ್ತಿಲ್ಲ.

೬. ಕೌಟುಂಬಿಕ ವಲಯದಲ್ಲಿರುವ ಮಹಿಳೆಯರು ಬದುಕಿನ ಅನಿವಾರ್ಯತೆಗಾಗಿ ಮಾಲೀಕರಿಂದ ಲೈಂಗಿಕ ಕಿರುಕುಳ ಅನುಭವಿಸುತ್ತಿರುವುದನ್ನು ಕಂಡುಕೊಳ್ಳಬಹುದಾಗಿದೆ.

೭. ಮಹಿಳೆ ಮತ್ತು ಪುರುಷ ಕಾರ್ಮಿಕರು ದಿನಕ್ಕೆ ೮ ರಿಂದ ೧೦ಗಂಟೆಗಿಂತಲೂ ಮೀರಿ ದುಡಿಯುತ್ತಾರೆ. ಹಾಗೆ ದುಡಿಯುವ ಕಾರ್ಮಿಕರ ಕೂಲಿಯಲ್ಲಿ ವ್ಯತ್ಯಾಸವನ್ನು ಕಂಡುಕೊಳ್ಳಬಹುದು.

೮. ಮಹಿಳೆಯರಿಗೆ ಅಧಿಕ ಶ್ರಮ ಕಡಿಮೆ ಕೂಲಿ ದೊರೆಯುವುದು ತಿಳಿದು ಬಂದಿದೆ.

೯. ಮಹಿಳೆಯರಿಗೆ ಮೂಲಭೂತ ಸೌಕರ್ಯಗಳು ಒದಗದಿರುವುದು, ಕನಿಷ್ಠ ಕೂಲಿ ನೀಡದೆ ಇರುವುದು, ಕೆಲಸದ ಹಂಚಿಕೆಯಲ್ಲಿ ತಾರತಮ್ಯ ಕಂಡುಬರುತ್ತವೆ.

೧೦. ಪುರುಷ ಪ್ರಧಾನ ವ್ಯವಸ್ಥೆ ಆಡಳಿತಶಾಹಿ ವರ್ಗದ ಅಧಿಕಾರ ಮನೋಭಾವ ಮಹಿಳೆಯರನ್ನು ದುರುಪಯೋಗಪಡಿಸಿಕೊಳ್ಳುತ್ತಿರುವುದು.

೧೧. ಮಹಿಳೆಯರು ಆರೋಗ್ಯದ ಬಗ್ಗೆ ಅತಿಯಾದ ನಿಷ್ಕಾಳಜಿಯನ್ನು ತೋರುವುದು ಕಂಡುಬರುತ್ತದೆ.

೧೨. ಮಹಿಳೆಯರ ದುಡಿಮೆಗೂ ಮತ್ತು ಅವರ ಬದುಕಿನ ಮೇಲೆ ನಕಾರಾತ್ಮಕ ಪರಿಣಾಮಗಳಾಗಿರುವುದು ಕಂಡುಬರುತ್ತದೆ.

೧೩. ಕಾರ್ಖಾನೆಯ ಮಾಲೀಕ ಮತ್ತು ಕಾರ್ಮಿಕರ ನಡುವಿನ ಸಂಬಂಧ ಯಜಮಾನ್ಯ ಸಂಸ್ಕೃತಿಯಲ್ಲಿ ಪ್ರತಿಬಿಂಬಿಸುತ್ತದೆ.

೧೪. ಜಾಗತಿಕ ಪರಿಣಾಮದಿಂದಾಗಿ ಭಾಷೆಯು ಒಂದು ಪ್ರಮುಖ ಮಾನದಂಡವಾಗಿ ಆಡಳಿತಶಾಹಿ ವರ್ಗವು ಇಡೀ ಹೆಣ್ಣು ಕುಲವನ್ನು ನಿಯಂತ್ರಿಸಲ್ಪಟ್ಟಿದೆ.

೧೫. ಮಾಲೀಕರು ಮಹಿಳೆಯರ ಅಸಾಹಯಕತೆ ಅನಿವಾರ್ಯತೆ ಫ್ಲೆಕ್ಸಿಬಲ್ ಗುಣವನ್ನು ದುರುಪಯೋಗಪಡಿಸಿಕೊಳ್ಳುವುದನ್ನು ಕಂಡುಕೊಳ್ಳಬಹುದಾಗಿದೆ.

೧೬. ಕಾನೂನು ತಿಳುವಳಿಕೆ ಇಲ್ಲದಿರುವುದು ಇದ್ದರೂ ಕೂಡಾ ಅವುಗಳನ್ನು ಬಳಸಿಕೊಳ್ಳದ ಮನಸ್ಥಿತಿಯನ್ನು ಅಧಿಕಾರಿಶಾಹಿ ವರ್ಗ ಸೃಷ್ಟಿಸಿರುವುದು ಕಂಡುಕೊಳ್ಳಬಹುದು.

೧೭. ಮಾಲೀಕರ ಅತಿಯಾದ ಲಾಭಧೋರಣೆಯಿಂದ ಕಾರ್ಮಿಕರನ್ನು Black mail ಮಾಡುವುದರ ಮೂಲಕ ಅತಿಯಾದ ಶೋಷಣೆ ಆಗುತ್ತಿರುವುದು ಕಂಡುಕೊಳ್ಳಬಹುದಾಗಿದೆ.

೬.೩ ಅಧ್ಯಯನದ ಮಿತಿಗಳು

ಯಾವುದೇ ಒಂದು ಚಿಂತನೆ, ಆಲೋಚನೆ ಅಥವಾ ಸಂಶೋಧನೆ ತಾನು ಪಡೆದುಕೊಂಡ ಅಂಶಗಳೇ ಅಂತಿಮವೆನ್ನುವ ಹಾಗಿಲ್ಲ. ಏಕೆಂದರೆ ಯಾವುದೇ ಒಂದು ಚಿಂತನೆಗೆ ಸಂಶೋಧನೆಗೆ ಅಂತಿಮವೆನ್ನುವುದು ಇರುವುದಿಲ್ಲ. ಅದಕ್ಕೆ ಅದರದೇ ಆದ ಕಾಲಮಿತಿ ಮತ್ತು ವಿಷಯ ಮಿತಿಗಳು ಸೇರಿಕೊಂಡಿರುತ್ತವೆ. ಸಂಶೋಧನೆ ಎನ್ನುವುದು ಸತ್ಯವನ್ನು ಕಟ್ಟಿಕೊಡುವುದಿಲ್ಲ. ಬದಲಾಗಿ ಅದು ಆ ವಿಷಯದ ಸತ್ಯದ ಪ್ರತಿನಿಧೀಕರಣವಾಗಿರುತ್ತದೆ. ಆಯಾ ಸಂಶೋಧಕರು ಕಟ್ಟಿಕೊಡುವ

ದೃಷ್ಟಿಕೋನವಾಗಿರುತ್ತದೆ. ಹಾಗೇನೇ ಈ ಅಧ್ಯಯನದಲ್ಲಿಯೂ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ದುಡಿಯುವ ಮಹಿಳೆಯರ ಕುರಿತು ಅಧ್ಯಾಯವು ಕೆಲವು ಮಿತಿಗಳನ್ನು ಒಳಗೊಂಡಿದೆ ಎಂದೇ ಹೇಳಬಹುದು.

ಸಂಶೋಧನೆಗಿರುವ ಕಾಲದ ಮಿತಿಯಿಂದ ಸಂಶೋಧನೆಯಲ್ಲೂ ಕೆಲವು ಮಿತಿಗಳನ್ನು ಹಾಕಿಕೊಳ್ಳಲಾಗಿದೆ. ಅಸಂಘಟಿತ ವಲಯವೆಂದು ಗುರುತಿಸಿಕೊಳ್ಳುವ ಗಾರ್ಮೆಂಟ್ಸ್ ಕಾರ್ಖಾನೆಯ ಒಟ್ಟಾರೆ ಅಧ್ಯಯನವನ್ನು ಅಳವಡಿಸಿಕೊಳ್ಳದೆ ಇಲ್ಲಿ ದುಡಿಯುವ ಮಹಿಳಾ ಕಾರ್ಮಿಕರ ಬದುಕನ್ನು ಮಾತ್ರ ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಮತ್ತು ಅಧ್ಯಯನದ ಅನುಕೂಲಕ್ಕಾಗಿ ಹಾಗೂ ಹಿಂದುಳಿದ ಮತ್ತು ಮುಂದುವರೆದ ಪ್ರದೇಶಗಳಲ್ಲಿನ ಮಹಿಳಾ ಬದುಕನ್ನು ಗ್ರಹಿಸಲು ಬಳ್ಳಾರಿ ಮತ್ತು ಬೆಂಗಳೂರಿನ ಗಾರ್ಮೆಂಟ್ಸ್ ಮಹಿಳಾ ಬದುಕನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವುದು ಈ ಅಧ್ಯಯನದ ಮಿತಿಯಾಗಿದೆ.

೬.೪ ಅಧ್ಯಯನದ ಮುಂದಿನ ಸಾಧ್ಯತೆಗಳು

ಈ ಹಿಂದೆಯೇ ಪ್ರಸ್ತಾಪಿಸಿದಂತೆ ಯಾವುದೇ ಒಂದು ಚಿಂತನೆಗೆ ಆಲೋಚನೆಗೆ ಹಾಗೂ ಸಂಶೋಧನೆಗೂ ಇದೇ ಅಂತಿಮ ಎನ್ನುವ ಹಾಗಿಲ್ಲ. ಎಲ್ಲಾ ಸಂಶೋಧನೆಗಳಿಗೂ ಇರುವಂತೆ ಈ ಸಂಶೋಧನೆಗೂ ಇರುವ ಮುಂದಿನ ಸಾಧ್ಯತೆಗಳನ್ನು ಹೀಗೆ ಗ್ರಹಿಸಲಾಗಿದೆ.

೧. ಬಂಡವಾಳಶಾಹಿ ವ್ಯವಸ್ಥೆಯಿಂದ ಸಾರ್ವಜನಿಕ ಜೀವನದಲ್ಲಿ ಅಂದರೆ ಗಾರ್ಮೆಂಟ್ಸ್ ಫ್ಯಾಕ್ಟ್ರಿಗಳಿಂದ ಆಗುತ್ತಿರುವ ಪರಿಣಾಮಗಳು ಕುರಿತ ಅಧ್ಯಯನ

೨. ಭಾರತದಲ್ಲಿರುವ ನಿರುದ್ಯೋಗ ಸಮಸ್ಯೆ ಹೋಗಲಾಡಿಸಲು ಗಾರ್ಮೆಂಟ್ಸ್ ಫ್ಯಾಕ್ಟ್ರಿಗಳಿಂದ ಸಿಗುತ್ತಿರುವ ಸೌಲಭ್ಯಗಳ ಅಧ್ಯಯನ.

೩. ಗಾರ್ಮೆಂಟ್ಸ್ ಮಹಿಳಾ ಬದುಕನ್ನು ಇನ್ನೂ ಸೂಕ್ಷ್ಮವಾಗಿ ಗ್ರಹಿಸಲು ಇಂತಹ ಅಧ್ಯಯನಗಳನ್ನೇ ಮುಂದುವರೆಸುವುದರಿಂದ ಜಾಗತೀಕರಣ ಖಾಸಗೀಕರಣದಿಂದ ಹೆಚ್ಚಾಗಿ ದುಡಿಮೆಯಲ್ಲಿ ತೊಡಗಿಕೊಂಡ ಮಹಿಳಾ ಬದುಕಿನ ಸಂಕೀರ್ಣತೆಯನ್ನು ಗ್ರಹಿಸಲು ಸಾಧ್ಯವಾಗುವುದು ಇಂತಹ ಅಧ್ಯಯನವನ್ನೇ ಮುಂದುವರೆಸುವ ಸಾಧ್ಯತೆಯು ಇದೆ.

೪. ಗಾರ್ಮೆಂಟ್ಸ್ ಅಂತಹ ಕಾರ್ಖಾನೆಗಳು ಮಹಿಳಾ ಬದುಕಿನಲ್ಲಿ ಅಥವಾ ಪುರುಷ ಬದುಕಿನಲ್ಲಿ ಎಂತಹ ಬದಲಾವಣೆಗಳನ್ನು ತಂದಿವೆ ಎಂಬುದರ ಕುರಿತು ತೌಲನಿಕ ಅಧ್ಯಯನ ಮಾಡಬಹುದು.

೬.೫ ಅಧ್ಯಯನದ ಮೂಲಕ ಮಂಡಿಸುವ ಸಲಹೆಗಳು

೧. ಈ ವೃತ್ತಿಯ ಬಗ್ಗೆ ಸಮಾಜದಲ್ಲಿ ಇರುವ ಲಿಂಗಪೂರ್ವಗ್ರಹಿಕೆ ಹೋಗಬೇಕು ಕೆಲಸದ ಬಗ್ಗೆ ಇರುವ ಕೀಳು ಮನೋಭಾವನೆಯನ್ನು ಹೋಗಲಾಡಿಸಬೇಕು. ಮಹಿಳೆಯರಿಗೆ ವಿವಾಹವೊಂದೇ

ಜೀವನದ ಮುಖ್ಯ ಗುರಿಯಲ್ಲ. ಅದರಾಚೆಗೂ ಅವಳು ತನ್ನ ಬದುಕನ್ನು ವಿಸ್ತರಿಸಕೊಳ್ಳಬಹುದು ಎಂಬುದನ್ನು ತಿಳಿದುಕೊಳ್ಳಬೇಕು ಲೈಂಗಿಕತೆಗೆ ಸಂಬಂಧಿಸಿದಂತೆ ಅವಳ ಮೇಲೆ ನಿರ್ಬಂಧ ಹಾಕಬಾರದು.

೨. ಗಾರ್ಮೆಂಟ್ಸ ಮಹಿಳೆಯರನ್ನು ಅಸ್ಪರ್ಶರೆಂದು ಕಾಣದೆ ಗೌರವದಿಂದ ಕಾಣಬೇಕು.

೩. ಗಾರ್ಮೆಂಟ್ಸ ಮಹಿಳೆಯರಿಗೆ ಹೆರಿಗೆ ರಜೆ ನೀಡಬೇಕು. ಗರ್ಭಿಣಿ ಇದ್ದಾಗ ಗರ್ಭಪಾತವಾದಗ ಹೆರಿಗೆ ಆದ ಸಂಧರ್ಭದಲ್ಲಿ ಕೆಲವೊಂದು ಸವಲತ್ತುಗಳನ್ನು ಒದಗಿಸಬೇಕು ಇಂತಹ ಸಂಧರ್ಭದಲ್ಲಿ ಪ್ರೊಡಕ್ಷನ್ ಒತ್ತಡ ಕಡಿಮೆಮಾಡಬೇಕು.

೪. ಕೆಲಸ ಸ್ಥಳದಲ್ಲಿ ಶೌಚಾಲಯ ವ್ಯವಸ್ಥೆ, ವಿಶ್ರಾಂತಿ ಸ್ಥಳ ಇನ್ನಿತರ ಮೂಲಭೂತ ಸೌಲಭ್ಯಗಳನ್ನು ಒದಗಿಸಕೊಡಬೇಕು.

೫. ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಬೇಕು.

೬. ಹೆಚ್ಚಿನ ಅವದಿಗೆ ಹೆಚ್ಚಿನ ಕೂಲಿ ಕೊಡಬೇಕು.

೭. ಹೆಚ್ಚಿನ ಅವದಿ (೦.೭ – Over Time) ಕೆಲಸ ಮಾಡಲು ಆಗದಿದ್ದರೂ ಮಾಲೀಕರು ಕೆಲಸ ಮಾಡಲು ಮಹಿಳೆಯರಿಗೆ ಅವಕಾಶ ಕೊಡಬೇಕು.

೮. ಕೆಲಸದ ಸ್ಥಳದಲ್ಲಿ ಪುರುಷ ಸಹೋದ್ಯೋಗಿಗಳು ಮಹಿಳೆಯರ ಜೋತೆ ಅಸಭ್ಯವಾಗಿ ವರ್ತಿಸಿದರೆ ಲೈಂಗಿಕ ಕಿರುಕುಳ ನೀಡಿದರೆ ಮತ್ತು ಅವರ ವ್ಯಕ್ತಿತ್ವಕ್ಕೆ ದಕ್ಕೆ ತರುವ ರೀತಿಯಲ್ಲಿ ನಡೆದುಕೊಂಡರೆ ತತ್‌ಕ್ಷಣದಲ್ಲಿ ಅವರಿಗೆ ಶಿಕ್ಷೆಯಾಗುವ ರೀತಿಯಲ್ಲಿ ಕಾನೂನಿನ ನಿಯಾಮವಳಿ ಸರಿಯಾದ ರೀತಿಯಲ್ಲಿ ಜಾರಿಗೊಳ್ಳಬೇಕು. ಕಾನೂನುಗಳು ಕೇವಲ ಪುಸ್ತಕ ಮಾತಾಗದೆ ವಾಸ್ತವದಲ್ಲಿ ಜಾರಿಗೊಳ್ಳಬೇಕು.

೯. ದುಡಿಯುವ ಕ್ಷೇತ್ರಕ್ಕೆ ಪ್ರವೇಶಿಸಿದಂತೆ ಮಹಿಳೆಯರಿಗೆ ಗೃಹಿಣಿ ಕರ್ತವ್ಯದಿಂದ ರಿಯಾಯತಿ ದೊರೆಯಬೇಕು. ಸಾಂಪ್ರಾದಯಿಕ ವ್ಯವಸ್ಥೆ ನೀಡಲಾದ ಶೀಲ ಪಾತಿ ವೃತ್ಯ ತಾಯ್ತನ ಮೊದಲಾದ ಸಂಗತಿಗಳನ್ನು ಅವಳ ಅಸ್ತಿತ್ವದ ನೆಲೆಯಿಂದ ನಿರ್ವಚನಗೊಳ್ಳಬೇಕು.

೧೦. ಸ್ತ್ರೀ ಪುರುಷರ ದುಡಿಮೆಯನ್ನು ಸಮಾನವಾಗಿ ಕಾಣಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು.

೧೧. ಕೆಲಸ ಹಂಚಿಕೆಯಲ್ಲಿ ಸಮಾನತೆ ಇರುಬೇಕು.

೧೨. ಕೌಶಲ್ಯ ಪರಿಣಿತಿ, ಅನುಭವಕ್ಕೆ ಹೆಚ್ಚಿನ ಆಧ್ಯತೆ ನೀಡಬೇಕು.

೧೩. ಮಹಿಳೆಯರ ಅಸಹಾಯಕತೆ ಅನಿವಾರ್ಯತೆಯನ್ನು ಮಾಲೀಕರು ದುರುಪಯೋಗ ಪಡಿಸಿಕೊಳ್ಳಬಾರದು.

೧೪. ಮಕ್ಕಳ ಪಾಲನೆ ಪೋಷಣೆಗೆ ಕ್ರಷ್ ವ್ಯವಸ್ಥೆ ಮಾಡಬೇಕು. ತರಬೇತಿ ಹೊಂದಿದ ಆಯಾಗಳನ್ನು ನೇಮಕಮಾಡಬೇಕು.

೧೫. ಸ್ವಚ್ಛವಾದ ನೀರು, ಗಾಳಿ, ಬೆಳಕು, ಮಾಸ್ಕ್, ಹ್ಯಾಂಡ್ ಗ್ಲೋಜ್ ಇನ್ನಿತರ ಸೌಲಭ್ಯಗಳನ್ನು ಅಧಿಕಾರಗಳು ಬಂದಾಗ ಒದಗಿಸದೆ ಪ್ರತಿನಿತ್ಯ ಒದಗಿಸಬೇಕು.

೧೬. ಕಾರ್ಮಿಕರ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿವಹಿಸುವುದು.

೧೭. ಕೆಲಸದ ಅವಧಿಯಲ್ಲಿ ಗಾಯಗಳಾದಾಗ ಮರಣ ಹೊಂದಿದಾಗ ಪರಿಹಾರ ನಿಧಿ ಕೊಡಬೇಕು.

೧೮. ಮಾಲೀಕರು ಫ್ಯಾಕ್ಟ್ರಿಯನ್ನು ಇದ್ದಕ್ಕಿದ್ದಂತೆ ಮುಚ್ಚಿದರೆ ಕಾರ್ಮಿಕರಿಗೆ ಕಾರಣವನ್ನು ನೀಡಬೇಕು. ಜೊತೆಗೆ ಅವರಿಗೆ ಬೇರೆ ಕಡೆ ಕೆಲಸವನ್ನು ಒದಗಿಸಬೇಕು.

೧೯. ಕಾರ್ಮಿಕರಿಗೆ ಐ.ಎಫ್. ಬೋನಸ್ ಇ.ಎಸ್.ಐ. ಸೌಲಭ್ಯಗಳನ್ನು ಮಾಲೀಕರು ಒದಗಿಸಬೇಕು. ಜೊತೆಗೆ ಆಡಳಿತಾಧಿಕಾರಿಗಳು ಕಾರ್ಮಿಕರಿಗೆ ವಾಸ್ತವದಲ್ಲಿ ಜಾರಿಗೊಳ್ಳುತ್ತಿದ್ದಾವೊ ಇಲ್ಲವೊ ಎಂಬುದನ್ನು ಪ್ರತಿ ತಿಂಗಳು ಪರೀಶಿಲನೆ ಮಾಡಬೇಕು.

೨೦. ಸರ್ಕಾರ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯಂತೆ ಸಂಘಟನೆಗಳಿಗೆ ಸಹಕಾರ ನೀಡಿ ಮಹಿಳೆಯರ ಮೇಲೆ ಆಗುತ್ತಿರುವಂತ ಶೋಷಣೆ ದೌರ್ಜನ್ಯಗಳನ್ನು ಹೋಗಲಾಡಿಸಲು ಸಾಧ್ಯವಾಗುತ್ತದೆ.

೨೧. ಜಾಗತೀಕರಣದ ಸಂಧರ್ಭದಲ್ಲಿ ಅತಿ ಹೆಚ್ಚು ಉತ್ಪಾದಿಸುವ ಉದ್ಯಮ ಅಂದರೆ ಗಾರ್ಮೆಂಟ್ಸ ಇಂತಹ ಫ್ಯಾಕ್ಟ್ರಿಯಲ್ಲಿ ಅತಿ ಹೆಚ್ಚು ಮಹಿಳಾ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ಸರ್ಕಾರ ಇಂತಹ ಮಹಿಳೆಯರಿಗೆ ಹಲವಾರು ಯೋಜನೆಗಳನ್ನು ಕಾರ್ಯರೂಪಗೊಳಿಸುವುದೇ ಇಂದಿನ ಪ್ರಸ್ತೂತ ದಿನದ ಅವಶ್ಯಕತೆಯಾಗಿದೆ.

[illegible]

ಅನುಬಂಧಗಳು

- ಗ್ರಂಥಋಣ
- ಪ್ರಶ್ನಾವಳಿ ಮಾದರಿ
- ಛಾಯಾಚಿತ್ರಗಳು

ಆಕರ ಗ್ರಂಥಗಳು

೧. ಅಮರೇಶ ನುಗಡೋಣಿ(ಸಂ), ಕನ್ನಡ ಸಂಶೋಧನೆಯ ವೈಧಾನಿಕತೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

೨. ಅನುಸೂಯ ಕಾಂಬಳೆ, ವಿಚಾರ ಸಾಹಿತ್ಯ ಹೆಣ್ಣು, ವೈಚಾರಿಕ ಸಾಹಿತ್ಯ ಪ್ರಕಾಶನ ರಾಯಭಾಗ, ೧೯೯೯

೩. ಅನಂತಮೂರ್ತಿ, ಯು.ಆರ್. ಹಿಂಸೆಯ ಎಡ–ಬಲ, ಅಭಿನವ ಪ್ರಕಾಶನ, ಬೆಂಗಳೂರು, ೨೦೦೭

೪. ಅಂದನೂರು ಶೋಭ, ಮಹಿಳೆಯ ಮುನ್ನಡೆ, ಮಾನಸಿ ಪ್ರಕಾಶನ, ಬೆಂಗಳೂರು, ೧೯೮೮

೫. ಅನಂತರಾಮರಾವ್, ಸುವರ್ಣ ಕರ್ನಾಟಕ ದರ್ಶನ, ವಿದ್ಯಾ ಪಬ್ಲಿಕೇಶನ್, ಕದ್ರಿ ಮಂಗಳೂರು, ೨೦೦೬

೬. ಆಶಾದೇವಿ ಎಂ.ಎಸ್, ಸ್ತ್ರೀಮತವನುತ್ತರಿಸಲಾದಿತೇ?, ಅಕ್ಷರ ಪ್ರಕಾಶನ ಸಾಗರ, ೨೦೦೫

೭. ಇಂದಿರಾ ಆರ್, ಮಹಿಳೆ ಮತ್ತು ಕೌಟುಂಬಿಕ ಹಿಂಸೆ, ರಾಘವ ಟ್ರಸ್ಟ್, ಮೈಸೂರು, ೨೦೦೦

೮. ಇಂದಿರಾ ಆರ್., ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೯. ಉಷಾ ಎಂ., ಮಹಿಳೆ ಮತ್ತು ಜಾತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೧೦. ಉಷಾ ಎಂ., ಮಹಿಳಾ ಚಳುವಳಿಗಳು ಮತ್ತು ಮಹಿಳಾ ವಿಷಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

[illegible]

೧೧. ಉಷಾ ಎಂ. (ಸಂ), ಮಹಿಳಾ ಅಧ್ಯಯನ ಸಂಚಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೨. ಉಷಾ ಎಂ. (ಸಂ), ಮಹಿಳಾ ಅಧ್ಯಯನ ಸಂಚಿಕೆ–೨೦೦೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೩. ಉಷಾ ಎಂ. (ಸಂ), ಮಹಿಳಾ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೪. ಒಡೆಯರ್ ಡಿ. ಹೆಗ್ಗಡೆ, ಮಹಿಳಾ ಹಕ್ಕುಗಳು, ಅರ್ಜುನ್ ಪಬ್ಲಿಷಿಂಗ್ ಹೌಸ್, ೨೦೦೬

೧೫. ಕವಿತಾ ರೈ ಬಿ.ಆರ್., ಮಹಿಳಾ ಅಸ್ತಿತ್ವದ ಸಂಕಥನ, ಸಿ.ವಿ.ಜಿ, ಬೆಂಗಳೂರು, ೨೦೦೫

೧೬. ಕಮಲಾ ಹಂಪನಾ(ಅನು), ಡಾ. ಬಿ.ಆರ್.ಅಂಬೇಡ್ಕರ್ ಮತ್ತು ಜಾತಿ ಮೀಮಾಂಸೆ, ಸಿ.ವಿ.ಜಿ.ಪಬ್ಲಿಕೇಷನ್, ಬೆಂಗಳೂರು, ೨೦೦೬

೧೭. ಕಾಟ್ರಳ್ಳಿ ಮಹಬಲೇಶ್ವರ, ಕೇಂದ್ರಿಕರಣ ಒಂದು ಪ್ರಯೋಗ, ಅಪೂರ್ವ ಪ್ರಕಾಶನ, ಹರಪನಹಳ್ಳಿ, ೨೦೦೦

೧೮. ಕೃಷ್ಣಪ್ಪ, ಪ್ರೊ. ಬಿ. ಕೃಷ್ಣಪ್ಪ ಚಳುವಳಿ ಮತ್ತು ಬರಹಗಳು, ಬಿ.ಕೃಷ್ಣಪ್ಪ ಟ್ರಸ್ಟ್, ಬೆಂಗಳೂರು–೨೦೦೩

೧೯. ಕೋತಾಯಿ ಕೃಷ್ಣ, ಗ್ರಾಮೀಣಾಭಿವೃದ್ಧಿಯ ಕೆಲವು ಚಿಂತನೆಗಳು, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ೧೯೯೮

೨೦. ಕಮಲ ಎಂ.ಆರ್., ಕಪ್ಪು ಹಕ್ಕಿಯ ಬೆಳಕಿನ ಹಾಡು, ಕಥನ ಪ್ರಕಾಶನ, ಬೆಂಗಳೂರು, ೨೦೦೮

೨೧. ಕಂಬಾರ ಚಂದ್ರಶೇಖರ, ದೇಶೀಯ ಚಿಂತನೆ, ಅಂಕಿತ ಪುಸ್ತಕಾಲಯ, ಬೆಂಗಳೂರು, ೨೦೦೪

೨೨. ಕೋಟಗಾನಹಳ್ಳಿ ರಾಮಯ್ಯ (ಸಂ), ತಲಪರಿಗೆ, ಕರ್ನಾಟಕ ರಾಜ್ಯ, ಪ.ಜಾ–ಪ.ವ. ಅಭಿವೃದ್ಧಿ ನಿಗಮ, ಬೆಂಗಳೂರು, ೨೦೦೫

೨೩. ಕಬ್ಬೂರ ಕೆ.ಎಸ್., ಭಾರತದಲ್ಲಿ ಪ್ರಜಾಪ್ರಭುತ್ವ, ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೨

೨೪. ಕೃಷ್ಣಮೂರ್ತಿ ಮತ್ತೂರು, ಗಾಂಧಿ ಉಪನಿಷತ್, ಎಂ.ಪಿ. ಬಿರ್ಲಾ ಫೌಂಡೇಶನ್ ರೇಸ್‌ಕೋರ್ಸ್, ಬೆಂಗಳೂರು, ೨೦೦೨

೨೫. ಗಾಯತ್ರಿ ನಾವಡ, ವಿರಚನೆ, ಎನ್.ಎಲ್.ಎ.ಎಂ.ಎಸ್. ಪಬ್ಲಿಕೇಷನ್, ಕೋಟೇಶ್ವರ, ೧೯೯೨

೨೬. ಗಾಯತ್ರಿ ನಾವಡ, ಮಹಿಳಾ ಸಂಕಥನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩

೨೭. ಗಾಡ್ವಿನ್ ಸಿರಿ, ದಲಿತ ಕ್ರೈಸ್ತರು, ಕ್ರಿಶ್ಚಿಯನ್ ಇನ್ಸ್‌ಟಿಟ್ಯೂಟ್ ಫಾರ್ ಸ್ಟಡಿ ಆಫ್ ರಿಜನಲ್ ಅಂಡ್ ಸೊಸಾಯಿಟಿ, ಬೆಂಗಳೂರು, ೧೯೯೭

೨೮. ಗೊಳಸಂಗಿ ಅರ್ಜುನ, ದಲಿತರ ಬದುಕು ಮತ್ತು ಸಂಸ್ಕೃತಿ

೨೯. ಗೋಪಾಲರಾವ್ ಎಂ.ವೈ., ಭಾರತೀಯ ನಾರಿ ಅಂದು ಇಂದು, ಭೈರವ ಪ್ರಕಾಶನ, ಚಿಕ್ಕಮಗಳೂರು, ೨೦೦೦

೩೦. ಗಣೇಶ್ ಮೊಗಳ್ಳಿ, ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೪

೩೧. ಗೀತಾ ಕೃಷ್ಣಮೂರ್ತಿ, ಮಹಿಳೆ, ಸಮಾಜ ಮತ್ತು ಕಾನೂನು, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೭

೩೨. ಗೀತಾ ಕೃಷ್ಣಮೂತಿ, ಮಹಿಳಾ ಹಕ್ಕುಗಳು: ಮಾನವ ಹಕ್ಕುಗಳ ನೆಲೆಯಲ್ಲಿ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೯

೩೩. ಗಾಯತ್ರಿ ಎನ್., ಮಹಿಳೆ ಬಿಡುಗಡೆಯ ಹಾದಿಯಲ್ಲಿ, ನವಕರ್ನಾಟಕ ಪ್ರಕಾಶನ, ೧೯೯೬

೩೪. ಚಂದ್ರಶೇಕರ್ ಟಿ.ಆರ್., ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೩

೩೫. ಚಂದ್ರಪೂಜಾರಿ ಎಂ., ಸಂಶೋಧಕರು ಮತ್ತು ಕ್ಷೇತ್ರಕಾರ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೮

೩೬. ಚಂದ್ರಪೂಜಾರಿ ಎಂ., ಸಂಶೋಧನಾ ಜವಾಬ್ದಾರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೮

೩೭. ಚಂದ್ರಪೂಜಾರಿ ಎಂ., ಸಂಶೋಧನಾ ಪ್ರಸ್ತಾವ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೫

೩೮. ಚಂದ್ರಪೂಜಾರಿ ಎಂ., ಸಮಾಜ ಸಂಶೋಧನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೫

೩೯. ಚಂದ್ರಶೇಖರ್ ಬಿ.ಎಸ್., ಸಮಾಜ ವಿಜ್ಞಾನಗಳಲ್ಲಿ ಸಂಶೋಧನಾ ವಿಧಾನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೨೦೦೧

೪೦. ಚಂದ್ರಶೇಖರ್ ಮತ್ತು ಎಂ. ಪೂಜಾರಿ (ಸಂ), ಅಭಿವೃದ್ಧಿ ಅಧ್ಯಯನ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೪೧. ಚಂಡಾಲ, ಕರ್ನಾಟಕ ಚಳುವಳಿಗಳು ಮತ್ತು ಅಂಬೇಡ್ಕರ್, ಚೈತ್ರ ಪ್ರಕಾಶನ, ಚಿಕ್ಕತಿರುಪತಿ, ಕೋಲಾರ, ೧೯೯೨

೪೨. ಚಿಂತಾಮಣಿ ಎಂ. ಎಂ., ಭಾರತೀಯ ಸಮಾಜದ ಸಮಾಜಶಾಸ್ತ್ರ, ಅರ್ಚನಾ ಬುಕ್‌ಹೌಸ್, ಬೆಂಗಳೂರು, ೧೯೯೯

೪೩. ಚನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕ ಸ್ತ್ರೀ ಸಮಾಜ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦

೪೪. ಚಂದ್ರಶೇಖರ್ ಟಿ.ಆರ್., ಕರ್ನಾಟಕ ಜಿಲ್ಲಾ ಅಭಿವೃದ್ಧಿ ಅಧ್ಯಯನ ಕೊಪ್ಪಳ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೪೫. ಚಂದ್ರಶೇಖರ್ ಟಿ.ಆರ್. (ಸಂ), ದಲಿತ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೪೬. ಚಂದ್ರಶೇಖರ್ ಟಿ.ಆರ್. ಅಭಿವೃದ್ಧಿ ಅಧ್ಯಯನ (ಸಂಪುಟ ೨, ಸಂಚಿಕೆ೧), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೪೭. ಚಂದ್ರಶೇಖರ ಟಿ. ಆರ್., ಗ್ರಾಮೀಣಾಭಿವೃದ್ಧಿ ಮತ್ತು ವಿಕೇಂದ್ರಿಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೪೮. ಚಂದ್ರಕಾಂತ ಪೋಕಳೆ(ಅನು), ೨೦೦೮, ಚಾರ್ವಾಕನಿಂದ ಮಾರ್ಕ್ಸ್‌ವರೆಗೆ, ಕ್ರಿಯಾ ಪ್ರಕಾಶನ, ೨೦೦೯

೪೯. ಚಂದ್ರಶೇಖರ್ ಟಿ.ಆರ್., ವಿಕೇಂದ್ರಿಕರಣ ತತ್ವ ಮತ್ತು ಆಚರಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೫೦. ಚಂದ್ರಶೇಖರ್ ಎಸ್., ಆಧುನಿಕ ಕರ್ನಾಟಕ ಆಂದೋಲನಗಳು, ನಮ್ಮ ಪ್ರಕಾಶನ, ಬಿಳಿಗೆರೆ, ೨೦೦೬

೫೧. ಜವರಯ್ಯ ಮ.ನ. ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು, ೧೯೯೫

೫೨. ಜೋಗನ್ ಶಂಕರ್ 'ಗ್ರಾಮ ಸಮಾಜ' ಜೀವ ಪ್ರಕಾಶನ ಮೈಸೂರು ೧೯೯೫

೫೩. ದೇಜಗೌ, ಸಮಾಜವಾದಿ ರಾಮಮನೋಹರ ಲೋಹಿಯಾ ಸಹ್ಯಾದ್ರಿ ಪ್ರಕಾಶನ ,೧೯೮೯

೫೪. ದೇಜಗೌ, ಆಧುನಿಕ ಭಾರತದ ರಾಜಕೀಯ ವಿಚಾರಧಾರೆ, ಶೃಂಗಾರ ಪ್ರಕಾಶನ ಚಿಕ್ಕನಾಯಕನಹಳ್ಳಿ ೨೦೦೩

[illegible]

೫೫. ದಿಬ್ಬದ ಶಾಂತಿನಾಥ, ವೈಚಾರಿಕ ಲೇಖನಗಳು, ಪ್ರಸಾರಾಂಗ ಗುಲಬರ್ಗ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫

೫೬. ದಪ್ತಗೀರ ಸಾಬ್ ದಿನ್ನಿ(ಸಂ), ಜಾಗತೀಕರಣ ಮತ್ತು ಸಂಸ್ಕೃತಿ ಕನಸು ಪ್ರಕಾಶನ, ೨೦೦೪

೫೭. ನೇಮಿಚಂದ್ರ(ಸಂ), ಮಹಿಳಾ ಲೋಕ, ನವಕರ್ನಾಟಕ ಪ್ರಕಾಶನ, ೨೦೦೫

೫೮. ನರಗುಂದ ಎಸ್.ಬಿ., ಭಾರತದ ರಾಷ್ಟ್ರೀಯ ಚಿಂತನ, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೪

೫೯. ನಂಜಮಣ್ಣಿ ಎಂ., ಭಾರತೀಯ ಸಾಮಾಜಿಕ ಸಂಸ್ಥೆಗಳು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೨೦೦೩

೬೦. ನಿರುಪಮ ಎಂ., ಧರ್ಮಶಾಸ್ತ್ರಗಳು ಸ್ತ್ರೀ ಹಾಗೂ ಶೋಷಣೆ, ಆರತಿ ಪಬ್ಲಿಕೇಶನ್, ಬೆಂಗಳೂರು, ೧೯೯೬

೬೧. ನೇಮಿಚಂದ್ರ, ಮಹಿಳಾ ಅಧ್ಯಯನ, ಅಂಕಿತ ಪ್ರಕಾಶನ, ಬೆಂಗಳೂರು, ೨೦೦೧

೬೨. ನೀಲಾ ಕೆ., ಬದುಕು ಬಂದೀಖಾನೆ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ರಾಜ್ಯ ಸಮಿತಿ, ೨೦೦೧

೬೩. ಪಾರ್ವತಮ್ಮ ಸಿ., ಮೀಸಲಾತಿ ಒಂದು ಗಗನ ಕುಸುಮ, ಶಿಕ್ಷಣ ಮುಖೇನ ಪ್ರಗತಿ, ಹುಣಸೂರು, ೨೦೦೧

೬೪. ಪಾಟೀಲ ವಸಂತ, ಪಂಚಾಯತಿ ಆಡಳಿತ ಸಾಧಕ ಭಾದಕಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೮

೬೫. ಪ್ರೀತಿಶುಭಚಂದ್ರ, ಮಹಿಳಾ ಅಧ್ಯಯನ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೬೬. ಬರಗೂರು ರಾಮಚಂದ್ರಪ್ಪ, ಸಂಸ್ಕೃತಿ: ಶ್ರಮ ಮತ್ತು ಸ್ವಭಾವಶೀಲತೆ, ಅಂಕಿತ ಪ್ರಕಾಶನ, ಬೆಂಗಳೂರು, ೨೦೦೫

೬೭. ಬರಗೂರು ರಾಮಚಂದ್ರಪ್ಪ, ಜನತಾ ಪ್ರಜಾಪ್ರಭುತ್ವ, ಶತಭಿಷ ಕಟವೀರನಹಳ್ಳಿ, ೧೯೭೭

೬೮. ಬಡಿಗೇರ್ ಜಿ.ಎಲ್., ಭಾರತದ ಗ್ರಾಮೀಣಾಭಿವೃದ್ಧಿ, ಸಂಗಮೇಶ್ವರ ಪ್ರಕಾಶನ, ಸಂಕೇಶ್ವರ, ೧೯೯೮

೬೯. ಭೈರಪ್ಪ ಕೆ., ಭಾರತದಲ್ಲಿ ಗ್ರಾಮೀಣಾಭಿವೃದ್ಧಿ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರ್ಗಿ, ೧೯೯೭

[illegible]

೭೦. ಬೈರಪ್ಪ ಕೆ., ಸಮಗ್ರ ಗ್ರಾಮೀಣ ಸಮಾಜ, ಸಪ್ನಾ ಬುಕ್ ಹೌಸ್, ಬೆಂಗಳೂರು, ೨೦೦೨

೭೧. ಭೈರಪ್ಪ ಕೆ., ಪಾಶ್ಚಿಮಾತ್ಯ ಮತ್ತು ಭಾರತೀಯ ರಾಜಕೀಯ ಚಿಂತಕರು, ಸಪ್ನಾ ಬುಕ್ ಹೌಸ್, ಬೆಂಗಳೂರು, ೨೦೦೧

೭೨. ಭಾರತಿ ಹಾದಿಗೆ ಬಿ.ಎಂ., ಭಾರತೀಯ ಸಮಾಜದ ರಚನೆ ಮತ್ತು ಬದಲಾವಣೆ, ಚೇತನ ಬುಕ್ ಹೌಸ್, ಮೈಸೂರು, ೨೦೦೫

೭೩. ಮಹೇಶ ಹೆಚ್ (ಸಂ), ಲಿಂಗ ಸೂಕ್ಷ್ಮತೆ ಮತ್ತು ನ್ಯಾಯ, ಐ.ಸಿ.ಆರ್.ಎ., ಬೆಂಗಳೂರು, ೧೯೯೯

೭೪. ಮಾಲಗತ್ತಿ ಅರವಿಂದ, ಡಾ. ಅಂಬೇಡ್ಕರರ ವಿಚಾರಧಾರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೧

೭೫. ಮಾಲಗತ್ತಿ ಅರವಿಂದ, ಸಾಂಸ್ಕೃತಿಕ ದಂಗೆ, ರಾಜ ಪ್ರಕಾಶನ ಮೈಸೂರು, ೨೦೦೪

೭೬. ಮರುಳ ಸಿದ್ಧಯ್ಯ ಹೆಚ್.ಎಂ., ಸಮುದಾಯ ಸಂಘಟನೆ, ಐ.ಬಿ.ಎಚ್. ಪಬ್ಲಿಕೇಶನ್, ಬೆಂಗಳೂರು, ೨೦೦೩

೭೭. ಮಣಿಪಾಲ ಆರ್.ಕೆ., ಲೋಕ ಗ್ರಹಿಕೆ ಮತ್ತು ಅಭಿವ್ಯಕ್ತಿ, ಸಂಕ್ರಮಣ ಪ್ರಕಾಶನ, ಧಾರವಾಡ, ೧೯೯೫

೭೮. ಮೂರ್ತಿ ಎನ್., ಹೋರಾಟದ ಮಹಾಪ್ರಬಂಧ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಬೆಂಗಳೂರು, ೨೦೦೬

೭೯. ಮಂಗಳಾ ಪ್ರಿಯದರ್ಶಿನಿ, ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೮೦. ಮೊಗಳ್ಳಿ ಗಣೇಶ, ಸೊಲ್ಲು, ಸಿ.ವಿ.ಜಿ., ಬೆಂಗಳೂರು, ೧೯೯೮

೮೧. ಮುಡುಬಿ ಬಾಬುರಾವ್, ಮಹಿಳಾ ಸಬಲೀಕರಣ ಮತ್ತು ಅಂಬೇಡ್ಕರ್ ದೃಷ್ಟಿಕೋನ, ಲಕ್ಷ್ಮಿ ಪ್ರಕಾಶನ, ಬೆಂಗಳೂರು, ೨೦೦೫

೮೨. ರಹಮತ್ ತರೀಕೆರೆ, ವಸಾಹತು ಪ್ರಜ್ಞೆ ಮತ್ತು ವಿಮೋಚನೆ ಬೆಳ್ಳಿ ಚುಕ್ಕಿ ಟ್ರಸ್ಟ್, ಬೆಂಗಳೂರು, ೧೯೮೬

೮೩. ರತ್ನಮ್ಮ ಕೆ.ಎಸ್., ಮಹಿಳಾ ಮೀಸಲಾತಿ, ಈಶ್ವರಿ ಪ್ರಕಾಶನ, ಮೈಸೂರು, ೨೦೦೫

೮೪. ರಾಜೇಗೌಡ ಹ.ಕ(ಸಂ), ಗ್ರಾಮ ಚೇತನ, ಹೆಚ್.ಡಿ., ಚೌಡಯ್ಯ, ಅಭಿನಂದನ ಸಮಿತಿ, ಮಂಡ್ಯ, ೨೦೦೩

೮೫. ವಂದನಾ ಶಿವ (ಕನ್ನಡಕ್ಕೆ ಮಾಧವ ಐತಾಳ), ಬತ್ತದ ಚಿಲುಮೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೮೬. ವಿಜಯಾ ದಬ್ಬೆ, ನಾರಿ ದಾರಿ ದಿಗಂತ, ರಚನಾ ಪ್ರಕಾಶನ, ಮೈಸೂರು, ೧೯೯೭.

೮೭. ವಿಜಯಶ್ರೀ ಸಬರದ, ಮಹಿಳಾ ಶೋಷಣೆ, ಸವಾಲುಗಳು, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫.

೮೮. ವೀರಭದ್ರಪ್ಪ ಬಿ.ಎಂ., ವೇದಗಳಲ್ಲಿ ಜನಸಾಮಾನ್ಯರು, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೩

೮೯. ವಿರಕ್ತಮಠ ಶಿವಾನಂದ ಎಸ್.(ಸಂ), ಮಹಿಳಾ ಅಧ್ಯಯನ ಸಂಪುಟ ೬, ಸಂಚಿಕೆ ೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೯೦. ವೆಂಕೋಬ್‌ರಾವ್ 'ನ್ಯಾಯಕ್ಕಾಗಿ ಮಹಿಳೆಯರ ಹೋರಾಟ' ದಿವ್ಯಚಂಕದ್ರ ಪ್ರಕಾಶನ ಬೆಂಕಗಳೂರು ೨೦೦೦.

೯೧. ಶಿವರಾಮಯ್ಯ 'ದನಿ ಇಲ್ಲದವರ ದನಿ' ಶಕ್ತಿ ಪ್ರಿಂಟರ್‍ಸ ಬೆಗಳೂರು ೨೦೦೩.

೯೨. ಶಿವಚಿತ್ತಪ್ಪ ಕೆ, 'ಮಹಿಳಾ ಸಬಲಿಕರಣ ವಿಬಿನ್ನ ನೆಲೆಗಳು' ಲಕ್ಷ್ಮಿ ಪ್ರಿಂಟರ್‍ಸ ಮೈಸೂರು ೨೦೦೬.

೯೩. ಶಿರಗಾನಹಳ್ಳಿ ಶಾಂತನಾಯಕ 'ಮನು ಹಿಟ್ಲರ್ ಅಂಬೆಡ್ಕರ್ ; ಒಂದು ಚಿಂತನೆ' ಆರಾ ಪ್ರಿಂಟರ್‍ಸ ಮೈಸೂರು ೨೦೦೪.

೯೪. ಶಂಕರರಾವ್ ಚ.ನ 'ಭಾರತದ ಸಂವಿಧಾನಸರಕಾರ ಮತ್ತು ರಾಜಕೀಯ ' ವಿಜಯ ಪಬ್ಲಿಕೇಶನ್ಸ ಗದಗ೧೯೯೨.

೯೫. ಶೇಷಾದ್ರಿ ಕೆ ಎನ್, 'ಸಂವಿಧಾನ ಕಾನೂನು ಮತ್ತು ಮಹಿಳೆ ' ಜಾಗ್ರುತ ಭಾರತ ಧಾರವಾಡ ೧೯೮೫.

೯೬. ಶೈಲಜ ಹಿರೇಮಠ, 'ಸ್ತ್ರಿಕಥನ' ಭುವನ ಪ್ರಕಾಶನ ಹೊಸಪೇಟೆ ೨೦೦೩.

೯೭. ಶೈಲಜ ಹಿರೇಮಠ, ' ಪಾತರದವರು', ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ ೧೯೯೯.

೯೮. ಶೈಲಜ ಹಿರೇಮಠ, 'ಮಹಿಳ ಅಧ್ಯಯನ ' ಸಂಪುಟ ೮. ಸಂಚಿಕೆ ೧, ಪ್ರಸಾರಾಂಗ ಕನ್ನಡ ವಿ.ವಿ ಹಂಪಿ.೨೦೦೯.

೯೯. ಶ್ರೀದರ್ ಎ, 'ಅಭಿವೃದ್ದಿ ಅಧ್ಯಯನ ' ಸಂಪುಟ ೫ ಸಂಚಿಕೆ ೧, ಪ್ರಸಾರಾಂಗ ಕನ್ನಡ ವಿ.ವಿ ಹಂಪಿ ೨೦೦೯.

೧೦೦. ಶ್ರೀದರ್ ಎ., 'ಅಭಿವೃದ್ಧಿ ಅಧ್ಯಯನ' ಸಂಪುಟ ೪ ಸಂಚಿಕೆ ೨, ಪ್ರಸಾರಾಂಗ ಕನ್ನಡ ವಿ.ವಿ ಹಂಪಿ.

೧೦೧. ಶ್ರೀಮತಿ ಹೆಚ್. ಎನ್., 'ಹೆಣ್ಣು ಹೆಂಗಸು' ಬಾಲ್ಯದ ಕೆರೆ ಪ್ರಕಾಶನ ೨೦೦೪.

೧೦೨. ಶ್ರೀಮತಿ ಹೆಚ್. ಎನ್ (ಸಂ) 'ಮಹಿಳಾ ಅಧ್ಯಯ' ಸಂಪುಟ ೧. ಸಂಚಿಕೆ ೨, ಪ್ರಸಾರಾಂಗ ಕನ್ನಡ ವಿ.ವಿ ಹಂಪಿ.

೧೦೩. ಶ್ರೀಮತಿ ಹೆಚ್. ಎಸ್ 'ಸಿಮೂನ್ ದ ಬೋಮ ದ ಸೆಕೆಂಡ್ ಸೆಕ್ಸ 'ಅಧ್ಯಯನ ಮಂಡಲ, ಬೆಂಗಳೂರು ೨೦೦೭.

೧೦೪. ಶ್ರೀಮತಿ ಹೆಚ್. ಎನ್ (ಅನು ಮೂಲ: ಜೆರಾಲ್ಡಿನ್ ಪೊರ್ಬ್ಸ್) ಆಧುನಿಕ ಭಾರತದಲ್ಲಿ ಮಹಿಳೆ ೨೦೦೧.

೧೦೫. ಶ್ರೀಮತಿ ಹೆಚ್. ಎನ್ 'ಸ್ತ್ರೀವಾದ' ಪ್ರಸಾರಂಗ ಕನ್ನಡ ವಿ.ವಿ ಹಂಪಿ ೨೦೦೩.

೧೦೬. ಶ್ರೀಮತಿ ಹೆಚ್. ಎಸ್ (ಸಂ) 'ಮಹಿಳಾ ಅಧ್ಯಯನ ಸಂಪುಟ.೨ ಸಂಚಿಕೆ ೧', ಪ್ರಸಾರಾಂಗ ಕನ್ನಡ ವಿ.ವಿ ಹಂಪಿ ೧೯೯೯.

೧೦೭. ಶ್ರೀಮತಿ ಹೆಚ್. ಎಸ್ (ಸಂ) 'ಮಹಿಳಾ ಅಧ್ಯಯನ ಸಂಪುಟ ೨, ಸಂಚಿಕೆ ೧', ಪ್ರಸಾರಾಂಗ ಕನ್ನಡ ವಿ.ವಿ ಹಂಪಿ ೨೦೦೨.

೧೦೮. ಶ್ರೀಮತಿ ಹೆಚ್. ಎಸ್ 'ಚಹರೆ' ಇಳಾ ಪ್ರಕಾಶನ ಬೆಂಗಳೂರು .

೧೦೯. ಶ್ರೀನಿವಾಸರಾಯರು 'ಕರ್ನಾಟಕ ಸಂಗಾತಿ' ಕ. ಅ. ಪ್ರಾ. ಬೆಂಗಳೂರು ೨೦೦೦.

೧೧೦. ಸಮತು ದೇಶಮಾನೆ 'ಸಮಾಜ ಶಾಸ್ತ್ರ ಮತ್ತು ಮಹಿಳೆ' ಚೇತನ ಬುಕ್ ಹೌಸ್ ಮೈಸೂರು ೨೦೦೩.

೧೧೧. ಸಾರಾ ಅಬುಬಕರ್ 'ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ' ಪ್ರಸಾರಾಂಗ ಕನ್ನಡ ವಿ.ವಿ ಹಂಪಿ ೨೦೦೭.

೧೧೨. ಹಾಲತಿ ಸೋಮಶೇಖರ್ 'ಮಹಿಳಾ ಚಳುವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ' ವಿಸ್ಮಯ ಪ್ರಕಾಶನ ಬೆಂಗಳೂರು –೨೦೦೭.

೧೧೩. ಹೆಂಗಸರ ಹಕ್ಕಿನ ಸಂಘ 'ವಿಭಿನ್ನ ನೆಲೆಗಳು, ವಿಭಿನ್ನ ರಾಜಕೀಯ, ಜಂಡರ್ ಹಾಗು ಅನನ್ಯತೆಗಳು' ಬೆಂಗಳೂರು ೨೦೦೫.

೧೧೪. ಹೆಗ್ಗಡೆ ಒಡೆಯರ್ ಡಿ, 'ಮಹಿಳೆ ಮತ್ತು ಸಾಮಾಜಿಕ ಅಭಿವೃದ್ಧಿ', ಅರ್ಜುನ ಪಬ್ಲಿಶಿಂಗ್ ಹೌಸ್ ಮೈಸೂರ್ ೨೦೦೮.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

೧೧೫. ಹೆಗ್ಗಡೆ ಒಡೆಯರ್ ಡಿ, 'ಮಾನವ ಅಭಿವೃದ್ಧಿ ಮತ್ತು ಪ್ರಜಾಪ್ರಭುತ್ವ ಮಾನವ ಅಭಿವೃದ್ಧಿ' ಅಧ್ಯಯನ ಕೇಂದ್ರ ಮೈಸೂರು ೨೦೦೪.

೧೧೬. ಹೊಸಾಪುರ ಬಂಗಾರಪ್ಪ, 'ಸಮಾನತೆಯ ಚಿಂತನೆಗಳು' ಚಿಂತನಾ ಪ್ರಕಾಶನ ಹೊಳೆನರಸಿಪುರ ೧೯೯೯.

೧೧೭. ಹೇಮಲತ ಹೆಚ್.ಎಂ 'ಮಹಿಳಾ ಸಬಲೀಕರಣ' ಅಬಿರುಚಿ ಪ್ರಕಾಶನ ಬೆಂಗಳೂರು – ೨೦೦೦.

೧೧೮. ಹೇಮಲತ ಹೆಚ್.ಎಂ 'ಮಹಿಳಾ ಅಧ್ಯಯನ', ೧ ಡಿ. ವಿ. ಕೆ. ಮೂರ್ತಿ ಮೈಸೂರು ೨೦೦೪.

೧೧೯. ಹೇಮಲತ ಹೆಚ್. ಎಂ 'ಮಹಿಳಾ ಅಧ್ಯಯನ ೨', ಡಿ.ವಿ.ಕೆ . ಮೂರ್ತಿ ಮೈಸೂರು ೨೦೦೪.

೧೨೦. ಹೇಮಲತ ಹೆಚ್. ಎಂ 'ಮಹಿಳಾ ಅಧ್ಯಯನ ೩', ಡಿ.ವಿ.ಕೆ ಮೂರ್ತಿ ಮೈಸೂರು – ೨೦೦೬.

೧೨೧. ಹೇಮಲತ ಹೆಚ್ .ಎಂ 'ಮಹಿಳಾ ಅಧ್ಯಯನ ೪', ಡಿ.ವಿ.ಕೆ ಮೂರ್ತಿ ಮೈಸೂರು – ೨೦೦೭.

೧೨೨. ಹಾಲತಿ ಸೋಮಶೇಖರ್, 'ಮಹಿಳಾ ಚಳುವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ' , ವಿಸ್ಮಯ ಪ್ರಕಾಶ , ಮೈಸೂರು, ೨೦೦೭.

೧೨೩. ಹಾಲತಿ ಸೋಮಶೇಖರ್, 'ಸ್ತ್ರೀಪರ' , ವಿಸ್ಮಯ ಪ್ರಕಾಶ , ಮೈಸೂರು , ೨೦೦೩.

೧೨೪. ಸರೋಜ. ಕೆ. 'ಮಹಿಳಾ ಆರೋಗ್ಯ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿಧ್ಯಾರಣ್ಯ, ೨೦೦೧.

೧೨೫. ಸುಮಿತ್ರಬಾಯಿ ಬಿ. ಎನ್. 'ಸ್ತ್ರೀವಾದಿ ಪ್ರವೇಶ' ಕರ್ನಾಟಕ ಲೇಖಕಿಯರ ಸಂಘ ಬೆಂಗಳೂರು, ೨೦೦೪

೧೨೬. ಸರೋಜ. ಕೆ. 'ಮಹಿಳಾ ಆರೋಗ್ಯ ಒಂದು ಮರು ಚಂತನೆ', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ೨೦೦೮.

[illegible]

ಪ್ರಶ್ನಾವಳಿ ಮಾದರಿ

೧) ಹೆಸರು –

೨) ವಯಸ್ಸು – ೧೫–೨೦

೨೦–೩೦

೩೦–೪೦

೩) ಶಿಕ್ಷಣ – ಅಕ್ಷರಸ್ಥರು / ಅನಕ್ಷರಸ್ತರು

೪) ಜಾತಿ –

೫) ವಾಸ ಸ್ಥಳ –

೬) ವೈವಿಕ ಸ್ಥಾನಮಾನ – ವಿವಾಹಿತರು / ಅವಿವಾಹಿತರು

೩) ಗಂಡನ ಕೆಲಸ ಮತ್ತು ಸಂಭಾವನೆ ಎಷ್ಟು?

೮) ಎಷ್ಟು ಮಕ್ಕಳು – ಅ) ಗಂಡು ಆ) ಹೆಣ್ಣು ಇ) ಎಷ್ಟು

೯) ಕೌಟುಂಬಿಕ ಜವಾಬ್ದಾರಿ ಯಾವ ಬಗೆಯಲ್ಲಿ ನಿರ್ವಹಿಸುತ್ತಿರಿ?

೧೦) ಕೆಲಸದ ಒತ್ತಡದಲ್ಲಿ ಮನೆ ಮತ್ತು ಮಕ್ಕಳು ಗಂಡನ ನಿರ್ವಹಣೆ ಹೇಗೆ ನಿರ್ವಹಿಸುತ್ತಿರಿ?

೧೧) ನೀವು ಕೆಲಸ ನಿರ್ವಹಿಸುವ ಕಾರ್ಖಾನೆಗಳಲ್ಲಿ ವಿಶ್ರಾಂತಿ ಕೊಡುತ್ತಾರಾ?

ಅ) ಹೌದು ಆ) ಇಲ್ಲ

೧೨) ಮಹಿಳೆ ಯಾವ ಸಂಧರ್ಭದಲ್ಲಿ ಕೆಲಸವನ್ನು ಮಾಡಲೇಬಾರದು? ನಿಮ್ಮ ಅಬಿಪ್ರಾಯ

ಅ) ಗರ್ಭಿಣಿಯಾದಾಗ

ಅ) ಋತುಪ್ರಾಸವಾದಾಗ

ಇ) ಗರ್ಭಪಾತವಾದಾಗ

ಈ) ಹೆರಿಗೆ ಸಂದರ್ಭದಲ್ಲಿ

೧೩) ಅನಾರೋಗ್ಯದ ಸಂದರ್ಭದಲ್ಲಿ ಆರೋಗ್ಯ ತಪಾಸಣೆಗೆ ಎಲ್ಲಿ ಹೋಗುತ್ತೀರಿ

ಅ) ಕಾರ್ಖಾನೆಯಲ್ಲಿ ವೈದ್ಯಕೀಯ ಸೌಲಭ್ಯ

ಆ) ಕಾರ್ಖಾನೆಯ ಹತ್ತಿರನೆ ವೈಧ್ಯಕೀಯ ಸೌಲಭ್ಯ

ಇ) ಸರ್ಕಾರಿ ಆಸ್ಪತ್ರೆ

ಈ) ಖಾಸಗಿ ಆಸ್ಪತ್ರೆ

ಉ) ಸಾಟಿ ಔಷದಿ

ಊ) ಇ.ಎಸ್.ಐ. ಸೌಲಭ್ಯ ಸಿಗುತ್ತಾ?

೧೩) ಫ್ಯಾಕ್ಟ್ರಿಯ ಮಾಲೀಕರು ಗರ್ಭಿಣಿಯರ ತುರ್ತು ಪರಿಸ್ಥಿತಿಗೆ ಆಂಬಲೆನ್ನ ವ್ಯವಸ್ಥೆ ಕಲ್ಪಿಸಿದಾರಾ?

ಅ) ಹೌದು ಆ) ಇಲ್ಲ

೧೪) ಹೆರಿಗೆ ರಜೆ ಮತ್ತು ಸೌಲಭ್ಯ ನೀಡುತ್ತಾರೆ?

೧೫) ಮಕ್ಕಳಿಗಾಗಿ ವ್ಯವಸ್ಥೆ ಕಲ್ಪಿಸಿದಾರೆ? ಮತ್ತು ಕಲ್ಪಿಸಿದರೆ ಯಾವ ಬಗೆಯದು?

೧) ಫ್ಯಾಕ್ಟ್ರಿಯಲ್ಲಿ ಕೆಲವೊಂದು ಸೌಲಭ್ಯಗಳು ಒದಗಿಸುವಲ್ಲಿ ನಿಮ್ಮ ಅಭಿಪ್ರಾಯ

೧) ಕ್ಯಾಂಟಿನ್

೨) ಶೌಚಾಲಯ ವ್ಯವಸ್ಥೆ

೩) ಸ್ವಚ್ಛವಾದ ಕುಡಿಯುವ ನೀರು

೪) ಮಾಸ್ಕ

೫) ಗ್ಲೋವ್ಸ್

೬) ಇನ್ನಿತರ ಸೌಲಭ್ಯಗಳು

೨) ಕೆಲಸದ ಸ್ವರೂಪ ವಿವರ ಯಾವ ಕೆಲಸ ನಿರ್ವಹಿಸುತ್ತಿರಿ.

೧) ಬಟನ್ ಹಚ್ಚುವುದು

೨) ಟೈರಿಂಗ್ ಮಾಡುವುದು

೩) ಕಟ್ಟಿಂಗ್ ಮಾಡುವುದು

೪) ಬಲ್ಬರ್ ಹುಡೆಯುವುದು

೫) ಪಾಕೀಟ್ ಹಚ್ಚುವುದು

೬) ಟ್ರಿಮಿಂಗ್ ಮಾಡುವುದು

೭) ಫಿನಿಶಿಂಗ್ ಮಾಡುವುದು

೮) ಫ್ಯಾಕ್ಸ ಮಾಡುವುದು

೯) ದಾರ ಕಟ್ಟುವುದು

೧೦) ಕಾಲರ್ ಹೊಲಿಯುವುದು

೩) ನೀವು ಎಷ್ಟು ಅವಧಿ ಕಲಸ ನಿರ್ವಹಿಸುತ್ತಿರಿ?

೪) ಹೆಚ್ಚಿನ ಅವಧಿ ಕೆಲಸ ಮಾಡುತ್ತಿರಾ?

೫) ಹೆಚ್ಚಿ ಅವಧಿ ಕೆಲಸ ಮಾಡಿದರೆ ಕೊಡುವ ಕೂಲಿ ಎಷ್ಟು ?

೬) ಹೆಚ್ಚಿನ ಅವಧಿ ಕೆಲಸ ಮಾಡಲೇಬೇಕಾ?

೭) ಹೆಚ್ಚಿನ ಅವಧಿ ಮಾಡುವುದರಿಂದ ಮನೆಯಲ್ಲಿ ಸಮಸ್ಯೆ ಆಗುವುದಿಲ್ವ?

೧) ನೀವು ಕೆಲಸಕ್ಕೆ ಸೇರಲು ಕಾರಣ?

ಅ) ಆರ್ಥಿಕ ಭದ್ರತೆಗೆ

ಆ) ಸ್ಥಾನಮಾನ ಹೆಚ್ಚಿಸಿಕೊಳ್ಳಲು

ಇ) ಜೀವನೊಪಯಕ್ಕಾಗಿ

೨) ನಿಮ್ಮ ಉದ್ಯೋಗದ ಸ್ವರೂಪ ಯಾವ ರೀತಿಯದ್ದು?

ಅ) ತಾತ್ಕಲಿಕ ಆ) ಖಾಯಂ

೨) ಕೆಲಸದ ಭದ್ರತೆ?

ಅ) ಹೌದು ಆ) ಇಲ್ಲ

೩) ಮಾಲೀಕರು ಇದ್ದಕ್ಕಿದ್ದಂತೆ ಕೆಲಸದಿಂದ ತೆಗೆದುಹಾಕಿದಾಗ ಕೌಟುಂಬಿಕ ಜವಾಬ್ದಾರಿಯನ್ನು ಹೇಗೆ ನಿರ್ವಹಿಸುತ್ತಿರಿ? ಚಳುವಳಿ ಮಾಡುತ್ತಿರಾ?

ಅ) ಹೌದು ಆ) ಇಲ್ಲ

೪) ಮಾಲೀಕರು ಫ್ಯಾಕ್ಟ್ರಿಯನ್ನು ಇದ್ದಕ್ಕಿದ್ದ ಹಾಗೆ ಮುಚ್ಚಿದಾಗ ಕಾರಣ ಕೊಡಬೇಉ ಎನ್ನುವ ಕಾನೂನಿನ ಚಳುವಳಿಕೆ ಇದೆಯಾ? ಅಥವಾ ಇಲ್ಲ

೫) ಈಗಿರುವ ಕೆಲಸದಲ್ಲಿ ಯಾವುದಾದರೂ ಬದಲವಣೆ ಬಯಸುತ್ತಿರಾ?

ಅ) ಹೆಚ್ಚು ಕೂಲಿ

ಆ) ಉನ್ನತ ದರ್ಜೆಯ ಉದ್ಯೋಗ

ಇ) ಕಡಿಮೆ ಕೆಲಸದ ಅವಧಿ

ಈ) ಉತ್ತಮ ಆಡಳಿತ

ಉ) ರಜಾ ದಿನಗಳು

೬) ನಿಮ್ಮ ಆದಾಯವನ್ನು ಯಾರು ಖರ್ಚುಮಾಡುತ್ತಾರೆ?

ಅ) ಗಂಡನಿಗೆ ಕೊಡುತ್ತಿರಾ

ಆ) ತಂದೆ–ತಾಯಿಗಳಿಗೆ

ಇ) ನಿಮ್ಮ ಇಷ್ಟದ ಪ್ರಕಾರ

೭) ಕುಟುಂಬಕ್ಕಾಗಿ ಯಾರು ಹೆಚ್ಚು ಖರ್ಚ ಮಾಡುತ್ತಾರೆ.

ಅ) ತಂದೆ ತಾಯಿಗಳು

ಆ) ಗಂಡ

ಇ) ನೀವು

೮) ಒ.ಟಿ ಮುಗಿಸಿಕೊಂಡು ಮನೆಗೆ ಹೋಗುವಾಗ ಯಾವ ಬಗೆಯ ವ್ಯವಸ್ಥೆ ಮಾಡಿಕೊಳ್ಳುತ್ತಿರಿ

೯) ಮಾಲೀಕರು ಸಾರಿಗೆ ವ್ಯವಸ್ಥೆ ಕಲ್ಪಿಸುತ್ತಾರೆ

೧೦) ಮಾಲೀಕರು ಕಾರ್ಮಿಕರಿಗೆ ಕೆಲಸದ ಸಂದರ್ಭದಲ್ಲಿ ಗಾಯಗಳಾದ ಸಂದರ್ಭದಲ್ಲಿ ಅಪಘಾತಗಳಾದಾಗ ಪರಿಹಾರ ನೀಡುತ್ತಾರಾ?

೧೧) ನೀವು ಮಾಡುವ ಕೆಲಸದ ರಕ್ಷಣೆ, ನಿಯಮ ಮತ್ತು ಕಾನೂನುಗಳು ನಿಮಗೆ ತಿಳಿದಿದೆಯಾ?

ಅ) ಗೊತ್ತಿದೆ ಆ) ಇಲ್ಲ

೧೩) ನಿಮ್ಮ ಹಾಗೂ ಮಾಲೀಕರ ಸಂಬಂಧ ಯಾವ ಬಗೆಯದ್ದು ಚೆನ್ನಾಗಿದೆಯೇ?

ಅ)ಹೌದು ಆ)ಇಲ್ಲ

೧೪) ನೀವು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ನಿಮ್ಮ ಮತ್ತು ಕುಟುಂಬದಲ್ಲಿ ಹಾಗೂ ಸಮಾಜದಲ್ಲಿನ ಮನೋಭಾವ ಹೇಗಿದೆ.

೧೫) ನಿಮ್ಮ ಮಾಲೀಕರು ಎಲ್ಲ ಮಹಿಳಾ ಕಾರ್ಮಿಕರನ್ನು ಸಮಾನ ರೀತಿಯಲ್ಲಿ ನೋಡುತ್ತಾರಾ?

ಅ) ಹೌದು ಆ)ಇಲ್ಲ

೧೬) ಮಾಲೀಕರು ಕೊಡುವ ಸಂಬಳ ಕೌಟುಂಬಿಕ ನಿರ್ವಹಣೆ ಮಾಡಲು ಸಾಧ್ಯನಾ?

೧೭) ಮಾಲೀಕರು ಕೊಡುವ ಸಂಬಳದಲ್ಲಿ ತಾರತಮ್ಯ ವಿದೇಯೇ?

೧೮) ನೀವು ಹಿಂದೆ ಮಾಡುತ್ತಿರುವ ಕೆಲಸದ ಕೂಲಿಗಿಂತ ಇವತ್ತಿನ ಕೂಲಿ ಹೆಚ್ಚಿದೇಯಾ?

೧೯) ನಿಮ್ಮ ಕುಟುಂಬದ ಜವಾಬ್ದಾರಿಯನ್ನು ನೀವೇ ನಿರ್ವಹಿಸುತ್ತಿದ್ದಿರಾ?

ಅ)ಹೌದು ಆ)ಇಲ್ಲ

೨೦) ನಿಮ್ಮ ಆರೋಗ್ಯ ಸಮಸ್ಯೆಗಳಿದ್ದಾಗ ನಿಮ್ಮ ಕುಟುಂಬದ ಸದಸ್ಯರು ಯಾವ ರೀತಿ ನೋಡಿಕೊಳ್ಳುತ್ತಾರೆ?

ಅ)ಚೆನ್ನಾಗಿ ಆ) ಸಾಮಾನ್ಯ ಇ) ಕೆಟ್ಟದಾಗಿ ಈ)ಯಾರು ನೋಡಿಕೊಳ್ಳುವುದಿಲ್ಲ.

೨೧) ನಿಮ್ಮ ಫ್ಯಾಕ್ಟ್ರಿಯಲ್ಲಿ ಯಾವುದಾದರೂ ಸಂಘಗಳು ಕಟ್ಟಿಕೊಂಡಿದ್ದಿರಾ?

ಅ) ಹೌದು ಆ) ಇಲ್ಲ

೨೨) ನಿಮ್ಮ ಮನೆಯಿಂದ ನೀವು ಕೆಲಸ ಮಾಡುವ ಜಾಗಕ್ಕೆ ಎಷ್ಟು ದೂರ ವಿದೇ? ಹೇಗೆ ಬರುತ್ತಿರಿ?

ಅ) ಬಸ್‌ಗೆ ಆ) ಟ್ರೈನ್‌ಗೆ ಇ) ನಡೆದುಕೊಂಡು

೨೩) ಫ್ಯಾಕ್ಟ್ರಿಯಲ್ಲಿ ಹಬ್ಬಕ್ಕೆ ಅಥವಾ ವಷಕ್ಕೆ ಏನಾದರೂ ಬೋನಸ್ ಬಟ್ಟೆ ಕೊಡುತ್ತಾರೆ?

೨೪) ಮಾಲಿಕರಿಂದ ಮತ್ತು ಮಾನ್ಯರುಗಳಿಂದ (ಸೋದರ ವೈಸಕ) ಲೈಂಗಿಕ ವಾಗಿ ಕಿರುಕುಳ ನೀಡುತ್ತಾರಾ?

೨೫) ಒಂದು ವೇಳೆ ಕೆಲಸದಿಂದ ತೆಗೆದು ಹಾಕಿದರೆ ಏನುಮಾಡುತ್ತಿರಿ?

ಅ) ಸ್ಟ್ರೈಕ್ ಗಳೆನ್ನಾದರೂ ಮಾಡಿದ್ದಾರಾ, ಮಾಡುತ್ತಿರಾ?

೨೬) ದುಡಿಯುವುದರಿಂದ ಆರ್ಥಿಕವಾಗಿ ಸಬಲರಾಗಿದ್ದೀರಾ?

ಛಾಯಾಚಿತ್ರಗಳು



ಸ್ಕಾರ್ಟ್ ಗಾರ್ಮೆಂಟ್ಸ್ ಫ್ಯಾಕ್ಟರಿ – ಪೀಣ್ಯ (ಬೆಂಗಳೂರು)



ಗಾರ್ಮೆಂಟ್ಸ್‌ಗೆ ತೆರಳಲು ಸಿದ್ಧರಾದ ಮಹಿಳಾ ಕಾರ್ಮಿಕರು – ಬೆಂಗಳೂರು



ಮೇಲ್ವಿಚಾರಕರು ಬರುವ ವೇಳೆ ಸಮವಸ್ತ್ರ ಧರಿಸಿಕೊಂಡು ಬಟ್ಟೆ ಹೊಲಿಯುತ್ತಿರುವ ಮಹಿಳಾ ಕಾರ್ಮಿಕರು



.ಬಟ್ಟೆ ಹೊಲಿಯುವುದರಲ್ಲಿ ನಿರತರಾದ ಮುಸ್ಲಿಂ ಮಹಿಳಾ ಕಾರ್ಮಿಕರು



ಬಟ್ಟೆ ಹೊಲಿಯುವುದರಲ್ಲಿ ನಿರತರಾದ ಮಹಿಳಾ ಕಾರ್ಮಿಕರು – ಬೆಂಗಳೂರು



ಬಟ್ಟೆ ಹೊಲಿಯುವುದರಲ್ಲಿ ಮಗ್ನರಾದ ಮಹಿಳಾ ಕಾರ್ಮಿಕರು



ಮಾಲಿಕರ ವಿರುದ್ಧ ಹೋರಾಟ ನಡೆಸುತ್ತಿರುವ ಮಹಿಳಾ ಕಾರ್ಮಿಕರು



ಬಟ್ಟೆ ಹೊಲಿಯುವುದರಲ್ಲಿ ತಲ್ಲಿನರಾದ ಮಹಿಳಾ ಕಾರ್ಮಿಕರು



ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ಕಾರ್ಮಿಕರು



ಸಮವಸ್ತ್ರ ಧರಿಸಿ ಬಟ್ಟೆ ಹೊಲಿಯುತ್ತಿರುವ ಮಹಿಳಾ ಕಾರ್ಮಿಕರು